
KARNATAKA FOLKLORE UNIVERSITY



ನಾಡವರ ಜಾನಪದ ತವನಿಧಿ

ಡಾ. ಎನ್.ಆರ್. ನಾಯಕ



ನಾಡವರ ಜಾನಪದ ತವನಿಧಿ

ಡಾ. ಎನ್. ಆರ್. ನಾಯಕ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ - ೫೮೧ ೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

NADAVARA JANAPADA TAVANIDHI

(A Study on Nadavara Community)

by

Dr. N.R. Nayak

Jaanapada Prakashana

Prabhath Nagara,

Honnavara - 581 334

Mob: 9901921650

Published by

Prof. S.C. Ramesh

Director

Centre for Extension and Consultancy

Karantaka Janapada University

Gotagodi - 581 197

Shiggavi Taluk, Haveri Dist, Karnataka

Phone: 0836 - 2255180

Pages: xii + 484 = 496 **Price:** ₹ 260/-

www.janapadauni.in

First Impression : 2014

ISBN- 978-93-83149-24-7

ಬೆಲೆ : ೨೬೦/–

ಮುಖಪುಟ: ಕೆ.ಕೆ. ಮಕಾಳಿ

ಪುಸ್ತಕ ದೊರೆಯುವ ಸ್ಥಳ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ ೫೮೧ ೧೯೭,

ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಮುದ್ರಣ

ರಾಜಾ ಪ್ರಿಂಟರ್ಸ್, ಬೆಂಗಳೂರು

ದೂರವಾಣಿ : 22234066

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ

ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ

ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಆಧುನಿಕತೆಯ ಧಾವಂತಕ್ಕೆ ಸಿಲುಕಿದ ಮನುಷ್ಯ ಬದುಕು ಅನೇಕ ಸಂಘರ್ಷಗಳನ್ನು ಎದುರಿಸುತ್ತಿದೆ. ಚರಿತ್ರೆಯ ಚಲನೆಯಲ್ಲಿ ಕೆಲವು ಸಾಂಸ್ಕೃತಿಕ ಸಂಗತಿಗಳು ಅಳಿಯದೇ ಉಳಿಯುತ್ತವೆ. ಇನ್ನು ಕೆಲವು ಸಂಗತಿಗಳು ಕಾಲದ ಸೆಳೆತಕ್ಕೆ ಸಿಲುಕಿ ವಿಸ್ಮೃತಿಗೆ ಒಳಗಾಗುತ್ತಿವೆ. ಗತದ ನೆನಪಿನೊಂದಿಗೆ ವರ್ತಮಾನದಲ್ಲಿ ಜೀವಿಸುತ್ತಿರುವ ಕೆಲವು ಬುಡಕಟ್ಟು.ಹಾಗೂ ಗ್ರಾಮೀಣ ಸಮುದಾಯಗಳು ಇಂದಿಗೂ ತಮ್ಮ ಅನನ್ಯತೆಯನ್ನು ಉಳಿಸಿಕೊಂಡಿವೆ. ಈ ಮಧ್ಯೆ ಕೆಲವು ಸಮುದಾಯಗಳ ಸಾಂಸ್ಕೃತಿಕ ಅನನ್ಯತೆ ಸಂಪೂರ್ಣ ಕಣ್ಮರೆಯಾಗಿದೆ. ಅಂತೆಯೇ ಸಮುದಾಯಗಳು ಮತ್ತು ಅವುಗಳೊಂದಿಗೇ ಬೆಸೆದುಕೊಂಡಿರುವ ಸಾಂಸ್ಕೃತಿಕ ಅಂಶಗಳು ಸಂಪೂರ್ಣ ಮರೆಯಾಗುತ್ತಿರುವುದು ತೀವ್ರ ಕಳವಳಕ್ಕೆ ಕಾರಣವಾಗಿದೆ. ಈ ನಡುವೆ ಸಂಪೂರ್ಣವಾಗಿ ವಿಸ್ಮೃತಿಗೆ ಒಳಗಾಗುತ್ತಿರುವ ನೆಲಮೂಲ ಜ್ಞಾನಪರಂಪರೆಯನ್ನು ಸಂರಕ್ಷಿಸುವ ಮಹತ್ವದ ಕಾರ್ಯಗಳು ನಡೆಯುತ್ತಿರುವುದೂ ಆಶಾದಾಯಕ ಬೆಳವಣಿಗೆ. ಇದರ ಭಾಗವಾಗಿ ಹಿರಿಯ ಜಾನಪದ ವಿದ್ವಾಂಸರಾದ ಡಾ. ಎನ್.ಆರ್. ನಾಯಕ ಅವರು ನಾಡವ ಸಮುದಾಯದಲ್ಲಿ ಸುಮಾರು ಆರವತ್ತು–ಎಪ್ಪತ್ತು ವರ್ಷಗಳ ಹಿಂದಿದ್ದಂತಹ ಜಾನಪದೀಯ ಜ್ಞಾನಬೀಜಗಳನ್ನು ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಿದ್ದಾರೆ. ವರ್ತಮಾನದಲ್ಲಿ ಕೇವಲ ಪಳಿಯುಳಿಕೆಯಂತಿರುವ ನಾಡವರ ಸಮುದಾಯದ ವಿಶಿಷ್ಟ ಜಾನಪದ ಸಂಪತ್ತಿನ ನಿಧಿಯನ್ನು ಅವರು ಮರುಶೋಧಿಸಿ ಒದಗಿಸಿದ್ದಾರೆ. ನಾಡವ ಸಮುದಾಯದ ಬಗೆಗೆ ವಿಶೇಷ ಆಸಕ್ತಿ ವಹಿಸಿ ಸಂಶೋಧನೆ, ವಿಶ್ಲೇಷಣೆ ರೂಪದ ಭಾಷಣಗಳು ಮತ್ತು ಪ್ರಬಂಧಗಳು ಹಾಗೂ ಆ ಸಮುದಾಯದಲ್ಲಿ ಪ್ರಚಲಿತದಲ್ಲಿದ್ದಂತಹ ನಂಬಿಕೆ ವಿಧಿ–ನಿಷೇಧಗಳು, ಗಾದೆ, ಒಗಟು ಇತ್ಯಾದಿ ಅಂಶಗಳು

ಇಲ್ಲಿ ಸಂಕಲಿತಗೊಂಡಿವೆ. ಇಂತಹ ಅಮೂಲ್ಯ ಕೃತಿಯನ್ನು ರಚಿಸಿಕೊಟ್ಟಿರುವ ಡಾ. ಎನ್.ಆರ್. ನಾಯಕ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ದತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ

ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಜಾಗತೀಕರಣ, ಆಧುನೀಕರಣಗಳ ಧಾಳಿಗೆ ತುತ್ತಾಗಿರುವ ನೆಲಮೂಲ ಜ್ಞಾನಪರಂಪರೆಯು ಅವಸಾನದ ಅಂಚಿನಲ್ಲಿದೆ ಎನ್ನುವ ಹಳಹಳಿಕೆ ಇಂದು ಹೆಚ್ಚಾಗಿದೆ. ಇಂದಿನ ದಿನಗಳಲ್ಲಿ ಯಾವುದೇ ಪ್ರಭಾವ-ಪ್ರೇರಣೆಗಳಿಗೆ ಒಳಗಾಗಿಯೂ, ದೇಸೀಜ್ಞಾನವು ತನ್ನಲ್ಲಿರುವ ಸತ್ವ ಮತ್ತು ಸೃಜನಶೀಲ ಗುಣದಿಂದಾಗಿ ಸರ್ವಕಾಲಕ್ಕೂ ಸಲ್ಲುವಂಥದಾಗಿರುತ್ತದೆ. ಈ ನೆಲೆಯ ಗ್ರಹಿಕೆಯಿಂದಲೇ ನೆಲಮೂಲಜ್ಞಾನ ಪರಂಪರೆಯನ್ನು ಉಳಿಸುವ, ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಅದನ್ನು ಆನ್ವಯಿಕಗೊಳಿಸುವ ಕಾರ್ಯಗಳು ಇಂದು ಮುನ್ನೆಲೆಗೆ ಬರುತ್ತಿವೆ. ಈ ಹಿನ್ನೆಲೆಯಲ್ಲಿ ನಾಡಿನ ವಿಶಿಷ್ಟ ಮತ್ತು ಅನನ್ಯವಾದ 'ನಾಡವರ' ಸಮುದಾಯವು ಜಾಗತಿಕ ವಿದ್ಯಮಾನಗಳಿಗೆ ಸಂಪೂರ್ಣ ತೆರೆದುಕೊಂಡು ತನ್ನ ಒಡಲೊಳಗೆ ಇರುವ ಜಾನಪದೀಯ ಅಂಶಗಳನ್ನು ಮರೆತು ಬದುಕುತ್ತಿದೆ. ಆ ಸಮುದಾಯದಲ್ಲಿ ಕಳೆದುಹೋಗಿರುವ ಜಾನಪದೀಯತೆಯನ್ನು ಮರುಶೋಧಿಸಿಕೊಟ್ಟಿರುವ ಹಿರಿಯ ಜಾನಪದ ವಿದ್ವಾಂಸರಾದ ಡಾ. ಎನ್.ಆರ್. ನಾಯಕ ಅವರ ಶ್ರಮದಾಯಕ ಪ್ರಯತ್ನ ಮೆಚ್ಚುವಂಥದ್ದೇ ಆಗಿದೆ. ನಾಡವರ ಬದುಕು ಬಹುವಾಗಿ ಸ್ಥಿತ್ಯಂತರಗೊಂಡಿದೆ. ಈ ನಡುವೆ ಆ ಸಮುದಾಯದಲ್ಲಿ ಇದ್ದಂತಹ ಅನೇಕ ಜಾನಪದೀಯ ಅಂಶಗಳ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಕುರಿತು ವಿವೇಚಿಸುವಲ್ಲಿ ಈ ಕೃತಿ ಮುಖ್ಯವೆನಿಸುತ್ತದೆ. ಇಂತಹ ಅಮೂಲ್ಯವಾದ ಕೃತಿಯನ್ನು ರಚಿಸಿಕೊಟ್ಟಿರುವ ಡಾ. ಎನ್.ಆರ್. ನಾಯಕ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ.

ಈ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ, ಅನ್ವಯಿಕ ಜಾನಪದ ನಿಕಾಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ, ತಾಂತ್ರಿಕ ಪುಟಗಳ ಸಿದ್ಧತೆ ಹಾಗೂ ಮುದ್ರಣಪೂರ್ವ ಕೆಲಸಗಳಲ್ಲಿ ಸಹಕರಿಸಿದ ಶ್ರೀ ಸಂಗಮೇಶ ಎಸ್. ಗಣಿ, ಶ್ರೀ ವಿಶ್ವ ಗುಜ್ಜರ್, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ ಅವರಿಗೆ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ನಿರ್ದೇಶಕ
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಮೊದಲ ನುಡಿ

ವರ್ತಮಾನದಲ್ಲಿ ಆಧುನಿಕತೆಯ ಉತ್ತುಂಗಕ್ಕೇರಿ ವಿಶ್ವದಾದ್ಯಂತ ಪಸರಿಸಿರುವ ನಾಡವರ ಸಮುದಾಯದಲ್ಲಿ ಸುಮಾರು ಅರವತ್ತು ಎಪ್ಪತ್ತು ವರ್ಷಗಳ ಹಿಂದೆ ಚಲಾವಣೆಯಲ್ಲಿದ್ದ ಜಾನಪದ ಸಂಪತ್ತು ಇಂದು ಪಳೆಯುಳಿಕೆಯಾಗಿ ಹೋಗಿದೆ; ಬಹಳಷ್ಟು ಕಾಲಗರ್ಭದಲ್ಲಿ ನಿಕ್ಷೇಪವಾಗಿದೆ. ಆ ತವನಿಧಿಯನ್ನು ಅಗೆದು, ಒಟ್ಟುಗೂಡಿಸಿ, ವಿಶ್ಲೇಷಣೆಗಳವಡಿಸಿ ಈ ಬೃಹದ್‌ಗ್ರಂಥದಲ್ಲಿ ನೀಡಲಾಗಿದೆ. ಹೆಚ್ಚು ಕಡಿಮೆ ನೂರಕ್ಕೆ ನೂರು ಸಾಕ್ಷರರಾದ ನಾಡವರಲ್ಲಿ ನೀವಿಂದು ನಾನಿಲ್ಲಿ ಸಂಗ್ರಹಿಸಿಕೊಟ್ಟ ಜಾನಪದವನ್ನು ಹುಡಕ ಹೊರಟರೆ ನಿಮಗಾಗುವುದು ಕೇವಲ ನಿರಾಶೆ. ಈಗ ನಾನು ನಿಮ್ಮ ಮುಂದಿಡುತ್ತಿರುವುದು ಕೇವಲ ಪಳೆಯುಳಿಕೆಯ ನಿಧಿಯನ್ನು ಮಾತ್ರ. ಈ ನಿಧಿಯ ಅವಲೋಕನದಿಂದ ನಾಡವರ ಸಂಸ್ಕೃತಿ ದರ್ಶನವಾಗುವುದೆಂಬ ನಂಬಿಕೆ ನನ್ನದು.

ಗ್ರಂಥದಲ್ಲಿ ಪ್ರಧಾನವಾಗಿ ಎರಡು ಭಾಗಗಳಿದ್ದು. ಮೊದಲನೆಯ ಭಾಗದಲ್ಲಿ ನಾನು ನಾಡವರ ವಿಚಾರವಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಭಾಷಣ ಹಾಗೂ ಬರೆದ ಪ್ರಬಂಧಗಳಿವೆ. ಎರಡನೆಯ ಭಾಗದಲ್ಲಿ ನಾನು ೧೯೫೬ ರಿಂದ ೧೯೭೨ ರ ಮಧ್ಯಾವಧಿಯಲ್ಲಿ ನಾಡವರ ಜಾನಪದವನ್ನು ಆಗಾಗ ಸಂಗ್ರಹಿಸಿ, ಅವನ್ನು ಸಂಪಾದಿಸಿ, ವಿಶ್ಲೇಷಿಸಿ ಬೇರೆ ಬೇರೆ ಗ್ರಂಥಗಳಲ್ಲಿ, ಇಡಿಯಾಗಿಯೋ, ಬಿಡಿಯಾಗಿಯೋ ಪ್ರಕಟಿಸಿದ ಪಠ್ಯ ಭಾಗಗಳಿವೆ. ಹೋಮ (ದಿಂಡು), ಬಯಕೆ, ಬಾಳಂತಿ, ಮನೆಯಿರವಣ, ಗಾದೆ, ಒಗಟು, ನಂಬಿಕೆ ವಿಧಿ ನಿಷೇಧಗಳು ಎನ್ನುವ ಪಠ್ಯಭಾಗ ಮಾತ್ರ ಇದೇ ಗ್ರಂಥದಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಥಮ ಬಾರಿ ಪ್ರಕಟವಾಗುತ್ತಿದೆ. ಮೊದಲನೆಯ ಭಾಗವು ಎರಡನೆಯ ಭಾಗವನ್ನು ಆಳವಾಗಿ ಅಭ್ಯಸಿಸಬೇಕೆನ್ನುವವರಿಗೆ ಪೂರಕ ಮಾಹಿತಿಯನ್ನೊದಗಿಸುತ್ತದೆ. ಗ್ರಂಥದ ಎರಡೂ ಭಾಗಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಲ್ಲಿ ನಾಡವರ ಸಮುದಾಯದ ಸಂಸ್ಕೃತಿಯ ತಾಜಾ ಹೆಜ್ಜೆ ಗುರುತುಗಳನ್ನರಿಯಲು ಅನುಕೂಲವಾಗುತ್ತದೆ. ಇನ್ನೂ ಹೆಚ್ಚಿನ ಮಾಹಿತಿ ಬಯಸುವವರು ನನ್ನ ನಾಡವರ ಸಾಂಸ್ಕೃತಿಕ ಒಂದು ಅಧ್ಯಯನ ಗ್ರಂಥ ಪರಿಶೀಲಿಸಬಹುದು. (ಗೋಧೂಳಿ ಪ್ರಕಾಶನ, ನಂ. ೩೫, ಗೋಧೂಳಿ, ೫ನೇ ಬಿ. ಅಡ್ಡರಸ್ತೆ, ಸಿಂಡಿಕೇಟ್ ಬ್ಯಾಂಕ್ ಬಡಾವಣೆ, ತುಂಗಾನಗರ, ಬೆಂಗಳೂರು– ೫೬೦೦೯೧), ನಾಡವರ ಸಾಮಾಜಿಕ ಉಪಭಾಷೆ ಕ್ಲಿಷ್ಟವಾದ ಪ್ರಯುಕ್ತ ಅರ್ಥ ಸಂವಹನಕ್ಕೆ ಅನುಕೂಲವಾಗಲೆಂದು ಗ್ರಾಮ್ಯ ಪದಗಳ ಅರ್ಥವನ್ನು

ವಿವರವಾಗಿ ನೀಡಲಾಗಿದೆ. ಇದರಿಂದಾಗಿ ನಾಡವರ ಕನ್ನಡದ ಸೊಗಡನ್ನು ಚೆನ್ನಾಗಿಯೇ ಆಘ್ರಾಣಿಸಬಹುದಾಗಿದೆ. ಸಂಸ್ಕೃತಿಯ ಅಧ್ಯಯನಕಾರರಿಗೆ ಈ ಗ್ರಂಥವೊಂದು ಒಳ್ಳೆಯ ಆಕರ ಗ್ರಂಥವಾಗುವದೆಂಬ ಗ್ರಹಿಕೆ ನನ್ನದು.

ಡಾ. ಎನ್. ಆರ್. ನಾಯಕ

ಪರಿವಿಡಿ

೦೧. ನಾಡವರು ಅಂದು ಇಂದು

ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಡವರ್, ನಾಡವರ, ನಾಡೋರ ಎಂದು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟಯಾನೆ ನಾಡವರ, ಶಿವಮೊಗ್ಗ ಮತ್ತು ಚಿಕ್ಕಮಗಳೂರಿನಲ್ಲಿ ನಾಮಧಾರಿ ಗೌಡರು ಯಾನೆ ನಾಡವರ ಎಂದೆಲ್ಲಾ ಕರೆಯಲಾಗುವ ನಾಡವರು ಹಿಂದೆ ಪ್ರಧಾನವಾಗಿ ಕ್ಷಾತ್ರವೃತ್ತಿ, ಹಾಗೂ ಅದರಿಂದ ಬಿಡುವಿನ ಅವಧಿಯಲ್ಲಿ ಕೃಷಿ ವೃತ್ತಿ ಎರಡನ್ನೂ ರೂಢಿಸಿಕೊಂಡವರು. ಒಂದು ಕಾಲಕ್ಕೆ ನಾಡನ್ನು ಕಟ್ಟಿ ನಾಡವರ, ನಾಳ್ಪ್ರಭು, ನಾಡಗೌಡ ನಾಡ ನಾಯಕ ಎಂದೆಲ್ಲಾ ಹೆಸರಿಸಿಕೊಂಡು ಕರ್ನಾಟಕದ ಅನೇಕ ಸಾಮ್ರಾಜ್ಯಗಳ ಏಳು ಬೀಳುಗಳಲ್ಲಿ ಮಹತ್ವಪೂರ್ಣವಾದ ಪಾತ್ರವಾಡಿದ ವೀರರು. ಬ್ರಿಟಿಷ ಆಳರಸರ ಪೀಡನೆಗೊಳಗಾದ ನಾಡವರು, ಕ್ರಮೇಣ ಕ್ಷಾತ್ರವೃತ್ತಿಯಿಂದ ಹಿಂದೆಗೆದು ಒಕ್ಕಲುತನವನ್ನಾಶ್ರಯಿಸಿ, ಅದರ ಗರಿಷ್ಟ ಸೀಮಾರೇಖೆಯನ್ನೂ ಮುಟ್ಟಿದರು. ಇಂದು ನಾಡವರೆಂಬ ಹೆಸರಿನಲ್ಲಿ ದಕ್ಷಿಣೋತ್ತರ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಈ ಜನಾಂಗ ಕಂಡು ಬಂದರೂ ಒಂದು ಕಾಲಕ್ಕೆ ಕನ್ನಡನಾಡಿನುದ್ದಗಲಕ್ಕೂ ವ್ಯಾಪಿಸಿ, ಕನ್ನಡ ಸಂಸ್ಕೃತಿಯ ಹಬ್ಬುಗೆಗೆ ಮಹತ್ವಪೂರ್ಣವಾದ ಕಾಣಿಕೆ ನೀಡಿದವರು. ಕವಿರಾಜಮಾರ್ಗಕಾರನಿಂದ "ಸುಭಟರ್ಕಳ್, ಸುಪ್ರಭುಗಳ್ ಚೆಲ್ವರ್ಕಳ್, ಗುಣಿಗಳ್, ಅಭಿಮಾನಿಗಳ್, ಅತ್ಯುಗ್ರರ್, ಗಭೀರ ಚಿತ್ತರ್, ವಿವೇಕಿಗಳ್ ನಾಡವರ್ಗಳ್" ಎಂದೆಲ್ಲಾ ಮುಕ್ತ ಕಂಠದಿಂದ ಶ್ಲಾಘನೆಗೊಳಗಾದವರು. ಡಾ॥ ಶಂ. ಬಾ. ಜೋಶಿಯವರ ಅಭಿಪ್ರಾಯದಂತೆ, ಪ್ರಾಚೀನ ಕಾಲಕ್ಕೆ ಇವರು ವೀರ ರುದ್ರನ ಉಪಾಸಕರು. ಕರ್ನಾಟಕದಲ್ಲಿಯ ಧಾರ್ಮಿಕ, ರಾಜಕೀಯ ಹಾಗೂ ಸಮಾಜಿಕ ಸ್ಥಿತ್ಯಂತರಗಳ ಕಾರಣದಿಂದಾಗಿ ಜೈನ, ವೀರಶೈವ, ವೈಷ್ಣವ ಮತಗಳಲ್ಲಿ ಹರಿದು ಹಂಚಿಹೋಗಿ, ವಿಭಿನ್ನ ಕಸಬುಗಳನ್ನು ಕೈಕೊಂಡು ತಮ್ಮ ಮೂಲ ಕುಲಬಳ್ಳಿಗಳನ್ನು ಮರೆತು, ಕನ್ನಡ ನಾಡಿನಲ್ಲಿ ನಾಡವರು, ಬಂಟರು, ನಾಮಧಾರಿ ಗೌಡರು, ರೆಡ್ಡಿಗಳು, ಒಕ್ಕಲಿಗರು, ಕ್ಷತಿಯರು, ಬ್ರಹ್ಮ ಕ್ಷತ್ರಿಯರು ಎಂಬ ಬೇರೆ ಬೇರೆ ಗುಂಪುಗಳಾಗಿ ಒಡೆದು ಹೋದರೂ, ಮೂಲತಃ ಇವರೆಲ್ಲ ಒಂದೇ ಮೂಲದವರು. ಪ್ರಾಚೀನ ಕಾಲಕ್ಕೆ ನಾಡವರ್ಗಳ್, ನಾಡವರ್ ಎಂಬ ಹೆಸರಿನಿಂದ ನಾಡಿನುದ್ದಗಲಕ್ಕೆ ಹರಡಿಕೊಂಡ ಈ ಜನಾಂಗದ ಮೂಲದ ಬಗ್ಗೆ ಅನೇಕ ವಿದ್ವಾಂಸರು ವಿಭಿನ್ನ ನೆಲೆಯಲ್ಲಿ ಚಿಂತಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

೧. ಇವರು ಆರ್ಯರ ಪೀಡೆಗೊಳಗಾಗಿ, ತಾವು ಕಟ್ಟಿ ಬೆಳೆಸಿದ ಸಿಂಧೂ ತೀರದ ಸಂಸ್ಕೃತಿಯ ಪ್ರದೇಶವನ್ನು ತೊರೆದು, ದಕ್ಷಿಣ ಭಾರತಕ್ಕೆ ಬಂದ, ದ್ರಾವಿಡ ಪಂಗಡದ ಒಂದು ಶಾಖೆ, ೨. ಮಧ್ಯ ಭಾರತದ ಸಂಸ್ಕೃತಿ ಸಂಪನ್ನ ಕೋಶರರು, ೩. ಪಂಜಾಬದಿಂದ ವಲಸೆ ಬಂದ ಜಾಟರು ೪. ರಾಜಸ್ಥಾನದ ವೀರ ಕ್ಷತ್ರಿಯರು

೫. ಗುಜರಾತದ ಗುರ್ಜರರು ೬. ನರ್ಮದಾ ತೀರದ ಹೈಹಯದ ರಾಮ ಭೋಜನ ವಂಶಸ್ಥರು; ಅಂಗ, ವಂಗ, ಕಲಿಂಗ, ಕಾಂಬೋಜ ರಾಜರ ಸೈನಿಕರಾಗಿ ಪ್ರಸಿದ್ಧರು; ಉಜ್ಜಯಿನಿ ಹಾಗೂ ತುಳುನಾಡನ್ನಾಳಿದವರು ೭. ಉತ್ತರ ಪ್ರದೇಶದ ಕಾಯಸ್ಥರು. ೮. ಮಧ್ಯ ಪೂರ್ವದ ಇರಾಕಿನ ಆಲ್ ಬಸ್ರಾ ಪ್ರಾಂತದ ಉರ್ ಪ್ರದೇಶದಿಂದ ಬಂದವರು. ೯. ಅಫಘಾನಿಸ್ತಾನದಿಂದ ಬಂದ ಯೋಧರು. ೧೦. ಆಫ್ರಿಕಾದ ಬಂಟು ಜನಾಂಗದವರು ಎಂದು ಮುಂತಾಗಿ ಬೇರೆ ಬೇರೆ ಸಂಶೋಧಕರು ತಮ್ಮ ವಿಭಿನ್ನ ನಿಲುವಿನ ಸಂಶೋಧನಾ ಫಲಿತವನ್ನು ಹೊರಗೆಡವಿದ್ದಾರೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಹೊಯ್ಸಳರು, ಗಂಗರು, ವಿಜಯ ನಗರದ ತುಳುವ, ಸಾಳ್ವವಂಶದವರು, ಆಳುಪರು, ಪಾಂಡ್ಯರು, ರಟ್ಟರು, ಶಿಲಾಹಾರರು, ಚೌಟರು ಮುಂತಾದ ರಾಜ ವಂಶಗಳ ಜೊತೆಯಲ್ಲಿ ನಾಡವರ ಸಂಬಂಧವನ್ನು ಸಂಶೋಧಕರು ಗುರುತಿಸಿದ್ದಾರೆ.

ಸೌದತ್ತಿಯ ರಟ್ಟರು ಭೋಜವಂಶಸ್ಥರೆಂದು ಶಾಸನೋಲ್ಲೇಖವಿದೆ. ಮನುಸ್ಮೃತಿಯಲ್ಲಿ ರಟ್ಟರನ್ನು ನಟ್ಟರೆಂದು ಕರೆಯಲಾಗಿದೆ. ತಮಿಳುನಾಡಿನಲ್ಲಿ ಇವರನ್ನು ನಾಟ್ಟರ್ ಎನ್ನುತ್ತಾರೆ. ಮನುಸ್ಮೃತಿಯಲ್ಲಿ ವ್ರಾತ್ಯ ಕ್ಷತ್ರಿಯರೆಂದು ಕರೆಯಲಾದ ಇವರು ಮಹಾರಾಷ್ಟ್ರವನ್ನೊಳಗೊಂಡ, ಕರ್ನಾಟಕ, ಆಂಧ್ರ ಮತ್ತು ತಮಿಳುನಾಡನ್ನು ಆಳಿದ ಶಾತವಾಹನರ ಅಧೀನ ಆಡಳಿತಗಾರರು. ಇವರು ರಾಷ್ಟ್ರ, ನಾಟ್ಟ, ನಾಡುಗಳ ರಾಜಪ್ರತಿನಿಧಿಗಳೂ ಆಗಿದ್ದರೆಂದು ತಿಳಿದು ಬರುತ್ತದೆ, ನಟ್ಟ, ನಟ, ನಾಟರೇ, ನಾಡವರು; ರಟ್ಟರು, ರಾಷ್ಟ್ರಿಕರು. ಕನ್ನಡ ನಾಟರು ಎಂದರೆ ನಾಡವರು. ಕನ್ನರು, ನಟರು ಮೊದಲಾದ ಹೆಸರುಗಳೂ ಇವರಿಗೆ ಅನ್ವಯವಾಗುತ್ತದೆ. ಇವರು ಕನ್ನಡದ ಮೂಲ ಜನಾಂಗ, ನಾಡಿನ ಜೀವ ಜೀವಾಳ ಎಂದು ಡಾ॥ ಶಂ. ಬಾ. ಜೋಶಿಯವರ ಅಭಿಪ್ರಾಯ. ರಾಷ್ಟ್ರಿಕರೇ ರಾಟ್ಟ, ನಾಟ್ಟ, ನಾಡುಗಳಾಗಿ ಈ ರಾಟ್ಟರ, ನಾಟ್ಟರ, ನಾಡವರ "ಕುಟುಂಬಿ" ಪಡೆಯೇ ರಾಷ್ಟ್ರಕೂಟ ಸಾಮ್ರಾಜ್ಯ ಕಟ್ಟಿತೆಂಬ ಅಭಿಪ್ರಾಯವಿದೆ. ಕುಂದಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಯ ನಾಡವರು ರಾಷ್ಟ್ರಕೂಟ ಅರಸು ವಂಶಸ್ಥರು ಎಂದು ಡಾ॥ ಗುರುರಾಜ ಭಟ್ಟರು ಅಭಿಪ್ರಾಯ ಪಟ್ಟಿದ್ದಾರೆ. ಚಾಲುಕ್ಯರ ಕಾಲಕ್ಕೆ ಇವರು ಅನುವಂಶಿಕ ರಾಜ್ಯಪಾಲರಾಗಿದ್ದರೆಂದು ತಿಳಿದು ಬರುತ್ತದೆ. ರಾಷ್ಟ್ರಕೂಟರ ಶಾಸನಗಳಲ್ಲಿ ನೇಗಿಲಿದ್ದುದರಿಂದ ಇವರು ಒಕ್ಕಲಿಗರು. "ರಾಷ್ಟ್ರಕೂಟ ಪ್ರಮುಖಾನ್ ಕುಟುಂಬಿನಃ" ಎಂಬುಕ್ತಿಯಿದೆ. ರಾಷ್ಟ್ರಕೂಟರು ಕುಟುಂಬಿಗಳು ಎಂದರೆ ಉನ್ನತ ಸ್ಥಾನಮಾನ ಹೊಂದಿದ ಸಾಗುವಳಿದಾರರು. ಕುಟುಂಬಿ ಎಂಬ ಪದ ಇವರ ವ್ಯವಸಾಯ ವೃತ್ತಿಯನ್ನು ಅನಾವರಣಗೊಳಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕಾಸರಗೋಡು ಜಿಲ್ಲೆಯಲ್ಲಿರುವ "ಒಕ್ಕೆಲ್ಮ" ಬಂಟರು, ಆಂಧ್ರದ ನಾಯ್ಡುಗಳು, ತಮಿಳ್ನಾಡಿನ ನಾಟ್ಟರ್ ಕೇರಳದ ಪುದುವಾಳರು, ಮಹಾರಾಷ್ಟ್ರದ

ಮರಾಠಿ ಭಾಷೆಯ ಗಾಂವಕರರು (ಕೊಂಕಣ ಮರಠಾ) ಬೋಸಲೆ, ಗುಜರಾತದ ಗುಪ್ತರು, ಬಂಗಾಲದ ಬೋಸರು ಒಂದೇ ಮೂಲದವರೆಂಬ ಅಭಿಪ್ರಾಯಗಳಿವೆ. ಹಿಂದೆ ಇವರು ಮಧ್ಯ ಭಾರತದ ಮಾಳವ, ಹೌಷಂಗಾಬಾದ್ ಮುಂತಾದ ಪ್ರದೇಶಗಳನ್ನಾಳುತ್ತಿದ್ದರು; ನೋಬಲ್ ಕ್ಷತ್ರಿಯರೆಂದು ಹೆಸರು ವಾಸಿಗಳೂ ಆಗಿದ್ದರು. ಒಳ್ಳೆಯ ಕುದುರೆ ಸವಾರರಾದ ಇವರು ಅಲ್ಲಿಂದ ದಕ್ಷಿಣಕ್ಕೆ ಮಹಾರಾಷ್ಟ್ರ, ಕರ್ನಾಟಕದೆಡೆ ವಲಸೆ ಬಂದರೆಂದು ಕೆಲವು ಇತಿಹಾಸಕಾರರ ಅಭಿಪ್ರಾಯ. ಹತ್ತನೆಯ ಶತಮಾನದಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯ ಪತನವಾದೊಡನೆ ನಾಡವರು ಪಶ್ಚಿಮ ಘಟ್ಟದೆಡೆಗೆ ದೇಶ ಭ್ರಷ್ಟರಾಗಿ ವಲಸೆ ಬಂದರೆಂದು ಹೇಳಲಾಗುತ್ತದೆ. ರಾಷ್ಟ್ರಕೂಟರ ಮುಖ್ಯಸ್ಥರು ಪಶ್ಚಿಮ ಘಟ್ಟಗಳಲ್ಲಿ ಸಾಮೂಹಿಕವಾಗಿ ಅವಿತು, ಪಶ್ಚಿಮ ಚಾಲುಕ್ಯರಿಗೆ ಅಧೀನರಾಗಿ ಮುಂದೆ ಹೊಯ್ಸಳ ರಾಜ್ಯವನ್ನು ಸ್ಥಾಪಿಸುವಲ್ಲಿ ಮಹತ್ವದ ಪಾತ್ರವಹಿಸಿದರು. ಹೊಯ್ಸಳ ರಾಜ್ಯದಲ್ಲಿ ಅತ್ಯುನ್ನತ ಅಧಿಕಾರಿಗಳಾದರು.

ಇನ್ನು ಕೆಲವರ ಅಭಿಪ್ರಾಯದಂತೆ ನಾಡವರು ಕಲಚೂರಿ ವಂಶಸ್ಥರ ಕಾಲಕ್ಕೆ ರಾಜಸ್ತಾನದಿಂದ ಕರ್ನಾಟಕಕ್ಕೆ ಜೈನಧರ್ಮ ಪ್ರಚಾರಕರಾಗಿ ಬಂದರು. ಕಲಚೂರಿ ವಂಶದವರು ಮೂಲತಃ ರಾಜಸ್ತಾನದವರು. ಆರನೇ ಶತಮಾನದಿಂದ ಹದಿಮೂರನೆಯ ಶತಮಾನದವರೆಗೆ ಕರ್ನಾಟಕವನ್ನೊಳಗೊಂಡ ಭಾರತದ ಬೇರೆ ಬೇರೆ ಭಾಗಗಳನ್ನಾಳುತ್ತಿದ್ದರು. ಇವರು ಕತ್ತಿ ಕಾಳಗದಲ್ಲಿ ಪ್ರವೀಣರು. ಕಲಚೂರಿ ದೊರೆ ಬಿಜ್ಜಳನು (೧೧೩೦–೧೧೬೭) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ನಾಡವರ ಸಂಬಂಧಿಯೆಂಬ ವದಂತಿಯಿದೆ. ಅಂಕೋಲಾ ತಾಲೂಕಿನ ಭಾವಿಕೇರಿಯ ಹಿರಿನಾಯಕ, ಕಿರಿನಾಯಕರು ಬಿಜ್ಜಳನ ಸಂಬಂಧಿಗಳು ಬಸವಣ್ಣನವರ ಕಾಲಕ್ಕೆ ಆದ ಕಲ್ಯಾಣ ಕ್ರಾಂತಿಯಲ್ಲಿ ಹಿರಿನಾಯಕ, ಕಿರಿನಾಯಕರ ಕೊಲೆಯಾಯಿತು. ಕೊಲೆಯಾದ ನಾಯಕರ ರುಂಡಗಳನ್ನು ಕುದುರೆಗಳು ಭಾವಿಕೇರಿಗೆ ಹೊತ್ತು ತಂದವು. ಆ ರುಂಡಗಳ ಜೊತೆಗೆ ನಾಯಕರ ಹೆಂಡಿರು ಸಹಗಮನ ಮಾಡಿ ಮಹಾಸತಿಯರಾದರು. ಹಿರಿನಾಯಕ ಕಿರಿನಾಯಕರ ಹೆಂಡಂದಿರಾದ ಕನ್ನಡ ಮಾಸ್ತಿ ಮತ್ತು ಕೊಂಕಣ ಮಾಸ್ತಿಯರ ಸ್ಮಾರಕಗಳು, ಅವರ ಗರಡೀಮನೆ ಹಾಗೂ ಕುದುರೆ ಕಟ್ಟುವ ಕಂಬಗಳ ಅವಶೇಷಗಳು ಭಾವಿಕೇರಿಯಲ್ಲಿವೆ. ಹಿರಿನಾಯಕ ಕಿರಿನಾಯಕರ ಕೊಲೆಯಾದ ಸಂಕ್ರಾಂತಿಯ ಹಬ್ಬದ ದಿನವನ್ನು ಇವರ ವಂಶಸ್ಥರೆಂದು ಪರಿಗಣಿಸಲಾದ ಕಲ್ ನಾಯಕ, ದೇವಣ್ಣ ನಾಯಕನ ಮನೆತನದವರು ಇಂದಿಗೂ ದುರ್ದಿನವೆಂದು ತಿಳಿದು ಆ ಹಬ್ಬವನ್ನಾಚರಿಸುವುದಿಲ್ಲ.

ನಾಡವರು ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಕಲಚೂರಿ, ಹೊಯ್ಸಳ, ವಿಜಯನಗರ ಹಾಗೂ ತುಳುನಾಡ ಜೈನ ಅರಸರ ಸೇನಾಪತಿಗಳಾಗಿಯೂ, ಪ್ರಸಿದ್ಧದಳವಾಯಿಗಳಾಗಿಯೂ, ಸೈನಿಕರಾಗಿಯೂ ಸೇವೆ ಸಲ್ಲಿಸಿದ್ದರೆಂದು ತಿಳಿದು ಬರುತ್ತದೆ.

ಹೊಯ್ಸಳ ರಾಜ್ಯದಲ್ಲಿ ನಾಡವರು ಅತ್ಯುನ್ನತ ಮಟ್ಟದ ಅಧಿಕಾರಿಗಳಾಗಿದ್ದರು. ಹೊಯ್ಸಳ ಹೊನ್ನಯ್ಯ ದಂಡನಾಯಕ ಹಾಗೂ ಅವನ ಪತ್ನಿ ಮಾಚಕ್ಕ (ಮಾಚಿಕಬ್ಬೆ) ಇವರ ಮಗಳಾದ, ಹೊಯ್ಸಳ ವಿಷ್ಣು ವರ್ಧನನ ಪಟ್ಟ ಮಹಿಷಿಯಾದ ನಾಟ್ಯರಾಣಿ ಶಾಂತಲೆ ತಮ್ಮ ಸಂಬಂಧಿಯೆಂದು ನಾಡವರು ಬಗೆಯುತ್ತಾರೆ; ಕೆಲವೆಡೆ ಶಾಂತಲೆಯನ್ನು ಶಾಂತಾದುರ್ಗಿಯೆಂದು ಪೂಜಿಸುತ್ತಾರೆ.

ವಿಜಯ ನಗರದ ಸಾಳುವ ವಂಶದ ಆಳ್ವಿಕೆಯಲ್ಲಿ ಸಾಮ್ರಾಜ್ಯ ಅರಾಜಕತೆಯಿಂದ ತತ್ತರಿಸಿದಾಗ, ವಿಜಯನಗರದರಸು ನರಸಿಂಹದೇವರಾಯ (೧೪೮೫-೧೪೯೧) ಅರಾಜಕತೆ ನಿರ್ಮೂಲನಕ್ಕಾಗಿ, ತುಳುವ ನರಸನಾಯಕನನ್ನು ದಂಡನಾಯಕನಾಗಿ ನೇಮಿಸಿಕೊಂಡ, ಆತ ಬಹುಸಂಖ್ಯೆಯಲ್ಲಿ ನಾಡವರನ್ನು ಕುದುರೆಯ ಸವಾರರನ್ನಾಗಿ ನೇಮಿಸಿಕೊಂಡು ಅರಾಜಕತೆಯನ್ನು ನಿಯಂತ್ರಿಸಿದನೆಂದು ತಿಳಿದುಬರುತ್ತದೆ. ತುಳುವಂಶದ ಕೃಷ್ಣದೇವರಾಯನ ಜಗದ್ವಿಖ್ಯಾತ ಅಶ್ವದಲದಲ್ಲಿ ನಾಡವರ ಕುದುರೆ ಸವಾರರ ಪಡೆ ಬಹುದೊಡ್ಡದಿತ್ತೆಂದು ಹೇಳಲಾಗುತ್ತದೆ. ಪೋರ್ಚುಗೀಸರೊಡನೆ ಕುದುರೆಗಳನ್ನು ಗೋವಾ ಮತ್ತು ಭಟಕಳ ಬಂದರಗಳಿಂದ ಅಂಕೋಲೆಯ ಸಮೀಪದ ವಾಸರಕುದ್ರಿಗೆಗೆ ತರಿಸಿಕೊಳ್ಳುತ್ತಿದ್ದ, ಅಲ್ಲಿಂದ ಅವನ್ನು ಅಂಕೋಲಾ-ಬಳ್ಳಾರಿಯ ಹೆದ್ದಾರಿಯ ಮೂಲಕ ವಿಜಯ ನಗರಕ್ಕೆ ಕಳಿಸಲಾಗುತ್ತಿತ್ತು. ಪೋರ್ಚುಗೀಸರ ಈ ಕುದುರೆ ವ್ಯಾಪಾರ ಒಪ್ಪಂದಕ್ಕೆ, ಅಂಕೋಲೆ ಸೀಮೆಯ ನಾಡವರ ತಿಮ್ಮಣ್ಣ ನಾಯಕನನ್ನು ಮಧ್ಯವರ್ತಿಯಾಗಿ ನೇಮಿಸಲಾಗಿತ್ತು. ಅಳಿಯ ರಾಮರಾಯನ ಕಾಲದಲ್ಲಾದ (೧೫೬೫) "ರಕ್ಕಸ-ತಂಗಡಗಿ" ಕಾಳಗದಲ್ಲಿ ನಾಡವರ ಅಶ್ವದಳ ಕಲಿತನದಿಂದ ಕಾದಿದರೂ, ಅಂತಿಮವಾಗಿ ವಿಜಯನಗದರಸರು ಯುದ್ಧದಲ್ಲಿ ಸೋತರು. ಸಾವಿರಾರು ನಾಡವರ ಸೈನಿಕರು ಯುದ್ಧದಲ್ಲಿ ಹತರಾದರು. ವಿಜಯನಗರ ವಿಜಾಪುರದ ಸುಲ್ತಾನರ ವಶವಾಗಿ, ದಾಳಿಗಾರರ ಸುಲಿಗೆಗೊಳಗಾಯ್ತು. ಅರಾಜಕತೆಯಿಂದ ತಲ್ಲಣಗೊಂಡ ನಾಡವರು ಪುನಃ ಪಶ್ಚಿಮ ಘಟ್ಟದಲ್ಲಿ ಆಶ್ರಯ ಪಡೆದರು.

ಅಮ್ಮಜ್ಜಿ, ಚೆನ್ನಮ್ಮಜ್ಜಿಯೆಂದು ನಾಡವರಲ್ಲಿ ಹೆಸರಾದ ಗೇರಸಪ್ಪೆಯ ಜೈನರಾಣಿ ಚೆನ್ನಭೈರಾದೇವಿಯು, ಯುದ್ಧಕಲೆಯಲ್ಲಿ ಪಳಗಿದ ಸದೃಢಕಾಯದ ನಾಡವರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡಿದ್ದಳು. ನಾಡವರ ದಂಡಿನ ಬೀರ ನಾಯಕ, ದಂಡಿನ ತಿಮ್ಮಣ್ಣ ನಾಯಕರು ಅವಳ ಸೇನಾಪತಿಗಳಾಗಿದ್ದರೆಂದು ಹೇಳಲಾಗುತ್ತದೆ. ಭಟಕಳದಿಂದ ಸದಾಶಿವಗಡದವರೆಗೆ ಇವರ ಖ್ಯಾತಿ. ಇವರ ಕಲಿತನವನ್ನು ಮೆಚ್ಚಿದ ಇಂಗ್ಲಿಷರು ಹಾಗೂ ಪೋರ್ಚುಗೀಸರು ಇವರೊಡನೆ ಸ್ನೇಹದಿಂದಿದ್ದರು. ಚೆನ್ನಭೈರಾದೇವಿಯು ವಿಜಾಪುರದ ಮುಸಲ್ಮಾರ ದಾಳಿ ತಡೆಯಲು ಇವರಿಗೆ ಕುಮಟಾ ಮತ್ತು ಅಂಕೋಲಾ ತಾಲೂಕುಗಳಲ್ಲಿ ಉಂಬಳಿ ನೀಡಿದ್ದಳು. ಚೆನ್ನಭೈರಾದೇವಿಯ ರಾಜ್ಯ ಹಾಳಾದ ಮೇಲೆ ನಾಡವರು ಕ್ರಮೇಣ ತಮ್ಮನ್ನು ಒಕ್ಕಲುತನದಲ್ಲಿ ತೊಡಗಿಸಿಕೊಂಡು ಕೃಷಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಿದರು.

ವಿಜಯ ನಗರ ಹಾಗೂ ಸ್ವಾದಿ ಅರಸರ ವಶದಲ್ಲಿ ಗೋವೆಯ ಆಡಳಿತವಿದ್ದಾಗ, ಆ ಅರಸರು ನಾಡವರ ಅಧಿಕಾರಿಗಳನ್ನು ಗೋವೆಯ ಪಾರುಪತ್ಯಗಾರರನ್ನಾಗಿ ನೇಮಿಸಿದ್ದರು. ಗೇವೆಯನ್ನು ಪೋರ್ಚುಗೀಸರು ವಶಪಡಿಸಿಕೊಂಡ ಮೇಲೆ, ಅವರು ಗೋವಾ ನಿವಾಸಿಗಳನ್ನು ಕ್ರಿಶ್ಚಿನ್ ಧರ್ಮಕ್ಕೆ ಮತಾಂತರಗೊಳಿಸತೊಡಗಿದರು, ಗೋವೆಯ ದೇವಾಲಯಗಳನ್ನು ನಾಶಗೊಳಿಸಿದರು. ಆಗ ಈ ಕಾರ್ಯಾಚರಣೆಯನ್ನು ಪ್ರತಿಭಟಿಸಿದ ಅನೇಕ ನಾಡವರನ್ನು ಕೊಲ್ಲಲಾಯಿತು; ಕೆಲವರನ್ನು ಮತಾಂತರಿಸಲಾಯಿತು. ಆಗ ನಾಡವರ ಮೂರು ಮಂದಿ ಮುಖಂಡರು ತಮ್ಮ ಕುಟುಂಬ ಸಮೇತ, ತಮ್ಮ ಕುಲದೇವತೆ ಶಾಂತಾದುರ್ಗಿಯೊಡನೆ ಪಾರಾಗಿ ಬಂದು ತಾತ್ಕಾಲಿಕವಾಗಿ ಅಂಕೋಲಾ ತಾಲೂಕಿನ ಅಗಸೂರಿನಲ್ಲಿ ನೆಲೆಸಿದರು. ಅಲ್ಲಿಯೇ ಶಾಂತಾದುರ್ಗಿಯನ್ನು ಪ್ರತಿಷ್ಠಾಪಿಸಿದರು. ಕೆಲವು ವರ್ಷಗಳ ನಂತರ ಶಾಂತಾದುರ್ಗಿಯನ್ನು ಹಿರೇಗುತ್ತಿ ನಾಡವರ ವಶದಲ್ಲಿದ್ದ ಅಂಕೋಲಯಲ್ಲಿ ಸ್ಥಾಪಿಸಲಾಯಿತೆಂದು ವದಂತಿ.

ಹದಿನಾರನೆಯ ಶತಮಾನದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾದಿರಾಜ್ಯ ಸ್ಥಾಪನೆಯಾದ ಮೇಲೆ ವಿಜಯ ನಗರದ ನಾಡವರ ಮುಂದಾಳುಗಳು ಸ್ವಾದಿರಾಜ್ಯದ ಮೇಲ್ವಿಚಾರಕರೂ, ಸ್ವಾದಿಯ ಅರಸರಿಗೆ ಸಲಹೆಗಾರರೂ ಆಗಿದ್ದರು. ಹದಿನೇಳನೇಯ ಶತಮಾನದ ಸ್ವಾದಿಯ ಅರಸು ಮದುಲಿಂಗ ನಾಯಕನು ಗೋಕರ್ಣ ಸೀಮೆಯ ನಾಡವರ ಹೆಣ್ಣನ್ನು ಮದುವೆಯಾಗಿದ್ದ ಎಂಬ ವದಂತಿಯಿದೆ. ಅವನಿಗೆ ಅವಳಿಂದ ಸಾವಿತ್ರಿ ಮತ್ತು ಸದಾಶಿವ ಎಂಬ ಎರಡು ಮಕ್ಕಳು. ಮುಂದೆ ಬೆಳವಡಿಯ ಮಲ್ಲಮ್ಮನೆಂದು ಖ್ಯಾತಳಾದ ಸಾವಿತ್ರಿಯನ್ನು ಬೆಳವಡಿಯ ದೊರೆ ಈಶ ಪ್ರಭುವಿಗೆ ಮದುವೆ ಮಾಡಿಕೊಡಲಾಗಿತ್ತು. ಅವಳು ಮರಾಠಾ ಚಕ್ರವರ್ತಿ ಶಿವಾಜಿಯ ಜೊತೆ ಸೆಣಸಿ ಗಂಡನ ರಾಜ್ಯವನ್ನು ಉಳಿಸಿಕೊಂಡ ಕಥೆ ಇತಿಹಾಸ ಪ್ರಸಿದ್ಧ.

ಗೋಕರ್ಣವು ಸ್ವಾದಿಯ ಅರಸರ ಆಡಳಿತಕ್ಕೊಳಪಟ್ಟಾಗ ಹಿರೇಗುತ್ತಿಯ ನಾಡವರ ನಾಯಕನೊಬ್ಬನು ಗೋಕರ್ಣದ ಮಹಾಬಲೇಶ್ವರ ದೇವಾಲಯಕ್ಕೆ ಆಶ್ರಯದಾತನಾಗಿದ್ದ. ಪೋರ್ಚುಗೀಸರ ಕಡಲುಗಳ್ಳರು ೧೭೧೪ರ ಸುಮಾರಿಗೆ ಆಕಸ್ಮಿಕವಾಗಿ ಮಹಾಬಲೇಶ್ವರ ದೇವಾಲಯದ ಮೇಲೆ ದಾಳಿ ಮಾಡಿದರು. ಆಗ ನಾಡವರ ವೀರರು ಅವರ ವಿರುದ್ಧ ಸೆಣಸಿದರು. ಆಗ ಅನೇಕ ನಾಡವರು ಸೆರೆಸಿಕ್ಕರು, ಹಲವರು ಹತರಾದರು, ಮಹಾಬಲೇಶ್ವರ ದೇವಾಲಯ ಭಾಗಶಃ ಹಾಳಾಯಿತು, ಕೊನೆಗೂ ಕೊಳ್ಳೆಗಾರರನ್ನು ಓಡಿಸಲಾಯಿತು. ಕೆಲ ವರ್ಷಗಳ ನಂತರ ಹಾಳಾದ ದೇವಾಲಯವನ್ನು ಸ್ವಾದಿಯ ರಾಜನು ಸರಿಪಡಿಸಿದ. ನಾಡವರ ಈ ಸಾಹಸಗಾಥೆಯ ನೆನಪಿಗಾಗಿ ೧೯೨೫ರ ವರೆಗೂ ಹಿರೇಗುತ್ತಿಯ ಗಾಂವಕರನಿಗೆ ಗೋಕರ್ಣದ ಮಹಾಶಿವರಾತ್ರಿಯ ಉತ್ಸವ ಸಮಯದಲ್ಲಿ ತೇರಿನಲ್ಲಿ ರಾಜುಡುಗೆಯಲ್ಲಿ ಕೂಡ್ರಿಸಿ ಮೆರವಣಿಗೆಯನ್ನು ಮಾಡಲಾಗುತ್ತಿತ್ತು. ಹಿಂದೆ ನಾಡವರನೇಕರ ಮನೆಗಳಲ್ಲಿ ಆಯುಧಗಳಿದ್ದವು; ಇವರ ಸೈನ್ಯ ಸೇವೆಯ ಬಗ್ಗೆ ಅನೇಕ ಸನದುಗಳನ್ನೂ ಖಡ್ಗಗಳನ್ನು ನೀಡಲಾಗಿತ್ತು. ಬ್ರಿಟಿಷರು ಅವೆಲ್ಲವನ್ನೂ ಜಪ್ತುಮಾಡಿ ವಶಪಡಿಸಿಕೊಂಡರು.

ಬ್ರಿಟಿಷ ಆಳರಸರ ಕಾಲಕ್ಕೆ ನಾಡವರೇ ಮುಂತಾದ ಕ್ಷತ್ರಿಯ ಸಮಾಜದವರು ವಸಾಹತು ಆಡಳಿತಶಾಹಿಯ ವಿರುದ್ಧ ಮೇಲಿಂದ ಮೇಲೆ ದಂಗೆಯೇಳುತ್ತಿದ್ದುದರಿಂದ, ಬ್ರಿಟಿಷರು ಅವರ ಮೇಲೆ ವಿಶ್ವಾಸವಿಡುತ್ತಿರಲಿಲ್ಲ. ಹೀಗಾಗಿ ೧೮೫೭ ರ ಸಿಪಾಯಿ ಬಂಡಾಯದ ಅನಂತರಿನ ದಿನಗಳಲ್ಲಿ ನಾಡವರು ಸೈನಿಕ ಸೇವೆಯಿಂದ ವಂಚಿತರಾದಂತಿದೆ. ಈ ದಿನಗಳಲ್ಲಿ ನಾಡವರ ದೊಡ್ಡ ಭೂ ಹಿಡುವಳಿದಾರರು ತಮ್ಮ ಹೊಲಗಳನ್ನು ಒಕ್ಕಲಿಗೆ ಗೇಣಿಗೆ ನೀಡಿ, ಭೂಮಾಲಿಕರಾಗಿ ನಿಂತರು. ಚಿಕ್ಕ ಭೂ ಹಿಡುವಳಿದಾರರು, ತಮ್ಮ ಸ್ವಂತ ಜಮೀನುಗಳಲ್ಲಿ ತಾವೇ ಒಕ್ಕಲುತನ ಮಾಡಿ ಕೃಷಿಯಲ್ಲಿ ಗರಿಷ್ಟ ಪ್ರಮಾಣದ ಪರಿಣತಿಯನ್ನು ಸಾಧಿಸಿದರು. ಮುಂದೆ ೧೮೮೯ ರ ಸುಮಾರಿಗೆ ಲಾರ್ಡ ಕರ್ಜನನಿಂದ ಹೇರಲ್ಪಟ್ಟ ಹೊಸಕರ ಪದ್ಧತಿ ನಾಡವರಿಗೆ ಮುಳುವಾಯಿತು. ಭೂಮಾಲಿಕರಾದ ನಾಡವರು ತಮ್ಮ ಭೂಮಿಗೆ ವಸಾಹತು ಆಡಳಿತಗಾರರಿಗೆ ತೆರಬೇಕಾದ ಭೂಕಂದಾಯ ಕಟ್ಟಲಾಗದೆ ತೊಂದರೆ ಅನುಭವಿಸಿದರು. ಕೆಲವರು ತಮ್ಮ ಭೂಮಿಗೆ ಸಾಗುವಳಿದಾರರು ಸಿಗದೆ, ಭೂಮಿಯನ್ನು ಸರಕಾರಕ್ಕೆ ಒಪ್ಪಿಸಿದರು; ತಮ್ಮ ಭೂ ಸ್ವಾಮಿತ್ವವನ್ನು ಕಳೆದುಕೊಂಡರು. ಆದರೂ ಬದುಕುವ ಕೆಚ್ಚನ್ನು ಕಳೆದುಕೊಳ್ಳದೆ ಅರ್ಥಪೂರ್ಣ ಬದುಕು ಬಾಳಿದರು.

ಸ್ವಾತಂತ್ರ್ಯ ಪ್ರಿಯರಾದ ನಾಡವರು, ಅತ್ಯುಗ್ರರಾದರೂ, ಹಿಂಸಾರಭಸಮತಿಗಳಾಗದೆ, ಗಾಂಧೀಜಿಯವರ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿ ನಿಂತರು. ಅವರ ಸ್ವದೇಶಿ–ಅಸಹಕಾರ ಚಳುವಳಿಯಲ್ಲಿ ಹೆಣ್ಣು–ಗಂಡು ಭೇದವಿಲ್ಲದೆ ಸರ್ವರೂ ಸಮೂಹಿಕವಾಗಿ ಧುಮಿಕಿದರು. ಬಹುಶಃ ದೇಶದ ಇತಿಹಾಸದಲ್ಲಿ ಸಮಗ್ರ ಜನಾಂಗವೊಂದು ವಸಾಹತುಶಾಹಿ ವಿರುದ್ಧವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ದಾಖಲೆ ನನಗೆ ತಿಳಿದ ಮಟ್ಟಿಗೆ ಇಲ್ಲ; ಆದರೆ ನಾಡವರು ಅದಕ್ಕೆ ಅಪವಾದವೆನಿಸಿದರು. ಗಾಂಧೀಜಿಯವರು ಹಮ್ಮಿಕೊಂಡ ಉಪ್ಪಿನ ಸತ್ಯಾಗ್ರಹ, ಜಂಗಲ ಸತ್ಯಾಗ್ರಹ, ಕರನಿರಾಕರಣೆ, ಚಲೇಜ್ಞಾವ್ ಚಳುವಳಿ ಈ ಮುಂತಾದ ಚಳುವಳಿಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಡವರದೇ ಸಿಂಹಪಾಲು. ಕರನಿರಾಕರಣೆ ಚಳುವಳಿಯಲ್ಲಿ ನಾಡವರು ತಮ್ಮ ಸ್ವಂತ ಹೊಲ, ಮನೆಗಳನ್ನು ಕಳೆದುಕೊಂಡು, ಬೀದಿಪಾಲಾಗಿ ಜೈಲು ಸೇರಿ, ಅಂಕೋಲೆಯನ್ನು ಕರ್ನಾಟಕದ ಬಾರ್ಡೋಲಿಯನ್ನಾಗಿಸಿದ್ದು ಸಾಹಸದ ಒಂದು ವೀರ ಗಾಥೆಯಾಗಿ ರಂಗರಾವ್ ದಿವಾಕರರ ಕರನಿರಾಕರಣೆಯ ವೀರ ಕಥೆಯಲ್ಲಿ ದಾಖಲಾಗಿದೆ.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಹೊಲ ಮನೆಗಳನ್ನು ಕಳೆದುಕೊಂಡು ಜೈಲು ವಾಸವನ್ನನುಭವಿಸಿದ ನಾಡವರ ನೂರಾರು ಸ್ವಾತಂತ್ರ್ಯ ಯೋಧರ ಕುಟುಂಬಗಳು, ಸರಕಾರದಿಂದ ಗೌರವ ಮಾಸಾಶನವನ್ನು ಪಡೆದು, ಸ್ವಲ್ಪ ಮಟ್ಟಿಗೆ ಇಂದು ಆರ್ಥಿಕವಾಗಿ ಚೇತರಿಸಿಕೊಂಡು ನೆಮ್ಮದಿಯ ಬಾಳನ್ನು ಬದುಕುತ್ತಿವೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಣ ಕಹಳೆಯನ್ನೂದಿದ ನಾಡವರು ಸ್ವಾತಂತ್ರ್ಯೋತ್ತರದ ಆರಂಭದ ಒಂದೆರಡು ದಶಕಗಳಲ್ಲಿ ರಾಜಕೀಯವಾಗಿ ನಗಣ್ಯರಾಗಿರಲಿಲ್ಲ. ಮಾನ್ಯ ಸ. ಪ. ಗಾಂವಕರರು ಮುಂಬಯಿ ಪ್ರಾಂತ್ಯ ಗುಜರಾತ ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕವನ್ನೊಳಗೊಂಡ ಪ್ರದೇಶದ ಬಿ. ಜಿ. ಖೇರರ ಮಂತ್ರಿ ಮಂಡಲದಲ್ಲಿ ಉಪಮಂತ್ರಿಗಳಾಗಿದ್ದರು. ಮಾನ್ಯ ಆರ್. ಬಿ. ನಾಯಕರು ವಿಧಾನ ಸಭೆ, ವಿಧಾನ ಪರಿಷತ್ತುಗಳ ಸದಸ್ಯರಾಗಿ ತಮ್ಮ ಜೀವಿತದ ಕೊನೆಗಾಲದಲ್ಲಿ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಮಾನ್ಯ ಬಿ.ವಿ. ನಾಯಕರು ಕೆನರಾ ಲೋಕಸಭಾ ಸದಸ್ಯರಾಗಿ ಗಣನೀಯ ಸೇವೆ ಸಲ್ಲಿಸಿದ್ದರು. ಶ್ರೀ ರಮಾನಂದ ನಾಯಕರು ಉತ್ತರ ಕನ್ನಡ ಜಿಲ್ಲಾ ಪರಿಷತ್ತಿನ ಪ್ರಥಮ ಅಧ್ಯಕ್ಷರಾಗಿ ನಿಯುಕ್ತರಾಗಿದ್ದರು. ಇವರೆಲ್ಲರೂ ಶುದ್ಧ ಹಸ್ತದ ಜನಪರ ನುಲುವಿನ ರಾಜಕಾರಣಿಗಳೆಂದೇ ಹೆಸರು ಮಾಡಿದವರು. ರಾಜಕೀಯದಿಂದ ಜನಪ್ರಿಯತೆಯೊಂದನ್ನು ಬಿಟ್ಟು, ಧನ ಕನಕಗಳನ್ನು ಗಳಿಸದೆ ಸಾಮಾನ್ಯರಂತೆಯೇ ಬದುಕು ಬಾಳಿ, ರಾಜಕಾರಣಿಗಳಿಗೇ ಆದರ್ಶ ಪ್ರಾಯರಾಗಿ ನಿಂತವರು, ಮೌಲ್ಯಾಧಾರಿತ ರಾಜಕೀಯಕ್ಕೆ ಸುವರ್ಣ ಚೌಕಟ್ಟು ಹಾಕಿದವರು. ಆದರೆ ಇತ್ತೀಚಿನ ಜಾತಿ ಜನಸಂಖ್ಯೆಯ ತಳಹದಿಯ ಮೇಲೆ ನಿಂತ ಕರ್ನಾಟಕದ ರಾಜಕೀಯದಲ್ಲಿ ಕವಿರಾಜ ಮಾರ್ಗಕಾರನಿಂದ "ಸುಭಟರ್ಕಳ್, ಸುಪ್ರಭುಗಳ್, ಅಭಿಜನರ್ಕಳ್", ಎಂದು ಮುಂತಾಗಿ ಶ್ಲಾಘನೆಗೊಳಗಾದ ನಾಡವರು, ಸಾಕಷ್ಟು ಯೋಗ್ಯತೆ ಬುದ್ಧಿವಂತಿಕೆಯಿದ್ದರೂ, ರಾಜಕೀಯವಾಗಿ ತುಳಿಯಲ್ಪಟ್ಟಿದ್ದಾರೆ. ಕಳೆದೆರಡು ಮೂರು ದಶಕಗಳಿಂದ ನಾಡವರ ಅರ್ಹತೆಗೆ ತಕ್ಕ ರಾಜಕೀಯ ಸ್ಥಾನ ಮಾನಗಳು ಅವರಿಗೆ ದೊರಕದೆ ಸೊರಗಿ ಹೋಗಿದ್ದಾರೆ. ಇಂದಿನ ರಾಜಕೀಯದಲ್ಲಿ ನಾಡವರದು ಅತ್ಯಂತ ಕ್ಷೀಣ ಧ್ವನಿಯಾಗಿದೆ. ಇದರಿಂದ ನೊಂದ ನಾಡವರು ಇಂದು ಶಿಕ್ಷಣ, ವ್ಯಾಪಾರೋದ್ಧಿಮೆಗಳ ಕಡೆಗೆ ಗಮನ ಹರಿಸಿ ತಮ್ಮ ಬದುಕಿನ ನೆಲೆ ಕಂಡುಕೊಳ್ಳಹತ್ತಿದ್ದಾರೆ.

ಶಿಕ್ಷಣ ಪ್ರೇಮಿಗಳಾದ ನಾಡವರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡುವ ಸ್ವಾಭಾವವುಳ್ಳವರು. ಇವರ ಶಿಕ್ಷಣ ಪ್ರೇಮ ಇಂದು ನಿನ್ನೆಯದ್ದಲ್ಲ. ಶಿವಾಜಿ ಮಹಾರಾಜನ ಸೊಸೆ ತಾರಾಬಾಯಿಯು ಬರೆದ ಮರಾಠಿ ಪುಸ್ತಕವೊಂದರಲ್ಲಿ ಸ್ವಾದಿ ಅರಸು ಮನೆತನದಲ್ಲಿ ಜನಿಸಿದ ಬೆಳವಡಿಯ ಮಲ್ಲಮ್ಮನ ಜೊತೆಗೆ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ೨೦೦ ಹುಡುಗರು ಮತ್ತು ೨೦೦ ಹುಡುಗಿಯರಲ್ಲಿ ೧೦೦ ಜನ ಹವೀಕರು, ೧೦೦ ಜನ ಗೌಡ ಸಾರಸ್ವತರು, ೧೦೦ ಜನ ನಾಡವರು ೫೦ ಜನ ಒಕ್ಕಲರು ೫೦ ಜನ ಲಿಂಗಾಯತರಿದ್ದ ಉಲ್ಲೇಖವಿದೆ. ಈ ದಾಖಲೆಯ ಮೇರೆಗೆ ಹೇಳುವುದಾದರೆ ನಾಡವರು ಹದಿನೇಳನಯ ಶತಮಾನದಿಂದಲೇ ಬ್ರಾಹ್ಮಣರಿಗೆ ಸರಿ ಸಮಾನರಾಗಿ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿದ್ದರು ಎಂದು ಹೇಳಬಹುದಾಗಿದೆ. ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿಯೇ ಶ್ರೀ ವೆಂಕಣ್ಣ

ನಾಯಕ ಗೊನೆಹಳ್ಳಿ ಅವರು ಎರಡು ಸಲ (೧೯೦೬ ಮತ್ತು ೧೯೧೯) ಇಂಗ್ಲೆಂಡಿಗೆ ಹೋಗಿ, ಎಂ.ಎ. ಬಾರ್ ಎಟ್ ಲಾ ಪದವಿಯನ್ನು ಗಳಿಸಿ, ವಿಜಾಪುರ ಜಿಲ್ಲೆಯ ಕಲೆಕ್ಟರಾಗಿ ಆ ಜಿಲ್ಲೆಯ ಕ್ಷೇಮಾಬಿವೃದ್ಧಿಯ ರೂವಾರಿಗಳಾದರು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪಕರಲ್ಲೊಬ್ಬರಾಗಿ, ಅದರ ಅಧ್ಯಕ್ಷರೂ ಆಗಿ ಕನ್ನಡ ಪ್ರೇಮಿಗಳಾಗಿ ಮಿಂಚಿದ್ದು ಇಂದು ಇತಿಹಾಸ. ಶಿಕ್ಷಣ ವಿಷಯದಲ್ಲಿ ನಾಡವರಲ್ಲಿ ಲಿಂಗ ತಾರತಮ್ಯವಿಲ್ಲ. ಹಾಗೆ ನೋಡಿದರೆ ಇತ್ತೀಚಿನ ದಿನಗಳಲ್ಲಿ ನಾಡವರು ಗಂಡಿಗಿಂತ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಲಿದ್ದಾರೆ. ಇಂದಿನ ಪೀಳಿಗೆಯ ನಾಡವರಲ್ಲಿ ಅನಕ್ಷರಸ್ಥರು ದುರ್ಲಭ. ಸಾಕ್ಷರತಾ ಪ್ರಮಾಣದಲ್ಲಿ ನಾಡವರನ್ನು ಸರಿಗಟ್ಟುವ ಜಾತಿಗಳು ಭಾರತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇಲ್ಲವೆಂದೇ ಹೇಳಬಹುದಾಗಿದೆ. ರಾಜಕೀಯವಾಗಿ ಇಂದು ಸೋತು ಸುಣ್ಣಾದ ಸಣ್ಣಾದ ನಾಡವರು ನೌಕರಿಗಾಗಿ ಪೇಟೆ ಪಟ್ಟಣಗಳನ್ನು ಸೇರಿ, ತಮ್ಮ ಬದುಕನ್ನು ಕಟ್ಟಿಕೊಳ್ಳತೊಡಗಿದ್ದಾರೆ. ನಾಡವರಲ್ಲಿ ಬಹುಸಂಖ್ಯಾತ ನೌಕರರು ಶಿಕ್ಷಕರು. ಅವರಿಗೆ ಆ ವೃತ್ತಿ ಅತ್ಯಂತ ಪ್ರಿಯವೂ ಕೂಡ. ಕವಿರಾಜ ಮಾರ್ಗಕಾರನು "ಕನ್ನಡಕ್ಕೆ ನಾಡವರ್ ಓಜರ್" ಎಂದು ಸಾರಿದ ಮಾತು ಇಂದೂ ಕೂಡ ತನ್ನ ಅರ್ಥ ಮೌಲ್ಯವನ್ನು ಕಳೆದುಕೊಂಡಿಲ್ಲವೆಂದು ಹೇಳಲು ಸಂತೋಷವೆನಿಸುತ್ತದೆ. ಸುಮಾರು ನಾಲ್ವತ್ತು ಐವತ್ತು ವರ್ಷಗಳ ಹಿಂದೆ ಕೇವಲ ಶಿಕ್ಷಣ ಕ್ಷೇತ್ರದಲ್ಲಿಯೇ ಹೆಚ್ಚಿನ ಸೇವೆ ಸಲ್ಲಿಸಿ, ಆ ಕ್ಷೇತ್ರದಲ್ಲಿ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿದ ನಾಡವರು, ಇಂದು ಆ ಕ್ಷೇತ್ರದ ಸೀಮೋಲ್ಲಂಘನೆಯನ್ನು ಮಾಡಿ, ವೈದ್ಯಕೀಯ, ಎಂಜಿನಿಯರಿಂಗ್, ಕೃಷಿ, ಅರಣ್ಯ, ನಾಗರಿಕ ಸೇವೆ ಮುಂತಾದ ಕ್ಷೇತ್ರಗಳಲ್ಲಿ ಉನ್ನತ ಮಟ್ಟದ ಆಡಳಿತಗಾರರಾಗಿ ಹೆಸರು ಮಾಡಿದ್ದಾರೆ. ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಹಿರಿಯ ಅಧಿಕಾರಿಗಳಾಗಿದ್ದಾರೆ. ಇಂದು ನಾಡವರೆಂದು ಕರೆದುಕೊಳ್ಳುವ ಸಂಖ್ಯಾಬಾಹುಲ್ಯದಲ್ಲಿ ತೀರ ಚಿಕ್ಕದಾದ ಈ ಜನಾಂಗ, ಶೈಕ್ಷಣಿಕ ಸಾಂಸ್ಕೃತಿಕ ಹಾಗೂ ಆಡಳಿತರಂಗದಲ್ಲಿ ಸಲ್ಲಿಸಿದ ಸೇವೆ ಗಣನೀಯವಾಗಿದೆ. ಇಂದು ನಾಡವರಲ್ಲಿ ಐ.ಎ.ಎಸ್., ಐ.ಪಿ.ಎಸ್., ಐ.ಆರ್.ಎಸ್., ಐ.ಎಫ್.ಎಸ್., ಆದ ಉನ್ನತ ಶ್ರೇಣಿಯ ಅಧಿಕಾರಿಗಳಾಗಿದ್ದಾರೆ. ನಾಡೋಜ ಎಸ್. ಆರ್. ನಾಯಕರು ಉಚ್ಚನ್ಯಾಯಲಯದ ಮುಖ್ಯ ನ್ಯಾಯಮೂರ್ತಿಗಳಾಗಿ, ಇಂದು ಮಾನವ ಹಕ್ಕು ಆಯೋಗದ ಅಧ್ಯಕ್ಷರಾಗಿದ್ದಾರೆ. ಗರಿಷ್ಠ ಮಟ್ಟದ ಶೈಕ್ಷಣಿಕ ಸಾಧನೆಯನ್ನು ಅನೇಕ ನಾಡವರ ಯುವಕ ಯುವತಿಯರು ಮಾಡಿ, ದೇಶ, ವಿದೇಶಗಳಲ್ಲಿ ಉನ್ನತ ಹುದ್ದೆಗಳನ್ನು ಹೊಂದಿ, ಇಂದು ವಿಶ್ವದಲ್ಲೆಲ್ಲೆಡೆ ವ್ಯಾಪಿಸಿ, ಒಂದರ್ಥದಲ್ಲಿ ವಿಶ್ವಕುಟುಂಬಿಗಳೇ ಆಗಿದ್ದಾರೆ.

ಆರಡಿ ಎತ್ತರದ ಉಕ್ಕಿನಂಥ ಸದೃಢಕಾಯವುಳ್ಳ ಕಾಳಗಕಲಿಗಳಾದ ನಾಡವರು, ಬ್ರಿಟಿಷರ ಕಿರುಕುಳಕ್ಕೆ ಪಕ್ಕಾಗಿ, ತಮ್ಮ ಕ್ಷಾತ್ರ ವೃತ್ತಿಗೆ ವಿಧಾಯಹೇಳಿ, ಕುಟುಂಬಿಗಳಾದ ಇವರು. ಉತ್ತಮ ಬೇಸಾಯವೆಂದು ಬಗೆದು ವ್ಯವಸಾಯ ಗೈದು ಆವೃತ್ತಿಯಲ್ಲಿ ಪರಿಣತಿ ಹೊಂದಿದರು; ಶಾಂತಿಯುತ ಬದುಕು ಬಾಳಿದರು. ಆದರೆ ಇಂದಿನ

ಜಾಗತೀಕರಣ ಕೈಗಾರಿಕೀಕರಣ ಕಬಂದ ಬಾಹುವಿಗೆ ಸಿಕ್ಕು ದಿಕ್ಕೆಟ್ಟು, ಕೃಷಿಯಿಂದ ಜೀವನ ನಿರ್ವಹಣೆ ಕಷ್ಟವಾಗಿ, ಇತ್ತೀಚೆಗೆ ಆ ವೃತ್ತಿಯಿಂದಲೂ ಹಿಂದೆಗೆಯುತ್ತಲಿದ್ದಾರೆ. ಹಿಂದೆ ನಾಲ್ಕೈದು ವಾರಲಜೋಡಿ, ಮೂವತ್ತು ನಾಲ್ವತ್ತು ದನಕರುಗಳಿಂದ ಕಿಕ್ಕಿರಿದ ನಾಡವರ ದನದ ಕೊಟ್ಟಿಗೆಯಿಂದು ಬರಿದಾಗುತ್ತಲಿದೆ. ನೂರಾರು ಕುತ್ತರಿಗಳಿಂದ ತುಂಬಿದ ನಾಡವರ ಕಳಗಳು ಕರಗತೊಡಗಿವೆ. ಮನೆ ಮನೆಗಳಲ್ಲಿ ಬತ್ತದ ಕಣಜಗಳನ್ನು ಕಟ್ಟಿ, ತಿಂಗಳು ಗಟ್ಟಲೆ ಬತ್ತಮಿರಿಯುವ ನಾಡವರ ಒ(ಉ)ಳ್ಳಂಗಳಗಳ ವಸಂತಗೀತೋತ್ಸವದ ಕಲರವ ಕಣ್ಮರೆಯಾಗಿದೆ. ಒನಕೆ ಒಡಗಲ್ಲುಗಳು ಕಾಣುತ್ತಿಲ್ಲ. ಮನೆಗಳ ನಡುಕೋಣೆಯಲ್ಲಿ ಸಾಲುಗಟ್ಟಿ ಪೇರಿಸಿದ ನೂರಾರು ಅಕ್ಕಿಮೋಡಿಗಳು ನೋಡಸಿಗವು. ಕಬ್ಬಿನ ತೋಟಗಳು ಕರಗಿವೆ. ನಾಡವರಿಗೆ ಮುಖ್ಯವಾದ ತುಲಸಿ ಹಬ್ಬಕ್ಕೂ ಕಬ್ಬನ್ನು ಕೊಂಡು ತರುವ ದುರ್ದೆಸೆಯೊದಗಿದೆ. ಮೊಗ್ಗೆಯೋಳಿ, ಹಿತ್ತಲೋಳಿಗಳು ಮಾಯವಾಗಿವೆ. ನೀರೆತ್ತುವ ತೊಲಂಡ (ದೊಟ್ಟೆ) ಕಾಲ್ಕಿತ್ತಿವೆ. ನಾಡವರು ಸ್ವಂತ ಸಾಗುಮಾಡುವ ಹಲವಾರು ಗದ್ದೆಗಳನ್ನು ಗೇಣಿಗೆ ಕೊಡಲಾಗಿದೆ. ಅನೇಕ ಗದ್ದೆಗಳು ಬಂಜರು ಬಿದ್ದಿವೆ. ವ್ಯವಸಾಯ ವೃತ್ತಿ ಲಾಭದಾಯಕವಲ್ಲವೆಂದು ಬಹುತೇಕ ನಾಡವರು ವ್ಯವಸಾಯ ತೊರೆದು ಹಳ್ಳಿಬಿಟ್ಟು ಪಟ್ಟಣ ಸೇರತೊಡಗಿದ್ದಾರೆ.

ನಾಡವರು ವೀರ ಪೂಜಕರು, ಮೂಲತಃ ರುದ್ರನ ಉಪಾಸಕರು, ಶಿವೋಪಾಸಕರೂ ಹೌದು. ಮುಂದೆ ಇವರು ಮಹಾವೀರನ ಅನುಯಾಯಿಗಳಾದರು. ಬೌದ್ಧ ಗ್ರಂಥಗಳಲ್ಲಿ ಮಹಾವೀರನನ್ನು "ನಾಟ್ಟಪುತ್ತ" ಎಂದು ಕರೆಯಲಾಗಿದೆ. ಬಹುಶಃ ಮಹಾವೀರನು ನಾಟ (ನಾಡವ)ರಲ್ಲಿ ಅವತರಿಸಿದ ಒಬ್ಬ ವೀರನಿರಬೇಕೆಂದು ಶಂ.ಬಾ. ಜೋಶಿಯವರು ಶಂಕೆ ವ್ಯಕ್ತಪಡಿಸಿದ್ದಾರೆ. ಜೈನರಾದ ನಾಡವರು ಕದಂಬ ಮಯೂರವರ್ಮನ ಕಾಲಕ್ಕೆ ಜೈನಧರ್ಮವನ್ನು ಬಿಟ್ಟು, ವೈದಿಕಧರ್ಮವನ್ನು ಸ್ವೀಕರಿಸಿದ ವದಂತಿಯಿದೆ. ಮುಂದೆ ನಾಡವರು ಶಂಕರಾಚಾರ್ಯರ ಪ್ರಭಾವಕ್ಕೊಳಗಾದರು. ಆ ಮೇಲೆ ರಾಮಾನುಜಾಚಾರ್ಯರ ಪ್ರಭಾವದಿಂದ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ವೈಷ್ಣವ ಧರ್ಮ ಸ್ವೀಕರಿಸಿದರು. ವೈಷ್ಣವ ಧರ್ಮ ಸ್ವೀಕರಿಸಿದರೂ ಕೆಲವೆಡೆ ನಾಡವರನ್ನು ಜೈನ ನಾಡವರೆಂದು ಕರೆಯುತ್ತಿದ್ದುದನ್ನು ನನಗೆ ಹಿರೆಗುತ್ತಿಯ ಒಂದೆರಡು ಮಾಹಿತಿದಾರರು ಹೇಳಿದ್ದಿದೆ. ಇಂದು ನಾಡವರು ಹಿಂದುಗಳಾಗಿ ಪರಿವರ್ತನೆಹೊಂದಿ ವೈಷ್ಣವ ಮತಾವಲಂಬಿಗಳಾಗಿದ್ದಾರೆ. ಆದರೂ ನಾಡವರು ಮತ, ಮಠ ಮಾನ್ಯ ಸಂಸ್ಕೃತಿಗೆ ತಲೆಕೆಡಿಸಿಕೊಳ್ಳುವವರಲ್ಲ; ಪ್ರಗತಿಪರ ಜಾತ್ಯಾತೀತ ನಿಲುವಿನವರು. ಬ್ರಿಟಿಷರ ಕಾಲಕ್ಕೆ ಉಚ್ಚಶಿಕ್ಷಣಕ್ಕಾಗಿ ಇಂಗ್ಲಂಡಿಗೆ ಹೋಗಿ, ಬಾರ್‌ಎಟ್ ಲಾ ಮುಗಿಸಿ ಸ್ವದೇಶಕ್ಕೆ ಮರಳಿ, ವಿಜಾಪುರ ಜಿಲ್ಲೆಯ ಕಲೆಕ್ಟರರಾಗಿ ನಿಯುಕ್ತರಾದ ಘಾಟಿ ವೆಂಕಣ್ಣನಾಯಕ ಅವರಿಗೆ ಗುರುಮಠದ ಆದೇಶದಂತೆ ಬಹಿಷ್ಕಾರ ಹಾಕಿದಾಗ ನಾಡವರು, ಗಾಂವಕರ ಶಾಹಿಯ ವಿರುದ್ಧ ಸೆಟೆದು ನಿಂತರು; ಎದೆಗಾರರೂ ಗಭೀರ ಚಿತ್ತರೂ ಆದ ನಾಡವರು, ಗಾಂವಕರ ಶಾಹಿಯನ್ನೇ ಬುಡಮೇಲು ಮಾಡಿದರು. ತಾತ್ಯಾಚಾರ್ಯಯಾನೆ ನಾಡವರ ಮಠವು ಹಿಂದೆ ಗೋಕರ್ಣದಲ್ಲಿ

ಇದ್ದುದು ಸತ್ಯವಾದರೂ, ನಾಡವರು ಆ ಮಠಕ್ಕೆ ಅಷ್ಟಾಗಿ ಹೊಂದಿಕೊಳ್ಳದ ಪ್ರಯುಕ್ತ, ಇಂದು ಆ ಮಠ ಕಣ್ಮರೆಯಾಗಿದೆ. ಇಂದು ನಾಡವರಿಗೆ ಯಾವುದೇ ಗುರುಗಳು ಇಲ್ಲ; ಗುರುಮಠವೂ ಇಲ್ಲ. ಕೆಲವರು ಗುರುಮಠವಿರಬೇಕೆಂದರೂ, ಬಹುತೇಕ ಪ್ರಗತಿಪರ ನಾಡವರು ಅದನ್ನಿಂದು ವಿರೋಧಿಸುತ್ತಾರೆ. ಗುರುಮಠವಿಲ್ಲದುದಕ್ಕೆ ಅವರು ಬೇಸರಿಸುವುದೂ ಇಲ್ಲ. ಅನೇಕ ನಾಡವರು ಇಂದು ಮತೀಯತೆ, ಮತೀಯ ಆಚರಣೆಗಳನ್ನು ಗಾಳಿಗೆ ತೂರಿ, ತಮ್ಮನ್ನು ಆಧುನಿಕತೆಯೆಡೆ ಒಡ್ಡಿಕೊಳ್ಳಹತ್ತಿದ್ದಾರೆ. ಜಾತ್ಯಾತೀತ ನಿಲುವಿನ ಬಹುತೇಕ ನಾಡವರು, ಇಂದು ಜಾತಿ, ಮತ, ಪಂಥಗಳ ಸೀಮಾರೇಖೆಗಳನ್ನು ದಾಟಿ ವಿಶ್ವಮಾನವತೆಯೆಡೆ ಕಣ್ಣು ಚಾಚುತ್ತಲಿರುವ ಉದಾರ ಚೇತಸರಾಗಿದ್ದಾರೆ. ನಾಡವರ ಅನೇಕ ಹೆಣ್ಣು ಗಂಡುಗಳು ಇಂದು ಜಾತಿ, ಮತ, ಪಂಥಗಳ ಬೇಲಿಯನ್ನು ಮುರಿದು, ಅನ್ಯ ಜಾತಿ, ಮತದವರನ್ನು ಮದುವೆಯಾಗುವುದರಲ್ಲಿ ಒಲವುಳ್ಳವರಾಗಿದ್ದಾರೆ. ಇದರಿಂದಾಗಿ ನಾಡವರಲ್ಲಿ ಅತಿರೇಕಕ್ಕೆ ಮುಟ್ಟಿದ ವರದಕ್ಷಿಣೆಯ ಕಾಟದಿಂದ ಸೊರಗಿದ ಕೆಲ ಕನ್ಯಾಪಿತೃಗಳು ಸ್ವಲ್ಪ ಮಟ್ಟಿಗೆ ನಿರಾಳವಾಗಿ ಉಸಿರು ಬಿಡುವಂತಾಗಿದೆ. ಇತ್ತೀಚಿನ ದಿನಗಳಲ್ಲಿ ನಾಡವರ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗುತ್ತಲಿದೆ. ಮುಂದಿನ ದಿನಗಳಲ್ಲಿ ಕನ್ಯಾಶುಲ್ಕ ತೆರುವ ಪರಿಸ್ಥಿತಿ ಬಂದರೂ ಆಶ್ಚರ್ಯವಿಲ್ಲ. ಹಿಂದೆ ಕ್ಷಾತ್ರವೃತ್ತಿಯನ್ನು ಕೈಕೊಂಡ ನಾಡವರು ಯುದ್ಧದಲ್ಲಿ ಕಾದಿ ಮಡಿದು, ತಮ್ಮ ಸಂಖ್ಯಾಬಲವನ್ನು ಉಡುಗಿಸಿಕೊಂಡರೆ ಇಂದು ಅಂತರ್ ಜಾತಿಯ ವಿವಾಹದ ಮೂಲಕ ತಮ್ಮ ಸಂಖ್ಯಾಬಲವನ್ನು ಕ್ಷೀಣಿಸಿಕೊಳ್ಳಹತ್ತಿದ್ದಾರೆ. ಹೀಗೇ ಮುಂದುವರಿದಲ್ಲಿ ನಾಡವರು ತಮ್ಮ ಅನನ್ಯತೆಯನ್ನು ಕಳೆದುಕೊಂಡು ಕಣ್ಮರೆಯಾಗುವರೋ ಏನೋ ಎಂಬ ಭೀತಿ ನಾಡವರ ವಂಶ ಪರಂಪರೆಯ ಬಗ್ಗೆ ಅಭಿಮಾನವುಳ್ಳ ನಾಡವರ ಹಿರಿಯರನ್ನು ಕಾಡುತ್ತಲಿದೆ.

ಹಿಂದೆ ನಾಡವರ ಮನೆಗಳ ವಿಶಾಲ ಅಂಗಳದಲ್ಲಿಯೇ ಐದು ದಿನಗಳವರೆಗೆ ಮದುವೆಯ ಸಮಾರಂಭ ನಡೆಯುತ್ತಿತ್ತು. ಶ್ರೀಮಂತರ ಮದುವೆಯ ಸಮಾರಂಭಗಳಲ್ಲಿ ಸೂಳೆಯರ ಮೇಳ ಕುಣಿತ ನಡೆದು "ದೌಲತ್ ಜ್ಯಾದಾ" ಹಾರೈಸುವುದು ನಡೆಯುತ್ತಿತ್ತಂತೆ. ಆದರೆ ಇಂದು ಬಹುತೇಕ ಮದುವೆಗಳು ಅವರ ಮನೆಯಂಗಳದಲ್ಲಿ ನಡೆಯದೆ, ದೊಡ್ಡ ದೊಡ್ಡ ಸಭಾಭವನಗಳಲ್ಲಿ ಅದ್ದೂರಿಯಿಂದ ನಡೆದು ಮದುವೆಯ ಕಾರ್ಯಕ್ರಮ ಎರಡು ಮೂರು ತಾಸುಗಳಲ್ಲಿ ಮುಗಿದು ಹೋಗುತ್ತದೆ. ಮದುವೆಯ ಹಾಡುಗಳನ್ನು ಹಾಡುಗಾರ್ತಿಯರಿಂದ ಹಾಡಿಸುವ ಸಂಪ್ರದಾಯ ಕಣ್ಮರೆಯಾಗಿದೆ. ಹಿಂದಕ್ಕೆ ಹೆಣ್ಣನ್ನು ಋತುಮತಿಯಾಗುವ ಪೂರ್ವದಲ್ಲಿಯೇ ಮದುವೆ ಮಾಡುವುದರಿಂದ ಗಂಡು ಹೆಣ್ಣುಗಳನ್ನು ಒಂದುಗೂಡಿಸುವ "ಹೋಮ"ವೆಂಬ ಸಮಾರಂಭವನ್ನು ಪ್ರತ್ಯೇಕವಾಗಿ ವಿಶೇಷ ವೈಭವದಿಂದ ಆಚರಿಸುತ್ತಿದ್ದರು. ಆದರೆ ಇಂದು ಹೋಮದ ಕಾರ್ಯಕ್ರಮವನ್ನು ಮದುವೆಯ ಸಮಾರಂಭದಲ್ಲಿ ಮಾಡಿ ಮುಗಿಸುತ್ತಾರೆ. ಇಂದು ನಾಡವರ ಮದುವೆಯಲ್ಲಿ ದುಂದುವೆಚ್ಚ ಹೆಚ್ಚು.

ಹಿಂದೆ ನಾಡವರು ಹಬ್ಬಹರಿದಿನಗಳನ್ನು ವಿಶೇಷ ಅದ್ದೂರಿಯಿಂದ ಆಚರಿಸುತ್ತಿದ್ದರು. ಹೊಸತು– ಹೊಸಕ್ಕಿ, ಬಂಡಿಹಬ್ಬ, ಜಟಗನ ಹಬ್ಬ, ಹರಿದಿನ ಮುಂತಾದ ಕಾರ್ಯಕ್ರಮಗಳಿಗೆ ನೆಂಟರಿಷ್ಟರನ್ನು ಮನೆಗೆ ಆಮಂತ್ರಿಸುತ್ತಿದ್ದರು. ಆದರೆ ಮತೀಯ ಆಚರಣೆಯಲ್ಲಿ ಹೆಚ್ಚಿನ ಒಲವಿಲ್ಲದ ನಾಡವರು ಇಂದು ಬಂಡಿ ಹಬ್ಬವೊಂದನ್ನು ಬಿಟ್ಟು, ಉಳಿದ ಹಬ್ಬಗಳಿಗೆ ನೆಂಟರಿಷ್ಟರನ್ನು ಕರೆಯುವುದು ಕಡಿಮೆಯಾಗಿದೆ. ನಾಡವರ ಸ್ವಪ್ರತಿಷ್ಠೆಯನ್ನು ಸಾರುವ, ದಾನ ವೈಭವವನ್ನು ಮೆರೆಯುವ, ಸಮಾಜ ಬಾಂಧವರ ತಂಟೆ ತಕರಾರುಗಳನ್ನು ಬಗೆಹರಿಸುವ, ಜಾತಿ ಸಂಘಟನೆಯನ್ನು ಹೆಚ್ಚಿಸುವ ಅತ್ಯಂತ ಸಡಗರದಿಂದ ಆಚರಿಸುವ ಹರಿದಿನವೆನ್ನುವ ವಿಶೇಷ ಸಮಾರಂಭ ನಾಡವರಲ್ಲಿ ಇಂದು ಆಗುತ್ತಿಲ್ಲ. ಮತೀಯ ಆಚರಣೆಗಳಲ್ಲಿ ಇಂದು ನಾಡವರಿಗೆ ಹೆಚ್ಚಿನ ಒಲವಿಲ್ಲದ ಪ್ರಯುಕ್ತ ಆಚರಣೆಗಳೆಲ್ಲ ತಮ್ಮ ಹಿಂದಿನ ವೈಭವವನ್ನು ಕಳೆದುಕೊಂಡು ಸೊರಗಿವೆ. ಈ ಸಂದರ್ಭಗಳಲ್ಲಿ ಆಡಲಾಗುವ ಜಾನಪದ ಆಟಗಳೆಲ್ಲ ಇಂದು ಹೇಳ ಹೆಸರಿಲ್ಲವಾಗಿವೆ. ಮದುವೆಯ "ಹಸಗೆರೆ ಹಲಿ" ದೀಪಾವಳಿ ಸಂದರ್ಭದ "ಬೋರಜ್ಜಿ ಹಲಿ" ಕಾಣೆಯಾಗುತ್ತಲಿದೆ. ಬಂಡಿ ಹಬ್ಬದ ಆಡಕಟ್ಟೆಯ "ಹಗಣ"ವು ತನ್ನ ಹಿಂದಿನ ವೈಭವವನ್ನು ಕಳೆದುಕೊಳ್ಳತೊಡಗಿದೆ.

ನಾಡವರ ಕಾವ್ಯ ಪರಿಣತಿಯನ್ನು ಕುರಿತಾಗಿ ಕವಿರಾಜಮಾರ್ಗಕಾರನು "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂದು ಹೇಳಿದ್ದರೂ ಇಪ್ಪತ್ತನೆಯ ಶತಮಾನದ ಪೂರ್ವದಲ್ಲಿ ನಾಡವರ ಕಾವ್ಯಪರಿಣತಿಯ ದಾಖಲೆ ಸಿಗುವುದಿಲ್ಲ. ಹಾಗಂತ ನಾಡವರಲ್ಲಿ ಕಾವ್ಯಪರಂಪರೆಯೇ ಇಲ್ಲವೆಂದಲ್ಲ. ಅದೇವಿದ್ದರೂ ಅದು ಜಾನಪದಕ್ಕೆ ಸೀಮಿತವಾಗಿದ್ದಂತಿದೆ. ಹತ್ತೊಂಬತ್ತನೇ ಶತಮಾನದ ಮಧ್ಯಾವಧಿಯಿಂದಲೂ ನಾಡವರಲ್ಲಿ ಹಗಣ, ಯಕ್ಷಗಾನ, ಹಾಡು, ಹಲಿಗಳಿದ್ದುದನ್ನು ನಾನು ಹಿರಿಯರಿಂದ ಕೇಳಿದ್ದೇನೆ. ವಂದಿಗೆಯ ಹಮ್ಮಣ್ಣ ನಾಯಕ, ಬೋಳೆ ಬೊಮ್ಮಯ್ಯ ನಾಯಕ, ಸ. ಪ. ಗಾಂವಕರ, ಭಾವಿಕೇರಿ ರಾಮ ನಾಯಕ, ಶೆಟಗೇರಿ ಜೋಗಿ ನಾಯಕ, ವಂದಿಗೆಯ ಚಂದ್ರಜ್ಜಿ, ನನ್ನ ತಾಯಿ ದೇವಮ್ಮ ನಾಯಕ ಮುಂತಾದವರು. ತಮ್ಮ ಸುತ್ತ ಮುತ್ತ ತಮ್ಮ ಅಜ್ಜ ಅಜ್ಜಿಯರ ಕಾಲದಿಂದಲೂ ಜನಪದ ಹಾಡು, ಕಥೆ, ಹಲಿ, ಹಗಣ, ಆಟ, ಬಯಲಾಟಗಳಿದ್ದ ಬಗ್ಗೆ ಹೇಳಿದ್ದನ್ನು ನಾನು ಸ್ವತಃ ಆಲಿಸಿದ್ದೇನೆ. ವಂದಿಗೆಯ ಚಂದ್ರಜ್ಜಿ ತಮ್ಮ ಅಜ್ಜಿಯಿಂದ, ನನ್ನ ತಾಯಿ ತಮ್ಮ ಅಜ್ಜಿಯಿಂದ, ನಮ್ಮ ಸೋದರತ್ತೆ (ತಂದೆಯ ಅಕ್ಕ) ವಂದಿಗೆಯ ಲಕ್ಷ್ಮಿ ನಾಯಕ ತನ್ನ ತಾಯಿಯಿಂದ, ಹಾಡು ಕಲಿತದ್ದನ್ನು ನನ್ನ ಹತ್ತಿರ ಹೇಳಿದ್ದುಂಟು. ನಮ್ಮ ಸೋದರತ್ತೆಗೆ "ಹಾಡತ್ತೆ" ಎಂತಲೇ ನಾವು ಕರೆಯುತ್ತಿದ್ದೆವು. ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗಾಗಲೇ ವಂದಿಗೆಯ ಹಮ್ಮಣ್ಣ ನಾಯಕ, ಹಮ್ಮಣ್ಣ ನಾಯಕ (ಮಾಸ್ತರ) ತಮ್ಮ ನಾಯಕ, ಹಿರೇಗುತ್ತಿ ಉದ್ದಂಡ ನಾಯಕ, ಮೋನಪ್ಪ ನಾಯಕ, ಹನ್ನೇಹಳ್ಳಿಯ ಸುಬ್ಬನಾಯಕ, ಮಾಸ್ಕೇರಿ ಮೋನಪ್ಪ ನಾಯಕ, ಹಿಚಗಡ

ಗೋವಿಂದ ನಾಯಕ, ಬೊಮ್ಮಯ್ಯ ನಾಯಕ, ಸೂರ್ವೆ ನಾರಾಯಣ ನಾಯಕ, ಕಣಗಿಲ ಗಣಪು ನಾಯಕ, ಬಾಸಗೋಡ ರಾಮ ನಾಯಕ ಮುಂತಾದ ಯಕ್ಷಗಾನ ಕಲಾವಿದರ ಹೆಸರುಗಳು ಕೇಳ ಬರುತ್ತಿವೆ. ವಂದಿಗೆಯ ಅಮ್ಮಜ್ಜಿ ಮನೆಯ ಹಮ್ಮಣ್ಣ ನಾಯಕರು, ಇಪ್ಪನೆಯ ಶತಮಾನದ ಆರಂಭದಲ್ಲಿ ದಕ್ಷಿಣ ಕನ್ನಡದಿಂದ (ತೆಂಕಲಿಂದ) ಉಪ್ಪಿನ ಹಳ್ಳಿಯ ಶೇಷ ಅವರ ಮೇಳವು ಅಂಕೋಲೆಗೆ ಬಂದಾಗ, ಅವರ ಜೊತೆಗೆ ತಾವು ಜೋಡಿಯಾಟವಾಡಿದ್ದನ್ನು, ಉಪ್ಪಿನ ಹಳ್ಳಿಯ ಶೇಷ ಅವರು "ಇಷ್ಟು ಪ್ರಸಿದ್ಧ ಮೇಳ ಇಲ್ಲಿದೆಯೆಂದು ನಾನು ಇದುವರೆಗೆ ಗ್ರಹಿಸಿಲ್ಲವಾಗಿದ್ದೆ" ಎಂದು ಅಂಕೋಲೆಯ ನಾಡವರ ಯಕ್ಷಗಾನ ಮೇಳವನ್ನು ಪ್ರಶಂಸಿದ್ದನ್ನೂ ನೆನಪಿಸಿಕೊಂಡು, ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ನನ್ನ ಹತ್ತಿರ ಹೇಳಿದ್ದಿದೆ. ಈ ವಿಚಾರ ವಿ.ಜೇ. ನಾಯಕರು ಮಾಡಿದ ಶೆಟಗೇರಿ ಜೋಗಿ ನಾಯಕರ ಸಂದರ್ಶನ (ಶತಾಭಿನಂದನ)ದಲ್ಲಿ ಪ್ರಕಟವಾಗಿದೆ. ಇದರಿಂದ ಹತ್ತೊಂಬತ್ತನೆ ಶತಮಾನದ ಕೊನೆ ಹಾಗೂ ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿಯೇ ನಾಡವರು ಹವ್ಯಾಸಿ ಮೇಳವನ್ನು ಕಟ್ಟಿ ಕುಣಿದಿದ್ದರೆನ್ನಬಹುದಾಗಿದೆ. ನಾಡವರಲ್ಲಿ ವೃತ್ತಿ ಮೇಳಗಳು ಕಡಿಮೆ, ಅವರದೇನಿದ್ದರೂ ಹವ್ಯಾಸಿ ಮೇಳ. ಆದರೆ ೧೯೩೭-೩೮ರ ಸುಮಾರಿಗೆ ಭಾವಿಕೇರಿಯ ರಾಮ ನಾಯಕ, ಬಾಸಗೋಡ ಮೋನಪ್ಪ ನಾಯಕ, ರಾಮ ಕೃಷ್ಣ ನಾಯಕ ಹಾಗೂ ಇನ್ನೂ ಕೆಲವು ಗೆಳೆಯರು ಸೇರಿ, ಸುಬೋಧ ಯಕ್ಷಗಾನ ಮಂಡಳಿ (ಇದರ ಆರಂಭದ ಹೆಸರು ಸದ್ಧರ್ಮ ಪ್ರಬೋಧ ಯಕ್ಷಗಾನ ಮಂಡಳಿ ಎಂದಿದ್ದ ನೆನಪು ನನ್ನದು.) ಸ್ಥಾಪಿಸಿ, ಸುಮಾರು ಹತ್ತು ಹದಿನೈದು ವರ್ಷಗಳವರೆಗೆ ಉತ್ತರ ಕನ್ನಡ ಜಿಲ್ಲೆಯ ಹಲವಾರು ಪ್ರಮುಖ ಸ್ಥಳಗಳಲ್ಲಿ ಥೇಟರಾಟವನ್ನಾಡಿ ಖ್ಯಾತಿಗಳಿಸಿದ್ದನ್ನು ಇಂದೂ ಉತ್ತರ ಕನ್ನಡ ಜಿಲ್ಲೆಯ ಹಿರಿಯ ಪೀಳಿಗೆಯ ಜನ ನೆನಪಿಸಿಕೊಳ್ಳುತ್ತಾರೆ. ನಾಡವರಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆ ಹಾಗೂ ಇಪ್ಪತ್ತನೆ ಶತಮಾನದ ಪೂರ್ವಾರ್ಧದ ವೇಳೆಗಾಗಲೇ ಇಂದಿನ ರಾಷ್ಟ್ರ ಪ್ರಶಸ್ತಿ ವಿಜೇತರಾದ ಉನ್ನತ ಮಟ್ಟದ ಕಲಾವಿದರಿಗೆ ಸರಿ–ಮಿಗಿಲಾಗಿದ್ದ ವತ್ಸ, ಶಿಶುಪಾಲ ಮುಂತಾದ ಪಾತ್ರಗಳಲ್ಲಿ ಅಗ್ರಗಣ್ಯನೆನಿಸಿದ ವಂದಿಗೆಯ ಹಮ್ಮಣ್ಣ ನಾಯಕ ಹರಿಶ್ಚಂದ್ರ, ಅಂಬೆ ಮೊದಲಾದ ಪಾತ್ರಗಳಿಗೆ ಖ್ಯಾತನಾಮರಾದ ಬಾಸಗೋಡ ಮೋನಪ್ಪ ನಾಯಕ, ವಲಲಭೀಮ, ವಿಶ್ವಾಮಿತ ಪಾತ್ರಗಳಿಗೆ ಹೆಸರುವಾಸಿಯಾದ ಭಾವಿಕೇರಿ ರಾಮ ನಾಯಕ, ದಶರಥನ ಪಾತ್ರಕ್ಕೆ ಸೈ ಎನಿಸಿಕೊಂಡ ಶೆಟಗೇರಿ ಜೋಗಿ ನಾಯಕ ಮುಂತಾದವರಿದ್ದುದ್ದನ್ನು ನೆನೆಸಿಕೊಂಡಲ್ಲಿ ಮೈರಸರೋಮಾಂಚನಗೊಳ್ಳುತ್ತದೆ.

ಬಯಲಾಟ ನಡೆಯದ ಹಳ್ಳಿ ನಿಕೃಷ್ಟವೆಂದು ಬಗೆದ ನಾಡವರು ಹಿಂದೆ ಹಳ್ಳಿಹಳ್ಳಿಗಳಲ್ಲಿಯೂ, ಆಯಾ ಹಳ್ಳಿಯ ಯಕ್ಷಗಾನ ಕಲಾವಿದರು ಹಾಗೂ ಯಕ್ಷಗಾನ ಪ್ರೇಮಿಗಳು ತಮ್ಮ ಸ್ವಂತ ಹಣವನ್ನು ಖರ್ಚುಮಾಡಿ ಬಯಲಾಟವನ್ನಾಡುತ್ತಿದ್ದರು. ೧೯೫೦ ರಿಂದ ಸುಮಾರು ಹತ್ತು ವರ್ಷ ಪರ್ಯಂತ ವಂದಿಗೆಯಲ್ಲಿ ನಡೆಯುತ್ತಿದ್ದ

ಅತ್ಯಾಕರ್ಷಕ ಜೋಡಿಯಾಟದ ಸವಿಸೊಗಸನ್ನುನ್ನು ನಾನು ನೋಡಿ ನಲಿದಿದ್ದೇನೆ; ಇಂದಿನ ಪ್ರಸಿದ್ಧ ಮೇಳದಾಟಗಳ ಮನೋರಂಜನೆಗೆ ಕಡಿಮೆಯಲ್ಲದ ಗುಣಮಟ್ಟ ಆ ಆಟಗಳಿಗಿತ್ತು. ಆದರೆ ಇಂದು ನಾಡವರ ಹಳ್ಳಿ ಹಳ್ಳಿಗಳಲ್ಲಿ ಈ ಹಿಂದಿನ ಸಂಖ್ಯೆಯಲ್ಲಿ ಬಯಲಾಟಗಳು ನಡೆಯುತ್ತಿಲ್ಲ. ಹಾಗಂತ ಇವರಲ್ಲಿ ಯಕ್ಷಗಾನ ಕಲಾಶಕ್ತಿ ಕಡಿಮೆಯಾಗಿಲ್ಲ. ನಾಡವರ ಮನೆಮನೆಗಳಲ್ಲಿ ಅತ್ಯುತ್ತಮ ಮಟ್ಟದ ಯಕ್ಷಗಾನ ಕಲಾವಿದರಿದ್ದಾರೆ. ಆದರೆ ಅವರೆಲ್ಲ ಬಹುತೇಕ ಹವ್ಯಾಸಿ ಕಲಾವಿದರು. ಅವರೆಲ್ಲ ಒಂದು ಹವ್ಯಾಸಿ ಮೇಳವಾಗಿಯೂ ಸಂಘಟನೆಗೊಂಡಿಲ್ಲ. ಬಾಸಗೋಡದಲ್ಲಿ ಹಿಂದಿನ ಸುಬೋಧ ಯಕ್ಷಗಾನ ಮಂಡಳಿಯು ಇನ್ನೂ ಜೀವಂತವಾಗಿ ಉಳಿದುಕೊಂಡಿರುವುದು ಸಮಾಧಾನಕರ ಸಂಗತಿಯಾಗಿದೆ.

ಇಪ್ಪನೆಯ ಶತಮಾನದ ಎರಡನೆಯ ದಶಕದಲ್ಲಿ ಅಗ್ಗರಗೋಣದ ಜಟ್‌ನಾಯಕರ ಮನೆಯ ರಾಮ ನಾಯಕರು, ಶಿವಾಜಿಯ ಚರಿತ್ರೆಯನ್ನು ಯಕ್ಷಗಾನ ಪ್ರಸಂಗಕ್ಕಳವಡಿಸಿ ಆಡಿದ್ದನ್ನು, ವಂದಿಗೆಯ ಅಮ್ಮಜ್ಜಿಮನೆಯ ಕೃಷ್ಣ ನಾಯಕರು 'ಬಂಡಿ ವಿಜಯ'ವೆಂಬ ಯಕ್ಷಗಾನ ಪ್ರಹಸನವನ್ನು ಬರೆದು ಆಟ ಆಡಿದ್ದನ್ನು ಅನೇಕ ಹಿರಿಯರು ನೆನಪಿಸಿಕೊಳ್ಳುತ್ತಾರೆ. ಈ ಸಂಗತಿಯು ನಾಡವರ ಪ್ರಸಂಗ ಕರ್ತರು ಯಕ್ಷಗಾನದಲ್ಲಿ ಐತಿಹಾಸಿಕ ಹಾಗೂ ಸಾಮಾಜಿಕ ವಸ್ತು ಬಳಕೆಯ ಸಾಧ್ಯತೆಯನ್ನು ಎತ್ತಿ ಹಿಡಿದ್ದನ್ನು ತೋರಿಸುತ್ತದೆ, ಇವರ ಹೊರತಾಗಿ ಯಕ್ಷಗಾನ ವಸ್ತು ಪರಿಧಿಯೊಳಗೇ ಪ್ರಸಂಗ ರಚನೆಯನ್ನು ಮಾಡಿದ ಮಾಸ್ಕೇರಿ ತಿಮ್ಮಣ್ಣ ನಾಯಕ, ಸೂರ್ವೆಯ ಭಾಗವತ ಹಮ್ಮಣ್ಣ ನಾಯಕ, ಶೆಟಗೇರಿ ಜೋಗಿ ನಾಯಕ ಮುಂತಾದ ಪ್ರಸಂಗ ಕರ್ತರು ನಾಡರವರಲ್ಲಿ ಆಗಿಹೋಗಿದ್ದಾರೆ.

ನಾಡವರಲ್ಲಿ ಉಪಲಬ್ಧವಿರುವ ಜನಪದ ಹಾಡುಗಳನ್ನು ೧೯೩೩ರ ವೇಳೆಗಾಗಲೇ ವಿ.ವಿ. ತೊರ್ಜೆಯವರು "ಹಳ್ಳಿಯ ಹಾಡುಗಳು" ಎಂಬ ಹೆಸರಿನಲ್ಲಿ ಪ್ರಕಟಿಸಿ, ಕನ್ನಡ ಆದ್ಯ ಜನಪದ ಗೀತ ಸಂಗ್ರಹಕರಲ್ಲಿ ಒಬ್ಬರೆನಿಸಿದರು. ಅನಂತರಿನ ದಿನಗಳಲ್ಲಿ ನಾಡವರ ಜಾನಪದ ಸಂಗ್ರಹವನ್ನು ವ್ಯಾಪಕವಾಗಿ ಮಾಡಲಾಗಿದೆಯಾದರೂ, ಇತ್ತೀಚಿನ ದಿನಗಳಲ್ಲಿ ನಾಡವರು ತಮ್ಮನ್ನು ಆಧುನಿಕತೆಗೆ ಒಡ್ಡಿಕೊಂಡ ಪ್ರಯುಕ್ತ ಜಾನಪದದಿಂದ ದೂರ ಸರಿಯಹತ್ತಿದ್ದಾರೆ. ಹಿಂದೆ ಅವರಲ್ಲಿ ಪ್ರಚಲಿತವಿದ್ದ ವಿಪುಲ ಜನಪದ ಹಾಡು, ಕತೆ, ಒಗಟು, ಗಾದೆ, ಕಲೆ, ಕ್ರೀಡೆಗಳು ಕ್ಷೀಣಿಸತೊಡಗಿವೆ. ನಾಡವರ ಹಾಡಿನ ಹಡಗುಗಳು ಮುಳುಗಿ ಹೋಗಿವೆ; ಅವರ ಜನಪದ ಕಥಾ ಸರಿತ್ ಸಾಗರ ಬತ್ತಿ ಹೋಗಿದೆ. ವೈದಿಕ ಸಂಸ್ಕೃತಿಯ ಪ್ರಭಾವದಿಂದ ನಾಡವರು ತಮ್ಮ ಬಳಿಗಳನ್ನು ಮರೆತು ತಾವು ಕಾಶ್ಯಪಗೋತ್ರದವರೆಂದುಕೊಳ್ಳುತ್ತಿದ್ದಾರೆ. ನಾಡವರ ಹಳ್ಳಿ ಹಳ್ಳಿಯಲ್ಲಿ ಹಿಂದೆ ಕಂಡು ಬರುತ್ತಿದ್ದ ಹಾಣೆ, ಸೋಡಿ, ಗೆಬ್ಬಿ (ಗೆರಟೆ) ಪುಳಿ, ಪಗಡೆ, ಪಗ್ಗದಾಟಗಳು ಇಂದು ಮೂಲೆ ಗುಂಪಾಗಿವೆ. ಆದರೆ ಇಂದು ರಾಷ್ಟ್ರೀಯ ಆಟಗಳೆಂದು ಪರಿಗಣಿತವಾದ ಕಬ್ಬಡಿ, ವಾಲಿಬಾಲ್, ಕ್ರಿಕೆಟ್, ಖೋಖೋ ಮುಂತಾದ ಆಟಗಳನ್ನು ರೂಢಿಸಿಕೊಂಡ ನಾಡವರ ಕ್ರೀಡಾ ಪಟುಗಳು,

ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗಣನೀಯ ಸಾಧನೆ ಮಾಡಿ ಶ್ಲಾಘನೆಗೆ ಪಾತ್ರರಾಗಿದ್ದಾರೆ. ಯಕ್ಷಗಾನದ ಅಬ್ಬರ ಬಿಡ್ತಿಗೆ ಇಂದು ಕ್ಷೀಣಿಸಿದೆಯಾದರೂ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ಕೆಲವು ಕಲಾವಿದರಿದ್ದಾರೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇಪ್ಪತ್ತನೆಯ ಶತಮಾನಕ್ಕಿಂತ ಹಿಂದೆಯಿದ್ದ ಸಾಹಿತಿಗಳ ಹೆಸರುಗಳು ನಾಡವರಲ್ಲಿ ಸಿಗುತ್ತಿಲ್ಲ. ಆದರೆ ಡಾ॥ ಬೇಂದ್ರೆ, ಕುವೆಂಪುರವರ ಸಮಕಾಲೀನರಾಗಿ, ಕನ್ನಡ ನವೋದಯದ ಆರಂಭಿಕ ಕವಿಗಳಾಗಿ ಸ. ಪ. ಗಾಂವಕರ, ವಿ. ವಿ. ತೊರ್ಕೆ, ಪತ್ರಕರ್ತರಾಗಿ "ಸುಧಾರಕ" ತ್ರೈಮಾಸಿಕದ ಆರ್. ಕೇ. ನಾಯಕ ಮುಂತಾದವರು ಗೋಚರಿಸುತ್ತಾರೆ. ನಾಡವರ ನಾಟಕ ರಂಗಭೂಮಿಯ ಆದ್ಯ ಸಂಚಾಲಕರಾಗಿ ಗೋಪಾಳ ನಾಯಕ ಮಾಸ್ತರ ಹೆಸರು ಮುಂಚೂಣಿಯಲ್ಲಿದೆ. ಆದರೆ ಇತ್ತೀಚಿನ ದಿನಗಳಲ್ಲಿ ನಾಡವರಲ್ಲಿ ವಿವಿಧ ಕಾವ್ಯ ಸಂಪ್ರದಾಯಗಳಿಗೆ ಸೇರಿದ ಕವಿಗಳು, ನಾಟಕಕಾರರು, ಕಾದಂಬರಿಕಾರರು, ಸಣ್ಣ ಕಥೆಗಾರರು, ವಿಮರ್ಶಕರು, ಸಂಶೋಧಕರು, ಪತ್ರಕರ್ತರು ಸ್ವಲ್ಪ ಪ್ರಮಾಣದಲ್ಲಿ ಲಭ್ಯರಿದ್ದಾರೆ; ಕೆಲವರು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಗಣ್ಯರೂ ಆಗಿದ್ದಾರೆ. ನಾಟಕ ಆಕಾಶವಾಣಿ ದೂರದರ್ಶನ ಸಿನೇಮಾ ಕಲಾವಿದರು ನಾಡವರಲ್ಲಿ ಗಣನೀಯ ಪ್ರಮಾಣದಲ್ಲಿಲ್ಲ.

ಒಟ್ಟಿನಲ್ಲಿ ಇಂದಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳ ಕಾರಣದಿಂದ ಬಹುತೇಕ ನಾಡವರು, ಇಂದು [ಪ್ರಚ್ಛನ್ನಕ್ಷಾತ್ರವೃತ್ತಿ] ರಾಜಕೀಯ ಹಾಗೂ ಕ್ಷೇತ್ರ ವೃತ್ತಿ ಎರಡರಿಂದಲೂ ಉತ್ಥಾನಮುಖಿಯಾಗುವುದು ಕಷ್ಟವೆಂದು ಪರಿಭಾವಿಸಿ, ಆ ಕ್ಷೇತ್ರದೆಡೆ ಬೆನ್ನು ಹಾಕಿದಂತಿದೆ. ಆದರೂ ಸತ್ವಯುತ ಬದುಕು ಬಾಳುವ ಹೊಂಗನಸನ್ನು ಮುಡಿಯಲ್ಲಿ ಹೊತ್ತ ನಾಡವರು, ಇಂದು ಶಿಕ್ಷಣ ಕ್ಷೇತ್ರದೆಡೆ ಹೆಚ್ಚಿನ ಗಮನಹರಿಸಿ, ಆ ಕ್ಷೇತ್ರದಲ್ಲಿ ಗಣನೀಯ ಸಾಧನೆಗೈದು, ವ್ಯಾಪಾರ, ಉದ್ದಿಮೆ, ಸಹಕಾರ, ವಾಣಿಜ್ಯ ಹಣಕಾಸು ವ್ಯವಹಾರ, ವೈದ್ಯಕೀಯ, ತಂತ್ರಜ್ಞಾನ, ನಾಗರಿಕ ಸೇವೆ ಗುತ್ತಿಗೆಗಾರಿಕೆ ಹೀಗೆ ಬದುಕಿನ ವಿವಿಧ ಕ್ಷೇತ್ರಗಳೆಡೆ ಕಣ್ಣು ಹಾಯಿಸಿ ತಮ್ಮ ಅದೃಷ್ಟವನ್ನು ಹುಡುಕಿಕೊಂಡು ಮುನ್ನುಗ್ಗುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

೦೨. ನಾಡವರ ಸಾಮಾಜಿಕ ಉಪಭಾಷೆಯ ಸೊಗಡು

೧. ಭಾರತ ಬಹು ಸಂಸ್ಕೃತಿಗೆ ತೆರೆದುಕೊಂಡ ದೇಶ; ಕನ್ನಡ ನಾಡು ಸಹ ಇದಕ್ಕೆ ಹೊರತಾಗಿಲ್ಲ. ಬಹು ಸಂಸ್ಕೃತಿಯ ಅಧ್ಯಯನಕಾರರು, ತಮ್ಮ ಅಧ್ಯಯನ ಸಂದರ್ಭದಲ್ಲಿ ಪ್ರಧಾನವಾಗಿ ಅದರ ಭಾಷಿಕ ಸೊಗಡಿನೆಡೆ ಲಕ್ಷಪೂರ್ರೈಸುವುದು ಅವಶ್ಯಕ. ಯಾಕೆಂದರೆ ಬಹುತೇಕವಾಗಿ ಭಾಷೆಯು ಮೂಲಕವೇ ಜನಾಂಗ–ಜಾತಿಯೊಂದರ ಸಂಸ್ಕೃತಿ ಸಂವಹನಗೊಂಡಿರುತ್ತದೆ. ಭಾಷೆ ಅಂತರಂಗದ, ಕೂಸು, ನಮ್ಮಂತರಂಗದರ್ಶಿ. ಭೂಮಿಪುತ್ರರ ನೆಲಮೂಲ 'ಬೃಹದ್ದೇಶಿ' ಸಂಸ್ಕೃತಿ ಅದರಲ್ಲಡಕವಾಗಿರುತ್ತದೆ. ಅದರ ಸ್ವರೂಪವನ್ನರಿಯಲು ಭಾಷೆ ಸಹಾಯಕ. ಶಿಷ್ಟ ಕನ್ನಡಿಗರಾಡುವ ಭಾಷೆ ಒಂದೇ ಆದರೂ, ಜನಪದ ಭಾಷೆ ಪ್ರದೇಶದಿಂದ ಪ್ರದೇಶಕ್ಕೆ, ಜಾತಿಯಿಂದ ಜಾತಿಗೆ, ಅಷ್ಟೇ ಏಕೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಜೊತೆಗೇ ಕಾಲದಿಂದ ಕಾಲಕ್ಕೆ ಪರಿವರ್ತನೆಯನ್ನು ಪಡೆಯುತ್ತದೆ; ಅದು ಜೀವದ್ಭಾಷೆಯ ಲಕ್ಷಣವೂ ಹೌದು. ಅದರ ಆರೋಗ್ಯಕರ ಬೆಳವಣಿಗೆಗೆ ಪೂರಕವೂ ಹೌದು. ಕನ್ನಡದಲ್ಲಿ ಈ ಬಗೆಯ ಭಾಷಾ ಭಿನ್ನತೆ ಕವಿರಾಜಮಾರ್ಗಕಾರನ ಕಾಲದಿಂದಲೂ ಇದ್ದದ್ದೇ. ಅದನ್ನಾತ ಗುರುತಿಸಿದ್ದಾನೆ ಕೂಡ. ವಿಭಿನ್ನ ಪ್ರದೇಶ ಹಾಗೂ ಜಾತಿಯ ಜನಪದರು ಬಳಸುತ್ತಿರುವ 'ಕನ್ನಡಂಗಳು' (ಭಾಷಾವಿಜ್ಞಾನಿಗಳ ಪ್ರಕಾರ ಸಾಮಾಜಿಕ ಉಪಭಾಷೆಗಳು–Social Dialect) ಹಲವಾರು. ನಮ್ಮ ಶಿಷ್ಟ ಕನ್ನಡ ರೂಪುಗೊಂಡದ್ದು ಇವುಗಳಿಂದಲೇ; ಇವುಗಳಿಗೆ ತಮ್ಮದೇ ಆದ ಸೊಗಡಿದೆ, ಅನನ್ಯತೆಯಿದೆ. ಜನ ಸಾಮಾನ್ಯರು ತಮ್ಮ ವ್ಯಾವಹಾರಿಕ ಹಾಗೂ ಕಲಾತ್ಮಕ ಬದುಕಿನಲ್ಲಿ ಬಹುತೇಕ ಬಳಸುವುದು ಈ ಸಾಮಾಜಿಕ ಉಪಭಾಷೆಗಳನ್ನೇ. ಈ ಸಾಮಾಜಿಕ ಉಪಭಾಷೆಗಳ ವಿಷಯದಲ್ಲಿ ನಾನು ಸುಮಾರು ಅರ್ಧಶತಮಾನಗಳ ಹಿಂದಿನಿಂದಲೂ ಆಸಕ್ತಿವಹಿಸಿ, ಅವನ್ನು ನನ್ನ ಜಾನಪದ ಮತ್ತು ಅಭಿಜಾತ ಕೃತಿಗಳಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದ್ದೂ ಇದೆ; ಕರ್ನಾಟಕ ವಿಶ್ವವಿದ್ಯಾಲಯ ಪಠ್ಯಪುಸ್ತಕಗಳಲ್ಲಿ ಕ್ವಚಿತ್ತಾಗಿ ಅವು ಅಳವಟ್ಟದ್ದೂ ಇದೆ. ಆದರೆ ಕರ್ನಾಟಕದ ಇತರ ಪ್ರದೇಶಗಳವರಿಗೆ ಅವು ಅರ್ಥವಾಗದೆಂಬ ನೆಲೆಯಲ್ಲಿ ಅವನ್ನು ಕೈಬಿಟ್ಟದ್ದನ್ನು ಕಂಡು ನಾನು ಅಧೀರನಾಗಿ ಆತಂಕಗೊಂಡದ್ದೂ ಇದೆ. ನಾನು ೧೯೯೧ ರಲ್ಲಿ ಗೋಕರ್ಣದಲ್ಲಿ ಜರುಗಿದ ಏಳನೆಯ ಜಿಲ್ಲಾ ಸಾಹಿತ್ಯ ಸಮ್ಮೇಲನದ ಸರ್ವಾಧ್ಯಕ್ಷೀಯ ಭಾಷಣದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಾಮಾಜಿಕ ಉಪಭಾಷೆಗಳ ವೈವಿಧ್ಯ ಹಾಗೂ ಅಲ್ಲಿ ಪೊಗದಸ್ತಾಗಿ ಸಿಗುವ ಕನ್ನಡ ಶಬ್ದಕೋಶದಲ್ಲಿಲ್ಲದ ಅಪರೂಪದ ಶಬ್ದಗಳ ಪಟ್ಟಿಮಾಡಿ ವಿವರಿಸಿದ್ದೂ ಇದೆ. ಆದರೆ ಸರಕಾರದ ಯಾವುದೇ ಮಹತ್ವದ ಹುದ್ದೆಯಲ್ಲಿಲ್ಲದ ನನ್ನ ಧ್ವನಿ ಕೇವಲ ಕ್ಷೀಣಧ್ವನಿಯಾಗಿ ಗಾಳಿಯಲ್ಲಿ ತೇಲಿ ಹೋಯಿತು. ಆದರೆ ಇಂದು ಕನ್ನಡ ಪ್ರಾಧಿಕಾರದ

ಅಧ್ಯಕ್ಷರಾದ ಮುಖ್ಯಮಂತ್ರಿ ಚಂದ್ರು ಅವರು ಹಾಗೂ ಅವರ ಕೈಬಲಪಡಿಸಲು ನಿಯುಕ್ತರಾದ ಸದಸ್ಯರು, ಕನ್ನಡ ನಾಡಿನುದ್ದಕ್ಕೂ ಹರಡಿಕೊಂಡಿರುವ 'ಕನ್ನಡಂಗಳ' ಸೊಗಡನ್ನು ಹಿಡಿದಿಡುವತ್ತ ಅರ್ಥಪೂರ್ಣವಾದ ಸಮಾವೇಶವನ್ನು ಹಮ್ಮಿಕೊಂಡು ಕಾರ್ಯಪ್ರವೃತ್ತವಾದುದನ್ನು ಕಂಡು ರೋಮಾಂಚನಗೊಂಡಿದ್ದೇನೆ. ಜಾಗತೀಕರಣ, ಉದಾರೀಕರಣದ ದೆಸೆಯಿಂದಾಗಿ ದುರ್ಬಲವಾದ ಭಾಷೆ ಉಪಭಾಷೆ ಹಾಗೂ ಸಾಮಾಜಿಕ ಉಪಭಾಷೆಗಳು ಒಂದೊಂದಾಗಿ ಕಣ್ಮರೆಯಾಗುತ್ತಿರುವ ವರ್ತಮಾನದಲ್ಲಿ ಕನ್ನಡ ಪ್ರಾಧಿಕಾರದವರು ಕನ್ನಡ ಬೃಹದ್ದೇಶಿಯ ಸೊಗಡನ್ನು ಉಳಿಸಿಕೊಳ್ಳುವ ಬಗ್ಗೆ ಮಾಡಿದ ಈ ಶ್ರಮ ನೂರ್ಕಾಲ ಉಳಿಯುವಂಥದ್ದು.

೨. ಉತ್ತರ ಕನ್ನಡ ಜಿಲ್ಲೆಯ ನಾಡವರು :

ಉತ್ತರ ಕನ್ನಡ ಜಿಲ್ಲೆ ಹತ್ತು ಹಲವು ಕನ್ನಡಂಗಳ (ಸಾಮಾಜಿಕ ಉಪಭಾಷೆಗಳ) ಆಶ್ರಯ ತಾಣ. ಈ ಜಿಲ್ಲೆಯ ಹಾಲಕ್ಕಿಗಳು, ಹವ್ಯಕರು, ಹಳೇಪೈಕರು (ನಾಮಧಾರಿ), ಆಗೇರು, ಹಳ್ಳೇರು, ಕೊಮಾರಪಂತರು, ವಾಣಿಯರು, ನಾಡವರು, ಕುಂಬಾರರು, ಮುಕ್ರಿಗಳು ಇವರೆಲ್ಲ ತಮ್ಮದೇ ಆದ ಕನ್ನಡಗಳಲ್ಲಿ ಮಾತನಾಡುತ್ತಾರೆ. ಅವುಗಳಿಗೆ ಅವುಗಳದ್ದೇ ಆದ ಅನನ್ಯತೆಯಿದೆ, ಅಸಲುತನವಿದೆ. ಅವುಗಳ ವಿಚಾರವಾಗಿ ಪ್ರಬಂಧ ಮಂಡಿಸುವವರು ಬೇರೆಯವರಿದ್ದಾರೆ. ನನಗೀಗ ಪ್ರಸ್ತುತವಾದುದು ನಾಡವರ ಕನ್ನಡ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಇಂದು ಸುಮಾರು ಮೂವತ್ತು ಮೂವತ್ತೈದು ಸಾವಿರದಷ್ಟಿರಬಹುದಾದ ನಾಡವರು ಒಂದು ಓಜಸ್ವಿ ಹಾಗೂ ತೇಜಸ್ವಿ ಕನ್ನಡ ಭಾಷಿಕ ಗುಂಪು. ಶಂ.ಬಾ. ಜೋಶಿಯವರ ಅಭಿಪ್ರಾಯದಂತೆ ನಾಡವರ್, ನಾಡವರ್ಗಳ್ ಎಂದು ಪ್ರಖ್ಯಾತಿಗಳಿಸಿದ, ಮೂಲತಃ ರುದ್ರನ ಉಪಾಸಕರಾದ ಈ ಜನಾಂಗಿಕ ಗುಂಪು, ಕರ್ನಾಟಕದ ರಾಜಕೀಯ ಹಾಗೂ ಧಾರ್ಮಿಕ ಸ್ಥಿತ್ಯಂತರಗಳಿಗೆ ಈಡಾಗಿ, ಕ್ರಮೇಣ ವಿಭಿನ್ನ ಕಾಲಘಟ್ಟಗಳಲ್ಲಿ ಜೈನ, ವೀರಶೈವ, ವೈಷ್ಣವ ಧರ್ಮಗಳನ್ನು ಸ್ವೀಕರಿಸಿ, ತಮ್ಮ ಮೂಲ ಕುಲಬಳ್ಳಿಗಳನ್ನು ಮರೆತು, ಕನ್ನಡ ನಾಡಿನಲ್ಲಿ ನಾಡವರು, ಬಂಟರು, ನಾಮಧಾರಿಗೌಡರು, ಗಂಗಡಿಕಾರರು, ರೆಡ್ಡಿಗಳು, ಒಕ್ಕಲಿಗರು, ನಾಡಗೌಡರು, ಕುಡುವರು, ಕ್ಷತ್ರಿಯರು, ಬ್ರಹ್ಮಕ್ಷತ್ರಿಯರು ಎಂಬ ಗುಂಪುಗಳಾಗಿ ಒಡೆದರು. ಇಂದು ನಾಡವರು ಎಂಬ ಹೆಸರಿನಲ್ಲಿ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ಕಾಣಬರುತ್ತಾರೆ ಎಂದು ಅಭಿಪ್ರಾಯ ಪಡುತ್ತಾರೆ. (ಓದಿ ಕನ್ನಡ ನೆಲೆ. ಪುಟ ೧೦೭-೧೦೮) ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನಾಮಧಾರಿ ಗೌಡರು ಯಾನೆ ನಾಡವರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಂಟರು ಯಾನೆ ನಾಡವರು ಎಂದೂ, ಉತ್ತರ ಕನ್ನಡ ಜಿಲ್ಲೆಯಲ್ಲಿ ತಮ್ಮ ಹೆಸರಿನ ಹಿಂದೆ ಬೇರಾವ ಉಪಾದಿಯನ್ನು ಹೊಂದದೆ ಕೇವಲ 'ನಾಡವರು' ಎಂಬ ಹೆಸರಿನಲ್ಲಿ ಲಭ್ಯರು. ತಮ್ಮ ಮೂಲ-ವಲಸೆಯ ವಿಷಯದಲ್ಲಿ ನಾಡವರಲ್ಲಿ ಪ್ರಚಲಿತವಿರುವ

ಐತಿಹ್ಯವೊಂದನ್ನು ನಾಡವರ ಸಾಮಾಜಿಕ ಉಪಭಾಷೆಯಲ್ಲೇ ಪ್ರಸ್ತುತಪಡಿಸಿ, ತನ್ಮೂಲಕ ನಾಡವರ ಕನ್ನಡದ ಸೊಗಡನ್ನು ಹರಡ ಬಯುಸುತ್ತೇನೆ:

ತುಳ್‌ನಾಡ್ನಲ್ ಒಬ್ ರಾಜ್ ಈದದಾ[೧]. ಅಂವ[೨] ಉಂದ್[೩] ದೊಡ್ ಹಡ್ಗ ಕಟ್ಸೆ, ಅದ್ರಲ್ ಸಾಮಾನೆಲ್ಲ ತುಂಬೆ, ಯಾಪಾರ್‌ಕೆ[೪] ಹೋಗೂಕ್ ತಯಾರಾದ. ಆದ್ರೆ ಅಂವ್ನ ಹಡ್ಗ ಹುಂಗೂದೂ[೫] ಇಲ್ಲ ಹುಡ್ಕೂದೂ ಇಲ್ಲಾ. ಆಗೆ ದೋಸೇರ್[೬] ಹಡ್ಗಕ್ಕೆ ನರಬಲಿ ಕೊಟ್ರೆ ಮುಂದ್ ಹೋತೀದ[೭] ಅಂದ್ರ. ಆಗೆ ರಾಜಾ ತನ್ನ ಅಯ್ದ್ ಮಕ್ಳಲ್ಲೆ ಕಿರಿಯಂವ್ನ್ ಬಲಿ ಕೊಡ್ಬೇಕಂದ್ ಮನ್ಸ್ ಮಾಡೆ, ಹಿಂಡ್ತಿ ಕೋಡೆ[೮] ಈ ಇಚಾರಾ ಹೇಳ್ದ. ಆಗ ಹಿಂಡ್ತೆ, ಹಿದ್ರ ಕಂಗಾಲಾಗೆ, ರಾತ್ರೋರಾತ್ರಿಗೆ ಗಂಡ್ಗೆ ಹ್ಯಾಳ್ದೇ ಕ್ಯೇಳ್ದೇ ತನ್ ಐದು ಜನಾ ಮಕ್ಳ ಕರ್‌ಕಂಡೆ[೯] ದೋಣೀ ಹತ್ ತನ್ ಅಪ್ನಮನೆ ಹಿರೀಗುತ್ತಿಗೆ[೧೦] ಬಂದ್ ಮುಟ್ತ. ಆಗ್ ರಾಜ್ಗೆ ಬಾಳ್ ಬೆಜಾರ್ ಆಗ್ ಮುಂಡ್‌ಮುಸ್ಕ್[೧೧] ಹಾಕಂಡ್[೧೨] ಮನಗ್ದ್. ಆಗ್ ಅಂವ್ನ್ ತಂಗೆ ಅಲ್ಲೀಗ್ ಬಂದೆ. ಅಣ್ಣ ಬೆಜಾರ್ದ[೧೩] ಕಾರ್ಣ ಕೇಳ್ತ. ಅಣ್ಣ ನೆಡ್ದ ಎಲ್ಲಾ ಹಕೀಕತ್ ಹೇಳ್ದ. ಆಗೆ ತಂಗೆ 'ಅಣಾ ನೀ ಬೆಜಾರಾ ಮಾಡ್ಬೆಡಾ. ನಾನನ್[೧೪] ಮಗ್ನ ಬಲಿಕುಡೂಕ್[೧೫] ತಯಾರೇಂವೆ[೧೬] ಅಂತ. ಆಗೆ ಅದ್ರ ಮಗ್ನ ಬಲಿಕುಡ್ವಾಗೆ ಅಂವ್ನ ಕೊನಿ ಆಸೆ ಏನ ಅಂದ್ ಕೇಳ್ದ್ರ. ಆಗೆ ಅಂವ 'ನಂಗೆ ಮಾಯ್ನಹಣ್ಣಬೇಕ' ಅಂದ. ತಂದ್ ಕೊಟ್ರ. ಆ ಹಣ್ಣಾ ಅಂವ ಚಾಕ್ನಲ್ ಕಿಕ್ತಂಡ್[೧೭] ತಿಂಬಾಗೆ, ಅಂವ್ನ್ ಕಯ್ ಕುಯ್ದ್[೧೮] ರಗ್ತದ್[೧೯] ಓಕ್ಳಿಯಾಗ್ ಹೊಳಿ ನೀರ್ನಲ್ ಬೆತ್ತ[೨೦]. ಆಗೆ ಹಡ್ಗ ಸರಪರ ಹೋಗೂಕ್ ಹತ್ತತ[೨೧]. ಆಗೆ ರಾಜ್ಗೆ ಬಾಳ್ ಕುಸಿಯಾಯ್ತು. ಆಗ ಅಂವ 'ಇನ್ ಮುಂದೆ ನನ್ನ ಬದ್ಕು ಬಂಡಾರಾ[೨೨] ರಾಜಿ[೨೩] ಎಲ್ಲಾ ಆಳ್ವಂವ[೨೪] ನನ್ನ ತಂಗೀ ಮಗ. ಇನ್‌ಮುಂದೆ ತನ್ ರಾಜೀದಲ್ ಅಳಿನ್ ಸಂತಾನದ್ದೇ ಕಾರ್ ಬಾರಾ'. ಅಂದ್ ಡಂಗ್ರ ಹುಡೀಸ್ದ್ರಾ[೨೫]. ಕಾಯ್ದೀನೂ ಮಾಡ್ದ. ರಾಜ್ನಮಕ್ಳ ಸಂತಾನ[೨೬] ನಾವ, ರಾಜೀ ಸುಕ್‌ಬೋಗ ಅನ್‌ಬಯ್ಲೂಕಾದ್ದೇ[೨೭] ಬಡತನದಿಂದ ಉಳು ಪರಿಸ್ತಿತೆ ನಮ್ಗ ಬಂತ'. ಎಂದು ನಾಡವರು ತಾವು ಮೂಲತಹ ತುಳುನಾಡಿನ ರಾಜಸತ್ತೆಯಿಂದ ವಂಚಿತರಾಗಿ ಉತ್ತರ ಕನ್ನಡಕ್ಕೆ ಬಂದವರು. ಎಂದು ಭೂತಾಳ ಪಾಂಡ್ಯನ ಅಳಿಯ ಕಟ್ಟಿನ ಶಾಸನವನ್ನು ತಮ್ಮದೇ ಆದ ಬಗೆಯಲ್ಲಿ ಹೇಳುತ್ತಾರೆ.

ಇನ್ನೊಂದು ಐತಿಹ್ಯದ ಪ್ರಕಾರ ಕಲ್ಯಾಣದ ಜೈನ ಬಿಜ್ಜಳ ದೊರೆಯ ಸಂಬಧಿಗಳೂ, ಸಹವರ್ತಿಗಳೂ ಆದ ನಾಡವರು ಕಲ್ಯಾಣ ಕ್ರಾಂತಿಯಲ್ಲಿ ಬಿಜ್ಜಳನ

---

೧. ಇದ್ದನು ೨. ಅವನು ೩. ಒಂದು ೪. ವ್ಯಾಪಾರಕ್ಕೆ ೫. ಅಲ್ಲಾಡು ೬. ಜೋಯಿಸರು ೭. ಹೋಗುತ್ತದೆ ೮. ಹತ್ತಿರ ೯. ಕರೆದುಕೊಂಡು ೧೦. ಊರಹೆಸರು ೧೧. ಮುಸುಕು ೧೨. ಹಾಕಿಕೊಂಡು ೧೩. ಬೇಸರದ ೧೪. ನನ್ನ ೧೫. ಬಲಿಕೊಡಲಿಕ್ಕೆ ೧೬. ತಯಾರಿ ೧೭. ಕೆತ್ತಿಕೊಂಡು ೧೮. ಕೈಕೊಯ್ದು ೧೯. ರಕ್ತದ ೨೦. ಬಿದ್ದಿತು. ೨೧. ಹೋಗಹತ್ತಿತು. ೨೨. ಸಂಪತ್ತು ೨೩. ರಾಜ್ಯ ೨೪. ಆಳುವವ ೨೫. ಹೊಡೆಯಿಸಿದ ೨೬. ಮಕ್ಕಳ ಸಂತಾನ ೨೭. ಅನುಭವಿಸಲಾಗದೆ

ಕೊಲೆಯಾದಾಗ, ಅವನಿಗೆ ಸಹಾಯಕರಾದ ನಾಡವರು ಕಲ್ಯಾಣದಿಂದ ತಲೆ ತಪ್ಪಿಸಿಕೊಂಡು ಅಂಕೋಲಾ ತಾಲೂಕಿನ ಭಾವಿಕೇರಿಗೆ ಬಂದು ನೆಲೆ ನಿಂತರು. ಎಂದೂ ಹೇಳಲಾಗುತ್ತದೆ. ಆದರೆ ಇವೆಲ್ಲ ಖಚಿತ ಸಾಕ್ಷಾಧಾರಗಳಿಂದ ದೃಢಪಟ್ಟ ಸಂಗತಿಗಳಲ್ಲ. ಕೇವಲ ಕಂತೆ ಪುರಾಣ.

೩. ನಾಡವರ ಕನ್ನಡ ಭಾಷೆ :

ನಾಡವರ ಸಾಮಾಜಿಕ ಉಪಭಾಷೆಯು ಸತ್ವಪೂರ್ಣವಾಗಿದ್ದು ಓಜಸ್ಸಿನಿಂದ ಕೂಡಿದೆ; ಭಾಷೆಯಲ್ಲಿ ಗಡಸುಗಾರಿಕೆ ಹಾಗೂ ಓಘವಿದೆ. ಈ ಭಾಷೆಯಲ್ಲಿ ಹಲವಾರು ಮೂಲ ದ್ರಾವಿಡ ಅಂಶಗಳು ಅಂತರ್ಗತವಾದುದನ್ನು ನೋಡಬಹುದಾಗಿದೆ. ನಾಡವರ ಆಡುಭಾಷೆಯ ಕೆಲವು ಗುಣಲಕ್ಷಣಗಳನ್ನು ಗಮನಿಸಿರಿ.

೩. ಅ. ಧ್ವನಿಮಾ ವ್ಯವಸ್ಥೆ :

ನಾಡವರ ಕನ್ನಡದಲ್ಲಿ ಸ್ವರ ಧ್ವನಿಮಾಗಳಾದ ಋ ೠ ಐ ಮತ್ತು ಔಗಳಿಲ್ಲ. ಸವರ್ಣ ಸ್ವರಗಳಾದ ಅ ಆ. ಎಏ, ಒಓ ಇವುಗಳ ಮಧ್ಯದಲ್ಲಿ ಅ--, ಎ--, ಒ-- ಎಂಬ ಮೂರು ವಿವೃತ ಸ್ವರ ಧ್ವನಿಮಾಗಳು ಬೆಳವಣಿಗೆ ಪಡೆದಿವೆ. ವರ್ಗೀಯ ವ್ಯಂಜನಗಳಲ್ಲಿ ಮಹಾಪ್ರಾಣಗಳಿಲ್ಲ: ಅವರ್ಗೀಯ ವ್ಯಂಜನಗಳಲ್ಲಿ ಶ್, ಷ್‌ಗಳ ಬಳಕೆಯಿಲ್ಲ.

೩. ಆ. ಲಿಂಗವ್ಯವಸ್ಥೆ:

ನಾಡವರಲ್ಲಿ ಪುಲ್ಲಿಂಗ ನಂಪುಸಕ ಲಿಂಗಗಳನ್ನು ಮಾತ್ರ ಬಳಸುತ್ತಾರೆ. ಸ್ತ್ರೀಲಿಂಗ ಬಳಕೆ ಕ್ವಚಿತ್ತ. ಸ್ತ್ರೀಲಿಂಗ ಏಕವಚನದಲ್ಲಿ ನಪುಂಸಕ ಲಿಂಗ ಏಕವಚನವನ್ನು, ಸ್ತ್ರೀಲಿಂಗ ಬಹುವಚನದಲ್ಲಿ ಪುಲ್ಲಿಂಗ ಬಹುವಚನವನ್ನು ಬಳಸುವ ವಾಡಿಕೆ.

ಉದಾ: ಅದ ಸಾಲೀಗೆ ಹೋತೀದ. (ಅವಳು ಶಾಲೆಗೆ ಹೋಗುತ್ತಾಳೆ.)
ಬೇರಮ್ಮತ್ತೆ ಬತ್ತೀದ. (ಬೀರಮ್ಮತ್ತೆ ಬರುತ್ತಾಳೆ)
ಹಿಂಗ್‌ಸ್ರ ಅಡ್ಗಿ ಮಾಡ್ತರ. (ಹೆಂಗಸರು ಅಡ್ಗೆಯನ್ನು ಮಾಡುತ್ತಾರೆ)

೩. ಇ. ವಚನ: ಬಹುವಚನ ಪ್ರತ್ಯಯ ಗಳ್>ಗೋಳ್, ಗೋಳ.
ಉದಾ: ಗುರುಗಳು > ಗುರ್‌ಗೋಳ್, ಗುರುಗೋಳ
ದೀರ್ > ದೀರ, ಓರ: ಅಣ್ದೀರ, ಅಣ್ಣೋರ.

೩. ಈ. ವಿಭಕ್ತಿ ಪ್ರತ್ಯಯಗಳು: ಪ್ರಥಮಾ ಮತ್ತು ದ್ವಿತೀಯಾ ವಿಭಕ್ತಿಗಳನ್ನು ಲೋಪಿಸುವುದೇ ಹೆಚ್ಚು:

ಉದಾ: ರಾಮ ಮರಾ ಹತ್ತದಾ. (ರಾಮನು ಮರವನ್ನು ಹತ್ತಿದನು.) ಹುಲೆ ಆಕ್ಳ ತೆಂತ. (ಹುಲಿಯು ಆಕಳನ್ನು ತಿಂದಿತು)
ತೃತಿಯಾ: ಇಂದ, ಇಂದೆ ಪ್ರತ್ಯಯಕ್ಕೆ ಪ್ರತಿಯಾಗಿ 'ಲಿಂದೆ' ಪ್ರತ್ಯಯ ಬಳಕೆಯಾಗುತ್ತದೆ.

ಉದಾ: ಅಂವ ಸಾಲಿಲಿಂದ್ ಬಂದಾ (ಅವನು ಶಾಲೆಯಿಂದ ಬಂದನು)
ಕಯ್ಲಿಂದೆ ಕೆನ್ನೀಗ್ ಬಾರ್‌ಸ್ದ (ಕೈಯಿಂದ ಕೆನ್ನೆಗೆ ಹೊಡೆದನು)
ಸಪ್ತಮಿ: ಅಲ್ಲಿ ಪ್ರತ್ಯಯಕ್ಕೆ ಬದಲಾಗಿ ಲೆ, ಈಲೆ ಬಳಕೆಯಾಗುತ್ತದೆ
ಉದಾ: ಮರ್‌ದಲೆ ಹಣ್ ಏವ (ಮರದಲ್ಲಿ ಹಣ್ಣುಗಳು ಇವೆ.)
ತಲೀಲೆ ಉಂದೂ ಕುದ್ಲ ಇಲ್ಲಾ. (ತಲೆಯಲ್ಲಿ ಒಂದು ಕೂದಲಿಲ್ಲ.)

೩. ೮. ಸರ್ವನಾಮಗಳು :

ಉತ್ತಮ ಪುರುಷ ಏ. ವ: ನಾ ನಾನ್, ನಾನ
ಉದಾ: ನಾ ಸಾಲಿಗ್ ಹೋತಿ. (ನಾನು ಶಾಲೆಗೆ ಹೋಗುತ್ತೇನೆ.)
ನಾನ್ ಅಂವ್ನ ಹಲ್ ಮುರಿತಿ (ನಾನು ಅವನ ಹಲ್ಲು ಮುರಿಯುತ್ತೇನೆ.)
ನಾನ ಯಾರಿಗ್ ಕಡ್ಮಿ ಹೇಳ? (ನಾನು ಯಾರಿಗೆ ಕಡಿಮೆ ಹೇಳು)
ಉತ್ತಮ ಪುರುಷ ಬ. ವ: ನಾವ್; ನಾವ
ನಾವ್ ಎಯ್ಡೂ ಜನ ಸಂತಿಗೇ ಇರ್ತವ (ನಾವು ಇಬ್ಬರೂ ಜೊತೆಗೆ ಇರುತ್ತೇವೆ)
ನಾವ ಯಾರಿಗೂ ಹಿದ್ರುದಲ (ನಾವು ಯಾರಿಗೂ ಹೆದರುವುದಿಲ್ಲ)
ಮಧ್ಯಮ ಪುರುಷ : ಏ. ವ: ನೀ, ನೀನ
ಉದಾ: ನೀ ಹೋಗ. (ನೀನು ಹೋಗು.)
ನೀನ ಯಾವಾಗ ಬಂದೆ? (ನೀನು ಯಾವಾಗ ಬಂದೆ.)
ಮಧ್ಯಮ ಪುರುಷ : ಬ. ವ: ನೀವ್, ನೀವ
ನೀವ್ ಯಾವಾಗ್ ಬಂದ್ರಿ? (ನೀವು ಯಾವಾಗ ಬಂದಿರಿ?
ನೀವ ತಂಗಿ ಕರ್ಕಾ ಬರ್ರಿ (ನೀವು ತಂಗಿಯನ್ನು ಕರೆದುಕೊಂಡು ಬನ್ನಿ)
ಪ್ರಥಮ ಪುರುಷ : ಏ. ವಚನ, ಅಂವ, ಅಂವ್, ಅವ್ಳ, ಅದ್, ಅದ.
ಉದಾ: ಅಂವ. ಬಾಳ ಕಂಜೂಸಿ. (ಅವನು ಬಹಳ ಜಿಪುಣ.)
ಅಂವ್. ಅಂವ್ ಸತ್ತ ನೀಚ. (ಅವನು ಸತ್ತನು ನೀಚ.)
ಅವ್ಳ. ಅವ್ಳ ಅಂವ್ನ ಬಿನ್ನೀಗ್ ಬಿದ್ದೀದ (ಅವಳು ಅವನ ಬೆನ್ನಿಗೆ ಬಿದ್ದಿದ್ದಾಳೆ.)
ಅದ್. ಅದ್ ನೆಡ್ದದ್ದೇ ಹಾದೆ. (ಅದು ನಡೆದದ್ದೇ ದಾದಿ.)
ಅದ. ಅದ ಬಾಲಾಕುಣಿಸ್ತೀದ. (ಅದು ಬಾಲವನ್ನು ಕುಣಿಸುತ್ತದೆ.)
ಪ್ರಥಮ ಪುರುಷ: ಬ. ವ. ಅವ್ರ, ಅವ್. ಅವ
ಉದಾ: ಅವ್ರ ಹೇಳೂದೇ ಉಂದ, ಮಾಡೂದೇ ಉಂದ. (ಅವರು

ಹೇಳುವುದೊಂದು ಮಾಡುವುದೊಂದು.)

ಅವ್: ಅವ್ ಹ್ವೊದೂ ಬೆಟ್ಟಕೆ (ಅವು ಹೋದವು ಬೆಟ್ಟಕ್ಕೆ)

ಅವ: ಅವ ನೋಡೂಕ್ ಬಾಳ್ ಚೆಂದ್ ಏವ. (ಅವು ನೋಡಲಿಕ್ಕೆ ಬಹಳ ಚೆಂದ ಇವೆ.)

೩. ಊ. ಸಂಖ್ಯಾ ವಾಚಕಗಳು :

ಕನ್ನಡ ಸಂಖ್ಯಾವಾಚಕಗಳು ನಾಡವರ ಕನ್ನಡದಲ್ಲಿ ವ್ಯಂಜನಾಂತ ಇಲ್ಲವೆ ಅಕಾರಾಂತ ಹೊಂದುತ್ತವೆ.

ಉದಾ: ಒಂದು > ಉಂದ್, ಉಂದ; ಎರಡು > ಎಯ್ಡ್, ಎಯ್ಡ; ಮೂರು > ಮೂರ್, ಮೂರ

೩. ಋ. ನಿಷೇಧ ಪ್ರತ್ಯಯಗಳು :

ನಾಡವರು ಆ, ಎ, ಅದೆ, ಆದೆ ಇಲ್ಲ> ಏಲ, ಏಲಾ ಮುಂತಾದ ಪ್ರತ್ಯಯಗಳನ್ನು ಸೇರಿಸಿ ನೀಷೇಧಾರ್ಥಕ ಪದಗಳನ್ನು ಸೃಷ್ಟಿಸಿಕೊಳ್ಳುತ್ತಾರೆ:

ಉದಾ: ಅಂವ ನ್ವೊಡಾ. (ಅವನು ನೋಡನು)

ನಾ ನ್ವೊಡೆ. (ನಾನು ನೋಡೆನು)

ಕಟ್ವಾದೆ ಕರಿಯೇ ನೊರೆಯಾಲ (ಕಟ್ಟದೆ ಕರಿಯೇ ನೊರೆಹಾಲು)

ಹಾಡಾದೆ ಉಳಿನಾರೆ (ಹಾಡದೆ ಉಳಿಯಲಾರೆನು)

ದೇಪಳ್ಗಿ ಹಬ್ಕೆ ಅಳಿಯಾ ಬರ್ಲೇಲ (ದೀಪಾವಳಿ ಹಬ್ಬಕ್ಕೆ ಅಳಿಯ ಬರಲಿಲ್ಲ)

ನಾ ಅಂವ್ನ ನ್ವೊಡ್ಲೇಲಾ (ನಾನು ಅವನನ್ನು ನೋಡಲಿಲ್ಲ.)

೪. ಧ್ವನಿ ವ್ಯತ್ಯಾಸಗಳು :

ಅ > ಎ: ಸಣ್ಣ > ಸೆಣ್ಣ, ಸಕ್ಕರೆ > ಸೆಕ್ಕರಿ, ವ್ಯಥೆ > ಯೆತೆ

ಅ > ಆ: ಪರಿಮಳ > ಪರಮ್ಮಾಳ, ಹತ್ತ > ಹಟಾ

ಅ > ಇ: ನಡುವೆ > ನಿಡಗೆ, ನಡೆ > ನಿಡಿ

ಇ > ಅ: ಮಲ್ಲಿಗೆ > ಮಲ್ಲಗಿ, ತರಿಸು > ತರಸ, ಮರಿಗೆ > ಮರಗಿ

ಎ > ಅ: ನಡೆದು > ನಿಡದೆ, ಹೊಡೆದು > ಹುಡದೆ

ಆ > ಪ್ಯ: ಸಾಕು > ಸ್ಯೆಕ, ಧ್ಯಾನ > ಧ್ಯೆನಾ

ಇ > ಉ: ಸಂಪಿಗೆ > ಸಂಪುಗೆ

ಉ > ಅ: ತೇರು > ತೇರ, ಬಿಸಿಲು > ಬಿಸ್ಲ, ಬಾಗಿಲು > ಬಾಗ್ಲ

ಇ > ಎ: ಇಲಿ > ಇಲೆ, ಮೋಡಿ > ಮೋಡೆ

ಎ > ಇ: ಎತ್ತು > ಇತ್ತು, ಹೊಡ್ತೆ > ಹುಡಿ

ಈ > ಏ: ಬೀಗ > ಬ್ಯೇಗ, ಮೀಡ > ಮ್ಯೇಡ

ಉ > ಒ: ಕುಮಾರ > ಕೊಮಾರ, ಮುಖ > ಮೊಕ

ಊ > ಓ: ಕೂಸು > ಕೋಸ, ಊಟ > ಓಟ

ಒ > ಉ: ಕೊಲ್ಲು > ಕುಲ್ಲು, ಹೊಡೆ > ಹುಡಿ

ಏ > ಆ: ಸೇಸೆ > ಸ್ಯಾಸಿ, ಸೇವಂತಿ > ಸ್ಯಾವಂತ್ಗಿ

ಓ > ವಾ: ಓಲೆ > ವಾಲೆ, ತೋಟ > ತ್ವಾಟ

ಮಹಾಪ್ರಾಣಗಳು ಅಲ್ಪಪ್ರಾಣ, ಸುಖ > ಸುಕ, ಘಂಟೆ > ಗಂಟೆ, ಛತ್ರಿ > ಚತ್ರಿ, ಝಾಡಿಸು > ಜಾಡ್ಸು, ಥರ > ತರ, ಧಾತು > ದಾತು, ಫಜೀತಿ > ಪಜೀತಿ, ಭೂತ > ಬೋತ

ವ್ > ಗ: ಬೆವರು > ಬೀಗ್ರು, ತೊವಲು > ತುಗ್ಲ

ವ್ > ಯ್: ವ್ಯೇಷ > ಯ್ಯಾಸ

ವ್ > ಇ: ವಿಠೋಬ > ಇಟೋಬ, ವಿಠ್ಠಲ > ಇಟ್ಟಲ

ಶ್, ಷ್ > ಸ್: ಶಾಲೆ > ಸಾಲೆ, ವಿಷ > ಇಸ

೫. ಕೆಲವು ವಿಶಿಷ್ಟ ಪ್ರಯೋಗಗಳು :

ಅ. ಹೆಂಡತಿ ಗಂಡನನ್ನು ಗೌರವಾರ್ಥದಲ್ಲಿ ಕರೆಯುವಾಗ ಸ್ತ್ರೀಲಿಂಗದಲ್ಲಿ ಕರೆಯುವ ಪದ್ಧತಿಯಿದೆ ನಾಡವರಲ್ಲಿದೆ.

ಉದಾ: ಏನೆ ನೀವ್ ಇಲ್ ಬರ್ರೆ (ಏನ್ರಿ ನೀವಿಲ್ಲಿ ಬನ್ನಿರಿ)

ನಾ ಹೇಳ್ದ ನಿಮ್ಗೆ ಕೇಳ್ತೇನೆ (ನಾನು ಹೇಳಿದ್ದು ನಿಮಗೆ ಕೇಳಿತೇನು.)

ಆ. ಮುಖ್ಯ ಕ್ರಿಯೆಗೆ ಹತ್ಯಾ, ಹತ್ತ ಎಂಬ ಸಹಾಯಕ ಕ್ರಿಯೆ ಜೋಡಣೆ ಮಾಡುವುದಿದೆ.

ಉದಾ: ಅಂವ ಗದ್ದೀ ಹೂಡೂಕ್‌ಹತ್ಯಾ (ಅವನು ಗದ್ದೆ ಹೂಡುತ್ತಿದ್ದಾನೆ.) ಅದ ಅಡ್ಗಿ ಬೇಯ್ಸೂಕ್ ಹತ್ತೀದ (ಅವಳು ಅಡಿಗೆ ಬೇಯಿಸುತ್ತಿದ್ದಾಳೆ)

ಇ. ಭೂತನ್ಯೂನಗಳ ಮುಂದೆ ಕಂಡ್ ಎಂಬ ರೂಪ ಬಳಕೆಯಾಗುತ್ತದೆ.

ಉದಾ: ನಾ ನೋಡ್ಕಂಡ್ ಬತ್ತಿ (ನಾನು ನೋಡಿಕೊಂಡು ಬರುತ್ತೇನೆ)

ಅಂವ ದೂಡ್‌ಕಂಡ್ ಬತ್ಯಾ (ಅವನು ದೂಡಿಕೊಂಡು ಬರುತ್ತಾನೆ)

ಈ. 'ಅಂತೆ' ಎಂಬುದಕ್ಕೆ ಬದಲಾಗಿ 'ಕಡ' ವನ್ನು ಬಳಸುತ್ತಾರೆ.

ಉದಾ: ಅಂವ ಹೋಗುದಲ ಕಡ (ಅವನು ಹೋಗುವದಿಲ್ಲವಂತೆ)

ಉ. ವಾಕ್ಯ ಮಿತವ್ಯಯ:

ಉದಾ : ನಾ ಹೋತಿ (ನಾನು ಹೋಗುತ್ತೇನೆ.)
ನೀ ಬತ್ತಿ? (ನೀನು ಬರುತ್ತೀಯಾ?)

ಊ. ಕೆಲವು ವಿಶಿಷ್ಠ ಶಬ್ದಗಳು :

ನಾಡವರು ಭಾಷಾ ಬಾಂಧವ್ಯಕ್ಕೆ ಹೆಸರಾದವರು. ಅವರು ಎಲ್ಲೇ ಹೋಗಲಿ, ಎಲ್ಲೇ ಇರಲಿ, ಅಲ್ಲೆಲ್ಲ ತಮ್ಮತನವನ್ನು ಮರೆಯದೆ, ಇತರರೊಡನೆ ಬೆರೆತು, ಅವರ ಭಾಷೆಯನ್ನು ಕಲಿತು ಗೌರವಿಸುತ್ತಾರೆ. ಹೀಗಾಗಿ ಅವರಾಡುವ ಭಾಷೆಯಲ್ಲಿ ಅಚ್ಚಗನ್ನಡ ಶಬ್ದಗಳ ಜೊತೆಗೆ ಕ್ವಚಿತ್ತಾಗಿ, ಕೊಂಕಣಿ, ಮರಾಠಿ, ಹಾಗೂ ಉರ್ದು ಭಾಷೆಯ ಶಬ್ದಗಳೂ ಸೇರಿರುವುದನ್ನು ನಾವು ನೋಡಬಹುದು. ಕನ್ನಡ ಕೋಶದಲ್ಲಿ ಕಂಡರಿಯದ ಅತ್ಯಪೂರ್ವ ಶಬ್ದ ಸಂಪತ್ತು ನಾಡವರ ಕನ್ನಡದಲ್ಲಿ ತುಂಬಿಕೊಂಡಿದೆ: ಅಡಸ್ಲ (ನೇಗಿಲ ಹಿಡಿಕೆ) ಅಯ್ಣಿ (ಇಣಚಿ) ಅಳ್ಳಿಹೂಂವ (ಕಮಲ) ಅಳ್ಳ (ಹೊಟ್ಟೆಯುರಿ) ಅಚ್ಣಿ (ದೇವರ ಉಪಹಾರ) ಆಸೀ (ಅನ್ನಕಲಸುವ ಪದಾರ್ಥ) ಆಸರ (ನೀರಡಿಕೆ) ಆದರ್ಸು (ಸಮತೋಲದಿಂದ) ಇಣ್ಣು (ಚಿಂತಿಸು) ಇಕ್ಕು (ಹೊಡೆ) ಇಡ್ಗಿಚ್ಚು (ಕೋಪ) ಈಬಾಲೆ (ಈವರ್ಷ) ಉಡ್ಬೀಳ (ಮೇಲೆ ಬೀಳು) ಉಲಚು (ಕೆಡವು) ಉರ್ಕಂತ (ದುರಹಂಕಾರ) ಉಂತ್ಲೇ (ಸುಮ್ಮನೆ) ಉಯ್ಟು (ಮೊಂಡುತನ) ಕೆರ್ಕ (ಜಿಪುಣ) ಕಚ್ಚರ್ಕಿ (ಕಾಲುವೆ) ಕೊಮ್ಣಿ (ಶೃಂಗಾರ ಚೇಷ್ಟೆ) ಕುಟ್ಟಿಕ್ವೊಣೆ (ಚಿಕ್ಕ ಕತ್ತಲು ಕೋಣೆ) ಕುದೀಲ (ಬಿಸಿ ಸಂಬಾರ) ಗ್ವೊಬಿ (ಸಂಕಟ) ಗಡ್ಬೋಳಿ (ಸಂಪೂರ್ಣ ನಾಶ) ಗ್ವೊಂಕಿ (ಗಂಟಲು ಮೂಳೆ) ಗನಾಕೆ (ಚೆನ್ನಾಗಿ) ಗುರ್ಬಾಣ್ಣಕ್ಕಿ (ಚಿಟ್ಟೆ) ಗಂವ್ತ್ಲ (ಬೇಗೆ) ಚಿಪ್ಪ (ಸವಟು) ಚಿಪ್ರಸ (ಸಾರು) ಚೆಂಗ್ಹರಿ (ಓಡು) ಚೀರ (ಹೇನಮೊಟ್ಟೆ) ಜಿಬ್ಬ (ಮರಿಮೀನ) ಜಿಂವ್ತೆ (ಯುವತಿ) ಜೀರ್ಗುತ್ತ (ಕರಕರೆ) ಜ್ವೊನಗ (ಸಿಂಪಿ) ಜೀರಾಗು (ಸೊರಗು) ಡೀಗ್ (ತೂರು) ಡಾಳಸು (ಬೀಸು) ತೊಲಂಡ (ಏತ) ತೊರ್ಲೆ (ಬಾಸುಂಡಿ) ದಿಂಗ್ಯೆ (ಕರೆ) ದುಂಕ್ಲ (ದನಕ್ಕೆ ಹುಲ್ಲ ಹಾಕುವ ಸ್ಥಳ)ದಣ್ಪಿ (ಗೇಟು) ದುಳ್ಬಾಡು (ತೊಳಲಾಡು) ನಂಪು (ನಯ) ನಿಪ್ಪು (ಉರಿಬೂದಿ) ನೆಟಗಾಗು (ಸಾಯು) ನಿಗಸು (ನೆರೆ) ನಾಣ್ಗಿ (ಬಚ್ಚಲು) ಪಡ್ಚ (ಸಾಯು) ಪಂಚಂಡಿ (ನೀರು ತುಂಬುವ ದೊಡ್ಡ ಪಾತ್ರೆ) ಬೇಳ್ಗ (ಮರುಳು) ಬಾಬ್ಲಾಣಿ (ತೋರಿಕೆ) ಬಿನ್ನಾಣಿ (ಕೆಲಸಿ) ಬಿದ್ದಕ (ಔತಣ) ಬ್ಯಾಗ್ಣಿ (ಬೇಗೆ) ಮೈಗ್ರ (ಮೇಲೋಗರ) ಮರ್ಗಲ (ದನಗಳ ಸಂಭೋಗ) ವಾಡಿ (ಪೊಳ್ಳು) ವಾಡಕ್ಕಿ (ಕೋತಂಬರಿ) ವಾಗತಿ (ಆರೈಕೆ) ಸಯ್ನ (ಸೈಗೆಡೆ_ನಮಸ್ಕರಿಸು) ಸುಂಬ (ತುಣಕು) ಸ್ವೊಣಿ (ನಾಯಿ ಸಂಭೋಗ) ಸಿವ್ಕಳ (ಶ್ಮಶಾನ) ಹುಳ್ಗ (ಅನ್ನ ಕಲಸುವ ಪದಾರ್ಥ) ಹುಕ್ಕಿ (ಉಪಾಯ) ಹುಡಗ್ಲ (ಗಲಭೆ).

ಮರಾಠಿ, ಕೊಂಕಣಿ, ಉರ್ದು ಭಾಷೆಯಿಂದ ಬಂದಿರಬಹುದಾದ ಶಬ್ದಗಳು ಹಲವಿದೆ. ಕಾಡತೂಸು, ಕರಾಮತ್ತು, ಖಾನಾವಳಿ, ಗಾಂವಕಾರ, ಅಗದಿ, ಅಪೂಟ್,

ಚೌಕಸಿ, ಸಾಡಿಸಾತ, ದೀಡ್ ಸೈಣ್ಯಾ, ಅಕ್ಕಲ, ತೀನ್‌ಸೀಚಾರ್, ರಿವಾಜ, ದಿಮಾಕ, ಹಲ್ಕಾ, ಹಲ್ಕಟ್, ಹರಕತ್, ರುಬಾಬ್, ಬರ್‌ಕತಿ, ಬಾರಾಖೂನ್, ತಾಪ್ಡತೋಪ್ಡ, ಪೀಕ್‌ಪಾನಿ, ಅಚ್ಚೇರು, ಜಿಡತಿ, ಹುಕುಂ, ಪಾನಪಟ್ಟಿ, ಮುಸ್ಕಿಲ್, ಪಗಾರ, ಅತ್ತರು, ಮರ್ಜಿ, ದಗಾ, ದಗಲ್‌ಬಾಜಿ ಮುಂತಾದವುಗಳು.

೭. ಬೈಗಳುಗಳು :

ಬೈಗುಳಗಳಲ್ಲಿಯೂ ಭಾಷಾ ಸಂಸ್ಕೃತಿಯ ಸೊಗಡಿರುತ್ತದೆ, ಮಾದರಿಗೆ ಗಮನಿಸಿರಿ:

ಹಚ್‌ಗಾಲ್ಲೆ, ಪೀಟ್ ಅಗೀಲೆ, ನೆಲ್‌ಗಟ್ ತುಳಿಲೆ, ಕುಲ್‌ನಾಸ್ಯಾಗ್ಲೆ, ಕೊಟ್ಗೀಗ್ ಹುಟ್‌ಮುಳ್ ಅಡ್ಸಲೆ, ಹುಲ್‌ಸ್ನಮಡ್ಕಿ ಉಡೀತಿ, ಗುಲಾಮ, ಬಟ್‌ಕ್ಯಾ, ಕೋಡಿ, ನಸಾಕೋಡಿ, ನೆಟ್‌ಗಾಗ್ ಹೋಗ್, ತೊಂಡಿಕುಳಿಗ್ ಹ್ವೊಗ್ಲೆ, ಬೋಸಡಿಮಗ, ಹಡ್ಬಿಗ್ ಹುಟ್ದಂವ್ನೆ, ಸೋಳಿಮಗ, ಮುಕ್ಕರ್ತಿ ಮೂಗ್‌ಹರೀಲೆ ಇತ್ಯಾದಿ.

೮. ಮೀನುಗಳ ಹೆಸರುಗಳು:

ನಾಡವರು ತಾವು ತಿನ್ನುವ ಮೀನುಗಳಿಗೆ ತಮ್ಮ ನುಡಿಯಲ್ಲೇ ಹೆಸರಿಸುತ್ತಾರೆ. ಬಂಗ್‌ಡ್ಯ, ತೋರ್ಯ್ನ, ಕಳ್‌ಗ್ಯ, ಇಸ್ವಾಣ, ಬಂಯ್‌ಗ್ಯ, ನುಚ್‌ಕ್ಯ, ನೆಪ್ಯ, ದಿಂಡ್‌ಸ್ಯ, ಬಾಲ್ ಚೊಳಕ್ಯ, ರಾಮ್‌ಸ್ಯ, ಬೈಳಿಂಜ್ಯ, ಕಂದ್ಲ್ಯ, ಸಮ್‌ದಾಳಿ, ತೋರ್‌ಕ್ಯ, ಸೊರ, ಮಡ್ಜಲ್ಯ, ಕರ್‌ಸ್ಯ, ದುಂಡ, ಬಾಳ್ಯ, ಬುಗಡಿ, ಕುಯ್ಡ್ಯ, ಹೀಗೆ ಮೀನುಗಳ ಪಟ್ಟಿ ಬಹಳದೊಡ್ಡದಿದೆ.

೯. ಬಿತ್ತುವ ಬೀಜಗಳು:

ಜೇರಗ್ ಸಾಲಿ, ಗಂದಾಸಾಲಿ, ಸೆಣಬತ್ತ, ಬಿಳಿಯಕ್ಕ, ಪಾಂಡ್ಯ, ಕೆಂಪ್ಯ, ಸಿಣಮಲ್ಗ, ಅಜ್ಗ, ಮಸ್ಕತ್, ಹಲ್ ಸಿಮ್ಯ, ಕಗ್ಗ, ಹಳ್ಗ, ಚಿಂತಾಮಣಿ ಮುಂತಾದ ಬೀಜಗಳು ಇಂದು ಕಣ್ಮರೆಯಾಗಿವೆ. ಈಗ ಮಲಬಾರಿ, ಮಂಗಳ, ಜಯಾ, ಐ ಆರ್ ಏಟ್ ಮುಂತಾದ ತಳಿಗಳು ಚಾಲ್ತಿಯಲ್ಲಿವೆ.

೧೦. ಕಳೆಗಳು :

ಬೆಳೆಯ ಜೊತೆಗೆ ಬೆಳೆಯುವ ಕಳೆಗಳು ಹಲವಾರು:

ಚಿಟ್ಟುಂಬಿ, ನ್ವೊರ್ಯ್ನ, ಕೆಪ್ಪಿಕಾಲು, ಹಣ್ಯ, ಕೊಡಿಬಿಂಬಿ, ಹುಯ್ಡ್‌ಗ್ಯ ಹರ್ಲಿ, ದೊಂಡಗ ಮುಂತಾದವು.

೧೧. ವ್ಯವಸ್ಯಾಯ ಉಪಕರಣಗಳು :

ವ್ಯವಸಾಯಕ್ಕೆ ನೇಗಿಲ ಬಳಕೆಯಾಗುತ್ತದೆ. ಅಡಸಲ, ಈಸನಕಂಬಿ, ನ್ವೊಗ, ನೇಗಿಲ ಕುಳ ಇವು ನೇಗಿಲ ವಿವಿಧ ಭಾಗಗಳು. ಎತ್ತುಗಳನ್ನು ನ್ವೊಗಕ್ಕೆ ಪೆಟ್ಣೆಕಾಲಿನಿಂದ

ಕಟ್ಟುತ್ತಾರೆ. ಹೋಟಿಯಲ್ಲಿ ಹಲಗೆ, ಹಲ್ಕಿಗಳ ಬಳಕೆಯಾಗುತ್ತದೆ. ನೆಲ ಅಗಿಯಲು ಕುಟಾರಿ, ಗುದ್ಲಿ, ಪಿಕಾಸಿ, ಹಾರಿ ಬಳಸುತ್ತಾರೆ. ಮೋಡಿ ಕಟ್ಟಲು ಮೋಡಿ ಕುಡ್ತಿಗೆ, ಹೆಟ್ಟೆ ಜಪ್ಪಲು ಹೆಟ್ಟೆಕುಡ್ತಿಗೆ, ಕೊಯ್ಲಿಗೆ ಹಲಗತ್ತಿ, ಕಡಿಯಲು ಕಡಗತ್ತಿ, ಕಟ್ಟಿಗೆ ಒಡೆಯಲು ಕುಡ್ಲಿ, ಕಾಯಿ ಕೆರೆಯಲು, ಕಾಯಿಪಲ್ಲೆ ಕೊಚ್ಚಲು ಮಿಟಗತ್ತಿ, ಬತ್ತ ಮೆರೆಯಲು ಒನಕೆ, ನೀರೆತ್ತಲು ತೊಲಂಡ ಅಳತೆಗೆ ಕೊಳಗ, ಸಿದ್ದೆ, ಅಳ್ಳ, ಸೊಲಗಿ ಬಳಸುತ್ತಾರೆ.

ನಾಡವರ ಊಟ ತಿಂಡಿ ತಿನಿಸುಗಳು ಅವುಗಳಲ್ಲಿ ಬಳಕೆಯಾಗುವ ಆಹಾರ ವಸ್ತು ವಿಶೇಷಗಳಲ್ಲೆಲ್ಲಾ ನಾಡವರ ಕನ್ನಡದ ಸೊಗಡಿದೆ. ವಿಷಯ ವಿಸ್ತಾರದ ಭಯದಿಂದ ಅವನ್ನಿಲ್ಲಿ ಪ್ರಸ್ತಾಪಿಸುತ್ತಿಲ್ಲ.

೧೨. ಆಭರಣಗಳು :

ನಾಡವರ ಆಭರಣಗಳ ಹೆಸರಿನ ಪಟ್ಟಿಯೂ ಸಾಕಷ್ಟು ದೊಡ್ಡದಿದೆ:

ಮೋಗ್ತಿ, ಗುಟಕಿಮಣಿ, ಕರಿಮಣಿ ಕಾಂಜು, ಬುಟ್ಟು, ಕಾಜಿನ ಬಳೆ, ಮುಗಳು, ಕರಾಪ್ಲಿ, ಕಾಲುಂಗ್ಲ, ಗರತಿಗೆ ಕಡ್ಡಾಯ ಆಭರಣಗಳು. ಇವುಗಳ ಹೊರತಾಗಿ ಪಾವ್ನಸರ, ಕರ್ಜಾತ್ನಸರ ಗಜ್ಜಾಬಿಜ್ಜಿ ಕಾಂಜು, ಬೋರಿಮಣಿಸರ, ಪುತ್ಲಿಸರ, ಏಕದಾನಿ, ಉಜ್ರತಿಕ್ಕಿಗಳು ಕೊರಳಿಗೆ, ಮುಡಿ ಜಡೆಗಳಿಗೆ ಮಲ್ಗಿಮೊಕ್ಕಿ, ಚಿನ್ನದ ಕ್ಯಾಂದ್ಗಿ, ಗುಲಾಬಿ ಹೂಂವುಗಳು ಕಿವಿಗೆ ಗೋಸ್ನ ಮುಗ್ಳು ವಾಲೆ, ತಾರ್‌ಬುಟ್ಟು, ತಾಲೂಕ, ಚಿಂದ್ರಬಾಂಬ್ಲಿ. ಚಿನ್ದಬಳೆ, ಸುರ್ಗಿದಂಡಿಬಳೆ, ಕಡಪತ್ರಬಳೆ, ಕರಿಮಣಿ ಬಳೆ, ಹತ್‌ಕಡಗಗಳು ಕೈಗೆ, ತೋಳಿಗೆ ವಂಕಿ, ಕೋಲ್ಸರಗಿ, ಸೊಂಟಕ್ಕೆ ಪಟ್ನೆವಳ, ದಬ್ಬೆ, ಕಾಲಿಗೆ ಕೋಮನಗೆಜ್ಜೆ, ಚೈನು, ಕಾಲಗಗ್ರ, ಪಡಂಗ ಕೈಬೆರಳಿಗೆ ಉಂಗ್ಲ, ಹಳ್ಳುಂಗ್ಲ ಹೀಗೆ ಪಟ್ಟಿಬೆಳೆಯುತ್ತದೆ. ಗಂಡಸರ ಆಭರಣಗಳಲ್ಲಿ ಉಡದಾರ, ನ್ಯಾವಳ, ಗೋಪು, ಸೊಂಟಕ್ಕೆ, ಕಿವಿಗೆ ಮೂರು, ಹುಟ್‌ಮುರು, ಹಳ್‌ಮುರುಗಳು ಮುಖ್ಯವಾದವು.

೧೩. ಸಾಹಿತ್ಯ :

ನಾಡವರ ಜನಸಾಮಾನ್ಯರು ತಮ್ಮ ಸಾಹಿತ್ಯವನ್ನು ನಾಡವರ ಕನ್ನಡದಲ್ಲಿ ಅಭಿವ್ಯಕ್ತಿಸಿದ್ದಾರೆ. ಅಲ್ಲಿ ಅಭಿವ್ಯಕ್ತಗೊಂಡ, ಕನ್ನಡ ಭಾಷೆಗೆ ಅದರದೇ ಆದ ಅನನ್ಯತೆಯಿದೆ. ಹೊಸ ನಮೂನೆಯ ಕನ್ನಡ ಸೊಗಡಿದೆ. ನಾಡವರ ಕಥೆ, ಹಾಡು, ಗಾದೆ ಒಗಟುಗಳ ಸೊಗಡನ್ನು ಅನ್ಯ ಪ್ರದೇಶದವರು ಆಘ್ರಾಣಿಸಿ ಆಸ್ವಾದಿಸುವುದು ಕೊಂಚ ಮಟ್ಟಿಗೆ ಕಷ್ಟ.

೧೩. ಅ. ಕತೆ :

೧. ನಾಡವರಲ್ಲಿ ಗದ್ಯ, ಪದ್ಯಗಳೆರಡರಲಿಯೂ ಕಥೆಗಳಿವೆ. ಗದ್ಯ ಕಥೆಗಳ ಭಾಷೆ ಕ್ಲಿಷ್ಟವಾಗಿದ್ದು, ನಾಡವರ ಸಾಮಾಜಿಕ ಉಪಭಾಷೆಯ ಸೊಗಡು ಸಾಂದ್ರವಾಗಿದೆ. ಅದನ್ನು ಆಘ್ರಾಣಿಸಿ ಆಸ್ವಾದಿಸುವುದು ಕೊಂಚಮಟ್ಟಿಗೆ ಕಷ್ಟ. ಗಮಿನಿಸಿ:

ಉಂದ್[೧] ಊರ್ನಲ್ಲಿ[೨] ಕಾಕಕ್ಕ ಗುಬ್ಬಕ್ಕ ಈದದ್ರಕಡಾ[೩]. ಕಾಕಕ್ನ ಮನೆ ಸಿಗ್ಣೀ[೪]ದ; ಗುಬ್ಬಕ್ಕಂದ ಕಲ್ಲಂದ. ಉಂದ್‌ದಿನೆ ಕಾಕಕ್ಕಾ ಗುಬ್ಬಕ್ಕಾ ಮಿಂದೆ[೫]. ಕಪ್ಪಾ[೬] ಸಿಳ್ದೆ[೭], ಕಾಕಕ್ಕಾ ಮುಳ್ ಮ್ಯೆನ್ ಕಪ್ಡ ಹರ್‌ಗ್ತ್[೮]. ಗುಬ್ಬಕ್ಕಾ ಕಲ್ ಮ್ಯೆ ಕಪ್ಡ ಹರ್‌ಗ್ತ್. ಕಡಿಗೆ ಎಯ್ಡ್ರ್[೯] ಜನ ಮುಳ್ ಹಣ್ ಕುಯ್ಯೊಕೆ[೧೦] ಬೆಟ್ಕ್ ಹ್ವೊದ್ರ[೧೧]. ಮುಳ್ ಹಣ್ ಕುಯ್ತೆ ಇರ್ವಾಗೆ ದೊಡ್ಡಾ, ದೊಡ್ಡಾ ಮೊಳೆಬಂತ[೧೨].

ಆಗೆ ಎಯ್ಡೂ ಜನಾಓಡೇಡ್ ಬಂದ್ರ. ಗುಬ್ಬಕ್ಕಾ ಕಲ್ ಮ್ಯೆನ್ ಹರ್‌ಗ್ದ ಕಪ್ಡ ಬ್ಯೆಗ್ ತಿಕ್ಕಂಡ್ ಹೋಗೆ ಮನಿಲ್ ಮನಿಕಂತ[೧೩]. ಕಾಕಕ್ಕ ಮುಳ್ ಮ್ಯೆಳ್ ಹರ್‌ಗ್ದ ಕಪ್ಡಾ ತಿಗೂಕ್ ಆಗ್ದೇ ಅಚ್ಚಿಲ್ ಪರ್, ಇಚ್ಚೀಲ್ ಪುರ್ ಆಗ್ ಹರ್ದ್ ಹೋಯ್ತು. ಆಗೆ ಕಾಕಕ್ಕ ಗಡಗಡ ನಿಡಗ್ತೆ[೧೪] 'ಗುಬ್ಬಕ್ಕಾ, ಗುಬ್ಬಕ್ಕಾ ನನ್ ಕಪ್ಡಾ ನಂದ್‌ಹೋಯ್ತು[೧೫], ಮನೆ ಗಯ್ಡ್‌ಹೋಯ್ತು[೧೬], ನಂಗ್ ಮನ್ಗೂಕ್ ಇಟ್ಟೋಡ್[೧೭] ಜಾಗಾ ಕುಡ[೧೮]' ಅಂತ. ಆಗೆ ಗುಬ್ಬಕ್ಕ, ನಂದೆ ನಿಡಗ್ತೇ ಇರುವ ಕಾಕಕ್ನ ನೋಡೆ ಪಾಪ ಅಂದ್ಕಂಡೆ. ಅದ್ಕೆ ಮನ್ಗೂಕೆ ತನ್ನ ಅಕ್ಕೀ ಮಡ್ಕೀಲೆ ಜಾಗ ಕೊಟ್ತ. ತಾನ ತನ್ನ ಮಕ್ಳ ಸಂತೀಗೇ[೧೯] ಬ್ಯೆರೇ ಮನಗ್ತ.

ಗುಬ್ಬಕ್ಕ ಅಕ್ಕೀ ಮಡ್ಕೀಲೆ ಮೂರ್ ಮೊಟ್ಟೀ ಹಾಕತ. ಅದ್ರ ಕಾಕಕ್ಕ ನೋಡೆ. ಉಂದ್ ಮೊಟ್ಟಿ ತಿಕ್ಕಂಡೆ, 'ಕಟ್ ಕಟುಂ' ಅಂದ್ ತೆಂತ[೨೦].

ಆಗೆ ಗುಬ್ಬಕ್ಕ 'ಕಟ್‌ಕಟುಂ ಆಯ್ತು ಅದೇನೆ ಕಾಕಕ್ಕ' ಅಂತ. ಆಗೆ ಕಾಕಕ್ಕ. 'ಗಟ್ಟ್ ಕ್ ಹೋಗೆ ಎಯ್ಡ್ ಗೋಟಡ್ಕಿ ತಂದದೆ, ಉಂದ್ ತೆಂದೆ[೨೧]. ಮತ್ತುಂದ್ ಉಳಿತ ಅಂತ. ಗುಬ್ಬಕ್ಕ 'ಹೌದೆಬೆಲಾ[೨೨]' ಅಂದ್ ಸುಮ್ನೇ ಉಳಿತ. ಮತ್ ತ್ವೊಡಿ[೨೩] ಹುತ್ನ ಮ್ಯೆನೆ 'ಕಟ್‌ಕುಟುಂ' ಅಂತ. ಆಗೆ ಗುಬ್ಬಕ್ಕ, 'ಕಟ್‌ಕಟುಂ ಆಯ್ತು ಅದೇನೆ ಕಾಕಕ್ಕಾ? ಅಂತ. ಆಗೆ ಕಾಕಕ್ಕ 'ಗಟ್ಟ್‌ಕ್ ಹೋಗೆ ಎಯ್ಡ್ ಗೋಟಡ್ಕಿ ತಂದದೆ ಆಗುಂದಾಯ್ತು ಏಗುಂದಾಯ್ತು' ಅಂದೆ ಮೂರೂ ಗುಬ್ಬಕ್ನ ಮೊಟ್ಟಿ ತಿಂದ್ಕಂಡೆ ಮನಿಕಂತ.

ಹೊತ್ರಮುಂಚಿದ್ದೆ[೨೪] ಕಾಕಕ್ಕ ಹೆರ್ಗೆ[೨೫] ಹಾರೋಯ್ತು. ಗುಬ್ಬಕ್ಕ ಅಕ್ಕೀ ಮಡ್ಕೀ ನೋಡದ್ರೆ ಮೊಟ್ಟಿಲ್ಲ. ಮನ್ಸಿಗ್ ಬೆಜಾರಾಗೆ[೨೬], 'ಮಾಡ್ತಿ ಇದ್ಕೆ–ಮದ್‌ಅರಿತಿ[೨೭]' ಅಂತ, ಉಂದ್ ಬಿಳ್ಗಲ್ ಗುಂಡ್ ತಂದೆ ಕಾಸ್ತ. ಮತ್ತೆ ಕಾಕಕ್ನ ಮನಿಗ್ ಉಂಬೂಕ್ ದಿಂಗಯ್ತು[೨೮]. ಕಾಕಕ್ಕ ಕುಸೀಲ್[೨೯] ಬಂತ. ಆಗೆ ಗುಬ್ಬಕ್ಕ 'ಕಾಕಕ್ಕಾ ಉಂಬೂಕ್ ಮುದ್ಲೆ ಈ ಸಿಮೀ ಉಂಡಿ ನುಂಗ, ಹಸುವಾಗ್ ಗನಾಕಟ್[೩೦] ಉಂಬೂಕ್[೩೧]

---

೧ ಒಂದು ೨. ಊರಿನಲ್ಲಿ ೩. ಇದ್ದರಂತೆ ೪. ಸಗಣಿ ೫. ಸ್ನಾನ ಮಾಡಿ ೬. ಸೀರೆ ೭. ಒಗೆದು ೮. ಹರಗಿದ್ದಳು ೯. ಎರಡು ೧೦. ಕೊಯ್ಯಲು ೧೧. ಹೋದರು ೧೨. ಮಳೆಬಂತು ೧೩. ಮಲಗಿದಳು ೧೪. ನಡುಗುತ್ತ ೧೫. ಒದ್ದೆಯಾಯಿತು ೧೬. ಗರಡಿ ಹೋಯಿತು ೧೭. ಸಣ್ಣ ೧೮. ಕೊಡು ೧೯. ಸಂಗಡ ೨೦. ತಿಂದಿತು ೨೧. ನಿಂದೆನು ೨೨. ಹೌದಯೇನೊ ೨೩. ಸ್ವಲ್ಪ ೨೪. ಬೆಳಗೆ ಎದ್ದು ೨೫. ಹೊರಗೆ ೨೬. ಬೇಸರಾಗಿ ೨೭. ಮದ್ದು ಅರೆಯುತ್ತೇನೆ ೨೮. ಕರೆದಳು ೨೯. ಸಂತೋಷದಿಂದ ೩೦. ಬಹಳಷ್ಟು ೩೧. ಉಣ್ಣಲು

ಆತೀದ' ಅಂದೆ ಕಾದ ಬಿಳ್ಗಲ್ಲ ಚಿಪ್ನಲ್[೩೨] ತಕಂಡೆ, ಕಾಕಕ್ನ ಬಾಯಲ್ ಹಾಕ್ತ, ಕಾಕಕ್ಕ ದೊಡ್ಡ ಬಾಯ ತಿಗ್ದ ನುಂಗುವಾಗ, 'ಗುಳ್‌ಗುಳಂ' ಅಂತೇ ಅದ್ರ ಗಂಟ್ಲ ಸುಟ್ಟೆ, ರಟ್ಟಿ ಪಟ ಪಟ ಬಡ್ದೆ[೩೩], ಕಣ್ ಪಿಳಿ ಪಿಳಿ ತಿರಗಸ್ತೇ ಕಾಕಕ್ಕ ಪಡ್ಚ[೩೪]. ಸುಳ್‌ಹೇಳ್ ಮ್ಹೊಸಾ[೩೫] ಮಾಡ್ವರಿಗಾಗೂ[೩೬] ಗತೆ[೩೭] ಇದೇಯ. 'ಕಾಗಕ್ಕ ಗುಬ್ಬಕ್ಕ' ಎಂಬ ಹೆಸರಿನಲ್ಲಿ ಈ ಕಥೆ ಕನ್ನಡ ನಾಡಿನಲ್ಲಿ ಪ್ರಸಿದ್ಧವಾಗಿದೆ.

೧೩. ಅ. ೨. ಕತೆ ಹಾಡುಗಳು:

ನಾಡವರಲ್ಲಿ ಇಂದು ಕತೆಯ ಹಾಡುಗಳು ದುರ್ಲಭವಾದರೂ, ಹಿಂದೆ ಆ ಹಾಡುಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿದ್ದವು. ಸಾಮಾನ್ಯವಾಗಿ ಈ ಹಾಡುಗಳು ತುಂಬೆ ತುಂಬೆ, ಸುವ್ವೇಲಾಲೇ, ಲೋಲೋ ಲೋಲುಂಬೆ, ಹೂವೆ ನಂದನವೆ, ರಾಮ ರಾಮ ಈ ಮುಂತಾದ ಪಲ್ಲವಿಗಳನ್ನೊಳಗೊಂಡಿದ್ದು ರಗಳೆಗಳಂತೆ ಮುಂದುವರಿಯುತ್ತವೆ. ಕೆಲವು ಪಲ್ಲವಿ ರಹಿತವಾಗಿರುವುದೂ ಉಂಟು. ಕ್ವಚಿತ್ತಾಗಿ ಕೆಲವು ಕಥೆಗಳು ತ್ರಿಪದಿಯಲ್ಲಿಯೂ ಕಾಣಿಸಿಕೊಂಡಿವೆ.

ಈ ಹಾಡುಗಳು ನಾಡವರ ಕನ್ನಡ ಭಾಷೆಯ ಸೊಗಡಿನ ಅಸಲುತನವನ್ನು ಹೊಂದಿದ್ದು ಆಕರ್ಷಕವಾಗಿವೆ:

ಉದಾ:

೧. ಕಗ್ಗಲ್ಲಾ ಕರ್ಗಲ್ಲಾ ಅರ್ಸುಮಗ್ಳ ಸುವ್ವೇಲಾಲೇ
ನಾಗೋರ ಬಯ್ಲೀಗ್ ಹ್ವೊದಾಳ ಸುವ್ವೇಲಾಲೇ
ನೀರ ಕೊಡನಾ ತುಂಬೀದಾಳ ಸುವ್ವೇಲಾಲೇ
ಗೊಲ್ಲಾರಾ ಕೋಸನೇ ಸುವ್ವೇಲಾಲೇ

....

೨. ಹಿತ್ತಲ ಒಳಮ್ಯೆನ್ ಹೆಬ್ಬಾವ್ ಬಂತತ್ತೆ ಲೋಲೋಲೋಲುಂಬೆ
ಹೆಬ್ಬಾವ್ ಬಂದಾರ್ ಹೆಡ್ಗೀಲ್ ಮುಚ್ಚಂತ್ ಲೋಲೋಲೋಲುಂಬೆ
ಹೆಡಗೀಲದರ ಮುಚ್ಚಾಳಕ್ಕ ಲೋಲೋಲೋಲುಂಬೆ
ಹಿರಿಗತ್ತಿ ಕೊಟ್ಟಾಳತ್ತಿ ಲೋಲೋಲೋಲುಂಬೆ

....

೩. ಅಣ್ಣಾ ಕಂಚೀಲುರಾಯಾ
ತಮ್ಮಾ ನಿಂಬೀಲುರಾಯಾ
ಕಂಚೀಲು ರಾಯನ ಮಡದೇ
ಹಳವಳಮ್ಮ ದೇವೀಯೋ

....

---

೩೨. ಸವಟಿನಲ್ಲಿ ೩೩. ಬಡಿದು ೩೪. ಸತ್ತುಹೋಯಿತು ೩೫. ಮೋಸ ೩೬. ಮಾಡುವವರಿಗಾಗುವ ೩೭. ಗತಿ

೪. ಹಾದೀಮ್ಯೆನ್ ಹೋಗ್ವವನೆ ದಾಳಿಂಬ ಮೊಕದವ್ನೆ
ಹಾದೀಗ್ ತೋರೆಲಿಯಾ ಮೆಲುವವ್ನ। ಕಯ್ಯಲೆ
ಎಲಿಯಾ ಬೇಡಿದಳೆ ಎಳನಾರೆ।

....

೧೩. ಆ. ಹಾಡು :

ನಾಡವರ ಹೆಂಗಸರು ಹಿಂದೆ ಬತ್ತ ಮೆರೆಯುವಾಗ, ತೊಟ್ಟಿಲು ತೂಗುವಾಗ, ಮಕ್ಕಳನ್ನು ಮಲಗಿಸುವಾಗ, ಹಿಟ್ಟು ಬೀಸುವಾಗ, ಭಾವಗೀತಾತ್ಮಕ ತ್ರಿಪದಿಗಳನ್ನು ಹಾಡುತ್ತಿದ್ದರು. ಕಳೆ ಕೀಳುವಾಗ, ಸಸಿ ನಾಟಿ ಮಾಡುವಾಗ ಕಥನ ಪರ ಹಾಡುಗಳನ್ನು ಹಾಡುತ್ತಿದ್ದರು. ಹಿಂದಕ್ಕೆ ಬೇಸಿಗೆಯಲ್ಲಿ ಬತ್ತ ಮಿರಿಯುವಾಗ ನಾಡವರ 'ಒ(ಉ)ಳ್ಳಂಗಳ' ನಿತ್ಯವೂ ವಸಂತಗೀತೋತ್ಸವದ ರಂಗ ಮಂಟಪವಾಗುತ್ತಿತ್ತು. ಆದರೆ ಇಂದು ನಾಡವರ ಅಂಗಳದಲ್ಲಿ 'ಉಳ್ಳೊ' ಒನಕೆ 'ಒಡಗಲ್ಲು' ಯಾವುದೂ ಇಲ್ಲ. ಹಾಡು ಇಲ್ಲ. ಆದರೂ ಕ್ವಚಿತಾಗಿ ನಾಡವರ ಗರತಿಯರ ಬಾಯಲ್ಲಿ ಅಚ್ಚ ಕನ್ನಡ ಸೊಗಡಿನ ಸತ್ವಪೂರ್ಣವಾದ ಕೆಲವು ಹಾಡುಗಳು ಇನ್ನೂ ಉಳಿದುಕೊಂಡಿವೆ.

ಆ. ೧ ಬತ್ತ ಮಿರಿಯುವ ಹಾಡು :

ಹೊಟ್ಟೀಲುರ[೧] ಬಂದಾರೇ ಕುಡ್ವೇ[೨] ನಾ ತಣ್ಣೀರಾ
ಹಿಡ್ವೇ ಚಂದನದಾ ಒನಕೀಯಾ। ದ್ಯೆವಾರೇ
ಒಡ್ಲಾ ಬ್ಯಾಗಣಿಯಾ[೩] ಸುರ್ಗೂವೆ[೪]।

ಸಂಕಟದ ಉರಿ ಬೇಗೆಯಿಂದ ಬೇಯುವ ಗರತಿಯೊಬ್ಬಳು, ತಣ್ಣೀರನ್ನು ಕುಡಿದು ತಂಪಾದ ಚಂದನದೊನಕೆಯನ್ನು ಹಿಡಿದು, ತನ್ನ ಹೊಟ್ಟೆಯ ಸಂಕಷ್ಟವನ್ನೆಲ್ಲಾ ಹಾಡಾಗಿ ಪರಿವರ್ತಿಸಿ ಸೊರಹಿದ್ದು ಇಲ್ಲಿ ಅನ್ಯಾದೃಶವಾಗಿ ಪಡಿಮೂಡಿದೆ. ಅವಳು ಪಟ್ಟ ಪಾಡೆಲ್ಲ ಹಾಡಾಗಿ ಹುಟ್ಟಿ ಹೊರಹೊಮ್ಮುವ ಪರಿ ಬೆರಗು ಹುಟ್ಟಿಸುವಂತಿದೆ.

ಕಟ್ಟಾ[೫] ಹೇಳೂವಾಕೇ ಅಕ್ಕಾ ತಂಗ್ದೀರಿಲ್ಲಾ
ಮುಚ್ಚಾ ಮಡ್ಕೀಲೇ ಇಸ್ರಕ್ಕೆ[೬] ಬೇವರಿಂಗೆ
ಬೇಯೂವೆನಮ್ಮಾ ಒಡ್ಲಲ್ಲೇ।

ತನ್ನ ಕಷ್ಟ ಸುಖಗಳನ್ನು ಹೇಳಿಕೊಳ್ಳಲು ಆಪ್ತ ಅಕ್ಕ ತಂಗಿಯರಿಲ್ಲದೆ ಗೋಳುಂಡೆಗೊಳಗಾಗಿ ಮುಚ್ಚಿದ ಮಡಿಕೆಯಲ್ಲಿ ಎಸರಕ್ಕಿ ಬೇಯುವಂತೆ ಬೇಯುವ ಹೆಣ್ಣಿನ ಪಾಡ ಹಾಡಿದು. ಈ ಸಂದರ್ಭದಲ್ಲಿ ರನ್ನ ಕವಿಯ 'ಕೂಳ್ ಕುದಿವಂತೆ' ಹಾಗೂ ಭವಭೂತಿಯ 'ಪುಟಪಾಕಾಗ್ನಿ' ಮುಂದಾದ ಪದ ಪ್ರಯೋಗಗಳನ್ನು ನೆನೆಪಿಸಿಕೊಳ್ಳಬೇಕು.

---

೧. ಹೊಟ್ಟೆಲ್ಲಿ ಉರಿ ೨. ಕುಡಿಯುವೆ ೩. ಬೇಗೆಯನ್ನು ೪. ಸೊರಹುವೆ ೫. ಕಷ್ಟ ೬. ಎಸರಕ್ಕಿ

೧೩. ಆ. ೨ ಬೀಸುಹಾಡು :

ಹಿಣ್ಣಿ ಹುಟ್ಟೀದಂದೇ ಎಣ್ಣಾದಿರ್[೭] ಮನ್ದಲ್ಲೇ
ಹಿಣ್ಣಲ್ಲಾ ಹೊನ್ನಾಕಳ್ಸಾವೇ। ಅಣ್ಣಯ್ಯಾ
ಹಿಣ್ಣೀನಿಂದ್ ಹಿಸ್ರ್[೮] ನಿಡ್ವದ್[೯]।

ಮಾತೃಪ್ರಧಾನ ಸಂಸ್ಕೃತಿಗೆ ಸೇರಿದವರಾದ ನಾಡವರು ಹೆಣ್ಣನ್ನು ಹೊನ್ನಕಳಸ, ಸಂತಾನ ಮುಂದುವರಿಸಿ, ಮನೆತನದ ಹೆಸರು ಮೆರೆಸುವವಳೆಂದು ಬಗೆಯುತ್ತಾರೆ.

ಮಗ್ರೂವ[೧೦] ಅಕ್ಕೀಗೇ ತುಳ್ದೀ[೧೧] ಅಕ್ಕೀ ಹುವ್ವೆ[೧೨]
ಮಗ್ರೂವೆ ಕಡ್ಲಾ ತೆರಿಹಂಗೇ[೧೩]। ಯಮರಾಯ್ನ
ಮಗ್ಳೂ ನನ್ನಂತೇ ಮರ್ಗಾಲೇ

ಗಂಡನನ್ನು ಕಳೆದುಕೊಂಡು ಅಸಾಧಾರಣ ನೋವಿನಿಂದ ಭೋರ್ಗುಡುವ ಹೆಣ್ಣಿನ ನೋವಿನ ಹೆದ್ದೆರೆಯನ್ನು ಮೇಲಿನ ಹಾಡಲ್ಲಿ ಕಾಣಬಹುದು.

೧೩. ಆ. ೩ ಭಕ್ತಿ ಹಾಡು :

ಮಂಜೂ ಕರಿಯೀತಂದೇ ಅಂಜೂತೇ ನಾ ಬಂದೆ
ಮಂಜಲ್ಲಾ ಮೊಳಿಯಾ[೧೪] ಹನಿಯಲ್ಲಾ। ಜೇನೊಡಿಯಾರ[೧೫]
ಮಿಂದೇ[೧೬] ಚಿಂಡಕಿಯಾ[೧೭] ಸೆಳದಾರ[೧೮]।

ಬೆಳಗಿನ ಮಂಜುಹನಿ ತನ್ನ ಇಷ್ಟದೈವತವಾದ ಜೈನ ಬೀರನು ತನ್ನಚೆಂಡಿಕೆಯನ್ನು ಒಗೆದು ಬೀಸಿದಾಗ ಸಿಡಿದ ಸೀರ್ಪನಿಯೆಂದು ಗರತಿ ಪರಿಭಾವಿಸುವಲ್ಲಿ ಅಪಹ್ನುತಿ ಅಲಂಕಾರದ ಸಹಜ ಸೊಗಸಿದೆ.

ಕೆಂಬರ್ಗಿ[೧೯] ಸುಪ್ಪೀನಾ[೨೦] ರಸವಾ ಕಂಡಂಜೀದೆ
ಸಿಸುವಾ ಕಾಳಗಕೆ ಕಳಗೀದೆ । ಜೇನೋಡಿಯಾರೆ
ಕುಸಿಯಾಗೆ ನಿಮ್ಮ ಮನಸೀಗೆ ।

ಮನೆಯಲ್ಲಿ ಕೆಂಪು ಹರಿವೆಯನ್ನು ಕೊಚ್ಚುವಾಗ ಅದರ ಕೆಂಪು ರಕ್ತದಂಥ ರಸವನ್ನು ಕಂಡು ಕಾಳಗಕ್ಕೆ ಹೋದ ಮಗನ ನೆನಪಾಗಿ, ಅವನ ರಕ್ಷಣೆಯ ಭಾರವನ್ನು ಪ್ರಸನ್ನ ವದನನಾಗಿ ಅವಳ ಕುಲದೈವ ಜೈನಬೀರನೇ ಹೊರಬೇಕೆಂದು ಗರತಿ ಪ್ರಾರ್ಥಿಸುತ್ತಾಳೆ.

---

೭. ದುಃಖಿಸದಿರು ೮. ಹೆಸರು ೯. ಮುಂದುವರಿಯುತ್ತದೆ ೧೦. ಕುದಿಯುವ ೧೧. ತೊಳೆದು ೧೨. ಹೊಯ್ಯುವೆ ೧೩. ಕಡಲಿನ ತೆರೆಯಂತೆ ೧೪. ಮಳೆಯ ೧೫. ಜೈನಬೀರದೇವತೆ ೧೬. ಸ್ನಾನಮಾಡಿ ೧೭. ಚಂಡಿಕೆ ೧೮. ಝಾಡಿಸಿದರು ೧೯. ಕೆಂಪು ಹರಿವೆ ೨೦. ಸೊಪ್ಪು

೧೩. ಆ. ೪ ಮದುವೆ ಹಾಡು: ನಾಡವರಲ್ಲಿ ಅತ್ಯಾಕರ್ಷಕವಾದ ಅಚ್ಚಗನ್ನಡ ಸೊಗಡಿನಿಂದ ಲಕಲಕಿಸುವ ನೂರಾರು ಮದುವೆಯ ಹಾಡುಗಳಿವೆ.

ಹೆಣ್ಣಿಗೆ ಹೂ ಮುಡಿಸುವ ಸಂದರ್ಭ:

ಅಂಚೇಳ್[೨೧] ಸಮ್‌ದ್ರದ ಕಂಚಾಮಿಟ್[೨೨] ನಾವ್‌ಬಂದು
ಪಂಚ್‌ಬಣ್ಣಗಿಯಾ[೨೩] ಹರಿಯಾಳಾ[೨೪]। ತುಂಬೀಕಂಡೇ
ನಿಸ್ತ್ರಿಗ್[೨೫] ಬಂಗಾರ್‍ವಾ ಎಡಬಂದು[೨೬]।
ಕಾಲಂಗ್ಲಕೆ ಮುತ್ತೇ ಕೀಲು ಕಡಗಕೆ ಮುತ್ತೇ
ಸೇರೀಗೆ[೨೭] ಮುತ್ತೇ ಸಿರಗೀಗೆ। ಮುತ್ತೆಟ್ವಾ
ನಾರೀಗ್ ಬಂಗಾರ್‍ವಾ ಎಡಬಂದು

ದಿಬ್ಬಣದ ಸಡಗರ :

ಗಿಂಡೇ ಗಿಡ ಬಿಡಿಯೇ[೨೮] ಎಂಬತ್ತು ದಂಡೂಗೆ
ಮುಂದೆ ಬಾರತದ ಸಮಜೋಡ। ದಿನಿಕೇಳೆ
ಬಾರದೆದ್ದವ್ರು[೨೯] ಬರುವಾರೇ।
ಕುದ್ರೇ ಕುದ್ರೇ[೩೦] ಮುಂದೆ ಕುದ್ರೀಯಾ ಮರಿಮುಂದೆ
ಚೆದ್ರೇ[೩೧] ನನ್ನಮ್ನ ಮಗ ಮುಂದೆ। ಹೋಗುವಾಗೇ
ಪಟ್ನಾದಲ್ ದೈವರೊಲದಂಗೆ[೩೨]।
ದೊರಗೋಳ್ ದಿಬ್ಬಣ್ವೇ। ಕಿತ್ತಿಟ್ಟೇ[೩೩] ಬರುವಾಗೇ
ಗ್ವೊವೀಯಲೆದ್ದಾ[೩೪] ಸರ್ಪಾನೇ। ಬೋರೆಟ್ಟಂಗೇ
ಮಾರಾಯ್ರ ಹಡಗ್ಗತ್ತೇ ಬರುವಾರ

ಹೆಣ್ಣೊಪ್ಪಿಸುವುದು :

ಉಪ್ಪರಗಿ ಒಳಗೀನ ಚಿತ್ತಾರದ ಬೊಂಬೀಯ[೩೫]
ಚಿಚ್ಚೀಕಂಡದರಾ[೩೬] ಕರತಾರೋ। ಮಾವಯ್ಯ
ಮಾರಾಯಾ[೩೭] ಬಂದಾನೋ ಮುದವೀಗೆ[೩೮]

---

೨೧. ಏಳುದಂಡೆ ೨೨. ತುದಿಯನ್ನು ಮೆಟ್ಟಿ ೨೩. ಐದು ಬಗೆಯ ೨೪. ಹರಿವಾಣ ೨೫. ಹೆಣ್ಣಿಗೆ ೨೬. ಇಡಲು ೨೭. ಸೀರೆಗೆ ೨೮. ಗಿಂಡಿ, ಗಿಡಿಬಿಡಿ ವಾದ್ಯಗಳು ೨೯. ಬರದಿದ್ದವರೂ ೩೦. ಕುದುರೆ ೩೧. ಚದುಗೆ ೩೨. ದೇವರು ಮೆರೆದಂತೆ ೩೩. ಎದ್ದು ೩೪. ಗೋವೆಯಲ್ಲಿದ್ದ ೩೫. ಚಿತ್ರದ ಗೊಂಬೆಯನ್ನು ೩೬. ಅವಳನ್ನೆತ್ತಿಕೊಂಡು ೩೭. ಮಹಾರಾಜ ೩೮. ಮದುವೆಗೆ

ಧಾರೆ ಮಂಟಪದಲ್ಲಿ ಹೆಣ್ಣಿನ ಆಗಮನಕ್ಕಾಗಿ ಕಾಯುತ್ತಿದ್ದ ಮದುಮಗನೆಡೆಗೆ ಚಿತ್ರದ ಗೊಂಬೆಯಂತಿರುವ ಹೆಣ್ಣನ್ನು ಕರೆತರುವವನು ಹೆಣ್ಣಿನ ಸೋದರ ಮಾವ. ಅಲಂಕಾರದ ರಭಸಕ್ಕೆ ಬಾಗಿ ಬಳಕುವ ಮದುವಣಗಿತ್ತಿಯ ಚಿತ್ರವನ್ನು ನೋಡಿ:

ಪಟ್ಟೇಯ ಸೇರೀಗೇ ಕಸ್ತೂರಿ ರಬಸಾಕೆ[೩೯]
ಬಾಡಿತ ನಿಮ್ಮಗಳ ಬಳಕೀತ। ಉಳಗಾದವ್ರೆ[೪೦]
ಹೋಗೇ ದಾಳಸರೇ[೪೧] ಚವಲಾವ।

ತುಪ್ಪ ಅನ್ನವನ್ನುಂಡ ಮಗಳನ್ನು ಗಂಡಿನವರಿಗೆ ಒಪ್ಪಿಸಿಕೊಡುತ್ತಾರೆ.

ತುಪ್ಪನ್ನೊಂಡಾ ಮಗಳ ಉಪ್ಪರಗಿಲುರಗಿದ ಮಗಳ
ಇಟ್ಟೊ[೪೨] ಬುದ್ದಿಗಳಾ ಅರಿಯಾಳೇ। ನನ್ನಮ್ಮಾ
ಪುತ್ರನಪ್ಪಂತೆ[೪೩] ಸಲೀಕಣಿ[೪೪]।

ಗಂಡಿನವರಿಗೆ ಒಪ್ಪಿಸಿಕೊಟ್ಟ ಮಗಳು ಹೋಗುವುದನ್ನು ತಾಯಿ ಕೋಟೆ ಹತ್ತಿ ನೋಡುತ್ತಿದ್ದಾಳೆ.

ಕೊಟ್ಟಾ ಮಗಳ್ಹೋಗ್ವಾಗೇ ಕ್ವಾಟೀಹತ್ ನೋಡಾಳ
ಕೊಟ್ಟಾ ಮಗಳ ಕ್ವಾಟ್ಟೀ ಗಳದಾಳ। ಅಂಬುದ ಮಾಡೇ
ಕಡಗಣ್ಣಲ್ ಕಣ್ಣೀರಾ ಬಿಡುವಾಳ।

ಮಗಳ ಅಗಲುವಿಕೆಯ ಮಧುರ ಯಾತನೆಯಿಲ್ಲಿ ಮಡುಗಟ್ಟಿದೆ.

ಉತ್ತುಮ್ನ ಮಗ್ಳೇ ಮುತ್ತ ಜೋಗುಳಿಗ್ಹೊಯ್ಯೇ[೪೫]
ಸೋಕಾಡುತ ಬಾರೇ ಬಯಲಲ್ಲೇ। ಬಾವಿಕೇರಿ
ಮುತ್ತು ರಾಜಣವೇ[೪೬] ಬಿಳಿಯಾಲಿ.

ನವವಧುವಿನ ಆಗಮನದಿಂದ ಊರು ಸಮೃದ್ಧಿಯಾಗಲೆಂಬ ಹಾರೈಕೆ ಹಾಡಿನಲ್ಲಿದೆ.

ಹಳ್ಳದ್ಹಾಡು : ಮದುವೆಯಲ್ಲಿ ಬೀಗರೂಟದ ಸಮಯಕ್ಕೆ ಹೊಸನೆಂಟರು ಪರಸ್ಪರ ಹಳಿದು ಹಾಡುವ ಪ್ರಸಂಗ ಹಾಸ್ಯ ಪೂರ್ಣ.

ಗಡ ಗಡನೇ ಬಂದಾಳೇ ಗುಡಿಹಂಗೇ ಕೊಳತಾಳೇ[೪೭]
ಚೆಂಬೀನಂತ್[೪೮] ಮುದ್ದೀ ನೆಗದಾಳೇ[೪೯]। ನಂಟೂತೇ[೫೦]
ನಿನ್ಹೊಟ್ಟೆ ಏಗೆಂತ[೫೧] ಕೆರೆಬಾವೆ[೫೨]।

---

೩೯. ರಭಸಕ್ಕೆ ೪೦. ಊಳಿಗದವರೇ ೪೧. ಬೀಸಿರಿ ೪೨. ಇಷ್ಟೊ ೪೩. ಮಗನಂತೆ ೪೪. ಸಲಹಿಕೊಳ್ಳಿ ೪೫. ಜೋಳಿಗೆಗೆ ೪೬. ಒಂದು ಬಗೆಯ ಧಾನ್ಯ, ರಾಜಾನ್ನ ೪೭. ಕುಳಿತಳು ೪೮. ತಂಬಿಗೆಯಂಥ ೪೯. ಎತ್ತಿದಳು ೫೦. ಬೀಗತಿ ೫೧. ಈಗ ಎಂಥ ೫೨. ಕೆರೆಭಾವಿಯಾಗಿದೆ

ತಂಬಿಗೆಯಂಥ ಅನ್ನದ ಮುದ್ದೆಯನ್ನು ನುಂಗುವ ಕೆರೆಬಾವಿಯಂಥ ಹೊಟ್ಟೆಯವಳೆಂದು ಹಾಡುಗಾರ್ತಿಯಿಂದ ಪರಿಹಾಸ್ಯಕ್ಕೊಳಗಾದ ಬೀಗತಿಯೂ ಸುಮ್ಮನುಳಿಯುವುದಿಲ್ಲ. ತನ್ನ ಹಾಡಿನ ಹಾಸ್ಯ ಚಟಾಕ್ಷಿಯಿಂದಲೇ ಎದುರಾಳಿಯ ಬಾಯಿ ಮುಚ್ಚಬಯಸುತ್ತಾಳೆ.

ಹಳಸೀದಕ್ಕಿಯನ್ನು[೫೩] ಕುಳಕ[೫೪] ನಿಲ್ಲೀಕಾಯ
ಅಳಗೇ[೫೫] ಪಾಯಸವೇ ಮುಗಳಕ್ಕೆ। ಹುಳ್ಗಾವೇ[೫೬]
ರಾಡೀ ನೀರಾಗೇ ಹರದೀದ।

ಮದುವೆಯ ಕೊನೆಯಲ್ಲಿ ಸುಮಾರು ಒಂದು ತಿಂಗಳ ಪರ್ಯಂತ 'ಹಸಗೆರೆ'ಯ ಮುಂದೆ ಹಾಡುವ ಹಾಡುಗಳು ಅತ್ಯಾಕರ್ಶಕವಾಗಿದ್ದು ನಾಡವರ ಸಂಸ್ಕೃತಿಯನ್ನು ಪ್ರತಿಫಲಿಸುತ್ತವೆ:

ಕತ್ತೀಯ ಆಟವೇ ನಿಸ್ತ್ರೀಯ ಗಂಡಾಗೆ
ಕತ್ತೀ ತಪ್ಪಿದರೆ ಗರಡೀಯೆ। ಜೂಜಿನಾಟಾ
ನಿಸ್ತ್ರಿನನ್ನಮ್ಮಾ ಅರಸಾಗೇ.

ಇಂಥದೇ ಬಗೆಯ ಹೋಮ, ಬಸುರಿ, ಬಾಳಂತಿ, ನಾಮಕರಣ, ಚ್ವೊಳಂಗಿ ಮುಂತಾದ ಜೀವನಾವರ್ತನಗಳಿಗೆ ಸಂಬಂಧಿಸಿದ ನೂರಾರು ಹಾಡುಗಳಿದ್ದವು. ಈಗ ಅವೆಲ್ಲ ಇಂದು ನಾಡವರಲ್ಲಿ ಕಣ್ಮರೆಯಾಗಿವೆ.

ಮಕ್ಕಳ ಹಾಡುಗಳು : ಮಕ್ಕಳ ಹಾಡುಗಳು ಹಿರಿಯರು ಮಕ್ಕಳಿಗಾಗಿ ಕಟ್ಟಿಕೊಟ್ಟವುಗಳಾಗಿವೆ. ಮಕ್ಕಳು ಹಿರಿಯರ ಹಾಡುಗಳನ್ನು, ಆಲಿಸಿ ಸುಖಿಸುತ್ತಾರೆ, ನಿದ್ರೆ ಗೈಯ್ಯುತ್ತಾರೆ. ಕ್ರಮೇಣ ಬೆಳೆದು ದೊಡ್ಡವರಾಗುತ್ತ, ಅವನ್ನು ತಾವೂ ಕ್ರೀಯಾರೂಪಕ್ಕಿಳಿಸುತ್ತಾರೆ. ಅಂಥವುಗಳಲ್ಲಿ ತೊಟ್ಟಿಲು ತೂಗುವಾಗ ಹಾಡುವ ಲಾಲಿ ಹಾಡುಗಳು ಪ್ರಮುಖ ಕೆಲವು ಆಟದ ಹಾಡಗಳೂ ಇವೆ.

೧೩. ಆ. ೫. ತೊಟ್ಟಿಲು ತೂಗುವ ಹಾಡು :

ತೂಗೂ ತುಟ್ಟಕೆ ತುಂಬೀ ಹೂಂವ್ನಗೆಜ್ಜೆ[೫೭]
ನಾವ್ ತೂಗಿ ಕಡ್ಲಾ[೫೮] ತೆರ್‌ತೂಗಿ। ಬಾಲಯ್ಯಾ
ದೇವತ್‌ಗೋಳ್[೫೯] ತೂಗಿ ಮನಗೀದಾ[೬೦].

ತೊಟ್ಟಿಲಲ್ಲಿ ಮಲಗದೆ ಚಂಡಿತನ ಮಾಡುವ ಮಕ್ಕಳನ್ನು ಕಾಲಮೇಲೆ ಮಲಗಿಸಿ ಬೆನ್ನು ಸವರಿ,

---

೫೩. ಹಳಸಿದ ಅನ್ನ ೫೪. ಕೊಳೆತ ೫೫. ಮಡಿಕೆಯ ಹೆಸರು ೫೬. ಸಾಂಬಾರು ೫೭. ಹೂವಿನ ಗೆಜ್ಜೆ ೫೮. ಸಮುದ್ರದ ೫೯. ದೇವತೆಗಳು ೬೦. ಮಲಗಿದ

ಹಯ್ ಹಾತ್ ಹಯ್ ಹಾತ್[೬೧]

ನಿದ್ದೂರೇ[೬೨] ಬಂದಾವೇ ನನ್ನ್ ಮುದ್ದೂ ಬಾಲಯ್ಗೇ

ನಿದ್ದೂರಿಯಲ್ಲಾ ನಿದ್ವಾನ್ನಾ[೬೩]। ಗ್ಗೊಕನ್ನಾ

ಸಿದ್ದವ್ರು ಕೊಟ್ಟ ಶಿವ ದ್ಯೆನಾ।

ಹಯ್ ಹಾತ್ ಹಯ್ ಹಾತ್.

ತಾಯಿಯ ಹಾಡಿನುಲಿಗೆ ಮಗು ಸಾವಕಾಶ ನಿದ್ದೆ ಹೋಗುತ್ತದೆ. ಆದರೆ ಗರತಿಯ ಪ್ರಾತಿಭದೃಷ್ಟಿಗೆ ಮಗುವಿನ ನಿದ್ದೆ ಕೇವಲ ನಿದ್ದೆಯಾಗಿ ಕಾಣುವುದಿಲ್ಲ. ಗೋಕರ್ಣದ ಸಿದ್ಧರು ಕೊಟ್ಟ ಶಿವಧ್ಯಾನವಾಗಿ ಕಾಣಿಸುತ್ತದೆ.

ಕೆಲವೊಮ್ಮೆ ಮಕ್ಕಳು ಇನ್ನೂ ಚಂಡಿ ಹಿಡಿದು ಅತ್ತಾಗ ತಾಯಂದಿರು ಕಣ್ಣಿಗೆ ಕಾಣದ ಜನಪದ ಕವಿ ಸಮಯದ 'ಹುಮ್ಮ'ನ ಬೆದರಿಕೆಯೊಡ್ಡಿ ಮಕ್ಕಳನ್ನು ಮಲಗಿಸುವುದೂ ಇಲ್ಲದಿಲ್ಲ:

ಹಾಹಾಹೋಮ್ಮಾ। ಹುಮ್ಮಕೊಂದವ್ರ್ ಯಾರ?

ಹುಮ್ಮಗ್ ಮೂರ್ ಮರೆ।

ಈ ಬಗೆಯ ಬೆದರಿಕೆಯಿಂದ ಮಲಗಿದ ಮಕ್ಕಳು ಭೂತಾಕಾರದ ಗುಮ್ಮನನ್ನೇ ಕಂಡು ಬೆಚ್ಚಿ ಬೀಳುವುದೂ ಉಂಟು.

೧೩. ಆ. ೬. ಆಟದ ಹಾಡುಗಳು :

ಮಕ್ಕಳನ್ನು ಕಾಲಮೇಲೆ ಕೂಡ್ರಿಸಿಕೊಂಡು, ಹಿರಿಯರು ತಾವು ತಮ್ಮ ಕೈತೋಳನ್ನು ತೂಗುತ್ತ

ತೋಳೇ ತೋಳೇ

ತೋಳನಾಡಿ ಬಾಂದಾಳಮ್ಮ।

ಒಟ್ಟಾ[೬೪] ದಿಟ್ಟಿ ಬೆಟ್ಟಾಳಮ್ಮ[೬೫]

ಹಳ್ಳಾ ಹುಕ್ಕೇ[೬೬] ಮೆಂದಾಳಮ್ಮ[೬೭]

ಅಪ್ಪಾ ಅವ್ವಿ ಕುಲ್ವರಂದೇ[೬೮]

ಓಡೇ ಓಡೇ ಬಂದಾಳಮ್ಮ

ಕಾಲು ನೀಡಿ ಮಕ್ಕಳನ್ನು ಕಾಲಿನ ಮೇಲೆ ಕೂಡ್ರಿಸಿಕೊಂಡು ಎಡಗೈಯಲ್ಲಿ ಮಗುವಿನ ಹಿಂದಲೆ ಹಿಡಿದು, ಬಲಗೈಯನ್ನು ಹೊಟ್ಟೆಗೆ ಆನಿಸಿ, ಆನೆ, ಆನೆ ಎಂದು ಮಕ್ಕಳನ್ನು ಹಿಂಜೋಲಿ ಹಾಗೂ ಮುಂಜೋಲಿ ಹೊಡೆಸುತ್ತ ಹಾಡುತ್ತಾರೆ.

---

೬೧. ಹಾಡಿನ ಶ್ರುತಿ ಪಲ್ಲವಿ ೬೨. ನಿದ್ದೆ ೬೩. ನಿಧಾನ ಗುಪ್ತ ಸಂಪತ್ತು ೬೪. ಉಟ್ಟ ೬೫. ಬಿಚ್ಚಿದಳು ೬೬. ಪ್ರವೇಶಿಸಿ ೬೭. ಸ್ನಾನಮಾಡಿದಳು ೬೮. ಹೊಡೆಯುವರೆಂಬ

ಆನ್ ಬಂತ್ ಆನೇ,

ಯಾವೂದಾನೆ? ಕೊಲ್ಲಾಪೂರಾನೆ

ಇಲ್ಲೀಗ್ಯೆಕೆ ಬಂತ? ಹಾದಿ ತಪ್ಪೇಬಂತ

ಆನೀ ಕಟ್ಟೂಕ್ ಕಂಬಿಲ್ಲ, ತೇಗ್ನ ಕಂಬಕಡ್ತನ್ನಿ

ಆನೀ ಬಿಗೂಕ್ ಬಳ್ಳಿಲ್ಲ, ಬಚ್ಲಬಳ್ಳಿ ಉಗ್ತನ್ನಿ

ಹೊಳೀಲಾಡು ಬಾಲಯ್ನ ಕರ್‌ತನ್ನಿ

ಆನಿ ಕಟ್ಟಿ ಆಡೂಕೆ.

ಇದೇ ಬಗೆಯ ಆನ್ ಬಂತ್ ಆನೇ ಎಂಬ ಹಾಡು ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿದೆಯಾದರೂ ಅಲ್ಲಿ ಬರುವ ಆನೆ ವಿಜಾಪುರದ 'ಆದಿಲ್ ಶಾಹಿ'ಗೆ ಸೇರಿದ ಆನೆ. ಆ ಆನೆ ಹೆದರಿಕೆಯನ್ನು ಹುಟ್ಟಿಸಿ ಮೈಬೆವರಿಳಿಸುವ ಆನೆ. ಆದರೆ ಈ ಆನೆಯಾಟದಲ್ಲಿ ಕೊಲ್ಲಾಪರದ ಆನೆ ಬರುತ್ತದೆ. ಆನೆಯಲ್ಲಿ ಭೀಕರತೆಯಿಲ್ಲ. ಹಿಡಿದು ಕಟ್ಟಿ ಪಳಗಿಸಿಬಹುದಾದ, ನಮ್ಮೊಡನಾಡಬಹುದಾದ ಆನೆ.

ಮೂರು ನಾಲ್ಕು ಮಕ್ಕಳು ವೃತ್ತಾಕಾರದಲ್ಲಿ ತಮ್ಮೆರಡೂ ಕೈಗಳನ್ನು ನೆಲದ ಮೇಲೆ ಕವಚಿಟ್ಟ ಮೇಲೆ ಅಜ್ಜಿಯಾದವನೊಬ್ಬ ತನ್ನೊಂದು ಕೈಯನ್ನು ಅವರ ಜೊತೆಗೆ ಸೇರಿಸಿ, ಇನ್ನೊಂದು ಕೈಯನ್ನು ಎಲ್ಲರ ಕೈಮೇಲೆ ತಿರುಗಿಸುತ್ತ.

ಅಂಜಂಜೆ ಬೆಳೆ

ಬೋಳ್ ಬೋಳ್ ಕಂಟೆ

ಮಕ್ಕಳ್ ದೈವ್ರ ಹಳ್ಳೋ

ನಾನೆಟ್ ಪಚ್ಚೆ ಕದ್ರಾಗ್ಲೆ

ಎಂದು ಹಾಡುತ್ತ ಮುಂದುವರಿಯುವ ಆಟವೊಂದರಲ್ಲಿ ನಮ್ಮ ಬದುಕಿನ ತತ್ತ್ವಜ್ಞಾನವನ್ನೇ ತೆರೆದಿಡುವ ಬಗೆ ಕುತುಹಲಕಾರಿಯಾಗಿದೆ. ಇಂಥ ನೂರಾರು ಆಟದ ಹಾಡುಗಳು ಮತ್ತು ಆಟಗಳು ನಾಡವರಲ್ಲಿ ಪ್ರಚಲಿತವಿದ್ದು ನಾಡವರ ಸಾಂಸ್ಕೃತಿಕ ತುಂಬು ಜೀವನದ ಸೊಗಡನ್ನು ಹೊರಗೆಡಹುತ್ತವೆ.

೧೩. ಇ. ಗಾದೆಗಳು :

ಜೀವನಾನುಭವದಿಂದ ಮಾಗಿದ ಪ್ರಜ್ಞೆಯ ಹಿರಿಯರು ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ತಮಗಾದ ತೀವ್ರಾನುಭವಗಳನ್ನು ಸೂತ್ರಪ್ರಾಯವಾದ ಪ್ರಾಸಬದ್ಧ ಚಿಕ್ಕ ವಾಕ್ಯದಲ್ಲಿ, ರೂಪಕ ಇಲ್ಲವೆ ಸಾಮತಿಯಲ್ಲಿ ಅಡಕವಾಗಿ ಒಂದೆಡೆ ಕಟ್ಟಿಟ್ಟದ್ದು ಗಾದೆ. ಅದು ತನ್ನ ರೂಪ ವ್ಯಾಪ್ತಿಯಲ್ಲಿ ಕಿರಿದಾದರೂ ಹಿರಿಯ ಅರ್ಥವ್ಯಾಪ್ತಿಯನ್ನುಳ್ಳದ್ದು. ಕಿರಿದರಲ್ಲಿ ಹಿರಿಯರ್ಥವನ್ನೊದಗಿಸುವ ನೂರಾರು ಗಾದೆಗಳು ನಾಡವರಲ್ಲಿವೆ. ಅವುಗಳ ಸೊಗಡೇ ಇನ್ನೊಂದು ಬಗೆಯದು.

೧. ಆಗೇರಂವ ಮಾಡದ್ದ ಹೆಂಡ್ಕೆ ನಾಡೋರಂವ ಮಾಡದ್ದ ದಂಡ್ಕೆ

೨. ನಿತ್ತೀಮ್ಯೆನ್ ಬಾಯಾದ್ರೆ ಮತ್ತಿಟ್ ಉಂಬೆ (ನೆತ್ತಿಯ ಮೇಲೆ ಬಾಯಾದರೆ ಇನ್ನಷ್ಟು ಉಣ್ಣುವೆ.)

೩. ಒರ್ದಂವ ಉಪ್ ಕಚ್ತ್ಯಾ (ಸೊಕ್ಕಿನಿಂದ ಮೆರೆದವನು ಉಪ್ಪು ತಿನ್ನುತ್ತಾನೆ.)

೪. ಅವ್ವ್ ನೋಡ್ತೀದ್ ಹೊಟ್ಟ್ಯ, ಹಿಂಡ್ತೆ ನೋಡ್ತೀದ್ ಮೊಟ್ಟ್ಯ (ತಾಯಿಕಣ್ಣು ಮಗನ ಹೊಟ್ಟೆಯ ಮೇಲಿದ್ದರೆ ಹೆಂಡತಿಯ ಕಣ್ಣು ಗಂಡನ ಸಂಪತ್ತಿನ ಮೊಟ್ಟೆಯ ಮೇಲಿರುತ್ತದೆ.)

೫. ಹಾದಿ ಮ್ಯೆನ್ ಹೋಗೂ ನ್ಯಾಯಾ ಎದಿಮ್ಯೆನ್ ಹಾಕಂಡ್ ಹಂಗೆ. (ಹಾದಿಯ ಮೇಲಿನ ಜಗಳವನ್ನು ಎದೆಯ ಮೇಲೆ ಎಳೆದುಕೊಂಡಂತೆ.)

೬. ಬೆಂದ್ ಮನಿಕರಿ ಸುಕ್ಕಂಡಟ್ಟೇ ಬಂತ. (ಸುಡುತ್ತಿದ್ದ ಮನೆಯ ಕರಿಹುಲ್ಲನ್ನು ಎಳೆದುಕೊಂಡಿಟ್ಟುಕೊಂಡದ್ದೆ ಬಂತು.)

೭. ಮಜ್ಜೀಗ್ ಬಂದೆ ಮೊಗ್ಗಿ ಹುಗ್ಸೂಕಾಗಾ (ಮಜ್ಜಿಗೆಗೆ ಬಂದವನು ಮಜ್ಜಿಗೆಯ ಮೊಗ್ಗೆ (ಮಣ್ಣಿನ ಪಾತ್ರೆ)ಯನ್ನು ಅಡಗಿಸಿಟ್ಟುಕೊಳ್ಳಬಾರದು.)

೮. ಹಾಳ್‌ರಂಡಿ ಸಂಗ, ಹರ್ಕಸಿಟ್ಟಿ ಸಾಲಾ ಮಾಡ್ಬೆಡಾ (ಕೆಟ್ಟ ಹೆಣ್ಣಿನ ಸಂಗ ಹಾಗೂ ದುರಹಂಕಾರಿ ಶೆಟ್ಟಿಯ ಸಾಲವನ್ನು ಮಾಡಬೇಡ.)

೧೩. ಈ. ಒಗಟುಗಳು :

ಕನ್ನಡದಲ್ಲಿ ಒಗಟಿಗೆ ಹಲವಾರು ಪರ್ಯಾಯ ಪದಗಳಿವೆ. ನಾಡವರಲ್ಲಿ 'ಒಗಟು' ಎಂಬ ರೂಪವೇ ವ್ಯಾಪಕವಾಗಿ ಬಳಕೆಯಲ್ಲಿದ್ದು 'ಕನ್ನಡ', 'ಸೂಳ್ ಬಿಡಿಸುವುದು' ಎಂಬ ಪದಗಳ ಕ್ವಚಿತ್ ಪ್ರಯೋಗ ಚಾಲ್ತಿಯಲ್ಲಿದೆ. ನಾಡವರಲ್ಲಿ ಬಳಕೆಯಿರುವ ಒಗಟು, ಕನ್ನಡ, ಸೂಳು ಇವಕ್ಕೆ ಗಂಟು, ಕಟ್ಟು, ಬಂಧನ ಎಂಬ ಅರ್ಥವಿದೆ. ಒಬ್ಬನು ಹಾಕಿದ ಗಂಟನ್ನು, ಕಟ್ಟನ್ನು ಇನ್ನೊಬ್ಬನು ಬಿಡಿಸುವಲ್ಲಿ 'ಒಗಟು' ತನ್ನ ಪರಿಸಮಾಪ್ತಿಯನ್ನು ಕಂಡುಕೊಳ್ಳುತ್ತದೆ. ರಹಸ್ಯಾರ್ಥವನ್ನು ಸ್ಫೋಟಗೊಳಿಸುವುದರಲ್ಲೇ ಒಗಟಿನ ಪರಮಾರ್ಥ ಹುದುಗಿರುವುದು. ಒಗಟು ಮಾನವನ ರೂಪಕ ಪರಿಣತಿಯ ಶ್ರೇಷ್ಠಫಲ. ಒಗಟೆಂದರೆ ಅರ್ಥೈಸಬೇಕಾದ ಒಂದು ಗೂಡೋಕ್ತಿ.

೧. ಜಗ್ ಅಂತೀದ್ ಜರ್ಗೀಲ್[೧] ಹುಕ್ತೀದ್[೨] (ಮೋಗ್ತೆ=ಮೂಗುತಿ)

೨. ಇಂದ್ ಹುಟ್ಟ್ ಪ್ವೊರಾ[೩] ಮರ ಹತ್ತ್ಯಾ[೪] (ಚಿವ್ಳೆ=ಚಿಗಳಿ)

೩. ಚಕಮಕ ಲೇಡಿಗೆ ಉಂದೇ ಕಣ್ಣು (ಚೂಂಜೆ= ಸೂಜಿ)

---

೧. ಒಟ್ಟೆಯಲ್ಲಿ ೨. ಹೊಕ್ಕುತ್ತದೆ ೩. ಪೋರ ೪. ಹತ್ತುತ್ತಾನೆ

೪. ಮಿಂದ್ ಮಿಂದ್ಕಂಡ್[೫] ಗಾಡಗ್ತನ ಹುಡಿತೀದ್[೬] (ಅರುಕಲ್ ಗುಂಡ=ಅರೆಯುವ ಕಲ್ಲಿನ ಗುಂಡು)

೫. ಕೊಕಾನ್ಹಕ್ಕಿ[೭] ಕೂರ್ತೀದ್[೮] ಕೆರಿ ನೀರಾರ್ತೀದ್ (ಹಣ್ತಿಗಿ ದೇಪ=ಹಣತೆಯ ದೀಪ)

೬ ಬತ್‌ಮರ್ದ್‌ಮೈನ್ ಬಸ್ವ ಕುಣೀತಿದ್ (ಸವ್ಡಿ–ಕುಡ್ಲಿ=ಸೌದೆ ಮತ್ತು ಕೊಡಲಿ)

೭ ಪಟ್ಟೀ ಸೇರಿಗಾರ್ತಿ[೧೦] ಕದ್ನ[೧೧] ಮೂಲೀಗ್ ಕುಳ್ತಿ (ಹಿಡೆ=ಕಸಬರಿಗೆ)

೮. ಹೋತ್ಯಾ[೧೨] ಪುಟ್ಟಾ ಬತ್ಯಾ[೧೩] ಪುಟ್ಟ, ಪುಟ್ನ ಹೆಜ್ಜೆ ಕಾಂಬೂದಲ[೧೪] (ನೀರಲ್ಲೋಡುವ ದೋಣಿ)

ಇಂಥ ನೂರಾರು ಒಗಟುಗಳು ನಾಡವರಲ್ಲಿ ಉಪಲಬ್ಧವಿದೆ.

೧೪. ಕಲೆಗಳು :

ನಾಡವರಲ್ಲಿ ಹಗಣ ಮತ್ತು ಬಯಲಾಟಗಳನ್ನು ಬಿಟ್ಟರೆ ಹೇಳಿಕೊಳ್ಳುವಂಥ ಪ್ರದರ್ಶನ ಕಲೆಗಳಿಲ್ಲ. ಯಕ್ಷಗಾನ ಬಯಲಾಟದಲ್ಲಿ ಪರಿಣತರಾದ ಪ್ರಥಮ ದರ್ಜೆಯ ನಾಡವರ ಕಲಾವಿದರು ಊರೂರುಗಳಲ್ಲಿ ದೊರಕುತ್ತಾರೆ. ಯಕ್ಷಗಾನ ಹಾಗೂ ಅದರ ಇನ್ನೊಂದು ಪ್ರಭೇದ 'ಓದ್ಕಿ' (ತಾಳಮದ್ದಳೆ)ಯಲ್ಲಿ ಜಾನಪದೀಯ ರೀತಿಯಲ್ಲಿ ಸಮಯ ಸ್ಫೂರ್ತಿಯಿಂದ ಆಶು–ಅರ್ಥ ವ್ಯಾಖ್ಯಾನಗೈದರೂ, ಅಲ್ಲಿ ಬಳಸಲಾಗುವ ಭಾಷೆ ಪರಿಷ್ಕೃತವಾದದ್ದು. ನಾಡವರ ಕನ್ನಡದ ಸೊಗಡನ್ನು ಅಲ್ಲಿ ಕಾಣಲಾಗದು. ಅದಕ್ಕಾಗಿ ಅದರ ಪ್ರಸ್ತಾಪವನ್ನು ನಾನಿಲ್ಲಿ ಮಾಡಬಯಸುವುದಿಲ್ಲ. ಇನ್ನು ನಾಡವರು ಬಂಡಿ ಹಬ್ಬದ ಆಡುಕಟ್ಟೆಯಲ್ಲಿ ಆಡಲಾಗುವ 'ಹಗಣ' ಆಶು ನಾಟಕವಾಗಿದ್ದು ಅಲ್ಲಿ ಬಳಸಲಾಗುವ ಭಾಷೆ ನಾಡವರ ಹಾಗೂ ಇತರ ಜಾತಿಯವರ ಸಾಮಾಜಿಕ ಉಪಭಾಷೆಗಳ ಗಂಡುಸತ್ವದಿಂದ ಕಳೆಗಟ್ಟಿರುತ್ತದೆ. ಆದರೆ ವಿಷಯ ವಿಸ್ತಾರದ ಭಯದಿಂದ ನಾನು ಅದನ್ನಿಲ್ಲಿ ಪ್ರಸ್ತಾಪಿಸುತ್ತಿಲ್ಲ. ಕಾರ್ತಿಕ ಮಾಸದಲ್ಲಿ ಭಜನಾ ಸಪ್ತಾಹವನ್ನು ನಾಡವರು ಮಾಡುವ ವಾಡಿಕೆಯಿದೆ. ಆ ಸಂದರ್ಭದಲ್ಲಿ ಹಾಡಲಾಗುವ ಭಜನೆಗಳು ನಾಡವರ ಭಾಷೆಯ ಸೊಗಡಿನಿಂದ ಕೂಡಿಲ್ಲವಾದ ಪ್ರಯುಕ್ತ ಅವುಗಳನ್ನು ಸಹ ಇಲ್ಲಿ ಪ್ರಸ್ತಾಪಿಸುತ್ತಿಲ್ಲ.

೧೫. ನಾಡವರ ಕನ್ನಡದ ಸೊಗಡು ಅವರಾಡುವ ಭಾಷೆ, ಅವರ ಸಾಂಸ್ಕೃತಿಕ ಬದುಕಿನ ರೀತಿ ನೀತಿಗಳಲ್ಲಿ, ಅವರ ಸಾಹಿತ್ಯ–ಕಲೆಗಳಲ್ಲಿ ವ್ಯಕ್ತವಾದ ಬಗೆಯನ್ನು ಈ ಪ್ರಬಂಧದಲ್ಲಿ ಸ್ವಲ್ಪ ಮಟ್ಟಿಗೆ ಕಟ್ಟಿಕೊಡಲು ಪ್ರಯತ್ನ ಪಟ್ಟಿದ್ದೇನೆ. ಅವರ ಕನ್ನಡದ ಸೊಗಡನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಆಘ್ರಾಣಿಸ ಬಯಸುವವರು ಈ ಕೆಳಗಿನ ಗ್ರಂಥಗಳನ್ನು ಅವಲೋಕಿಸಬಹುದಾಗಿದೆ.

---

೫. ಸ್ನಾನಮಾಡಿ ೬. ಹೊಡೆಯುತ್ತದೆ ೭. ಕುಕ್ಕನಹಕ್ಕಿ ೮. ತೂಕಡಿಸುತ್ತದೆ ೯. ಒಣಮರದ ಮೇಲೆ ೧೦. ಪಟ್ಟೆಸೀರೆಯುಟ್ಟವಳು ೧೧. ಕದದ ೧೨. ಹೋಗುತ್ತಾನೆ ೧೩. ಬರುತ್ತಾನೆ. ೧೪. ಕಾಣುವುದಿಲ್ಲ

೧. ಕಾರವಾರ ಜಿಲ್ಲೆಯ ಜನಪದ ಗೀತಗಳು ಡಾ॥ ಎನ್. ಆರ್. ನಾಯಕ.
(ಪ್ರಸಾರಾಂಗ ಕರ್ನಾಟಕ ವಿ.ವಿ. ಧಾರವಾಡ.)

೨. ಕೂಸಾಯ್ತು ನಮ್ಮ ಕೊಮರಾಗೆ. ಡಾ॥ ಎನ್.ಆರ್. ನಾಯಕ.
(ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.)

೩. ಪಡುಕೋಗಿಲೆ ಡಾ॥ ಎನ್. ಆರ್. ನಾಯಕ.
(ಆದರ್ಶ ಪ್ರಕಾಶನ ಕಾರವಾರ.)

೪. ಪಾಠಾಂತರ ಕಥನ ಕವನಗಳು ಡಾ॥ ಎನ್.ಆರ್. ನಾಯಕ.
(ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.)

೫. ಕಪಟಿಗಳ ಕತೆ. ಡಾ॥ ಎನ್. ಆರ್. ನಾಯಕ.
(ಜಾನಪದ ಪ್ರಕಾಶನ ಹೊನ್ನಾವರ)

೬ ತುಳಸಿ ತಿಮ್ಮಪ್ಪರಾಯ ಡಾ॥ ಎನ್. ಆರ್. ನಾಯಕ.
(ಜಾನಪದ ಪ್ರಕಾಶನ ಹೊನ್ನಾವರ)

೭ ಬಂದಾನೆ ಬಲಿಯಂದ್ರರಾಯ ಡಾ॥ ಎನ್.ಆರ್. ನಾಯಕ.
(ಜಾನಪದ ಪ್ರಕಾಶನ ಹೊನ್ನಾವರ)

೮. ನಾಡವರ ಜನಪದ ಕಥೆಗಳು ಡಾ॥ ಎನ್. ಆರ್. ನಾಯಕ.
(ಜಾನಪದ ಪ್ರಕಾಶನ ಹೊನ್ನಾವರ)

೯. ಉತ್ತರ ಕನ್ನಡ ಜಿಲ್ಲೆಯ ನಾಡವರ ಸಂಸ್ಕೃತಿ. ಡಾ॥ ಎನ್.ಆರ್. ನಾಯಕ.
(ಜಾನಪದ ಪ್ರಕಾಶನ ಹೊನ್ನಾವರ)

೧೦. ಜಾಣೆ ಕನ್ನಡವ ತಿಳದ್ಹೇಳೆ ಶಾಂತಿ ನಾಯಕ
(ಜಾನಪದ ಪ್ರಕಾಶನ ಹೊನ್ನಾವರ)

೧೧. ಕಾಕಕ್ಕ ಗುಬ್ಬಕ್ಕ ಶಾಂತಿ ನಾಯಕ
(ಜಾನಪದ ಪ್ರಕಾಶನ ಹೊನ್ನಾವರ)

12. Nador Kannada Dr. Rajendra Nayak
(Shobha Publishers Dharwad.)

* ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಅವರು ಶಿವಮೊಗ್ಗದಲ್ಲಿ ೨೦೦೯ ರಲ್ಲಿ ಸಂಘಟಿಸಿದ ಕನ್ನಡ ಸೊಗಡು ಸಮಾವೇಶದಲ್ಲಿ ಮಾಡಿದ ಭಾಷಣ.

೦೩. ನಾಡವರ ಕುರಿತ ಐತಿಹ್ಯ ಮತ್ತು ವದಂತಿಗಳು

೧. ನಾಡವರು:

ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ನಾಡವರು ಒಂದು ಪ್ರಮುಖ ಜನಾಂಗ. ಕನ್ನಡಿಗರು ವೀರರೆಂಬ ಹೆಸರು ಬಂದದು ಈ ಜನಾಂಗದಿಂದ ಈ ಜನಾಂಗ ಕನ್ನಡ ನಾಡಿನ ಜೀವ ಜೀವಾಳ. ಇಂದು ಈ ಜನಾಂಗ. ಮಲೆನಾಡು ಹಾಗೂ ಕರಾವಳಿಯಲ್ಲಿ ಮಾತ್ರ ಕಂಡುಬರುವುದಾದರೂ ಪ್ರಾಚೀನ ಕಾಲಕ್ಕೆ ಈ ಜನಾಂಗದ ಅನೇಕ ಗುಂಪುಗಳು ಸಮಗ್ರ ಕರ್ನಾಟಕದಲ್ಲಿ ಹಬ್ಬಿಕೊಂಡಿದ್ದರೆನ್ನಲು ಸಾಕಷ್ಟು ಆಧಾರಗಳಿವೆ. ವೀರ ಪೂಜಕರಾದ ಇವರು ಮುಂದೆ ಸಮಗ್ರ ಕರ್ನಾಟಕದಲ್ಲಿ ಹಬ್ಬಿಕೊಂಡಿದ್ದವೆನ್ನಲು ಸಾಕಷ್ಟು ಆಧಾರಗಳಿವೆ. ವೀರ ಪೂಜಕರಾದ ಇವರು ಮುಂದೆ ಜೈನ, ವೀರಶೈವ, ವೈಷ್ಣವ ಧರ್ಮ ಪ್ರವಾಹಗಳಲ್ಲಿ ಸಿಲುಕಿ, ಬೇರೆ ಬೇರೆ ಮತಗಳನ್ನು ಸ್ವೀಕರಿಸಿ, ಭಿನ್ನ ವೃತ್ತಿಗಳನ್ನು ಕೈಕೊಂಡು, ತಮ್ಮ ಕುಲಗೋತ್ರಗಳನ್ನು ಮರೆತು, ಇಂದು ಕರ್ನಾಟಕದುದ್ದಕ್ಕೂ ನಾಡವರು, ಬಂಟರು, ಒಕ್ಕಲಿಗರು, ರೆಡ್ಡಿಗಳು, ಗಂಗಡಿಕಾರರು, ಗೌಡರು, ಕ್ಷತ್ರಿಯರು, ಬ್ರಹ್ಮಕ್ಷತ್ರಿಯರು ಎಂದು ಮುಂತಾಗಿ ಹರಿದು ಹಂಚಿಹೋಗಿದ್ದಾರೆ. ಕವಿರಾಜ ಮಾರ್ಗಕಾರ 'ನಾಡವರ್ಗಳ್, ನಾಡವರ್' ಎನ್ನುವ ಜನಾಂಗದ ಹೆಸರು ಎರಡೂ, ಕರಾವಳಿಯಲ್ಲಿ ಸಾವಿರ ವರ್ಷಗಳು ಕಳೆದು ಹೋದರೂ ಹಾಗೇ ಉಳಿದುಕೊಂಡಿವೆ[೧]. ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಡವರು ಎನ್ನುವ ಹೆಸರು ಸಾರ್ವತ್ರಿಕವಾಗಿ ಕೇಳಬಂದರೆ. ದಕ್ಷಿಣ ಕನ್ನಡದಲ್ಲಿ ಇವರನ್ನು ಬಂಟರು ಯಾನೆ ನಾಡವರು ಎಂದು ಎರಡೂ ಹೆಸರುಗಳಿಂದ ಕರೆಯುತ್ತಾರೆ. ಶಿವಮೊಗ್ಗೆಯ ನಾಮಧಾರಿ ಗೌಡರನ್ನು ನಾಡವರೆಂದು ಕರೆಯಲಾಗುತ್ತದೆ. ಈ ಕುರಿತು 'ಜಾನಪದ ಜಗತ್ತಿನಲ್ಲಿ ಲೇಖನವೊಂದು ಬಂದಿದೆ[೨]. ನಾನೊಮ್ಮೆ ಡಾ॥ ಅಂಬಳಿಕೆ ಹಿರಿಯಣ್ಣ ಅವರೊಡನೆ ಸಂಭಾಷಿಸುವಾಗ ಅವರೂ ಸಹ ಈ ವಿಷಯವನ್ನು ನನ್ನ ಹತ್ತಿರ ದೃಢಪಡಿಸಿದ ನೆನಪಿದೆ. ಮೂಲತಃ ನಾಡವರ್>ನಾಡವರು ಎಂಬ ಹೆಸರಿನ ಜನಾಂಗ, ಅವರು ಮಾಡುವ ಬೇರೆ ಬೇರೆ ವೃತ್ತಿ ವಿಶೇಷದಿಂದಾಗಿ, ಬಂಟ. ನಾಮಧಾರಿ ಗೌಡ, ಗೌಡ ಇತ್ಯಾದಿಯಾಗಿ ಭಿನ್ನ ಹೆಸರುಗಳನ್ನು ಅನಂತರದಲ್ಲಿ ಪಡೆದುಕೊಂಡಿರಬೇಕು.

ಉತ್ತರ ಕನ್ನಡ ನಾಡವರಲ್ಲಿ ಪ್ರಚಲಿತವಿರುವ ಕೆಲವು ಐತಿಹ್ಯ ಹಾಗೂ ವದಂತಿಗಳನ್ನು ಸಾದರಪಡಿಸಿ, ಅಲ್ಲಿ ವ್ಯಕ್ತವಾಗುವ ಇವರ ಶೀಲ ಸ್ವಭಾವಗಳನ್ನು ತಿಳಿಯಪಡಿಸುವುದು ಈ ಲೇಖನದ ಉದ್ದೇಶ.

೨. ಜೈನ ಧರ್ಮ ತ್ಯಾಗ :

ಕಾನಡಾ ವೃತ್ತವೆಂಬ ವಾರಪತ್ರಿಕೆಯಲ್ಲಿ ದಿ॥ ಆರ್.ಕೆ. ನಾಯಕರು ಪ್ರಕಟಿಸಿದ ನಾಡವರ ಕುರಿತಾಗಿರುವ ಐತಿಹ್ಯವೊಂದು ಹೀಗಿದೆ: ಏಳನೆಯ ಶತಮಾನದಲ್ಲಿ ಬನವಾಸಿ ಹಾಗೂ ಬಾರ್ಕೂರುಗಳನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಮಯೂರವರ್ಮನು, ಒಮ್ಮೆ ಆತ ಬಾರ್ಕೂರಿನಲ್ಲಿದ್ದಾಗ, ವಿಹಾರಾರ್ಥವಾಗಿ ಬೇಟೆಗೆ ಹೋಗಿ. ಒಂದು ನವಿಲನ್ನು ಕೊಂದನು. ಜೈನರಲ್ಲಿ ಪ್ರಾಣಿ ಹತ್ಯೆಗೆ ನಿಷೇಧವಿದ್ದುದರಿಂದ, ಅನೇಕ ಜೈನರು ರಾಜನ ವಿರುದ್ಧ ಸಿಡಿದು ನಿಂತರು. ಆಗ ರಾಜನು ಮುಖಂಡರ ಸಭೆಯನ್ನು ಕರೆದು 'ಪ್ರಾಣಿ ಹತ್ಯೆ ಜೈನ ಧರ್ಮಕ್ಕೆ ವಿರುದ್ಧವಾದರೂ, ರಾಜ ಧರ್ಮಕ್ಕೆ ವಿರುದ್ಧವಲ್ಲ; ತಾನು ರಾಜನಾದುದರಿಂದ ಪ್ರಾಣಿ ಹತ್ಯೆ ಮಾಡಿದ್ದು ತಪ್ಪಲ್ಲ' ಎಂದು ಸಾಧಿಸುತ್ತಾನೆ. ಆಗ ಜೈನರಲ್ಲಿ ಎರಡು ಗುಂಪುಗಳಾಗಿ, ಅದೇ ಊರಿನ ಮುಖಂಡರೆಲ್ಲ ರಾಜನ ಪಕ್ಷವನ್ನು ವಹಿಸಿದರು. ಈ ಹೊಸ ಪಕ್ಷದವರು ನಾಡಿನಲ್ಲಿ ಶ್ರೇಷ್ಠರಾದುದರಿಂದ ಅವರಿಗೆ ನಾಡವರು ಎನ್ನುವ ಹೆಸರು ಬಂತು.

ಈ ಐತಿಹ್ಯವು ಮೂಲತಃ ಜೈನರಾದ ನಾಡವರು. ಮಯೂರ ವರ್ಮ ರಾಜನ ವಿಚಾರ ಧಾರೆಯನ್ನು ಸಮರ್ಥಿಸಿ, ಜೈನ ಧರ್ಮದಿಂದ ಬಂಡೆದ್ದು ಅದನ್ನು ತ್ಯಜಿಸಿ, ಅನ್ಯ ಧರ್ಮವನ್ನು ಸ್ವೀಕರಿಸಿದ ಅಂಶವನ್ನು ಸ್ಪಷ್ಟಪಡಿಸುವುದರ ಜೊತೆಗೆ ಈ ಘಟನೆ ನಡೆದ ಸ್ಥಳ ದಕ್ಷಿಣ ಕನ್ನಡ ಬಾರ್ಕೂರು ಎನ್ನುವುದನ್ನು ಖಾತ್ರಿಪಡಿಸುತ್ತದೆ. ಆದರೆ ನಾಡಿನಲ್ಲಿ ನಾಡವರು ಹೇಗೆ ಶ್ರೇಷ್ಠರಾದರು ಎನ್ನುವ ಬಗ್ಗೆ ಮೇಲಿನ ಐತಿಹ್ಯದಲ್ಲಿ ಯಾವ ಪುರಾವೆಯೂ ಇಲ್ಲ. ನಾಡಿನಲ್ಲಿ ಶ್ರೇಷ್ಠರಿದ್ದ ಮಾತ್ರಕ್ಕೆ ನಾಡವರು ಎಂಬ ಹೆಸರು ಬರಬೇಕೆಂದೂ ಇಲ್ಲ. ಬಹುಶಃ ಈ ಜನರು ಕಾಡು ಬದುಕನ್ನು ತೊರೆದು, ನಾಡುಕಟ್ಟಿ, ನಾಡ ಗೌಡರಾಗಿ, ನಾಯಕರಾಗಿ, ನಾಡ ನಾಗರಿಕತೆಯನ್ನು ಪ್ರಥಮ ಬಾರಿಗೆ ಬೆಳೆಸಿದ ಕಾರಣದಿಂದ ನಾಡವರ್>ನಾಡವರು ಎಂದು ಹೆಸರು ಪಡೆದಿರಬೇಕು.

೩. ಜೈನರ ಸಂಪತ್ತು ನಾಡವರಿಗೆ :

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದೆ ಹಲವೆಡೆಯಲ್ಲಿ ಜೈನ ನೆಲೆಗಳಿದ್ದ ಕುರುಹುಗಳಿವೆ. ಅಂಕೋಲಾ ತಾಲೂಕಿನ ಭಾವಿಕೇರಿಯಲ್ಲಿ ನಮ್ಮ ಕುಟುಂಬದವರ ಒಡೆತನಕ್ಕೆ ಸೇರಿದ. 'ಕಾರಾಣಿ ಭಾಗ'ದ ಸರಹದ್ದಿನಲ್ಲಿ ವೀರಗಲ್ಲೊಂದಿದೆ. ಆ ಸ್ಥಳಕ್ಕೆ ನಮ್ಮೂರಿನವರೆಲ್ಲ ತಲೆತಲಾಂತರದಿಂದ 'ಜೈನ ಬಸದಿ'ಯೆಂದೇ ಕರೆಯುತ್ತ ಬಂದಿದ್ದಾರೆ. ಅಲ್ಲಿ ಸಾಕಷ್ಟು ದುಡ್ಡು ಇದೆಯೆಂಬ ವದಂತಿಯಿದೆ. ಆ ದುಡ್ಡು ನಾಡವರಿಗೇ ದಕ್ಕುವ ದುಡ್ಡಂತೆ. ಯಾಕೆಂದರೆ 'ಜೈನರ ಬದ್ಕು (ಆಸ್ತಿ–ಸಂಪತ್ತು) ನಾಡವರಿಗೇ ದಕ್ಕುತ್ತದೆ' ಎಂಬ ಹೇಳಿಕೆ ಆಕಡೆ ಸಾರ್ವತ್ರಿಕವಾಗಿ ನೆಲೆಸಿದೆ. ಉತ್ತರ ಕನ್ನಡದಲ್ಲಿ ನಾಡವರ ಒಡೆತನದಲ್ಲಿರುವ ದೇವಾಲಯಗಳ ಮೂರ್ತಿ ಪ್ರತಿಷ್ಠಾಪನೆ, ಅಷ್ಟಬಂಧಾದಿಗಳಿಗೆ ಜೈನ ಅರ್ಚಕರೇ ಬರಬೇಕೆಂಬ ಸಂಪ್ರದಾಯವಿದೆ.

ಈ ವದಂತಿ ಹಾಗೂ ಸಂಪ್ರದಾಯಗಳು, ನಾಡವರ ಹಾಗೂ ಜೈನರ ಅನ್ಯೋನ್ಯ ಸಂಬಂಧವನ್ನು ಹೇಳುತ್ತವೆ. ಇಂದೂ ಸಹ ಮೂರ್ತಿ ಪ್ರತಿಷ್ಠಾಪನೆ ಹಾಗೂ ಅಷ್ಟಬಂಧ ಕಾರ್ಯಗಳಿಗೆ ಜೈನರು ಬರುವುದನ್ನು ಸಹ ನಾನು ಗಮನಿಸಿದ್ದೇನೆ.

೪. ತುಳು ನಾಡಿನಿಂದ-ಹೈಗನಾಡಿಗೆ :

ತುಳು ನಾಡಿನ ರಾಜನೊಬ್ಬ ವ್ಯಾಪಾರ ವ್ಯವಹಾರಕ್ಕಾಗಿ ದೊಡ್ಡ ಹಡಗನ್ನು ಕಟ್ಟಿಸಿ, ಆ ಹಡಗನ್ನು ಸಮುದ್ರದಲ್ಲಿ ಪ್ರಯಾಣಿಸಲು ಹರಿಯಬಿಟ್ಟಾಗ, ಹಡಗು ಮುಂದುವರಿಯದೆ ನೆಲಕಚ್ಚಿತಂತೆ. ಆಗ ಜೋಯಿಸರನ್ನು ಕರೆದು ವಿಚಾರಿಸಲಾಗಿ. ಅವರು ನರಬಲಿಯಾದ ಹೊರತು ಹಡಗು ಚಲಿಸದೆಂದು ಸೂಚಿಸಿದರು. ಆಗ ರಾಜ, ಹೆರರ ಮಕ್ಕಳನ್ನು ನೀರಿಗೆ ಆಹುತಿಯಾಗಿ ಕೊಡುವ ತೀರ್ಮಾನವನ್ನು ಮಾಡದೆ, ನೇರವಾಗಿ ಮನೆಗೆ ಬಂದು, ತನ್ನ ಐದು ಮಂದಿ ಮಕ್ಕಳಲ್ಲಿ ಒಬ್ಬನನ್ನು ಬಲಿಕೊಡುವ ತೀರ್ಮಾನವನ್ನು ಮಾಡಿ ಹೆಂಡತಿಗೆ ತಿಳಿಸಿದನಂತೆ. ಗಂಡನ ಕಠೋರವಾದ ತೀರ್ಮಾನವನ್ನು ಹೆಂಡತಿ ಪ್ರತಿಭಟಿಸಿದಳು. ಆದರೂ ಗಂಡ ತನ್ನ ಪರಮಾಧಿಕಾರವನ್ನು ಚಲಾಯಿಸಿ, ಮಗನನ್ನು ಬಲಿಕೊಟ್ಟರೆ ಪ್ರಮಾದವೆಂದು ಆ ತಾಯಿಯ ಕರುಳು ಮಿಡುಕಿ, ಗಂಡನ ಕಣ್ಣು ತಪ್ಪಿಸಿ, ರಾತ್ರಿಯ ಹೊತ್ತು ತನ್ನಯ್ದೂ ಮಕ್ಕಳನ್ನು ಕರೆದುಕೊಂಡು ದೋಣಿ ಹತ್ತಿ, ತುಳು ನಾಡನ್ನು ತೊರೆದು ಉತ್ತರ ಕನ್ನಡದ ಹಿರೇಗುತ್ತಿಗೆ[೬] ಬಂದು ನೆಲೆಸಿದಳಂತೆ. ಅವಳ ಸಂತಾನವೇ ಉತ್ತರ ಕನ್ನಡದ ನಾಡವರಂತೆ.

ಹೆಂಡತಿ ತನ್ನ ತೀರ್ಮಾನವನ್ನು ಧಿಕ್ಕರಿಸಿ ಕಣ್ಮರೆಯಾದುದನ್ನು ಕಂಡು ರಾಜ ಚಿಂತಾಕ್ರಾಂತನಾಗಿ, ಮುಂಡುಮುಸುಕು ಹಾಕಿ ಮಲಗಿದಾಗ, ಅವನ ತಂಗಿ ಅಣ್ಣನೆಡೆ ಬಂದು, ಅವನ ನೋವಿನ ಕಾರಣವನ್ನು ತಿಳಿದು, ಅದನ್ನು ನಿವಾರಣೆ ಮಾಡಲು ತನ್ನ ಒಬ್ಬನೇ ಒಬ್ಬ ಮಗನನ್ನು ಬಲಿಗೊಡಲು ಸಿದ್ಧಳಾದಳು. ಅವಳ ಮಗ, ಸಮುದ್ರಕ್ಕೆ ಬಲಿಯಾಗುವ ಪೂರ್ವದಲ್ಲಿ ಹಡಗಿನ ಮೇಲೆ ಕುಳಿತು, ತನ್ನ ಅಂತಿಮ ಬಯಕೆಯಾದ ಮಾವಿನ ಹಣ್ಣನ್ನು ಕೆತ್ತಿ ತಿನ್ನುವಾಗ ಚಾಕು ಕೈಗೆ ತಾಗಿ, ಬೆರಳಿನಿಂದ ರಕ್ತದ ಕೋಡಿ ಹರಿದು ಸಮುದ್ರದ ನೀರಿನಲ್ಲಿ ಬೆರೆಯಿತು. ಆ ರಕ್ತ ಬಲಿಯ ಕಾರಣದಿಂದಾಗಿ ರಾಜನ ಹಡಗು ಸಮುದ್ರದಲ್ಲಿ ಮುಂದುವರಿಯಿತು. ತಂಗಿ ತನಗಾಗಿ ಮಗನನ್ನೇ ತ್ಯಾಗ ಮಾಡಲು ಸಿದ್ಧಳಾದುದರಿಂದ, ಸಂಪ್ರೀತನಾದ ದೊರೆ. ತನ್ನ ತಂಗಿಯ ಮಕ್ಕಳೇ ತನ್ನ ರಾಜ್ಯಕ್ಕೆ ವಾರಸುದಾರರಾಗಬೇಕೆಂದೂ, ತನ್ನ ಮಕ್ಕಳಿಗೆ ತನ್ನ ರಾಜ್ಯದ ಹಕ್ಕಿಲ್ಲವೆಂದೂ, ಶಾಸನವನ್ನು ಮಾಡಿದನಂತೆ, ಹೀಗಾಗಿ ರಾಜನ ತಂಗಿಯ ಮಕ್ಕಳಾದ ತುಳು ನಾಡವರಿಗೆ ರಾಜ ಗದ್ದುಗೆ ದೊರಕಿದ್ದರಿಂದ ಶ್ರೀಮಂತರಾಗಿ, ತುಳುನಾಡು ತೊರೆದ ರಾಜನ ಮಕ್ಕಳಾದ ಹೈಗನಾಡಿನ ನಾಡವರು ಬಡವರಾದರಂತೆ. ಈ ವದಂತಿ ಭೂತಾಳ ಪಾಂಡ್ಯನ ಅಳಿಯ ಕಟ್ಟಿನ ಶಾಸನವನ್ನು ನೆನಪಿಸುತ್ತದೆ. ತುಳು ನಾಡಿನ ಪಾಂಡ್ಯ ಅರಸರು ನಾಡವರಾಗಿದ್ದ ಅಂಶ ಇತಿಹಾಸದಿಂದ ಸ್ಪಷ್ಟವಾಗುತ್ತದೆ[೭]. ರಾಜನ ಹೆಂಡತಿ ಪತಿಯ

ಮೌಢ್ಯದ ವಿರುದ್ಧ ಸಿಡಿದೆದ್ದು ಮಾತೃ ಸಹಜ ವಾತ್ಸಲ್ಯಕ್ಕೆ ಕಟ್ಟು ಬಿದ್ದು, ಮಕ್ಕಳ ರಕ್ಷಣೆಗಾಗಿ ತುಳುನಾಡಿನಿಂದ ಹೈಗನಾಡಿಗೆ ವಲಸೆ ಬಂದ ವಿಚಾರ ಈ ವದಂತಿಯಲ್ಲಿ ಅಡಕವಾಗಿದೆ.

ಈ ವದಂತಿಯಲ್ಲಿ ರಾಜನ ಹೆಂಡತಿಯು ಕರುಳ ಕುಡಿಗಳನ್ನು ತುಂಡರಿಸಲೊಪ್ಪದ ಕರುಣಾಮಯಿ ತಾಯಿಯಾಗಿ ಗೋಚರಿಸುತ್ತಾಳೆ. ಧೀರಳಾದ ಈ ತಾಯಿ 'ಗಂಜೀಯು ಉಂಡರು ಗಂಡನ ಮನಿ ಲೇಸು' ಎಂಬ ಮನೋಭಾವನೆಯನ್ನು ತಾಳದೆ, ಗಂಡನ ಮೌಢ್ಯದಿಂದ, ಇನ್ನೂ ಪ್ರಬುದ್ಧರಾಗದ ತನ್ನ ಮಕ್ಕಳ ಬದುಕುವ ಸ್ವಾತಂತ್ರ್ಯಕ್ಕೇ ಸಂಚಕಾರ ಬರುವುದನ್ನು ಗ್ರಹಿಸಿ, ಪತಿಯ ಮೌಢ್ಯದ ಹಾಗೂ ಪರಮಾಧಿಕಾರದ ವಿರುದ್ಧ ನಿಂತು, ತನ್ನ ಬದುಕು ಅತಂತ್ರ–ಅನಾಥವಾಗುವುದನ್ನು ಲೆಕ್ಕಿಸದೆ, ಎಲ್ಲಕ್ಕಿಂತ ವ್ಯಕ್ತಿ ಸ್ವಾತಂತ್ರ್ಯ ಹಿರಿದು ಎಂದು ಗ್ರಹಿಸಿ, ರಾಣಿ ಪದ ತ್ಯಾಗ, ರಾಜ್ಯ ತ್ಯಾಗ ಹಾಗೂ ಗೃಹ ತ್ಯಾಗವೆಲ್ಲವನ್ನೂ ಒಟ್ಟಿಗೇ ಮಾಡಿದ ದಿಟ್ಟ ಮಹಿಳೆಯಾಗಿ ಬಂಡಾಯಗಾರ್ತಿಯಾಗಿ ತೋರುತ್ತಾಳೆ. ಇಂದೂ ಸಹ ನಾಡವರ ಮಹಿಳೆಯರು ದಿಟ್ಟತನಕ್ಕೆ ಹೆಸರಾಗಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯುನ್ನು ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಕರ್ನಾಟಕದ ಬಾರ್ಡೋಲಿಯನ್ನಾಗಿಸುವಲ್ಲಿ ನಾಡವರ ಹೆಣ್ಣುಮಕ್ಕಳ ಪಾತ್ರವೂ ಅಮೋಘವಾದುದು ಎನ್ನುವುದು ಉಪ್ಪಿನ ಸತ್ಯಾಗ್ರಹ ಹಾಗೂ ಕರ ನಿರಾಕರಣೆಯ ವೀರ ಕತೆಯನ್ನು ಕೇಳಿದಾಗ ಸ್ಪಷ್ಟವಾಗುತ್ತದೆ.

೫. ಚುಂಗ್ಡಿ ನಾಡವರು :

ದಕ್ಷಿಣ ಕನ್ನಡ ಜಿಲ್ಲೆಯ ಬಂಟರಲ್ಲಿ ಕೆಲವರು, ತಮಾಷೆಗೆ ಕುಂದಾಪುರ ಹಾಗೂ ಉತ್ತರ ಕನ್ನಡದ ನಾಡವರನ್ನು ಚುಂಗ್ಡಿ ನಾಡವರು, ಕಚ್ಚೆ ನಾಡವರೆಂದು ಕ್ವಚಿತ್ತಾಗಿ ಕರೆಯುವುದಿದೆ. ಇದಕ್ಕೆ ಕಾರಣ ಬಂಟರದು ದೊಡ್ಡ ದೊಡ್ಡ ವ್ಯವಹಾರ, ಚುಂಗ್ಡಿ ಎಂದರೆ ಚಿಲ್ಲರೆ; ಇಂಥ ಚಿಲ್ಲರೆಯ ವ್ಯವಹಾರಗಳು ಇವರಿಗೆ ತಿಳಿಯದು. ಇವರೆಲ್ಲ ರಾಜಸುಖ ಅನುಭವಿಸಿದವರು, ಚುಂಗ್ಡಿ ವ್ಯವಹಾರ ಮಾಡಲಿಕ್ಕೆ, ಕಚ್ಚೆ ಉಡಲಿಕ್ಕೆ ಹೇಗೆ ಸಾಧ್ಯ? ನಾಡವರ ವ್ಯವಹಾರ ಅಷ್ಟು ದೊಡ್ಡದಲ್ಲ ಚಿಲ್ಲರೆಯದು, ಅವರು ಬಂಟರಷ್ಟು ಶ್ರೀಮಂತರಲ್ಲ; ಬಡವರು. ಆದ್ದರಿಂದ ಕಚ್ಚೆ ಉಡುವುದು ಸಹಜವೇ ಆಗಿದೆ. ಚುಂಗ್ಡಿ ಹಾಗೂ ಕಚ್ಚೆ ನಾಡವರೆಂಬ ಹೇಳಿಕೆಗಳು ಸಹ, ನಾಡವರು ರಾಜ ಸುಖದಿಂದ ವಂಚಿತರಾಗಿ ಬಂಟರಿಂದ ದೂರವಾದ ಅಂಶವನ್ನು ನೆನಪಿಸುತ್ತವೆ. ಕಚ್ಚೆ ಹಿಂದಕ್ಕೆ ಉತ್ತರ ಕನ್ನಡದ ಮೇಲ್ವರ್ಗದವರಾದಿಯಾಗಿ ಎಲ್ಲರ ಉಡುಪಾಗಿದ್ದರೂ ಶ್ರೀಮಂತರ, ಸರದಾರರ ಉಡುಪಂತೂ ಅಲ್ಲವಾಗಿತ್ತು.

೬. ತುಳು ನಾಡವರ ಸಂಬಂಧ ಕಡಿದ ಬಗೆ :

ಉತ್ತರ ಕನ್ನಡ ನಾಡವರು ತುಳುನಾಡು ತೊರೆದು ಬಂದರೂ, ತುಳು ನಾಡವರು ತಮ್ಮ ಅತ್ತೆಯ ಮಕ್ಕಳು ಎಂಬ ಭಾವನೆಯಿಂದ ಅವರೊಡನೆ ಹಿಂದೆ ವಿವಾಹ ಸಂಬಂಧವನ್ನು ಇಟ್ಟುಕೊಂಡಿದ್ದರಂತೆ, ಹೀಗಿರುವಾಗ ಒಮ್ಮೆ ಉತ್ತರ

ಕನ್ನಡದ ನಾಡವರು ತುಳು ನಾಡಿಗೆ ಹೆಣ್ಣು ಕೇಳಲು ಹೋದಾಗ, ಹೆಣ್ಣಿನ ಮನೆಯ ಒಳಗೆ 'ಹೆಂಡದ ಬೊಡ್ಡೆ' ಕಂಡರಂತೆ. ಕುಡಿತವನ್ನು ರೂಢಿಸಿಕೊಂಡ ಇವರ ಜೊತೆಗೆ ಸಂಬಂಧವೇ ಬೇಡವೆಂದು, ಅವರೊಡನೆ ಹೆಣ್ಣುಕೊಡುಕೊಳ್ಳುವ ಸಂಬಂಧವನ್ನೇ ಕಡಿದು ಕೊಂಡರಂತೆ, ಉತ್ತರ ಕನ್ನಡದ ನಾಡವರಲ್ಲಿ ಹೆಂಡ ಕುಡಿಯುವುದು ಅನೀತಿಯುತ ಕಾರ್ಯವೆನ್ನುವ ಮನೋಭಾವನೆ ಭಾರತಕ್ಕೆ ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ದಟ್ಟವಾಗಿಯೇ ಇದ್ದುದನ್ನು ನಾನು ಚೆನ್ನಾಗಿ ಬಲ್ಲೆ. ಈ ಸಂದರ್ಭದಲ್ಲಿ ನನ್ನ ಬಾಲ್ಯದಲ್ಲಿ ಕಂಡ ಚಿಕ್ಕ ಘಟನೆಯೊಂದು ನೆನಪಾಗುತ್ತದೆ. ನಮ್ಮೂರಿನಲ್ಲೊಬ್ಬ (ಭಾವಿಕೇರಿ) ಕುಡಿದು ಊರಲ್ಲಿ ದಾಂಧಲೆಯೆಬ್ಬಿಸಿದಾಗ, ಊರಿನ ಹಿರಿಯರೆಲ್ಲರೂ ಸೇರಿ ಅವನನ್ನು ತೆಂಗಿನ ಮರಕ್ಕೆ ಕಟ್ಟಿ, ತಲೆಯ ಮೇಲೆ ತಣ್ಣೀರು ಹೊಯ್ದು ಅವನ ನಿಶೆ ಇಳಿದ ಮೇಲೆ, ಅವನಿಗೆ ಗೋಕರ್ಣಕ್ಕೆ ಹೋಗಿ, ಶುದ್ಧಿ ಪಡೆದು ಬರಲು ನಿರ್ದೇಶಿಸಿದರು. ಈಗ ಕಾಲ ಬದಲಾಗಿದೆ. ಕುಡಿಯುವುದು ಟೇಬಲ್ ಮ್ಯಾನರ್ಸ್–ಆಧುನಿಕತೆಯಾಗಿದೆ. ನಮ್ಮ ಘನ ಸರಕಾರವೂ ಸಾಕಷ್ಟು ಹೆಂಡದಂಗಡಿ ತೆರೆಯಲು ಅವಕಾಶ ನೀಡಿ, ಕದ್ದು ಹೆಂಡ ಕುಡಿಯಲು ಹೋಗುವುದನ್ನು ತಪ್ಪಿಸಿದೆ. ಕುಡಿಯುವವರು ನಿರ್ಭಿಡೆಯಿಂದ ರಾಜಾರೋಷವಾಗಿ ಕುಡಿದು ಬೀದಿಯಲ್ಲಿ ಮೆರೆಯಬಹುದಾಗಿದೆ. ಆಧುನಿಕ ಯುಗದಲ್ಲಿ ಹೆಂಡ ಕುಡಿಯುವುದು ಅನೀತಿ ಎಂಬ ಭಾವನೆಯೂ ಉತ್ತರ ಕನ್ನಡದ ನಾಡವರಲ್ಲಿ ಹೊರಟು ಹೋಗಿದೆ; ಕುಡಿಯುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಯ ನಾಡವರಲ್ಲಿ ನಾವಿಬ್ಬರೂ ಒಂದೇ ಎಂಬ ಭಾವನೆ ಇತ್ತೀಚೆಗೆ ಪುನಃ ನೆಲೆಸಿ, ಮತ್ತೆ ವಿವಾಹ ಸಂಬಂಧಗಳು ಕುದುರುತ್ತಲೂ ಇವೆ.

ಈ ಮೇಲಿನ ವದಂತಿ ಹಾಗೂ ಹೇಳಿಕೆ ಕೇಳಿಕೆಗಳು ದಕ್ಷಿಣೋತ್ತರ ಕನ್ನಡ ಜಿಲ್ಲೆಯ ನಾಡವರು ಹಾಗೂ ಬಂಟರು ಒಂದೇ ಜಾತಿಯವರಾಗಿದ್ದರೂ, ಅವರಲ್ಲಿ ಹೆಚ್ಚಿನ ಮಟ್ಟದಲ್ಲಿ ವಿವಾಹ ಸಂಬಂಧಗಳು ನಡೆಯದಿರುವುದಕ್ಕೆ, ಪರಸ್ಪರ ಅಂತರ, ಬಿರುಕು ಹೆಚ್ಚಾಗಲಿಕ್ಕೆ ಅವರಲ್ಲಿಯ ನಡೆ ನಡಾವಳಿಗಳಲ್ಲಿಯ ಏರುಪೇರು ಹಾಗೂ ದೊಡ್ಡಸ್ತಿಕೆ ಹಾಗೂ ಬಡಸ್ತಿಕೆಗಳು ಪ್ರಮುಖ ಕಾರಣಗಳೆನ್ನುವುದನ್ನು ಖಚಿತಪಡಿಸುತ್ತವೆ; ಜೊತೆಗೆ ಉತ್ತರ ಕನ್ನಡದ ನಾಡವರು ತುಳು ನಾಡಿನಿಂದ ಉತ್ತರ ಕನ್ನಡಕ್ಕೆ ವಲಸೆ ಬಂದವರು ಎನ್ನುವುದನ್ನು ದೃಢಪಡಿಸುತ್ತವೆ.

೭. ಕುದ್ರಿ ತಿಂಬ ನಾಡವರು :

ನಾಡವರನ್ನು 'ಕುದುರೆ ತಿಂಬ ನಾಡವರು' ಎಂಬ ಹೇಳಿಕೆಗಳಿಂದ ನಾಡವರನ್ನು ಗೇಲಿ ಮಾಡುವುದನ್ನು ಚಿಕ್ಕಂದಿನಲ್ಲಿ ನಾನು ಕೇಳಿದ್ದೆ. ಈ ಮಾತು ಕೇಳಿದಾಗ ನನಗೆ ಸಿಟ್ಟೂ ಬರುತ್ತಿತ್ತು. ಯಾಕೆಂದರೆ ಕುದುರೆ ಮಾಂಸ ತಿನ್ನುವುದು ನಾಡವರಲ್ಲಿ ನಿಷಿದ್ಧ ನಡವಳಿಕೆ. ಈ ಕುರಿತು ನಾನು ಬುದ್ಧಿ ಕಲಿತ ಮೇಲೆ ಹಲವಾರು ಸಲ ಚಿಂತಿಸಿದ್ದೇನೆ. ಹೀಗಿರುವಾಗ ಸುಮಾರು ಮುವತ್ತು ಮೂವತ್ತೈದು ವರ್ಷಗಳ

ಹಿಂದೆ ನಮ್ಮ ಪುರೋಹಿತ ಭಟ್ಟರಾದ ರಾಮಭಟ್ಟರ ಮನೆಗೆ ಹೋದಾಗ ಅಲ್ಲಿಗೆ ಬಂದ ಅಘನಾಶಿನಿ ಶಂಕರ ಭಟ್ಟರ ಹತ್ತಿರ ಹೀಗೇ ಹಲವಾರು ವಿಷಯ ಚರ್ಚಿಸುವ ಸಂದರ್ಭದಲ್ಲಿ 'ಕುದುರೆ ತಿಂಬ ನಾಡವರು' ಎನ್ನುವ ಹೆಸರು ಬರಲಿಕ್ಕೆ ಕಾರಣವಾಗಿರಬಹುದಾದ ಹಿನ್ನೆಲೆಯನ್ನು ನೀಡಿದರು. ನಾಡವರು ಅಶ್ವಮೇಧ ಯಜ್ಞ ಮಾಡಿದ ರಾಜವಂಶಕ್ಕೆ ಸೇರಿದವರು. ಅಶ್ವಮೇಧವಾದ ಮೇಲೆ ಯಜ್ಞದ ಹವಿಶ್ಶೇಷವನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸುವ ಪದ್ಧತಿಯಿದೆ. ಆದ್ದರಿಂದ 'ನಾಡವರಿಗೆ ಕುದುರೆ ತಿಂಬ ನಾಡವರು' ಎಂದು ಹೇಳಲಾಗುತ್ತದೆ. ಬ್ರಾಹ್ಮಣರನ್ನು 'ಕುರಿ ತಿಂಬ ಬ್ರಾಹ್ಮಣರು' ಎಂದು ಛೇಡಿಸಿದಂತೆ ಇವರನ್ನು 'ಕುದುರೆ ತಿಂಬ ನಾಡವರು' ಎಂದು ಛೇಡಿಸುವ ಪರಿಪಾಠ ಎಂದು ವಿವರಿಸಿದರು. ಈ ಹೇಳಿಕೆಯಿಂದ ನಾಡವರು ಕ್ಷಾತ್ರಪ್ರವೃತ್ತಿಯನ್ನು ಸ್ವೀಕರಿಸಿ ಅಶ್ವಮೇಧ ಯಜ್ಞವನ್ನು ಮಾಡಿದ ರಾಜವಂಶಕ್ಕೆ ಸೇರಿದವರು ಎನ್ನುವುದು ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಅಶ್ವಮೇಧ ಯಾಗವನ್ನು ಮಾಡಿದ ರಾಷ್ಟ್ರಕೂಟರು 'ನಾಡವರು' ಎನ್ನುವ ಡಾ॥ ಶಂ.ಬಾ. ಜೋಶಿಯವರ ಹೇಳಿಕೆಯನ್ನು ನೆನೆಯಬಹುದು.

೮. ನಾಡವರು ಗುರುಶಾಪಗ್ರಸ್ತರು :

ನಾಡವರು ಇಂದು ವೈಷ್ಣವ ಮತಾವಲಂಬಿಗಳು. ಇವರ ಮನೆಯ ಮುಂದೆ ತುಳಸಿ ಕಟ್ಟೆ ಇಲ್ಲವೆ ತುಳಸಿ ಮನೆ ಇದ್ದೇ ಇರುತ್ತದೆ. ಇವರ ಗುರು ತಿರುಪತಿಯ ಸಮೀಪದ ಗೋವಿಂದ ರಾಜ ಪಟ್ಟಣದ ವೈಷ್ಣವ ಸಂಪ್ರದಾಯಕ್ಕೆ ಸೇರಿದ ತಾತಾಚಾರ್ಯ. ತಾತಾಚಾರ್ಯ ಯಾನೆ ನಾಡವರ ಮಠವು ಗೋಕರ್ಣದಲ್ಲಿ ಇದ್ದ ಬಗ್ಗೆ ಹಿರಿಯರು ಹೇಳುತ್ತಾರೆ. ಆದರೆ ಈ ಮಠ ಈಗ ನಾಡವರ ವಶದಲ್ಲಿಲ್ಲ. ಇವರ ಗುರುಪರಂಪರೆಯೂ ತಪ್ಪಿ ಹೋಗಿದೆ. ಇವರು ಗುರುವನ್ನೇ ಕೊಂದವರು; ಗುರುಶಾಪಗ್ರಸ್ತರು ಎಂಬ ವದಂತಿಯೊಂದಿದೆ. ಹಿಂದಕ್ಕೆ ನಾಡವರ ಗುರುಗಳು ಗುರುಕಾಣಿಕೆಯನ್ನು ಸ್ವೀಕರಿಸಲಿಕ್ಕೆ ಊರೂರಿಗೂ ಪಾಲಕಿಯಲ್ಲಿ ಬರುತ್ತಿದ್ದರಂತೆ. ಇಂದಿನಂತೆ ವಾಹನ ಸೌಕರ್ಯಗಳಿಲ್ಲದ ಹಿಂದಿನ ಕಾಲದಲ್ಲಿ ಗುರುಗಳನ್ನು ಶಿಷ್ಯರು ಪಾಲಕಿಯಲ್ಲಿ ಹೊತ್ತು, ಒಂದು ಊರಿನಿಂದ ಇನ್ನೊಂದು ಊರಿಗೆ ಮುಟ್ಟಿಸುತ್ತಿದ್ದರಂತೆ. ಒಮ್ಮೆ ಶಿಷ್ಯರನ್ನು ಅಮಾನವೀಯವಾಗಿ ಕಾಣುವ ಗುರುವೊಬ್ಬನನ್ನು ಪಾಲಕಿಯಲ್ಲಿ ಹೊತ್ತು ಹೊಳೆಯನ್ನು ದಾಟುತ್ತಿರುವಾಗ, ಪಾಲಕಿ ಹೊತ್ತವರು, ಭರತಿಯಿಂದ ಹೊಳೆಯಲ್ಲಿ ನೀರು ಹೆಚ್ಚಾದ ಪ್ರಯುಕ್ತ, ನೀರಿಗಿಳಿಯಲು ಹಿಂದೆ ಮುಂದೆ ನೋಡುತ್ತಿರುವಾಗ, ಗುರು ಪಾಲಕಿ ಹೊತ್ತವರ ಮನಸ್ಸಿಗೆ ನೋವಾಗುವಂತೆ ಬಯ್ದು, ಪಾಲಕಿ ಹೊತ್ತು ನೀರಿಗಿಳಿಯಲು ಆಜ್ಞೆ ವಿಧಿಸಿದನಂತೆ. ಆಗ ಪಾಲಕಿಯನ್ನು ಹೊತ್ತವರಲ್ಲೊಬ್ಬ 'ನಮ್ಮಿಂದ ಹೊಳೆ ಹಾಯಲಾಗದು. ನೀವೂ ನಮಗೆ ಆಜ್ಞಾಪಿಸಿದಂತೆ ಹೊಳೆಗಿಳಿದು, ನದಿ ನೀರಿನ ಆಳ ನೋಡಬಹುದಲ್ಲ. ಜೀವಂತವಾಗಿರುವವರನ್ನು ಹೊರುವುದು ಸರಿಯಲ್ಲ; ಹೊರುವುದು ಹೆಣವನ್ನು, ನೀವು ಹೆಣವಲ್ಲ. ಮನುಷ್ಯರಿಂದ ಹೊರಿಸಿಕೊಳ್ಳುವ ನಿಮಗೆ ನಾಚಿಕೆಯಾಗಬೇಕು'. ಎಂದೆಲ್ಲ ಕೂಗಾಡಿದನಂತೆ.

ಇದರಿಂದ ಗುರು ಮತ್ತಷ್ಟು ಸಿಟ್ಟಿಗೆದ್ದು ಎಲ್ಲರಿಗೆ ಪಾಲಕಿ ಸಹಿತ ಕೂಡಲೇ ನೀರಿಗಿಳಿಯಲು ಮತ್ತೆ ಆಜ್ಞಾಪಿಸಿದನಂತೆ. ಆಗ ಪಾಲಕಿ ಹೊತ್ತವರಿಗೂ ಸಹ ನದಿ ನೀರಿನ ಆಳದ ಪರಿವೆಯಿಲ್ಲದೆ ಗುರು ಅಬ್ಬರಿಸುವುದನ್ನು ಕಂಡು ಕೆರಳಿ ನೀರಿಗಿಳಿದು ಪಾಲಕಿಯನ್ನು ಗುರುಸಹಿತವಾಗಿ ನದಿ ನೀರಿನಲ್ಲಿ ಮುಳುಗಿಸಿದರಂತೆ. ನೀರಿನಲ್ಲಿ ಮುಳುಗುತ್ತಿರುವಾಗ ಗುರು ಕ್ರುದ್ಧನಾಗಿ 'ನೀವು ಉದ್ದಾರವಾಗದೇ ಹೋಗಿ' ಎಂದು ಶಾಪಕೊಟ್ಟು ಜಲಸಮಾಧಿ ಹೊಂದಿದನಂತೆ!

ಈಗಲೂ ನಾಡವರಲ್ಲಿ ಯಾರಾದರೂ ಉನ್ನತ ಸ್ಥಾನಕ್ಕೇರಿದಾಗ, ಪ್ರಾಣಾಂತಿಕ ಅಪಾಯಕ್ಕೊಳಗಾಗುತ್ತಾರೆ; ಅವರಿಗೆ ಯಾವುದೋ ದುರ್ಬುದ್ಧಿ ಬಂದು, ಉನ್ನತ ಅಧಿಕಾರವನ್ನು ಕಳೆದುಕೊಳ್ಳುತ್ತಾರೆ; ಎಂಬ ಜನಜನಿತವಾದ ನಂಬಿಕೆಗಳಿವೆ. ಈ ಜನಾಂಗದಲ್ಲಿ ೧೯೧೫ರ ಸುಮಾರಿಗೆ ವೆಂಕಣ್ಣ ನಾಯಕ ಗೊನೆಹಳ್ಳಿ ಎನ್ನುವವರು ಎರಡು ಸಲ ಇಂಗ್ಲೆಂಡಿಗೆ ಹೋಗಿ, ಎಂ.ಎ. ಬಾರ್ ಎಟ್ ಲಾ ಮುಗಿಸಿ, ವಿಜಾಪುರ ಜಿಲ್ಲೆಯ ಕಲೆಕ್ಟರರಾದರು. ಆ ಕಾಲದಲ್ಲಿ ಕಲೆಕ್ಟರರಾಗುವವರು ಬಿಳಿಯರು. ಭಾರತೀಯರಿಗೆ ಆ ಅವಕಾಶ ಕಡಿಮೆ. ಮಹಾ ಮೇಧಾವಿಯೂ ಕರ್ನಾಟಕದಲ್ಲಿ ಸಹಕಾರಿ ಚಳುವಳಿಯ ಮುಂಚೂಣಿಯ ನಾಯಕರೂ, ರೈತರ ಹಾಗೂ ಹಿಂದುಳಿದವರ ಬಗ್ಗೆ ಅಪಾರ ಕಳಕಳಿಯುಳ್ಳವರೂ ಪ್ರಗತಿಪರ ಯೋಜನೆಗಳ ಪ್ರತಿಪಾದಕರೂ, ಆದ ಈ ಧೀಮಂತ ವ್ಯಕ್ತಿ ನಿವೃತ್ತಿ ಪೂರ್ವದಲ್ಲಿಯೇ ತೀರಿಕೊಂಡಾಗ, ಬಡವರ ಬಂಧು, ಹಿಂದುಳಿದವರ ಉದ್ಧಾರಕ್ಕಾಗಿ ಹೆಣಗಿದ, ಅಜಾತ ಶತ್ರುವೆನಿಸಿದ ಮುಂಬಯಿ ಇಲಾಖೆಯ ಬಿ. ಜಿ. ಖೇರ ಸಂಪುಟದಲ್ಲಿ ಸಚಿವರಾದ ಸ.ಪ. ಗಾಂವಕರರು ಚುನಾವಣೆಯಲ್ಲಿ ಸೋತಾಗ, ಹೆಸರಾಂತ ವಕೀಲರೂ, ಉನ್ನತ ರಾಜಕಾರಣಿ ಹಾಗೂ ಶುದ್ಧ ಹಸ್ತರೆಂದು ಖ್ಯಾತಿ ಪಡೆದ ಆರ್.ಬಿ. ನಾಯಕರು ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ತೀರಿಕೊಂಡಾಗ, ಅಂತೆಯೇ ಕೆಲವರು ಉನ್ನತ ಹುದ್ದೆಯಲ್ಲಿದ್ದಾಗ, ಯಾವುದೇ ಕಾರಣದಿಂದ ಹುದ್ದೆಗೆ ರಾಜೀನಾಮೆ ನೀಡಿಬಂದಾಗ, ನಾಡವರ ಹಿರಿಯರು, 'ಏನು ಮಾಡುವುದು ನಾಡವರಿಗೆ ಗುರು ಶಾಪ' ಎಂದು ವಿಷಾದಿಸುವುದನ್ನು ನಾನು ಕೇಳಿದ್ದೇನೆ.

೯. ಕೊನೆ ಮಾತು :

ಮೇಲಿನೆಲ್ಲ ವದಂತಿಗಳು, ನಾಡವರು ಪ್ರಗತಿಪರ ನಿಲುವುಳ್ಳವರು, ಧೈರ್ಯಶಾಲಿಗಳು, ನಿರ್ವ್ಯಸನಿಗಳು, ಮೂಢ ನಂಬಿಕೆಗಳಿಗೆ ಪಕ್ಕಾಗದವರು, ಬಂಡಾಯ ಮನೋ ಭಾವನೆಯುಳ್ಳವರು, ಆರ್ಥಿಕವಾಗಿ ಹಿಂದುಳಿದವರು, ಸ್ವಾತಂತ್ರ್ಯ ಪ್ರೇಮಿಗಳು, ತಲೆಬಾಗದ ಸ್ವಭಾವವುಳ್ಳವರು ಎನ್ನುವುದನ್ನು ಸಾಬೀತುಪಡಿಸುತ್ತವೆ. ಕರ್ನಾಟಕದ ಇತಿಹಾಸದಲ್ಲಿ ಅಂಕೋಲೆಯನ್ನು ಕರ್ನಾಟಕದ ಬಾರ್ಡೋಲಿಯನ್ನಾಗಿಸಿದ ಕೀರ್ತಿಯಲ್ಲಿ ಮುಕ್ಕಾಲು ಪಾಲು ನಾಡವರಿಗೆ ಸಲ್ಲುತ್ತದೆ– ಎಂದರೆ ತಪ್ಪಾಗಲಾರದು. ಆದರೆ ಈಗ ಇವರಲ್ಲಿ ಸರಿಯಾದ ಸಂಘಟನೆಯ

ಅಭಾವ, ಆರ್ಥಿಕ ಬೆನ್ನೆಲುಬು ಗಟ್ಟಿಯಾಗಿರದಿದ್ದರೂ ತಾವು ದೊಡ್ಡವರೆನ್ನುವ ಅಹಂಭಾವ, ಒಬ್ಬರ ಕಾಲನ್ನು ಒಬ್ಬರು ಜಗ್ಗುವ ಕುಚೋದ್ಯಗಳ ದೆಸೆಯಿಂದಾಗಿ, ಸಾಮಾಜಿಕ, ಸಾಹಿತ್ಯಿಕ, ಔದ್ಯಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮುಂಚೂಣಿಯ ನಾಯಕರಾಗಿ ಮಿಂಚುತ್ತಿರುವ ನೇತಾರರು ಕಾಣುತ್ತಿಲ್ಲದಿರುವುದು ವಿಷಾದನೀಯ. ಇದಕ್ಕೆ ಗುರು ಶಾಪ ಕಾರಣವೆನ್ನೋಣವೇ? ವಿಚಾರವಂತ ನಾಡವರ ಸಮಾಜದ ಬಹುಮಂದಿ ಇದನ್ನು ಒಪ್ಪಲಿಕ್ಕಿಲ್ಲ. ಬದುಕಿನ ಹಲವು ರಂಗಗಳಲ್ಲಿ ಕಣ್ಣಿಗೆ ಕೋರೈಸುವಂಥ ನಾಯಕರು ನಾಡವರ ಸಮಾಜದಲ್ಲಿ ಕಾಣದಿರುವುದಕ್ಕೆ ಪ್ರತಿಯೊಬ್ಬ ಪ್ರಜ್ಞಾವಂತ ನಾಡವನೂ ಅಂತರ್ಮುಖಿಯಾಗಿ ಚಿಂತಿಸುವದೊಳಿತು.

ಆಕರ ಮೂಲ	:	ಬೆಳಕು ಸ್ಮರಣ ಸಂಚಿಕೆ. (೧೯೯೪)
ಲೇಖಕರು	:	**ಡಾ. ಎನ್.ಆರ್. ನಾಯಕ್**
ಆಕರ ಮೂಲ	:	೧. ಜಾಣೆ ಕನ್ನಡವ ತಿಳಿದ್ಹೇಳೆ (೧೯೮೩)
	:	ಶಾಂತಿ ನಾಯಕ
	:	ಜಾನಪದ ಪ್ರಕಾಶನ ಹೊನ್ನಾವರ
		೨.ಡಾ. ಎನ್. ಆರ್. ನಾಯಕರ ಅಪ್ರಕಟಿತ ಕಡತದಿಂದ

೪. ನಾಡವರ ಗರತಿ ಕಂಡ ಬಾಲನ ಸೊಗಸು

ಹುಟ್ಟಿದ ಮನೆ ಹಾಗೂ ಕೊಟ್ಟ ಮನೆಗಳೆರಡರ ಸಂತೋಷವನ್ನು ಹೆಚ್ಚಿಸುವ ಕುವರರನ್ನು ಪಡೆದಾಗಲೇ ಗರತಿ ತನ್ನ ವೈವಾಹಿಕ ಜೀವನದ ಸಾಫಲ್ಯವನ್ನು ಕಂಡುಕೊಳ್ಳುವುದು. ಕಂದನಿಲ್ಲದ ಬದುಕು ಅವಳ ಪಾಲಿಗೆ ಕಳುಹೀನ. ಅಂತಹ ಅಸಾರ ಜೀವನ ಅವಳಿಗೆ ಸಹ್ಯವಲ್ಲ. ಅದಕ್ಕಾಗಿ ಅವಳು ತನ್ನ ಬದುಕಿನ ಬರಡುತನವನ್ನು ಹಿಂಗಿಸಿ ರಸಕಳಿಕೆಯನ್ನು ಬಿರಿಸುವ ಕುವರನಿಗಾಗಿ ಹಲುಬಿ ಹಂಬಲಿಸುವುದು ಸಹಜವಾಗಿದೆ :

ಸಿರಿದೇವಿ ಕೋಡೇ ವರವೇನ ಬೇಡೂವೆ
ಸೆರೆತುಂಬ ಹಾಲು ಗುರುಬಲ। ತೂಗುತುಟ್ಲ
ವರವಾಗ್ಲೇ ನಮ್ಮಾ ಮನಿಯಲ್ಲೇ।

ಕಂದನ ಸಿರಿಗಿಂತಲೂ ಹಿರಿದಾದ ಸಿರಿ ಗರತಿಗೆ ಇನ್ನಾವುದಿದೆ? ಶ್ರೀದೇವಿಯ ಹತ್ತಿರ ಸಿರಿಸಂಪತ್ತಿನಕ್ಕಿಂತಲೂ ಮೊದಲು ಅವಳು ಬೇಡುವುದು ತೂಗು ತೊಟ್ಟಿಲದಲ್ಲಿ ಜೀಕಾಡುವ ಮಗುವನ್ನು, ಮಗುವಿನ ಜೋಪಾನಕ್ಕೆ ಎದೆ ತುಂಬ ಹಾಲನ್ನು, ಮಗುವಿನ ಶ್ರೋಯೋಭಿವೃದ್ಧಿಗಾಗಿ ಗುರುಬಲವನ್ನು

ಗಂಡೂ ಮಕ್ಕಳ ಪಲವಾ ಒಂಬತ್ತಾ ಕುಡ್ತಾಯೇ
ಒಂಬತ್ರಮ್ಮೆನೇ ಕಳಸಾವಾ। ತಡ್ದೇಬರುವಾ
ರಂಬೇರಯ್ವರ ಕುಡ್ತಾಯೇ॥
ಮಕ್ಕಳು ಮಕ್ಕಳು ಎಲ್ಲರು ಸರಿಯಂದೇ
ಹಚ್ಜೂವಳಮ್ಮಾ ಕಡ್ಲೀಯಾ। ಬೆಳಿಯಂಗೇ
ಹೆಚ್ಜಾಲೇ ನಮ್ಮ ಮನಿಮಕ್ಳ॥

ಕೇವಲ ಅಷ್ಟಪುತ್ರ ಸೌಭಾಗ್ಯದಿಂದ ಈ ತಾಯಿಯ ಮನತಣಿಯದು. ಅವಳಿಗೆ ಮನೆತನದ ಕೀರ್ತಿಯನ್ನು ಸುತ್ತೆಲ್ಲ ಪಸರಿಸುವ ಒಂಬತ್ತು ಗಂಡು ರತ್ನಗಳು ಬೇಕು; ಪಕ್ಕದಲ್ಲಿಯೇ ಕುಲದ ಅಗ್ಗಳಿಕೆಯ ಕಲಶವನ್ನು ಮೆರೆಯಿಸುವ ಪಂಚಕನ್ಯೆಯರೂ ಬೇಕು. ಇಷ್ಟಕ್ಕಾದರೂ ತೃಪ್ತಿಯುಂಟೆ? ಇಲ್ಲ. ಕಡಲೆಯ ಬೆಳೆಯ ಹಾಗೆ ಮಕ್ಕಳು ಗೆಜ್ಜೆಗಟ್ಟಿ ಮನೆಯಲ್ಲಿ ಗಿಜಿ ಗುಟ್ಟುತ್ತಿರಬೇಕು; ಆಗ ಮಾತ್ರ ಇವಳಿಗೆ ಸಂತೃಪ್ತಿ. ಇಂದಿನ ದುಷ್ಕಾಲದಲ್ಲಿ ಈ ಗರತಿಯ ವಿಪರೀತ ಸಂತಾನೇಚ್ಛೆ ನಮಗೆ ವಿಚಿತ್ರ ಹಾಗೂ ವಿಪರೀತವಾಗಿ ಕಂಡರೂ, ಸಮೃದ್ಧಿಯ ಬದುಕನ್ನು ಬಾಳುವವಳಿಗೆ ಇದು ಅಸಹಜವೇನಲ್ಲ.

ಹತ್ತು ಹಲವು ದೇವರಿಗೆ ಹರಕೆ ಹೊತ್ತು ಹಡೆದ ತನ್ನ ಬಾಲನ ಚೆಲುವು ಒಲವುಗಳನ್ನ ಗರತಿ ಹಾಡಿನಲ್ಲಿ ಮನೋಜ್ಞವಾಗಿ ಕಂಡರಿಸಿದ್ದಾಳೆ.

ಹಡದಾ ತಾಯಿಗೇ ಹುಳ್ವಾ ಕನ್ನಡಿಯಾದಾ
ಈ ರಾಜೀದಲ್ಲೇ ಉದಿಯಾದಾ। ಬಾಲಯ್ಯಾ
ಬಳಗಾಕೇ ಮಾಣಕ್ದಾ ಹರಳಾದಾ।

ಹಡೆದ ತಾಯಿಗೆ ಹೊಳೆಯುವ ಕನ್ನಡಿಯಾಗಿದ್ದಾನೆ ಕುಮಾರ. "ಹಡೆದಾ ತಾಯೀಗೇ ಹುಳುವಾ ಕನ್ನಡಿಯಾದಾ" ಎನ್ನುವ ಸಾರ್ಥಕ ರೂಪಕವು ಮಗುವಿನ ಕಾಂತಿಶ್ರೀಯನ್ನು ಪ್ರತಿನಿಧಿಸುವುದರ ಜೊತೆಗೆ ಮಗು ತಾಯಿಯ ಪಡಿಯಚ್ಚೆನ್ನುವುದನ್ನೂ ಸಾದರಪಡಿಸುವುದು. ತಾಯಿ ತನ್ನ ಪ್ರತಿರೂಪವನ್ನು ನೋಡಲು ಕನ್ನಡಿಗಾಗಿ ತಡಕಾಡಬೇಕಾಗಿಲ್ಲ, ತನ್ನ ಮುದ್ದು ಕಂದನಲ್ಲಿಯೇ ತನ್ನ ಪ್ರತಿರೂಪವನ್ನು ಕಾಣುತ್ತಾಳೆ. ತಂದೆ, ತಾಯಿ, ಬಂಧು, ಬಳಗದವರ ಆಕರ್ಷಣೆಯ ಕೇಂದ್ರವಾದ ಮಗುವಿನ ಮೈಯ ಮಾಣಿಕದ ಕಾಂತಿಯು ಎಲ್ಲರಿಗೂ ಅಚ್ಚುಮೆಚ್ಚಾದ ಅಂಶವನ್ನು ಗರತಿ ನಲ್ಮೆಯಿಂದ ಹಾಡುತ್ತಾಳೆ :

ತುಟ್ಟಾದಲ್ಲುಂದಾ ತೊಳ್ದಾಮುತ್ತಕಂಡೆ
ಹೊಟ್ಟೆ ಮೈನ್ಮಾಡೇ ಉರ್ಗೀದ। ಕಂದಯ್ಗೆ
ಮುತ್ತೀನಾ ದಿಟ್ಟೀ ತಿಗ್ದೀಡ।

ಸ್ನಾನಮಾಡಿ ತೊಟ್ಟಿಲಲ್ಲಿ ಮೇಲ್ಮುಖಮಾಡಿ ಮಲಗಿದ ಮಗುವಿನ ಧವಳಶ್ರೀಕಾಂತಿ ತಾಯಿಯ ನಲ್ಮೆ ತುಂಬಿದ ಕಣ್ಣಿಗೆ ತೊಳೆದ ಮುತ್ತಿನ ಕಾಂತಿಯಾಗಿ ಗೋಚರಿಸುತ್ತದೆ. "ಮುತ್ತಿನ ದೃಷ್ಟಿಗೆ ತೆಗೆ" ಎಂಬ ಮಾತಿನಲ್ಲಿ ತನ್ನ ಖೋಡಿ ದೃಷ್ಟಿ ತಾಗಿ ಮಗುವಿನ ಅಕಳಂಕ ಕಾಂತಿ ಮಸುಳಿಸಬಹುದೆಂಬ ಕಳವಳವೂ ಪಡಿಮೂಡಿದೆ.

ನಿದ್ದೂರೇ ಬಂದಾವೇ ನನ್ಮುದ್ದೂ ಬಾಲಯ್ಗೇ
ನಿದ್ದೂರಿಯಲ್ಲ ನಿದ್ವಾನ। ಗ್ಕೊಕನ್ನಾ
ಸಿದ್ದವ್ರು ಕೊಟ್ಟ ಸಿವದ್ಯೆನಾ।

ಮಗನು ಸಂತೃಪ್ತಿಯಿಂದ ನಿದ್ರಿಸುವುದು ತಾಯಿಗೆ ನಿದ್ರೆಯಾಗಿ ಕಾಣುವುದಿಲ್ಲ. ಅವಳ ಕಣ್ಣಿಗೆ ಮಗುವು ಮಾಡುವ ನಿದ್ದೆಯು, ಗೋಕರ್ಣದ ಸಿದ್ಧರು ಕೊಟ್ಟ ಶಿವಧ್ಯಾನವೆಂಬ ನಿಧಾನವಾಗಿ ಕಾಣುತ್ತದೆ. ಈ ಹಾಡಿನಲ್ಲಿ ಹಣಕಿ ಹಾಕಿದ ಅಪಹ್ನುತಿ ಅಲಂಕಾರ, ಅಲಂಕರಕ್ಕಾಗಿ ಬರದೇ ಸಹಜ ಸುಂದರವಾಗಿ ಬಂದಿದೆ.

ಬಾಲನಾಮಿಯ್ಯ ಬಾಳೀ ಹಣ್ಣೀನಂಗೇ
ಏನುಂಡೇ ಮಗ್ನಾ ಪಡ್ದಿಯೇ। ಬಾಳೀಯಾ
ಕುಂಡೂಕಿಲಿರುವಾ ತನಿಹಣ್ಣ॥

ಎಲ್ಲವ್ರಂಗಲ್ಲವೇ ಬಲ್ಲಿಂದ್ರನನ್ಬಾಲಯ್ಯಾ
ನೆಲ್ಲಂಗಿ ತೋಳ ನೆಗ್ಮೊರೆ। ಬಾಲಯ್ಯಾ
ಕಾಲಮ್ಯೆನ್ ಪದ್ಮ ಹುಳುವಾದ॥

ಬಾಳೆಗೊನೆಯ ತನಿಹಣ್ಣನ್ನುಂಡು ಗರತಿಯು ಪಡೆದ ಮಗನ ಮೈ ಬಣ್ಣವು ಬಾಳೆಯ ಹಣ್ಣಿನಂತೆ. ಅವನದು ನೆಲ್ಲಂಗಿ ತೋಳು. ಮುಖದ ಮೇಲೆ ಯಾವಾಗಲೂ ನಗುಕಳೆ. ಕಾಲ ಮೇಲೆ ಹೊಳೆಯುವ ಪದ್ಮವಿದೆ.

ಆತಾ ಸೊಳ್ದಾರೆ ಯಾತಾರಾ ಪರ್ಮ್ಳಾ
ನಮ್ಮ ಮನಿಯಲ್ಲೇ ಬಾಲಯ್ಯಾ। ಸೊಳ್ದಾರೇ
ಗಂದಾದಾ ಗಿಟ್ಕಾ ತೆಗದಂಗೇ।

ಪದ್ಮಪಾದದ ಸುಕುಮಾರ ಗಿಲಗಿಲನೆ ಗಿಲುಕಿ ಮನೆಯಲ್ಲಿ ಸುಳಿದಾಡಿದರೆ, ಗಂಧದ ಗಿಟಕವನ್ನು ಒಮ್ಮಿಲೇ ತೆಗೆದಂತೆ ಮನೆಯೆಲ್ಲ ಗಮ್ಮನೆಸೆಯುವುದು. ಅರ್ಭಕನಾಡುವ ಮನೆಯಲ್ಲಿ ಶ್ರೀಗಂಧದ ಕಂಪು, ತಂಪುಗಳೆರಡೂ ಇಡಿಕಿರಿದಿರುವುದನ್ನು ಅಭಿವ್ಯಕ್ತಿಗೊಳಿಸಲು ಗರತಿಕೊಟ್ಟ ಉಪಮೆ ಅರ್ಥಪೂರ್ಣವಾಗಿದೆ.

ಕಲ್ಲಪ್ಪ ಸ್ವೊಮೀಯೇ ನೀವಿಲ್ಲೀಗೋಗ್ವರಿ
ನೆಲ್ಲಾಬೇಕ್ ಮಾತಾ ನುಡಿಬೇಕ। ಬಾಲಯ್ಗೇ
ನಿಮ್ಮಟ್ಟಾಯಿಸವಾ ಕೊಡಬೇಕ॥
ಸಾಗರಗಲ್ಲಾಯಿಸವಾಗಲೇ ಬಾಲಯ್ಗೇ
ಹಾಲಿಳ್ಳಿ ಮರಕೇ ಹಲಿಹುವ್ವೆ। ಬಾಲಯ್ಯಾ
ಬಾಸಿಂಗ ಬಾಗ್ಯಾಕು ಹರ್ಲೊವೇ॥

ವಂಶವೃಕ್ಷದ ಕುಡಿಯೊಡೆಸುವ ಮಗನ ಆಯುಪುಷ್ಟಿಗಾಗಿ ತಾಯಿ ಕಂಡ ಕಂಡ ಕಲ್ಲಿಗೆ ನಮಸ್ಕರಿಸುತ್ತಾಳೆ. ಅಬ್ಬರದ ತೆರೆಯ ಆಘಾತಕ್ಕೆ ವಿಚಲಿತವಾಗದ ಸಾಗರದ ಕಲ್ಲಿನಂತಹ ದೃಢ ಹಾಗೂ ದೀರ್ಘಾಯುವುಳ್ಳ ಬದುಕನ್ನು ಮಗನು ಹೊಂದಲೆಂದು ಹಾರೈಸುತ್ತಾಳೆ. ಅವನ ಬಾಸಿಂಗ ಭಾಗ್ಯಕ್ಕಾಗಿ ಹರಸುತ್ತಾಳೆ. ತನ್ನ ಹರಕೆಯ ಪೂರ್ತಿಗಾಗಿ, ಅವಳು ಹಾಲು ವೃಕ್ಷ ಅಶ್ವತ್ಥದ ಮುಂದೆ ರಂಗೋಲಿ ಬರೆಯುತ್ತಾಳೆ, "ಅಶ್ವತ್ಥೋ ದೇವ ಸದನಃ" ಎಂಬ ಅಥರ್ವಣ ವೇದವಚನದ ಅರಿವು ಗರತಿಗಿರದಿದ್ದರೂ, ಅರಳಿಮರದಲ್ಲಿ ದೈವತ್ವವನ್ನು ಅವಳು ಪರಂಪರೆಯಿಂದ ಕಂಡುಕೊಂಡಿದ್ದಾಳೆ.

ಬಾಲೇ ಹುಟ್ಟದ್ನೇ ಕಾಲೀಗ್ ಕೀಲಾದಾನೇ
ಚಿಚ್ಚೀದಾ ಕೊಡ್ನಾ ತಗ್ರೊಡಾ। ಬಾಲಯ್ಯಾ
ಹಾಕೀದ ತುತ್ತು ಉಣ್ಗೊಡಾ।

ಹೇಳೀದಾ ಮಾತಾ ಕ್ಯಾಳಾನೇ ಬಾಲಯ್ಯಾ
ತುಂಬೀದಾ ಕೊಡ್ನ ಮಗ್ಗೀದಾ। ಹೊನ್ನೊಡಿಯಾರಾ
ಕಲ್ಲಾ ಬಾಗ್ಲಾವೇ ಅರ್ಲಾದು॥
ಅರ್ಲಾದಾರಾಗಾಲೇ ಹೊಸ್ಮಣ್ಣಾ ಹುಯ್ಲೂವೇ
ಬಾಲಾರಿಗ್ ಸುಕ್ವಾ ಕುಡ್ತಾಯೇ॥

ಬೆಳೆದು ಓಡಾಡುವ ಮಗು ತಾಯಿಯ ಮನೆವಾಳ್ತೆಯ ಕೆಲಸಗಳನ್ನು ಸುಸೂತ್ರವಾಗಿ ನಡೆಯಗೊಡುವುದಿಲ್ಲ. ಹೇಳಿದ ಮಾತು ಕೇಳುವುದಿಲ್ಲ. ಆದರೂ ಸಹನೆಯ ಮೂರ್ತಿಯಾದ ತಾಯಿ ಮಗನ ಸಕಲ ಕೀಟಲೆಗಳನ್ನು ಸಹಿಸಿ ಮಗನಿಗೆ ಸದಾ ಸುಖವನ್ನೇ ಹಾರೈಸುವಳು :

ಹೊಸ್ಬಾಲೇ ಹೊಟ್ಬಾಲೇ ಈ ಬಾಲೇ ನಮ್ಗೆಲ್ಲೇ
ಕೆಟ್ಬಾರು ಕೆಡ್ಲೆ ಮನಿಗೆಲ್ಸಾ। ಬಾಲಯ್ಯಾನಾ
ಚಿಚ್ಚೀ ಮುದ್ದಾಡೇ ಇರ್‍ವಾನೇ॥

ಮಗನ ಕರಕರೆಯನ್ನು ನೆನೆದು, ತನ್ನ ಕಾರ್ಯಕಲಾಪಗಳಿಗೆ ಅವನೊಡ್ಡುವ ಅಡಚಣೆಗಳನ್ನು ಚಿಂತಿಸಿ ತಾಯಿ ಬೇಸರಿಸುವುದಿಲ್ಲ. ಬಾಲನ ಕರಕರೆ ಕೀಟಲೆಗಳೆಲ್ಲ ತಾಯಿಗೆ ಯಾತನೆಯನ್ನು ನೀಡಿದರೂ ತಾಯಿಯ ಪಾಲಿಗೆ ಅವೆಲ್ಲ ಮಧುರಯಾತನೆಗಳು. ಇಂತಹ ಮಧುರ ಯಾತನೆಗಳೆಲ್ಲ ತಾಯಿಗೆ ಸಹ್ಯವಾಗುವುದರಿಂದಲೇ, ಅವಳಿಗೆ ಎತ್ತಿ ಮುದ್ದಾಡಲು ಮತ್ತೆ ಮತ್ತೆ ಮಗು ಬೇಕೇ ಬೇಕು.

ಬಾಲೇ ಬರ್ಮಚಾರೇ ಬಾವಿ ನೀರೊಣ್ಣಾನೇ
ದೈವರೆಗ್ಗೆರಿಯಾ ಹಣ್ಣೀರಾ। ಮಿಂದೀಕಂಡೇ
ಬಾಲಾರಾಡದ್ರೇ ಬುಗ್ರೀಯಾ॥
ಸಾರಸ್ದಾ ಮನಿಯಲ್ಲೇ ನೀರಚೆಲ್ದವ್ರೆರೇ
ಪಾರೀಗೊಳಾಡೇ ಗಿಳಿಯಾಡೇ। ನಮ್ಮನಿಯಾ
ಹಸ್ಬಾಲಾರಾಡೇ ದೂಳೆದ್ದು॥

ಮುದ್ದಿನ ಮಗು, ಸರಿಕರ ಜೊತೆಯಲ್ಲಿ ಚೆಂಡು ಬಗರೆಯಾಟವನ್ನಾಡಿ ನೆಲವನ್ನು ಧೂಳಿದೂಸರಗೊಳಿಸಿದರೂ, ಸಾರಣೆಕಾರಣೆ ಮಾಡಿದ ನೆಲದ ಮೇಲೆ ನೀರು ಚೆಲ್ಲಿ ನೆಲದ ನೈರ್ಮಲ್ಯವನ್ನು ಕೆಡಿಸಿದರೂ ತಾಯಿಗೆ ವ್ಯಥೆಯಿಲ್ಲ. ಅವಳ ಪಾಲಿಗೆ ಹಸುಮಕ್ಕಳಾಟ, ಪಾರಿವಾಳ ಹಾಗೂ ಶುಕ ಶಿಶುಗಳ ಚೆಲ್ಲಾಟದಂತೆ ಆಪ್ಯಾಯಮಾನವಾಗುತ್ತದೆ.

ಒಂದು ಹಂತದಲ್ಲಿ ಮಗುವಿನ ಕಿಲಾಡಿತನವನ್ನು ಸಹಿಸಿದ ತಾಯಿ, ಮಗು ಮಾತು ಕಲಿತು ಪ್ರಬುದ್ಧನಾದ ಇನ್ನೊಂದು ಹಂತದಲ್ಲಿ ಅದನ್ನು ಸಹಿಸಳು. ಆಗ ಅವನು ಓದು ಬರೆಹ ಕಲಿಯಬೇಕು:

ಜಾಣ ಜಾಣರ ನಿಡ್ಗೇ ಹೋಗೀ ಬಾ ಬಾಲಯ್ಯ
ಮಾಡೀಸಿ ಕುಡ್ವೆ ಹಲಗೀಯಾ। ಮಂಚದಮ್ಮೆನೇ
ಓದಿಬಾ ಜಾಣ್ರ ಮಟ್ಕೋಗೆ।

ಮಗನು ಜಾಣಗುರುವಿನೆಡೆಗೆ ಹೋಗಿ. ಜಾಣರಾದ ಒಡನಾಡಿಗಳ ಜೊತೆಯಲ್ಲಿ ಓದು ಬರೆಹ ಕಲಿತು ಧೀಮಂತನಾಗಬೇಕು.

ಬುದ್ವಂತನಾಗೋ ಬುದ್ಧಿಲೇ ಬೂಪತಿಯಾಗೋ
ರುದ್ರಾಕ್ಷೀನಾಗೋ ಕುಳ್ಳೀಗೇ। ಬಾಲಯ್ಯಾ
ಬಲವಂತನಾಗೋ ದರಿಯಲ್ಲೇ॥

ಮಗನು ಬುದ್ಧಿಯಲ್ಲಿ ರಾಜನಾಗಬೇಕು. ಬುದ್ಧಿಯಲ್ಲಿ ಜೊರೆಯಲ್ಲಿ ಆತನು ಬಲವಂತನೂ ಆಗಬೇಕು. ಆದರೆ ಈ ಬುದ್ಧಿ ಮತ್ತು ಬಲಗಳು ಶುಚಿಯಾಗಿರಬೇಕು. ಎನ್ನುವ ಆಶಯವನ್ನು "ರುದ್ರಾಕ್ಷಿಯಾಗು ಕೊರಳಿಗೆ" ಎನ್ನುವ ಮಾತು ಸಮರ್ಥಿಸುತ್ತದೆ.

ದೊಡ್ಡ ದೊಡ್ಡೆಲಿಯಾಗ ಉಜ್ರದ ಕುಡಿಯಾಗ
ದ್ಯೆವರಂಗಳಕು ನಿರಳಾಗ। ಬಾಲಯ್ಯ
ಕಂಡದ್ದುಂದ್ದೇಳ ಸಬಿಯಲ್ಲೇ॥

ಬುದ್ಧಿ, ಬಲಗಳ ಶುಚಿತ್ವದ ಸಮನ್ವಯವನ್ನು ಸಾಧಿಸಿದ ಕುಮಾರ ಎಲೆಯಂತೆ ಮೃದುವಾಗಿ ಹಸುರಿಸಿ, ಸ್ನಿಗ್ಧಕೋಮಲನಾಗಿ, ವಜ್ರದ ಕುಡಿಯಂತೆ ಕಠಿಣನಾಗಿ ಧರ್ಮ ರಕ್ಷಣೆಗೆ ನೆರಳಾಗಿ ನಿಲ್ಲಬೇಕು. ಮಗನ ಬುದ್ಧಿ ಮತ್ತು ಬಲಗಳು ಧರ್ಮರಕ್ಷಣೆಗಾಗಿ ವಿನಿಯೋಗವಾಗಬೇಕು. ಗರತಿಯ ಈ ಉತ್ಕಟವಾದ ಇಚ್ಛೆ, "ದೇವರ ಅಂಗಳಕ್ಕೆ ನೆರಳಾಗು" ಎಂಬ ನುಡಿಯಲ್ಲಿ ಕೆನೆಗಟ್ಟಿ ನಿಂತಿದೆ. ಧರ್ಮ ರಕ್ಷಕನಾದ ಮಗ, ಸತ್ಯ ಪ್ರತಿಪಾದಕನೂ ಆಗಬೇಕು. "ಸತ್ಯಂ ವದ ಧರ್ಮಂ ಚರ" ಎಂಬ ಉಪನಿಷತ್ ವಾಕ್ಯವನ್ನು ಈ ಗರತಿ ಓದಿ ತಿಳಿದವಳಲ್ಲ. ಬದುಕಿನ ಪಾಠ ಶಾಲೆಯಲ್ಲಿ ಅವಳು ಪಡೆದ ಅನುಭವಾಮೃತವಿದು. ನಾಡ ಸಂಸ್ಕೃತಿ ದಾಂಗುಡಿಯಿಡುವುದು ಇಂಥ ಅಮೃತ ಕುಂಭಗಳಾದ ಗರತಿಯರಿಂದ.

ಆಳೂಕಾಳ್ಹೆಚ್ಚಾಲೇ ಬಾಳೂಮನ್ತೊಂಬಾಲೇ
ಬೂಮಾತಾಯ್ ಕಯ್ಯಾ ಹಿಡಿಯಾಲೇ। ಬಾಲಯ್ಯಗೆ
ಸರಸ್ವತಿಯಮ್ಮಾ ಉಲಿಯಾಲೇ॥

ಮನೆಯಲ್ಲಿ ಕಾಳು ಕಡಿಗಳು ಹೆಚ್ಚಿ, ಮನೆ ಸಮೃದ್ಧಿಯ ಕಣಜವಾಗಬೇಕು.

ಲೌಕಿಕ ಬದುಕಿನಲ್ಲಿ ಉತ್ಕರ್ಷವನ್ನು ಸಾಧಿಸಲು ಸಿರಿವಂತಿಕೆ ಮತ್ತು ಬುದ್ಧಿವಂತಿಕೆಗಳೆರಡೂ ಬೇಕು. ಇದನ್ನು ಮನಗಂಡ ತಾಯಿ ಭೂದೇವಿ, ವಿದ್ಯಾದೇವಿಯರಿಬ್ಬರೂ ಮಗನಿಗೆ ಒಲಿಯಬೇಕೆಂದು, ಹಾರೈಸುವಲ್ಲಿ ಅವಳ ಲೌಕಿಕ ಮೌಲ್ಯ ಪ್ರಜ್ಞೆಯ ಅರಿವಾಗದಿರದು.

ಕೃಷಿಯಲ್ಲಿ ಹೆಚ್ಚಿನ ಸಾಧನೆಯುಳ್ಳ ನಾಡವ ಗರತಿ ತನ್ನ ಕುಮಾರನ ಕೃಷಿ ವ್ಯವಸಾಯ ಕುಶಲತೆಯನ್ನು ಬಣ್ಣಿಸುತ್ತಾಳೆ :

ಕಾರಗದ್ದೀ ಬಿತ್ತೇ ಕೋಲು ಬೇಲಿಕಟ್ಟೇ
ತೋಳಾ ಬೀಸ್ ಮನಿಗೇ ಬರ್‍ವಾಗೇ। ಬಾಲಯ್ಯಾ
ಗಾಳೀ ಬೀಸ್ ಕದೂ ಸೊಗದಾವೇ।
ಸೈಕು ಸೈಕೆಂದರೆ ಸಾಗರವಾ ಬೆಳದಾನೇ
ದೂಕೇ ಕಟ್ಟೀದ ಕಣಜವಾ। ಬಾಲಯ್ಯ
ಸಾಕಂದೇ ಸಾಗರ್‍ವಾ ಬೆಳದಾನೇ।
ರಾಗೀಯ ಬಿತ್ತೀದ ರಾಜೀಯಾ ಆಳಸ್ವಾ
ಉದ್ದಾ ಬಿತ್ತದ್ನೇ ಬಯ್ಲೀಗೇ। ಬಾಲಯ್ಯಾ
ಬಿಳ್ಳೀ ಹಚ್ಚದ್ನೇ ಬಳಗಾಕೇ॥

ಮಗನ ನಿರಂತರ ದುಡಿಮೆಯಿಂದ ಮನೆ ಸಮೃದ್ಧಿಯಿಂದ ಕಳಕಳಿಸುತ್ತದೆ. ಮಗನು ಸಂಪತ್ತೆಲ್ಲವನ್ನು ಅನುಭೋಗಿಸುವ ಸ್ವಾರ್ಥಿಯಲ್ಲ; ತನ್ನ ದುಡಿಮೆಯ ಫಲವನ್ನು ಬಂಧು ಬಾಂಧವರಿಗೆಲ್ಲ ಹಂಚಿ ಸುಖಿಸುವ ಸ್ನೇಹ ಜೀವಿ. "ಬೆಳ್ಳಿ ಹಚ್ಚಿದನೆ ಬಳಗಕ್ಕೆ" ಎಂಬ ಮಾತು ಬಾಲನ ಉದಾರ ಚರಿತಕ್ಕೆ ಸಾಕ್ಷಿಯಾಗಿದೆ.

ನಾಡವರು ಇಂದು ಒಕ್ಕಲುತನವನ್ನವಲಂಬಿಸಿ ಬದುಕನ್ನು ಬಾಳುತ್ತಿದ್ದರೂ, ಹಿಂದೆ ಕ್ಷಾತ್ರವೃತ್ತಿಯನ್ನು ಕೈಕೊಂಡು, ದಂಡಿನಲ್ಲಿ ಉನ್ನತ ಮಟ್ಟದ ಸೇವೆ ಸಲ್ಲಿಸಿದ ವೀರ ಜನಾಂಗ. ಈ ವೀರಪಂಪರೆಯಲ್ಲಿ ಬೆಳೆದ ಗರತಿ ಮಗನ ವೀರ್ಯವಂತಿಕೆಯನ್ನು ಉತ್ಸಾಹ ತುಂಬಿ ಹಾಡುತ್ತಾಳೆ :

ಮಗ್ನೇಹುಟ್ಟದಾನೇ ಮದಲಿಂಗ ರಾಯನೇ
ಹುಲಿಯಾ ಮುಂಗಾಲಾ ಹಿಡ್ವಾನೇ। ಅಡವೀಯಾ
ಕಯ್ಡೀ ಕಟ್ಟಾಲಾ ಕರ್‍ವಾರ್ನೇ॥
ಮಗ್ನೇ ಹುಟ್ಟೀದಾನೇ ಮದರಂಗಿ ರಾಯಾನೇ
ಸದರದಲ್ಲಾಡೂ ಸರ್ಪನೇ। ಬಾಲಯ್ಯಾ
ನೀರಾಮೈನ್ ತೇಜೀ ನಿಡಸೂನೇ॥
ಕಲ್ಲೂ ಕವಣೆಗೊಂಡಾ ಬಿಲ್ಲೂಬಾಣಾ ತೊಟ್ಟಾ

ಎಲ್ಲವ್ರ ಮಕ್ಕಳ್ನೀ ಒಡ್ಗೊಂಡಾ॥ ಬಾಲಯ್ನಾ
ಬಾಣಾಹೋದಲ್ಲೇ ಹುಸಿಯಿಲ್ಲ।
ಕಲ್ಲಾ ಕಟ್ದಾಮನಿಗೇ ಕಬ್ಬೀಣ ಸಳ್ಳೂಗೇ
ಬೂಮಿ ಬಾರತ್ನಾಮನಿಯಲ್ಲು। ಬಾಲಯ್ಯಾ
ತಾನು ಕಟ್ಟಸ್‌ದ್ನೇ ಗರ್ಡೀಯ॥
ಮಾತೂಗಾರಣ್ಣಯ್ಯ ನೀತಿಗಾರ್ ತಮ್ಮಯ್ಯ
ಲಾಲಂಕಿಗಾರ ಹಸಬಾಲಾ। ಕಂದಯ್ಯಾ
ಲಾಲಂಕಿಲ್ ಗೆದ್ದ ನಗ್ರಾವಾ॥
ಗಂದದ ಗುಡಿಮ್ಯೆನೇ ಕುದ್ರಿ ಕಾಳಗನಾಡೇ
ಮದ್ಗದ ನೀರ ಅಲ್ದಾವೇ। ನಾನ್ಬಾಲಾ
ರಾಜೀಯನಾಳೇ ಬರುವಾಗೇ।

ರಣಧೀರನಾದ ಮಗ ತನ್ನ ಜಾತಿ ಸಹಜವಾದ ಶೌರ್ಯ ಸಾಹಸಾದಿಗಳನ್ನು ಪ್ರಕಟಿಸಿದ ರೀತಿಯನ್ನು ಗರತಿ ಅನ್ಯಾದೃಶವಾಗಿ ಚಿತ್ರಿಸಿದ್ದಾಳೆ. ಈ ಕೆಚ್ಚೆದೆಯ ಬಂಟ ಕುಮಾರ ಗರಡಿ ಮನೆ ಕಟ್ಟಿಸಿ, ನಾಡು ಗೆದ್ದು ರಾಜ್ಯವಾಳಿದ ವೈಖರಿ ಮೇಲಿನ ಪದ್ಯಗಳಲ್ಲಿ ಚಿತ್ರವತ್ತಾಗಿ ಪಡಿಮೂಡಿವೆ.

ಸಿರಿಗಂಧ ಚೆಕ್ಕೀಯಾ ಸಿಗ್ದೇನಾಣ್ಗೀತುಂಬೇ
ತಿರ್ಗಾಡೇ ತಣ್ಣೀರ ಬಿರ್ಲೂವೇ। ನನ್ನಾಲೋ
ಮಗರಾಜೀ ನಾಳೇ ಬರುವಾಗೇ॥

ರಾಜ್ಯವಾಳಿ ಬರುವ ಮಗನಿಗೆ ಶ್ರೀಗಂಧ ಚೆಕ್ಕೆಯನ್ನೇ ಒಟ್ಟಿ ಸ್ನಾನಕ್ಕೆ ಸಿದ್ಧ ಮಾಡುವಲ್ಲಿ ತಾಯಿಯ ಪ್ರೀತಿ ವಾತ್ಸಲ್ಯದ ಕಂಪು ಶ್ರೀಗಂಧದ ಕಂಪಿನ ಜೊತೆಯಲ್ಲಿಯೇ ಮೇಳವಿಸಿದೆ.

ನಾಡೂ ಮೊನ್ದಾರಮ್ಮಾ ನಾಳಾಗುಂದಾಗ್ವರ
ನಾಯಕ್ ಬಾಲಯ್ಯಾ ಮೊನ್ದಾರೇ। ತಾಯಮ್ಮಾ
ನಾಡೆದ್ದೇ ಕಯ್ಯಾ ಮುಗ್ವಾದ।
ಕಂಡದ್ನೇ ನನ್ನಾ ಕುಂಡೂ ಕೊನ್ಬಾಳಿಯಾ
ದಂಡಗ್ ನಾಯಕ್ನಾ ಕೊಮ್ರಾನಾ। ಬಾಲಯ್ನಾ
ಕಂಡದ್ನೇ ನಾಡಾ ಸಬಿಯಲ್ಲೇ॥

ಕಾಳಗದಲ್ಲಿ ಕಲಿಯಾದ ಈ ಕುಮಾರ ಮುನಿದು ನಿಂತರೆ ನಾಡಿನವರೆಲ್ಲ ಎದ್ದು ಕೈ ಮುಗಿಯುತ್ತಾರೆ. ಈ ದಂಡನಾಯಕನ ಕುಮಾರ ಕಲಿಯಷ್ಟೇ ಅಲ್ಲ

ಪಂಡಿತಮಾನ್ಯರ ಸಭೆಯಲ್ಲಿ ಭಾಗವಹಿಸುವ ಧೀಮಂತನೂ ಆಗಿದ್ದಾನೆ.

ತೊಂಡೀ ಕಾಯ್ನಂತಾ ತುಂಡೂ ನಾಮಾಯಿಟ್ಟೇ
ಚಾವ್ಡೀಗು ಮನಿಗೂ ತಿರ್ಗೀದಾ। ಬಾಲಯ್ನಾ
ಚೆಂದಾ ಕಂಡರ್ಸ ಕರ್ದಾನೇ।

ವೈಷ್ಣವ ಮತಾವಲಂಬಿಗಳಾದ ನಾಡವರು ನಿತ್ಯ ಸ್ನಾನ ಮಾಡಿ, ಶ್ರೀಗಂಧ ನಾಮವನ್ನು ಮಸ್ತಕ, ಎದೆ, ತೋಳುಗಳಿಗೆ ಹಚ್ಚಿಕೊಂಡು ತುಲಸಿಯ ಪೂಜೆ ಮಾಡಿಯೇ ಊಟ ಮಾಡುವ ರಿವಾಜಿದೆ. ಕುಲದ ಸಂಪ್ರದಾಯಕ್ಕನುಗುಣವಾಗಿ "ತೊಂಡೆಕಾಯಿಯಂಥ ತುಂಡು ನಾಮವನ್ನಿಟ್ಟು" ಚಾವಡಿಗೂ ಮನೆಗೂ ತಿರುಗುವ ಕುಮಾರನ ಸೌಂದರ್ಯಶ್ರೀ ಅನುಪಮವಾದದ್ದು. ಬುದ್ಧಿ, ಬಲ, ಧರ್ಮಶ್ರದ್ಧೆಗಳು ಮುಪ್ಪುರಿಗೊಂಡು ಬೆಡಗುವಡೆದ ಕುಮಾರನೆಡೆಗೆ ನಾಡ ಅರಸನ ಗಮನ ಹರಿಯುವುದು ಸ್ವಾಭಾವಿಕ. ಹೀಗೆ ತನ್ನ ಸುಕುಮಾರನ ಬಾಲ್ಯದಿಂದ ಹಿಡಿದು ಯೌವ್ವನದವರೆಗಿನ ವಿವಿಧ ಹಂತಗಳ, ಹಲವು ಮುಖಗಳ ಚೆಲುವನ್ನು ಬಗೆ ತುಂಬಿ ಹಾಡಿ, ನಾಡವ ಗರತಿ ತನ್ನ ಪುತ್ರವಾತ್ಸಲ್ಯದ ಮಧುರ ಸಂಪುಟ ತೆರೆದಿದ್ದಾಳೆ.

* ಜಾನಪದ ಮೆಲುಕು – ಡಾ. ಎನ್. ಆರ್. ನಾಯಕ (ಆಕರ ಗ್ರಂಥ)

೧೫. ನಾಡವರ ಗರತಿ ಕಂಡ ದುಃಖ ದುಮ್ಮಾನಗಳು

ನಾಡವರು ಒಂದು ಕಾಲಕ್ಕೆ ಕ್ಷಾತ್ರ ವೃತ್ತಿ ಮತ್ತು ಕೃಷಿ ವೃತ್ತಿ ಎರಡನ್ನೂ ಕೈಗೊಂಡು ರಾಜ್ಯ, ಸಾಮ್ರಾಜ್ಯಗಳ ಏಳು ಬೀಳುಗಳಿಗೆ ಕಾರಣರಾಗಿ, ತಮ್ಮ ಬದುಕಿನಲ್ಲಿಯೂ ಅಂಥದೇ ಬಗೆಯ ಏರಿಳಿತವನ್ನು ಕಂಡ ಯೋಧ ಸಮುದಾಯ. ರಾಜ–ಮಹಾರಾಜರ ಆಡಳಿತ ಪರ್ವ ನೇಪಥ್ಯವನ್ನು ಸೇರಿದ ಮೇಲೆ, ಬ್ರಿಟಿಷ್ ವಸಹಾತು ಶಾಹಿಯ ದಿನಗಳಲ್ಲಿ, ಬ್ರಿಟಿಷರು ಕ್ಷಾತ್ರ ವೃತ್ತಿಯನ್ನು ಆಶ್ರಯಿಸಿದವರನ್ನು ಗುಮಾನಿಯಿಂದ ಕಂಡ ಪ್ರಯುಕ್ತ ನಾಡವರು ತಮ್ಮ ಕ್ಷಾತ್ರ ವೃತ್ತಿಗೆ ಬಹುತೇಕ ವಿಧಾಯ ಹೇಳಿ, ಭೂಮಾಲಿಕರಾಗಿ ಕೃಷಿ ವೃತ್ತಿಗೇ ಹೆಚ್ಚಾಗಿ ಆತುಕೊಂಡರು; ಅದರಲ್ಲಿಯೂ ಗಣನೀಯ ಪ್ರಗತಿಯನ್ನು ಸಾಧಿಸಿ ಉನ್ನತ ಸೀಮಾರೇಖೆಯನ್ನು ಮುಟ್ಟಿದರು. ಮತ್ತೆ ಮುಂದಿನ ದಿನಗಳಲ್ಲಿ ಬ್ರಿಟಿಷ್ ವಸಾಹತುಶಾಹಿಯ ಕುತಂತ್ರ ಕಾನೂನಿನ ಅಲಗಿಗೆ ಸಿಲುಕಿ, ತಮ್ಮ ದೊಡ್ಡ ದೊಡ್ಡ ಭೂ ಹಿಡುವಳಿಯನ್ನು ಕಳೆದುಕೊಂಡು ಅನೇಕರು ಚಿಕ್ಕ ಹಿಡುವಳಿಯಲ್ಲಿಯೇ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಮುಂದಾದರು. ದೊಡ್ಡ ದೊಡ್ಡ ಹಿಡುವಳಿದಾರರು ಆಳು ಕಾಳು ಹಚ್ಚಿ ಒಕ್ಕಲುತನವನ್ನು ಮಾಡಿಸಿದರೆ, ಚಿಕ್ಕ ಹಿಡುವಳಿದಾರರು ಸ್ವಂತ ಸಾಗುವಳಿಯಲ್ಲಿ ನಿರತರಾದರು. ತಾವು ಬೆಳೆದ ಭತ್ತವನ್ನು ಸ್ವತಃ ಒನಕೆ ಹಿಡಿದು ತಳಿಸಿ, ಅಕ್ಕಿ ಮಾಡಿ ಉಂಡು ಸುಖ ಸಂತೃಪ್ತಿಯ ಬದುಕು ಬಾಳಿದರು. ಸುಮಾರು ಐವತ್ತು, ಅರವತ್ತು ವರ್ಷಗಳ ಹಿಂದೆ, ಚೈತ್ರ ವೈಶಾಖ ಮಾಸಗಳಲ್ಲಿ ನಾಡವರ ಮನೆಯಂಗಳದಲ್ಲಿ ಹೆಂಗಳೆಯರ ಕಳಕಂಠದಿಂದ "ಒನಕೆವಾಡಿನ' ವಸಂತ ಗೀತಾಲಾಪ ಅಲೆ ಅಲೆಯಾಗಿ ತೂರಿ ಬರುತ್ತಿತ್ತು. ಆಗ ನಾಡವರ ಗರತಿ ಬದುಕಿನಲ್ಲಿ ಪಟ್ಟ ಪಾಡೆಲ್ಲ ಅವರದೇ ಆದ ಭಾಷೆಯಲ್ಲಿ ಒನಕೆ ಹಾಡಿನಲ್ಲಿ ಮರು ಹುಟ್ಟು ಪಡೆಯುತ್ತಿತ್ತು. ದೇಸಿ ಸೊಗಡಿನಿಂದ ಗಮ್ಮನೆಸೆಯುವ ಅಂಥ ಕೆಲವು ಒನಕೆ ಹಾಡುಗಳ ಸ್ವಾರಸ್ಯ ವಿವರಣೆಯನ್ನು ನೀಡುವುದೇ ಈ ಪ್ರಬಂಧದ ಉದ್ದೇಶ. ಹೆಣ್ಣೊಬ್ಬಳು ತೀವ್ರ ತರವಾದ ಕಷ್ಟ ಕೋಟಲೆಯಿಂದ ಕಂಗೆಟ್ಟಿದ್ದಾಳೆ.

ಕಟ್ಟಾ ಹೇಳೂವಾಕೇ ಅಕ್ಕಾ ತಂಗ್ದೀರಿಲ್ಲ
ಮುಚ್ಚಾ ಮಡ್ಕೀಲೇ ಇಸ್ರಕ್ಕೇ ಬೇವಂಗೇ
ಬೇಯೂವೆನಮ್ಮಾ ಒಡ್ಲಲ್ಲೇ।

[ಪಡುಕೋಗಿಲೆ ಪ. ೬೭೯]

ತನ್ನ ಅಂತರ್ಯದಲ್ಲಿ ದುಮುದುಮಿಸುತ್ತಿರುವ ನೋವಿನುರಿಯನ್ನು ನಿವೇದಿಸಿಕೊಳ್ಳಲು ತನ್ನ ಪಕ್ಕದಲ್ಲಿ ಅಕ್ಕ ತಂಗಿಯರಿಲ್ಲದೇ ಗರತಿ ಮುಚ್ಚಿದ ಮಡಿಕೆಯಲ್ಲಿ

ಎಸರಿನ ಅಕ್ಕಿ ಬೇಯುವಂತೆ ಬೇಯುತ್ತಿದ್ದಾಳೆ. ಹೆಣ್ಣಿನ ಒಳ ಮನಸ್ಸಿನ ಬೇಗೆಯ ತೀವ್ರತೆಯನ್ನು ಮುಚ್ಚಿದ ಮಡಿಕೆಯ ಎಸರಕ್ಕಿಗೆ ಹೋಲಿಸುವಲ್ಲಿ "ದೇಸಿ" ಪ್ರತಿಭೆ ಸಹಜ ಸುಂದರವಾಗಿ ವಿಜೃಂಭಿಸುವುದನ್ನು ಗಮನಿಸಬೇಕು. ಈ ಸಂದರ್ಭದಲ್ಲಿ ಭವಭೂತಿಯ "ಉತ್ತರರಾಮ ಚರಿತೆ"ಯಲ್ಲಿ ರಾಮನ ಒಳಮನದ ಬೇಗೆಯನ್ನು "ಪುಟಪಾಕ ಅಗ್ನಿಗೆ" ಹೋಲಿಸಿದ್ದನ್ನು ನೆನೆಯಬೇಕು. ಆದರೆ ಇಲ್ಲಿಯ ದೇಸಿ ಪ್ರತಿಭೆಗೆ ದಕ್ಕಿದ ಸಹಜ ಸುಂದರ ಅಭಿವ್ಯಕ್ತಿ ಮಾರ್ಗ ಕವಿ ಪ್ರತಿಭೆಗೆ ದಕ್ಕಿಲ್ಲವೆಂದೇ ನನ್ನ ಅನಿಸಿಕೆ. ಹೆಣ್ಣಿನ ಒಡಲುರಿಯ ಬೇಗೆಯು ಸಾಮಾನ್ಯರಿಗೆ ಅರ್ಥವಾಗುವಂಥದ್ದಲ್ಲ.

ಹಿಣ್ಣೀನ ಕುರ್ತಗಾ ಏಗ್ಯೆರು ಅರಿಯಾರೇ
ಪಾಳ್ಯದಲ್ಲಿರುವ ಕುದ್ರೀಯಾ। ಕುರ್ತಾಗ
ರಾವತನ್ಹೊರ್ತು ತಿಳಿಯಾವೇ।

[ಪಡುಕೋಗಿಲೆ ಪ. ೬೮೧]

ದಂಡಿನ ಪಾಳ್ಯದಲ್ಲಿರುವ ಕುದುರೆಯ ಸಂಕಟ, ಕುದುರೆಯ ಸವಾರನ ಹೊರತಾಗಿ ಪರರಿಗೆ ತಿಳಿಯಲಾರದು. ಅದೇ ಬಗೆಯಲ್ಲಿ ಹೆಣ್ಣಿನ ಕಷ್ಟ ಕೋಟಲೆ ಹತ್ತಿರದ ಅವಳ ಒಡನಾಡಿಗಳಿಗೆ ಮಾತ್ರ ತಿಳಿಯಲು ಸಾಧ್ಯವಿದೆ. ಇಲ್ಲಿ ಬರುವ ದಂಡಿನ ಪಾಳ್ಯದ ಕುದುರೆಯ ಪ್ರಸ್ತಾಪ ನಾಡವರ ಅಶ್ವಪಡೆಯನ್ನು ನೆನಪಿಸುತ್ತದೆ.

ಬೆಟ್ಟ ಬೇಯೂದಾ ಸಿಟ್ಟೆಲ್ಲೇ ಅರುವಾನೇ
ಹೊಟ್ಟೀಯಲ್ ಬೇವಾದ ಅರಿಯಾರ। ಅಡವೀಯ
ಗಿಡಬಲ್ಲು ನಮ್ಮ ಬೆಕ್ಳವ।

[ಪಡುಕೋಗಿಲೆ ಪ. ೬೮೪]

ಬೆಟ್ಟ ಉರಿಯಿಂದ ಬೇಯುವುದು ಪಟ್ಟಣದ ಸೆಟ್ಟಿಗೆ ತಿಳಿಯಲಾರದು. ಬೆಟ್ಟದ ಬೆಂಕಿಯ ತಾಪ ಬೆಟ್ಟದ ಪರಿಸರದಲ್ಲಿರು ಗಿಡಮರಗಳಿಗೆ ಮಾತ್ರ ಗೊತ್ತಾಗುತ್ತದೆ. ಹಾಗೆಯೇ ಹೆಣ್ಣಿನ ಕಷ್ಟ ಹೆಣ್ಣಿಗೆ ಮಾತ್ರ ವೇದ್ಯ. ಬದುಕಿನಲ್ಲಿ ತಮಗೊದಗಿ ಬಂದ ಬೆಟ್ಟದಂಥ ನೋವಿನ ವ್ಯಥೆಯ ಕಥೆಯನ್ನು ಹೆಣ್ಣು ಮೌನವಾಗಿ ಸಹಿಸುತ್ತಾಳೆ ಮತ್ತೆ ಧ್ಯಾನಸ್ಥ ಸ್ಥಿತಿಗೇರುತ್ತಾಳೆ. ಒಳಗೊಳಗೇ ಕುದಿಯುತ್ತಾಳೆ, ಕುದಿಯುಪಶಮನಕ್ಕಾಗಿ ಕಾಯಕ ನಿರತಳಾಗುತ್ತಾಳೆ. ಕರ್ಮಯೋಗಿಯಾಗುತ್ತಲೇ ತನ್ನ ಒಳವನ್ನು ಭಾವತೀವ್ರತೆಯಿಂದ ಸೊರಗುತ್ತಾಳೆ.

ಹೊಟ್ಟೀಲುರ ಬಂದಾರೇ ಕುಡ್ವೇನಾ ತಣ್ಣೀರಾ
ಹಿಡ್ವೇ ಚಂದಣದ ಒನಕೀಯಾ। ತಡಕಂಡೇ
ಒಡ್ಲಾ ಬ್ಯೆಗಣಿಯಾ ಸುಗ್ಗೂವೇ।

[ಪಡುಕೋಗಿಲೆ ಪ. ೬೭೮]

ಇಲ್ಲಿ ನಾಡವರ ಗರತಿ ಬದುಕಿನಲ್ಲಿ ನೋವನ್ನನುಭವಿಸಿದಾಗ "ಉರಿಸಿಂಗಿ"ಯಂತೆ ತನ್ನನ್ನು ತಾನೇ ಪರಚಿಕೊಂಡು ಮಿಡುಕಾಡಲಾರಳು. ತಣ್ಣೀರು ಕುಡಿದು ತಂಪುಕ್ಕಿಸುವ ಚಂದನದೊನಕೆಯನ್ನು ಹಿಡಿದು, ತನ್ನೊಡಲಿನಲ್ಲಿ ಸುಟ್ಟುರಿಯುತ್ತಿರುವ ನೋವಿನ ಬೆಂಕಿಯನ್ನು ಒನಕೆಯ ಹಾಡಾಗಿ ಹೊರಗೆಡಹುತ್ತಾಳೆ. ಅವಳ ನೋವು ಬತ್ತ ಮೆರೆಯುವಂಗಳದಲ್ಲಿ ಮಧುಮಾಸ ಮಲ್ಲಿಗೆಯ ಸೌಗಂಧವಾಗಿ ತಂಪು ಕಂಪೆರಚುತ್ತದೆ. ಇಲ್ಲಿ ಗರತಿಯ ನೋವು ಹೂವಾಗುವ ಪರಿ ರೋಚಕವಾಗಿದೆ. ಹೆಣ್ಣು ಬದುಕಿನಲ್ಲಿ ನೊಂದುಕೊಳ್ಳುವ ಸಂದರ್ಭಗಳು ಹಲವಾರು. ತನ್ನ ಕರುಳ ಕುಡಿಯನ್ನು ಕಳೆದುಕೊಂಡ ಹೆಣ್ಣಿನ ಮೂಕರೋಧನ ಹಾಡಾದ ಬಗೆಯನ್ನು ಗಮನಿಸಿ.

ಮಕ್ಕಳ ಪಾಸಕೇ ಹಕ್ಕೀ ಗೂಡಾ ಕಟ್ಟೀ
ಸಿಕ್ಕಿತೋ ಸಿವನಾ ಬಲಿಯೊಳಗೇ। ಯಮರಾಯ್ನೆ
ಹಕ್ಕೀಯಾ ಗ್ವಾಬೇ ಅರ್ಗ್ಗಲೋ

[ಪಡುಕೋಗಿಲೆ ಪ. ೬೮೬]

ಜೋಡಿ ಹಕ್ಕಿಗಳು ಕೂಡಾಡಿ ಗೂಡುಕಟ್ಟಿ ಮೊಟ್ಟೆಯಿಟ್ಟು ಮರಿಮಾಡಿ ಸುಖಿಸುತ್ತವೆ. ಅದೇ ಬಗೆಯಲ್ಲಿ ಗಂಡು ಹೆಣ್ಣುಗಳು ಮಕ್ಕಳ ವ್ಯಾಮೋಹದಿಂದ ಮನೆ ಕಟ್ಟಿ ಮಗನನ್ನು ಹಡೆದು ಸಂಭ್ರಮಿಸುತ್ತಾರೆ. ಸಂಭ್ರಮದ ತುರ್ಯಾವಸ್ಥೆಯಲ್ಲಿದ್ದಾಗ ದುರ್ವಿಧಿ ಮಗುವನ್ನು ಬಲಿ ತೆಗೆದುಕೊಂಡರೆ, ತಾಯಿಯ ಗೋಳು ಹೇಳತೀರದು. ಮಗನ ಸಾವಿನಿಂದ ಗೋಗರೆಯುವ ತಾಯಿ ತನ್ನ ನೋವಿನ ಉರಿ ಬೆಂಕಿ ಯಮರಾಯನ ಒಡಲನ್ನೂ ಸುಡಲಿ ಎಂದು ಶಪಿಸುತ್ತಾಳೆ. ಹಕ್ಕಿಯ ಸಂಸಾರವನ್ನು ತನ್ನ ಬದುಕಿನ ರೂಪಕವಾಗಿ ಹೆಣೆಯುವಲ್ಲಿ ಗರತಿಯ ಹಾಡು ಕಾವ್ಯಾತ್ಮಕತೆಯಿಂದ ಕಳೆಗಟ್ಟಿದೆ.

ಅಗಲೀದೆ ಅಗಲೀದೆ ಮುದ್ದುಗಿಳಿರಾಮನ
ಹಗಲು ದೀವಟ್ಗೀ ಸರದಾರ। ಬಾಲಯ್ನಾ
ಅಗಲೀದೆನುಂದು ಗಳಗೀಲೆ।

[ಪಡುಕೋಗಿಲೆ ಪ. ೬೮೭]

ಮುಂದೊಂದು ದಿನ ಹಗಲು ದೀವಟಿಗೆಯ ಬೆಳಕಿನಲ್ಲಿ ಮದುವೆಯ ಸಂಭ್ರಮವನ್ನು ಕಾಣಲಿದ್ದ, ತನ್ನೆದೆಯ ಮುದ್ದು ಗಿಳಿರಾಮನಂತಿರುವ ಮಗನನ್ನು ಕ್ಷಣಮಾತ್ರದಲ್ಲಿ, ನೋಡ ನೋಡುತ್ತಲೇ ಕಳೆದುಕೊಂಡುದಕ್ಕಾಗಿ ತಾಯಿಯೊಡಲು ಉರಿಯುತ್ತದೆ. 'ಹಗಲೂ ದೀವಟ್ಗೀ ಸರದಾರ' ಸೊಲ್ಲು ನಾಡವರ ಸಾಂಪ್ರದಾಯಿಕ ಮದುವೆಯಲ್ಲಿ ಹಗಲು ದೀವಟಿಗೆಯನ್ನು ಹಿಡಿಯುವ ರೂಢ ಮೂಲ ಆಚರಣೆಯನ್ನು ನೆನಪಿಸುತ್ತದೆ.

ಹಾಲೂ ಕೊಡ್ವಾ ಬಾಲಯ್ಯಾ ಹಾರೀದ ಗಗ್ನಾಕೇ
ಮಾದೊಡ್ಡ ಕುಲದ ಎಳಿ ಹಿಳ್ಳೆ| ಬಾಲಯ್ಯ
ಸೇರಿದಾ ಸಿವ್ನಾ ಬಳ್ಗಾಗಕೇ.

[ಪಡುಕೋಗಿಲೆ ಪ. ೬೮೮]

ತಾಯಿಯೆದೆಯ ಮಧುರ ಹಾಲು ಹೀರಿ, ಅವಳ ಮಮತೆಯ ಮಡಿಲಿನ ಆಶ್ರಯದಲ್ಲಿ ಬೆಳೆದ, ಮುಂದೆ ತಮ್ಮ ಕುಲದ ಕೀರ್ತಿಗೆ ಕಿರೀಟ ತೊಡಿಸುವ "ಎಳೆಯ ಹಿಳ್ಳೆ"ಯಂತಿರುವ ಮಗ, ತಮ್ಮ ಕೈತಪ್ಪಿಸಿಕೊಂಡು ಗಗನಕ್ಕೆ ಹಾರಿ, ಶಿವನ ಬಳಗ ಸೇರಿದ್ದಕ್ಕೆ ತಾಯಿಗೆ ಆತಂಕವಾಗಿದೆ. ಮಗುವನ್ನು ಕಳೆದುಕೊಂಡ ತಾನು ಪಾಪಿಯೆಂದು ಎದೆ ಬಡಿದುಕೊಳ್ಳುತ್ತಾಳೆ.

ನನ್ನಂತಾ ಪಾಪೇ ಇನ್ನೂದರಿಯಲ್ಲಿಲ್ಲಾ
ಹೊನ್ನಾತುಂಡ್ಹೋಯ್ತೋ ಹೊಳಿಯಲ್ಲೇ| ದೈವಾರೆ
ಚಿನ್ನದಂತವ್ನಾ ಅಗಲೀದೆ|

[ಪಡುಕೋಗಿಲೆ ಪ. ೬೮೯]

ಗಗನಕ್ಕೆ ಹಾರಿಹೋದ ಮಗು ಅವಳ ಬದುಕಿನ ಬಂಗಾರ ಕುಡಿ. ಆ ಚಿನ್ನದ ತುಂಡು ಸಂಸಾರ ಸಾಗರದಿಂದ ಕಣ್ಮರೆಯಾಗಿ ಹೋಗಿದೆ. ಚಿನ್ನದಂಥ ಮಗನ ಅಗಲಿಕೆ, ರುಂದ್ರಯಾತನೆಯನ್ನು ಕೊಡುತ್ತದೆ ಗರತಿಗೆ:

ತಿಂಗಳಾ ಬಿಳ್ಕೀಗೇ ಬಂದ್ಹೋಗೋ ಬಾಲಯ್ಯಾ
ಚಿಂದ್ರಸೂಲ್ಯಮ್ನಾ ಬಿಳ್ಕೀಗೇ| ಬಾಲಯ್ಯಾ
ಕಂಡ್ಹೋಗ ನನ್ನಾ ಕನಸೀಗೆ.

[ಪಡುಕೋಗಿಲೆ ಪ. ೬೯೦]

ಅಗಲಿದ ಮಗುವನ್ನು ರಾತ್ರಿಯ ಹಾಲ್ದಿಂಗಳ ಬೆಳಕಿನಲ್ಲಿ ಕಾಣುವ ತವಕ. ಆದರದು ಸಾಧ್ಯವೆ? ಅದು ಅಸಾಧ್ಯವೆಂದು ಬಗೆದ ಗರತಿ, ಅವನನ್ನು ಕನಸಿನಲ್ಲಾದರೂ ಕಾಣಲು ಹವಣಿಸುತ್ತಾಳೆ. ಆದರೆ ಕನಸಿನ ಆ ಕಾಣ್ಕೆ ಮಬ್ಬು ಮಬ್ಬಾಗಿರಕೂಡದು, ಮರೆಯುವಂತೆಯೂ ಇರಬಾರದು. ಚಂದ್ರ ಸೂರ್ಯರ ತಂಪು ಹಾಗೂ ಪ್ರಖರ ಬೆಳಕಿನಲ್ಲಿ ನಿಚ್ಚಳವಾಗಿ ಕಾಣುವಂತಿರಬೇಕೆಂದು ಹವಣಿಸುತ್ತಾಳೆ. ಗರತಿಯ ಈ ಹವಣಿಕೆಯಲ್ಲಿ ಕಾರುಣ್ಯದ ಸೆಳೆತದ ತೀವ್ರತೆಯಿದೆ.

ಕಾದಾ ಕಲ್ಲರಿಮ್ಯನೇ ಚೇರಗ್ ಸಾಲಿಬಿತ್ತೇ
ಹಾಲೂ ನುಂಗ್ವರಿಕ್ರೀಗ್ ಗಿಳಮೆಂದು| ಬಾಲಯ್ಯಾ
ಆಯ್ಸ ತುಂಬ್ಬಂಕ್ರೀಗ್ ಸಿವ್ನೊಯ್ದಾ|

[ಪಡುಕೋಗಿಲೆ ಪ. ೬೯೧]

ಆಯುಷ್ಯ ತುಂಬುವ ಪೂರ್ವದಲ್ಲಿಯೇ ತನ್ನ ಮಗನನ್ನು ಶಿವನೊಯ್ದು ತನ್ನ ಬದುಕು ವಿಫಲಗೊಳಿಸಿದ ಬಗೆಯನ್ನು ಗರತಿ, 'ಬದುಕಿನ ಕಾಠಿಣ್ಯತೆಯನ್ನು ಸೀಳಿ, ಬದುಕ ವ್ಯವಸಾಯದಲ್ಲಿ ಜೇರಗಸಾಲಿಯನ್ನು ಬಿತ್ತಿ ಬೆಳೆದರೂ, ಆ ಬೆಳೆ ಹಾಲು ನುಂಗಿ, ಗಟ್ಟಿ ತೆನೆಯಾಗುವ ಪೂರ್ವದಲ್ಲಿಯೇ, ಅದನ್ನು ಗಿಳಿ ತಿಂದು ಬಿಟ್ಟತು' ಎಂಬ ದೃಷ್ಟಾಂತದೊಂದಿಗೆ ಕಟ್ಟಿಕೊಟ್ಟ ಬಗೆ ಅನ್ಯಾದೃಶವಾಗಿದೆ.

ಬೆಟ್ಟಾದಾ ಬಾಳೀಯ ಹುಕ್ಕೇ ಸವ್‌ರ್ದನ್ಯೆರೇ
ನೆಟ್ಟವ್ನಾ ಹುರ್ತೂ ಪರ್ತ್ರಲ್ಲಾ। ಯಮರಾಯ
ಹುಕ್ಕೇ ಸವ್ರದ್ನೇ ಎಳಿಯವ್ನಾ। '

[ಪಡುಕೋಗಿಲೆ ಪ. ೬೯೨]

ತನ್ನ ಪಾಡಿಗೆ ತಾನು ಸದೃಢವಾಗಿ ಬೆಳೆಯುತ್ತಿರುವ ಎಳೆ ಬಾಳೆಯನ್ನು, ಅದು ಗೊನೆ ಬಿಡುವ ಮೊದಲೇ ತುಂಡರಿಸಿದವರಾರು? ಬಹುಶಃ ಬಾಳೆಯನ್ನು ನೆಟ್ಟು ಬೆಳೆದ ಕರ್ತಾರನೇ ಇರಬೇಕು. ಕೊಟ್ಟದ್ದನು ತಿರುಗಿ ಪಡೆಯುವ ಅಧಿಕಾರ ಅವನಿಗಿರುವಾಗ ತಾನು ತನ್ನ ಎಳೆ ಹಿಳ್ಳೆಯನ್ನು ಕಳೆದುಕೊಂಡನೆಂದು ಪರಿತಪಿಸುವಲ್ಲಿ ಪ್ರಯೋಜನವೇನುಬಂತು ಎಂದು ಗರತಿ ತನ್ನನ್ನು ತಾನೇ ಸಂತೈಸಿಕೊಂಡು, ಒತ್ತರಿಸಿ ಬರುವ ದುಃಖವನ್ನು ಹದ್ದು ಬಸ್ತಿನಲ್ಲಿಟ್ಟುಕೊಂಡು, ಜೀವನ್ಮುಖಿಯಾಗಬಯಸುತ್ತಾಳೆ.

ಸತ್ತವರುಟ್ಟೂವಾರೇ ಬತ್ತಮರ ತಿಗರೂದೆ
ಬೆಂಧ್ಹಿಳ್ಳೇ ಬೇರ ಉಡುವಾದೇ। ಬಾಲಯ್ಯ
ಸಗ್ಗಾಕೋದವನು ಬರುವಾನೇ।

[ಪಡುಕೋಗಿಲೆ ಪ. ೬೯೩]

ಸತ್ತವರು ಹುಟ್ಟರು, ಒಣಮರ ಚಿಗಿತು ಹೂಬಿಟ್ಟು ಫಲಿಸದು, ಸುಟ್ಟುಹೋದ ಕಬ್ಬಿನ "ಹಿಳ್ಳೆ" ಬೇರು ಬಿಟ್ಟು, ಕಬ್ಬಾಗಿ ಬೆಳೆದು ಸಿಹಿಯುಣಿಸದು. ಗಗನ ಸೇರಿ ಬಯಲಲ್ಲಿ ಬಯಲಾದ ತನ್ನ ಕುಲದ ಎಳೆ ಹಿಳ್ಳೆ ಬೇರೊಡೆದು ಚಿಗುರದು ಎಂದು ಮಗನನ್ನು ಕಳೆದುಕೊಂಡ ಗರತಿ, ತನ್ನ ಮನದ ಯಮಯಾತನೆಯನ್ನು ಮರೆಯುವ ಪರಿ ಅನುಕರಣೀಯವಾಗಿದೆ.

ಯಾವ ಸಿರಿಗಿಂದೂ ಗಂದಾದಾ ಸಿರ್‍ಮೇಲ
ಕಂದಯ್ನಾ ಹಡೆದಾ ಸಿರಿಗಿಂದು । ದೈವರೇ
ಗಂದಾದಾ ಸಿರಿಯೇ ಅದಮೇಲ ।

[ಪಡುಕೋಗಿಲೆ ಪ. ೨೭೦]

ಹೆಣ್ಣಿನ ಪಾಲಿಗೆ ಗಂಡನೇ ಸಕಲೈಶ್ವರ್ಯ. ಆತನಿದ್ದಲ್ಲಿ ಮಾತ್ರ ಅವಳಿಗೆ

ಕುಂಕುಮ ಸೌಭಾಗ್ಯ. ಆ ಸೌಭಾಗ್ಯ ಅವಳಿಗೆ ಕಂದನನ್ನು ಹಡೆದ ಸೌಭಾಗ್ಯಕಿಂತಲೂ ಹಿರಿದಾದುದು.

ಮೋಗುತುಂದಿದ್ದರೆ ಮುನ್ನೂರಾ ಗೆಲ್ಬವ್ದ
ಮಂಡೀಗೇ ಚಿವ್ಲೆ ಕಿಮಿಗ್ವೊಲೆ। ಉಂದೆದ್ದರೆ
ದಂಡಗ್ ನಾಯಕ್ನಾ ಗೆಲಬವ್ದ।

[ಪಡುಕೋಗಿಲೆ ಪ. ೨೭೩]

ಮುತ್ತೈದೆತನಕ್ಕೆ ಕಳೆಗಟ್ಟಿಸಲು ಮೂಗಿಗೆ ಮೂಗುತಿ, ಕಿವಿಗೆ ಓಲೆ ಹಾಗೂ ದೊಡ್ಡ ತುರುಬು ಕಟ್ಟಲು ಬೇಕಾಗುವ ಚವರಿಗಳಿದ್ದರೆ ಗರತಿ ಯಾರನ್ನೂ, ಏನನ್ನೂ ಗೆಲ್ಲಬಲ್ಲಳು. ಆದರೆ ಈ ಮುತ್ತೈದೆತನದ ಸಿರಿ ಅವಳಿಗೆ ಗಂಡನಿದ್ದಲ್ಲಿ ಮಾತ್ರ ಲಭ್ಯ. ಗಂಡನನ್ನು ಕಳಕೊಂಡಾಗ ಅವಳ ಬದುಕು ಮೂರಾಬಟ್ಟೆಯಾಗುತ್ತದೆ. ದುರ್ಭರವಾಗುತ್ತದೆ.

ಗಂಡಾನಿಲ್ಲದ ಬಾಳ್ಯ ತಿಂಗೂಯಿಲ್ಲದ ತೋಟ
ಗಂದಾ ಕಸ್ತುರಿಯೇ ಹಣಿಯಲ್ಲೇ। ಇಲ್ಲಾದಾ
ನಾವುಳ್ದೇ ಇನ್ನೂ ಪಲವೇನ।

[ಪಡುಕೋಗಿಲೆ ಪ. ೬೯೪]

ಗಂಡನಿಲ್ಲದ, ಹಣೆಗೆ ಗಂಧ ಕಸ್ತೂರಿಯಿಲ್ಲದ ಬದುಕನ್ನು, ಗರತಿ ಬರಡೆಂದು ಭಾವಿಸುತ್ತಾಳೆ. ಗಂಡನಿಲ್ಲದ ಬದುಕು ಅವಳ ಪಾಲಿಗೆ ತೆಂಗಿಲ್ಲದ ತೋಟದಂತೆ ಬಣ ಬಣ ಬರಡು. ಕರಾವಳಿಯ ಜನ ತೆಂಗನ್ನು ಕಲ್ಪ ವೃಕ್ಷವೆಂದೇ ಬಗೆಯುತ್ತಾರೆ. ತೆಂಗಿಲ್ಲದ ತೋಟ ಅವರಿಗೆ ಬರಡು– ಇದ್ದೂ ಇಲ್ಲದಂತೆ. ಅದೇ ಬಗೆಯಲ್ಲಿ ಹೆಣ್ಣಿನ ಇಷ್ಟಾರ್ಥ ಸಿದ್ಧಿಯ ಕಣಜವಾದ ಗಂಡನಿಲ್ಲದ ಹೆಣ್ಣಿನ ಬದುಕು, ಇದ್ದೂ ಇಲ್ಲದಂತೆ.

ಗಂಡಾ ಸತ್ತಮ್ಮಾಗೇ ಗಂದಾ ಕಸ್ತೂರ್ಯೆಕೇ
ಬಂಗಾರವ್ಯೆಕೆ ಬಳಿಯಾಕೆ। ನಂಗಿರುವಾ
ಬಂಗಾರ ಸಿವ್ನೇಕಸ್ಕಂಡ।

[ಪಡುಕೋಗಿಲೆ ಪ. ೬೯೫]

ತನ್ನ ಬದುಕಿನ ಭೋಗ ಭಾಗ್ಯವೆಲ್ಲವೂ ಗಂಡನೇ, ಎಂದು ಗ್ರಹಿಸಿದ ಗೃಹಿಣಿ, ಅವನನ್ನೇ ಶಿವನು ಕಸಿದುಕೊಂಡ ಮೇಲೆ ತನ್ನ ಮುತ್ತೈದೆತನದ ಕುರುಹುಗಳಾದ ಗಂಧ ಕಸ್ತೂರಿ, ಬಂಗಾರ, ಬಳೆಗಳೆಲ್ಲ ತನಗೇಕೆಂದು ಅವನ್ನೆಲ್ಲ ತ್ಯಜಿಸಬಯಸುತ್ತಾಳೆ.

ನಿದ್ರಗಣ್ಣಲ್ಲೇ ಇದ್ವೊದ್ರ ನನ್ರಾಯರ
ಬೆದ್ದ ಚಿನ್ದಂಗೇ ಅರಸೀದೆ। ನನ್'ರಾಯ್ರ
ಇದ್ವೊದಾ ಗುರ್ತಾ ನಂಗಿಲ್ಲಾ।

[ಪಡುಕೋಗಿಲೆ ಪ. ೬೯೬]

ತನಗೆ ಯಾವ ಸುಳಿವನ್ನೂ ನೀಡದೇ, ನಿದ್ದೆಗಣ್ಣಲ್ಲಿ ಎದ್ದು ಹೋದಂತೆ ತನ್ನನ್ನು ಬಿಟ್ಟು ಹೋದ ಪತಿಯನ್ನು, ಕಳೆದು ಹೋದ ಚಿನ್ನದಂತೆ ಅರಸುತ್ತಾಳೆ. ಆದರೆ ಅವಳಿಗೆ ಅವನು ಹೊರಟು ಹೋದ ಗುರುತೂ ಸಹ ದೊರಕದೆ ಹಳಹಳಿಸುತ್ತಾಳೆ.

ಅಟ್ಟನ್ನಾ ಉಂಬೂವಂಕ್ರೀಗ್ ಮುಟ್ಟದ್ನೇಯಮರಾಯ
ಬೆಟ್ಟಾದಲ್ ಮುಗಳ ಅರಗೀದ। ದೈವರೇ
ಬಿತ್ತೀದ ಬೆಳಿಯಾ ಒಣ್ಣೀಲಾ।

[ಪಡುಕೋಗಿಲೆ ಪ. ೬೯೮]

ಅಡಿಗೆ ಮಾಡಿಟ್ಟ ಅನ್ನವನ್ನು ಉಣ್ಣುವ ಮೊದಲೇ ಯಮರಾಯ ಗಂಡನನ್ನು ಕೊಂಡೊಯ್ದು ಬಿಟ್ಟಿದ್ದಾನೆ. ಅವನು ಮಾಡಿದ ಬೆಟ್ಟದ ಬೇಸಾಯ ಮುಗುಳೊಡೆಯುತ್ತಿದೆ, ಬಿತ್ತಿದ ಬೆಳೆ ತೆನೆಯಿಂದ ತೊನೆದಾಡುತ್ತಿದೆ, ಆದರೆ ಉಣ್ಣುವ ಭಾಗ್ಯ ಗಂಡನಿಗೆ ದೊರಕದಿದ್ದಕ್ಕಾಗಿ ಹೆಂಡತಿ ಪರಿತಪಿಸುತ್ತಲೇ ಬದುಕಿನ ಕ್ಷಣಭಂಗುರತೆಯ ಚಿತ್ರಪಟವನ್ನು ಲೋಕದ ಮುಂದೆ ಬಿಚ್ಚಿಡುತ್ತಾಳೆ.

ಉತ್ತುಮ್ರಾ ಹೊಟ್ಟೀಲ್ಹುಟ್ಟೇ ಮುತ್ತೀನ ಸರ್ವಾದೆ
ಮುತ್ತ ತರ್ಸದ್ರೇ ರಾಯರ। ಪುಣ್ಯಾದಿಂದೇ
ಮುತ್ತನ ಕ್ಯೆಂದಗಿಯಾ ಮುಡ್ದದೆ। ಯಮರಾಯಾ
ಎತ್ತಾಗಿಂದ್ ಬಂದೇ ಕಸ್ಕಂಡೆ।

[ಪಡುಕೋಗಿಲೆ ಪ. ೬೯೭]

ಉತ್ತಮರ ಮಗಳಾಗಿ ಹುಟ್ಟಿ, ಹುಟ್ಟಿದ ಮನೆ ಹಾಗೂ ಕೊಟ್ಟಮನೆ ಎರಡಕ್ಕೂ ತಾನು ಮುತ್ತಿನ ಸರವೇ ಆಗಿದ್ದೆ. ಪತಿರಾಯನ ಪುಣ್ಯದಿಂದ ಮುತ್ತಿನ ಕೇದಗೆಯನ್ನೇ ಮುಡಿದಿದ್ದೆ. ಇಂಥ ವೈಭೋಗದ ಬದುಕನ್ನು ಸತಿಪತಿಗಳೊಂದಾಗಿ ಮಾಡುವಾಗ ಯಮರಾಯ ತನ್ನರಸನನ್ನು ಯಾವೆಡೆಯಿಂದ ಬಂದು ಕಸಿದುಕೊಂಡೆ ಎಂದು ಗೋಗರೆಯುವ ಹೆಣ್ಣಿನ ಅಳಲು ಕರುಳನ್ನು ಹಿಂಡುತ್ತದೆ.

ಅರಸೂ ನನ್‌ರಾಯರ ಅರಸದ್ರೂ ಕಾಣಾರೇ
ಅರಸರ ದಂಡೂಗಿ ಇಳುವಲ್ಲೇ। ಅರಸಾರ
ತಲಸುತ್ತ ಕಂಡೇ ಮರ್ಗೂವೇ।

[ಪಡುಕೋಗಿಲೆ ಪ. ೬೯೯]

ಪತಿಯನ್ನು ಕಳೆದುಕೊಂಡ ಗರತಿ ಉನ್ಮತ್ತಳಾಗಿ, ಅರಸು ಬಾಳನ್ನು ಮಾಡಿದ ತನ್ನ ದೊರೆರಾಯನನ್ನು, ಅರಸರು ಪಲ್ಲಕ್ಕಿಯನ್ನು ಇಳಿಯುವಲ್ಲಿ ಹುಡುಕುತ್ತಾಳೆ. ಆದರೆ ಅಲ್ಲಿ ಪತಿಯನ್ನು ಕಾಣದೆ ಮರುಗುತ್ತಾಳೆ.

ರಾಜಾ ಮಾರ್ಗದಲ್ಲೇ ರಾಯಾರ ನಿರಳಿಲ್ಲಾ
ಯಾವಾ ತಾಣಾಕೇ ನೆಡದಾರ। ಗಿಳಿರಾಮಾ
ನೀನೋಗೇ ನಲ್ಲಾನ ಕರ್ತಾರೋ।

[ಪಡುಕೋಗಿಲೆ ಪ. ೭೦೦]

ರಾಜ ಬೀದಿಗೆ ಬರುತ್ತಾಳೆ, ಹುಡುಕಾಡುತ್ತಾಳೆ, ಅಲ್ಲಿಯೂ ರಾಯರ ನೆರಳಿಲ್ಲ. ನಿದ್ದೆಗಣ್ಣಲ್ಲಿ ಎದ್ದು ಹೋದವರು ಎಲ್ಲಿ ಹೋಗಿ ಬಿಟ್ಟಿರು ಎನ್ನುವುದನ್ನು ಅರಿಯದೆ, ಹಾರುವ ಗಿಳಿಯನ್ನು ನೋಡಿ, ಅದರೆಡೆಯೋಡಿ ತನ್ನ ರಾಯರನ್ನು ಕರೆತರಲು ಕಣ್ಣೀರಿಟ್ಟು ಕೇಳಿಕೊಳ್ಳುತ್ತಾಳೆ.

ಬೆಂದಾ ಬೆಟ್ಟಾದಲ್ಲೇ ನಂದನ್ನಾ ಸಿಸಹುಟ್ಟೇ
ತಂಗಾಳಿಯಿಲ್ಲ ತನಸಿಲ್ಲಾ। ಅರಸಾಗೇ
ಗಂದಾದಾ ಮರನೇ ನಿಳ್ಳಾಗ।

[ಪಡುಕೋಗಿಲೆ ಪ. ೭೦೨]

ಪತಿಯನ್ನಗಲಿದ ಸತಿಗೆ ಬದುಕೇ ಬೆಂಗಾಡಾಗಿ ತೋರುತ್ತದೆ. ಈ ಬೆಂಗಾಡಿನಲ್ಲಿ ಅವಳ ಗಂಡ ಅವಳಿಗೆ "ನಂದನದ ಸಸಿ" (ಇಂದ್ರವನದ ಗಿಡ)ಯಾಗಿ ತೋರುತ್ತಾನೆ. ಆದರೆ ಆ ಸಸಿಯ ಸುತ್ತ ತಂಗಾಳಿಯೂ ಇಲ್ಲ ತಂಪೂ ಇಲ್ಲ. ಇದನ್ನು ಕಂಡ ಸತಿ, ಗಂಧದ ಮರಕ್ಕೆ ತನ್ನ ಗಂಡನಿಗೆ ನೆರಳಾಗಿ ತಂಪುಣಿಸಲು ವಿನಂತಿಸುವಲ್ಲಿ ಗರತಿಯ ಕಾವ್ಯ ಕಲ್ಪಕತೆಗೆ ಹೊಸ ಗರಿ ಮೂಡುವುದನ್ನು ಅವಲೋಕಿಸಬಹುದು.

ತಂದೆಯಿಲ್ಲಾ ಮಕ್ಳಾ ಚೆಂದಾ ನೋಡ್ ಸಿರಿಹರಿ
ಬೆಂದಾ ಕುಂಬ್ರೀಯಾ ಕುರ್ಲ್ಯಂಗೇ। ಬಾಲರಾ
ಚೆಂದಾ ಕಿಡಸಿದ್ಯೋ ನಿಡವೀಗೆ।

[ಪಡುಕೋಗಿಲೆ ಪ. ೭೦೩]

ಗರತಿಯ ದೃಷ್ಟಿ ನಿಧಾನವಾಗಿ ಅವಳ ಲೌಕಿಕ ಬದುಕಿನ ದುರಂತ ಮುಖದೆಡೆಗೆ ವಾಲುತ್ತದೆ. ತಂದೆಯನ್ನು ಕಳೆದುಕೊಂಡ ಮಕ್ಕಳ ಅಂದಗೆಟ್ಟ ಚಹರೆಯನ್ನು ನೋಡುತ್ತಾಳೆ. ಮಕ್ಕಳು ತಂದೆಯಗಲಿಕೆಯ ದುಃಖದ ದಳ್ಳುರಿಯಿಂದ, ಬೆಂದ ಕುಂಬ್ರಿಯ ಕೊರಲಿನಂತಾಗಿದ್ದಾರೆ. ತಂದೆಯ ಆಸರೆಯಲ್ಲಿ ಬೆಳೆದು, ಬೆಳಗಬೇಕಾದ ಮಕ್ಕಳು ಅಂದಗೆಟ್ಟು ಅನಾಥರಾಗಿದ್ದಾರೆ. ಮಕ್ಕಳ ನಿಡು ಬಾಳಿನಲ್ಲಿಯೇ ದೇವರು ಅವರ ಚೆಂದ ಕೆಡಿಸಿದ್ದನ್ನು ನೆನೆದು ಕಣ್ಣೀರುತ್ತಾಳೆ.

ಅಪ್ಪಾನಂಬ್ ಬಾಸೆ ತಪ್ಪಿಹೋಯಿತ ಸಿವ್ನೆ
ಸಿಕ್ಕೀದಲ್ ಬಾಯ ಕಳುವಾರ।

[ಪಡುಕೋಗಿಲೆ ಪ. ೭೦೪]

ತನ್ನ ಮಕ್ಕಳಿನ್ನು "ಅಪ್ಪಾ" ಎಂದು ವಾತ್ಸಲ್ಯ ಪೂರ್ಣವಾಗಿ ನುಡಿಯುವುದು ಇಲ್ಲವಾಗಿ ಹೋಗುತ್ತದೆ. ತಂದೆಯನ್ನೇ ಆಶ್ರಯಿಸಿ ಬೆಳೆಯಬೇಕಾದ ಅವಳ ಕರುಳ ಬಳ್ಳಿಗಳು, ಕಂಡ ಕಂಡವರೆದುರಿಗೆ ಕೈಚಾಚಬಹುದಾದ ಕಂಗಾಲು ಸ್ಥಿತಿಯ ಚಿತ್ರ ಅವಳ ಕಣ್ಣೆದುರಿಗೆ ಬಂದು ಆತಂಕಕ್ಕೊಳಗಾಗುತ್ತಾಳೆ ಆದರೆ ಮರುಕ್ಷಣದಲ್ಲಿ ಅವಳ ಗಂಡ ಅವರ ಬದುಕಿಗೊಂದು ಗಟ್ಟಿ ನೆಲೆ ಮಾಡಿದ್ದನ್ನು ನೆನೆದು ಧೈರ್ಯ ತಂದುಕೊಳ್ಳುತ್ತಾಳೆ.

ಹಿಣ್ಣೊ ಮಕ್ಕಳ ತಾಯೆ ಪುಣ್ಣುಳ್ಳ ಅರಸಾರ
ಹೊನ್ನಾಕುಟ್ ತಿಂಗಾ ನಿಡ್ಸರ। ಅರಸರ
ಹಿಣ್ಣೇನಿಂದ್ ಹಿಸ್ರ ನಿಡ್ವದ।

[ಪಡುಕೋಗಿಲೆ ಪ. ೭೦೫]

ತಾನು ಹೆಣ್ಣು ಮಕ್ಕಳ ತಾಯಿಯಾದರೇನಾಯ್ತು. ಪುಣ್ಯ ಪುರುಷನಾದ ತನ್ನ ಪತಿ ತನಗೆ ಸಾಕಷ್ಟು ಆಸ್ತಿ ಮಾಡಿ ಹೋಗಿದ್ದಾರೆ. ಹಣ ವ್ಯಯಿಸಿ ತೋಟದ ತುಂಬ ತೆಂಗು ನೆಟ್ಟಿದ್ದಾರೆ. ಆ ಕಲ್ಪವೃಕ್ಷದಿಂದ ತನ್ನ ಬದುಕು ಗಟ್ಟಿಗೊಳ್ಳುತ್ತದೆ. ತನ್ನ ಕರುಳ ಬಳ್ಳಿಯನ್ನು ಮುಂದುವರಿಸಲಿಕ್ಕೆ ಮಗಳಿದ್ದಾಳೆ. ಅವಳಿಂದ ತನ್ನ ಕುಲದ ಕುಡಿ ಮುಂದುವರಿಯುತ್ತದೆ. ಕುಲದ ಹೆಸರು ಮೆರೆಯುತ್ತದೆ. ಎಂದು ಗರತಿ ಧೈರ್ಯಗುಂದದೆ ತನ್ನ ಮನಸ್ಸಿಗೆ ತಾನೇ ಸಾಂತ್ವನ ಹೇಳಿಕೊಳ್ಳುತ್ತಾಳೆ. ಮಾತೃ ಪ್ರಧಾನ ಕುಟುಂಬಿಗಳಾದ ನಾಡವರಲ್ಲಿ ಹೆಣ್ಣಿಗೆ ಮಹತ್ವವಿದೆ. ಅವರ ಕುಲದ ಕುಡಿ ಮುಂದುವರಿಯುವುದು ಹೆಣ್ಣಿನಿಂದ. ಮನೆಯಲ್ಲಿ ಮೊದಲು ಹೆಣ್ಣು ಹುಟ್ಟಿದರೆ ಅವಳನ್ನು 'ಸಿರಿ' ದೇವಿಯೆಂದೇ ಬಗೆಯುತ್ತಾರೆ.

ಹತ್ತೊ ಕಲ್ಲೆಟ್ರೇ ಹತ್ತೊ ಬಾಗೀಲೆಟ್ರೇ
ಹತ್ತೊ ಮುತ್ತೆಟ್ರೇ ಸರಳೆಟ್ರೇ। ಅರಸರ
ಮಕ್ಕಳ ಬಾಳೇ ಎರ್ಲಂದೇ।

[ಪಡುಕೋಗಿಲೆ ಪ. ೭೦೭]

ಯಾಲಕ್ಕಿ ತ್ವೊಟಾವೇ ಕಾಡಕ್ಕಿ ಭೂಮಿಯೇ
ಯಾಕೇ ನನ ಜಿಲ್ಮಾ ದುಳಬಾಡೇ। ಅರಸರ
ಲೋಕ ಆಳ್ವರೇ ಮಡ್ದಾರ।

[ಪಡುಕೋಗಿಲೆ ಪ. ೭೦೬]

ತನ್ನ ಮಕ್ಕಳನ್ನು ಪತಿ ನಿರ್ಲಕ್ಷಿಸಲಿಲ್ಲ. ಅವರು ಸುಖವಾಗಿ ಬಾಳಿ ಬದುಕಲೆಂದು ಗಟ್ಟಿಕಲ್ಲ ಪಂಚಾಂಗ ಕಟ್ಟಿ, ಮುತ್ತಿನ ಸರಳ ಕಿಡಕಿಯಿಟ್ಟು. ಹತ್ತೆಂಟು ಬಾಗಿಲುಗಳನ್ನು ಕೂಡ್ರಿಸಿ ಮಕ್ಕಳಿಗಾಗಿ ಭದ್ರಮನೆ ನಿರ್ಮಿಸಿ ಹೋಗಿದ್ದಾರೆ ಯಾಲಕ್ಕಿ ತೋಟವಿದೆ. ಕಾಡಿಗಟ್ಟಲೆ ಅಕ್ಕಿ ಬೆಳೆಯುವ ಭೂಮಿಯಿದೆ. ಅವಳ ಬದುಕು ಸಂಕಷ್ಟಕ್ಕೆ

ಗುರಿಯಾಗಬೇಕಾಗಿಲ್ಲ. ಎಲ್ಲಾ ಸರಿ ಆದರೇನು? ಬದುಕು ಬಾಳಿ, ಆಳುವ ಪತಿರಾಯರಿಲ್ಲ ಎಂಬ ಎದೆಗುದಿ.

ಪತಿಯನ್ನು ಕಳದುಕೊಂಡ ಹೆಣ್ಣನ್ನು ಅನುಕಂಪದ ನೆಲೆಯಲ್ಲಿ ಸಲಿಗೆಯಿಂದ ಮಾತಾಡಿಸಿ ಅವಳ ಸಲಿಗೆಯ ದುರುಪಯೋಗಪಡಿಸಿಕೊಳ್ಳುವ ಮಂದಿಗೇನೂ

ಕಡಿಮೆಯಿಲ್ಲ. ಆ ಕುರಿತು ಎಚ್ಚರವಿದ್ದಷ್ಟೂ ಕಡಿಮೆಯೇ. ಎಂದು ತನಗೆ ಮುಂದೊದಗಬಹುದಾದ ಅನಾಹುತವನ್ನು ನೆನೆಯುತ್ತಾಳೆ.

ಪುರುಸರೊಳ್ಳರಂದೇ ಸರಸಾನಾಡದಿರ
ಬಿರ್ಸುಂಟೇ ಅವರಾ ಎದಿಯಲ್ಲೇ। ತಿಂಗಿನಾ
ಕೊನಿಯ ಕಡ್ವಂಗೆ ಕಡ್ವರ.

[ಪಡುಕೋಗಿಲೆ ಪ. ೭೦೮]

ಹೊರತೋರಿಕೆಯ ಒಳ್ಳೆಯತನವುಳ್ಳ ಪುರುಷರ ಜೊತೆ ಅತಿ ಒಡನಾಟ ಸಲ್ಲ. ಅತಿ ಸಲಿಗೆ ಅಪಾಯಕಾರಿ. ಸರಸ ಮಾತಾಡುವ ಪುರುಷರ ಎದೆ ಬಿರುಸಾಗಿರುತ್ತದೆ. ಆತ ಸಲಿಗೆಯ ದುರುಪಯೋಗಪಡಿಸಿಕೊಂಡು ತನ್ನ ಬದುಕು ದುರುಂತ ಮುಖಿಯಾಗುವಂತೆ ಮಾಡಬಹುದೆಂಬುದನ್ನು ಗರತಿ 'ತೆಂಗಿನ ಕೊನೆಯನ್ನು ಕಡಿಯುವಂತೆ ಕಡಿಯುವರು' ಎಂಬ ಸೊಲ್ಲಿನಲ್ಲಿ ಸಶಕ್ತವಾಗಿ ದಾಖಲಿಸುತ್ತಾಳೆ.

ಪರಪುರುಷರ ಸರಸ ನುಡಿಯ ಬೆಂಕಿಯುರಿಯಿಂದ ತಪ್ಪಿಸಿಕೊಂಡು ಹೇಗೆ ಹೇಗೋ ಬದುಕನ್ನು ನಿಭಾಯಿಸಬಹುದು. ಆದರೆ ಅನೇಕ ಸಂದರ್ಭಗಳಲ್ಲಿ ಹೆಂಗಸರೇ ವಿಧವೆ ಹೆಣ್ಣನ್ನು 'ರಂಡೆ'ಯೆಂದು ಕೀಳ್ಮಾಡಿ ಚಿತ್ರ ಹಿಂಸೆಗೊಳಪಡಿಸುವುದುಂಟು. ಆ ಯಾತನೆ ಘೋರತರವಾದುದು.

ಗಂಡ ಸತ್ತಮ್ಮಾಗೇ ರಂಡೆಯೆನ್ನಲು ಬ್ಯೆಡಿ
ಗಂಡು ಬಾಲಕನೇ ಒಳ್ಗೇಂವ। ಏನಂಬೂವ
ಪುಂಡಿ ನಾಲಗಿಯ ಸಿಗಳೂವೇ।

[ಪಡುಕೋಗಿಲೆ ಪ. ೭೦೯]

ಗಂಡನನ್ನು ಕಳೆದುಕೊಂಡವಳಿಗೆ ರಂಡೆಯೆಂದು ಛೇಡಿಸಿ, ನೋವಿಗೆ ಉಪ್ಪೆರಚ ಕೂಡದು. ರಂಡೆಯೆನ್ನುವ ಅಮಾನವೀಯ ಮರ್ಮಭೇದಕ ನುಡಿಸಲ್ಲ. ಆದರೂ ಅಂಥ ನುಡಿ ಕೇಳುವ ಪ್ರಸಂಗ ಬಂದಾಗ, ಅದನ್ನು ಸಮರ್ಥವಾಗಿ ಎದುರಿಸಿ, ಇಲ್ಲವಾಗಿಸುವ ಬಗೆಯನ್ನು ಗರತಿ ಮೇಲಿನ ತ್ರಿಪದಿಯಲ್ಲಿ ಹೊರಗೆಡವುತ್ತಾಳೆ.

ಸಾಮಾಜಿಕ ಮಂಗಲ ಕಾರ್ಯ ಸಂದರ್ಭಗಳಲ್ಲಿ ಮುತ್ತೈದೆಯರಿಗೆ ದೊರೆತ ಪ್ರಾಶಸ್ತ್ಯ, ಮುತ್ತೈದೆಯರಲ್ಲದವರಿಗೆ ಲಭ್ಯವಾಗದು. ಅವರನ್ನು ಆಳು ಮಕ್ಕಳಂತೆ ನಿಕೃಷ್ಟವಾಗಿ ಕಾಣುವರು.

ಗಂಡೆದ್ದಮ್ಮಾನಾಕಯ್ಲೇ ಮಂಡಾಲಾಬರಿಯಂದ್ರ
ಗಂಡಿಲ್ಲಾದಮ್ಮಾನ ಮೊಕ ನೋಡೆ। ಯೇನಂದಾರ
ಎಂಜಲ್ಡಾ ಎಲಿಯಾ ಉಗಿಯಂದ್ರು

[ಪಡುಕೋಗಿಲೆ ಪ. ೭೧೦]

ಅರ್ಸೆದ್ದಮ್ಮಾನಾ ಕಯ್ಲೇ ಆರತಿ ತಾರಂದ್ರೇ
ಅರ್ಸಿಲ್ಲಾದಮ್ಮಾ ಮೊಕ ನೋಡೆ। ಯೇನಂದಾರ
ಮುರ್ಸಲಿ ಮಡ್ಕಿ ತುಳಿಯಂದ್ರ.

[ಪಡುಕೋಗಿಲೆ ಪ. ೭೧೧]

ಮಂಗಲ ಕಾರ್ಯ ಕಟ್ಟಳೆಗಳಲ್ಲಿ ಮುತ್ತೈದೆಯ ಹತ್ತಿರ ರಂಗೋಲಿ ಹಾಕಿಸಿ, ಮಂಗಲಾರತಿಯನ್ನು ತರಿಸಿ, ಮಂಗಲಾರತಿ ಬೆಳಗಿದರೆ, ವಿಧವೆಯ ಹತ್ತಿರ ಎಂಜಲೆಲೆ ತೆಗೆಯಿಸಿ, ಮುಸುರೆಯ ಮಡಿಕೆಯನ್ನು ತೊಳೆಯಿಸುತ್ತಾರೆ. ಪತಿಯನ್ನು ಕಳೆದುಕೊಂಡ ಹೆಣ್ಣು ಮಗಳು ಸಮಾಜದಲ್ಲಿ ತಾನು ಕಂಡುಕೊಂಡ ಇಂಥ ಅನೇಕ ನಿಕೃಷ್ಟ ಪ್ರಸಂಗಗಳನ್ನು ಒಂದೊಂದಾಗಿ ನೆನೆಯುತ್ತಾಳೆ. ಅವುಗಳ ಚಿತ್ರಪಟ ಸುರುಳಿ ಕಣ್ಮುಂದೆ ಬಿಚ್ಚಿಕೊಂಡು ಅವಳ ಮನ ಕಲಕಿ ಒಡಲಿಗೆ ಬೆಂಕಿಯಿಟ್ಟಂತಾಗುತ್ತದೆ.

ಒಡ್ಲಲ್ಲೇ ಉರಬ್ಯೆರೇ ಉಯಾಸ್ದದಗೆ ಬ್ಯೆರೇ
ಕಂಡೋರ ಮಾಡಿದ ಹಗೆ ಬ್ಯೆರೆ। ಅರಸಾರೇ
ನೀವೇ ಇದ್ದೊದ ದಿನ್ದಲ್ಲೇ।

[ಪಡುಕೋಗಿಲೆ ಪ. ೭೧೨]

ಒಳಗೆ ಹೊಟ್ಟೆಯಲ್ಲಿ ತನ್ನ ಬಣ್ಣಗೆಟ್ಟ ಬದುಕಿನ ಕಷ್ಟದ ಕಿಚ್ಚು, ಹೊರಗೆ ಉರಿಬೇಸಿಗೆಯ ದಗೆ, ಕಣ್ಮುಂದೆ ತಮಗಾಗದವರು ಆಡುವ ಚುಚ್ಚುನುಡಿಯ ಹೊಗೆ, ಇವೆಲ್ಲ ಪತಿರಾಯನು ಹೆಂಡತಿಯನ್ನು ಬಿಟ್ಟು ಕಣ್ಮರೆಯಾದ ದಾರುಣ ಸಂದರ್ಭದಲ್ಲಿ ಒಂದೊಂದಾಗಿ ಬಿಚ್ಚಿಕೊಂಡು ಹೆಣ್ಣಿನ ಮನ ಕಲಕುತ್ತದೆ. ಕುದಿದು ಉಕ್ಕಿ ಭೋರ್ಗರೆಯುತ್ತದೆ.

ಮರ್ಗೂವ ಇಸ್ತ್ರೀಗೇ ತುಳ್ದೇ ಅಕ್ಕಿ ಹುವ್ವೇ
ಮರ್ಗೂವೆ ಕಡ್ಲಾ ತೆರಿಹಂಗೇ। ಯಮರಾಯ್ನ
ಮಗ್ಳು ನನ್ನಂತೇ ಮರ್ಗಾಲಿ।

[ಪಡುಕೋಗಿಲೆ ಪ. ೭೧೩]

ಇಲ್ಲಿ ಗರತಿ ಹೆಣ್ಣು ಮಗಳು. ಒಂದೇ ಸವನೆ ದುಃಖದಿಂದ ಕುದಿಯುವ ಎಸರಿಗೆ, ಮೇಲಿಂದ ಮೇಲೆ ಬಂದೊದಗುವ ಕಷ್ಟಗಳ ಅಕ್ಕಿಯನ್ನು ಹೊಯ್ದು, ಕುದಿದು ಉಕ್ಕಿ ಮರುಗುತ್ತಾಳೆ. ಅವಳ ಮರುಗುವಿಕೆ ಸಮುದ್ರ ತೆರೆಯುಬ್ಬರದ

ಮರುಗುವಿಕೆಯಂತೆ ಬೋರ್ಗರೆಯುತ್ತದೆ. ತನ್ನ ಪತಿಯನ್ನು ತನ್ನಿಂದ ಕಸಿದುಕೊಂಡ ಯಮರಾಯನಿಗೆ ತನ್ನ ಕಷ್ಟದ ಪರಾಕಾಷ್ಠತೆಯ ಅರಿವಾಗಬೇಕಾದರೆ, ಅವನ ರಕ್ತವನ್ನು ಹಂಚಿಕೊಂಡು ಹುಟ್ಟಿದ ಅವನ ಮಗಳೂ ತನ್ನಂಥ ವೈಧವ್ಯವನ್ನು ಹೊಂದಬೇಕು. ಅವಳೂ ತನ್ನಂತೆ ಪತಿಯನ್ನು ಕಳೆದುಕೊಂಡು ಮರುಗಬೇಕು; ಆವಾಗ ಯಮರಾಯನಿಗೆ ತನ್ನಂಥ ನೊಂದವರ ನೋವಿನುರಿಯ ಯಮಯಾತನೆಯ ಕಲ್ಪನೆ ಬರಲು ಸಾಧ್ಯವೆಂದು ಪತಿಯನ್ನು ಕಳೆದುಕೊಂಡ ಹೆಣ್ಣು ಪರಿತಪಿಸುವಲ್ಲಿ, ಎಲ್ಲ ಪತಿ ವಿಹೀನ ಹೆಣ್ಣುಗಳ ಮೂಕ ರೋದನದ ವಿರಾಟ್ ದರ್ಶನವಿದೆ.

೧೬. ನಾಡವರ ಗ್ರಾಮದೇವತೆಗಳು

ಗ್ರಾಮೀಣರ ಶ್ರದ್ಧಾಭಕ್ತಿಯ ಕೇಂದ್ರ ಬಿಂದು ಗ್ರಾಮದೇವತೆ. ಅವರು ಕಷ್ಟಕಾಲದಲ್ಲಿ ಶಿಷ್ಟದೇವತೆಗಳಿಗೆ ಮೊರೆಯಿಡುವುದಕ್ಕಿಂತ ಹೆಚ್ಚಿಗೆ ಗ್ರಾಮದೇವತೆಗಳಿಗೆ ಮೊರೆಯಿಡುತ್ತಾರೆ. ಅಲೆಮಾರಿಯಾದ ಮಾನವ, ತನ್ನ ಅಲೆಮಾರಿತನವನ್ನು ತ್ಯಜಿಸಿ ಒಂದೆಡೆ ನೆಲೆಸಿ, ವ್ಯವಸಾಯಕ್ಕೆ ನಿಂತು ಮನೆ ಮಠಗಳನ್ನು ಕಟ್ಟಿ, ಗ್ರಾಮಗಳನ್ನು ನಿರ್ಮಿಸಿಕೊಂಡು, ಸಂಘ ಜೀವಿಯಾಗಿ ವಾಸಿಸತೊಡಗಿದಂದಿನಿಂದಲೇ ಗ್ರಾಮದೇವತೆಗಳ ಆರಾಧನೆ ಅನೂಚಾನಾಗಿ ನಡೆದುಕೊಂಡು ಬಂದಿದೆ. ಪ್ರಕೃತಿಯ ನಿಗೂಢ ರಹಸ್ಯವನ್ನರಿಯದ ಗ್ರಾಮವಾಸಿಗಳು ಆ ಶಕ್ತಿಗೆ ಹೆದರಿ, ತಮ್ಮ ಹಾಗೂ ತಮ್ಮ ಗ್ರಾಮದ ಹಿತರಕ್ಷಣೆಗಾಗಿ, ಜನ ಜಾನುವಾರಾದಿಯಾಗಿ ಸಕಲರ ಕ್ಷೇಮಾಭಿವೃದ್ಧಿಗೆ ಭಯ ಭಕ್ತಿಯಿಂದ ಗ್ರಾಮದೇವತೆಗಳನ್ನು ಸೃಷ್ಟಿಸಿಕೊಂಡರು. ಇವು ಗ್ರಾಮಕ್ಕೆ ಕೇಡೊದಗಿ ಬಂದಾಗ, ರಕ್ಷಣೆಯನ್ನು ಮಾಡುತ್ತವೆ; ಇವು ತಮಗೊಲಿದರೆ ಮಾತ್ರ ತಮ್ಮ ಬದುಕ್ ಸುಭದ್ರ ಇಲ್ಲದಿದ್ದರೆ ಕೇಡು ಖಂಡಿತ ಎಂದು ನಂಬಿದ.

ಗ್ರಾಮದೇವತೆಗಳು ಅವೈದಿಕ ದ್ರಾವಿಡ ಪರಂಪರೆಗೆ ಸೇರಿದವುಗಳಾಗಿವೆ. ಇವು ಹುತ್ತ, ವೃಕ್ಷ, ಶಿಲೆಯ ರೂಪದಲ್ಲಿವೆ; ಮಣ್ಣು, ಕಟ್ಟಿಗೆ, ಶಿಲೆ ಹಾಗೂ ವಿಭಿನ್ನ ಲೋಹಗಳಿಂದ ಮಾಡಿದ ವಿಗ್ರಹ ರೂಪದಲ್ಲಿವೆ. ಇವುಗಳ ಮಂದಿರಗಳು, ವೈದಿಕ ಪರಂಪರೆಯ ದೇವಾಲಯಗಳಂತೆ ವಿಶಾಲವಾಗಿದ್ದುದು ಕಡಿಮೆ. ಬಹುತೇಕ ಮಂದಿರಗಳು ಚಿಕ್ಕವುಗಳಾಗಿವೆ. ಕೆಲವು ಗುಡಿಗಳೇ ಇಲ್ಲದ ಗುತ್ತು (ಗುರುತು) ತಾನ, ತಳಗಳಾಗಿವೆ. ಇವಕ್ಕೆ ಬಯಲು ಇಲ್ಲವೆ ಬಯಲಿಲ್ಲಿಯ ಗಿಡ ಮರಗಳೇ ಆಲಯಗಳು. ಗುಡಿಯುಳ್ಳ ಕೆಲವು ಗ್ರಾಮದೇವತೆಗಳಿಗೆ ಮಾತ್ರ ನಿತ್ಯ ಪೂಜೆಯಿದೆ; ಕೆಲವಕ್ಕೆ ವಾರಕ್ಕೊಮ್ಮೆ. ಗುಡಿಗಳಿಲ್ಲದ ಗುತ್ತುಗಳಿಗೆ ಹಬ್ಬ ಜಾತ್ರೆಗಳಿಲ್ಲ ಮಾತ್ರ ಪೂಜೆ. ಗ್ರಾಮದೇವತೆಗಳನ್ನು ವೈದಿಕರು ಅವಜ್ಞೆಯಿಂದ ಕಾಣುವುದೇ ಹೆಚ್ಚು. ಇವುಗಳ ಪೂಜಾರಿಗಳು ಹೆಚ್ಚಾಗಿ ಅವೈದಿಕ ಕುಂಬಾರರು, ಇಲ್ಲವೆ ಇತರ ಶೂದ್ರರು; ಕೆಲವಕ್ಕೆ ಪೂಜಾರಿಗಳು ಇರುವುದೂ ಇಲ್ಲ. ಅಲ್ಲೆಲ್ಲ ಭಕ್ತರು ತಮಗಿಷ್ಟ ಬಂದ ರೀತಿಯಲ್ಲಿ ದೇವತೆಗೆ ತಮ್ಮ ಭಕ್ತಿಗೌರವವನ್ನು ಸಲ್ಲಿಸಬಹುದಾಗಿದೆ. ಗ್ರಾಮದೇವತೆಗಳಿಗೆ ವೈದಿಕ ಪರಂಪರೆಯ ಷೋಡಶೋಪಚಾರ, ಸಂಸ್ಕೃತ ಮಂತ್ರ ಪಠನಾದಿ ಅರ್ಚನೆಯಿಲ್ಲ, ಅರ್ಚನೆ ಜಾನಪದೀಯವಾಗಿ ನಡೆಯುತ್ತದೆ. ಅಲ್ಲಿ ಜನಪದ ಹಾಡುಗಳೇ ದೇವರ ಮಂತ್ರಗಳು, ಕೆಲವಡೆ ಅದೂ ಇರುವುದಿಲ್ಲ. ಮೌನ ಪೂಜೆಮಾತ್ರ ಸಲ್ಲುತ್ತದೆ; ತಮ್ಮ ಇಷ್ಟಾರ್ಥ ಪೂರೈಕೆಗಾಗಿ ರಾಗ ಬದ್ಧವಾದ ರೀತಿಯಲ್ಲಿ 'ಹೇಳಿಕೆ' ಮಾಡಿಕೊಳ್ಳುತ್ತಾರೆ; ಗುಡಿಗಳಲ್ಲಿ ಸಂಸ್ಕೃತಕ್ಕೆ ಪ್ರವೇಶವಿಲ್ಲ. ಆದರೆ ಕೆಲವೆಡೆ ಕಾರಣಾಂತರದಿಂದ ಗ್ರಾಮದೇವತೆಗಳು ಹೆಚ್ಚಿನ ಪ್ರಸಿದ್ಧಿ, ಹೊಂದಿ,

ಗಣನೀಯ ಪ್ರಮಾಣದಲ್ಲಿ ಭಕ್ತಾದಿಗಳನ್ನು ಆಕರ್ಷಿಸಿದಾಗ, ಅವು ವೈದಿಕ ಬ್ರಾಹ್ಮಣರನ್ನು ಆಕರ್ಷಿಸಿ, ಅವರಿಂದ ಸಂಸ್ಕಾರಗೊಂಡು, ತಮ್ಮ ಮೂಲ ಹೆಸರು ಕಳೆದುಕೊಂಡು, ಮೂರ್ತಿಶಿಲ್ಪ, ದೇವಾಲಯ ವಾಸ್ತುವಿನ್ಯಾಸ ಹಾಗೂ ಅರ್ಚನಾ ವಿಧಿ ವಿಧಾನಗಳಲ್ಲಿ ಆಗಮೋಕ್ತ ಬದಲಾವಣೆಗಳನ್ನು ಪಡೆಯುತ್ತವೆ. ಮಂದಿರಗಳಲ್ಲಿ ವೈದಿಕ ಬ್ರಾಹ್ಮಣ, ಅವರ ಸಂಸ್ಕೃತ ಮಂತ್ರ ತಂತ್ರಗಳ, ಷೋಡಶೋಪಚಾರ ಅರ್ಚನಾ ವಿಧಾನಗಳ ಪ್ರವೇಶವಾಗುತ್ತದೆ. ಗ್ರಾಮದೇವತೆ ಭೂಮಿತಾಯಿ ಅಮ್ಮ, ಶಾಂತಾದುರ್ಗಿ, ಕೆಂಗಳಾ ಪರಮೇಶ್ವರಿಯಾಗುತ್ತಾಳೆ; ಮಾರಿಯಮ್ಮ, ಕರಿಯಮ್ಮ, ಮಾರಿಕಾಂಬೆ, ಕಾಳಿಕಾಂಬೆಯಾಗುತ್ತಾಳೆ; ಬೊಮ್ಮಯ್ಯ, ರಾಕೇಸರು, ಬ್ರಹ್ಮ, ರಾಕೇಶ್ವರರಾಗುತ್ತಾರೆ, ಜಟಿಗ, ಬೀರರು ಜಟಗೇಶ್ವರ ಬೀರೇಶ್ವರರಾಗುತ್ತಾರೆ. ಇಷ್ಟಾದರೂ ಸಹ ಕೆಲವೆಡೆ ವೈದಿಕರು ಸ್ಥಳೀಯರ ಭಾವನೆಗಳನ್ನು ಗೌರವಿಸಿ, ಗ್ರಾಮದೇವತೆಗಳಿಗೆ ಸಂಬಂಧಿಸಿದ ಬಂಡಿಹಬ್ಬ ಜಾತ್ರೆಯಾದಿ ಸ್ಥಳೀಯ ಉತ್ಸವಗಳಲ್ಲಿ ಸ್ಥಳೀಯ 'ಗುನಗರ' ಪ್ರವೇಶಕ್ಕೆ, ಸ್ಥಳೀಯ ಧಾರ್ಮಿಕ ಆಚರಣೆಗಳಿಗೆ, ಅವಕಾಶ ಕಲ್ಪಿಸಿದ್ದಿದೆ. ಹೀಗಾಗಿ ಸ್ಥಳೀಯ ಧಾರ್ಮಿಕ ಆಚರಣೆಗಳಲ್ಲಿ ವೈದಿಕ ಬ್ರಾಹ್ಮಣ ಪೂಜಾರಿಯ ಪಾತ್ರಕ್ಕಿಂತ ಸ್ಥಳೀಯ ಗುನಗ, ಗಾಂವಕರ, ಮಿರಾಸಿ, ಗೌಡಾದಿ ಮುಖಂಡರ ಪಾತ್ರ ಮಹತ್ವದ್ದಾಗುತ್ತದೆ. ವೈದಿಕರು ಗ್ರಾಮದೇವತೆಗಳ ಸಂಸ್ಕರಣೆಯ ತರಾತುರಿಯಲ್ಲಿ ಸ್ಥಳೀಯ ಆಚರಣಾ ವಿಧಿಗಳನ್ನು ಪೂರ್ತಿಯಾಗಿ ಬದಲಿಸಲಿಲ್ಲ. ಹಾಗಂತ ಅವನ್ನು ಯಥಾಸ್ಥಿತಿಯಲ್ಲಿ ಸ್ವೀಕರಿಸಲೂ ಇಲ್ಲ. ಸ್ಥಳೀಯರ ಭಕ್ತಿ ಭಾವುಕತೆಗೆ ಪೆಟ್ಟು ಬೀಳದಂತೆ ಕೆಲವು ಬದಲಾವಣೆಗಳನ್ನು ತಂದರು; ಕೆಲವು ಅವೈದಿಕ ಆಚರಣೆಗಳನ್ನು ಗೌರವಿಸಿದರು. ಹೀಗೆ ವೈದಿಕರು ನಮ್ಮ ಸಮ್ಮಿಶ್ರ ಸಂಸ್ಕೃತಿಯ ಹರಿಕಾರರಾದರು. ನಮ್ಮ ಸಮ್ಮಿಶ್ರ ಸಂಕೀರ್ಣ ಸಂಸ್ಕೃತಿಯ ಹಲವು ಕುರುಹುಗಳನ್ನು ಅಂಕೋಲೆಯ ಭೂಮಿತಾಯಿ, ಗೋಕರ್ಣದ ಭದ್ರಕಾಳಿ ಹಾಗೂ ಶಿರಸಿಯ ಮಾರಿಕಾಂಬೆಯ ಆರಾಧನೆಯಲ್ಲಿ ಕಾಣಬಹುದು.

ಗ್ರಾಮೀಣರ ಬದುಕು ಗ್ರಾಮದೇವತೆಗಳ ರಕ್ಷಾಕೋಟೆಯಲ್ಲಿ ಸುಭದ್ರವಾಗಿರುತ್ತದೆ. ಅವರ ದೈನಂದಿನ ಜೀವನದ ಒತ್ತಾಸೆಗಳು ಫಲಪ್ರದವಾಗಲು ಅವರ ಆಣೆ ಪ್ರಮಾಣಗಳಿಗೆ, ಚಿಂತನಾ ಕ್ರಿಯೆ, ಪ್ರಕ್ರಿಯೆಗಳಿಗೆ ಗ್ರಾಮದೇವತೆಗಳ ಅನುಗ್ರಹ ಬೇಕೇಬೇಕು. ಅದಕ್ಕಾಗಿ ಊರಿನ ವಿವಿಧ ಜಾತಿಯ ಜನರು, ಈ ದೇವತೆಗಳ ಸಕಲ ಜವಾಬುದಾರಿಗಳನ್ನು ತಮ್ಮ ಕುಲಜಾತಿಗಳ ಅಂತಸ್ತಿಗೆ ತಕ್ಕ ರೀತಿಯಲ್ಲಿ ಹಂಚಿಕೊಳ್ಳುತ್ತಾರೆ. ಈ ದೇವತೆಗಳ ಪ್ರೀತ್ಯರ್ಥವಾಗಿ ಹಬ್ಬ ಜಾತ್ರೆಗಳನ್ನು ಇಡಿಯ ಊರಿನ ಹಬ್ಬವಾಗಿ ಹಮ್ಮಿಕೊಂಡು, ತಮ್ಮ ಕಷ್ಟಪರಿಹಾರಕ್ಕಾಗಿ ಶ್ರದ್ಧಾಭಕ್ತಿಯಿಂದ ಬೇಡಿಕೊಂಡು ಹಬ್ಬದ ಸಂಭ್ರಮವನ್ನು ಅನುಭವಿಸುತ್ತಾರೆ.

ಗ್ರಾಮದೇವತೆಗಳು ಜನಪದ ಬದುಕಿನ ಒಂದಂಗವಾಗಿಯೇ ಬೆರೆತಿರುತ್ತವೆ. ಇವುಗಳ ಅಧ್ಯಯನದಿಂದ ಆಯಾ ದೇವತೆಗಳನ್ನು ಆರಾಧಿಸುವ ಜನತೆಯ ಜೀವನದ ರೀತಿ ನೀತಿಗಳನ್ನು, ಅವರ ಜೀವನ ವಿಧಾನಗಳ ದಿಕ್ಕುದೆಸೆಗಳನ್ನು

ಅವರ ಜ್ಞಾನ ವಿಜ್ಞಾನದ ಆಳ ಅಗಲಗಳನ್ನು, ಅವರ ಗತಿಶೀಲ ಬದುಕಿನ ಇತಿಹಾಸ, ಮನೋವಿಜ್ಞಾನ, ಸಮಾಜ ವಿಜ್ಞಾನ ಹೀಗೆ ಬಹುಮುಖಗಳ ಸ್ವರೂಪವನ್ನರಿಯಬಹುದಾಗಿದೆ. ಜಾನಪದರು ತಮ್ಮ ಧರ್ಮ, ಕಲೆ, ಕ್ರೀಡೆಗಳಲ್ಲಿ ತಮ್ಮನ್ನು ಗರಿಷ್ಠ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು ಗ್ರಾಮದೇವತೆಗಳ ಸಮ್ಮುಖದಲ್ಲಿ. ಇದರಿಂದ ಆಯಾ ಜಾತಿ ಮತಗಳ ಕಲೆ, ಕ್ರೀಡೆಗಳ, ವಿಕಾಸ ಪಥವನ್ನರಿಯಲು, ಗ್ರಾಮದೇವತೆಗಳ ಅಧ್ಯಯನವು ಮಹತ್ವದ ಪಾತ್ರವಾಡುತ್ತದೆ.

ಉತ್ತರ ಕನ್ನಡ ಜಿಲ್ಲೆಯ ನಾಡವರು ಪೂಜಿಸುವ ಕೆಲವು ಗ್ರಾಮ ದೇವತೆಗಳನ್ನು ಮಾತ್ರ ಇಲ್ಲಿ ಅಧ್ಯಯನ ಶಿಸ್ತಿಗೆ ಅಳವಡಿಸಲಾಗಿದೆ. ನಾಡವರು ತಮ್ಮ ಬದುಕಿನಲ್ಲಿ ಕ್ಷಾತ್ರ ಹಾಗೂ ಕೃಷಿ ವೃತ್ತಿ ಎರಡನ್ನೂ ತಮ್ಮ ಪ್ರಧಾನ ಕಸುಬಾಗಿ ಸ್ವೀಕರಿಸಿದ ಒಂದು ವೀರ ಜನಾಂಗ. ಆದ್ದರಿಂದ ಇವರು ಆರಾಧಿಸುವ ಗ್ರಾಮದೇವತೆಗಳು ಸಹ, ಇವರ ವೃತ್ತಿಗನುಗುಣವಾಗಿದ್ದು, ಅವರ ಜೀವನ ವೃತ್ತಿಗೆ, ಬದುಕಿಗೆ ಪ್ರೇರಕ ಪೋಷಕಗಳಾಗಿವೆ.

ನಾಡವರು ಬಹುದೇವತಾ ಉಪಾಸಕರು. ಶಿಷ್ಟದೇವತೆಗಳಾದ ಶಿವ, ವಿಷ್ಣು, ರಾಮಾದಿ ದೇವತೆಗಳ ಜೊತೆಗೆ, ತಮ್ಮ ಬದುಕಿಗೆ ಬರವಸೆಯನ್ನು ಮೂಡಿಸಿದ ಜಾನಪದ ಸಂಬಂಧಿ ಗ್ರಾಮದೇವತೆಗಳನ್ನು ವಿಶೇಷವಾಗಿ ಆರಾಧಿಸುತ್ತಾರೆ. ಇವರಿಗೆ ಶಿಷ್ಟದೇವತೆಗಳ ಆರಾಧನೆಗಿಂತ ಗ್ರಾಮದೇವತೆಗಳ ಆರಾಧನೆಯಲ್ಲಿ ಹೆಚ್ಚಿನ ಆಸಕ್ತಿ. ಇವರು ಪೂಜಿಸುವ ದೇವತೆಗಳಲ್ಲಿ ಇವರನ್ನು ಪಾಲಿಸಿ, ಪೋಷಿಸಿ, ರಕ್ಷಿಸುವ ದೇವತೆಗಳ ಜೊತೆಗೆ ಕಾಡುವ ದೇವತೆಗಳೂ ಇವೆ. ಕ್ಷಾತ್ರ ಹಾಗೂ ಕೃಷಿ ವೃತ್ತಿಗೆ ಆದ್ಯತೆ ನೀಡಿದ ನಾಡವರು. ತಮ್ಮ ಕೃಷಿಗೆ ಮೂಲಾಧಾರವಾದ ಭೂಮಿತಾಯಿ, (ಅಮ್ಮ) ಕೃಷಿ ಹಾಗೂ ಆರೋಗ್ಯ ವರ್ಧನೆಗೆ ಪೂರಕ ಸಾಮಗ್ರಿಗಳನ್ನೊದಗಿಸುವ ಗಿಡಮರಗಳನ್ನು, ವ್ಯವಸಾಯಕ್ಕೆ ಸಹಾಯ ಮಾಡುವ ಪ್ರಾಣಿಗಳನ್ನು, ತಮ್ಮ ಕುಟುಂಬ, ಊರು, ನಾಡು ಹಾಗೂ ಮಹಿಳೆಯರ ಮಾನರಕ್ಷಣೆಗಾಗಿ ಸೆಣಸಿ ಸಾವ್ನೆದಿದ ಧುರವೀರರನ್ನು, ಮನೆತನ, ಊರು, ಹಾಗೂ ನಾಡಿನ ಮಾನಕಾದ ಜಟ್ಟಿಗಳನ್ನು, ಕಾಳಗ ಕಲಿಗಳಾಗಿ ಸೆಣಸಿ ಸತ್ತ ಪತಿಗಳೊಡನೆ ಸಹಗಮನ ಮಾಡಿದ, ಕೆರೆ, ಬಾವಿಗಳ ಜಲ ಸಮೃದ್ಧಿಗೆ, ಕೋಟೆ ಕೊತ್ತಳಗಳ ಸುಭದ್ರಸ್ಥಿತಿಗೆ ದೇಹತ್ಯಾಗ ಮಾಡಿ ಮಯ್ತಿ–ಮಾಸ್ತಿಯರಾದ ವೀರ ವನಿತೆಯರನ್ನು ಆರಾಧಿಸಿದ್ದಾರೆ. ತಮಗೆ ಕೇಡುಂಟುಮಾಡುವ ಹಾವು, ಹುಲಿ ಮುಂತಾದ ಪ್ರಾಣಿಗಳನ್ನು ಚಾಳಿ, ಕೀಳಿ, ರಾವು, ಭೂತ, ಪಿಶಾಚಿಗಳನ್ನು ಕೇಡಿನ ಭಯದಿಂದ ಆರಾದಿಸಿದ್ದಿದೆ.

ನಾಡವರು ಪೂಜಿಸುವ ಗ್ರಾಮದೇವತೆಗಳಲ್ಲಿ ನಾಡವರು 'ಅಮ್ಮ'ನೆಂದು ಗೌರವಿಸುವ ಭೂಮಿತಾಯಿ, ಬೊಮ್ಮಯ್ಯ, ಜೈನಬೀರ, ಕಾನಬೀರ, ರಾಕ, ರಾಕೇಶ, ಹೊನ್ನ, ಹೊಲಿಯಟ್ಟ, ಹೊಸಬ, ಜಟಗ, ಬರ್ಮ ಜಟಗಗಳು ಪ್ರಮುಖವಾಗಿವೆ. ಈ ದೇವತೆಗಳೆಲ್ಲ ವೀರ ಮಾತಾ ಪಿತೃಗಳಾಗಿವೆ. ಇವುಗಳ ಆರಾಧನಾ ಪದ್ಧತಿ ತುಳು ನಾಡವರ ಭೂತಾರಾಧನೆಯನ್ನು ಬಹುಮಟ್ಟಿಗೆ ಹೋಲುತ್ತದೆ. ನಾಡವರ

ಬದುಕಿನಲ್ಲಿ ಈ ವೀರ ಮಾತಾ-ಪಿತೃ ಪೂಜಾ ಪರಂಪರೆ ಬೀರಿದಂಥ ಪ್ರಭಾವವನ್ನು ಇನ್ನಾವ ಪೂಜೆಯೂ ಬೀರಿದಂತೆ ತೋರುವುದಿಲ್ಲ. ನಾಡವರು ಪೂಜಿಸುವ ಕೃಷಿ ಸ್ವಾಮಿ ಬಲೀಂದ್ರನು ಸಹ ವೀರ ಪರಂಪರೆಯ ದೇವತೆಯೇ ಆಗಿದ್ದಾನೆಂದು ನನ್ನ ಎಣಿಕೆ. ವೈಜ್ಞಾನಿಕ ಮನೋವೃತ್ತಿಯನ್ನು ಹೆಚ್ಚಾಗಿ ರೂಢಿಸಿಕೊಂಡ ನಾಡವರು ವರ್ತಮಾನದಲ್ಲಿಯೂ ವೀರ ಪೂಜೆಯನ್ನು ಒಂದು ಜೀವಂತ ಸಂಪ್ರದಾಯಬಾಗಿ ಮುಂದುವರಿಸಿಕೊಂಡು ಬರುತ್ತಿರುವುದು ವಿಸ್ಮಯಕಾರಿ ಸಂಗತಿಯಾಗಿದೆ. ಇದಕ್ಕೆ ಕಾರಣ ಅತಿಮಾನುಷ ಶಕ್ತಿಯುಳ್ಳ ವೀರ ಪಿತೃಗಳು, ಕಾಲಕಾಲಕ್ಕೆ ಮಳೆ ಸುರಿಸಿ, ಬೆಳೆಸಮೃದ್ಧಿಗೈದು, ಜನರ ಬೆವರಿಗೆ ತಕ್ಕ ಪ್ರತಿಫಲಗಳನ್ನು ನೀಡುವರು, ದನಕರುಗಳಿಗೆ ಮೇವೊದಗಿಸಿ, ಅವರ ಗೋಸಂಪತ್ತನ್ನು ಹೆಚ್ಚಿಸುವರು, ಜನರ ಆರೋಗ್ಯ ಕಾಪಾಡುವರು, ಅನ್ಯಾಯವನ್ನು ತಡೆಯುವರು ಎನ್ನುವ ದಟ್ಟವಾದ ನಂಬಿಕೆ. ಈ ಪುಟ್ಟ ಪ್ರಬಂಧದಲ್ಲಿ ನನ್ನ ಕುತೂಹಲವನ್ನು ಕೆರಳಿಸಿದ, ಸಂಶೋಧನಾ ಕ್ಷಿತಿಜವನ್ನು ವಿಸ್ತರಿಸಿದ ಕೆಲವು ಗ್ರಾಮದೇವತೆಗಳನ್ನು ಮಾತ್ರ ಅಧ್ಯಯನಕ್ಕಳವಡಿಸಿದ್ದೇನೆ.

ಅಮ್ಮ: ಅಮ್ಮನ ಆರಾಧನೆ ಪ್ರಾಚೀನ ಸೈಂಧವ ಸಂಸ್ಕೃತಿಯಿಂದ ಹಿಡಿದು ಇಂದಿನವರೆಗೂ ಭಾರತದಾದ್ಯಂತ ಅಸ್ತಿತ್ವದಲ್ಲಿದೆ. ಭಾರತದ ಹೊರಗೆ ಸಿರಿಯಾ, ಪರ್ಶಿಯಾ, ಇಜಿಪ್ತ, ಏಶಿಯಾಮೈನರ್ ವರೆಗೂ ಇದರ ವ್ಯಾಪ್ತಿಯಿದೆ. ಅಮ್ಮ ಸಸ್ಯ, ಪ್ರಾಣಿಗಳಿಗೆಲ್ಲ, ಒಳಿತು ಮಾಡುವವಳು, ವನವಾಸಿನಿ, ದುರ್ಗರಕ್ಷಿಯೆಂದೆಲ್ಲಾ ಹೇಳಲಾಗುತ್ತದೆ. ಭೂ, ಜಲ, ವಾಯು, ಸಸ್ಯಾದಿಗಳೊಡನೆ ಇವಳ ಸಾಹಚರ್ಯೆ. ಇವುಗಳನ್ನು ಭೂಮಿತಾಯಿ, ಅನ್ನಪೂರ್ಣೆ, ಬನಶಂಕರಿ, ಮರಕೆಯಮ್ಮ, ಕಾಡಿಯಮ್ಮ, ಗಾಳಿಯಮ್ಮ, ದುರ್ಗಮ್ಮ, ದಂಡಿನ ದುರ್ಗೆ ಎಂದೆಲ್ಲಾ ಕರ್ನಾಟಕದಲ್ಲಿ ಕರೆಯಲಾಗುತ್ತದೆ. ಇದರಿಂದ ಈ ದೇವತೆಯ ಸಂಬಂಧ ವನ, ವೃಕ್ಷ, ಬೆಳೆ ಬೇಸಾಯಗಳ ಜೊತೆಗೆ, ಕಾಳಗ, ಕೋಟೆಗಳ ಜೊತೆ ತಳಕು ಹಾಕಿದ್ದನ್ನು ಕಂಡುಕೊಳ್ಳಬಹುದಾಗಿದೆ. ದಂಡಿನ ದುರ್ಗಿಯೆಂದು ಇವಳು ಪಾರ್ಥಿವರ ದೇವತೆಯೂ ಆಗಿದ್ದಾಳೆ. (ನೋಡಿ. ಡಾ| ಎನ್.ಆರ್. ನಾಯಕ ಮಾರಿಕಾಂಬೆ ಮತ್ತು ಜಾತ್ರೆ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ೧೯೯೬ ಪುಟ. ೧.)

ಮಾತೃಪ್ರಧಾನ ಕುಟುಂಬಿಗಳಾದ ದ್ರಾವಿಡರ ದೇವತೆ ಅಮ್ಮ ವೈದಿಕರಲ್ಲಿ ಅಂಬಾ, ಅದಿತಿಯಾದಳು, ಮುಂದೆ ಆರ್ಯ-ದ್ರಾವಿಡ ಭೇದವಿಲ್ಲದೆ ಎಲ್ಲರ ಅಮ್ಮ (ಎಲ್ಲಮ್ಮ) ಜಗದಂಬೆಯಾದಳು. ಮುಂದಿನ ಹಂತದಲ್ಲಿ ಶಾಕ್ತ ಪಂಥದ ಆದಿಶಕ್ತಿಯಾದಳು. ಸಪ್ತಮಾತೃಕೆಯರೆಂದು ಹೆಸರಾದ ಬ್ರಾಹ್ಮಿ, ಮಹೇಶ್ವರಿ, ವೈಷ್ಣವಿಯಾದಿ ಶಕ್ತಿ ಸ್ವರೂಪಿಣಿಯಾದಳು. ಮಾತೃದೇವತೆಗಳ ವಿಕಾಸಕ್ರಮದಲ್ಲಿ ಪ್ರಮುಖವಾದ ಮೂರು ಹಂತಗಳನ್ನು ಕಾಣಬಹುದಾಗಿದೆ. ೧. ಜಾನಪದ ದ್ರಾವಿಡ ಮೂಲದ ಮಾರಿ-ಅಮ್ಮ ೨. ವೇದ ಮೂಲದ ಅದಿತಿ-ಅಂಬೃಣಿ ೩. ಶಾಕ್ತ ಮೂಲದ ಶಕ್ತಿ-ದುರ್ಗೆ (ನೋಡಿ. ಡಾ| ಎನ್. ಆರ್. ನಾಯಕ. ಕರ್ನಾಟಕದ

ಶಕ್ತಿದೇವತೆಗಳು ಆಯ್. ಬಿ. ಎಚ್. ಪ್ರಕಾಶನ ಬೆಂಗಳೂರು. ೧೯೮೨. ಪು ೪)

ದ್ರಾವಿಡ ಮೂಲದ ಮಾರಿ-ಅಮ್ಮ ಹಾಗೂ ಆರ್ಯ ಮೂಲದ ಅದಿತಿ ಅಂಬೃಣಿ, ಶಕ್ತಿ-ದುರ್ಗೆಯರ ಆರಾಧನಾ ಪದ್ಧತಿ ಇವೆರಡೂ ದ್ರಾವಿಡ ಮೂಲದ ಒಂದೇ ಆರಾಧನಾ ಪದ್ಧತಿಯಿಂದ ಟಿಸಿಲೊಡೆದದ್ದು ಎನ್ನುವ ಹಾಗೂ ಇವರೆಡೂ ಪ್ರತ್ಯೇಕವಾಗಿಯೇ ಬೆಳೆದು ಬಂದ ಆರಾಧನಾ ಪದ್ಧತಿಗಳೆಂದು ಎರಡು ವಾದಗಳಿವೆ. ಪಿತೃಪ್ರಾಧಾನ್ಯವನ್ನು ಸಾರುವ ಆರ್ಯರು ಮಾತೃದೇವತೆಗಳಿಗೆ ಅಗ್ರ ಮಾನ್ಯತೆ ನೀಡುವುದು ಸಂದೇಹಾಸ್ಪದ. ಆದ್ದರಿಂದ ಮಾತೃಪ್ರಾಧಾನ್ಯವನ್ನಳವಡಿಸಿಕೊಂಡ ದ್ರಾವಿಡರಿಂದಲೇ ಈ ಉಪಾಸನಾ ಪದ್ಧತಿ ಉಗಮ ಪಡೆದು, ವಿಕಾಸಪಥ ಸಂಚಲನ ಮಾಡಿ, ಆರ್ಯ-ದ್ರಾವಿಡ ಸಂಸ್ಕೃತಿಯ ಮೇಲೂ ತನ್ನ ಪ್ರಭಾವವನ್ನೊತ್ತಿ, ಇಂದು ಆರ್ಯ-ದ್ರಾವಿಡವೆಂದು ಗಡಿರೇಖೆಯನ್ನು ಕೊರೆಯಲಾಗದ, ದ್ರಾವಿಡ ಆರ್ಯ ಸಂಸ್ಕೃತಿಗಳ ಸಂಕರವಾದ ಭಾರತೀಯ ಸಂಸ್ಕೃತಿಯಲ್ಲಿ ಅಮ್ಮನಾರಾಧನೆ ಪದ್ಧತಿ ಬೇರು ಬಿಟ್ಟಿದೆ. (ಡಾ। ಎನ್.ಆರ್. ನಾಯಕ. ಗ್ರಾಮದೇವತೆಗಳ ಹಾಡುಗಳು. ೨೦೦೨, ಪ್ರಸ್ತಾವನೆ ಪು. ೬)

ಬಹುಶಃ ಮಾನವನು ತನ್ನ ಬದುಕಿನ ಆರಂಭಿಕ ಹಂತದಲ್ಲಿ ಮೊದಲು ಪೂಜಿಸಿದ್ದು, ಅಮ್ಮನ ಉಗ್ರಸ್ವರೂಪ ಮಾರಿಯನ್ನು, ಭಕ್ತರು ಮಾರಿಯನ್ನು ದೊಡ್ಡಮ್ಮನೆಂದು ಕರೆಯುವುದನ್ನು ನೆನೆಯಬೇಕು. ಮಾರಿಯ ಅನಂತರ ಸೃಷ್ಟಿಯಾದದ್ದು ಸೌಮ್ಯಸ್ವರೂಪದ ಅಮ್ಮ. ಇವಳನ್ನು ಮಾರಿಯಮ್ಮನ ತಂಗಿಯೆಂದೇ ಭಕ್ತಾದಿಗಳು ಭಾವಿಸುತ್ತಾರೆ. ಮುಂದಿನ ಹಂತದಲ್ಲಿ ಅಮ್ಮಂದಿರ ಸಂಖ್ಯೆ ಬೆಳೆಯುತ್ತ ಹೋಗಿ, ಏಳಕ್ಕೆ ನಿಂತು, ಶಾಕ್ತ ಪಂಥದ ಸಪ್ತಮಾತೃಕೆಯರ ಉಗಮ ಹಾಗೂ ವಿಕಾಸಕ್ಕೆ ಕಾರಣವಾದಂತಿದೆ. ಮುಂದೆ ಗ್ರಾಮಗಳ ಸಂಖ್ಯೆ ಬೆಳೆಯುತ್ತ ಹೋದ ಹಾಗೆ ಪ್ರತಿಗ್ರಾಮಕ್ಕೂ ಒಂದೊಂದು ಗ್ರಾಮದೇವತೆ ಅಮ್ಮನ ಸೃಷ್ಟಿಯಾಗಿ ಇವುಗಳ ಸಂಖ್ಯೆಯ ಖಾನೇಸುಮಾರಿ ನಮ್ಮಳವಿಗೆ ನಿಲುಕುವಂತಿಲ್ಲ.

ಇಂದು ನಾಡವರು ಪೂಜಿಸುವ ಅಮ್ಮ, ಭೂಮಿತಾಯಿ, ಸಣ್ಣಮ್ಮ, ಬಿಳಿಗಿರಿಯಮ್ಮ, ಶಾಂತಾದುರ್ಗಿ, ಶಾಂತಿಕಾಂಬಾ, ಬಳಲಿಯಮ್ಮ, ಕೆಂಗಳಾ ಪರಮೇಶ್ವರಿ, ಮಂಕಾಳಮ್ಮ, ಎಂದು ಕರೆಯಲಾಗುವ ಗ್ರಾಮದೇವತೆಗಳು ಮಾರಿಯಮ್ಮ ತಂಗಿಯರೆಂದು ಭಾವಿಸಲಾಗುತ್ತದೆ. ಇವರ ಮೂಲಕವಾಗಿ ಮಾರಿಕಾಂಬೆ ಹಳ್ಳಿಗರನ್ನು ಕಾಡುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುತ್ತಾಳೆ. ಅವರ ಬೆಳೆ ಬೇಸಾಯಗಳನ್ನು ರಕ್ಷಿಸುತ್ತಾಳೆ. ಅವಳ ಮಹತ್ವಪೂರ್ಣವಾದ ಈ ಕಾಯಕದಲ್ಲಿ ಅವಳಿಗೆ ಹಿರಿಯ ಹೊನ್ನಪ್ಪ, ಗೋಳೀಬೀರ, ಜಟಗ ಮುಂತಾದ ಬಂಟರು ತಮ್ಮ ಸಹಾಯ ಹಸ್ತ ಚಾಚುತ್ತಾರೆಂಬ ನಂಬಿಕೆ ನಾಡವರಲ್ಲಿ ಬಲವತ್ತರವಾಗಿದೆ. ಗ್ರಾಮರಕ್ಷಣೆ, ಅವರ ಬೇಟೆ ಬೇಸಾಯಾದಿಗಳ ರಕ್ಷಣೆಯನ್ನು ಹೊತ್ತ ಈ ದೇವತೆಗಳನ್ನು ನಿರ್ಲಕ್ಷಿಸಿದಲ್ಲಿ ಈ ರಕ್ಷಣಾ ದೇವತೆಗಳು ಮುನಿದು, ಲಯ ಸ್ವರೂಪಿಗಳಾಗುವರೆಂದು ಭಾವಿಸುತ್ತಾರೆ. ಆದ್ದರಿಂದ ಈ ದೇವತೆಗಳ ಸಂತೃಪ್ತಿಗಾಗಿ ವರ್ಷಕ್ಕೊಮ್ಮೆ ಬಂಡಿ ಜಾತ್ರೆಗಳನ್ನು

ಮಾಡಿ, ಇವುಗಳಿಗೆ ಕೋಳಿ, ಕುರಿಗಳ ಬಲಿಸಮರ್ಪಣೆಯನ್ನು ಮಾಡಿಯೋ, ಹಣ್ಣು ಕಾಯಿ ಸಮರ್ಪಿಸಿಯೋ, ತುಲಾಭಾರವನ್ನು ನೀಡಿಯೋ, ತೃಪ್ತರಾಗುತ್ತಾರೆ. ಒಂದು ಕಾಲಕ್ಕೆ ಸಿಡಿಯಾಡುವುದು, ನರಬಲಿ ನೀಡುವುದು ಇತ್ತೆನ್ನುವುದು, ಅಮ್ಮನ ಬಂಡಿಹಬ್ಬದ ಆಚರಣೆಗಳಿಂದ ವ್ಯಕ್ತವಾಗುತ್ತದೆ. ಆದರೆ ಇಂದು ಆ ಆಚರಣೆಗಳಿಲ್ಲ. ಅವುಗಳ ಅಣುಕು ಪ್ರದರ್ಶನಗಳನ್ನು ಮಾತ್ರ ಕಾಣಬಹುದಾಗಿದೆ. ಈಗ ಕೆಲವೆಡೆ ಕೋಳಿ ಕುರಿ ಬಲಿ ಸಮರ್ಪಣೆಯ ಕಾರ್ಯವೂ ಕಡಿಮೆಯಾಗಿ ಸಾತ್ವಿಕ ಹರಕೆಯ ಪ್ರಮಾಣ ಹೆಚ್ಚುತ್ತಲಿದೆ. ಬಲಿಯ ಹೆಸರಿನಲ್ಲಿ ಕುಂಬಳಕಾಯನ್ನು ಕಡಿದು, ಕುಂಕುಮವನ್ನು ಬೆರಸುವ, ನರಬಲಿಗೆ ಪರ್ಯಾಯವಾಗಿ ಮಾನವನ ತಲೆ ಬುರುಡೆಯನ್ನು ಹೋಲುವ ತೆಂಗಿನ ಕಾಯನ್ನು 'ಇಡುಗಾಯಿ'ಯಾಗಿ ಒಡೆಯುವ, ದೇವರಿಗೆ ತೆಂಗಿನ ಕಾಯಿ ಹಣ್ಣುಗಳನ್ನು ಸಮರ್ಪಿಸುವ ಸಂಪ್ರದಾಯ ಬಂದಂತಿದೆ. ಗ್ರಾಮದೇವತೆಗಳ ಹೆಸರಿನಲ್ಲಿ ನಡೆಯುವ ಬಂಡಿಹಬ್ಬದ ಪ್ರಧಾನ ದೇವತೆ ಅಮ್ಮ, ಅಮ್ಮನವರಿಗೆ ಗುನಗರಿಂದ ನಿತ್ಯಪೂಜೆ ನಡೆಯುತ್ತದೆ. ವೈದಿಕ ಸಂಸ್ಕೃತಿಯ ಪ್ರಭಾವದಿಂದ ಸಂಸ್ಕರಣಗೊಂಡ ಅಮ್ಮನವರಿಗೆ ವೈದಿಕ ಬ್ರಾಹ್ಮಣರಿಂದ ಪೂಜೆ ನಡೆಯುತ್ತದೆ.

ನಾಡವರಲ್ಲಿ ಗ್ರಾಮದೇವತೆ ಅಮ್ಮನಿಗೆ ಭಕ್ತಿ ಗೌರವವನ್ನು ಸಲ್ಲಿಸುವ ಹಲವಾರು ಹಾಡುಗಳು ಉಪಲಬ್ಧವಿವೆ. ಇವುಗಳನ್ನು ಅಮ್ಮನವರ ಬಂಡಿಹಬ್ಬದ ಕಾಲಕ್ಕೆ ಹಾಡುವ ಸಂಪ್ರದಾಯ ಹಿಂದಕ್ಕಿತ್ತಂತೆ.

ತಿರಗಲ ಹೂಂವಾ ತಿರದೇ ಚಬ್ಬೀತುಂಬೇ
ಯಾವೂರಾ ದ್ಯೆವ್ರೀಗೆ ಕಳಗಾಲೆ। ಅಂಕೋಲಿಯಾ
ಬೂಮಾದೇವ್ತಯ್ನಾ ಬುಡದಲ್ಲೇ।

ಬಾಳೀ ಕೊನಿಯಾ ಕಡ್ದೇ ಬೇಗದ ಪಿಟಗೀ ತುಂಬೇ
ಬಾಲರಾ ಕಯ್ಲದರಾ ಕಳಗೂವೆ। ಬೂಮಾತಾಯೆ
ಮುಟ್ಪಸ್ಕೊ ನನ್ನಾ ಹರಕೀಯಾ।

ಸಾಕು ಸಂಕ್ರಬೆಳಿಯೇ ನೀಕೇಳ ಬೂಮಾತಾಯೆ
ನಾನು ಅಂಬ್ಲೀಯ ಒಣ್ಲಾರೆ। ನಮ್‌ಗದ್ದೆ
ವಾರಂತ ಹಳ್ಳಗ್ನೇ ಬಿಳಿಯಾಲಿ।

ಅಳ್ಳೀ ಹೂಂವ್ ಕುಯ್ದೇ ಬಿಳ್ಳೀ ಚೆಬ್ಬಿತುಂಬೇ
ಯಾವೂರಮ್ಮಾಗೇ ಕಳಗಾಲೇ। ಬಿಳಗೇರಿ
ದೇವ್ತಮ್ಮಾ ಪುರಕೇ ಕಳಗೂವೆ।

ಇಂಥ ಹಲವಾರು ಭಕ್ತಿಗೀತಗಳು ನಾಡವರಲ್ಲಿ ಬಹುಸಂಖ್ಯೆಯಲ್ಲಿ ದೊರೆಯುತ್ತಿದ್ದವು ಇಂದು ನಾಡವರಲ್ಲಿ ಇಂಥ ಗೀತಗಳು ಕೇಳ ಬರುವುದಿಲ್ಲ. ದೇವರ ಮುಂದೆ ಹಾಡುವ ರೂಢಿಯೂ ನಿಂತುಹೋಗಿದೆ.

ಕೆಂಗಳಾ ಪರಮೇಶ್ವರಿ :

ಅಮ್ಮನ ಉಪಾಸನೆ ಅತ್ಯಂತ ಪ್ರಾಚೀನವಾದುದು; ಸೈಂಧವ ಸಂಸ್ಕೃತಿಯಲ್ಲಿ ಈ ಉಪಾಸನೆಯಿದೆ. ಸೈಂಧವ ಸಂಸ್ಕೃತಿಯ ಜನ, ಉತ್ತರ ಭಾರತದಿಂದ ದಕ್ಷಿಣದೆಡೆ ಪಸರಿಸಿದಂತೆ ಅಮ್ಮನಾರಾಧನೆಯನ್ನು ದೇಶವ್ಯಾಪಿಯಾಗಿ ಹರಡದಂತಿದೆ. ಮಾರಿ, ಅಮ್ಮ, ಭೂಮಿತಾಯಿ, ಶಾಂತಾದುರ್ಗಾ, ಕೆಂಗಳಾಪರಮೇಶ್ವರಿ, ಶಾಂತಿಕಾ ಪರಮೇಶ್ವರಿ, ಎಂಬೆಲ್ಲಾ ಹೆಸರುಗಳಿಂದ ಪೂಜೆಗೊಳ್ಳುವ ಅಮ್ಮ ಇಂದು ನಮ್ಮ ಗ್ರಾಮದೇವತೆಯಾಗಿ ಪೂಜೆಗೊಳ್ಳುತ್ತಲಿದ್ದಾಳೆ. ಈ ದೇವತೆಯಲ್ಲಿ ಮಾರಿ, ಅಮ್ಮ, ಶಕ್ತಿದೇವತೆಗಳ ಸಮನ್ವಯವಿದೆ; ಜೊತೆಗೆ ಜೈನಯಕ್ಷಿ ಪದ್ಮಾವತಿಯನ್ನು ಅಮ್ಮನೆಂದು, ಜೈನಯಕ್ಷಬ್ರಹ್ಮನನ್ನು ಬೊಮ್ಮಯ್ಯನೆಂದು ತರ್ಕಿಸಲಾಗುತ್ತದೆ. (ತೊರ್ಕೆ ಹಾಗೂ ದೇವರಬಾವಿ ಊರುಗಳ ಸುತ್ತಮುತ್ತಲಿನ ಹಲವಾರು ಹಳ್ಳಿಗಳಿಗೆ ಗ್ರಾಮದೇವತೆ ಕೆಂಗಳಾ ಪರಮೇಶ್ವರಿ. ಏಳನೆಯ ಶತಮಾನದ ಶ್ರೀಹರ್ಷನ ನಾಗಾನಂದ ನಾಟಕದಲ್ಲಿ ಈ ಪ್ರದೇಶದ ಗಿರಿವನಗಳ ಹಾಗೂ ಋಷಿಗಳ ಆಶ್ರಮದ ಸುಂದರ ಚಿತ್ರವಿದೆ. ನಾಟಕದ ವಸ್ತು ಈ ಪ್ರದೇಶಕ್ಕೆ ಸಂಬಂಧಿಸಿದ್ದೆಂದು ತರ್ಕಿಸಲಾಗಿದೆ.) ಜೀಮೂತವಾಹನನೆಂಬ ವಿದ್ಯಾಧರರಾಜಕುಮಾರ ಈ ಪ್ರಶಾಂತ ಧಾರ್ಮಿಕ ಕ್ಷೇತ್ರದಲ್ಲಿ ತನ್ನ ವಾನಪ್ರಸ್ಥವನ್ನು ಕಳೆಯ ಬಯಸಿದ ತನ್ನ ತಂದೆ, ತಾಯಿಯರೊಂದಿಗೆ ಈ ಮಲೆಯ ಪ್ರದೇಶಕ್ಕಾಗಮಿಸಿದಾಗ, ಒಮ್ಮೆ ಇಂಪಾದ ಗಾಯನವನ್ನು ಕೇಳುತ್ತಾನೆ. ಅದರ ಜಾಡು ಹಿಡಿದು ಬಂದಾಗ, ಆತ ಕಂಡದ್ದು ಗೌರಿ ದೇವಾಲಯ. ಅಲ್ಲಿ ಸಿದ್ಧರಾಜಕುಮಾರಿ ಮಲಯವತಿ ವೀಣಾಪಾಣಿನಿಯಾಗಿ ಹಾಡುತ್ತಿದ್ದುದನ್ನು ಕಂಡು ಆತ ಅವಳಲ್ಲಿ ಅನುರಕ್ತನಾಗಿ ಅವಳ ಪಾಣಿಗ್ರಹಣ ಮಾಡುತ್ತಾನೆ. ಆತ ವಿವಾಹ ಸಂಭ್ರಮದ ಪರಾಕಾಷ್ಠೆಯಲ್ಲಿರುವಾಗಲೇ ಶಂಕಚೂಡನೆಂಬ ನಾಗಕುಮಾರ ಅನ್ಯಾಯವಾಗಿ ಗರುಡನಿಗೆ ಬಲಿಯಾಗುವ ಸಂದರ್ಭದ ಧಾರುಣತೆಯರಿತು, ಶಂಕಚೂಡನಿಗೆ ಪ್ರತಿಯಾಗಿ ತನ್ನನ್ನು ಗರುಡನಿಗೆ ಬಲಿದಾನವಿತ್ತು, ತನ್ನದಯಾವೀರ ಗುಣವನ್ನು ಮೆರೆಯುತ್ತಾನೆ. ಈತನ ದಯಾಪರತೆಯನ್ನು ಮೆಚ್ಚಿದ ಗೌರೀದೇವಿ ಜೀಮೂತವಾಹನನ್ನು ಬದುಕಿಸಿ, ವಿದ್ಯಾಧರ ಚಕ್ರವರ್ತಿಯನ್ನಾಗಿಸಿ, ಅವನಿಗೆ ಮಲಯವತಿಯನ್ನು ಒಪ್ಪಿಸುತ್ತಾಳೆ. ಇದನ್ನು ಕಂಡ ಗರುಡ ನಿತ್ಯ ತನ್ನ ಆಹಾರಕ್ಕಾಗಿ ನಾಗವನ್ನು ಬಲಿತೆಗೆದುಕೊಳ್ಳುವ ತನ್ನ ಕ್ರೂರ ಕರ್ಮಕ್ಕೆ ಹೇಸಿ ಜೀಮೂತವಾಹನನ ದಯಾಗುಣಕ್ಕೆ ಮೆಚ್ಚಿ, ತಾನು ಮುಂದಿನ ದಿನಗಳಲ್ಲಿ ನಾಗಗಳನ್ನು ತಿನ್ನುವ ಪಾಪ ಕರ್ಮವನ್ನು ತ್ಯಜಿಸುವುದಾಗಿ ಗೌರಿಯ ಸಮಕ್ಷಮ ಬರವಸೆ ನೀಡುತ್ತಾನೆ. ಈ ಹಿಂದಿನ ನಾಗಗಳ ಬಲಿಶೇಷದ ಮೇಲೆ ಅಮೃತ ಚಿಮುಕಿಸಿ ಎಲ್ಲ ನಾಗಗಳನ್ನು ಬದುಕಿಸುತ್ತಾನೆ. ಇದು ನಾಗನಂದ ನಾಟಕದ ವಸ್ತು. ಆ ಘಟನೆ ನಡೆದುದು ಇದೇ ಕ್ಷೇತ್ರದಲ್ಲಿ ಎಂದು ಕೆಲವು ಸಂಶೋಧಕರ ಅಭಿಪ್ರಾಯ.

ಇಂದು ಹಳ್ಳಿಯಾಗಿರುವ ತೊರ್ಕೆ-ದೇವರಬಾವಿ ಹಿಂದೆ ತಗರಪುರವೆಂಬ ಹೆಸರಿನ ಶಿಲಾಹಾರರ ರಾಜಧಾನಿಯಾಗಿತ್ತು ಎಂದು ತಿಳಿದು ಬರುತ್ತದೆ. ಶಿಲಾಹಾರ

ಅರಸರು ತಮ್ಮನ್ನು ತಗರಪುರಾಧೀಶರೆಂದು ಕರೆದುಕೊಳ್ಳುತ್ತಿದ್ದರು. ಶಿಲಾಹಾರರು ಕೊಂಕಣ, ಕೊಲ್ಲಾಪುರಗಳನ್ನಾಳಿದ ಜೀಮೂತವಾಹನನ ವಂಶಸ್ಥರು, ಗರುಡ ಧ್ವಜರು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ತಗರ ಪುರವೆಲ್ಲಿತ್ತು ಎಂಬ ಬಗ್ಗೆ ಪಂಡಿತರಲ್ಲಿ ಏಕಾಭಿಪ್ರಾಯವಿಲ್ಲ. ಅದು ದೇವಗಿರಿ, ಕಲಬುರ್ಗಿ, ಕೊಲ್ಲಾಪುರ, ಪೈಠಣದ ಪೂರ್ವಕ್ಕೆ ಇತ್ತೆಂಬ ಊಹೆಗಳಿವೆ. ಆದರೆ ತಗರಪುರವು ಕೊಂಕಣ, ನಾಗರಖಂಡವೆಂದು ಕರೆಯಲಾಗುವ ಗೋಕರ್ಣ ಮಂಡಲದ ಒಂದು ಭಾಗವಾದ ತೊರ್ಕೆಯೆಂದು ಕೆಲವರು ಸಾಧಿಸುತ್ತಾರೆ. ನಾಗಾನಂದ ನಾಟಕದ ನಾಯಕ ಜೀಮೂತವಾಹನನು ಸಾಕ್ಷಾತ್ಕರಿಸಿಕೊಂಡ ಗೌರಿ ದೇವತೆ ತೊರ್ಕೆ–ದೇವರಬಾವಿಯ ಕೆಂಕಳಾ ಪರಮೇಶ್ವರಿ. ಆಕೆ ಹಿಂಸಾರಭಸಮತಿಯಾದ ಗರುಡನೆಡೆ ತನ್ನ ಕೆಂಗಣ್ಣು ಬೀರಿ ಅವನಿಗೆ ಬಲಿಯಾದ ನಾಗಬಲಿಶೇಷಗಳ ಮೇಲೆ ಅಮೃತ ಸಿಂಚನ ಮಾಡಿಸಿ, ಅವನಲ್ಲಿಯು ನಾಗದ್ವೇಷವನ್ನು ತೊಡೆದುಹಾಕಿ, ತ್ಯಾಗ ವೀರನಾದ ಜೀಮೂತವಾಹನನಿಗೆ ಜೀವದಾನ ಮಾಡಿ, ಅವನಿಗೆ ವಿದ್ಯಾಧರ ಚಕ್ರವರ್ತಿತ್ವವನ್ನು ನೀಡಿ ಸಿದ್ಧರಾಜಕುಮಾರಿ ಮಲಯವತಿಯನ್ನೊಪ್ಪಿಸಿ, ಮುಂದಿನ ದಿನಗಳಲ್ಲಿ ಕೆಂಗಳಾ ಪರಮೇಶ್ವರಿಯಾದಂತಿದೆ. ತಾರ್ಕ್ಷ್ಯ ಎಂದರೆ ಗರುಡ. ಗರುಡನ ಪ್ರಾಬಲ್ಯವಿರುವ ಪುರ, ತಾರ್ಕ್ಷ್ಯ ಪುರ. ತಾರ್ಕ್ಷ್ಯ ಇದರ ತದ್ಭವ ತಗರ–ತೊರ್ಕೆ. ತೊರ್ಕೆಯಲ್ಲಿ ಗರುಡನ ವಿಗ್ರಹವೂ ಇದೆ. ಶಿವರಾತ್ರಿ ಸಮಯದಲ್ಲಿ ಗರುಡನ ಕಟ್ಟುವ ಸಂಪ್ರದಾಯ ಗೋಕರ್ಣ ಮಂಡಲದಲ್ಲಿದೆ. ಎನ್ನುವುದನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಗರುಡನನ್ನು ತನ್ನ ದಯಾಪರತೆಯಿಂದ ಹಣಿದು ಮೆತ್ತಗೆ ಮಾಡಿ, ಅವನ ಪುರ ಪ್ರವೇಶಿಸಿ, ಗೌರೀ ದೇವಿಯಿಂದ ಚಕ್ರವರ್ತಿ ಕಿರೀಟವನ್ನು ಧರಿಸಿದ್ದರಿಂದ ಜೀಮೂತವಾಹನ ಹಾಗೂ ಅವನ ವಂಶಸ್ಥರು ಮುಂದೆ ತಗರಪುರವರಾಧೀಶರಾದರು. ಜೀಮೂತವಾಹನನ್ನು ಮದುವೆಯಾದವಳು ಮಲಯವತಿ, ಸಿದ್ಧರಾಜಕುಮಾರಿ. ಗೋಕರ್ಣದಲ್ಲಿ ಸಿದ್ಧರಿದ್ದ ಬಗ್ಗೆ ಜನಪದ ಗೀತಗಳಲ್ಲಿ ಉಲ್ಲೇಖವಿದೆ.

ನಿದ್ದೂರೇ ಬಂದಾವೇ ನನ್ಮುದ್ದೂ ಬಾಲಯ್ಗೇ
ನಿದ್ದೂರಿಯಲ್ಲಾ ನಿದ್ವಾನ। ಗೊಕನ್ನಾ
ಸಿದ್ದವ್ರು ಕೊಟ್ಟ ಸಿವದ್ಯೆನಾ

ಎಂದು ಗರತಿಯೊಬ್ಬಳು ಸಿದ್ಧರನ್ನು, ಅವರ ಶಿವಧ್ಯಾನವನ್ನು ನೆನೆಯುತ್ತಾಳೆ. ಸಿದ್ಧರು ಶಿವನ ಉಪಾಸಕರಾಗಿದ್ದಂತಿದೆ. ಸಿದ್ಧರು ಜೈನ ಪಂಚಾಚಾರ್ಯರಲ್ಲಿ ಒಬ್ಬರಾಗಿದ್ದರು ಎಂಬುದೂ ಗಮನಾರ್ಹ.

ಈ ಸ್ಥಳ ನಾಗರ ವಾಸಸ್ಥಳವೂ ಹೌದು. ಕೊಂಕಣ ಪ್ರದೇಶವನ್ನು ನಾಗರಖಂಡವೆಂತಲೂ ಕರೆಯಲಾಗುತ್ತದೆ. ಈ ಪ್ರದೇಶದ ಸುತ್ತಲೂ ನಾಗರ ಗುತ್ತುಗಳಿವೆ. ಪಕ್ಕದಲ್ಲಿಯೇ ನಾಗರ ಬೈಲಿದೆ. ಗೋಕರ್ಣ ಪದವೂ ಸರ್ಪ ಸಂಬಂಧಿಯೇ. ಗೋ ಎಂದರೆ ಕಣ್ಣು , ಕಣ್ಣೇ ಕಿವಿ (ಕರ್ಣ) ಯಾಗಿದ್ದ ಸರ್ಪಗಳ

ಪ್ರದೇಶವಿದು. ಇದು ಹೈಗವೆಂದೂ ಪ್ರಖ್ಯಾತಿ ಹೊಂದಿದೆ. ಹೈಗದ ನಿಷ್ಪತ್ತಿಯನ್ನು ಹಾವಿಗ>ಹಾಯಿಗ>ಹೈಗ ಎಂದು ಗೌರೀಶಕೈಯ್ಕಿಣಿಯವರು ಮಾಡುತ್ತಾರೆ. ಗರುಡನಿಗೆ ಆಹಾರ ಕೊಡುವ ಆಹಾರ ಕುಡಲು, ವಧ್ಯಶಿಲೆ ತೊರ್ಕೆಯಲ್ಲಿದೆ. ಹಿಂದೆ ದೇವಿಬನವಾದ ದೇವಣವಿದೆ; ದೇವರ ಬಾಯಿಯಿದೆ; ಗೌರೀಯ ಪ್ರತಿರೂಪವಾದ ಕೆಂಗಳಾ ಪರಮೇಶ್ವರಿ ಇದ್ದಾಳೆ. ಇವಳಲ್ಲಿ ಗರುಡನಂಥ ದುಷ್ಟರಿಗೆ ಭೀತಿಯನ್ನೊಡುವ ರುದ್ರಮುಖ (ಕೆಂಗಣ್ಣು) ಹಾಗೂ ಜೀಮೂತವಾಹನನಂಥ ದಯಾವೀರನಿಗೆ ಅನುಗ್ರಹಿಸುವ ಭದ್ರಮುಖ (ಪರಮೇಶ್ವರಿ) ಎರಡೂ ಸಮ್ಮಿಲಿತವಾಗಿವೆ. ಅದಕ್ಕಾಗಿಯೇ ಇವಳು ಕೆಂಗಳಾ ಪರಮೇಶ್ವರಿ. ದುಷ್ಟನಿಗ್ರಹ ಶಿಷ್ಟರಕ್ಷಕ ದೇವತೆ. ಇಂದು ಕೆಂಗಳಾಪರಮೇಶ್ವರಿ ನಾಡವರಾಧಿ ಎಲ್ಲ ಗ್ರಾಮೀಣರ ಆರಾಧ್ಯ ಗ್ರಾಮದೇವತೆ; ಅವಳ ಹಬ್ಬ ಇಡಿಯ ಗ್ರಾಮದ ಹಬ್ಬ. ಆದರೂ ಈ ದೇವಿಯ ಪ್ರಮುಖ ಉಪಾಸಕರು ನಾಡವರು. ಅವರ ಮೇಲುಸ್ತುವಾರಿಯಲ್ಲಿಯೇ ದೇವತೆಯ ಸಕಲ ಕಾರ್ಯಕಲಾಪಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ನಾಡವರು ಶಿಲಾಹಾರವಂಶದ ಜೀಮೂತವಾಹನನ ವಂಶಸ್ಥರೆಂದು ಕೆಲವು ಸಂಶೋಧಕರು ತರ್ಕಿಸುವುದನ್ನು ನೆನೆಯಬೇಕು.

ಮಾಸ್ತಿಯಮ್ಮ : ಕಾಳಗದಲ್ಲಿ ಕಲಿಗಳಾಗಿ ಕಾದಿ, ವೀರ ಮರಣವನ್ನೈದಿದ ವೀರ ಪುಂಗವರ, ಪತ್ನಿಯರು ಗಂಡನೊಡನೆ ಸಹಗಮನವನ್ನು ಮಾಡಿಯೋ, ಕೋಟೆ ಕೊತ್ತಳಗಳ ರಕ್ಷಣೆಗಾಗಿ ಇಲ್ಲವೆ ಇನ್ನಾವುದೋ ಮಹತ್ತರ ಉದ್ದೇಶಕ್ಕಾಗಿ ಮಡಿದು, ಮಾಸ್ತಿಯರಾದ ವೀರವನಿತೆಯನ್ನು ನಾಡವರು 'ಮಾಸ್ತಿಯಮ್ಮ'ನೆಂದು ಗೌರವಿಸಿ ಪೂಜಿಸಿದ್ದಿದೆ. ಕೆಲವೆಡೆ ಮಾಸ್ತಿಯರು ಪರಿವರ್ತನೆಕೊಂಡು 'ಅಮ್ಮ' ಗ್ರಾಮದೇವತೆಯೊಡನೆ ಅಭೇದವಾಗಿ ಬೆರೆತುದನ್ನು ಗಮನಿಸಬಹುದಾಗಿದೆ. ಒಂದು ಜಾನಪದ ವದಂತಿಯ ಪ್ರಕಾರ, ಇಂದು ಶಾಂತಾದುರ್ಗಿ ಶಾಂತಿಕಾಂಬಾಯೆಂದು ನಾಡವರು ಪೂಜಿಸುವ 'ಅಮ್ಮ'ನವರು, ಬನವಾಸಿ ಮಂಡಲದ ದಂಡನಾಯಕನಾದ ಹೊನ್ನಯ್ಯ ನಾಯಕ ಹಾಗೂ ಅವನ ಹೆಂಡತಿ ಮಾಚಕ್ಕ ಅವರ ಮಗಳು, ಹೊಯ್ಸಳ ವಿಷ್ಣುವರ್ಧನ ಪಟ್ಟದರಸಿ ನಾಟ್ಯರಾಣಿ ಶಾಂತಲೆಯ ಸ್ಮಾರಕ ಎಂದು ತಿಳಿದು ಬರುತ್ತದೆ. ಮಹಾರಾಣಿ ಶಾಂತಲೆ ದೇಹತ್ಯಾಗವನ್ನು ಮಾಡಿ, ಮಾಸ್ತಿಯಾದ ಮೇಲೆ, ನಾಡವರು ಅವಳು ತಮ್ಮ ಸಂಬಂಧಿಕಳೆಂದು ಗೌರವಿಸಿ, ಅವಳನ್ನು ಮಾಸ್ತಿಯಾಗಿ ಪೂಜಿಸಿದರು. ಅನಂತರಿನ ದಿನಗಳಲ್ಲಿ ಅವಳು ಗ್ರಾಮದೇವತೆ 'ಅಮ್ಮ'ನಾಗಿ ಪರಿವರ್ತನೆಗೊಂಡಿರಬಹುದಾಗಿದೆ. ಆದರೆ ಇದು ಇನ್ನೂ ಹೆಚ್ಚಿನ ಐತಿಹಾಸಿಕ ಆಧಾರಗಳ ಮೂಲಕ ಋಜುವಾತಾಗಬೇಕಿದೆ. ಇತಿಹಾಸಕಾರರು ಶಾಂತಲೆ ಜೈನಮತೀಯಳೆನ್ನುತ್ತಾರೆ. ಅವಳು ಒಕ್ಕಲಿಗಳೆಂದು ಸಾಧಿಸುವವರೂ ಇದ್ದಾರೆ.

ಅನೇಕ ಮಾಸ್ತಿಯರು ಅಮ್ಮನಾಗಿ ಪರಿವರ್ತನೆಗೊಂಡು, ಊರ ರಕ್ಷಣೆ, ಗ್ರಾಮೀಣರ ಬೆಳೆ ಬೇಸಾಯ ದನಕರುಗಳ ರಕ್ಷಣೆ, ಹೆಣ್ಣು ಮಕ್ಕಳ ಒಲೆಭಾಗ್ಯವನ್ನು

ಹೆಚ್ಚಿಸಿ, ಜನ ಮಾನಸದಲ್ಲಿ ವಿಜೃಂಭಿಸಿದ್ದನ್ನೂ ನೋಡಬಹುದಾಗಿದೆ.

ಪುಣ್ಣೊಳ್ಳ ಮಾಸ್ತ್ಯಮ್ಮ ಬಣ್ಣದ ಬಾಚಣಿಕೆ
ಹೂಂವನ ದಂಡೆ ಗಂದಾವಾ। ತಕ್ಕಂಡೇ
ಹರಸೇ ನಮ್‌ವಾಲೀ ಬಾಗೀಕು।

ಎಂದು ಗರತಿಯರು ಮಾಸ್ತಿಯಮ್ಮನಿಗೆ ತಮ್ಮ ಓಲೆಭಾಗ್ಯಕ್ಕೆ ಹರಸಲು ಬೇಡುತ್ತಾರೆ.

ಜೈನ ಯಕ್ಷಿಯಾದ 'ಪದ್ಮಾವತಿ' ಅಮ್ಮನಾಗಿ ಪರಿವರ್ತನೆಗೊಂಡದ್ದೂ ಕೆಲವೆಡೆಯಿದೆ. ನಾಡವರು ಪೂಜಿಸುವ 'ಅಮ್ಮ', 'ಬೊಮ್ಮಯ್ಯ'ನೇ ಮೊದಲಾದ ಗ್ರಾಮದೇವತೆಗಳ 'ಅಷ್ಟಬಂಧ' ಕಾರ್ಯಕ್ಕೆ ನಾಡವರು ಜೈನ ಪುರೋಹಿತರನ್ನು ಕರೆಸುವುದನ್ನು ಇಲ್ಲಿ ನೆನೆಯಬಹುದಾಗಿದೆ. ಜೈನರು 'ಪದ್ಮಾವತಿ'ಯನ್ನು 'ಅಮ್ಮ'ನೆಂದೇ ಕರೆಯುತ್ತಾರೆ.

ಬೊಮ್ಮಯ್ಯ : ನಾಡವರಲ್ಲಿ ಗ್ರಾಮದೇವತೆ ಅಮ್ಮನಷ್ಟೇ ಪ್ರಸಿದ್ಧಿಯನ್ನು ಪಡೆದ ಇನ್ನೊಂದು ದೇವತೆ ಬೊಮ್ಮಯ್ಯ. ವೀರ ದೇವತಾ ವಿಗ್ರಹಗಳಲ್ಲಿಯೇ ಬೊಮ್ಮಯ್ಯ ಪ್ರಮುಖ. ಬೊಮ್ಮಯ್ಯ ದೇವರ ವಿಗ್ರಹಗಳು ಉತ್ತರ ಕನ್ನಡ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿವೆ. ಹೆಚ್ಚಾಗಿ ಗುಡ್ಡದ ಮೇಲಿರುವ ನಿತ್ಯಪೂಜೆಯಿಲ್ಲದ ಈ ವಿಗ್ರಹವನ್ನು ವೈದಿಕರು ಬ್ರಹ್ಮನೆನ್ನುತ್ತಾರೆ. ಅದಕ್ಕವರು ಸ್ಕಂದಪುರಾಣದ ಕಾಶೀಖಂಡದಲ್ಲಿ ಉಕ್ತವಾದ ಬ್ರಹ್ಮನ ಕಥೆಯನ್ನು ಹೇಳಿ ಸಮರ್ಥಿಸಿಕೊಳ್ಳುತ್ತಾರೆ. ದೇವರ ವಿಗ್ರಹವನ್ನು ನೋಡಿದರೆ, ಅದು ತ್ರಿಮೂರ್ತಿಗಳಲ್ಲಿ ಒಬ್ಬನಾದ, ವಿಷ್ಣುವಿನ ನಾಭಿ ಕಮಲ ಸಂಜಾತ ಚತುರ್ಮುಖ ಬ್ರಹ್ಮನಂತಿಲ್ಲ. ಅದಕ್ಕೆ ಒಂದು ಮುಖ, ಎರಡು ಕೈ, ಕೈಗಳಲ್ಲಿ ಬಿಲ್ಲು ಬಾಣಗಳಿವೆ. ಮೂರ್ತಿ ಅಶ್ವಾರೋಹಿತಯಾಗಿದ್ದು ವೀರ ಯೋಧನ ಭಂಗಿಯಲ್ಲಿದೆ. ಕೇವಲ ಒಂದೇ ಒಂದು ವಿಗ್ರಹ ಮಾತ್ರ ಗಜಾರೋಹಿಯಾಗಿದ್ದನ್ನು ನಾನು ಗಮನಿಸಿದ್ದೇನೆ. ಆದ್ದರಿಂದ ಬೊಮ್ಮಯ್ಯ ದೇವರು ತ್ರಿಮೂರ್ತಿಗಳಲ್ಲಿ ಒಬ್ಬನಾದ ವೈದಿಕ ಬ್ರಹ್ಮನಲ್ಲ. ಹಾಗಾದರೆ ಯಾರು ಈ ಬೊಮ್ಮಯ್ಯ?.

ಜೈನರ ಹತ್ತನೆಯ ತೀರ್ಥಂಕರನಾದ ಶೀತಲನಾಥನ ಯಕ್ಷನ ಹೆಸರು ಬ್ರಹ್ಮ. ಅವನ ಯಕ್ಷಿ, ಜೈನರು ಅಮ್ಮನೆಂದು ಕರೆಯುವ ಪದ್ಮಾವತಿಯೆನ್ನೆವುದು ಗಮನಾರ್ಹ. ಜೈನರು ಬ್ರಹ್ಮನಿಗೆ ಬೆಟ್ಟದ ಬ್ರಹ್ಮನೆಂದೂ ಕರೆಯುತ್ತಾರೆ. ಈತ ದ್ವಿಬಾಹು ಏಕ ವಕ್ತ್ರನಾಗಿದ್ದು ಅಶ್ವಾರೋಹಿಯಾಗಿದ್ದಾನೆ. ಜೈನರಲ್ಲಿ ಈತನ ಎರಡು ಬಗೆಯ ವಿಗ್ರಹಗಳಿವೆ. ಒಂದು ವಿಗ್ರಹ ಅರಸನಂತೆ ಕಿರೀಟ ಧರಿಸಿ ಒಂದು ಕೈಯಲ್ಲಿ ಬಹುಬೀಜ ಫಲ, ಇನ್ನೊಂದರಲ್ಲಿ ವಜ್ರಾಯುಧ ಹಿಡಿದು ಸುಖಾಸೀನ ಭಂಗಿಯಲ್ಲಿದೆ. ಇನ್ನೊಂದು ವಿಗ್ರಹ ಕೈಗಳಲ್ಲಿ ಖಡ್ಗ ಹಾಗೂ ಬಹುಬೀಜಫಲ ಹಿಡಿದು ಕುದುರೆಯ ಮೇಲೆ ಕುಳಿತಿದೆ, ಕುದುರೆ ಕೆನೆಯುವ ಭಂಗಿಯಲ್ಲಿದೆ. ತುಳುನಾಡವರು ತಾವು ಬೆಳೆದ ಹೊಸ ಫಲವನ್ನು ಈ ದೇವರಿಗರ್ಪಿಸಿ, ತಮ್ಮನ್ನು

ಕಾಡುವ ರೋಗರುಜಿನಗಳ ಪರಿಹಾರಕ್ಕಾಗಿ ಮೊರೆಯಿಡುತ್ತಾರೆ. ಬಹುಶಃ ಉತ್ತರ ಕನ್ನಡ ಜಿಲ್ಲೆಯಲ್ಲಿ ಗುಡಿಯ ಮೇಲಿನ ಬೊಮ್ಮೊಡಿಯನಾಗಿ ಕೈಯಲ್ಲಿ ಬಿಲ್ಲುಬಾಣ ಹಿಡಿದು ರಾಜಯೋಧನಂತೆ ಅಶ್ವರೋಹಿಯಾಗಿ ವನರಾಜಿಯಲ್ಲಿ ನೆಲೆಸಿ, ಭಕ್ತಾದಿಗಳ ಸಂತಾನಾಭಿವೃದ್ಧಿ, ಬೆಳೆ ರಕ್ಷಣೆಯನ್ನು ಮಾಡುವ, ರೋಗ ರುಜಿನಗಳನ್ನು ನಿವಾರಿಸುವ ಬೊಮ್ಮಯ್ಯ ದೇವರು ಮೂಲತಃ ಜೈನ ಯಕ್ಷನಾಗಿದ್ದಂತಿದೆ. ಅದು ತುಳು ನಾಡವರಲ್ಲಿ ಬೆರ್ಮೆರ್ ಆಗಿ ಉತ್ತರ ಕನ್ನಡ ನಾಡವರಲ್ಲಿ ಬರ್ಮ, ಬೊಮ್ಮಯ್ಯನಾಗಿ ಮಾರ್ಪಾಡಾದಂತಿದೆ.

ನಾಡವರು ಬೊಮ್ಮಯ್ಯ ದೇವರು ಭೂಮಿತಾಯಿಯ (ಅಮ್ಮನ) ಅಣ್ಣನೆಂದು ಹೇಳುತ್ತಾರೆ. ಮಾತೃಮೂಲಿಯರ ಕುಟುಂಬದ ರಕ್ಷಣೆಯ ಹೊಣೆಹೊರುವಾತ ತಾಯಿಯ ಸಹೋದರ. ಆ ರಿವಾಜಿನಂತೆ ಬೊಮ್ಮಯ್ಯ ಭೂಮಿತಾಯಿಯ ಸಂರಕ್ಷಕನು, ಯೋಗ ಕ್ಷೇಮವನ್ನು ನೋಡಿಕೊಳ್ಳುವವನು. ಅದಕ್ಕಾಗಿಯೇ ಬೊಮ್ಮಯ್ಯ ದೇವರ ಗುಡಿಯು ಹೆಚ್ಚಾಗಿ ಭೂಮಿತಾಯಿಯ ಗುಡಿಗಿಂತ ಮೇಲೆ ಉನ್ನತ ಬೆಟ್ಟದ ಮೇಲಿರುವುದು ಎನ್ನಲಾಗುತ್ತದೆ. ಬೊಮ್ಮಯ್ಯ ದೇವರ ವಿಗ್ರಹದ ಸ್ವರೂಪ, ಅದಕ್ಕಿರುವ ಅಗ್ರಮಾನ್ಯತೆಯನ್ನು ಅವಲೋಕಿಸಿದರೆ ಅದು ಯಾವುದೋ ಪ್ರಜಾನುರಾಗಿಯಾದ ವೀರರಾಜನ ಸ್ಮಾರಕ ವಿಗ್ರಹದಂತೆ ಕಾಣುತ್ತದೆ. ಬೊಮ್ಮಯ್ಯ ದೇವರನ್ನು ಬೊಮ್ಮೊಡಿಯನೆಂದು ಗೌರವ ಪೂರ್ವಕವಾಗಿ ಕಾಣುವ ನಾಡವರು ಅವನ ಆಳ್ತನ ಕಲಿತನಗಳನ್ನು ಮುಕ್ತ ಕಂಠದಿಂದ ಸ್ತುತಿಸುತ್ತಾರೆ.

ಕಾಳಗದಲ್ಲೇ ಕಲಿಯಾದ್ರ ಬೊಮ್ಮೊಡಿಯಾರ
ಆಳೇವರಡಕೀಮರನಂಗೇ। ಬೊಮ್ಮೊಡಿಯಾರೆ
ತಾವೇದ್ರ ಹುಲಿಯಾ ಮರಿಹಂಗೇ।
ಕಟ್ಟವೇ ಬಂತಂದೇ ನೀರಾ ಬೈಳಾಹ್ವೊದೆ
ನೀರಲ್ಲೇ ಬೊಮ್ಮೊಡಿಯಾ ಸಿಳ್ಳಾಗೆ। ಏನಂಬಾರೇ
ನಾಯೇಂವೆ ಬಡವಿ ಕೆಡಬ್ಯೆಡಾ।

ವೀರ ಪರಂಪರೆಗೆ ಸೇರಿದ ಬೊಮ್ಮಯ್ಯ (ಭೂಮಿ+ಅಯ್ಯ) ದೇವರು, ಭೂಮಿತಾಯಿ (ಅಮ್ಮ) ಇಬ್ಬರೂ ಫಲೀಕರಣಕ್ಕೆ ಸಂಬಂಧಿಸಿದ ದೇವತೆಗಳಾಗಿಯೂ ಗೋಚರಿಸುತ್ತಾರೆ. ವೀರ ದೇವತೆಗಳ ಹೆಸರಿನಲ್ಲಿ ಹಮ್ಮಿಕೊಳ್ಳಲಾಗುವ, ಬಂಡಿ ಹಬ್ಬದ ಆಚರಣಾ ವಿಧಿ ವಿಧಾನಗಳನ್ನು ಅವಲೋಕಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಭೂಮಿತಾಯಿ, ಬೊಮ್ಮಯ್ಯ (ಭೂಮಿ+ಅಯ್ಯ) ಇಬ್ಬರನ್ನೂ ತಮ್ಮ ಮಾತಾ, ಪಿತರ ಸ್ಥಾನದಲ್ಲಿಟ್ಟು ಪೂಜಿಸಿ, ಸಂತಾನಭಿವೃದ್ಧಿ, ಬೆಳೆ ಸಮೃದ್ಧಿ ಹಾಗೂ ರೋಗವಿಮುಕ್ತಿ ಪಡೆಯುವ ಹಿನ್ನೆಲೆಯಲ್ಲಿ ನೋಡಿದರೆ, ಇವರು ಮೃತವೀರ ಮಾತಾ–ಪಿತರ ಸಾಲಿಗೆ ಸೇರಿದ ದೇವತೆಗಳಾಗಿ ಗೋಚರಿಸುತ್ತಾತೆ.

ಕೆಲವೆಡೆ ಹುತ್ತಿನ ಸ್ವರೂಪದಲ್ಲಿದ್ದ ಈ ದೇವತೆಯನ್ನು ನೋಡಿ,

ಪುತ್+ಮ್ಯೆ>ಪುಮ್ಮೈ>ಬೊಮ್ಮೈ ಹಾಗೂ ಪೊನ್+ಮ್ಯೆ>ಪೊಮ್ಮೈ>ಬೊಮ್ಮೈ ಎಂದರೆ ಇದು ನಾಗ ಸಂಬಂಧಿ ದೇವರಾಗಿರಬೇಕೆಂದು ಊಹಿಸುವುದೂ ಇದೆ. ತುಳುವರು ನಾಗನನ್ನು ನಾಗಬ್ರಹ್ಮನೆಂದು ಗೌರವಿಸುತ್ತಾರೆ. ಕ್ಷೇತ್ರಪಾಲನಾಗಿರುವ ನಾಗ, ಪ್ರತಿಮೆಯನ್ನು ನಾಗ್ರಬ್ರಹ್ಮನೆಂದು ಕರೆಯುವ ರೂಢಿ ಜೈನರಲ್ಲಿದೆ. ಈ ಸಂದರ್ಭದಲ್ಲಿ ಕುಂದಾಪುರದ ನಾಡವರು ಪೂಜಿಸುವ ಬೆರ್ಮೆರ್ ಸ್ಥಾನವನ್ನು ನೆನೆಸಿಕೊಳ್ಳಬಹುದಾಗಿದೆ.

ಬೆರ್ಮೆರ್ ತುಳು ನಾಡವರ ಕುಲದೇವತೆ. ಆಲೆಡೆಯಲ್ಲಿ ನಾಗ, ನಂದಿಗೋಣ, ರಕ್ತೇಶ್ವರಿ, ಕ್ಷೇತ್ರಪಾಲರ ಜೊತೆಗೆ ಇದರ ಆರಾಧನೆ ನಡೆಯುತ್ತದೆ. ಇದು ನಾಗದೇವತೆ, ಸಂತಾನ ದೇವತೆಯಾದ್ದರಿಂದ ಇದನ್ನು ನಾಗಬ್ರಹ್ಮನೆಂದೂ ಕರೆಯಲಾಗುತ್ತದೆ. ಬ್ರಹ್ಮ ತುಳು ದೊರೆಗಳ ಕುಲದೈವ. ಉತ್ತರ ಕನ್ನಡ ನಾಡವರಲ್ಲಿ ಬರ್ಮ ಜಟಗನ ಗುತ್ತುಗಳಿವೆ. ಈ ಗುತ್ತಿಗೂ ನಾಗಕ್ಕೂ ಸಂಬಂಧವಿದೆ; ಇದು ಕ್ಷೇತ್ರಪಾಲನೂ ಹೌದು. ನಾಡವರಲ್ಲಿ ಮಾಣಬ್ರಹ್ಮ, ಮಾಣಬೇರ ದೇವತೆಗಳಿವೆ. ಇವನ್ನು ಮಾಣೇಶ್ವರ ಎಂದೂ ಕರೆಯುತ್ತಾರೆ. ಭೂಮಿತಾಯಿಯ ದೇವಾಲಯದ ಆವಾರದಲ್ಲಿ ನಾಗದೇವತೆಯ ಗುತ್ತನ್ನು ಕಾಣಬಹುದು. ಇವೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ತುಳು ನಾಡವರು ಪೂಜಿಸುವ ಬೆರ್ಮೆರ್, ಉತ್ತರ ಕನ್ನಡದ ನಾಡವರ ಬೊಮ್ಮಯ್ಯನಾಗಿರುವ ಸಾಧ್ಯತೆಯಿದೆ. ಒಟ್ಟಿನಲ್ಲಿ ತುಳುನಾಡಿನ ಜೈನ ಪರಂಪರೆಯ ಬ್ರಹ್ಮನೇ ನಾಡವರ ಬೊಮ್ಮಯ್ಯದೇವರಾಗಿರಬಹುದೇ ಹೊರತೂ ವೈದಿಕ ಪರಂಪರೆಯ ಬ್ರಹ್ಮನಾಗಿರಲು ಸಾಧ್ಯವಿಲ್ಲ.

ಸಿದ್ದಾಪುರ ಕುಬ್ಬೆಗ್ರಾಮದ ಬೊಮ್ಮದೇವರ ಹುತ್ತದ ಹತ್ತಿರ ಕಾಲಭೈರವ ಮೂರ್ತಿಯಿದೆ. ಭೈರವನನ್ನು ಕ್ಷೇತ್ರಪಾಲನಾಗಿ ಆರಾಧಿಸುವ ಸಂಪ್ರದಾಯವಿದೆ. ಇದನ್ನು ಮನಗಂಡ ಡಾ| ಆರ್. ಪಿ. ಹೆಗಡೆಯವರು ಬೊಮ್ಮೆ ದೇವರು ಬ್ರಹ್ಮನಿಗೆ ಸಂಬಂಧಿಸಿದ ದೇವತೆಯಲ್ಲ, ಮಾತೃದೇವತೆಯ ಜೊತೆಗಿರುವ ಅಥವಾ ಕಾಲಭೈರವನಾಗಿರಬೇಕು. ಈತ ಕೊರಳಲ್ಲಿ ಸರ್ಪವನ್ನು ಸುತ್ತಿಕೊಂಡವನು, ಕ್ಷೇತ್ರಪಾಲ ಎಂದರೆ ಬೆಳೆರಕ್ಷಣೆಯನ್ನು ಮಾಡುವವನೂ ಆಗಿದ್ದಾನೆಂದು ಬೇರೊಂದು ಆಕರ ಮೂಲದೆಡೆ ನಮ್ಮ ಗಮನವನ್ನು ಸೆಳೆದು ಬೊಮ್ಮೆ ದೇವರು ಒಂದು ಸರ್ಪದೇವತೆ ಅಥವಾ ಮೃತ್ಯುದೇವತೆಯಾಗಿರಬೇಕೆನ್ನುತ್ತಾರೆ.

ನಾಡವರು ಪೂಜಿಸುವ ಬೊಮ್ಮಯ್ಯ ದೇವರು ವೈದಿಕ ಪರಂಪರೆಯ ಬ್ರಹ್ಮ. ಜೈನಯಕ್ಷ ಬ್ರಹ್ಮ, ಸರ್ಪ ಸಂಬಂಧಿ ದೇವತೆ, ಕಾಲಬೈರವ ಮೃತ್ಯುದೇವತೆ, ಫಲೀಕರಣ ದೇವತೆ ಎಂದೆಲ್ಲಾ ಊಹಿಸಬಹುದಾದರೂ, ನಾವು ಇಂದಿನ ಪ್ರತಿಮೆಯನ್ನನುಲಕ್ಷಿಸಿ ಹೇಳುವುದಾದರೆ ಇದೊಂದು ಜನಾನುರಾಗಿಯಾದ ವೀರ ರಾಜಯೋಧನ ಸ್ಮಾರಕ ವಿಗ್ರಹವೆಂದು ತರ್ಕಿಸಬಹುದಾಗಿದೆ. ವೀರಯೋಧನ ಗುರುತು>ಗುತ್ತು ಮುಂದೆ ರಕ್ಷಕದೇವತೆಯಾಗಿ ರೂಪುಗೊಂಡಂತಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಡವರ ವಸತಿಯಿರುವಲ್ಲೆಲ್ಲ ಬೊಮ್ಮಯ್ಯ ದೇವರ ಗುಡಿಗಳಿವೆ. ಇವುಗಳಲ್ಲಿ ಕೆಲವು ವಿಶಾಲ ಗುಡಿಗಳಾದರೆ ಮತ್ತೆ ಕೆಲವು ಗುತ್ತುಗಳಾಗಿವೆ. ಈ ದೇವರಿಗೆ ನಿತ್ಯ ಪೂಜೆಯಿಲ್ಲ ಸಾಮಾನ್ಯವಾಗಿ ವಾರಕ್ಕೊಮ್ಮೆ ಪೂಜೆ ಸಲ್ಲುತ್ತದೆ. ಬಂಡಿಹಬ್ಬದಲ್ಲಿ ವಿಶೇಷ ಪೂಜೆ ಸಲ್ಲುತ್ತದೆ. ಅಮ್ಮನ ಕಲಶದ ಜೊತೆಗೆ ಬೊಮ್ಮಯ್ಯ ದೇವರ ಕಲಶವೂ ಮೆರವಣಿಗೆ ಹೊರಡುತ್ತದೆ. ಸಾಮಾನ್ಯವಾಗಿ ಅಮ್ಮನವರ ಹಾಗೂ ಬೊಮ್ಮಯ್ಯ ದೇವರ ಕಟ್ಟಿಗೆದಾರರು ನಾಡವರು.

ಕಾನಬೀರ: ಅಂಕೋಲಾ ತಾಲೂಕಿನ ಭಾವಿಕೇರಿಯಲ್ಲಿ ವಿಶಾಲವಾದ ಕಾನಬೀರ ದೇವಾಲಯವಿದೆ. ಈ ವೀರ ದೇವತೆಯೂ ಬೊಮ್ಮಯ್ಯ ದೇವರಂತೆ ಕುದುರೆಯ ಮೇಲೆ ಕುಳಿತಿದೆ. ದೇವಾಲಯದ ಮೇಲುಸ್ತುವಾರಿ ನಾಡವರ ಹಿರಿತನದಲ್ಲಿ ನಡೆಯುತ್ತದೆ. ಕಾನಬೀರ ಮತ್ತು ಜೈನಬೀರರು ಅಣ್ಣ ತಮ್ಮಂದಿರೆಂದು ಹೇಳಲಾಗುತ್ತದೆ.

ಜೈನಬೀರ: ಅಂಕೋಲಾ ತಾಲೂಕಿನ ಬೇಲೇಕೇರಿಯ ಸಮುದ್ರ ದಂಡೆಯ ಮೇಲೆ ಜೈನಬೀರ ದೇವಸ್ಥಾನವಿದೆ. ಹಿಂದೆ ಜೈನರ ಆಡಳಿತಕ್ಕೊಳಪಟ್ಟಿರಬಹುದಾದ ಈ ದೇವಾಲಯದ ಪಾರುಪತ್ಯಗಾರರು ಇಂದು ನಾಡವರು. ಅಶ್ವಾರೋಹಿಯಾದ ಜೈನಬೀರ ವಿಗ್ರಹವು, ರಾಜಠೀವಿಯಲ್ಲಿ ವಿರಾಜಮಾನವಾಗಿದೆ. ಜೈನಬೀರರ ಗರಡಿಯನ್ನು ಜಾನಪದರು ಸ್ವಾರಸ್ಯವಾಗಿ ಬಣ್ಣಿಸಿದ್ದಾರೆ:

ಅಚ್ಚೀಲೆ ಚಾಳೀಯೇ ಇಚ್ಚೀಲೇ ಬಲಿಯಾ ಬೇರಾ
ನಿಡಗೇ ಜೈನೊಡಿಯಾರ ಗರಡೀಯೇ। ಕಲ್ಲಕಂಬ
ಉಜ್ರಾ ಹೊಳದಂಗೇ ಹುಳವಾದ

ಜೈನಬೀರ ಒಬ್ಬವೀರ ಸೇನಾನಿಯೆನ್ನುವುದನ್ನು ಋಜುವಾತು ಪಡಿಸುವ ಹಲವಾರು ಜನಪದ ಹಾಡುಗಳಿವೆ. ಜೈನಬೀರನ ದಂಡಿನ ಆಟೋಪ ಅದ್ಭುತವಾಗಿದೆ.

ಕಡಗಲ್ಲು ಕರಗ್ಹೋದು ಬಿಳಗಲ್ಲು ಚೂರಾದು
ಬಗ್ಗೀದ ಮರನೇ ಬಯ್ಲಾದು। ಜೋನೊಡಿಯಾರ
ದಂಡೂ ದಂಡಾಳೇ ಬರುವಾಗೇ।
ಉಂದಲ್ಲಾ ಎಯ್ಡಲ್ಲಾ ಒಂಬತ್ ಹಡಗಾ ಬಂದೇ
ಮುಂಗಾಲ್ ಊರದ್ವೇ ಹೊಳಿಯಲ್ಲೇ। ಜೇನೊಡಿಯಾರ
ಬಂಗಾರ್ದ ಹಡಗಾ ಜತನಾವೇ।

ಜೈನಬೀರ ಅದ್ಭುತ ಸಾಹಸಿ. ಒಂಬತ್ತು ಹಡಗುಗಳನ್ನು ಮುಂಗಾಲೂರಿಸಿ, ತನ್ನ ಬಂಗಾರದ ಹಡಗನ್ನು ಜತನವಾಗಿರಿಸಿಕೊಂಡ ಖ್ಯಾತಿ ಜೈನ ಬೀರನದು. ಜೈನಬೀರ ದೇವಸ್ಥಾನದ ಸನಿಹದಲ್ಲಿಯೇ ಹಡಗು ಮುಳುಗಿದ ಸ್ಥಳವನ್ನು ಸ್ಥಳೀಯರು ತೋರಿಸುತ್ತಾರೆ. ಅದಕ್ಕೆ ಸ್ಥಳೀಯ ಐತಿಹ್ಯವೊಂದಿದೆ. ಹಿಂದೆ ಬೇಲೇಕೇರಿಯಲ್ಲಿ ನಾಡವರ ಒಂದೇ ಮನೆಯಿತ್ತು. ಅವರಿಗೆ ಗೋವೆಯಿಂದ ಬಂದ ಕೊಂಕಣಿಗರು

ತೊಂದರೆಯನ್ನು ನೀಡುತ್ತಿದ್ದರು. ಆಗ ನಾಡವರು ಜೈನಬೀರದಲ್ಲಿ ಮೊರೆಯಿಟ್ಟರಂತೆ, ಆಗ ಜೈನಬೀರ ಕೊಂಕಣಿಗರ ವ್ಯಾಪಾರದ ಹಡಗುಗಳನ್ನು ಮುಳುಗಿಸಿ ಬಿಟ್ಟನಂತೆ. ಈ ಕತೆಗೂ ಮೇಲಿನ ಹಾಡಿಗೂ ಏನೋ ಒಂದು ಕೊಂಡಿಯಿದ್ದಂತಿದೆ.

ಹೊಲೆಯಟ್ಟ-ಹೊಲೆವಟ್ಟ-ಹೊಲೇಟ್ರ: ಅಂಕೋಲಾ ಮತ್ತು ಕುಮಟಾ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಹೊಲೆವಟನ ಗುಡಿ, ಗುತ್ತುಗಳಿವೆ. 'ಹೊಲೆವಟ' ಎಂಬ ಹೆಸರು ಹೊಲೆಯ ಭಟದಿಂದ ನಿಷ್ಪನ್ನವಾದಂತಿದೆ. ಅದೇ ಮುಂದೇ ಹೊಲೆಯಟ್ಟ, ಹೊಲೇಟ್ರ ಆದಂತಿದೆ. ಈ ದೇವತೆಯ ಪೂಜಾರಿಗಳು ಹೆಚ್ಚಾಗಿ ಪರಿಶಿಷ್ಟ ಜಾತಿಗೆ ಸೇರಿದವರು. ಕರಾವಳಿಯಲ್ಲಿ 'ಹೊಲೆಯರು' ರಾಜಸತ್ತೆಯಲ್ಲಿದ್ದುದನ್ನು ಬುಕಾನನ್ ತಿಳಿಸುತ್ತಾನೆ. ಹೊಲೇಟ್ರ ದೇವರು ಒಬ್ಬ ಜನಪ್ರಿಯ ಪರಿಶಿಷ್ಟ ಜಾತಿಯ ಜನಪ್ರಿಯ ಭಟನ ಇಲ್ಲವೆ ರಾಜನ ಮೂರ್ತಿಯಾಗಿರುವ ಸಾಧ್ಯತೆಯಿದೆ. ಹೊಲಿಯಟ್ಟ ಜೈನ ಬೀರಾದಿ ವೀರರ ಕುರಿತಾಗಿರುವ ಐತಿಹ್ಯವೊಂದರ ಪದ್ಯದ ತುಣುಕನ್ನು ಗಮನಿಸಿರಿ:

ಬೇಡರೆಲ್ಲಾ ಕೂಡೇ ಬೇಡದ್ರೇ ಈ ರಾಜ್ಯ
ಸೇಡೀ ನೀರೊಂಡ ಹೊಲಿಯಟ್ಟ। ಜೇನೊಡಿಯಾರ
ಬ್ಯಾಡಾರಿಗಿಂಬ ಕೊಡ್ನೆಂದ್ರ।

ಜಾಡರು, ಬೇಡರು ಜೊತೆಗೂಡಿ ಜೈನಬೀರನ ರಾಜ್ಯವನ್ನು ಪಡೆಯಲು ಮಸಲತ್ತು ಮಾಡಿದಾಗ, 'ಹೊಲಿಯಟ್ಟ' ಅವರಿಗೆ ಸಹಾಯ ಮಾಡಿದಂತಿದೆ. ಆದರೆ ಜೈನಬೀರ ಬೇಡರಿಗೆ ಇಂಬು ಕೊಡಲಿಲ್ಲ. ಹೊಲಿಯಟ್ಟನಿಗೆ ಸೋತು ಶರಣಾಗಿ ಸೇಡಿ ನೀರುಣ್ಣುವ ದಾರುಣ ಪರಿಸ್ಥಿತಿ ಬಂತು. ಹೊಲೆಯಟನ ವೀರ ಸ್ಮಾರಕಕ್ಕೆ ನಾಡವರಾದಿಯಾಗಿ ಸ್ಥಳೀಯ ಭಕ್ತರು, ಭಕ್ತಿ ಗೌರವವನ್ನು ಸಲ್ಲಿಸುತ್ತಾರೆ. ಯುದ್ಧದಲ್ಲಿ ವೀರ ಮರಣವನ್ನಪ್ಪಿದ ಜಾಣ್ರು (ಜಾಡರು) ಬೇಣ್ರು (ಬೇಡರು) ಇವರ ಗುತ್ತುಗಳೂ ಬೇಲೇಕೇರಿಯಲ್ಲಿದ್ದು ಇವುಗಳಿಗೆ ಬಂಡಿ ಹಬ್ಬದಲ್ಲಿ ಪೂಜೆ ಸಲ್ಲುತ್ತದೆ.

ರಾಕೇಸ: ರಾಕ್ಷಸ ಶಬ್ದದ ಅಪಭ್ರಂಶ ರೂಪ ರಾಕೇಸ, ವೈರಿಗಳಿಗೆ ರಾಕ್ಷಸ ಸದೃಶನಾಗಿ ಹೋರಾಡಿ ಸತ್ತ ವೀರಪುರುಷನ ಸ್ಮಾರಕದಂತಿದೆ. ಈ ವಿಗ್ರಹ. 'ರಾಕೇಸರ' ದೇವಾಲಯ ಹಾಗೂ ಗುತ್ತುಗಳು ಕರಾವಳಿಯಲ್ಲಿ ಹಲವೆಡೆಯಿವೆ. ರಾಕೇಸರಂತೆ ರಣ ರಾಕೇಸನೆನ್ನುವ ಗುತ್ತೂ ಇದ್ದು ಇದಕ್ಕೂ ರಾಕೇಸರಿಗೆ ಸಲ್ಲುವಂತೆ ಭಕ್ತಿ ಗೌರವಗಳು ನಾಡವರಿಂದ ಸಲ್ಲುತ್ತದೆ.

ಹಣ್ಣು ಕಾಯಾ ಕುಡುವೆ ಕೂಗು ಹುಂಜನ ಕುಡುವೆ
ಮತ್ತೆ ರಾಕೇಸ್ರಿಗೆ ಹರಕೀಯಾ। ಉಪ್ಪಸ ಕುಡುವೆ
ಬಾಲಾರಿಂದ್ ಹಿಸ್ರ ನಿಡಿಲಂದೇ।

ಹೊನ್ನಾರಾಕಾ: ಹೊನ್ನಾರಾಕಾ ದೇವಸ್ಥಾನವು ಅಂಕೋಲಾ ತಾಲೂಕಿನ ವಂದಿಗೆಯಲ್ಲಿದೆ. ಸುಮಾರು ನೂರೈವತ್ತು ವರ್ಷಗಳ ಹಿಂದೆ ದೇವಸ್ಥಾನವಿದ್ದಲ್ಲಿ

ಹೊನ್ನರಾಕಾ ಹಾಗೂ ನಾಗದೇವತೆಯ ಗುತ್ತುಗಳಿದ್ದುವಂತೆ. ಈಗ ಆ ಸ್ಥಳದಲ್ಲಿ ಸುಂದರವದ ದೇವಾಲಯ ನಿರ್ಮಾಣವಾಗಿದೆ. ಹೊನ್ನಾ–ರಾಕಾ ವಿಗ್ರಹಗಳು ದಕ್ಷಿಣೋತ್ತರವಾಗಿ ಮುಖಾಮುಖಿಯಾಗಿ ನಿಂತಿವೆ. ದೇವಾಲಯದ ಹಿಂಬದಿಯಲ್ಲಿ ನಾಗದೇವತೆಯಿದೆ. ಕೆಲವರು ನಾಗದೇವತೆ ಉಲೂಪಿಯೆಂದೂ ಹೊನ್ನಾ–ರಾಕಾ ಅರ್ಜುನ–ಬಬ್ರುವಾಹನರೆಂದು ಹೇಳುತ್ತಾರೆ. ಆದರೆ ಈ ದೇವತೆಗಳಿಗೆ ನಡೆಯುವ ಆರಾಧನಾ ಸಂಪ್ರದಾಯದಲ್ಲಿ ಉಲೂಪಿ ಚಿತ್ರಾಂಗದೆ ಅರ್ಜುನ–ಬಬ್ರುವಾಹನರಿಗೆ ಸಂಬಂಧಿಸಿದ ಯಾವೊಂದು ಸುಳಿವೂ ಇಲ್ಲ. ಆದ್ದರಿಂದ ಇದೊಂದು ಆಧಾರವಿಲ್ಲದ ಕಟ್ಟುಕತೆಯೆಂದೇ ತೋರುತ್ತದೆ. ಹೊನ್ನದೇವರಿಗೆ ಕೆಲವರು ಹೊಲೆವಟರ, ಹೊಲೇಟ್ರ ಎಂದೂ, ರಾಕಾದೇವರಿಗೆ ರಾಕೇಶ್ವರ–ರಾಕೇಸ್ರ ಎಂದೂ ಕರೆಯುವುದುಂಟು. ಈ ದೇವತೆಗಳ ಪೂಜಾರಿಗಳು ನಾಡವರು. ನಾಡವರ ಒಡೆತನದಲ್ಲಿದ್ದ ಈ ದೇವಾಲಯ ಪೂಜಾರಿಗಳಾಗಿ ಕೆಲಕಾಲ ಕುಂಬಾರರೂ ಇದ್ದರು. ಕರಾವಳಿಯಲ್ಲಿ ಬೇರೆ ಬೇರೆಡೆ ಹೊಲೇಟ್ರ, ರಾಕೇಸ ದೇವರನ್ನು ಗಮನಿಸಿದ ಭಕ್ತರು, ಆ ವಿಗ್ರಹಗಳೇ ಇವಾಗಿರಬೇಕೆಂದು ತಪ್ಪು ಸಾಹಚರ್ಯೆ, ತಪ್ಪು ಗ್ರಹಿಕೆಯಿಂದ ಕರೆದಿರುವಂತಿದೆ. ಬಿಲ್ಲು ಬಾಣಗಳನ್ನು ಹಿಡಿದು ವೀರಭಂಗಿಯಲ್ಲಿರುವ ಈ ವಿಗ್ರಹಗಳನ್ನು ನೋಡಿದರೆ, ಇವಕ್ಕೆ ಹೊನ್ನೊಡಿಯಾ, ರಾಕೊಡಿಯಾ ಎಂದು ಗೌರವಿಸಿ ಹಾಡುವುದನ್ನು ನೋಡಿದರೆ, ಇವರು ಹೊಲೇಟ್ರ ಮತ್ತು ರಾಕೇಸ್ರ ಇವರಿಂದ ಭಿನ್ನರಾದ ರಾಜರೋ ಸೇನಾನಿಗಳೋ ಆಗಿರಬೇಕೆಂದೆನಿಸುತ್ತದೆ. ಇವರ ಸಂಬಂಧವಾಗಿರುವ ಒಂದೆರಡು ಭಕ್ತಿ ಗೀತಗಳನ್ನು ಗಮನಿಸಿ:

ಸ್ವಾಮಿ ಹೊನ್ನೆಡಿಯಾರ ಮನಿಯಾ ನೋಡಲ್ಹೊದೆ
ಮನಿಯಾ ಮ್ಯೆನ್ ನವ್ಲ ಸರಗೆಯ್ದು। ಹೊನ್ನೊಡಿಯಾರ
ಕಂಬನ ಮೆನ್ ಕಾಳೇ ಕೆಲ್ದಾವೇ।
ಕುಚ್ಚೇನಾಡ್ತಂಕ ಅಚ್ಚಾಮೊಳಿಹುಯ್ದೇ
ಹಚ್ಚಡ ನಂದೇ ಹಸನಂದೇ। ಹೊನ್ನೊಡಿಯಾರ
ಕಟ್ಟಗಿಯವ್ರ ನಂದ್ರೇ ಪುರದಲ್ಲೇ।
ಕೆಂಬರ್ಗಿ ಸುಪ್ಪೀನಾ ರಸವ ಕಂಡಂಜೀದೇ
ಸಿಸುವಾ ಕಾಳಗಕೆ ಕಳಗೀಸಿ। ರಾಕೊಡಿಯಾರೇ
ಕುಸಿಯಾಗಿ ನಿಮ್ಮ ಮನಸೀನೇ।

ಈ ಗ್ರಾಮದೇವತೆಗಳ ಹೊರತಾಗಿ ನಾಡವರು ಹೊಸಬ, ಉದ್ದಂಡ, ವಲಿಬೀರ, ಗೋಳಿಬೀರ, ಜಟಗ, ಬರ್ಮಜಟಗ ಮುಂತಾದ ವೀರದೇವತೆಗಳನ್ನು, ನಾಗ, ಹುಲಿ, ಹನುಮಂತ, ಮುಂತಾದ ಪ್ರಾಣಿದೇವತೆಗಳನ್ನು ಚೌಡಿ, ರಾವು, ಕೀಳಿ, ಭೂತ, ನಾಸ, ಸುಪ್ಪಡತಿ ಮುಂತಾದ ಉಪದ್ರಕೊಡುವ ಭೂತ ಪಿಶಾಚಾದಿಗಳನ್ನು ಭಯ ಭಕ್ತಿಯಿಂದ ಪೂಜಿಸುತ್ತಾರೆ.

ಅಮ್ಮ, ಬೊಮ್ಮಯ್ಯ, ಕಾನಬೀರ, ಜೈನಬೀರ ಮುಂತಾದ ದೇವಾಲಯಗಳನ್ನು ಹೊಂದಿದ ದೇವತೆಗಳ ಮಂದಿರಗಳಲ್ಲಿ ಬಾಗಿಲು ಕಟ್ಟಿ ಪುಡವಿ ಪ್ರಸಾದಗಳನ್ನು ಕಟ್ಟಿ ತಮ್ಮ ಸಂಕಷ್ಟಗಳಿಗೆ ಪರಿಹಾರವನ್ನು ಕೇಳಿ ಭಯ ಭೀತಿಯಿಂದ ಬಿಡುಗಡೆ ಪಡೆಯುತ್ತಾರೆ. ಈ ದೇವತೆಗಳ ಸಂಪ್ರೀತಿಗಾಗಿ ವಾರ್ಷಿಕವಾಗಿ ಬಂಡಿ ಹಬ್ಬವನ್ನು ಆಚರಿಸಿ, ದೇವರ ಕಲಶಗಳನ್ನು ಹೊರಬೀಡುಗಳಲ್ಲಿ ಮೆರವಣಿಗೆ ಮಾಡಿ, ಕಲಶಗಳಿಗೆ ಭಾರ ಬಂದಾಗ ವಿಚಾರ ಹಾಕಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ. ದೇವರ ಕಲಶಗಳು ವಿಶ್ರಾಂತಿ ಪಡೆಯುವ ಆಡುಕಟ್ಟೆಗಳಲ್ಲಿ ಮರದ ಮುಖವಾಡ ಆಡಿಸುವುದು, ಸಾಮಿಕಟ್ಟಿ ಕುಣಿಯುವುದು, ಹಗರಣ ಮಾಡುವುದು ಮುಂತಾದ ಕಲಾಪ್ರದರ್ಶನ ಮಾಡಿ ಮುದಗೊಳ್ಳುವರು. ಬಂಡಿಹಬ್ಬದ ಕೋಳಿಕುರಿಯ ದಿನ ಅಮ್ಮನ ಪರಿವಾರದ ಬಂಟರಿಗೆ ಕೋಳಿ ಕುರಿಗಳ ರಕ್ತ ಬಲಿಯನ್ನು ನೀಡಿ ಸಂತೃಪ್ತಿಪಡಿಸಿ, ರಾತ್ರಿ ನೆಂಟರಿಷ್ಟರನ್ನು ಕರೆದು ಮಾಂಸಭೋಜನ ಮಾಡಿ ಸುಖಿಸುವರು.

ಬಂಡಿಹಬ್ಬದ ಹೊರತಾಗಿ, ಹೊಸತು, ಸಂಕ್ರಾಂತಿ, ಅಯನ, ಸಂದರ್ಭಗಳಲ್ಲಿ ಹೂವಿನ ಪೂಜೆ ಹಂಬೆಪೂಜೆ ಮೊದಲಾದವುಗಳಿಂದ ತಾವು ನಂಬಿದ ಗ್ರಾಮದೇವತೆಗಳಿಗೆ ಭಕ್ತಿಗೌರವವನ್ನು ಸಮರ್ಪಿಸಿ ಸಂತೃಪ್ತಿಗೊಳ್ಳುವರು.

ನಾಡವರು ಪೂಜಿಸುವ ಗ್ರಾಮದೇವತೆಗಳು, ಅವುಗಳ ಆರಾಧನಾ ರೀತಿ ನೀತಿಗಳಲ್ಲಿ ತುಳುನಾಡಿನ ಭೂತಾರಾಧನೆಯ ಹೋಲಿಕೆಗಳಿವೆ. ಈ ಕುರಿತ ಚಿಂತನೆ ಇನ್ನೊಂದು ಅಧ್ಯಯನ ವಸ್ತುವಾಗಬಲ್ಲುದು.

೦೭. ನಾಡವರ ಹರಿದಿನಾಚರಣೆ

೧. ತಿರುಪತಿ ಯಾತ್ರೆ :

ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಬೇಸಾಯಗಾರ ಜಾತಿಗಳಲ್ಲಿ ನಾಡವರೊಬ್ಬರು. ಇವರ ಕುಲ ದೇವರು ವೆಂಕತರಮಣ. ಪಂಡರಾಪುರ, ತಿರುಪತಿ ನಾಡವರ ಯಾತ್ರಾಸ್ಥಳ. ಧಾರ್ಮಿಕ ಶ್ರದ್ಧೆಯುಳ್ಳವರು ಪಂಡರಾಪುರ, ತಿರುಪತಿಯ ಯಾತ್ರೆಯನ್ನು ಮಾಡುವ ಉದ್ದೇಶದಿಂದ ತಮ್ಮ ಗಳಿಕೆಯ ಕೆಲಭಾಗವನ್ನುಳಿಸಿ ಯಾತ್ರೆಯನ್ನು ಮಾಡುತ್ತಾರೆ. ಯಾತ್ರೆಗೆ ಹೊರಡುವ ಭಕ್ತನು ಹೆಂಡತಿ ಮಕ್ಕಳು ಬದುಕು ಭಂಡಾರದ ಚಿಂತೆಯನ್ನು ಬದಿಗಿರಿಸಿ, ಅನನ್ಯ ಭಕ್ತಿಯಿಂದ ಗೋವಿಂದನೇ ಗತಿಯೆಂದು ಯಾತ್ರೆಗೆ ಹೊರಡುತ್ತಾನೆ. ಹಾಗೆ ಹೊರಡುವಾಗ, ಅವನ ಹೆಂಡತಿ, ಮಕ್ಕಳ, ಮನೆ ಬದುಕಿನ ಯೋಗಕ್ಷೇಮವನ್ನು ದಂಡಿನ ಹನುಮನು (ಹನುಮಂತ ದೇವರು) ನೋಡಿ ಕೋಳ್ಳುವನೆಂಬ ನಂಬಿಕೆ ನಾಡವರದು:

ತಿರುಪತಿಗೋಗ್ವರ ತಿರಗೇ ನೋಡಲು ಬ್ಯೆಡಿ
ಮನೆಯೆಂದೇ ಚಿಂತೀ ಹಿಡಿಬ್ಯೆಡಿ। ದಂಡೀನ ಹನ್ಮ
ಮನೆಗೇ ಕಾವಲ್ಲಾ ಕಳಗೂನೇ॥

ದಂಡಿನ ಹನುಮನ ಮೇಲೆ ಬರವಸೆಯನ್ನಿಟ್ಟು ಕಟ್ಟಿದ ಮನೆ, ಹೂಡಿದ ಒಲೆ, ಕೈ ಹಿಡಿದ ಮಡದಿ[೧] ಎಲ್ಲರನ್ನೂ ಬಿಟ್ಟು ಯಾತ್ರೆಗೆ ಹೊರಡುತ್ತಾರೆ:

ಕಟ್ಟೀದಾ ಮನಿಯಾ ಬೆಟ್ರೋ ಹೂಡಿದೊಲಿಯಾ ಬೆಟ್ರೋ
ಸೆಣ್ಣಿಂದೇ ತಂದ ಮಡದೀಯಾ। ಬಿಟ್ಟೇಗೇ
ನಡೆದರೆ ಗೋವಿಂದ್ನೇ ಗತಿಯೆಂದೇ॥

ಸರ್ವಮೋಹವನ್ನೂ ವರ್ಜಿಸಿ, ಸಮರ್ಪಣ ಮನೋಭಾವನೆಯಿಂದ ಹೊರಡುವ ಭಕ್ತನಿಗೆ ಎಲ್ಲಿವೂ ಕ್ಷೇಮ. ತಿರುಪತಿಯ ಹಾದಿಯಲ್ಲಿ ಅವನಿಗೆ ಕಲ್ಲಿಲ್ಲ ಮುಳ್ಳಿಲ್ಲ:

ತಿರುಪತಿಗೋಗ್ವಲ್ಲೇ ಕಲ್ಲಿಲ್ಲ ಮುಳ್ಳಿಲ್ಲ
ನಿಲ್ಲೀಲು ಕಾಯ್ನಂಡಾ ಹರಳಿಲ್ಲಾ। ಹರಿಗೋಳ
ನೆಡದರೇ ಗೋವಿಂದ್ನೇ ಗತಿಯೆಂದೇ॥

---

೧. ದಂಪತಿಗಳೊಟ್ಟಿಗೆ ಹೋಗುವುದೂ ಇದೆ. ಹಾಡಿನಲ್ಲಿ ಹೆಂಡತಿಯನ್ನು ಬಿಟ್ಟು ಯಾತ್ರೆ ಮಾಡಿದ ಪ್ರಸ್ತಾಪವಿರುವುದರಿಂದ ಹಾಗೆಯೇ ವಿವರಣೆಯನ್ನು ನೀಡಲಾಗಿದೆ.

ಗೋವಿಂದನೇ ಗತಿಯೆಂದು ತಿರುಪತಿಗೆ ಹೊರಟ ಭಕ್ತ, ಅಲ್ಲಿಯ ಭವ್ಯವಾದ ಗಿರಿಯನ್ನು ನೋಡುತ್ತಾನೆ:

ಇತ್ತು ಕಂಟ್ಹಾಳೀಯೇ ಹತ್ತನಾರದ ಗಿರಿಯೇ
ಸ್ವಾಮಿ ತಿಮ್ಮಪ್ಪ ಕಯ್ಯಾಕುಟ್ಟೆ। ಕಾಲಾಕುಟ್ಟೇ
ಹತ್ತಸ್ಕೊ ನಿನ್ನ ಗಿರಿಮ್ಯೆನೆ॥ ಗೋವಿಂದಾ
ಇಕ್ಕಿಸ್ಕೊ ನಿಂಗೆ ವನಮಾಲ್ಯ॥

ಎತ್ತರವಾದ ಹಾಳಿಯ ಕಂಟದಂತೆ ಮೆಟ್ಟಿಲುಗಳುಳ್ಳ ಆ ಗಿರಿಯು ಹತ್ತಲಸಾಧ್ಯವಾದದ್ದು. ಆ ಗಿರಿಯನ್ನು ಏರಲಿಕ್ಕೆ, ತಿಮ್ಮಪ್ಪನೇ ಭಕ್ತನಿಗೆ ಕೈ ಕಾಲುಗಳನ್ನೂ ಕೊಡಬೇಕು; ಶಕ್ತಿ ನೀಡಬೇಕು. ತಿಮ್ಮಪ್ಪನ ಕಾರುಣ್ಯ ದೃಷ್ಟಿ ಭಕ್ತನ ಮೇಲೆ ಬಿದ್ದಾಗ ಮಾತ್ರ. ಭಕ್ತ ಗಿರಿಶಿಖರವನ್ನೇರಿ ಅವನಿಗೆ ತುಳಸಿ ಮಾಲೆ ಹಾಕಬಲ್ಲ.

ಹರಿ ಕರುಣೆಯಿಂದ ಭಕ್ತ ಗಿರಿಯೇರುತ್ತಾನೆ. ಗಿರಿಯ ಮೇಲೆ ತನ್ನಂತಹ ನೂರಾರು ಭಕ್ತರು ನೆರೆದಿರುವುದನ್ನು ನೋಡಿ, ಅವರ ವಿಷಯದಲ್ಲಿ ಆದರ ತಾಳುತ್ತಾನೆ. ಅಲ್ಲಿ ನೆರೆದ ಹರಿದಾಸರೆಲ್ಲ ತನ್ನ ತಾಯಿಯ ಬಳಿಯವರೆಂದು ಭಕ್ತ ಕಾಣುತ್ತಾನೆ:

ಕರಿಯವ್ರು ನನ್ನವ್ರ ಬಿಳಿಯವ್ರು ನನ್ನವ್ರ
ಹರಿದಾಸ್ರು ನನ್ನ ಬಳಿಯವ್ರು। ತಿರುಪತಿಯಾ
ಗಿರಿಯಾ ಮ್ಯೆನ್ ತಾಯಿ ಬಳಗಾವೇ॥

ತಿರುಪತಿಯ ಗಿರಿಯ ಮೇಲಿರುವ ಭಕ್ತರು ಕರಿಯವರಿರಲಿ, ಬಿಳಿಯವರಿರಲಿ, ವರ್ಣಭೇದವಿಲ್ಲದೆ ಎಲ್ಲರೂ ತನ್ನ ತಾಯಿಯ ಬಳಗದವರೆಂದು ಭಕ್ತ ಸರ್ವರನ್ನೂ ಸಮಾನ ದೃಷ್ಟಿಯಿಂದ, ಸಮಾನ ಪ್ರೀತಿಯಿಂದ ಕಾಣುತ್ತಾನೆ. ಭಕ್ತರಲ್ಲಿ ಮೇಲುಕೀಳೆಂಬ ವರ್ಗಭೇದವಿಲ್ಲ ಬಿಳಿಕರಿಯೆಂಬ ವರ್ಣಭೇದವಿಲ್ಲ. ಹರಿಭಕ್ತರೆಲ್ಲರೂ ಸಮಾನರು ಒಂದು ಬಳಗದವರು ಎಂದು ಭಕ್ತನ ಗ್ರಹಿಕೆ.

ಗಿರಿಯ ಮೇಲೆ ತಿಮ್ಮಪ್ಪರಾಯನ ಮನೆಯ ಮುಂದೆ ಭಕ್ತ ನೋಡುವ ಚಿತ್ರವಿದು:

ಹಣ್ಣಡಕೀ ಕೊನೆ ಮುಂದೇ ಎಣ್ಣೀಹೇರು ಮುಂದೆ
ಸ್ವೊಮೀ ಗೋವಿಂದ್ನ ಮನಿಮುಂದೆ। ಗಿರಿಯಾಮ್ಯೆನೆ
ಮಕ್ಕಳ ಬೇಡ್ವರು ಕಡಿಯಿಲ್ಲ।

ಭಕ್ತ ದೇವಾಲಯದ ಒಳಗೆ ಪ್ರವೇಶಿಸುತ್ತಾನೆ. ಮೇಲು ಗಿರಿಯ ತಿಮ್ಮಪ್ಪರಾಯನ ದರ್ಶನದಿಂದ ಪುಳಕಿತನಾಗುತ್ತಾನೆ. ತಿರುಪತಿ ತಿಮ್ಮಪ್ಪನ ಅಂಗಾಂಗ ಸೌಂದರ್ಯಕ್ಕೆ ಮಾರುಗೊಂಡು ಆನಂದ ತುಂದಿಲನಾಗಿ ಸ್ವಾಮಿಯನ್ನು ಹಾಡಿ ಹೊಗಳುತ್ತಾನೆ:

ಮೇಲುಗಿಯವ್ರೋ ಮೇರುಗಿಯವ್ರೋ
ಬಂಗಾರ್ದಾ ಗಿರಿಯವ್ರೋ ಸುಂಗಾರ್ದಾ ಯೆಳಿಯವ್ರೋ
ಸುಳಿ ಸುಳಿ ಮಂಡಿಯವ್ರೋ ಸುವರ್ಣ ಬಗತಾಲಿಯವ್ರೋ
ಚೆಲುವಾರೋ ಚೆನ್ಮಯರೋ ಗಿರಿಯಾ ತಿಮ್ಮಪ್ಪರಾಯರೋ

ದೇವರ ದರ್ಶನವನ್ನು ತೆಗೆದುಕೊಂಡ ಭಕ್ತನು ತಿರುಪತಿಯಿಂದ ಬಾಳೆಹಣ್ಣು, ಬೆಲ್ಲದಚ್ಚು, ನಾಮದಹೋಳು, ಗಂಧ, ಪ್ರಸಾದ, ವೆಂಕಟರಮಣನ ಚಂದನದಮೂರ್ತಿ ಮುಂತಾದವುಗಳನ್ನು ತನ್ನ ಹಡಪಕ್ಕೆ ಸೇರಿಸಿ, ಅಲ್ಲಿಂದ ಹಿಂತಿರುಗುತ್ತಾನೆ. ತಿರುಪತಿಯ ಯಾತ್ರೆ ಮಾಡಿ ಹರಿದಾಸನಾಗಿ ಆತ ಊರಿಗೆ ಹಿಂತಿರುಗಿ ಬರುವಾಗ, ಅವನ ಬಂಧು ಬಳಗದವರು ಅವನ ಕೊರಳಿಗೆ ತುಲಸೀಮಾಲೆಯನ್ನು ಹಾಕಿ, ಮಂಗಲ ವಾದ್ಯದೊಂದಿಗೆ ಮನೆಗೆ ಕರೆತಂದು ಅವನನ್ನು ಸತ್ಕರಿಸುತ್ತಾರೆ.

೨. ಹರಿದಿನ : ತಿರುಪತಿಯ ಯಾತ್ರೆ ಮಾಡಿದ ಭಕ್ತರು ಹರಿದಿನವನ್ನು ಆಚರಿಸಬೇಕಾಗುತ್ತದೆ. ಇವರಲ್ಲದೇ ಹರಿಭಕ್ತರಾದ ಯಾವ ವ್ಯಕ್ತಿಯೂ ಹರಿದಿನವನ್ನಾಚರಿಸಬಹುದು. 'ಹರಿದಿನ'ವೆಂದರೆ ಶ್ರೀಹರಿಗೆ, ಶ್ರೀ ವೆಂಕಟರಮಣನಿಗೆ ಸಲ್ಲಿಸುವ ಭಕ್ತಿ ಗೌರವ ಪೂಜೆಯ ವಿಶೇಷ ದಿನ. ಹರಿಸೇವೆಯ ಪುಣ್ಯದಿನ. ಇತ್ತೀಚೆಗೆ ಹರಿದಿನವನ್ನಾಚರಿಸುವ ಸಂಪ್ರದಾಯ ನಾಡವರಲ್ಲಿ ಸಂಪೂರ್ಣವಾಗಿ ನಿಂತು ಹೋಗಿದೆ. ಈಗ ತಿರುಪತಿಯ ಯಾತ್ರೆ ಮಾಡಿ ಬಂದವರಲ್ಲಿ ಕೆಲವರು, ತಮ್ಮ ನೆಂಟರಿಷ್ಟರನ್ನು ಮಾತ್ರ ಕರೆದು ದೇವಕಾರ್ಯ ಮಾಡುವುದಿದೆ. ಈ ದೇವಕಾರ್ಯಕ್ಕೆ ಹರಿದಿನ 'ಮಾಮ್ಲಿ'ಯೆಂದು ಕರೆಯುತ್ತಾರೆ. ಹಿಂದಿನ ಹರಿದಿನದ ಶ್ರೀಮದ್ ಗಾಂಭೀರ್ಯ ಇಂದಿನ ಹರಿದಿನಕ್ಕಿಲ್ಲ.

ಅದ್ದೂರಿಯ ಹರಿದಿನಗಳು ನಿಂತು ಹೋಗಿ ಇಂದಿಗೆ ಸುಮಾರು ಎಂಬತ್ತು, ಎಂಬತ್ತೈದು ವರ್ಷಗಳು ಸಂದವು. ಎಂಬತ್ತು ವರ್ಷಗಳ ಹಿಂದೆ ಈ ಕಾರ್ಯಕ್ಕಾಗಿ ಕನಿಷ್ಠ ಹತ್ತು ಸಾವಿರ ರೂಪಾಯಿಯಾದರೂ ಖರ್ಚಾಗುತ್ತಿತ್ತಂತೆ. ಇಂದಿನ ತುಟ್ಟೀ ಕಾಲದಲ್ಲೀ ಈ ಕಾರ್ಯವನ್ನು ನೆರವೇರಿಸಲಿಕ್ಕೆ ಲಕ್ಷರೂಪಾಯಿಗಿಂತ ಹೆಚ್ಚಿಗೆ ಖರ್ಚಾದೀತು. ಇಂದಿನ ದುಬಾರಿ ಕಾಲದಲ್ಲಿ ಅದೆಲ್ಲಿ ಸಾಧ್ಯ. ಈ ದೇವಕಾರ್ಯದ ರೂಪರೇಖೆಗಳನ್ನು ನನಗೆ ಲಭ್ಯವಾದ ಕೆಲವು ಜಾನಪದ ಗೀತಗಳ ಹಾಗೂ ಸ್ವತಃ ಹರಿದಿನವನ್ನು ಮಾಡಿದ ಬೊಮ್ಮಯ್ಯ ಕೃಷ್ಣ ನಾಯಕ (ಗಾಂವಕರ) ಬೊಳೇ ಇವರ ಹೇಳಿಕೆಯ ಆಧಾರದ ಮೇಲೆ ನೀಡಿದ್ದೇನೆ.

ಜಾನಪದರು ಗುಡಿಕಟ್ಟಿಸುವುದು, ಅನ್ನಸತ್ರ ತೆಗೆಯುವುದು, ಕೆರೆ-ಕಟ್ಟೆ ಕಟ್ಟಿಸುವುದು, ಅರವಟ್ಟಿಗೆ ಇಡುವುದು, ದಾನ ಧರ್ಮಗಳನ್ನು ಮಾಡುವುದು, ಹಬ್ಬಹರಿದಿನಗಳನ್ನು ಆಚರಿಸುವುದು ಈ ಮುಂತಾದವುಗಳೆಲ್ಲ ಪುಣ್ಯದ ಕಾರ್ಯಗಳೆಂದು ಬಗೆಯುತ್ತಾರೆ. ಈ ಕಾರ್ಯಗಳಿಗಾಗಿ ತಮ್ಮ ಉತ್ಪನ್ನದ ಕೆಲವು ಭಾಗಗಳನ್ನು ವಿನಿಯೋಗಿಸುತ್ತಾರೆ. ಅನ್ನದಾನವು ಎಲ್ಲ ದಾನಗಳಿಗಿಂತ ಮಿಗಿಲಾದದ್ದೆಂದು ಬಗೆಯುತ್ತಾರೆ. ಅದಕ್ಕಾಗಿ ಹಬ್ಬ ಹರಿದಿನಗಳನ್ನು ಆಚರಿಸಿ,

ನೆಂಟರಿಷ್ಟರನ್ನು ಕರೆದು, ನಿರ್ಗತಿಕರನ್ನು ಬರಮಾಡಿಕೊಂಡು ಅನ್ನ ಸಂತರ್ಪಣೆ ಮಾಡಿ ತಣಿಯುತ್ತಾರೆ. ಇದೇ ಉದ್ದೇಶದಿಂದ ಹಿಂದಕ್ಕೆ ನಾಡವರು ಹರಿದಿನವನ್ನಾಚರಿಸಿ ಹರಿಸೇವೆಯ ಜೊತೆಗೆ, ಅನ್ನದಾನಾದಿಗಳನ್ನು ಮಾಡಿ ನರಸೇವೆಗೂ ಮುಂದಾದರು.

(ಅ.) ಹರಿದಿನ ಸಿದ್ಧತೆ : ಹರಿದಿನವನ್ನು ಮಾಡುವ ಬಯಕೆಯಿದ್ದ ಕುಟುಂಬದ ಯಜಮಾನನು ಕುಲದೇವರಿಗೆ ಹರಿದಿನವನ್ನು ಮಾಡುವೆನೆಂದು ಹೇಳಿಕೆಯನ್ನು ಮಾಡಿಕೊಂಡು, ತುಲಸಿಯ ನೀರನ್ನು ಬೆಳೆಕೊಡುವ, ಸಸ್ಯಾದಿಗಳಿಗೆ, ಫಲವೃಕ್ಷಗಳಿಗೆ ಬೆಳೆಯು ಸಮೃದ್ಧವಾಗಲೆಂದು ಹೇಳಿಕೊಂಡು ಸಿಂಪಡಿಸುತ್ತಾನೆ. ದೇವರ ಕೃಪೆಯಿಂದ ಆ ವರ್ಷ ಎಂದಿಗಿಂತಲೂ ಹೆಚ್ಚಿನ ಬೆಳೆ ಬರುವುದೆಂದು ಅವನ ಭಾವನೆ. ಹರಿಭಕ್ತಿಯಿಂದ ವರ್ಷವಿಡೀ ಆತನು ಮಾಡಿದ ಕರ್ಮದ ಆರಾಧನೆಯಿಂದ ಬೆಳೆಯೂ ಇಮ್ಮಡಿಯಾಗಿಯೇ ಬರುತ್ತದೆ.

(ಆ.) ಕವೆ ಕಡಿಯುವುದು : ಹರಿದಿನವನ್ನು ಆಚರಿಸುವದು ಸಾಮಾನ್ಯವಾಗಿ ಏಪ್ರಿಲ್ ತಿಂಗಳಲ್ಲಿ. ಹರಿದಿನಕ್ಕೆ ಸುಮಾರು ಎರಡು ತಿಂಗಳು ಮೊದಲಿನಿಂದಲೇ ಸಮಾರಂಭದ ತಯಾರಿಯು ನಡೆಯುತ್ತದೆ. ಹರಿದಿನದ ಮೊದಲಿನ ಕಾರ್ಯಕ್ರಮ 'ಕವೆ' ಕಡಿಯುವುದು. ಕವೆ ಕಡಿಯುವ ಮುನ್ನಾದಿನ ಮನೆಯ ಯಜಮಾನನು ತನ್ನ ಸಂಬಂಧಿಕರ ಜೊತೆಯಲ್ಲಿ ಬೆಟ್ಟಕ್ಕೆ ಹೋಗಿ ಹರಿದಿನದಲ್ಲಿ ಪೂಜಿಸುವ ಮುಹೂರ್ತದ ಕಂಬವನ್ನು 'ಕವೆ'ಗೆ ಯೋಗ್ಯವೆಂದು ಕಂಡುಕೊಂಡು ಬರುತ್ತಾನೆ. ಮರದ ಬುಡದಿಂದಲೇ ಎರಡು ಕವೆಗಳುಳ್ಳ ಮರವನ್ನೇ ಕವೆಗೆ ಯೋಗ್ಯವೆಂದು ಆರಿಸಬೇಕೆಂಬ ನಿರ್ಬಂಧವಿದೆ. ಅದೇ ದಿನ ಮನೆಯ ಯಜಮಾನ ತನ್ನ ನೆಂಟರಿಷ್ಟರಿಗೆ ಹಾಗೂ ತನ್ನೂರಿನ ಜನರಿಗೆ ಹರಿದಿನದ ಚಪ್ಪರಕ್ಕೆ ಬೇಕಾಗುವ ಕವೆಗಳನ್ನು ಕಡಿಯಲು ಹೇಳಿಕೆಯನ್ನು ಮಾಡುತ್ತಾನೆ. ಮಾರನೆಯ ದಿನ ಬೆಳಿಗ್ಗೆ ಯಜಮಾನನು ಸ್ನಾನವನ್ನು ಮುಗಿಸಿ, ಹರಿವಾಣದಲ್ಲಿ ಪೂಜಾಸಾಮಗ್ರಿಗಳನ್ನು ತುಂಬಿಕೊಂಡು ನೆಂಟರಿಷ್ಟರೊಡನೆ 'ಗೋವಿಂದಾ' ಎಂದು ಉಗ್ಗಡಿಸುತ್ತ 'ಕವೆ' ಕಡಿಯಲು ಹೊರಡುತ್ತಾನೆ.

ಬೆಟ್ಟಕ್ಕೆ ಹೋಗಿ, ಮೊದಲನೆ ದಿನ ನೋಡಿ ಬಂದ 'ಕವೆ'ಯ ಮರವನ್ನು ಪೂಜಿಸಿ, ಸೇಸಕ್ಕಿ ಹೊಡೆದು, ಮರಕ್ಕೆ ಕೈ ಮುಗಿದು, ಯಜಮಾನನು ಮರದ ಬುಡದಿಂದಲೇ ಹೊರಟ ಎರಡು ಕವೆಗಳಲ್ಲಿ ಒಂದನ್ನು ಬಿಟ್ಟು, ಇನ್ನೊಂದನ್ನು ಕಡಿಯುತ್ತಾನೆ. ವೃಕ್ಷ ನಾಶವಾಗಕೂಡದು; ಅದರ ಇನ್ನೊಂದು ಕವೆ ಕವಲಾಗಿ ಒಡೆದು ವೃಕ್ಷ ವೃದ್ಧಿಯಾಗಬೇಕು, ಎನ್ನುವ ಘನ ಉದ್ದೇಶವನ್ನಿಟ್ಟುಕೊಂಡು ಹೀಗೆ ವರ್ತಿಸುತ್ತಾರೆ. ಜಾನಪದದ ಪರಿಸರ ಸಂರಕ್ಷಣೆಯ ಈ ಪ್ರಜ್ಞೆ ಇಂದಿನ ವೃಕ್ಷಭಕ್ಷಕರಿಗಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು! ಯಜಮಾನ ಮುಹೂರ್ತದ ಕವೆ ಕಡಿಯುವಾಗ ಉಳಿದವರು ಹರಿದಿನ ಚಪ್ಪರಕ್ಕೆ ಬೇಕಾಗುವ ಇನ್ನಿತರ ಕವೆಗಳನ್ನು ಕಡಿದುಕೊಂಡು, ಕವೆಯ ಹೊರೆಯನ್ನು ಹೊತ್ತು, ಎಲ್ಲರೂ 'ಗೋವಿಂದಾ' ಎಂದು ಕೂಗುತ್ತ ಮನೆಗೆ ಬರುತ್ತಾರೆ. ಕವೆ ಹೊತ್ತು ತಂದವರಿಗೆಲ್ಲ ಹರಿದಿನ ಮಾಡುವ

ಯಜಮಾನ ಅನ್ನ ಪಾಯಾಸಾದಿಗಳನ್ನು ಮಾಡಿ ಉಣಬಡಿಸಬೇಕು. ಚಪ್ಪರಕ್ಕೆ ಬೇಕಾಗುವ ಕವೆಕಂಬಗಳನ್ನೆಲ್ಲ ಒಂದೇ ದಿನ ತರಲಾಗದು. ಬೇರೆ ಬೇರೆ ದಿನಗಳಲ್ಲಿ ಹೋಗಿ ತರಬೇಕಾಗುತ್ತದೆ. ಹೀಗೆ ಹರಿದಿನ ಚಪ್ಪರ ಕಂಬಗಳನ್ನು ತಂದವರಿಗಾಗಲಿ, ಹರಿದಿನಕ್ಕೆ ಬೇಕಾಗುವ ಸೌದೆಗಳನ್ನು ತಂದವರಿಗಾಗಲಿ, ಅಂತೆಯೇ ಹರಿದಿನದ ಇನ್ನಿತರ ಕೆಲಸ ಮಾಡಿದವರಿಗಾಗಲೀ ಸಂಬಳವಿಲ್ಲ. ಅವರೆಲ್ಲ ಕಂಬಳಕ್ಕೆ ದುಡಿಯಬೇಕು. ಈ ಕೆಲಸಗಳೆಲ್ಲ ಹರಿಭಕ್ತಿಗಾಗಿ ಮಾಡುವ ಶ್ರಮದಾನಗಳು. ಈ ಹರಿದಿನ ಕಾರ್ಯ ಮಾಡುವವರಿಗೆ ನೆರವಾಗುವುದೂ ಹರಿಸೇವೆಯೆಂದೇ ಇವರೆಲ್ಲರ ನಂಬಿಕೆ.

(ಇ.) **ಸಾಮಾನು ಕೂಡಿಕೆ :** ಹರಿದಿನಕ್ಕೆ ಬೇಕಾಗುವ ಬಾಳೆಯ ಎಲೆ, ಬಾಳೆಹಣ್ಣು, ತೆಂಗಿನಕಾಯಿ, ಅಡಿಕೆ, ವೀಳ್ಯದೆಲೆ ಮುಂತಾದವುಗಳನ್ನೆಲ್ಲ ಹರಿದಿನ ಮಾಡುವ ಯಜಮಾನ ಬೇರೆ ಬೇರೆ ಊರುಗಳಿಂದ ತರಿಸಿಕೊಳ್ಳಬೇಕಾಗುತ್ತದೆ:

ಬಾಳೂರಿಗ್ವೊಲೀಯಾ ಬ್ಯಾಗಾದಲ್ ಬರದಾನೇ
ಬಾಳೆಲಿ ಸಯ್ತಾಗೇ ಬರಲಂದೇ। ಮಾವ್ವೋಜೆ
ಸ್ವೊಮಿ ಗೋವಿಂದ್ನಾ ಹರದನ್ಕೇ।
ಮಂಗ್ಳೂರೀಗ್ವೊಲೀಯಾ ಬ್ಯಾಗಾದಲ್ ಬರದಾನೇ
ಕಾಯಿ ಹಣ್ಣೆಲ್ಲಾ ಬರಲಂದೇ। ಮಾವ್ವೋಜೇ
ಸ್ವೊಮಿ ಗೋವಿಂದ್ನಾ ಹರದನ್ಕೇ॥

(ಈ.) **ಚಪ್ಪರ ಹಾಕುವುದು:** ಹರಿದಿನಕ್ಕೆ ಬೇಕಾಗುವ ಸಕಲ ಸಾಮಗ್ರಿಯನ್ನು ಕೂಡಿಸಿಕೊಂಡು ಯಜಮಾನ ಹರಿದಿನದ ಚಪ್ಪರವನ್ನು ತಯಾರಿಸುತ್ತಾನೆ.

ಅಣ್ಣದೀರೆಲ್ಲಾ ಎಣ್ಣೀಯನ್ನಾವುಂಡೇ
ಹೊನ್ನೀಯಾ ನಾಡಾ ಹೊಲಕ್ಹೋಗೆ। ಕಡುವಾರೇ
ಗೋಕು ಚಂದನದ ಹಲಗೀಯ।
ಹಲಗೀ ಕಡುವಾರೇ ಹಲವಂಗ ತಿದ್ದೂವಾಗೇ
ಸ್ವೊಮಿ ಗೋವಿಂದ್ನಾ ಹಂದರಾಕೇ। ಅಣ್ಣಯ್ನಾ
ಉಪ್ಪರ್ಗಿ ಮನಿಗೇ ಅಳತೀಯೇ।
ತಮ್ಮಾದೀರೆಲ್ಲಾ ತುಪ್ಪನ್ನಾವುಂಡೇ
ಗುತ್ತೀಯಾ ನಾಡಾ ಹೊಲಕ್ಹೋಗೇ। ಕಡುವಾರೇ
ಹೊನ್ನೀಯಾ ಮರನಾ ಕವಿಕಂಬಾ। ಕಡದೇ ಕಂಡೇ
ಗೆಯ್ದಾರೇ ಸುಂಗಾರ್ದಾ ಚಪ್ಪರ್ವಾ

(ಉ.) **ಹೋಮ:** ಯಜಮಾನನು ಅಂಗಳಕ್ಕೆ ಚಪ್ಪರವನ್ನು ಹಾಕಿಸಿ ಪುರೋಹಿತನ

ಮನೆಗೆ ಹೋಗಿ, ಒಳ್ಳೆಯ ಮುಹೂರ್ತವನ್ನು ನೋಡಿ ಹರಿದಿನದ 'ಹೋಮ' ನಿಶ್ಚಯಿಸುತ್ತಾನೆ. ಹರಿದಿನದ ಹೋಮ ಮಾಡಿ ಆ ದಿನವೇ ಹರಿದಿನವನ್ನು ಮಾಡುವ ದಿನವನ್ನು ನಿಶ್ಚಯಿಸಿತ್ತಾನೆ. ಹರಿದಿನವನ್ನು ಸಾಮಾನ್ಯವಾಗಿ ಹೋಮ ಹಾಕಿದ ೫, ೭, ಇಲ್ಲವೆ ೯ನೆಯ ದಿನಕ್ಕೆ ನಿಶ್ಚಯಿಸುತ್ತಾರೆ. ಹೋಮದ ದಿನ ಪುರೋಹಿತರು ಯಜಮಾನ, ಯಜಮಾನತಿಯರಿಗೆ ಕಂಕಣ ಕಟ್ಟುತ್ತಾರೆ. ಅಂದಿನಿಂದ ಅವರು ದೀಕ್ಷಾ ಬದ್ಧರಾಗಿ, ಮಾಂಸಾಹಾರವನ್ನು ತ್ಯಾಜಿಸಿ ಹರಿನಾಮಸ್ಮರಣೆಯನ್ನು ಮಾಡುತ್ತ ಕಾಲಹರಣ ಮಾಡುತ್ತಾರೆ. ಹೋಮ ಹಾಕಿದ ದಿನದಿಂದ ಹರಿದಿನದವರೆಗೂ ಹಗಲೂ ಮತ್ತು ರಾತ್ರಿ ಎರಡೂ ಹೊತ್ತು ತುಲಸಿ ಮನೆಯಲ್ಲಿ ವೆಂಕಟರಮಣನ ಪೂಜೆ ನಡೆಯುತ್ತದೆ. ಪೂಜೆಯಾದ ಮೇಲೆ ಊರವರಿಗೆಲ್ಲ ಪ್ರತಿನಿತ್ಯ ಊಟ.

ಹೇಳಿಕೆ: ಹೋಮದ ಪ್ರಸಾದ ಕಡಿಯನ್ನೂ, ತುಲಸೀಮಾಲೆಯನ್ನೂ ತೆಗೆದುಕೊಂಡು ಯಜಮಾನನ ಕಡೆಯವರು ಹರಿದಿನದ ಹೇಳಿಕೆಗೆ ಹೊರಡುತ್ತಾರೆ. ಮೂರು ಮಾಲೆಯ ಹರಿದಿನವಾದರೆ, ನಾಡವರು ವಾಸಿಸುವ ಅಂಕೋಲಾ, ಮಿರ್ಜಾನ, ಚಂದಾವರ ಈ ಮೂರೂ ಸೀಮೆಗಳಿಗೆ ಹೇಳಿಕೆ ಮುಟ್ಟಲೇಬೇಕು. ಹರಿದಿನದಲ್ಲಿ ಒಂದು, ಎರಡು, ಮೂರು ಮಾಲೆಯ ಹರಿದಿನಗಳಿರುತ್ತವೆ. ಒಂದು ಮಾಲೆಯ ಹರಿದಿನವಾದರೆ ಒಂದು ಸೀಮೆಗೆ, ಎರಡು ಮಾಲೆಯ ಹರಿದಿನವಾದರೆ ಎರಡು ಸೀಮೆಗೆ, ಮೂರು ಮಾಲೆಯ ಹರಿದಿನವಾದರೆ ಮೂರು ಸೀಮೆಗೆ ಹೇಳಿಕೆ ಮಾಡಬೇಕಾಗುತ್ತದೆ. ಮೊಟ್ಟಮೊದಲು ಗಾಂವಕಾರನಿಗೆ ಹೇಳಿಕೆ ಮಾಡಿ, ಪ್ರಸಾದ ಕಡಿಯನ್ನು ಕೊಡುತ್ತಾರೆ. ಆಯಾ ಊರಿನ ಗಾಂವಕಾರರು ತಮ್ಮ ತಮ್ಮ ಊರಿಗೆ ಹೇಳಿಕೆ ಮುಟ್ಟುವಂತೆ ಏರ್ಪಾಡು ಮಾಡುತ್ತಾರೆ. ಹರಿದಿನದ ಹೇಳಿಕೆಗೆ ಹೋದವರಿಗೆ ಗಾಂವಕಾರರು ಸಿಹಿಯೂಟ ಹಾಕಬೇಕು. ಹೇಳಿಕೆಗೆ ಹೊರಟವರು ನಾಲ್ಕೈದು ದಿನಗಳಲ್ಲಿ ಹೇಳಿಕೆ ಮುಗಿಸಿ ಮನೆಗೆ ಹಿಂತಿರುಗುತ್ತಾರೆ.

(ಊ.) ಕೆಲಸದ ಹಂಚಿಕೆ: ಹರಿದಿನದ ಮೊದಲನೆಯ ದಿನ ಪ್ರತಿಯೊಬ್ಬ ಗಾಂವಕಾರರು ತಮ್ಮ ತಮ್ಮ ಊರುಗಳಿಂದ ಇಪ್ಪತ್ತು ಇಪ್ಪತ್ತೈದು ಜನರನ್ನು ಹರಿದಿನದ ಕೆಲಸಕ್ಕೆ ನೆರವು ನೀಡಲು ಕರೆದುಕೊಂಡು ಬರುತ್ತಾರೆ. ಬಂದ ಜನರೆಲ್ಲರೂ ಒಟ್ಟಿಗೆ ಸೇರಿ, ಯಾವ ಯಾವ ಊರಿನ ಜನರು ಯಾವ ಯಾವ ಕೆಲಸ ಮಾಡಬೇಕೆಂಬುದನ್ನು ನಿಶ್ಚಯಿಸುತ್ತಾರೆ. ಈ ಮಾತುಕತೆ ಮುಗಿದಮೇಲೆ ಮಧ್ಯರಾತ್ರಿಯ ಸುಮಾರಿಗೆ ದೇವರ ಪೂಜೆಯಾಗುತ್ತದೆ.

ಹರಿದಿನದ ಕೆಲಸಕ್ಕಾಗಿ ಬಂದ ಜನರೆಲ್ಲರೂ ಬೆಳಿಗ್ಗೆದ್ದು ಸ್ನಾನಮಾಡಿ ಮಡಿಯುಟ್ಟು ಹರಿದಿನದ ಅಡಿಗೆಯನ್ನು ತಯಾರಿಸುತ್ತಾರೆ.

ಕುಂಬಳಾ ಕಾಯ್ ಕಡುವಾಗೇ ಸಂಬಾರಾ ಅರುವಾಗೇ
ಮಯ್ಯೊಳ್ಗಿ ಬಿಟ್ಟೇ ಮಡಿಯುಟ್ಟೇ। ಮಾಡುವಾರೇ
ಸ್ವೊಮಿ ಗೋವಿಂದ್ನ ಹರದೇನಾ।

ಬಣ್ಣದ ಬಯ್ಲೀ ಕಾಯೇ ಸೆಣ್ಣಕಿ ಮೈಗರಾ
ಎಣ್ಣೀಯಲ್ ತುಪ್ಪ ಎರದುಪ್ಪಾ। ಮೇಲೂಗಿರಿಯಾ
ದಾಸಾರ್ಥೇಳಕಿಯಾ ಹರದೇನಾ॥

ಹರಿದಿನದ ಅಡಿಗೆಯ ತಯಾರಿಯನ್ನು ಗರತಿ ಎದೆದುಂಬಿ ಹಾಡಿದ್ದಾಳೆ. ಹರಿದಿನ ಮಾಡುವ ಯಜಮಾನ ಬಡವ, ಶ್ರೀಮಂತ ಯಾರೇ ಆಗಿರಲಿ ಆತ ಕನಿಷ್ಠ ಒಂದು ಕಾಡಿ ಅಕ್ಕಿಯ ಅನ್ನ, ನಲ್ವತ್ತು ಹಂಡಿ ಪಾಯಸ, ಇಪ್ಪತ್ತು ಹಂಡಿ ಹುಳ್ಗ (ಕುದೀಲಾ) ಮಾಡಲಿಕ್ಕೇಬೇಕು.

ಕೆಲಸಕ್ಕೆ ಬಂದವರಲ್ಲಿ ಕೆಲವರು ತಳಿರು ತೋರಣಗಳಿಂದ ಚಪ್ಪರವನ್ನು ಸಿಂಗರಿಸುತ್ತಾರೆ. ಹೆಂಗಸರು ಪಾತ್ರೆ ಪಗಡೆಗಳನ್ನು ಬೆಳಗಿ, ಚಪ್ಪರವನ್ನು ಸಾರಿಸಿ, ರಂಗವಲ್ಲಿ ಹಾಕುತ್ತಾರೆ:

ಚಪ್ಪರಾ ಸಾರೀಸೇ ನಿಸ್ತ್ರೇರ್ ಚಿತ್ತರ ಬರದೇ
ಅಂಬಾಣ್ದ ಗಿಳಿಯೇ ನಲದಾವೇ। ಗೋವಿಂದನ
ತಾಯೇ ಬಂತ್ ನಮ್ಮಾ ಮನಿಯಲ್ಲೇ।

ಹಾಡುಗಾರ್ತಿಯರು ಗೋವಿಂದನ ತಂದೆ ತಾಯಿಯರನ್ನೂ ಹರಿದಿನಕ್ಕಾಗಿ ಬರಮಾಡಿಕೊಳ್ಳುತ್ತಾರೆ.

(ಎ.) **ಹರಿಭಕ್ತರ ಆಗಮನ:** ಹರಿದಿನದ ಸಮಾರಂಭಕ್ಕೆ ತಿರುಪತಿ ಯಾತ್ರೆ ಮಾಡಿದ ಅನೇಕ ಹರಿದಾಸರು ಬರುತ್ತಾರೆ. ಇವರಿಗೆ ಹರಿದಿನದಲ್ಲಿ ವಿಶೇಷ ಗೌರವವಿದೆ.

ಮುತ್ನ ಮುಡಿ ದಾಸಾರ ಎತ್ತಗಿಂದೆಳದಾರೇ
ಕೊಚ್ಚಕ್ಕೀವರ್ನಾ ಕೊರಿವರ್ನಾ। ದಾಸಾರ
ಎತ್ತನಾಡ ಗಿರಿಯಾ ಎಳದಾರೇ।
ದೇಸ ದೇಸಾ ತಿರ್ಗೀ ದಾಸರ ಬತ್ತರಂದೇ
ಹಾಸಗಿ ಹಾಸರೇ ಜಿಗಲೀಗೆ। ಮೇಲುಗಿರಿಯಾ
ದಾಸರ ಬಂದರ ತುಳಚೀಗೇ॥

ಮನೆಗೆ ಬಂದ ಹರಿದಾಸರನ್ನು ಮನೆಯ ಯಜಮಾನ ಸ್ವಾಗತಿಸುತ್ತಾನೆ:

ಸಾಲಿ ಜೋತಾರಿಕ್ಕೇ ಪಟ್ಟೇಯಾ ಹೊದ್ದಾನೇ
ದೊಡ್ಡ ಬಾಳೆಲಿಯಾ ಬಿಡಸಾಸೇ। ಅಪ್ಪೋಜೇ
ಹರಗೋಳ ಸಿರಿಪಾದಾ ತೊಳದಾನೇ।
ಪಾದಾವಾ ತೊಳದಾನೇ ಪಾವುಡದಲ್ಲುದ್ದಾನೇ
ಹರಗೋಳ ತಂದ ತುಳಚೀಗೇ॥

ದಾಸರ ಪಾದಗಳನ್ನು ತೊಳೆದು ತುಲಸಿಯೆಡೆಗೆ ತರುತ್ತಾನೆ. ಆ ಮೇಲೆ

ಯಜಮಾನನು ಹರಿದಿನಕ್ಕೆ ಆಗಮಿಸಿದ ಬ್ರಾಹ್ಮಣರಿಗೆ ಹಾಲು, ಹಣ್ಣು, ದಕ್ಷಿಣೆಕೊಟ್ಟು ವಂದಿಸಿ ಅವರನ್ನು ಕಳಿಸುತ್ತಾನೆ. ಈಗಾಗಲೇ ಸುತ್ತು ಮುತ್ತಲಿಂದ ಹರಿದಿನಕ್ಕಾಗಮಿಸಿದ ಜನರು ಕಿಕ್ಕಿರಿದು ಚಪ್ಪರದಲ್ಲಿ ತುಂಬಿರುತ್ತಾರೆ.

(ಏ.) ಬಹಿರಂಗ ಸಭೆ–ನ್ಯಾಯ ನಿಖಾಲೆ: ಅಡಿಗೆಯ ಕೆಲಸ ಮುಗಿದ ಮೇಲೆ ಸುಮಾರು ಹನ್ನೆರಡು ಗಂಟೆಯ ವೇಳೆ, 'ಗೋಳಿಕಟ್ಟೆ' ಬಯಲಲ್ಲಿ ಬಹಿರಂಗ ಅಧಿವೇಶನ. ಗೋಳಿಕಟ್ಟೆಯ ಮೇಲೆ ಸೀಮಾ ಗಾಂವಕರರಾದಿಯಾಗಿ ಎಲ್ಲ ಗಾಂವಕಾರರು, ಊರಿನ ಪ್ರಮುಖ ವ್ಯಕ್ತಿಗಳು ಕುಳಿತಿರುತ್ತಾರೆ. ಜನರೆಲ್ಲ ಕೆಳಗೆ ಬೈಲಲ್ಲಿ ಕುಳಿತಿರುತ್ತಾರೆ. ಆಗ ಜಾತಿಯ ಸರ್ವಾಂಗೀಣ ಪ್ರಗತಿಯ ಕುರಿತು ಚರ್ಚೆ ನಡೆಯುವುದರ ಜೊತೆಗೇ ಜಾತಿಯ ಜನರಲ್ಲಿ ನಡೆದ ತಂಟೆ–ತಕರಾರುಗಳ ಚರ್ಚೆಯೂ ನಡೆಯುತ್ತದೆ. ಅನ್ಯಾಯವಾಗಿ ಯಾರನ್ನಾದರೂ ನೀತಿ ಬಾಹಿರರೆಂದು ಜಾತಿಯಿಂದ ಹೊರಗೆ ಹಾಕಿದ್ದಿದ್ದಲ್ಲಿ, ಅವರನ್ನು ವಿಚಾರಣೆಗೆ ಗುರಿಪಡಿಸಿ, ಅವರು ನಿರಪರಾಧಿಗಳೆಂಬುದು ಚರ್ಚೆಯಲ್ಲಿ ಸಾಭೀತಾದರೆ ಅವರನ್ನು ಪುನಃ ಜಾತಿಯ ಒಳಗೆ ತೆಗೆದುಕೊಂಡು ಅವರೊಡನೆ ಸಪಂಕ್ತಿ ಭೋಜನವನ್ನು ಮಾಡುತ್ತಾರೆ. ನಿರಪರಾಧಿಗಳೆಂದು ಸಿದ್ಧವಾಗದಿದ್ದಲ್ಲಿ, ಅವರನ್ನು ಜಾತಿಯಿಂದ ಹೊರಗಿಟ್ಟು, ಸಪಂಕ್ತಿಯಲ್ಲಿ ಎಡೆಗೊಡದೆ, ಜಾತಿಯವರ ಊಟವಾದ ಮೇಲೆ, ಇತರ ಜಾತಿಯವರಿಗೆ ಬಡಿಸುವಾಗ ಅವರಿಗೆ ಊಟಕ್ಕೆ ಹಾಕುತ್ತಾರೆ. ಚರ್ಚೆಯ ಕಾಲಕ್ಕೆ, ಕೊನೆಯ ತೀರ್ಮಾನ ಮೂರು ಸೀಮೆಯ ಗಾಂವಕಾರನದು. ಸಣ್ಣ ನ್ಯಾಯಾಲಯದಂತಿದ್ದ ಈ ಗೋಳಿಕಟ್ಟೆಯ ಚರ್ಚೆ ಸುಮಾರು ಮೂರು ಗಂಟೆಯ ಹೊತ್ತಿಗೆ ಮುಗಿಯುತ್ತಿತ್ತು.

(ಐ.) ಪೂಜೆ: ಹರಿದಿನದ ಪೂಜೆಯ ಸಕಲ ಸಿದ್ಧತೆಯನ್ನು ಮಾಡಿಕೊಂಡು ಯಜಮಾನ ಗೋಳಿಕಟ್ಟೆಯೆಡೆ ಪೂಜೆಯ ಸಿದ್ಧತೆಯಾದ ಸುದ್ದಿಯನ್ನು ಮುಟ್ಟಿಸುತ್ತಾನೆ. ಆಗ ಎಲ್ಲರೂ ಅಲಂಕೃತ ಹರಿದಿನದ ಚಪ್ಪರದಲ್ಲಿ ನೆರೆಯುತ್ತಾರೆ. ಮನೆಯ ಯಜಮಾನ ದೇವರನ್ನು ಹೂಮಾಲೆ, ತುಳಸೀ ಮಾಲೆಯಿಂದ ಅಲಂಕರಿಸಿ ಪೂಜೆಗೆ ಮೊದಲು ಮಾಡುತ್ತಾನೆ. ಆ ಸಮಯದಲ್ಲಿ ಊರಗರತಿಯರು ಹರಿದಿನದ ಹಾಡನ್ನು ತಮ್ಮ ಮಂಜುಳ ಕಂಠದಿಂದ ಹಾಡುತ್ತಾರೆ.

ಅಂಗಾಳಾ ಮುಂದೀನ ರಂಬೇ ತುಳಚಮ್ಮಗೇ
ಹೊತ್ತೂರಿಗ್ ನೆಣಿಯಾ ಬಿಳಗೂವೆ। ತುಳಚಮ್ಮನಾ
ಉಚ್ಚಯದ ಹಾಡಾ ತೊಡಗೂವೇ।
ಇಟ್ಪೋತೀಗ್ ನನುವಾನೇ ದುಟ್ಟುತಿಗಾರನಾ
ಎಪ್ಪತ್ತು ನಾಮಾದಾ ಒಡಿಯಾನಾ। ಗೋವಿಂದಾನಾ
ಇಟ್ಪೋತಿಗ್ರ್ ಸ್ಯೆವಿಕರ ನನುವಾರೇ।

ಬಲಗುಂಬೇ ಬಲಗುಂಬೇ ಉಲದೇ ಬರುವಾತಾನಾ
ಹರಿಯೇ ಗೋವಿಂದ್ನಾ ಮಡದೀಯಾ। ತುಳಚಮ್ಮನಾ
ಇಟ್ಟೋತಿಗು ಸೈವಿಕರ ನನುವಾರೇ॥

ನಾಡಗಿತ್ತಿಯ ಹೃದಯ ಗಂಹರದಿಂದ ಮತ್ತೂ ಮತ್ತೂ ಭಕ್ತಿಯ ಸೆಲೆ ಚಿಮ್ಮಿ ಚಿಮ್ಮಿ ಉಕ್ಕುಂದವಾಗಿ ಹರಿಯುತ್ತದೆ:

ಹರಳೂ ಗಲ್ ತುಳಚೀಗೆ ಹದಿನಾರು ಬಾಗೀಲ
ಹರಳೂಗಲ್ಲುಂಟು ನಿರಳುಂಟು। ಗೋವಿಂದನ
ಸೈವೀಕರುಂಟು ಬುಡನಲ್ಲೇ॥
ನಾಕೂ ಮೋಲಿಗೆ ನಾಕು ದೇಪದ ಕಂಬೇ
ನಾಲ್ವರು ಗೆಯ್ದಾ ತುಳಚೀಯೇ।ಯ। ಕಟ್ಟೀಮೈನೆ
ಸ್ವೊಮಿ ಗೋವಿಂದ್ನಾ ಹರದೇನಾ।
ಗುತ್ತೀಲಿಂದ್ ಬರುವೇಳಿ ಇಪ್ಪತ್ತು ಜೋಡ್ಡಣತೂಗಿ
ತುಪ್ಪಾ ಸಾಲದಕೇ ನೆಣೆಸಾಲ। ಗೋವಿಂದನಾ
ಸತ್ತೀದಲ್ಲುರಿಲೇ ಜಗಜೋತೆ।
ಗ್ವೊವೀಲಿಂದ್ ಬರಲೇ ನಾಲ್ವತ್ತು ಜೋಡ್ಡಣತೂಗಿ
ಎಣ್ಣೀ ಸಾಲದಕೇ ನೆಣಿಸಾಲ। ತುಳಚಮ್ಮಾನಾ
ಸತ್ತಿದಲ್ಲೂರಿಲೇ ಜಗಜೋತೆ।
ಹಾಲಲಬಸೇಕಾವಾಗಲೆ ತುಳಚಮ್ಮಾಗೇ
ಸಾಲಿ ಹಚ್ಚಡದಾ ಮರಿಯಲ್ಲೇ। ರಂಗಾ ಪೋಜ್ಯಾ
ಅಗಲ್ ತುಳಚಮ್ಮಾ ಬುಡದಲ್ಲೇ॥
ತುಪ್ಪಾದಲ್ಲಬಸೇಕಾವಾಗಲೇ ತುಳಚಮ್ಮಾಗೇ
ಪಟ್ಟೀಹಚ್ಚಡದಾ ಮರಿಯಲ್ಲೇ। ರಂಗಾ ಪೋಜ್ಯಾ
ಆಗಲ್ ತುಳಚಮ್ನ ಪುರದಲ್ಲೇ।
ಸಾಲೀ ಸೇರ್ಧೀಯಾ ತೋಳ್ಟುಯ್ದೇ ಉಡ್ಸೂವಾರೇ
ದಾಳಿಂಬದ್ದೂಂವಾ ಮುಡ್ಸೂವರ। ಗಿರಿಯಾ ಮೈನನಾ
ಸಾಲೀ ತಂದರೇ ತುಳಚೀಗೆ।
ಪಟ್ಟೀ ಸೇರಿಯಾ ತುಂಡ್ಟುಯ್ದೇ ಉಡ್ಸೂವಾರೇ
ಮಂಡ್ಲೀಕನ್ಹೂಂವ ಮುಡ್ಸೂವರ। ಗಿರಿಯಾ ಮೈನನಾ

ಪಟ್ಟೀ ತಂದರೇ ತುಳಚೀಗೇ॥
ಮುಟ್ಟೀ ತುಂಬಿದ ಚಿನ್ನ ಪಿಟ್ಟೂಗಿ ತುಂಬಿದ ಪಟ್ಟೆ
ಸ್ವೊಮೀ ಗೊಯ್ಡರಾಯ್ರ ಕಳಗರ। ಏನಂದೇ
ಚಂದಕೇ ತುಳಚಮ್ಮ ಒಡಲಂದೇ॥
ಹರಿಯಾಳಾ ತುಂಬೀದಾ ಹರಳೂ ಕೂಕುಮವಾ
ಸ್ವೊಮೀ ತಿಮ್ಮಪ್ಪ ಕಳಗೀನೇ। ಏನಂದೇ
ಅರ್ತೀಗೇ ತುಳಚಮ್ಮ ಎಡಲಂದೇ॥
ಗಂದಟ್ಟಾ ತುಂಬೀದಾ ಗಂದಾ ಸಿರಿಗಂದಾವಾ
ಒಡಿಯಾ ಗೋವಿಂದ ಕಳಗೀಯಾ। ಏನಂದೇ
ಚೆಂದಕೇ ತುಳಚಮ್ಮಾ ಎಡಲಂದೇ॥
ಆಕಾಸ್ದಮ್ಯೆನೇ ಇರಳೀತೇ ಹಿಂಗಾರಾ
ಲೋಕಕ್ ಪರಮಾಳಾ ಇಸುವಾದೇ। ಹಿಂಗಾರ್ದಾ
ಕೊನಿಯಾ ತಂದಾರೇ ತುಳಚೀಗೇ॥
ಆಕಾಸ್ದಮ್ಯೆನೇ ಬೀಸಾಡೇ ಬಿಳುವಾದೇ
ದೇಶಕೆ ಪರಮಾಳಾ ಇಸುವಾದೇ। ಕ್ಯೆಂದೂಗಿ
ಕೊನಿಯಾ ಉಡ್ಯಾರೇ ತುಳಚೀಗೆ॥
ದಂಡೀಯಾ ಕಟ್ಟುವಾ ಬಂಡಾರಿ ಬರುವೇಳ
ದುಂಡೂ ಮಲ್ಲಗಿಯಾ ಹೊಸದಂಡಿ। ತಕ್ಕಂಡೇ
ದಂಡೀಕಟ್ಯಾರೇ ಒಡಿಯಾಗೇ॥
ಪೋಜೀಯಾ ಕಟ್ಟೂವಾ ಪೋಜೇರಿ ಬರುವೇಳಿ
ಜೂಂಜಿ ಮಲ್ಲುಗಿಯಾ ಹೊಸದಂಡಿ। ತಕ್ಕಂಡೇ
ಪೋಜಿ ಕಟ್ಯಾರೇ ಒಡಿಯಾಗೇ।
ಆಕಾಸ್ದಮ್ಯೆನೇಗೇ ದೋಪದಾ ಹೊಗತುಂಬೇ
ಆಕೇ ತುಳಚಮ್ಗೇ ಸಿವಪೋಜ್ಯ। ಗಿಯ್ವಾಗೇ
ಆಕಾಸ್ದ ಸೆರಗಂಟೇ ಗಣಿಲಂದು।
ಅಂಬಾರ್ದ ಮ್ಯೆನೇಗೇ ಗಂದಾದಾ ಹೊಗತುಂಬೇ
ರಂಬೇ ತುಳಚಮ್ಗೇ ಸಿವಪೋಜ್ಯ ಗುಂಬಾಗೇ
ಚಿನ್ನದಾ ಸೆರಗಂಟೇ ನುಡದಾವೇ॥
ಉಂದುಂದು ಮುತ್ತ ನಿಂಬೀತ್ವೊರದ ಮುತ್ತ

ಕಂಡರ ತುಳಚಮ್ನ ಕೊರಳಲ್ಲೇ। ಎದ್ದಾ ಮುತ್ತ
ಬಂದೇ ನೆಂತಪ್ರೀಗ್ಹುಳುವದ।
ಆಕಯ್ಲೇ ಆರೂತೇ ಈ ಕಯ್ಲೇ ಮೂರೂತೇ
ದಾಸಯ್ಯಾ ಕದವಾ ತಿಗಿಬ್ಯೆಗ। ತುಳಚಮ್ಮಾಗೇ
ದೋಪಾದಾರತಿಯಾ ಬಿಳಗೂವೇ॥

ಹರಿದಿನದಲ್ಲಿ ಮಾಡುವ ತುಲಸಿ ಪೂಜೆಯ ಸಿರಿ ಸಂಪದವನ್ನು ಹಾಡುಗಾರ್ತಿಯರು ತನ್ಮಯತೆಯಿಂದ ಹಾಡುವಾಗ ಹರಿಭಕ್ತಿ ಹೊನಲು ಸುತ್ತೆಲ್ಲ ಸೂಸಾಡುವುದು. ಯಜಮಾನನು ದೇವರ ಪೂಜೆಯನ್ನು ಮಾಡಿ, ಐದು ತೆಂಗಿನಕಾಯಿಗಳನ್ನು ಒಡೆದಾದ ಮೇಲೆ ಪ್ರತಿಯೊಂದು ಊರಿನ ಹೆಸರಿನಲ್ಲಿ ಕಾಯೊಡೆಯಲು ಯಜಮಾನ, ಊರ ಗಾಂವಕಾರರನ್ನು ಕರೆಯುತ್ತಾನೆ. ಊರಿನ ಹೆಸರಿನಲ್ಲಿ ಕಾಯೊಡೆದಾದ ಮೇಲೆ ಪೂಜೆ ಮುಗಿದು ಎಲ್ಲರಿಗೂ ಪ್ರಸಾದ ವಿತರಣೆಯಾಗುತ್ತದೆ.

(ಒ.) ಊಟ : ಸುಮಾರು ನಾಲ್ಕು ಗಂಟೆಗೆ ಊಟದ ಏರ್ಪಾಡಾಗುತ್ತದೆ. ಮೊದಲು ಜಾತಿಯವರ ಊಟ, ಆ ಮೇಲೆ ಪರಜಾತಿಯವರಿಗೆ ಊಟ ಹಾಕಲಾಗುತ್ತದೆ. ಊಟವಾದ ಮೇಲೆ ಗಾಂವಕಾರರು ಹಾಗೂ ಇನ್ನಿತರ ಗಣ್ಯವ್ಯಕ್ತಿಗಳಿಗೆ ಹರಿದಿನದ ಪ್ರಸಾದ ಕಡಿಯನ್ನು ಹಂಚುತ್ತಾರೆ.

(ಓ.) ಕಿರಿಹರಿದಿನ : ಮಾರನೆಯ ದಿನ ಕಿರಿಹರಿದಿನ; ಅಂದು ಯಜಮಾನನ ಸಮೀಪದ ಸಂಬಂಧಿಕರು, ಗಾಂವ್ಕಾರರು ಹಾಗೂ ಇನ್ನಿತರ ಪ್ರತಿಷ್ಠಿತ ವ್ಯಕ್ತಿಗಳು ಮಾತ್ರ ಉಳಿಯುತ್ತಾರೆ. ಹರಿದಿನದಂದು ಗೋಳಿಕಟ್ಟೆಯ ಸಭೆಯಲ್ಲಿ ನಡೆದ ಚರ್ಚೆ ಕೊನೆಗೊಂಡಿರದಿದ್ದಲ್ಲಿ ಅಂದು ಚರ್ಚಿಸಿ ತೀರ್ಮಾನಕ್ಕೆ ಬರುತ್ತಾರೆ. ಅಂದೂ ಸುಮಾರು ಹತ್ತು ಖಂಡುಗ ಅಕ್ಕಿಯನ್ನು ಅಡಿಗೆ ಮಾಡಬೇಕು. ಕಿರಿಹರಿದಿನದ ಮಾರನೆಯ ದಿನ ಯಜಮಾನ ಗೌಲು ತಿನ್ನಬಹುದು.

(ಔ.) ಹರಿದಿನ ಖರ್ಚು: ಹರಿದಿನದ ಕಾರ್ಯ ಪೂರ್ತಿಗೆ ಬೇಕಾಗುವ ಅಕ್ಕಿ ಕಾಯಿಗಳ ವಿವರಣೆಯನ್ನು ಹಾಡುಗಾರ್ತಿಯರ ಬಾಯಿಂದಲೇ ಕೇಳಿ:

ಹತ್ತೂ ಕಾಡಕ್ಕೀಯೇ ಹತ್ತೂ ಸಾವರಕಾಯ
ಅಪ್ಪಯ್ಯಾ ಮಾಡೀದ ಹರದೇನಾ।ಸ್ದು। ಓಟಾವುಂಡೇ
ತುಪ್ಪಾದಲ್ ಬಾಯ ತೊಳದಾರೇ॥
ಆರೂ ಕಾಡಕ್ಕೀಯೇ ಆರೂ ಸಾವರಕಾಯ
ಮಾವಯ್ಯಾ ಮಾಡೀದ ಹರದೇನಾ।ನ್ದು। ಓಟಾವುಂಡೇ
ಹಾಲಲ್ಲೇ ಬಾಯಾ ತೊಳದಾರೇ।

ಹರಿದಿನದ ತಯಾರಿಯಿಂದ ಹಿಡಿದು ಹರಿದಿನ ಮುಗಿಯುವವರೆಗೆ, ಅತಿ ಕಡಿಮೆಯೆಂದರೂ ೬ ಕಾಡಕ್ಕಿ ೬ ಸಾವಿರ ಕಾಯಿ ಖರ್ಚಾಗುತ್ತಿತ್ತಂತೆ. ಮೇಲಿನ ಹಾಡಿನಲ್ಲಿಯ ಹೇಳಿಕೆ ಅತಿರಂಜಿತ ಹೇಳಿಕೆಯಲ್ಲ–ವಸ್ತು ಸ್ಥಿತಿ. ಇಂದಿನ ತುಟ್ಟಿದಿನಮಾನದಲ್ಲಿ ಇದರ ಖರ್ಚಿನ ಲೆಕ್ಕ ಹಾಕಿದರೆ ನಾವು ದಿಗಿಲು ಬೀಳಬಹುದು. ಈ ಹರಿದಿನ ಸಮಾರಂಭವನ್ನು ಹಾಲಕ್ಕಿ ಒಕ್ಕಲು, ನಾಮಧಾರಿಗಳು, ವೈಶ್ಯರು ಹೀಗೆ ಇತರ ಜಾತಿಯವರು ಆಚರಿಸಿದರೂ ಇಷ್ಟು ಅದ್ದೂರಿಯಿಂದ ಆಚರಿಸಿದ ದಾಖಲೆಯಿಲ್ಲ. ಇಂತಹ ಹರಿದಿನವನ್ನು ಆಚರಿಸುವ ವ್ಯಕ್ತಿಯ ಸಾಂಪತ್ತಿಕ ಸ್ಥಿತಿ ಉನ್ನತವಾಗಿದ್ದಲ್ಲಿ ಮಾತ್ರ ಸಾಧ್ಯವೆಂದು ನಮಗನಿಸಿದರೂ, ಬಡವರಾದವರೂ ಈ ಹರಿದಿನವನ್ನಾಚರಿಸಿದ ಉದಾಹರಣೆಗಳಿವೆ. ಈ ಮಹಾಕಾರ್ಯ ಗೋವಿಂದನ ಕೃಪಾಕಟಾಕ್ಷದಿಂದ ಮಾತ್ರ ಸಾಧ್ಯವಾಗುತ್ತದೆ; ಇದನ್ನು ನೆರವೇರಿಸಲಿಕ್ಕೆ ಶ್ರೀಮಂತಿಕೆಯೊಂದರಿಂದಲೇ ಸಾಧ್ಯವಿಲ್ಲ ಎಂಬುದು ಜಾನಪದರ ತಿಳುವಳಿಕೆ.

ದೈವೀಶ್ರದ್ಧೆ ಬುಡಮೇಲಾಗುತ್ತಿರುವ ಇಂದಿನ ವೈಜ್ಞಾನಿಕ ಯುಗದಲ್ಲಿ ಇಂಥ ಹರಿದಿನಗಳು ಹಿಂದಿನ ಧಾರ್ಮಿಕ ಮೌಲ್ಯವನ್ನು ಕಳೆದುಕೊಂಡು ಸೊರಗತೊಡಗಿವೆ. ನಾಡವರಲ್ಲಿ ಹರಿದಿನವು ಇಂದು ಕೇವಲ ನೆನಪಾಗಿ ಮಾತ್ರ ಉಳಿದಿದೆ.

(೧೯೭೦)

* ಆಕರ ಗ್ರಂಥ : ಜಾನಪದ ಮೆಲುಕು – ಡಾ. ಎನ್. ಆರ್. ನಾಯಕ

ನಾಡವರ ಜಾನಪದ ಪತ್ಯ

ಅ. ಜೀವನಾವರ್ತನೆಯ ಹಾಡುಗಳು :

ಪರಿವಿಡಿ	ನಿರೂಪಕರ ಹೆಸರು	ಊರು
೦೧. ಮದುವೆ* :	ದೇವಮ್ಮಾ ರಾಮ ನಾಯಕ	ಭಾವಿಕೇರಿ
	ಬೀರಮ್ಮಾ ನಾಯಕ	ಭಾವಿಕೇರಿ
	ಮಂಕಾಳಿ ನಾಯಕ	ಬೇಲೇಕೇರಿ
	ರಾಕಮ್ಮಾ ನಾಯಕ	ಬೋಳೆ
	ಹೊನ್ನಮ್ಮ ನಾಯಕ	ವಂದಿಗೆ
	ಚಂದ್ರಿ ನಾಯಕ	ವಂದಿಗೆ
	ಸಣ್ಣಮ್ಮ ನಾಯಕ	ವಂದಿಗೆ
	ವೆಂಕು ನಾಯಕ	ಸೂರ್ವೆ
	ಬೊಮ್ಮ ನಾಯಕ	ಹಿರೇಗುತ್ತಿ
	ಬೀರಮ್ಮ ನಾಯಕ	ದೇವರಬಾವಿ
	ದುರ್ಗಿ ನಾಯಕ	ಮಳಲಿ
	ಸರಸಿ ನಾಯಕ	ಅಡ್ಲೂರು
೦೨. ಹೋಮ :	ದೇವಮ್ಮಾ ರಾಮ ನಾಯಕ	ಭಾವಿಕೇರಿ
೦೩. ಬಯಕೆ :	ದೇವಮ್ಮಾ ರಾಮ ನಾಯಕ	ಭಾವಿಕೇರಿ
೦೪. ಬಾಳಂತಿ (ನಾಮಕರಣ)	ದೇವಮ್ಮಾ ರಾಮ ನಾಯಕ	ಭಾವಿಕೇರಿ
೦೫. ಮನೆಯಿರವಣ (ಗೃಹಪ್ರವೇಶ)	ದೇವಮ್ಮಾ ರಾಮ ನಾಯಕ	ಭಾವಿಕೇರಿ

ಸಂಗ್ರಹಣೆಯ ಕಾಲ : ೧೯೫೬ ರಿಂದ ೧೯೭೦

* ಆಕರ ಮೂಲ : ಕೂಸಾಯ್ತು ನಮ್ಮ ಕೊಮಾರಾಗೆ (೧೯೮೩)

ಡಾ. ಎನ್. ಆರ್. ನಾಯಕ

೦೧. ಮದುವೆ

೦೧. ಮದುವೆಯ ನಿಶ್ಚಯ

ಹತ್ತಿಂಟ್‌ದಿನವಿರುವಾಗೇ ಏಚುವಾಳೇ[೧] ಕಾರ್ಯಕೇ
ತುಪ್ಪಾ ಹೊಯ್ದಂಗೇ ಮ–ನಿಮಾಡೇ।ಡೊ। ಲಿಯಾ ಹೂಡೇ
ಏಚುವಳೇ ಮಗನಾ ಮುದವೀಗೇ। ॥೧॥

ಆರೇಳ್ ದಿನವಿರುವಾಗೇ ಉಪ್ಪುವಾಳೇ[೨] ಕಾರ್ಯಕ್ಕೆ
ಎಣ್ಣೇ ಹೊಯ್ದಂಗೇ ಮ–ನಿಮಾಡೇ।ಡೊ। ಲಿಯಾ ಹೂಡೇ
ಉಪ್ಪುವಾಳೇ ಮಗನಾ ಮುದವೀಗೆ। ॥೨॥

ಚಪ್ಪರಿಕ್ಕಿಸಿದ ತುಪ್ಪಕೆ ವರವಾ ಕಳಗೇ
ಅಕ್ಕಾದೀರಯ್ವರೀಗ್ ಬಳಿಕಳಗೇ[೩]। ಮುದಿಯಾ[೪]
ನಿಚ್ಚಯವೇಳು ದಿನದಲ್ಲೇ। ॥೩॥

ಅಂದಾಳಿಕ್ಕಿಸಿದ ಗಂದಕೆ ವರವಾ ಕಳಗೇ
ತಂಗಾದೀರಯ್ವರೀಗ್ ಬಳಿಕಳಗೇ। ಮುದಿಯಾ
ನಿಚ್ಚಯವೇಳು ದಿನದಲ್ಲೇ। ॥೪॥

ಅಕ್ಕನೂರು ಅ–ಗಸೀಯೇ ತಂಗಿಯೂರು ಸಿರಸೀಯೇ
ಚಿಕ್ಕವ್ವಿಯೂರು ಬನವಾಸಿ। ಬಾಲಯ್ಯ
ಎಲ್ಲವ್ರೀಗ್ ವಾಲೀ ಬರವಾನೆ[೫]। ॥೫॥

ಅಂಕೋಲಿಯೂರ ಸುಂಕದ ಕಟ್ಟಿಮ್ಯನೇ
ನಿಂತ್ಯೆರೀಗ್ ವಾಲಿ ಬರದಾನೆ। ಬಾಲಯ್ಯ
ಸುತ್ತನ ಬಳಗಾಕೆ ಬರದಾನೆ। ॥೬॥

---

೧. ನಿಶ್ಚಯಿಸುವಳು ೨. ಒಪ್ಪುವಳು ೩. ಸುದ್ದಿಮುಟ್ಟಿಸಿ ೪. ಮದುವೆ ೫. ಬರೆಯುವನು

೨. ಅಕ್ಕನನ್ನು ಕರೆಯುವುದು

ಅಕ್ಕಾದೀರ್ ಕರುವಾಕೇ ಹೆರಗೇ[೧] ಸುತ್ತುಗಿ ತಂದ
ಸುತ್ತೇ ನೂರಾಳು ಕುದರೀಯ। ಸುಂಗರ ಮಾಡೇ
ಅಕ್ಕನರಮನಗೇ ಸವನೀದ। ॥೭॥

ಆಯುತಾರಾ[೨]ದಿನೇ ಅಕ್ಕನ ಕರಿಯಲು ಹ್ವೊದಾ
ಆಯ್ತಾರದ[೨] ಸಂತೆ ಮನಿಯಮ್ಮ। ನನ್ನಕ್ಕಮ್ಮ
ನೀ ಬಾರೇ ತಮ್ಮಯ್ನ ಮುದವೀಗೆ। ॥೮॥

ನಮ್ಮೆಲ್ಲರಿಗ್ ಹಿರಿಯಾತ ನಿಮ್ಮೆಲ್ಲರಿಗ್ ಕಿರಿಯಾತ
ಸೂಲಿ ಚೆಂದರನಾ[೩] ಹೊಲುವಾತ[೪]। ತಮ್ಮನ ಮುದಿಯ
ನೀ ಬಾರಕ್ಕಮ್ಮ ಮುದವೀಗೆ। ॥೯॥

ಉಡುವಕೆ ಪಟ್ಟೆಯಿಲ್ಲ ಇಡುವಕೆ ಚೆನ್ನಾಯಿಲ್ಲ
ನಾ ಹ್ಯಂಗೆ[೫] ಬರಲೋ ಮುದವೀಗೆ।

ಉಡುವಕೆ ಪ_ಟ್ಟೆ ಕುಡತಿ[೬] ಇಡುವಕೆ ಚೆನ್ನಾ ಕುಡತಿ
ನೀ ಬಾರಕ್ಕಮ್ಮ ಮುದವೀಗೆ। ॥೧೦॥

ವಾಲೇ ಮಾಡಿಸೇ ಕುಡತಿ ಬಂದೀ ಹಣಿಸೇ[೭] ಕುಡತಿ
ನೀಬಾರೇ ಅಕ್ಕ ಮುದವೀಗೆ। ॥೧೧॥

ಬಂದೀ ಕೀಲ್ ಕಡದವ್[೮] ಬಂಗಾರ ನಗ್ಗವ್
ನಾ ಹೆಂಗೆ ಬರಲೋ ಮುದವೀಗೆ।

ಬಂದೀಕೀಲಿಕ್ಕಿಸುವೆ ಬಂಗಾರ ಮಾಡಿಸುವೆ
ನೀ ಬಾರೇ ಅಕ್ಕ ಮುದವೀಗೆ। ॥೧೨॥

ಸಾಲೀ ಸಿರ್ಗ್[೧೦] ಮಾಸವೋ ವಾಲೀದಳ[೧೧] ನಗ್ಗವೋ
ನಾ ಹ್ಯೆಗೆ ಬರಲೋ ಮುದವೀಗೆ।

ಸಾಲೀ ಸಿರಗ್ ತರಸೂವೇ ವಾಲೀದಳ ಮಾಡಿಸುವೆ
ನೀಬಾರೇ ಅಕ್ಕ ಮುದವೀಗೆ ॥೧೩॥

---

೧. ಹೊರಗೆ ೨. ರವಿವಾರ ೩. ಸೂರ್ಯ ಚಂದ್ರರನ್ನು ೪. ಹೋಲುವಾತ ೫. ಹೀಗೆ ೬. ಕೊಡುತ್ತೇನೆ ೭. ಮಾಡಿಸಿ ೮. ತುಂಡಾಗಿವೆ ೯. ಜಜ್ಜಿವೆ ೧೦. ಸೆರಗು ೧೧. ಓಲೆಯ ಎಸಳು

ಹಿಕ್ಕೂಕೆ[೧೨] ಹಿಕ್ಕೂಲಿಲ್ಲ[೧೩] ಕಟ್ಟೂಕೆ ಚಿವಲಿಲ್ಲ
ನಾಹ್ಯೆಂಗೆ ಬರಲೋ ಮುದವೀಗೆ।

ಹಿಕ್ಕುಕೆ ಹಿಕ್ಕುಲಿ ಕುಡತಿ ಕಟ್ಟುಕೆ ಚಿವಲಿ ಕುಡತಿ
ನೀ ಬಾರಕ್ಕಮ್ಮ ಮುದವೀಗೆ। ॥೧೪॥

ಮುಡುವಕೆ ಹೂಂವಿಲ್ಲ ಇಡುವಕೆ ಗಂದಾಯಿಲ್ಲ
ನಾಹ್ಯೆಂಗೆ ಬರಲೋ ಮುದವೀಗೆ।

ಮುಡುವಕೆ ಹೂಂವಾ ಕುಡತಿ ಇಡುವಕೆ ಗಂದಾ ಕುಡತಿ
ನೀಬಾರಕ್ಕಮ್ಮ ಮುದವೀಗೆ। ॥೧೫॥

ಆರೆಮ್ಮೆ ಎಳಗಂದೇ[೧೪] ಮೂರೆಮ್ಮೆ ಮುದಗಂದೆ
ಮೂರಾರಲ್ಲೆರಡು ಹಸುಹಯ್ನ[೧೫]। ಎಲ್ಲಾ ಬಿಟ್ಟೀಕೇ
ನಾ ಹ್ಯೆಂಗೆ ಬರಲೋ ಮುದವೀಗೆ। ॥೧೬॥

ಹಾಲಾ ಹಿಂಡ್ವರಿಲ್ಲ ಮಜ್ಜುಗೆ ಗಯ್ಡ್ವರಿಲ್ಲ[೧೬]
ನಾ ಹ್ಯೆಂಗೆ ಬರಲೋ ಮುದವೀಗೆ।

ಹಾಲಾ ಹಿಂಡ್ವರ ಕುಡತಿ ಮಜ್ಜುಗಿ ಗಯ್ಡ್ವರ ಕುಡತಿ
ನೀ ಬಾರಕ್ಕಮ್ಮ ಮುದವೀಗೆ। ॥೧೭॥

ಹಾಲಂತತ್ತೀಯೋ ದ್ಯೆವರಂತಾ ಮಾವಾನೋ
ಸೂಲಿಪತಿಯಂತ[೧೭] ಅರಸಾರ। ಬಿಟ್ಟೀಕೇ[೧೮]
ನಾ ಹ್ಯೆಂಗೆ ಬರಲೋ ಮುದವೀಗೇ। ॥೧೮॥

ಹಾಲಂತತ್ತೀಯೋ ದ್ಯೆವಾರಂತಾ ಮಾವಾನೋ
ಸೂಲಿಪತಿಯಂತಾ ಅರಸಾರಾ। ಒಡಗುಂಡೇ
ನೀ ಬಾರೇ ಅಕ್ಕ ಮುದವೀಗೆ। ॥೧೯॥

ನಂದೀ ಕೊರಳಾ ಮಗಳು ಬಂದೀಕೊರಳ ಸೊಸಿಯೇ
ಮುಂಗಾಲಲೂರುವ ಅಸಬಾಲಿ[೧೯]। ಮನಿಯಲ್ಲಿರಸೇ
ನಾ ಹ್ಯೆಂಗೆ ಬರಲೋ ಮುದವೀಗೆ। ॥೨೦॥

ನಂದೀ ಕೊರಳಾ ಮಗಳು ಬಂದೀ ಕೊರಳ ಸೊಸಿಯ
ಮುಂಗಾಲಲೂರುವ[೨೦] ಅಸಬಾಲಿ। ಒಡಗುಂಡೇ
ನೀ ಬಾರೇ ಅಕ್ಕ ಮುದವೀಗೆ। ॥೨೧॥

---

೧೨. ಬಾಚಲು ೧೩. ಬಾಚಣಿಗೆ ೧೪. ಎಳೆಯದು ೧೫. ಈದಿವೆ, ಕರಹಾಕಿವೆ ೧೬. ಕಡೆಯುವವರು
೧೭. ಸೂರ್ಯದೇವರಂಥ ೧೮. ಬಿಟ್ಟು ೧೯. ಹಸುಬಾಲೆ ೨೦. ಅಂಬೆಗಾಲಿಕ್ಕುವ

ಅಕ್ಕಗ್ ಸತ್ತೂಗಿಲ್ಲ ಮಕ್ಕಳಿಗ್ ದಂಡೂಗಿಲ್ಲ
ನಾ ಹ್ಯೆಂಗೆ ಬರಲೋ ಮುದವೀಗೆ। ॥೨೨॥

ಅಕ್ಕಗೇ ಸತ್ತೂಗೇ ಮಕ್ಕಳೀಗ್ ದಂಡೂಗೇ
ಚಿಕ್ಕ ಬಾವಾಗೂ ಕುದರೀಯೇ। ಸಯ್ವಾಗೇ
ನೀ ಬಾರಕ್ಕಮ್ಮ ಮುದವೀಗೆ। ॥೨೩॥

ಮಾಳೂಗಿ ಒಳಗೆ ಹಾಲೂಬ್ವೊನಾ[೨೧]ಬಡಸೇ
ಪ_ಟ್ಟೀಯ ಸಿರಗಾ ಮ_ರಿಯಲ್ಲೇ। ರಾಯರೆ ಕೇಳಿ
ಹೋಗ್ ಬತ್ತಿ ತಮ್ಮಯ್ನ ಮುದವೀಗೆ। ॥೨೪॥

ಉಪ್ಪರಗಿ ಒಳಗೇ ತುಪ್ಪಾ ಬ್ವೊನಾಬಡಸೇ
ಸಾಲೀಯ ಸಿರಗಾ ಮ_ರಿಯಲ್ಲೇ। ರಾಯರೆ ಕೇಳಿ
ಹೋಗ್‌ಬತ್ತಿ ತಮ್ಮಯ್ನ ಮುದವೀಗೇ। ॥೨೫॥

ತುಪ್ಪಾ ಪಾಯಸನಟ್ಟೇ ಕೀಲು ಮಣೆಯಾ ನಿರಸೇ[೨೨]
ಪ_ಟ್ಟೀಯಾ ಸಿರಗಾ ಮರಿಯಲ್ಲೇ। ರಾಯರೇ ಕೇಳಿ
ಹೋಗ್ಬತ್ತಿ ತಮ್ಮಯ್ನ ಮುದವೀಗೇ। ॥೨೬॥

ಯಾರೂ ಏಳುಕೆ ಮುನ್ನೇ ಕೋಳೀ ಕೂಗುಕೆ ಮುನ್ನೇ
ಬಾಲರಿಗು ನಿಂಗೂ ಎಳಬಿಸಲ। ತಾಗುವಂಕ್ರಿ[೨೩]
ಹೋಗ್ಬಾರೇ ತಮ್ಮಯ್ನಾ ಮುದವೀಗೆ। ॥೨೭॥

ಅಕ್ಕಗೇ ಸತ್ತೂಗೇ ಮಕ್ಕಳಿಗೆ ದಂಡೂಗೇ
ಹಿರಿಯ ಬಾವಾಗು ಕುದರೀಯ। ಕುಟ್ಟಿನ್ನೇ
ಅಪ್ಪನರಮನಗೇ ಬರುವಾನೇ। ॥೨೮॥

ಬಾಗೂ ಬಯ್ಣೀ ಕಾಯಾ ಏಳೂ ಬಂಡೀ ತುಂಬೇ
ಕಾವೂಲಲ್ಲಿರುವಾ ಎರತುಪ್ಪ। ತುಂಬಿಸಿಕಂಡೇ
ಅಕ್ಕಮ್ ಸಂಗ್ರಮಕೇ ಬರುವಾಳೇ। ॥೨೯॥

ತೂಗೂ ತೊಂಡೀಕಾಯಾ ಏಳೂ ಬಂಡೀ ತುಂಬೇ
ಬಂಗೂಲ[೨೪]ಲ್ಲಿರುವಾ ಎರತುಪ್ಪ। ತುಂಬಿಸಿಕಂಡೇ
ಅಕ್ಕಮ್ ಸಂಗ್ರಮಕೇ[೨೫] ಬರುವಾಳ। ॥೩೦॥

ಅರಸಾರಿಗ್ ಅಲ್ಲಂಕೇ[೨೬] ಪುರುಸಾರಿಗ್ ಪಲ್ಲಂಕೇ
ಗಂಡೂ ಮಕ್ಕಳಿಗೆ ಕುದರೀಯೇ। ಹೇರಿಸಿಕಂಡೇ
ತಾಂವೆದ್ರ[೨೭] ಉಚ್ಚಯದ[೨೮] ಮುದವೀಗೆ। ॥೩೧॥

---

೨೧. ಅನ್ನ ೨೨. ಇಟ್ಟು ೨೩. ಸ್ಪರ್ಷಿಸುವ ಮೊದಲು ೨೪. ಪಾತ್ರೆ ೨೫. ಸಮಾರಂಭಕ್ಕೆ
೨೬. ಅಂಬಾರಿ ೨೭. ತಾವು ಹೊರಟರು ೨೮. ಉತ್ಸವದ, ಸಡಗರದ

ರಾಜಾ ತಮ್ಮಯ್ಯ ಅಕ್ಕಾ ಬತ್ತೀದಂದೇ[೨೯]
ರಾಜಂಗಳಿಳದೇ ಸವನೀನೇ[೩೦]। ತಮ್ಮಯ್ಯ
ಅಕ್ಕ ಉಚ್ಚಯ್ಕೆ ಬರುವಾಳ। ॥೩೨॥

ಹೆರಗೇ ಬಂದಕ್ಕಮ್ಮ ಜಿಗಲೀಮ್ಯೆನ್‌ಕೊಳತಾಳ[೩೧]
ಅರಸೂ ತಮ್ಮಯ್ನ ಹಿರಿಯಕ್ಕ। ನನ್ನಮ್ಮ
ಕಳಸದ ಚಾಜಾ[೩೨] ತನಗಂಬ್ಳ। ॥೩೩॥

ಮಾಳೂಗಿ ಒಳಗೆ ಪ_ಟ್ಟೆ ಮಂಚದ ಮ್ಯೆನೆ
ಅಕ್ಕಾಗು ತಂಗೀಗು ಪರದಾಟ

ಅಕ್ಕಾಗು ತಂಗೀಗು ಯಾತಕೆ ಪರದಾಟ
ನನಬೂಮಿ ಬಾರತನ ಕಳಸಾಕೆ। ॥೩೪॥

ಅಕ್ಕಗ್ ಕಳಸಾ ಕುಡ್ರಿ ತಂಗೀಗ್ ಏಳ್ಯಾಕುಡ್ರಿ[೩೩]
ನೆಂತ[೩೪] ದಿಬ್ಬಣವ ತೆರಳಾಸಿ[೩೫]। ॥೩೫॥

೨೯. ಬರುತ್ತಾಳೆಂದು ೩೦. ಹೊರಟನು ೩೧. ಕುಳಿತಳು ೩೨. ಹಕ್ಕ, ಮರ್ಯಾದೆ ೩೩. ವೀಳ್ಯಕೊಡಿರಿ ೩೪. ನಿಂತ ೩೫. ಹೊರಡಿಸಿ

೩. ಹಸಗೆರೆ ಬರೆಯುವುದು[೧]

ಸೇಡೀ ಗೆಯ್ಬೀಯ[೨] ರೂಡಿಯಲ್[೩] ತಡಕಂಡೇ[೪]
ಮೋಡನ್ಹಸಗೆರಿಯಾ[೫] ಬರುವಾಳೇ। ತಾಯಮ್ಮ
ಏಚುವಾಳೆ ಮಗನಾ ಮುದವೀಯ। ॥೩೬॥

ಜಾಂಜಿನ[೬] ಗೆಯ್ಬೀಯ ರೂಡಿಯಲ್ ತಡಕಂಡೇ
ಮೋಡನ್ಹಸಗೆರಿಯಾ ಬರುವಾಳೇ[೭] ತಾಯಮ್ಮ
ಇಣ್ಣುವಾಳೇ ಮಗನಾ ಮುದವೀಯ। ॥೩೭॥

ಸೇಡೀಯ ಪ_ಟ್ಟೀಯ ರೂಡಿಯಲ್ ತಿಗಿಯಿರಿ[೮]
ಮೋಡನ್ಹಸಗೆರಿಯಾ ಬರಿಯಿರಿ। ನಮ್ಮನಿಯಾ
ಮುದ್ದು ಬಾಲಯ್ನ ಮುದವೀಗೆ। ॥೩೮॥

ಜಾಂಜಿನ ಪ_ಟ್ಟೀಯ ರೂಡಿಯಲ್ ತಿಗಿಯಿರಿ
ಬೈಗೇ ಹಸಗೆರಿಯಾ ಬರಿಯಿರಿ। ನಮ್ಮನಿಯಾ
ಮುದ್ದೂ ಬಾಲವ್ವಿ ಮುದವೀಗೆ। ॥೩೯॥

ಸೇಡೀಯ ಪ_ಟ್ಟೀಯ ರೂಡಿಯಲ್ ತೆಗದಾರೇ
ಮೋಡನಸಗೆರಿಯಾ ಬರದಾರೆ। ನಮ್ಮಮನಿಯಾ
ಮುದ್ದು ಕಂದಯ್ನ ಮುದವೀಗೆ। ॥೪೦॥

ಜಾಂಜನ ಪ_ಟ್ಟೀಯ ಚಂದದಲ್ ತೆಗದಾರೇ
ಮೋಡನಸಗೆರಿಯಾ ಬರದಾರೆ। ನಮ್ಮಮನಿಯಾ
ಮುದ್ದೂ ಕಂದಯ್ನ ಮುದವೀಗೆ। ॥೪೧॥

ಬಾಗುಲಿಗೇ ರತುವಾ[೯] ಬೈಗದಲ್ ಬರದಾಳೇ
ಬಾಲೇ ತಮ್ಮಯ್ನ ಕಿರದಂಗೆ। ಅಕ್ಕಮ್ಮ
ಬಾಗೂಲಿಗೇ ರತುವಾ ಬರದಾಳೇ। ॥೪೨॥

ಮುದಿಯಾ ಮುದಿಯಾ ಚೆಂದ ಮುಗುಳು ಮಂಟಪ ಚೆಂದ
ಮುದಿಯಾದಲ್ ಹುವ್ವಾಹಲಿ[೧೦] ಚೆಂದ। ಚಪ್ಪರ ಚೆಂದ
ಮೊದಮಕ್ಕಳಿರುವಾ ಮನೆ ಚೆಂದ। ॥೪೩॥

---

೧. ಹಸೆಹೊಯ್ಯುವುದು, ರಂಗೋಲಿ ಬರೆಯುವುದು ೨. ಬಿಳಿ ರಂಗೋಲಿ ನೀರುತುಂಬಿದ ಗೆರಟೆ ೩. ಸರಿಯಾಗಿ ೪. ಹಿಡಿದುಕೊಂಡು ೫. ಪೂರ್ವದಿಕ್ಕಿನ ರಂಗೋಲಿ ೬. ಕೆಂಪು ರಂಗೋಲಿ ೭. ಬರೆಯುವಳು ೮. ತೆಗೆಯಿರಿ ೯. ರಥವನ್ನು ೧೦. ಹೊಯ್ಯುವ ರಂಗೋಲಿ

೪. ಜವಳಿಗೆ ಹೋಗುವುದು

ಎಪ್ಪತ್ತು ವರವಾ ಸಿರಗೀಗೇ ಕಟ್ಟೀಕಂಡೇ
ಅಪ್ಪನೋಡ್ ಮಗನ ತವಕವ। ಅಂಕೋಲಿಯ
ಸಿಟ್ಟಾರಂಗಡಿಗೇ[೧] ನೆಡದಾನೇ। ॥೪೪॥

ಎಪ್ಪತ್ತು ವರವಾ ಜೋಡಿಗೆಂಟ[೨] ಕಟ್ಟೇ
ಸಿಟ್ಟಾರಂಗ್ಡೀಗೇ ನೆಡದಾನೇ। ॥೪೫॥

ಸಿಟ್ಟರೆ ಸಿಟ್ಟರೆ ಕೇಳಿ ಸಿಟ್ಟರ ಮಕ್ಕಳೆ ಕೇಳಿ
ಆಯೊಳ್ಳ[೩] ಸಾಲೀನೇ ತಿಗತನ್ನಿ। ॥೪೬॥

ಮುತ್ತೀನ ಸಾವುಕಾರ ಮುತ್ತೀನ ಕೋಲುಕಾರ
ಆಯೊಳ್ಳ ಪಟ್ಟೇ ಕುಡ[೪]ನನಗೆ। ಸಿಟ್ಟಾರಣ್ಣ
ಪಟ್ಟೀಯ ಬೆಲಿಯ ತಿಳದೇಳ। ॥೪೭॥

ಪ_ಟ್ಟೇ ಬೆಲಿ ಹೇಳೂಕೆ ಚಿಕ್ಕ ಹುಡುಗಾ ನೀನ
ನಿನಗಿಂತು ನಿನ್ನ ಹಿರಿಯವ್ರು। ಬಂದಾರೇ
ಪ_ಟ್ಟೇಯ ಬೆಲಿಯ ತಿಳಿದೇಳ್ವೆ। ॥೪೮॥

ಹತ್ತಾಕಟ್ಲ ಬಲ್ಲೆ ಮುತ್ತಾ ಸೂಡ್ಲ[೫] ಬಲ್ಲೆ
ಪ_ಟ್ಟೇಯ ಬೆಲಿಯಾ ಮುಂಚೇ ಬಲ್ಲೇ। ರಾಯರೆ ಕೇಳಿ
ಆಯೊಳ್ಳ ಪ_ಟ್ಟೇ ಕುಡಿನನಗೆ। ॥೪೯॥

ಹತ್ತಾಕಟ್ಲ ಬಲ್ಲೆ ಮುತ್ತಾ ಸೂಡಲ ಬಲ್ಲೆ
ಮುತ್ತೀನ ಬೆಲಿಯೇ ನನಗುಂಟ। ಸಿಟ್ಟಾರಣ್ಣ
ಸಾಲೀ ಬೆಲಮಾಡೇ ಕುಡನನಗೆ। ॥೫೦॥

ಪ_ಟ್ಟೇಯ ಸೇರಿಯೇ ತೋಳಾಮ್ಯೆನ್ ಬೊಂಬೀಯೇ
ಇಪ್ಪತ್ ವರವಂದ ಬಣಜೀಗ। ಅಣ್ಣಯ್ನ
ನಾರೀಗುಪ್ಪದ್ರೇ ಎರಲಂದ। ॥೫೧॥

---

೧. ಸೆಟ್ಟರಂಗಡಿಗೆ ೨. ಗಂಟು ೩. ಚೆಂದವಾದ ೪. ಕೊಡು ೫. ಧರಿಸಲು

ಪ_ಟ್ಟೇ ತೆಗದಾನೇ ಪಿತ್ತಂಬರ ಬೆಗದಾನೇ[೬]
ಕಟ್ಟಾಳ ಮ್ಯೆನೇ ಹುರಸೀದ[೭] ॥೫೨॥

ಸಾಲೀ ತೆಗದಾನೇ ನ್ಯೆವಳ ಬೆಗದಾನೇ
ಹೊರಿಯಾಳ್ನ ಮೆನನೇ ಕಳಗೀದ। ಬಾಲಯ್ಯ
ತಾನು ಸತ್ತಗಿಯ ನಿರಳೀಗೇ[೮]। ಬಾಲಯ್ಯ
ರಾಜ ಮಾರ್ಗದಲೇ ನೆಡದಾನೇ।
ರಾಜ ಮಾರ್ಗವ ನಿಡದೇ ಮನಗೇ ಬಂದೇ
ತಂದಿರಸ್ದಾ[೯] ತನ್ನ ಚುಳಚೀಲೆ। ॥೫೩॥

ಪ_ಟ್ಟೇಯ ಸೇರೀಯ ಇಪ್ಪತ್‌ಗಳಗೀಮಾಡೇ
ಕಟ್ಟಾಳನ ಮ್ಯೆನೇ ನಿಗವಾನೇ। ಬಾಲಯ್ಯ
ನೆಡದಾ ಸತ್ತಗಿಯ ನಿರಳೀಗೇ। ತಂದಾ ಹೊರಿಯಾ
ತಂದಿರಸ್ದಾ ತನ್ನಾ ಚುಳಚೀಲೆ। ॥೫೪॥

---

೬. ಬಿಗಿದನು ೭. ಹೊರಸಿದನು ೮. ನೆರಳಿಗೆ ೯. ತಂದಿಟ್ಟನು.

೫. ಹೂ ಮುಡಿಸುವುದು

ಗುತ್ತೀ ರಾಜೀಕವ್ರ ಅಪ್ಪೋಜ್ಜೋಲೀ[೧] ಬರದೇ
ಹೊತ್ತರನ[೨] ಹೂಂವ[೩] ನಮಗೆರಲೆ। ನಮ್ಮಮುನಿಯಾ
ಪುತ್ರೀ ಸುಂಗರಕೇ[೪] ಬರಬೇಕೇ। ॥೫೫॥

ಗ್ವೋವೀ ರಾಜೀಕವ್ರ ಅಣ್ಣಾವಾಲೀ ಬರದೇ
ಏಗೀನ[೫] ಮೊಕ್ಕೇ[೬] ನಮಗೆರಲೆ[೭] ನಮ್ಮಮನಿಯಾ
ನಾರೀ ಸುಂಗರಕೆ ಬರಬೇಕೇ। ॥೫೬॥

ಆರಾನಂಗಡಲೆ ಆರಾನಾರದ ಮಲ್ಲುಗೆ
ಬ್ಯೆರಾನಂಗಡಲೆ ಮುಡಿಯಾಳ। ಪಚ್ಚೀಕದರ
ನಾರೀ ಸುಂಗರಕೆ ಬರಬೇಕೇ। ॥೫೭॥

ಹೂಂವೀನಲ್ಲೂಂವ ಪಾರೀಜಾತರದೂಂವ
ತೂಗೀ ಮಾರ್ವದ ಮುಡಿಯಾಳ। ಪಚ್ಚೀಕದರ
ನಿಸ್ತ್ರೀ[೮] ಸುಂಗರಕೆ ಬರಬೇಕೇ। ॥೫೮॥

ಅತ್ತೀಕಳಗೀದೇ ಊರಲ್ಲಿಲ್ಲಾದುಸ್ತಾ
ಕಾಯೂ ಮದ್ದಾಳೆ[೯] ತೆನಿಹಣ। ತಿಂಗೀನಾ
ಕಾಯಾ ಮಾಲಕ್ಸ್ಮೀ ಮುಡಲೀಗೇ। ॥೫೯॥

ಮಾವಾ ಕಳಗೀನೇ ದ_ರಿಯಲ್ಲಿಲ್ಲಾದುಸ್ತಾ
ಹಣ್ಣು ಮದ್ದಾಳೆ ತೆನಿಹಣ್ಣು। ಬಾಳೀಯ
ಹಣ್ಣು ಮಾಲಕ್ಸ್ಮಿ ಮುಡಲೀಗೇ। ॥೬೦॥

ಉತ್ತುಮಪ್ಪೋಜೇ ತನ್ನ ಪುತ್ರಾಗೆಣ್ಣಾ ಕೇಳೇ
ಇಪ್ಪತ್ತು ಜೋಡ್‌ಕುದ್ರೇ ಸಮಜೋಡ। ಸತ್ತುಗಿನಿರಳಲ್ಲೇ
ಪುತ್ರಗಿಣ್ಣುಪ್ಪೇ[೧೦] ಬರುವಾನೇ। ॥೬೧॥

ಅಣ್ಣಮಾರಾಯಾ ತನ್ನ ತಮ್ಮಗೆಣ್ಣಾ ಕೇಳೇ
ನಾಲ್ವತ್ತು ಜೋಡ್ ಕುದ್ರೇ ಸಮಜೋಡ। ಸತ್ತುಗಿನಿರಳಲ್ಲೇ
ತಮ್ಮಾಗಿಣ್ಣುಪ್ಪೇ ಬರುವಾನೇ। ॥೬೨॥

---

೧. ತಂದೆಪತ್ರವನ್ನು ೨. ಮುಂಜಾನೆಯ ೩. ಹೂವು ೪. ಸಿಂಗರಿಸಲು ೫. ಈಗಿನ ೬. ಮೊಗ್ಗೆ ೭. ನಮಗಿರಲಿ ೮. ಸ್ತ್ರೀಯ,ಹೆಣ್ಣಿನ ೯.ಮಾತುಲಂಗ ೧೦.ಮಗನಿಗೆ ಹೆಣ್ಣು ಒಪ್ಪಿ

೬. ಚವ್ಕ ತುಂಬುವುದು

ಸೆಜ್ಜೀಯ ಮುತ್ತ ಸಿದ್ದೀಯಲ್ ತುಂಬೀಕಂಡೇ
ಆಡೂಕ್ವೊದ್ ಮಗನಾ ಕರದಾಳೆ। ಅಕ್ಕಮ್ಮ
ಬದ್ರೇ ತುಂಬಿದಳೆ ಚಿವಕವ। ||೬೩||

ಆಯೊಳ್ಳ ಮುತ್ತ ಜೋಗುಳಲ್ ತುಂಬೀಕಂಡೇ
ಆಡೂಕ್ವೊದ್ ಮಗನಾ ಒಡಗೂಡೇ। ಅಕ್ಕಮ್ಮ
ನಾರೇ ತುಂಬಿದಳೆ ಚಿವಕವ। ||೬೪||

ಚಿವಕವ ತುಂಬ ಮಲಕೀನ[1] ಕುರುಳಾಕಿ
ಸರಪೂಳಿ ತೋಳ ನಿರಿಯವಳೇ। ಚಿಂತಕದ
ಮಲಕ[2] ಹಾಕ್ ತೊಂಬೇ[3] ಚಿವಕವ। ||೬೫||

ಬಾಗಲದಂಡೀ ಚಿವಕವ ಯಾವಲ್ ತೊಂಬಲೆ ತಾಯೆ
ಕೋಡೆದ್ದ[4] ಬಾಳೀ ಬಲನಲ್ಲೇ। ದ್ಯೆವರ ಜಿಗಲಿ
ಜಾಗಾನೋಡ್ ತುಂಬ ಚಿವಕವ। ||೬೬||

ಅಕ್ಕ ತುಂಬಿದ ಚಿವಕ ಚಂದವಾಗದಂದೇ
ತಂಗೇ ತನ್‌ಕೊರಳ ಪದಕಾವಾ। ತಡದೀಕಂಡೇ
ಚಂದದಲ್ ತುಂಬಿದಳೇ ಚಿವಕವ। ||೬೭||

---

೧. ಅಲ್ಲಾಡುವ, ಆಭರಣ ೨. ಗಂಟು, ಹೆಣಿಗೆ ೩. ತುಂಬು ೪. ಸಮೀಪವಿದ್ದ

೬. ಪನ್ನೆ ಮಾಡುವುದು

ಪನ್ನೀ ಮಾಡ್ವಾಕೆ ಬಿನ್ನಾಣಿ[೧] ಬರವೇಳಿ
ಸಿಣ್ಣ ಮುತ್ತವ್ನ ಕುರಳಲ್ಲೇ। ಬಿನ್ನಾಣಿಯ
ಮಡದೇ ನೀಡಿದಳೇ ಅದುಬೊಗ। ಬಿನ್ನಾಣಿಯ
ತಾಯೆ ನೀಡಿದಳೇ ಹಡಪವ। ॥೬೮॥

ಗುತ್ತೀನಾಡ್ ಬಿನ್ನಾಣಿ ಅನೀಮ್ಯೆನ್ ಬರವೇಳಿ
ಮುತ್ತನ ಸತ್ತಗಿಯ ನಿರಳೀಗೇ। ಬಂದ್ ಬಿನ್ನಾಣೀ
ಅಂಗಳದೆರಗೇ ಬಂದ್ ನೆಂತಾನೇ[೨]
ಅಂಗಳದೆರಗೇ ನಿಂತೇನಂದಾನೇ
ಚಂದ್ರಮಗ್ಹುಲುವರಿಗ್[೩] ನಮೋ ಅಂದಾ। ದ್ಯೆವರೆಕೇಳಿ
ನಮ್ಮ ಕರಿಸಿದ ಬಗಿಯೇನ। ॥೬೯॥

ನಿನ್ನ ಕರದದು ನಮ್ಮ ಕಾರಣವಾಗೆ
ನಮ್ಮನ್ನೇ ಉಂದು[೪] ಸಬಕಾರ್ಯ। ಬಾಲಯ್ನ
ಪನ್ನೀ ಮಾಡ್ವಕೇ ಕರಸದು। ಬಿನ್ನಾಣಿ
ಬಾಲಯ್ನ ಪನ್ನೀಗೆಯ್ದಾನೇ। ॥೭೦॥

---

೧. ಕೆಲಸಿ ೨. ನಿಂತನು ೩. ಚಂದ್ರನನ್ನು ಹೋಲುವವರಿಗೆ ೪. ಒಂದು

೮. ಅತ್ತೀ ತೋರಣ ಸ್ನಾನ

ಉಂದಡಕುಂದೇಳ್ಯ[೧] ಸಂದಿತ ಗಂಗಾಜಲದಿ
ಉಂದು ಕೊಡನೀರ ಕುಡ ನಮಗೆ। ಬಾವಿಕೇರಿ
ದೊರೆಯೇ ತಮ್ಮಯ್ನ ಜಳಕಾಕೇ। ॥೭೧॥

ಹಿತ್ತಲ ಕಡಗೇ ಹುಟ್ಟಿರ ಕುಂಬರಸೀನ
ಮುತ್ತನ ಗುದಳೀಲೇ[೨] ಅಗ ತನ್ನಿ। ಅರಸೀನ
ಹವಳದ ಕೋಪ್ರೀಲೇ[೩] ಕರಸೀರಿ[೪]। ಅರಸೀನ
ಬಣ್ಣದ ಕಡಕೀಲೇ[೫] ಹರಗೀರಿ। ಅರಸೀನ
ಸಾಣಾಗಲ್ಲಲ್ಲೇ ಹುಡಮಾಡಿ। ಅರಸೀನ
ಇಡರಿ ಅಣ್ಣಯ್ನ ಭುಜಕೇಗೆ। ॥೭೨॥

ಮಾಯೀನ ಮರನಡಗೇ ನಾರೇರ್ ಒಲಿಯಾಹೂಡೇ
ಮಾಯೀನ ಸೆಕ್ಕೇ[೬] ಒಲದುಂಬೇ। ಕಾದಾವುದಕ
ಮಾರಾಯ್ನ ಮಗನಾ ಜಳಕಾಕೇ। ॥೭೩॥

ಅತ್ತೀಯ ಮರನಡಗೇ ನಿಸ್ತೇರ್ ಒಲಿಯಾಹೂಡೇ
ಅತ್ತೀಯ ಸೆಕ್ಕೇ ಒಲದುಂಬೇ। ಕಾಸೀದುದಕ
ಉತ್ತುಮ್ಮಾ ಮಗನಾ ಜಳಕಾಕೇ ॥೭೪॥

ಅರಸನ ಮಗನಾ ತಂದಾರೇ ಮೇವಾಕೇ
ನಾರೇ ನೀ ಹೂಡಿದ ಒಲಿಮ್ಯೆನೇ। ಮೇವಾಗೇ
ನಾಲ್ಕೂವರೆಲ್ಲ ನೆರದಾರೇ। ॥೭೫॥

ದಡ್ಡಂಬು ನಾಣಗೀಗೇ[೭] ಬುಡ್ಡಂಬಾ ತಿಂಗನಿಟ್ಟೆ
ಬಗೇಬಗ್ಗೇ ನೀರ ಮುಗುವಾಳ। ಅವರಮ್ಮ
ಮಾರಾಯ್ನ ಮಗನಾ ಜಳಕಾಕೇ ॥೭೬॥

---

೧. ಒಂದು ಅಡಿಕೆ ಒಂದು ವೀಳ್ಯ ೨. ಗುದ್ದಲಿಯಿಂದ ೩. ಕೊಪ್ಪರಿಗೆಯಲ್ಲಿ ೪. ಕರಗಿಸಿರಿ ೫. ಬೆತ್ತದಿಂದ ಹೆಣೆದ ಚಾಪೆ ೬. ಚೆಕ್ಕೆ ೭. ಬಚ್ಚಲಿಗೆ

ಕುಂಬದ ನೀರ್‌ಮೀವಾಗೇ ಎಂಬಕ್ಕೇ ಸರಗೆಯ್ದು
ತಿಂಗಳಿಗೂ ನೂರು ಮುದಿಯಾವೇ। ಅಂಬುದ ಕೇಳೇ
ಎಂಬಕ್ಕೇ ಮುದಲೇ ಸರಗೆಯ್ದು। ॥೨೭॥

ಅರಸನ ನೀರ್‌ಮೀವಾಗೇ ಹೊರ್ಸಕ್ಕೇ[೮] ಸರಗೆಯ್ದು
ಉರ್ಪಾಕೇ ನೂರು ಮುದಿಯಾವೇ। ಅಂಬುದ ಕೇಳೇ
ಹೊರ್ಸಕ್ಕೇ ಮುದಲೇ ಸರಗೆಯ್ದು। ॥೨೮॥

ಕುಂಬದ ನೀರ್ ಮೀವಾಗೇ ಎಂಬಕ್ಕೇ ಸರಗೆಯ್ದು
ಕುಂಬದ ನೀರ ಹಣಿನೀರ। ಮಿಂದಿನ್ನೇ
ತಿಂಗೂ ಬಾಳೆಲ್ಲಾ ಪಲಬಂದು। ॥೨೯॥

ನಾಣಗಿ ನೀರ್ ಮೀವಾಗೇ ಜಾಣ್ಣಕ್ಕೇ ಸರಗೆಯ್ದು
ನಾಣಗಿಯ ವೀರ ಹಣಿವೀರ। ಮಿಂದಿನ್ನೇ
ಹಲಸು ಮಾವೆಲ್ಲ ಪಲಬಂದು। ॥೩೦॥

ಕೆಸರಿಲ್ಲದಂಗಳಕೇ ಕಿಸರೆಂಗೇ ಆದಾವೇ
ಹಿಸರಿಗೆ ದೊಡ್ಡವ್ನ ಮಗಮೆಂದ। ನೀರೋಗೇ
ತಿಂಗೀನಂಗಳಕು ಅಲದದು। ॥೩೧॥

ಎಳಿಯಾ ಮಾಯಿೀನಣ್ಣ ಗಿಳಿಯೇ ಕೊಂಡೊಯ್ದಂಗೇ
ಇಳಿಯಾದಿರ್[೯] ರಾಯಾ ಮಡದೀಯ। ಮಾವನಮಗಳ
ಬಿರಳುನೋಯ್ವದ ಬಿಡಕಯ್ಯ।* ॥೩೨॥

ತೇದಿಡರೇ[೧೦] ತಿಲಕವ ಕಾದಿಡರೇ ಉದಕಾವ
ಅಕ್ಸತೀ ಮುಂದೆ ತರಸಿಡರೇ ಅವ್ರ ಬಾವಜೇ
ತಿದ್ದೇಯಿಡುವಾನೇ ನುಸಲೀಗೆ। ॥೩೩॥

---

೮. ಹೊರಸುಹಕ್ಕಿ ೯. ಜಗ್ಗದಿರು ೧೦. ತೆಯ್ದು ಹಚ್ಚಿರಿ [ಹಿಂದೆ ಹೇಳಿದ ಬಾಸಿಂಗ ಕಟ್ಟುವ ಹಾಡು ಇಲ್ಲಿಯೂ ಹೇಳುವರು] * ಈ ಪದ್ಯವನ್ನು ಓಕುಳಿಯಾಡಿ, ಸ್ನಾನ ಮುಗಿಸಿ ಹೆಣ್ಣಿನ ಕಿರುಬೆರಳು ಹಿಡಿದು ಹೋಗುವಾಗ ಮಾತ್ರ ಸೇರಿಸಿಕೊಳ್ಳಬೇಕು.

೯. ಒಲೆ ಮೂರ್ತ

ಗುತ್ತೀನಾಡ್ ದೋಸೇರಾ ಇತ್ತನ ಮೈನ್ ಬರುವೇಳಿ
ಮುತ್ತನ ಸತ್ತಗಿಯಾ ನಿರಳಲ್ಲೇ। ಇವ್ರಮನಿಯಾ
ಮುತ್ತೀನನಂತ್ ಮೋರ್ತಾವ ಗೆಯಬೇಕ। ॥೮೪॥

ಗುತ್ತೀನಾಡ್ ದೋಸೇರ ಇತ್ತನ ಮೈನ್ ಬಂದಾರೇ
ಮುತ್ತನ ಸತ್ತಗಿಯಾ ನಿರಳಲ್ಲೇ। ಇವ್ರಮನಿಯಾ
ಮುತ್ತೀನಂತ್ ಮೋರ್ತಾವ ಗೆಯದಾರೇ। ॥೮೫॥

ಮುಂದಾನಂಗಳದಲ್ಲೇ ಉಚ್ಚಯ ಇರುವಾದ
ಉಚ್ಚಯ್ಯ ಇವ್ರಮನಿಯಲ್ಲೇ। ಬಾವಿಕೇರಿ
ಉತ್ತುಮ್ರೊಲಿ ಮೋರ್ತಾಕೆ ಕೊಳತಾರೇ। ॥೮೬॥

ಚುಳಚೀಯ ಮುಂದೆ ಸಂಗ್ರಾಮ ಇರುವಾದ
ಗಂದಾವಾ ತೇದೇ ತಿಲಕಾವ। ತಿದ್ದೂವ
ಮಾರಾಯ್ರೊಲಿ ಮೋರ್ತಾಕೆ ಕೊಳತಾರೇ। ॥೮೭॥

ಬಾಗಲ ಮುಂದೀನ ಕಿರಳು[1] ಬಾಳೆಲಿಯ
ಹೋಗೇ ತಂಗಮ್ಮ ಕುಯತಾರೇ। ಬಾವಿಕೇರಿ
ದೊಡ್ಡ ಬಟ್ಟರೀಗ್ ಪಡಿಹೊಯ್ಯೇ। ॥೮೮॥

ಹೆರಗಿದ್ದಣ್ಣಯ್ಯ ಹೆರಗೇನ ಮಾಡೂತಿ
ಕಾಯೂ ಕತ್ತೀನೇ ಎಡಮಾಡ। ಬೇಲಿಕೇರಿ
ಸೆಣ್ಣ ಬಟ್ಟರಿಗ್ ಪಡಿಹುಯ್ಯ। ॥೮೯॥

ಉಪ್ಪರಗೀ ಒಳಗೀನ ಜೇರಗಸಾಲಕ್ಕೀಯ
ಹೆತ್ತಮ್ಮ ಹೋಗೇ ಮುಗತಾರೆ। ಬೇಲಿಕೇರಿ
ದೊಡ್ಡ ದೋಸೇರಿಗ್ ಪಡಿಹೊಯ್ಯೇ। ॥೯೦॥

ಹಿತ್ತಲ ಕಡಗೀನ ಕಿರುಳು ಬಾಲೆಲಿಯ
ಏಗೋಗೇ[3] ಅಣ್ಣಯ್ಯ ಕುಯತಂದ[4]। ಬಾವಿಕೇರಿ
ದೊಡ್ಡ ದೋಸೇರಿಗ್ ಪಡಿಹೊಯ್ದ। ॥೯೧॥

---

೧. ತಳಿರು ೨. ಮೊಗೆದುತಾ ೩. ಈಗ ಹೋಗಿ ೪. ಕೊಯ್ದುತಂದ

೧೦. ಕಲಶ ಸಿದ್ಧಗೊಳಿಸುವುದು

ಕಳಸಕೇ ಬಂದಕ್ಕಮ್ಮ ಹಿಂದ್ಯೆಕೇ ನಿಂತೀಯೇ
ಅರಸು ತಮ್ಮಯ್ನ ಹಿರಿಯಕ್ಕ। ನನ್ನಮ್ಮ
ಕಳಸದ ಚಾಜಾ ತನಗಂತ। ||೯೨||

ಕಳಸಕೆ ಬಂದ್ ಬಾಲಮ್ಮ ಕಂಬಸೇರ್ ನೆಲ್‌ಬ್ಯೆಡ
ದೊರಿಯೇ ಬಾಲಯ್ನ ಹಿರಿಯಕ್ಕ।
ಕಳಸದ ಚಾಜಾ ತನಗಂತ। ||೯೩||

ಗಲಗಲನಂದಾ ಹುಲಿಯ ಕಾಲಿನ ಮಂಚ
ಮಲಗ[1] ತಂದಿರಸ ಮಲಕೀಗೆ[2]। ತಿಂಗೀನ
ಕಾಯಾ ತಂದಿರಸ ಕಳಸಕೆ। ||೯೪||

ಕೆಂಚೇ ನನ್ನಾ ಕಯ್ಯಾ ಮಿಂಚೇಕೇಳಮ್ಮ
ತೆಂಕನವ್ರ ನೆಟ್ಟ ಪಲದುಸ್ತ। ತಿಂಗೀನಾ
ಕಾಯಾ ತಂದಿರಸೇ ಕಳಸಾಕೆ। ||೯೫||

ಕಡಗದ ಬಿಡಗೀ[3] ನೀಕೇಳಕ್ಕಮ್ಮ
ಬಡಗನವ್ರ ನೆಟ್ಟ ಪಲದುಸ್ತ[4]। ಮಾಯೀನ
ತಿರಳ ತಂದಿರಸೇ ಕಳಸಕೆ। ||೯೬||

ಅರಸೂಗೋಳ್‌ಕಳಸ ಅರ್ತೇರಿಗ್ ಸಲುವಾದೇ
ಬಿರಸೇ ನಿಂತರೇ ಬಳಗಾವೇ। ತಮ್ಮಯ್ನ
ಹಿರಿಯಕ್ಕಗೆ ಕುದ್ರೇ ಕಳಸಾವ। ||೯೭||

ಮಂಡ್ಲಿಕರ ಕಳಸ ರಂಬೇರಿಗ್ ಸಲುವಾದೇ
ತುಂಬೇ ನಿಂತರೇ ಬಳಗಾವೇ। ತಮ್ಮಯ್ನ
ಹಿರಿಯಕ್ಕ ತಕ್ಕೊಳೇ ಕಳಸವ। ||೯೮||

---

೧. ದಿಂಬ ೨. ಜೋಡಿಗೆ, ಜೊತೆಗೆ ೩. ಬೆಡಗಿ ೪. ಫಲವಸ್ತು

೧೧. ಒಲೆ, ಬಾಗಿಲು ಹಾಗೂ ಒರಳು ಪೂಜೆ

ಒಳಗೆದ್ದಕ್ಕಮ್ಮ[೧] ಒಳಗೇನ ಮಾಡೂತೀ
ಕೆಂಡ ದೇಪಗಳ ಎಡಮಾಡೇ। ನಿನ್ನಾ ಪುರುಸ
ಬಾಗ್ಲ ಪೋಜೀಕೇ ಅನಕಂಡ. ॥೯೯॥

ಒಳಗೆದ್ದಕ್ಕಮ್ಮ ಒಳಗೇನ ಮಾಡೂತೀ
ಕಾಯಾ ಕತ್ತಿಗಳ ಎಡಮಾಡೇ। ನಿನ್ನ ಪುರುಷ
ಉಳ್ಳ[೨] ಪೋಜೀಕೇ ಅನಕಂಡ। ॥೧೦೦॥

ಪ_ಟ್ಟಿ ಹಚ್ಚಡದವ್ರ ಅಣ್ಣಯ್ಯ ನಿಡವಿಲೆಕಟ್ಟಿ
ಗಟ್ಟೊ ಬಾಳೆಲಿಯ ಬಿಡಸೀನೇ। ॥೧೦೧॥

ಸಾಲೀ ಹಚ್ಚದದವ್ರ ಬಾವೋಜೇ ನಿಡವಿಲೆಕಟ್ಟಿ
ತಿರಳೂ ಬಾಳೆಲಿಯಾ ಬಿಡಸೀನೆ। ಅಕ್ಕಮ್ಮ
ಬಾಳೀಗಗ್ಗನಿಯ ಇರದೊ_ಗೇ। ॥೧೦೨॥

---

೧. ಒಳಗಿದ್ದ ೨. ಒರಳ ೩. ಗಟ್ಟಿ

೧೨. ಒಲೆ ಮಹೂರ್ತದ ಹೂ ಮುಡಿಸುವುದು

ಬಿಳ್ಳೀ ಹರವಣದಲ್ಲೇ ಮಲ್ಲುಗಿ ಹೂಂವಿರಸೇ
ಬಲ್ಲಾದವರೇಳಿ ಸಕುಣಾಕೇ[೧]। ಬಾವಿಕೇರಿ
ಹಣ್ಣೂ ಮಾವುವೊಳ್ಳ ಇರಳೀಯ॥ ಕ_ಟ್ಟೀಮ್ಯೆನೇ
ಗಲಗಲನೇ ಗವ್ಳೇ[೨] ನೊಡದಾವೇ[೩]
ಗಲಗಲನೇ ಗವ್ಳೇ ಏನಂದೇ ನೊಡದಾವೇ
ಹಿಣ್ಣಾಯಿತಪ್ಪೋಜಿ ಕೊಮರಾಗೇ। ॥೧೦೩॥

ದೊಡ್ಡ ಮುಟ್ಟೀಲೇ ದೊಡ್ಡಕ್ಕಿ ತುಂಬೀಕಂಡೇ
ದೊಡ್ಡವರೇಳಿ ಸಕುಣಾಕೇ। ಬಾವಿಕೇರಿ
ದೊಡ್ಡ ಮಾವೊಳ್ಳ ಇರಳೀಯ। ಕಟ್ಟೀಮ್ಯೆನೇ
ಚಿಕ ಚಿಕನೆ ಹಕ್ಕೀ ನೊಡದಾವೇ
ಚಿಕ ಚಿಕನೆ ಹಕ್ಕೀ ಏನಂದೇ ನೊಡದಾವೇ
ಹಿಣ್ಣಾಯಿತ ದೊರಿಯಾ ಕೊಮರಾಗೇ। ॥೧೦೪॥

ಆಕಾಸದ ಮ್ಯೆನಿಂದೇ ದೋಪಾದಾ ಹೊಗಬಂದು
ಆಕೆ ತುಳಸಮ್ಗೇ ಸಿವಪೋಜ್ಯ। ಗಿವ್ವಾಗೇ
ಆಕ್ಯೆ ಸರಗೆಂಟಿ ನೊಡದಾವೇ।
ಆಕ್ಯೆ ಸರಗೆಂಟಿ ಏನಂದೇ ನೊಡದಾವೇ।
ಹಿಣ್ಣಾಯಿತರಸೂ ಕೊಮರಾಗೇ। ॥೧೦೫॥

ಅಂಬಾರದ ಮ್ಯೆನಿಂದೇ ಗಂದದಾ ಹೊಗಬಂದು
ರಂಬೆ ದೇವ್ತಮ್ಮಾ ಸಿವಪೋಜ್ಯಾ। ಗಿವ್ವಾಗೇ
ಮುಂಗಯ್ಯ ಸರಗೆಂಟೆ ನೊಡದಾವೇ। ಏನಂದೇ
ಹಿಣ್ಣಾಯಿತ ದೊರಿಯಾ ಕೊಮರಾಗೇ। ॥೧೦೬॥

ದೊಡ್ಡ ಮುಟ್ಟೀಲೇ ದೊಡ್ಡಕ್ಕಿ ಹುಯ್ಕಂಡೇ
ದೊಡ್ಡವರೇಳಿ ಸಕುಣಾವೇ। ಬಾವಿಕೇರಿ
ಮಾರಾಯ್ರೊಲಿಮೋರ್ತಕೆ ಸವನೂವಾರ। ॥೧೦೭॥

---

೧. ಶಕುನಕ್ಕೆ ೨. ಹಲ್ಲಿ ೩. ನುಡಿದವು

ಮೋರ್ತಕೆ[೪] ಬರವೇಳಿ ಮುತ್ತಯ್ತಿಣ್ಣಮಕ್ಳ
ಅತ್ತೆಮಾವೊಳ್ಳ ಸೊಸದೀರ। ಹಿಣ್ಣಾಮಕ್ಳ
ಮೋರ್ತಕೆ ಸಯ್ವಾಗೇ ಬರಲಂದೇ। ॥೧೦೮॥

ಮಾರಾಯಾರೇಳಿ ಮಾರಾಯರಿಂಡರೇಳಿ
ಸತ್ತುಗ್ ಸುರ್ಬಾಣ ಸಯ್ವಾಗೇ। ಕೇರಣದೊದ್ಯ
ಉಚ್ಚಯದ ಮ್ಯನೇ ಸವನುವಾರ। ॥೧೦೯॥

ಸಂಪೂಗಿ ಹೂಂವುಗಳಿರಾ ಸಂಪೂಗಿ ಮೊಕ್ಕಿಗಳಿರಾ
ತಂಪಿಗ್ ಬಂದಾಡು ಗಿಳಿಗಳಿರಾ। ಹೋಗೂಬನ್ನಿ
ಸಂಪೂಗರ್ಜುನ್ನಾ ಮಗಳಾಕೆಳ್ಗೆ। ॥೧೧೦॥

ಕಡ್ಲೇಳ್ ಸಮದರದಾ ತೆರಿಯಮಿಟ್ ನಾವ್‌ಬಂದು
ಹಲವಾ ಬಣ್ಣಗಿಯ ಗರತೇರ। ತಮ್ಮಯ್ನ
ಮಡದೀಗ್ ಬಂಗಾರ್ವ ಎಡಬಂದು। ॥೧೧೧॥

ಕಡ್ಲೇಳ್ ಸಮುದರದ ತೆರಿಯ ದಾಟ್ ನಾವ್ ಬಂದು
ಹಲವ ಬಣ್ಣಗಿಯ ಹರಿಯಾಳ[೫]। ತುಂಬೀಕಂಡೇ
ನಾರೀಗ್ ಬಂಗಾರ್ವ ಎಡ ಬಂದು। ತಮ್ಮಯ್ನ
ನಾರೆದ್ದ ಮನಿಯಾ ನಮಗೇಳಿ। ॥೧೧೨॥

ಅಂಚೇಳ್ ಸಮದರದ ಕಂಚಮಿಟ್ ನಾವ್ ಬಂಚು
ಪಂಚ ಬಣ್ಣಗಿಯ ಹರಿಯಾಳ। ತುಂಬೀಕಂಡೇ
ನಿಸ್ತೀಗ್ ಬಂಗಾರ್ವ ಎಡಬಂದು। ತಮ್ಮಯ್ನ
ನಿಸ್ತೆದ್ ಮನಿಯಾ ನಮಗೇಳಿ। ॥೧೧೩॥

ಕಟ್ಟದ ಮನಿಯ ತೋರಿ ಹೊಯ್ದ ಹಸಗೆರೆ ತೋರಿ
ನಿಸ್ತೆದ್ ಮನಿಯಾ ನಮಗೆ ತೋರಿ। ತಮ್ಮಯ್ನ
ನಿಸ್ತ್ರೀಗ್ ಬಂಗಾರ್ವ ಎಡಬಂದು। ॥೧೧೪॥

ಮುತ್ತೀನ ಒಳಗೊವಡೆ ಮುತ್ತೀನ ಹೊರಗೊವಡೆ
ಮುತ್ತರನ್ನ ಸದ ಅರಮನೆ। ಒಳಗೆದ್ದ
ನಿಸ್ತ್ರೀಗ್ ಆಭರಣ ಎಡಬಂದು। ॥೧೧೫॥

ಗ್ವೊವೀರಾಜಿದ ಮುರಿಯೇ ಮುಂಗಯ್ಸರಗೆ
ಸಾಲಜೇರಗಿಯ ಕೆಲಸದ। ಮಾಟಾವೇ
ಹೂಂವ ತಂದವೇ ಮಗಳೀಗೆ। ॥೧೧೬॥

---

೪. ಮುಹೂರ್ತಕ್ಕೆ ೫. ಹರಿವಾಣ

ಮುಟ್ಟೇ ತುಂಬಿದ ಹೂಂವ ಮುಡಿಬಾರೇ ಬಾಲಮ್ಮ
ಮುತ್ತನ್ಹಸಗೆರಿಯ ನಿಡುಮನ್ನೇ। ಅತ್ತೀಯಮ್ಮ
ಮುತ್ತ ಕಳಗೀದೇ ಕುರಳೀಗೆ। ॥೧೧೭॥

ಹರವಣ ತುಂಬಿದ ಹೂಂವ ಮುಡಿಬಾರೇಬಾಲಮ್ಮ
ಹವಳದ್ಹಸಗೆರಿಯ ನಿಡುಮನ್ನೇ। ಮಾವೋಜೇ
ಬಂದೀ ಕಳಗೀನೇ ಕುರಳೀಗೆ। ॥೧೧೮॥

ಹೇರೀ ಹೂಂವೀನಂತ ಹ್ಯೆರಾನಾರದ ಚಿನ್ನ
ರಾಮಸರ ದ್ವೊಲೆ ರ_ವಿಕುಪ್ಪ। ತುಂಬೀಕಂಡೇ
ಬ್ಯೆಗಾದಲ್ ಬಂದು ಮುದವೀಗೆ। ॥೧೧೯॥

ಹೆಣ್ಣ ಹೆತ್ತಮ್ಮ ಬಾರೇ ಪುಣ್ಯಸ್ತ್ರೀ ನೀ ಬಾರೇ
ಬಣ್ಣ[೬] ತಂದವೇ ಉಡಬಾರೇ। ನಿನ್ನ ಮಗಳೀಗೆ
ಚಿನ್ನ ತಂದವೇ ಇಡಬಾರೆ। ॥೧೨೦॥

ಬಟ್ಟಾಲದಲ್ಲೇ ಮುಚ್ಚಿಟ್ಟದ್ದೇನಮ್ಮಾ
ಮುತ್ತನ ಚಿಂತಕವೇ ಗವ್ಳೀಸರ। ತೋಳಬಂದಿ
ಇಡರಿ ತಮ್ಮಯ್ನ ಮಡದೀಗೆ। ॥೧೨೧॥

ಹರಿಯಾಳದಲ್ಲೇ ಹಳಗುಡುವದೇನಮ್ಮಾ
ಹವಳದ ಚಿಂತಕವೇ ಗವ್ಳೀಸರ[೭] ಬಾಜೂಬಂದಿ
ಇಡರಿ ತಮ್ಮಯ್ನ ಮಡದೀಗೆ। ॥೧೨೨॥

ಅಂಸಳ್ಳೇ ಪಂಸಳ್ಳೇ ಮದನಳ್ಳೇ ಹನ್ನಳ್ಳೇ
ಅಯಬೋಗೀದಳ್ಳೇ ತುಳನಾಡ। ಸಾರಾದ
ಸಾಲೀ ತಂದವೇ ಮಗಳೀಗೆ। ॥೧೨೩॥

ಸಾಲಿ ತಂದವ ನಾವ ಸೇರಿತಂದವ ನಾವ
ಹರಳು ಚಿಂತಕ ಮರದೇ ಬಂದು। ನಮ್ಮಮನಿಯ
ಬಾಲಯ್ ಬರುವಾಗೇ ತರುವಾನೇ। ॥೧೨೪॥

ಕಾಲಿಗೆ ತಂದವೇ ತೋಳಿಗೆ ತಂದೂ ನಾವ
ಹಾಕೂ ಉದ್ಯಾಣ ಮರದೇ ಬಂದು। ಅಕ್ಕಮ್ಮ
ಪುತ್ರಯ್ ಬರುವಾಗೇ ತರುವಾನೇ। ॥೧೨೫॥

---

೬. ಸೀರೆ ೭. ಆಭರಣ

ಉಂದ ತಂದರೆ ನಾವ ಉಂದಾನೇ ತರಲೇಲ[೮]
ಕಟ್ಟೂವ ಮಲರ್ಕ್ ಮರದೇ ಬಂದು। ನಮ್ಮಮನಿಯ
ಬಾಲಯ್ ಬರುವಾಗೇ ತರುವಾನೇ ॥೧೨೬॥

ಎಳಿಯಾ ನಿಲ್ಲೀಕಾಯ ಹಿಣ್ಣಿಗೆ ಚಿನ್ನದ ಮುತ್ತ
ಕ್ಯೆಂದಗ್ ಸಮಮೊಕದಾ ಬಗತಾಲೆ। ಬಾರದ ಮುತ್ತ
ಇಲ್ಲೇ ಸ್ಯೆರಸಲೇ ಮಗಳೀಗೆ। ॥೧೨೭॥

ಆಯ್ದೂ ಸಿದ್ದಕ್ಕೇ ಅಯ್ದು ತಿಂಗಿನ ಪಲವೇ
ಅಯ್ದಚ್ಚಿನ ಬೆಲ್ಲ ಪಲದುಸ್ತು। ನನ್ನಮ್ಮನ
ಅತ್ತಗ್ ತುಂಬೀತೇ ಮುಡಲವ[೧೦]। ॥೧೨೮॥

ಕಟ್ಟಕ್ಕೇ ಮೆಟ್ಟಕೇ ಉಪ್ಪು ತಿಂಗಿನಕಾಯ
ಪಕ್ಕಾ ಸಾಲಕ್ಕೇ ಪಲಗಾಯ। ತಂದೀಯಾವ
ಉತ್ತಮನ ಮಗಳೇ ಮುಡಲುಡ್ಡ। ॥೧೨೯॥

ಕಾಲಂಗ್ಲಕೇ ಮತ್ತೇ ಕೀಲ ಕಡಗಕೇ ಮುತ್ತೇ
ಸೇರಿಗೆ ಮುತ್ತೇ ಸಿರಗೀಗೇ। ಮುತ್ತೆಟ್ಟ
ಮಡದಿಗೆ ಬಂಗಾರವಿಟ್ಟೇ। ಗರತೇರ। ಹೋಗೂವಾಗ
ಕಾಲುಂಗ್ಲ್ ಗಮ್ಮು ಗಯಲಂದು। ॥೧೩೦॥

---

೮. ತರಲಿಲ್ಲ ೯. ಆಭರಣ ೧೦. ಮಡಿಲು

೧೩. ಬಾಸಿಂಗ ಕಟ್ಟುವುದು

ನೀರಿಲ್ಲದಂಗಳ ನೀರೆಂಗೇ ಆದಾವೇ
ಊರಿಗ್ ದೊಡ್ಡವ್ನ ಮಗ ಮೆಂದ। ನೀರೋಗೇ
ಬಾಳೀ ಅಂಗಳಕೇ ಅಲದಾವೋ। ॥೧೩೧॥

ಕಂದಯ್ ಮೆಂದಾನೀರ ಅಂಗೂಳಿಗ್[೧] ಎಸದಾವೇ
ಅಂಗೂಳಿಗ್ ದೋಣೀ ಬರುವಾದ। ನನ್ನಮ್ಮ
ಕಂದಯ್ನ ಬಳಗೇ ಬಳಕೋಗೆ। ॥೧೩೨॥

ನೀರಾ ಮೆಂದನೆ ರಾಯಾ ತಿಲಕಾಯೆಟ್ಟನೆ ರಾಯ
ಮಲಕೇರಿ ಅಂಬಾ ಕುದರೀಯಾ। ಹೇರೀಕಂಡೇ
ಅಪ್ಪನರಮನಗೇ ಸವನೀದ। ॥೧೩೩॥

ಉದಕಾ ಮೆಂದನೆ ರಾಯಾ ಪದಕಾಯೆಟ್ಟನೆ ರಾಯಾ
ನೀಲೇರಿ ಅಂಬಾ ಕುದರೀಯ। ಏರಿಕಂಡೇ
ಮಾವನರಮನಗೇ ಸವನೀದ। ॥೧೩೪॥

ಬಿಂಡೂ ಬಾಸಿಂಗ ಅಲ್ಲಲ್ಲೇ ಬಿಳಿಯವೇ
ಅಲ್ಲೇ ಬನವಾಸಿ ಹೊಳಿಯಲ್ಲೇ। ಬೆಳೆದ ಬಿಂಡ
ಇಲ್ಲಿ ಕಾಮಟರು ತರುವಾರ। ಆ ಬಿಂಡೀಗೇ
ಕಳಿಯಾ[೩] ತುಂಬ್ವಾರ ಗಳಗೀಲೇ। ॥೧೩೫॥

ತೊಂಡ್ಲದ ಬಿಂಡು ಅಲ್ಲಲ್ಲೇ ಬಿಳಿಯವೇ
ಅಲ್ಲೆ ಅ_ಗಸೀಯ ಹೊಳಿಯಲ್ಲೇ। ಬೆಳೆದ ಬಿಂಡ
ಇಲ್ಲಿ ಗುಡಗಾರ್ರ ತರುವಾರ। ಆ ಬಿಂಡೀಗೇ
ಕಳಿಯಾ ತುಂಬ್ವಾರ ಗಳಗೀಲೇ। ॥೧೩೬॥

ಬಾಸಿಂಗಕ್ಹೋಳೇ ಆರೇಳು ದಿನವಾದು
ಬಾಸಿಂಗ ನಮ್ಮನಿಗೆ ಬರವೇಳಿ ತಮ್ಮಯ್ನು
ಬಾಸಿಂಗ ತಂದರ್ವಿೀಗ್ ಉಡಗೆರೆ। ॥೧೩೭॥

---

೧. ಅಂಗಳಕ್ಕೆ ೨. ಹತ್ತಿಕೊಂಡು ೩. ಚೆಲುವನ್ನು, ಕಾಂತಿ

ಬಾಸಿಂಗದ ಕೆಲಸ ಉಂದು ದಿನದಾ ಕೆಲಸ
ಸೂಸಿಕದ ಕೆಲಸ ಇಪರೀತ। ಬಾಲವ್ವೀಯ
ತೊಂಡ್ಲ ತಂದವ್ರೀಗ್ ಉಡಗೇರೆ। ॥೧೩೮॥

ಬಾಸಿಂಗದ ಬಿಂಡ ಇಲ್ಲೆಲ್ಲೇ ಬಿಳವಾದ
ಅಲ್ಲೇ ಬನವಾಸಿ ಹೊಳಿಯಲ್ಲೇ। ಬೆಳೆದ ಬಿಂಡ
ಇಲ್ಲಿ ಗುಡಗಾರ ತರಸೀದ। ಬಿಂಡೀಗೇ
ತಂಡ ತಂಡದಲೇ ಗಿಳಬಂದು। ಬಾಸಿಂಗ
ರೂವ ಮಾಡಿದನೇ ಗುಡಗಾರ। ಬಾಸಿಂಗ
ಕಟ್ಟೂವಾರಣ್ಣಯ್ನ ನುಸಲೀಗೆ। ॥೧೩೯॥

ಮುತ್ತನ ಬಾಸಿಂಗ ಬಾವೋಜೇ ಕಟ್ಟಲಜಾಣ
ಏಗೇ[೪] ಮಂಗಲವೇ ಜಯ ಜಯ। ಅಣ್ಣಯ್ಯಗೆ
ಬಾವೋಜ್ ಕಟ್ಟದ್ನೇ ಸುಬದಿಂದೇ। ॥೧೪೦॥

ಪ_ಟ್ಟೇ ಹಚ್ಚಡದವ್ರ ಬಾವೋಜೇ ಮೊಕಸುತ್‌ಕಟ್ಟೇ
ಏಗೇ ಮಂಗಲವೇ ಜಯ ಜಯ। ಬಾಲಯ್ನ
ಬಾವೋಜ್ ಕಟ್ಟದ್ನೇ ಸುಬದಿಂದೇ। ॥೧೪೧॥

ಕೆನ್ನೀಗೇ ನುಸಲೀಗೇ ತಿದ್ದುವಾರೇ ಸಿರಿಗಂದ
ಏಗೇ ಮಂಗಲವೇ ಜಯ ಜಯ। ಅಣ್ಣಯ್ಯಗೆ
ಬಾಸಿಂಗ ಕಟ್ಟದ್ರೇ ಸುಬದಿಂದೇ। ॥೧೪೨॥

ಉತ್ತುಮ್ನ ಮಗನಾ ಮುತ್ತನ ಬಾಸಿಂಗದ ಮ್ಯನೇ
ಇಪ್ಪತ್ತು ಗೊಂಬೇ ತರದಲ್ಲೇ। ಅಯ್ದು ಗೊಂಬೆ
ಏಳ್ಯವ[೫] ಬೇಡೇ ಕೋಣದಾವೇ[೬] ॥೧೪೩॥

ಮಾರಾಯ್ನ ಮಗನಾ ಬಿಂಡನ ಬಾಸಿಂಗದ ಮ್ಯನೇ
ನಾಲ್ವತ್ತು ಗೊಂಬೇ ತರದಲ್ಲೇ। ಅಯ್ದುಗೊಂಬೆ
ಹಣ್ಣು ಕಾಯೂ ಬೇಡೇ ಕೋಣದಾವೇ। ॥೧೪೪॥

---

೪. ಈಗ ೫. ವೀಳ್ಯವನ್ನು ೬. ಕುಣಿದವು

೧೪. ದಿಬ್ಬಣ ಹೊರಡುವ ತಯಾರಿ

ಪಟ್ಟೇದಚ್ಚಡುಟ್ಟೇ ಮುತ್ತಿನ ಬಾಸಿಂಗ ಮುಡದೇ
ಉಪ್ಪರಗೀ ಒಳಗೇ ಹ್ವೊದಾನೇ। ಅಣ್ಣಯ್ಯ
ಅಪ್ಪೋಜ ಕರದೇ ನುಳಿಮಾತೇ। ನಂಬಾನೇ।
ಸಂಗಡೇಗ್ಯೆರ ಕಳಗೂತಿ। ॥೧೪೫॥

ಯಾರೀಗ್ಗೈಳಲೆ ಮಗನೆ ಯಾರಿಗೆ ಕೈಳಲೆಮಗನೆ
ಕೋಲು ನ್ಯೆವಳದ ಹಿರಿಬಾವ। ನೊಡಗುಂಡೇ
ಹೋಗಿ ಬಾ ಮಗನೆ ಮುದವೀಗೆ। ॥೧೪೬॥

ಸಾಲಿದಚ್ಚಡನುಟ್ಟೇ ಹೂಂವನ ಬಾಸಿಂಗ ಮುಡದೇ
ಮಾಳೂಗಿ ಒಳಗೇ ಹ್ವೊದನೇ। ಬಾಲಯ್ಯ
ತಾಯಮ್ನ ಕರದೇ ನುಳಿಮಾತೇ। ನಂಬಾನೇ
ಸಂಗಡೇಗ್ಯೆರ ಕಳಗೂತಿ। ॥೧೪೭॥

ಒಬ್ಬಳೇ ನಿನ್ನಕ್ಕಮ್ಮ ಒಬ್ಬಳೇ ತಂಗಮ್ಮ
ಬಂದೀಯ ಕೊಳ್ಳ ಹಿರಿಯಕ್ಕ। ನೊಡಗುಂಡೇ
ಹೋಗಿ ಬಾ ಮಗನೆ ಮುದವೀಗೆ। ॥೧೪೮॥

ಉಪ್ಪರಗೀ ಮೆಟ್ಟ ಹತ್ತುವಾರಿಳುವಾರ
ಕುಪ್ಪೀಗೇ ಮುತ್ತ ಸುರುವಾರ। ಅಣ್ಣಯ್ಯನ
ಅಕ್ಕದೀರ್ ಬ್ಯೆಗೇ ಸವನೀರಿ। ॥೧೪೯॥

ಅಕ್ಕಾದೀರೆಲ್ಲ ಮಂಡೀ ಕಟ್ಟುವಂಕ್ರಿ[೧]
ಸೂಲ್ಯಮ್ ಕಂತದನೇ[೨] ದರಿಯಲ್ಲೇ। ತಮ್ಮಯ್ಯ
ತನ್ನಕ್ಕಗಿನ್ನಿಟ್ಟು ತಡವಂದ। ॥೧೫೦॥

ತಂಗಾದೀರೆಲ್ಲ ಚಿನ್ನಾಯಿಕ್ಕುವಂಕ್ರೀ
ಚಂದ್ರಮ್ ಕಂತದನೇ ದರಿಯಲ್ಲೇ। ಬಾಲಯ್ಯ
ತಂಗೀಗಿನ್ನಿಟ್ಟು ತಡವಂದ। ॥೧೫೧॥

---

೧. ಕಟ್ಟುವವರೆಗೆ ೨. ಮುಳುಗಿದನು

ತಾಯಾದೀರೆಲ್ಲ ಸಾಲೀನಿರದುಡುವಾಗೇ
ದ್ಯೆವರ್ ಕಂತಿದವೇ ದ_ರಿಯಲ್ಲೇ। ಅಣ್ಣಯ್ನು
ತಾಯಾದೀರ್ ಬೈಗೇ ಸವನೀರಿ। ॥೧೫೨॥

ಪಿಟ್ಲೋಗಿಲಿರುವಾ ಪ_ಟ್ಟೇಸೇರೀಯುಟ್ಟೇ
ಬೂಮಿ ಬಾರತನ ಕಳಸಾವ। ತಡದೇ ಬರುವಾ
ಅಕ್ಕಗಿನ್ನಿಟ್ಟು ತಡವಂದ। ॥೧೫೩॥

ನ್ಯೆಲೀ ಮ್ಯೆನಿರುವ ದಾರೀಸೇರೀಯುಟ್ಟೇ
ಕ್ರಟ್ಣ ಬಾರತನಕಳಸಾವ। ತಡದೇ ಬರುವಾ
ತಂಗೀಗಿನ್ನಿಟ್ಟು ತಡವಂದ। ॥೧೫೪॥

ಸೊರಿಯಾ ಹೂವಿನಂತಾ। ಜರಿಯಾ ಸೇರಿಯುಟ್ಟೇ
ದೊರಗೋಳ ನಿಡಗೇ ಕಳಸಾವ। ತಡದೇ ಬರುವಾ
ಅಕ್ಕಗಿನ್ನಿಟ್ಟು ತಡವಂದ। ॥೧೫೫॥

ನಿಂಬೀ ಹಣ್ಣಿನಂಗೇ ತುಂಬಿತ ತಮ್ಮನ ಬಳಗ
ಯಾವಲ್ ನೋಡದ್ರೂ ಸೆರಸಿಲ್ಲ[3]। ತಮ್ಮಯ್ಯ
ಇಲ್ಲೇ ಕೂಡಸ್ದೇ ಬಳಗಾವ। ॥೧೫೬॥

ಉದ್ದನ ಗದ್ಯಲ್ಲೇ ಹಕ್ಕೇ ಸಾಲೊಯ್ದಂಗೇ
ಯಾವಲ್ ನೋಡಿದ್ರೂ ತೆರಣಿಲ್ಲ। ಬಾಲಯ್ಯ
ಯಾವಲ್ ಕೂಡ್ಸದಿಯೋ ಬಳಗಾವ। ॥೧೫೭॥

ಏಳುಯೇಳಂದ್ರೇ ಏಳಾವೇ ಮಾಳೂಗೇ
ದ್ಯೆವರೆದ್ದಂಗ್ಳ ಗಳದಾನೇ। ತಮ್ಮಯ್ಯ
ಏಳಂದ ತನ್ನ ಬಳಗಾವ। ॥೧೫೮॥

ಆನೀಯ ತಂದೇ ಜೇನ ಮರಕೇ ಕಟ್ಟೇ
ಏಗ್ಯೆರು ಎದ್ರೇ ಮುದವೀಗೆ। ತಾಯಮ್ನ
ರಾಮಲವತರದಾ[4] ಮಗಯೆದ್ದ। ॥೧೫೯॥

ಕುದ್ರೀಯ ತಂದೇ ಗಂದದ ಮರಕೇಕಟ್ಟೇ
ಏಗ್ಯೆರು ಬಂದ್ರೆ ಮುದವೀಗೆ। ನನ್ನಮ್ನ
ಕ್ರಟ್ಣಲವತರದ ಮಗಬಂದ। ॥೧೬೦॥

---

೩. ಜಾಗವಿಲ್ಲ ೪. ಅವತಾರದ

ಹತ್ತನಾರದ[೫] ಚೇಜಿ ಹತ್ತೀದ ತಮ್ಮಯ್ಯ
ಅಕ್ಕೋಗೇ ಜೇನ[೬] ಹಿಡುವಾದ
ಅಕ್ಕೋಗೇ ಜೇನ ಏನಂದೇ ಹಿಡುವಾದ
ಬಾಯಾರಾಕ್ಣಾಲ[೭] ಕುಡದೋಗ। ॥೧೬೧॥

ಹಾಲಾಕುಡುವಾಕಕ್ಕ ಇಲ್ಲಲ್ಲೇ ತಡವುಂಟ
ಆಕಾಸದ ಮ್ಯನೇ ಅಮರೀತ। ಕುಡಕಂಡೇ
ಬೂಮಿ ತ್ವೊರದಿಣ್ಣ ಗೆಲಕೋತಿ। ॥೧೬೨॥

ಸ್ವೊಮೀಗೇ ಸರಣಂದ ಬೂಮೀಗೇಳ್ಯನಿಟ್ಟೇ
ಕಾಲನಾವುಗಿಯ ಸುಗದಿಟ್ಟೇ। ಬಾಲಯ್ಯ
ತನ್ನೂರ ಗುಡಿಯೊಡಿಗೇ[೮] ಸರಣಂದ। ॥೧೬೩॥

ಗಿಂಡೇ[೯] ಗಿಡಬಿಡಿ[೧೦] ಎಂಬತ್ತುದಂಡೂಗೇ
ಮುಂದೇ ಬಾರಿಸುವ ಸಮಜೋಡ। ದಿನಿಕೇಳೇ
ಬಾರದೆದ್ದವ್ರು[೧೧] ಬರುವಾರೇ। ॥೧೬೪॥

ತಾಳಾ ಗಿಡಬಿಡಿಯೇ ಹತ್ತಿಂಟು ದಂಡೂಗೇ
ಕೋಡೇ[೧೨] ಬಾರಸುವ ಸಮಜೋಡ। ದಿನಿಕೇಳೇ
ಬಲ್ಲೆನೆಂಬವ್ರು ಬರುವಾರೇ। ॥೧೬೫॥

ಕಾಳೆ ಕರ್ನಿಯೋ ಬೋರಂಬು ಮದ್ದಾಳೆ
ಆಲಸಿ ನುಡುವಾ ಸುರತೀಯೇ[೧೩] ದಿನಿಕೇಳೇ
ಒಲ್ಲೆನೆಂಬವ್ರು ಬರುವಾರೇ। ॥೧೬೬॥

---

೫. ಹತ್ತಲಾರದ ೬. ಜೇನು, ಕುದುರೆ ತಡಿ ೭. ನೀರಡಿಕೆಗೆ ಹಾಲು ೮. ಬೊಮ್ಮಯ್ಯದೇವರಿಗೆ ೯. ವಾದ್ಯ ವಿಶೇಷ ೧೦. ವಾದ್ಯ ವಿಶೇಷ ೧೧. ಬರದಿದ್ದವರು ೧೨. ಸಮೀಪ ೧೩. ಶ್ರುತಿ

೧೫. ದಿಬ್ಬಣ ಹೊರಡುವುದು

ಕುದ್ರೇ ಕುದ್ರೇ ಮುಂದೇ ಕುದರಿಯ ಮರಿಮುಂದೇ
ಚಿದ್ರೇ ನನ್ನಮ್ನ ಮಗ ಮುಂದೇ। ಹೋಗೂವಾಗೇ
ಪಟ್ಟಣದಲ್ ದ್ಯೆವರೊಲದಂಗೇ। ॥೧೬೭॥

ಆನೇ ಆನೇ ಮುಂದೇ ಆನೀಯ ಮರಿಮುಂದೇ
ಜಾಣೇ ನನ್ನಮ್ನ ಮಗ ಮುಂದೇ। ಹೋಗೂವಾಗೇ
ಊರಲ್ಲೇ ದ್ಯೆವರೊಲದಂಗೇ। ॥೧೬೮॥

ಸೊರಿಯಾ ಹೂಂವಿನಂತಾ ಹರಳು ಪ_ಟ್ಟೀಯುಟ್ಟೇ
ಮಂಡ್ಳಿಕ್ರ[೧] ನಿಡಗೇ ಕಳಸಾವ। ಹೆಡದಾಳೇ[೨]
ಮಂಡ್ಳಿಕ್ ತಮ್ಮಯ್ನ ಹಿರಿಯಕ್ಕ। ॥೧೬೯॥

ಕುಂಬಳ ಹೂಂವಿನಂತಾ ಕಂಬೀ ಸೇರಿಯುಟ್ಟೇ
ಮಂಡ್ಳಿಕ್ರ ನಿಡಗೇ ಕಳಸಾವ। ತಡದಾಳೇ
ದೊರಿಯೇ ತಮ್ಮಯ್ನ ಹಿರಿಯಕ್ಕ। ॥೧೭೦॥

ಗ_ಂಡಾರಿಗ್ ಅಲ್ಲಂಕೇ ಹಿಂಡಾರೀಗ್ ಪಲ್ಲಂಕೇ
ಗಂಡೂ ಮಕ್ಕಳಿಗೆ ಕುದರೀಯೇ। ಹತ್ತೀ ಕಂಡೇ
ಉಯ್ಯಾರದ ಮ್ಯೆನೇ ಬರೂವಾರೇ। ॥೧೭೧॥

ಕಂಬಾ ಕಂಬಾ ಹತ್ತೇ ದೊಂಬಾರು ಕುಣಿಯುತ್ತೇ
ಮುಂದೆ ಸಂಪಗೆಯೇ ಉದರುತ್ತೇ। ದೊರಗೋಳು
ಸಂಬ್ರಾಮದ ಮ್ಯೆನೇ ಬರುವಾರೇ। ॥೧೭೨॥

ಮಂದೇ ನಿಡಿಯಾಲೇ ಸಾಲು ದೂಳ್ಯೆಳಲೇ
ಪ_ಟ್ಟೀಯ ಬುಜವೇ ಬೆಗರಾಲೆ। ತಮ್ಮಯ್ನ
ಮಂದೇ ಚಂದದಲೇ ನಿಡಿಯಾಲೆ। ॥೧೭೩॥

ಬೆರಿಯ[೩] ಗದ್ಯಲ್ಲೇ ಗಿಳಿಯೇ ಸಾಲೊಯ್ದಂಗೇ
ದೊರಿಯೇ ತಮ್ಮಯ್ನ ಬಳಗಾವೇ। ಬಂದುಗಳೆಲ್ಲ
ನೆಡದರ ಸಾದನದ ಹುಡಿಯಲೇ। ॥೧೭೪॥

---

೧. ಮಾಂಡಲಿಕರ ೨. ಹಿಡಿದಳು ೩. ಸಸಿಯ

ಹೂಡಿದ ಗದ್ಯಲ್ಲೇ ಇರಗು[೪] ಸಾಲೊಯ್ದಂಗೇ
ಮಾರಾಯ್ ತಮ್ಮಯ್ನ ಬಳಗಾವೇ ಬಂದುಗಳೆಲ್ಲ
ನೆಡದರ ಕುಂಕುಮದ ಹುಡಿಯಲ್ಲೇ। ॥೧೭೫॥

ಉತ್ತುಮ್ರ ದಿಬ್ಬಣವೇ ಕಿತ್ತಿಟ್ಟೇ[೫] ಬರುವಾಗೇ
ಗುತ್ತೀಯಲೆದ್ದ[೬] ಸರಪಾನೇ। ಬೋರೆಟ್ಟಂಗೇ
ಉತ್ತಮ್ರ ದಿಬ್ಬಣವೇ ಸವನೀದ। ॥೧೭೬॥

ಉತ್ತುಮ್ರೊಡದಾ ಗುಂಡ ಗುತ್ತೀಯಾ ಗಳದಾವೇ
ಇಪ್ಪತ್ತು ಮುಂಡು ಕೊಸದಾವೇ। ಬಾವೀಕೇರಿ
ಉತ್ತುಮ್ರ ಹಡಗತ್ತೇ ಎಳದಾರ[೭]। ॥೧೭೭॥

ಒಂಟೀ ಕುದರೀ ಹೇರೇ ರಾಯರ್ಬತ್ತರೆಂದೇ
ಮಾಳೂಗಿ ಸವ್ನೇ ಮನೆಸವ್ನೇ। ಬಾವೀಕೇರಿ
ಮಂಡ್ಳೀಕರ್ಹಡಗತ್ತೇ ಎಳದಾರೆ। ॥೧೭೮॥

ಆನೀ ಕುದುರೀಹೇರೇ ಸಿಟರ್ಬ್ತತ್ತರಂದೇ
ಪಟ್ಟಣಸವ್ನೇ ಮನೆಸವ್ನೇ। ಬಾವೀಕೇರಿ
ಸಿಟ್ಟರ್ಹಡಗತ್ತೇ ಎಳದಾರೇ। ॥೧೭೯॥

ಮಾರಾಯ್ರೊಡದಾ ಕೋವೇ ಮಾಳೂಗಿ ಗಳದಾವೇ
ನಾಲ್ವತ್ತು ಮುಂಡು ಕೊಸದಾವೇ[೮]। ಬಾವಿಕೇರಿ
ದೊರಗೋಳ್ ದಿಬ್ಬಣವೇ ಬರುವಾದ। ॥೧೮೦॥

ಗಂದದಾ ಗುಡಿಯಾ ಮ್ಯೆನೇ ಬಂದಾವೇ ನಮ್ಮದಿಬ್ಬಣ
ಏಗೇ ಜತ್ತಿಗರ್ ಕಳಗೂವ ॥೧೮೧॥

ಇಂಬಾಗಲ ತುಳಚೀಲೆ ಇಂಬಾಗಲ ಜಿಗಲೀಲೆ
ಇಂಬಾಗಲತ್ಯಮ್ನ ಅರಮನ್ನೆ ॥೧೮೨॥

ದ್ಯೆವರ ಗುಡಿಹತ್ತೇ ಬಂದಾವೇ ನಮ್ದಿಬ್ಬಣ
ಮುಂದೇ ಅಯ್ವರ ಕಳಗೀದ। ॥೧೮೩॥

ಮುಂದೇ ಅಯ್ವರ ಏನಂದೇ ಕಳಗೀದ
ರನ್ನದ ಮಾಳಗಿಯೇ ಸವನೆರಲೆ[೧೦]। ॥೧೮೪॥

---

೪. ಇರುವೆ ೫. ರಭಸದಿಂದ ೬. ಗುತ್ತಿಯ ರಾಜ್ಯದಲ್ಲಿದ್ದ ೭. ಇಳಿದರು ೮. ಕುಸಿಯಿತು ೯. ಜೊತೆಗಾರ

ಹೂಂವನ ಗುಡಿಹತ್ತೇ ಬಂದಾವೇ ನಮ್ಮದಿಬ್ಬಣಾ
ಏಗೇ ನಾಲ್ವರ್‍ರಾ ಕಳಗೀದ। ಏನಂದೇ
ರಂಬೆದ್ದ[೧೧] ಮಾಳಗಿಯೇ ಸವನೆರಲೆ। ॥೧೮೫॥

ಮುತ್ತನ ಗುಡಿಹತ್ತೇ ಬಂದಾನೇ ಬಾಲಯ್ಯ
ಮುಂದೆ ದಾಯಾದ್ರ ಕಳಗೀದ। ತಮ್ಮಯ್ಯ
ಕುದ್ರೀ ಗಿನ್ನೇಳು ಮನೆಬೇಕ। ॥೧೮೬॥

೧೦. ಸಿದ್ಧವಾಗಿರಲಿ ೧೧. ರಂಬೆಯಿದ್ದ

೧೬. ಹೆಣ್ಣು ಸಿಂಗರಿಸಲು ಹೇಳುವುದು

ಸಂಪಗಿ ಹೊಳಿಯಲ್ಲೇ ತಂಪಿಗೆ ದೋಣಿಬಿಟ್ಟೇ
ತಂಪಿಗೆ ನಿನ್ನಳಿಯ ಬರತೀನೇ
ತಂಪಿಗೆ ನಿನ್ನಳಿಯಾ ಬರುವಾ ಸುದ್ದೀಕೇಳೇ
ಸಂಪೂಗಿ ಮುಡಿಸ ಮಗಳೀಗೆ ॥೧೮೭॥

ಮಲ್ಲೂಗಿ ಹೊಳಿಯಲ್ಲೇ ಮೆಲ್ಲಗೆ ದೋಣೀಬಿಟ್ಟೇ
ಮೆಲ್ಲಗೆ ನಿನ್ನಳಿಯ ಬರತೀನೇ
ಮೆಲ್ಲಗೆ ನಿನ್ನಳಿಯ ಬರುವಾ ಸುದ್ದೀಕೇಳೇ
ಮಲ್ಲೂಗಿ ಮುಡಿಸ ಮಗಳೀಗೆ। ॥೧೮೮॥

ಗ್ವೊವೀ ನಾಡೊಳಿಯಲ್ಲೇ ಆನೇ ಮರಗೀದಂಗೇ
ಜಾಣೇ ನಿನ್ನಳಿಯಾ ಸವನೀದ। ಸುದ್ದೀಕೇಳೇ
ಸಾಲೀ ತಂದುಡಸೇ ಮಗಳೀಗೆ। ॥೧೮೯॥

ಗುತ್ತೀ ನಾಡೊಳಿಯಲ್ಲೇ ಕುದ್ರೇಮರ್ಗೀದಂಗೇ
ಚಿದ್ರಿ ನಿನ್ನಳಿಯ ಸವನೀದ। ಸುದ್ದೀಕೇಳೇ
ಪಟ್ಟೀ ತಂದುಡಸೇ ಮಗಳೀಗೆ। ॥೧೯೦॥

ಅಂಕದೊಳಿಯಲ್ಲೇ ಬಿಂಕದ ದೋಣೀಕಟ್ಟೇ
ತಂಪಿಗೆ ನಿಮ್ಮಳಿಯ ಬರತೀನೇ। ಅಕ್ಕಮ್ಮ
ಸಂಪೂಗಿ ಸೂಡ ಮಗಳೀಗೆ। ॥೧೯೧॥

ಪಟ್ಟೀಯ ಸೇರೀಗೇ ಕಸ್ತೂರಿರಬಸಕೇ
ಬಾಡಿತ ನಿಮ್ಮಗಳ ಬಳಕೀತ। ಉಳಗಾದವ್ರೆ[1]
ಹೋಗೇ ದಾಳಿಸರೇ[2] ಚವಲವ। ॥೧೯೨॥

---

೧. ಊಳಿಗದವರೇ ೨. ಬೀಸಿರಿ

೧೭. ಎದುರುಗೊಂಬುದು

ಉಪ್ಪರಗೀ ಒಳಗೀನ ಕಟ್ಟಸಿ[೧] ತಿಗತನ್ನಿ
ಅಚ್ಚುಬೆಲ್ಲನೇ ಮುಗತನ್ನಿ। ಬಾವಿಕೇರಿ
ಉತ್ತುಮ್ರಿದ್ರಗೊಂಬೂಕೇ[೨] ನಿಡುವಾರ। ॥೧೯೩॥

ಮಾಳೂಗಿ ಒಳಗೀನ ವಾಲ್ಹಾಸಿ[೩] ತಿಗತನ್ನಿ
ಹೋಳು ಬೆಲ್ಲನೇ ಮುಗತನ್ನಿ। ಬಾವಿಕೇರಿ
ಮಾರಾಯ್ರ ಇದ್ರಗೊಂಬೂಕೇ ನಿಲುವಾರ। ॥೧೯೪॥

ಆಕಯ್ಯ ಬಾರಕೇ ಈಕಯ್ಯ ತ್ವೊರಕೇ[೪]
ತೋಕೀಲು[೫] ನೆಡಿಯ ನಿಡಿಯುತೇ। ಮಡಿವಳ್ನ
ಸೀತೀ ಬಂದ್ಹಾಸೇ ನೆಡಮಡಿಯ। ॥೧೯೫॥

ಉದ್ದನಕಾಳ್ನಚ್ಚಡ ಬದ್ರೆಸದ ಮುಂಡೆಸ
ಬುದ್ದೀಲ್ ಭೂಪಾಲ್ರ ಸಯ್ವಾಗೇ। ಬಾವಿಕೇರಿ
ಮಾರಾಯ್ರಿದ್ರಗುಣುವಾರೇ[೬]। ॥೧೯೬॥

ಸಾಸಿಕದಚ್ಚಡ ಸೂಸಿಕದ ಮುಂಡೆಸ
ಚಾತೀಲ್[೭] ಭೂಪಾಲ್ರ ಸಯ್ವಾಗೇ। ಬಾವಿಕೇರಿ
ಉತ್ತುಮರಿದ್ರಗುಂಬಾರೇ। ॥೧೯೭॥

ನೆಂತ ದಿಬ್ಬಣವ ಇದರಗುಂಬು ಬನ್ನಿ
ಬಂದೀಯ ಕೊಳ್ಳ[೮] ಹಿರಿಯಕ್ಕ। ಬಂದುರ್ತು
ನೆಂತ ದಿಬ್ಬಣವೇ ಸವನವೇ। ॥೧೯೮॥

---

೧. ಕಟ್ಟಿಟ್ಟ ಹಾಸಿಗೆ ೨. ಉತ್ತಮರನ್ನು ಎದುರುಗೊಳ್ಳಲು ೩. ಉಣ್ಣೆ ಹಾಸಿಗೆ ೪. ಗಡುತರಕ್ಕೆ ೫. ನವಿಲಿನ ೬. ಮಹಾರಾಯರನ್ನು ಎದುರುಗೊಳುವರು ೭. ಶಕ್ತಿಯಲ್ಲಿ ೮. ಕುತ್ತಿಗೆಯ

೧೮. ದಿಬ್ಬಣ ಚಪ್ಪರದಲ್ಲಿ

ಪ_ಟ್ಟೀ ಒಟ್ಟವ್ರ[೧] ಪುತ್ರನ ಚಿಚ್ಚೀದವ್ರ[೨]
ಗಟ್ಟೊ ಮಲ್ಲುಗಿಯ ಮೊಡದವ್ರ[೩]। ಬಾಲಯ್ಯನ
ತಂಗದೀರುರ್ತು[೪] ಪರರಲ್ಲ। ॥೧೯೯॥

ಹಾಲ ಕಾಸುದ ಬಿಟ್ಟೇ ಬಾಲರಿಗೆ ಬಡಸುದ ಬಿಟ್ಟೇ
ಆನೀ ಮ್ಯೆನ್ ಬಂದ ಅಳಿಯಾನ। ನೋಡುವಕತ್ತೆ
ಅಂಗಳದಲ್ ಬಂದೇ ಕೊಳತಾಳೇ[೫]। ॥೨೦೦॥

ಇಂದೇ ಬಂದಳಿಯನ ಇಂದೇನ ನೋಡೂತಿ
ನಾಳಾಗ್ ನ್ವೊಡಕ್ಕೇ ಅಳಿಯನ। ಮೊಕದಾಮ್ಯೆನೇ
ಚೆಂದ್ರಾ ಸೂಲ್ಸಮ್ಮ ಹುಳುವಾದ[೬]। ॥೨೦೧॥

ಅಂದೊಳ್ಳ ಚಪ್ಪರವೇ ಮುಂದೆ ಬಾಳೀ ಬನವೇ
ನಂದಾನದ ಪುರವೇ ನಯಲಾಟ[೭]। ನಮ್ ದಿಬ್ಬಣ
ದ್ವೊರತೀ ಪುರಕೇ ಎಳದಾವೇ[೮]। ॥೨೦೨॥

ಗ್ವೊವೀಗುತ್ತಿಗೇ ಉಲುವಾರಾಯನ ಮಗನೇ
ಸ್ವೊಮಸೇಕರನ ಅಳಿಯನೇ। ನ। ದಿಬ್ಬಣ ಬಂದೇ
ಮುತ್ತನ ಚಪ್ಪರಕೇ ಎಳದಾವೇ। ॥೨೦೩॥

ಹಾದೀಯಾ ಗಳದಾವೇ ಬೀದಿಯ ಗಳದಾವೇ
ನೆಟ್ಟ ಸಂಪುಗಿಯ ಗಳದಾವೇ। ನೆಂಟರ ಮನಿಯಾ
ಹೂಂವನ ಚಪ್ಪರಕೇ ಎಳದಾವೇ। ॥೨೦೪॥

ಅರಸಾರ ದಿಬ್ಬಣ ಬಂದೇ ಬಿರಸೀತ ಚಪ್ಪರದಲ್ಲೇ
ಅರಸೀನ ಗಮತ್ ಒಳಗೆಲ್ಲ। ಬಾವಿಕೇರಿ
ಅರಸಾರ ದಿಬ್ಬಣವೇ ಸದಮಲಗ[೧೦]। ॥೨೦೫॥

ರಂಬೇರ ದಿಬ್ಬಣ ಬಂದೇ ತುಂಬೀತಂಗಳದಲ್ಲೇ
ಗಂದದ ಗಮತ ಒಳಗೆಲ್ಲ। ಬಾವೀಕೇರಿ
ರಂಬೇರ ದಿಬ್ಬಣವೇ ಸದಮಲಗ। ॥೨೦೬॥

---

೧. ಉಟ್ಟವರು ೨. ಎತ್ತಿಕೊಂಡವರು ೩. ಮುಡಿದವರು ೪. ತಂಗಿಯರ ಹೊರತು ೫. ಕುಳಿತಳು
೬. ಹೊಳೆಯುವದು ೭. ನವಿಲಿನಾಟ ೮. ಇಳಿದವು ೯. ವಾಸನೆ ೧೦. ಅಸಂಖ್ಯಾತ

ಆನೀಯ ತಂದೇ ಜೇನ ಮರಕೇಕಟ್ಟೇ
ಏಗ್ಯೆರು ಬಂದ್ರೇ ಮುದವೀಗೆ। ನಮ್ಮಮನಿಯಾ
ರಾಮಲವತರದ ಮಗ ಬಂದ। ॥೨೦೭॥

ಕುದರೀಯ ತಂದೇ ಚಿದರ ಮರಕೇಕಟ್ಟೇ
ಏಗ್ಯೆರು ಬಂದ್ರೇ ಮುದವೀಗೆ। ನಮ್ಮಮನಿಯಾ
ಕ್ರಟ್ಣಲವತರದ ಮಗ ಬಂದ। ॥೨೦೮॥

ಮಾರಾಯ್ರಂಬವ್ರ ಮಾಳೂಗೀಲೇವರ[೧೧]
ಗಟ್ಟೊ ಚಿನ್ದಂಗೇ ಉಲುವರ[೧೨]। ಬಾಲವ್ವೀಯ
ಅಪ್ಪದೀರುರ್ತು ಪರರಲ್ಲ। ॥೨೦೯॥

ಬಿಳಿಯಾ ಕುದರೇ ಬಂದೇ ಬೀದಿಯಲ್ಲೆಳದಾವೇ
ಬಿಳಿಯಾ ಸೂಸಿಕದ ಚವಲಾವ। ದಾಳಿಸಿದಂಗೇ
ಏಳೊಳಿಗಳದೇ ದಣವೇ ಬಂದು।ದ। ಕುದರೀಗೆ
ಕಾಣಾಕೇ[೧೩] ತನ್ನಿ ಕಡಲೀಯ। ॥೨೧೦॥

ಕಣಕಾಲಿಗುದಕವೆ ಬರಲೆ ಕಯ್ದುಂಬೇಳ್ಯಾಬರಲೆ[೧೪]
ಪ_ಟ್ಟದ ಮಂಚ ಕುಡಗ್ಗಾಸಿ। ಬಾವಿಕೇರಿ
ಹಿಸರುಳ್[೧೫] ಬೀಗರ ಕ್ವೊಳತಲ್ಲೇ[೧೬]। ॥೨೧೧॥

ಯಾ ಲಕ್ಕೀ ಎಡಮಾಡೇ ಜೇರೂಗಿ ಪುಡಮಾಡೇ
ಏಗೇ ಕುಡು ನೀರೀಗ್ ಎಡಮಾಡೇ। ಬಾವಿಕೇರಿ
ಹಿಸರೊಳ್ ಬೀಗರ ಕೊಳತಲ್ಲೆ। ॥೨೧೨॥

ಬಾಸಿಂಗ ಸಡಲಿಸೋ ಸೂಸಿಕ ಸಡಲೀಸೋ
ರಂಬೆ ಮೊಡದೂಂವಾ ಸಡಲೀಸೋ। ಮುಟ್ಟಿತುಂಬೇ
ಅಂಬಾರದ ಮ್ಯೆನೆ ಬಯತೆಡೋ[೧೭]। ॥೨೧೩॥

---

೧೧. ಮಾಳಿಗೆಯಲ್ಲಿದ್ದಾರೆ ೧೨. ಹೊಳೆಯುವರು ೧೩. ಮೇವು, ಆಹಾರಕ್ಕೆ ೧೪. ಕಯ್ತುಂಬ ವೀಳ್ಯಬರಲಿ ೧೫. ಹೆಸರುವಾಸಿ ೧೬. ಕುಳಿತಲ್ಲಿ ೧೭. ಅಡಗಿಸಿಡು

೧೯. ಧಾರೆ ಹೂಮುಡಿಸುವುದು

ಮರ್ನಡ್ಗೇ ಹುಟ್ಟುವಾದೇ ಮರನಲ್ಲೇ ಬಿಳುವಾದೇ
ಮರನಾ ಮ್ಯೆನ್ ಮೊಕ್ಕೇ ಉಡುವಾದ। ಮಲ್ಲೂಗಿ
ಹೂಂವಾ ತಂದೀಯಾವೇ ಮಗಳೀಗೇ। ||೨೧೪||

ಸಿಸಿಯಾಗ್ ಹುಟ್ಟುವಾದೇ ಸಿಸಿಯಾಗೇ ಬಿಳುವಾದೇ
ಸಿಸಿಯಾಮ್ಯೆನ್ ಮೊಕ್ಕೆ ಉಡುವಾದ। ಜಾಂಜಿಯ
ಹೂಂವಾ ತಂದೀಯಾರೇ ಮಗಳೀಗೆ। ||೨೧೫||

ಸಿಸಿಯಾಗೇ ಹುಟ್ಟವಾದೇ ಮರನಾಗೇ ಬೀಳುವಾದೇ
ಮರನಾ ಮ್ಯೆನ್ ಮೊಕ್ಕೆ ಉಡುವಾದ। ಹಿಂಗಾರದ
ಕೊನಿಯಾ ತಂದಿಯಾರೇ ಮಗಳೀಗೆ। ||೨೧೬||

ಸಿಸಿಯಾಗ್ ಹುಟ್ಟುವಾದೇ ಹಿಂಡಾಗೇ ಬಿಳುವಾದೇ
ಹಿಂಡಾಮ್ಯೆನ್ ಕೊನಿಯೇ ಉಡುವಾದ। ಕೆಂದೂಗಿ
ಕೊನಿಯಾ ತಂದೀಯಾರೇ ಮಗಳೀಗೇ। ||೨೧೭||

ಮಂಡೀಗೆ ಮ_ರಿಯಾದ ತೊಂಡಲ ತಂದೀಯಾವ
ದಂಡನಾಯಕನ ಮಗಳೀಗೆ। ಬಾಲಮ್ಮಗೇ
ತೊಂಡಲ ತಂದೀಯಾವೇ ಸಬಿಯಲ್ಲೆ। ||೨೧೮||

ಕಡ್ಳಿ ಕಣ್ಣೀನ್ಹಚ್ಚಡವೇ[೧] ಕಡದೀಡೀ[೨] ಪಾವಡವೇ
ಎಲ್ಲತರದಂಗಿ ರವಕೀಯ[೩]। ತಂದೀಯಾವೇ
ನಲ್ಲೆ ನೀ ಹೂಂವ ಮುಡಿಬಾರೆ। ||೨೧೯||

ಕಟ್ಟೂವಕರಿಕಾಂಜ[೪] ಉಪ್ಪೂವಾಲೀಜೋಡ
ಆಯಾರವೇ ನಮ್ಮ ಮಗಳೀಗೆ। ಗಂಡರ ಮನಿಯಾ
ಕಾಂಜು[೫] ಬಂದಿಯಾವೇ ಕುರಳೀಗೆ[೬]। ||೨೨೦||

ಹತ್ತ ಮುತ್ತಾಕಟ್ಟ ಕರಿಮಣಿ ಸೇರಿಸಿಕಟ್ಟೇ
ಸಿವನಂಬಾ ಸಿರಗಾ ಇಳಿಬಿಡಿ। ಸಂತಾನದ
ಒಡಲೇ ಆಗಲಂದೇ ಹರಸೀರಿ। ||೨೨೧||

---

೧. ಕಡಲೆ ಕಣ್ಣಿನ ಹಚ್ಚಡ ೨. ದಟ್ಟದಡಿಯ ೩. ಕುಪ್ಪಸ ೪. ಮಂಗಲಸೂತ್ರ ೫. ಮಣಿಸರ ೬. ಕೊರಳಿಗೆ

೨೦. ಮದುಮಗನನ್ನು ಒಳಗೆ ಕರೆಯುವುದು

ಅಲ್ಲಲ್ಲೇ ಅಲ್ಲಂಕೇ ಅಲ್ಲಲ್ಲೇ ಪಲ್ಲಂಕೇ
ಅಲ್ಲೇ ನಮ್ಮಳಿಯ ನೆಲಲಂದೇ। ಅವ್ರ ಮಾವೋಜೇ
ಸಂಪೂಗಿ ಕಂಬಯ್ದು ನಿಲಸೀನೇ। ಅವ್ರ ಮಾವೋಜೇ
ತಂಪೀಗ್ ತಮ್ಮಳಿಯ ನೆಲಲಂದೇ ॥೨೨೨॥

ಅಟ್ಟಟ್ಟಕೇ ಅಲ್ಲಂಕೇ ಅಟ್ಟಟ್ಟಕೇ ಪಲ್ಲಂಕೇ
ಅಲ್ಲೇ ತಮ್ಮಳಿಯ ನೆಲಲಂದೇ। ಅವ್ರಮಾವೋಜೇ
ಪಚ್ಚೇ ಕಂಬಯ್ದು ನಿಲಸೀದ। ಮಾವೋಜೇ
ಅಳಿಯನ ಸಿರಿಪಾದ ತೊಳದಾನೇ ॥೨೨೩॥

ಪಾದಾವಾ ತೊಳದಾನೇ ಪಾವಡದಲ್ಲುದ್ದೀದ
ಕಾಯಾ ಕುಟ್[೧] ಕಯ್ಯ ಹೆಡದಾನೇ[೨]। ಮಾವೋಜೇ[೩]
ಮುತ್ತನ ಚಪ್ರರಕೇ ಕರತಂದ। ॥೨೨೪॥

ಅಲ್ಲಲ್ಲೇ ಅಲ್ಲಂಕೇ ಅಲ್ಲಲ್ಲೇ ಪಲ್ಲಂಕೇ
ಅಲ್ಲೇ ತಮ್ಮಳಿಯ ನೆಲಲಂದೇ। ಅವ್ರಮಾವೋಜೇ
ಮಲ್ಲೂಗಿ ಕಂಬಯ್ದು ನಿಲಸೀದ। ಮಾವಜೇ
ಅಳಿಯನ ಸಿರಿಪಾದ ತೊಳದಾನೇ[೪]। ॥೨೨೫॥

ಪಾದಾ ತೊಳದಾನೇ ಪಾವಡದಲ್ಲುದ್ದೀದ
ಏಳ್ಯ ಕುಟ್ ಕಯ್ಯ ತಡದಾನೇ। ಮಾವೋಜೇ
ಹೂಂವನ ಚಪ್ರರಕೆ ಕರತಂದ। ॥೨೨೬॥

---

೧. ಕೊಟ್ಟು ೨. ಹಿಡಿದನು ೩. ಮಾವ ೪. ತೊಳೆದನು

೨೧. ಧಾರೆಯೆರೆಯುವುದು

ಮೋರ್ತದ[೧] ಕಂಬೀಗೇ ಹೊಯ್ದಾರೇ ಮೆಟ್ಟಕ್ಕಿ
ಆರೇಳ್ ಹೆಣ್ಣಡಕಿ ಕೊನಿಚಾಚೇ। ಬಟ್ಟರಮಾಣಿ
ಯ್ಯೆಳೀ[೨] ನೋಡ್ ದಾರಿಯಿರೀ ಬೈಗೆ। ॥೨೨೭॥

ನಾರೀಕಯ್ಯಡಗಿಕ್ಕೇ[೩] ನಲ್ಲನ ಕೆಯ್ಮೆನಿಕ್ಕೇ
ಚುಳಚೀಯ[೪] ಕುಡಿಯ ನಿಡಗಿಕ್ಕೇ। ಬಟ್ಟರಮಾಣಿ
ಗಳಗೀನೋಡ್ ದಾರಿಯಿರೀ ಬೈಗೆ। ॥೨೨೮॥

ಉಪ್ಪರಗಿ ಒಳಗನ ಚಿತ್ತಾರದ ಗೊಂಬೀಯ
ಚಿಚ್ಚೀಕಂಡದ್ರ[೫] ಕರತನ್ನಿ। ನಮ್ಮನಿಯ
ಬಾಲಯ್ ಬಂದೀನೇ ಮುದವೀಗೆ। ॥೨೨೯॥

ಮಾಳೂಗಿ ಒಳಗೀನ ಸುವರ್ನದ ಬೊಂಬೀಯ
ನಿಗ್ದೀಕಂಡದರ ಕರತನ್ನಿ। ನಮ್ಮ ಮನಿಯ
ಕಂದ ಬಂದೀನೇ ಮುದವೀಗೆ। ॥೨೩೦॥

ಕಾಲೀಗೇ ಮೆಟ್ಟಕ್ಕೇ ಬಂದಾನೇ ಮೊದಮಗ
ಮಾರಾಯ್ರ ಮಗಳ ನಿಗತನ್ನಿ। ಬಾಲಯ್ಯ
ಹೂಂವಿನೊಲಮಾಲಿ ತಡದೀನೇ। ॥೨೩೧॥

ಸುಕ್ರ ಸೂಲ್ಯಮ್ಮ ಮೂಡಿತ ಮುಗಲೊಳಿಯಲ್ಲೇ[೬]
ಗಾಯಾ ಹೊಳಿಯಂಬಾ ಗಳಗೀಯಾ। ತಟ್ಟೀಯ
ಹೋಗಿನ್ನು ಹಾರ್ವರ ತಡದಾರೇ। ॥೨೩೨॥

ಮಲ್ಲೂಗಿ ಒಲಮಾಲೆ[೭] ಮಲ್ಲೂಗಿ ಸರಮಾಲೆ
ನಲ್ಲಗೇ ನಾರೇ ತಡದಾಳೆ।
ನಲ್ಲಗೇ ನಾರೇ ಏನಂದೇ ತಡೆದಾಳೇ
ಎಲ್ಲ ಸಿವಬಾಗಿ ತನಗಂದೇ। ॥೨೩೩॥

---

೧. ಮುಹೂರ್ತದ ೨. ವೇಳೆಯನ್ನು ೩. ಹೆಣ್ಣಿನಕಯ್ಯನ್ನು ಕೆಳಗಿಕ್ಕಿ ೪. ತುಲಸಿಯ ೫. ಎತ್ತಿಕೊಂಡು ಅವಳನ್ನು ೬. ಮುಗಿಲಹೊಳೆಯಲ್ಲಿ ೭. ಒಲವಿನ ಮಾಲೆ

ಮಲ್ಲೊಗಿ ಹೂಂವನ ಚೆಂಡ ಮಲ್ಲೊಗಿ ಹೂಂವನದಂಡೆ
ಮಲ್ಲೊಗಿ ಹೂಂವನ ಒಲಮಾಲೆ। ತಡಕಂಡೇ
ಅಟ್ಟೊ ಸಿವಬಾಗಿ ತನಗಂತ। ॥೨೩೪॥

ಗಂಡಗೊಲಮಾಲ್ಯ ರಂಬೇ ಬಂದ್ ತಡುವಾಗೇ
ಅಂಬಾರ್ದ ನಯ್ಲ್ಲ[೮] ಕೊಣದಂಗೆ। ನಮ್ಮಮ್ಮ
ಗಂಡಗೊಲ ಮಾಲ್ಯ ತಡವಾಳೆ। ॥೨೩೫॥

ಪ_ಟ್ಟೀ ಹಚ್ಚಡದವ್ರ ಅಪ್ಪೋಜೇ ಮೊಕಸುತ್[೯] ಕಟ್ಟೇ
ದೊಡ್ಡ ಬಿರಳಲ್ಲೇ ಕೊರಗಿಂಡಿ। ಹುತ್ತೀಕಂಡೇ
ಕನ್ನೀ ಕಯ್ದಾರಿ ಎರದಾನೆ। ॥೨೩೬॥

ನಾರೀಕಯ್ಯಡಗಾಗೇ ನಲ್ಲನಕ್ಕಯ್ಮೆ_ನಾಗೇ
ಚಿನ್ನದ ಚಕ್ರ ನಿಡಗಿಕ್ಕೇ। ಅವ್ರ ಮಾವೋಜೇ
ಬಾಲಿ ಕಯ್ದಾರಿ ಎರದಾನೆ। ॥೨೩೭॥

ದಾರಿಯೆರದಾ ನೀರ ಬೂಮಿಲೆ ಬರ್ತುದಂದೇ[೧೦]
ತಾಯಮ್ಮ ಹರಿಯಾಳ ತಡದಾಳ।
ತಾಯಮ್ಮ ಹರಿಯಾಳ ತಡದಾ ನೀರಾತಂದೇ
ತಿಂಗನಾ ಮರಕೇ ಹೊಯದಾರ। ॥೨೩೮॥

ಇಂದ್ರಗಿಂಡೀ ನೀರ ಚಂದ್ರಗಿಂಡೀಗ್ಹುಯ್ದೇ
ಕಂದವ್ವಿ ಕಯ್ದಾರಿ ಎರದಾರೇ
ಕಂದವ್ವಿ ಕಯ್ದಾರಿಯೆರದಾ ನೀರಾತಂದೇ
ಬಾಸಿಂಗದ ಮೈನೇ ತಳದಾರ। ॥೨೩೯॥

ಶಾಸ್ತ್ರಗಿಂಡೀ ನೀರ ಪಾತ್ರಗಿಂಡೀಗ್ಹುಯ್ದೇ
ಬಾಲವ್ವಿ ಕಯ್ಯ ತೊಳದಾರೇ।
ಬಾಲವ್ವಿ ಕಯ್ಯ ತೊಳದಾ ನೀರಾ ತಂದೇ
ತೊಂಡ್ಲದ ಮೈನೇ ತಳದಾಳೇ। ॥೨೪೦॥

ಅಕ್ಕೇ ಚೇರುಗಿಯ[೧೧] ಮುತ್ತನ ಕರಡಗೆ ತುಂಬೆ
ಗ_ಂಡನ ಮೈನೇ ತಳದಾರೇ। ನನ್ನಮ್ಮ
ಎಲ್ಲ ಸಿವಬಾಗಿ ತನಗಂದೇ। ॥೨೪೧॥

---

೮. ನವಿಲು ೯. ಮುಖಕ್ಕೆ ಸುತ್ತುಕಟ್ಟಿದ ಪಾವುಡ ೧೦. ಇಂಗುವುದೆಂದು ೧೧. ಅಕ್ಕಿ ಜೀರಿಗೆ

೨೨. ಹಸೆಗೆ ಹೋಗುವುದು

ಹಸಿಗೇಳಿಂದ್ರಾನೇ ಹಸಿಗೇಳ ಚಿಂದ್ರಾನೇ
ಹಸಿಗೇಳ ಗಮ್ಮು ಗರುಡಾನೇ। ಸಿಂಹ್ನಾಮರಿಯ
ಇಬ್ಬೀಸಿ ಸುಬಿಗೆ ಕರತನ್ನಿ। ॥೨೪೨॥

ಇನ್ನೇಳಿಂದ್ರಾನೇ ಇನ್ನೇಳ ಚಿಂದ್ರಾನೇ
ಇನ್ನೇಳ ಗಮ್ಮು ಗರುಡಾನೇ। ಸಿಂಹ್ನಾಮರಿಯೆ
ನಂಬೀಸಿ ಸಬಿಗೆ ಕರತನ್ನಿ। ॥೨೪೩॥

ಅತ್ತೀಯ ಮನಿಯ ಮುತ್ತಿನ ಜಿಗಲೀ ಮ್ಯೆನೇ
ಹತ್ತೂವಾಕ್ ರಾಯಾ ಅರಿಯಾನೇ। ಮಾಳೂಗಿಲಿರುವಾ
ನಿಸ್ತ್ರೀ ನೀಹೇಳ ನೆಲನಿಂಪ। ॥೨೪೪॥

ನೆಲ್ನಿಂಪ[೧೨] ಹೇಳೂವಾಕೇ ಹಳ್ಳಬಾವೀಯಲ್ಲ
ಅಪ್ಪೋಜಿ ಕಟ್ಟಿಸಿದ ಗರೂಡೀಯೇ। ಮಾಳುಗಿ ಒಳಗೆ
ಆನಿಯ ಹೇರೇ ಬರಬಹುದು। ॥೨೪೫॥

ಮಾವನ ಮನಿಯಾ ಹೂಂವನ ಜಿಗಲೀ ಮ್ಯೆನೇ
ಹೋಗೂವಾಕ್ ರಾಯಾ ಅರೀಯಾನೇ। ಮಾಳುಗಿಲಿರುವಾ
ನಾರೀ ನೀಹೇಳೇ ನೆಲನಿಂಪ। ॥೨೪೬॥

ನೆಲ್ನಿಂಪ ಹೇಳೂವಾಕೇ ಹಳ್ಳ ಸಮದರವಲ್ಲ
ನನ್ನಣ್ಣ ಕಟ್ಟಿಸಿದ ಗರುಡಿಯೇ। ಮಾಳುಗಿ ಒಳಗೆ
ಕುದ್ರೀಯ ಹೇರೇ ಬರಬಹುದ। ॥೨೪೭॥

---

೧೨. ನೆಲದಾಳ

೨೩. ಕಲಕಲಿ ಹಾಡು

ಕಲಕಲಿನಾಗಲೆ[೧] ಕಲಿರಾಜನಾಗಲೆ
ಉಂದುಂದು[೨] ಅಕ್ಕೆ ಗಂದಾಸಾಲಕ್ಕೆ
ಅಂಗಯ್ಲೆ ಆಡೂತ ಮುಂಗಯ್ಲೆ ತಳಸೂತ
ಉಣ್ಣೇಳೊ ಉಣ್ಣೇಳೊ ಸಿರಿಮೊಕದಾಸ
ಉಂಬುಕಲ್ಲವತ್ತೆ ದಾರಿ ಸಂಬಳುಂಟು ॥೨೪೮॥

ಬಾವಾಗೆ ನೆಂಟಗೆ ಗಿಂಟೀನ[೩] ಹಚ್ಚಡ
ತೇಗಿನ ಎಲಿಯಲ್ಲೆ ತಿಗದೇ[೪] ಬುತ್ತೀಕಟ್ಟೇ
ಬಾಳೀಯ ಎಲಿಯಲ್ಲೆ ಬಗದೇ ಬುತ್ತೀಕಟ್ಟೇ
ಹೆಣ್‌ಕೇಳೂ ಪುರಕೆ ಹೆಣ್‌ಕೇಳೂಕ್ ಹ್ವೊದರೊ
ಕಾಮ್‌ದೈವ್ರು ಕೊಡೆನಂತ ಬೀಮ್‌ದೈವ್ರು ಕೊಡೆನಂತ
ಸಿರಿಕೃಷ್ಣರಾಯ ವರವಾಯಿತಂದ ॥೨೪೯॥

ಕಯ್ತುಂಬೇಳ್ಯ ಕೊಟ್ರ ಬಂಡೀ ತುಂಬಡಕೀ ಕೊಟ್ರ
ಗಂಗಾ ಬಾವನ ತಾಯೆ ತುಂಬೀದ ಕೊಡನಿತ್ತೆ
ಇಂದೇ ಆಗೂ ಮುದ್ಯಾ ಬಂಡಿ ಮೈನಾಗಲೆ
ಇಂದೇ ಮದುಮಕ್ಳೀಗ್ ಮೈಯಾಣಾಗಲೆ
ಮೆಂದ ಮುದುಮಕ್ಳೀಗ್ ದಿಟ್ಟೀಮುಟ್ಟುದಂದೆ
ಕಾಮನ ತಡಿಗೋಗೇ ಕಪ್ಪೀನ ಬುಟ್ಟಿಟ್ಟೇ
ಬೇಮನ ತಡಿಗೋಗೇ ಬೇಮನ ಬುಟ್ಟಟ್ಟೇ
ಎಲ್ಲ ಮಲ್ಲಗಂಬ ಬಾಸಿಂಗ ಕಟ್ಟಲೆ
ಎಲ್ಲ ಮಲ್ಲಗಂಬ ತೊಂಡಲ ಕಟ್ಟಲೆ ॥೨೫೦॥

ಹಿಣ್ಣೀನವ್ರ ತಾಯೆ ಮಲನೀರ ಮೀವಾಗೇ
ಹತ್ತಿಂಟು ಉಣ್ಣಕೇ ಅಪ್ಪಣ ಚಪ್ಪಣಿಯಾಗೇ
ಸಂಬೂವ[೫] ಹಡದಾಳ ಬೊಂಬೀಯ ಪಡದಾಳ
ಅರಳ ಕಡಕೀಮೆನೇ ತಿಗದೇ ತುಟ್ಟಕಟ್ಟೇ
ಜೋ ಜೋನಂದು ಪಾಡಿಯಾಳ ಗೋಪೇ
ಅಡಕೀ ನೆ_ಡಲಬಾರೇ ಕಡಕಿಂಪು ನಿರಿಹಾಕೇ

---

೧. ಶೂರನಾಗಲಿ ೨. ಒಂದೊಂದು ೩. ದುಡ್ಡಿನ ೪. ತೆಗೆದು ೫. ದೃಷ್ಟಿಯಾಗುವುದೆಂದು

ಸುಣ್ಣ ನೆ_ಡಲಬಾರೇ ಬಣ್ಣದ ನಿರಿಹಾಕೇ
ಎಲಿಯ ನೆ_ಡಲಬಾರೇ ಕವಳುಗಿ ನಿರಿಹಾಕೇ
ಅಡಕೀ ಬರವೇನೆ ಅಡಕಪ್ಪಿ ನಿರಿಯವಳೆ
ಎಲಿಕೊಡ ಬರವೇನೆ ಎಲಕಪ್ಪಿ ನಿರಿಯವಳೆ
ತಾಕೊಟ್ಟ ಸೈಸೆ ಗುರುಕೊಟ್ಟ ಮಂತ್ರ ತಿರವಾಗ್ಲೆ[೬] ||೨೫೧||

೫. ಶಿವನನ್ನು ೬. ಸ್ಥಿರವಾಗಲಿ

೨೪. ಬೋನಂಗಿ ಪಾಯಸ ಬಡಿಸುವುದು

ಮಾರಾಯ್ರ ಮಗಳೆ ಹರಿಯಾಳ[1] ತುಳದಿರಸೇ
ಹರಳು ಪಾವಡದಲೇ ತಳನುದ್ದೇ। ಬಡಸಮ್ಮ
ಅರವತ್ತು ಬಗಿಯ ಅಡಗೀಯ। ||೨೫೨||

ಕಂಚುಗಾರರ ಮನಿಯಾ ಕಂಚಿನ ಸಿಟಗಾದಲ್ಲೇ[2]
ಕೆಂಚೇ ನನ್ನಮ್ಮ ನೋಡೇ ಬಡಸ। ನಿನ್ನಾನಲ್ಲ
ಬಂಕಾಪುರ ದೊರಿಯೇ ಒಣ[3] ಬಂದ} ||೨೫೩||

ಯಾಲಕ್ಕಿ ಹಾಕೇ ಅಟ್ಟಾಳೇ ಪಾಯಸ
ಹರಿಯಾಳದಲ್ಲೇ ಮುಗುವಾಳ[4]। ನನ್ನಮ್ಮ
ಗ್ವೊವಿಲಿಂದ್ ಬಂದ ಅಳಿಯಾಗೆ। ||೨೫೪||

ಜೇರುಗಿ ಹುಡಿಹಾಕೇ ಅಟ್ಟಾಳೇ ಪಾಯಸ
ಸಿಟ್ವೊಗಾದಲೇ ಮುಗುವಾಳ। ನನ್ನಮ್ಮ
ಗುತ್ತೀಲಿಂದ್ ಬಂದ ಅಳಿಯಾಗೆ। ||೨೫೫||

ಹಲಸೀನ ಹಣ್ಣ ಗಿಂವಚೇ[5] ಗಾರುಗಿ ಮಾಡೇ
ಅರಸೀನದಂತಾ ಎರದುಪ್ಪ। ಸವರಿಸಿಕಂಡೆ[6]
ಅರ್ತೀಲೆ ಬಡಸ್ವಾಳೆ ಅಳಿಯಗೆ। ||೨೫೬||

ಬಾಳೀಯ ಹಣ್ಣ ಗಿಂವಚೇ ಗಾರುಗಿ ಮಾಡೇ
ಅರಸೀನದಂತಾ ಎರದುಪ್ಪ। ಸವರಿಸಿಕಂಡೇ
ಅರ್ತೀಲೇ ಬಡಸ್ವಾಳೆ ಅಳಿಯಗೆ। ||೨೫೭||

ಉಣ್ಣು ಉಣ್ಣಂದಾರೇ ಉಂಬುಕೆ ಹೆಡ್ಡನಲ್ಲ
ಸೆಣ್ಣವನಾದರೂ ಬಲುಜಾಣ। ಅತ್ತೀಯಮ್ಮ
ಚಿನ್ನದುಂಗಲ ಎಡಬೇಕ[7]। ||೨೫೮||

ದೊಡ್ಡ ಗ್ವೊಡೀ ಮ್ಯನೇ ದೊಡ್ಡ ದೇಪಾಕಚ್ಚೇ
ದೊಡ್ಡತ್ತೇ ನ್ವೊಡೇ ಅಳಿಯನ। ಮೊಕದಾ ಮ್ಯನೇ
ಚಿಂದ್ರಾ ಸೂಲ್ಯಮ್ಮ ಕೊಣದಂಗೆ[7]। ||೨೫೯||

---

೧. ಹಸೆ ಜಗಲಿಯ ೨. ಸಟ್ಟುಗದಲ್ಲಿ ೩. ಉಣ್ಣಲು ೪. ಮೊಗೆಯುವಳು ೫. ಚೆನ್ನಾಗಿನುರಿದು
೬. ಹೊಯ್ದುಕೊಂಡು ೭. ಹಾಕಬೇಕು

ಏಗೇ ಬಂದಳಿಯನ ಯೇಗೇನ ನೋಡೂತಿ
ನಾಳಾಗ್ ನೋಡತ್ತೆ ಅಳಿಯಾನ। ನೀನು ಹಡದಾ
ಮಗಳಿಗೀನಲ್ಲ ವರನವೇ। ॥೨೬೦॥

ಉತ್ತುಮ್ನ ಹಲ್ಲು ಬಾಯ ಮುತ್ತಾ ಮೋರಿಸಿದಂಗೇ್
ಸಾಲೀಯ ದಿಡಿಯಾ ನೆಣದಂಗೇ। ತಮ್ಮಯ್ನ
ಹಡದಮ್ಮ ಇನ್ನಿಟ್ಟು ಚಿಲವೀಯೋ। ॥೨೬೧॥

ಕಂಚೀ ಹಣ್ಣಿನಂತ ಕೆಂಚೇ ಬಂದಳರಾಯಾ
ತಾಂವಾ[೧೦]ಬಿಡ ನಿನ್ನ ಬಲನಲ್ಲೆ। ಅತ್ತೀ ಮಗಳೆ
ಮುತ್ತ ಮೊಡದಾಕೆ[೧೧] ತಲಬಾಗೆ। ॥೨೬೨॥

ನಿಂಬೀ ಹಣ್ಣೀನಂತಾ ರಂಬೆ ಬಂದಳರಾಯಾ
ಇಂಬಬಿಡಿ ನಿನ್ನಾ ಬಲನಲ್ಲೆ। ಮಾವನ ಮಗಳೆ
ಹೂಂವ ಮೊಡದಾಕೆ ತಲಬಾಗೆ। ॥೨೬೩॥

(ಮುಂದೆ ಮತ್ತೆ ಹಸೆಗೆ ಹೋಗುವ ಹಾಡನ್ನೇ ಹೇಳುತ್ತಾರೆ)

---

೮. ಕುಣಿದಂತೆ ೯. ಮುದ್ರಿಸಿದ ಹಾಗೆ ೧೦. ಜಾಗೆ ೧೧. ಮುಡಿದವಳೆ

೨೫. ಗಂಧ–ವೀಳ್ಯ

ಮುಂದಾನಂಗಳದಲ್ಲೇ ಉಚ್ಚಯವಿರುವಾದ
ಗಂದಾವತೇದೇ ತಿಲಕಾವೇ। ಬಾವಿಕೇರಿ
ಉತ್ತುಮ್ರ ಗಂದೇಳಿಕ್ ಕೊಳತಾರೇ[೧]। ॥೨೬೪॥

ಏಗೇ ಇವ್ರಮನ್ನೇ ಸಂಗ್ರಮವಿರುವಾದ
ಗಂದಾವಾ ತೇದೇ ತಿಲಕಾವ। ತಿದ್ದೂವ
ಮಾರಾಯ್ರ ಗಂದೇಳಿಕ್ ಕೊಳತಾರೇ। ॥೨೬೫॥

ಗರ್ತೇರಿಗ್ ಗಂದಾಕುಡರಿ ಅರ್ತೇರಿಗ್ ಹೂಂವಾಕುಡರಿ
ಗರ್ತೇರಿಗ್ ಹೂಂವನ ಸರಕುಡರಿ। ಬಾವಿಕೇರಿ
ಗರ್ತೇರ್ ಗಂದೇಳಿಕ್ ಕೊಳತಾರೇ। ॥೨೬೬॥

ಏಳೀ[೨] ಹಚ್ಚು ಅಣ್ಣಯ್ಗೆ ಏಳೊರನ ಉಂಗೀಲ
ಏಳೀದರವಣವೇ ಬಲನಲ್ಲೆ। ಇಟ್ಟೇ ಕಂಡೇ
ಏಳೀ ಹಚ್ಚಿದನೇ ಬಳಗಾಕೆ। ॥೨೬೭॥

ಗಂದಾ ಹಚ್ಚು ಅಕ್ಕಗೇ ಅಯ್ದೊರನ ಉಂಗೀಲ
ಗಂದದ ತ_ಟ್ಟೇ ಬಲನಲ್ಲೆ। ಇಟ್ಟೇ ಕಂಡೇ
ಗಂದ ಹಚ್ಚೂವ ಬಳಗಾಕೆ। ॥೨೬೮॥

---

೧. ಕುಳಿತರು ೨. ವೀಳ್ಯ

೨೬. ಓಕುಳಿ

ಆಲಾದ ಮರಕೋದನೆ ನಮರಂಗ
ಆರೇಳು ದೋಣಿಯ ಕಡಸಿದನೆ
ಅತ್ತಗದೀರೆಲ್ಲ ಅತ್ತತ್ತಗ್ ಸೇರಿರಿ
ಬ್ಯಗಾಡಿರರಸೀನದೋಕುಳಿಯsಸೋಕುಳಿಯಾ। ॥೨೬೯॥

ಅತ್ತೀಯ ಮರಕೋದನೆ ನಮರಂಗ
ಹತ್ತಿಂಟು ದೋಣಿಯ ಕಡಸಿದನೆ
ಅ_ತ್ತತ್ತದೀರೆಲ್ಲ ಅತ್ತತ್ತಗ್ ಸೇರಿರಿ
ಬ್ಯಗಾಡಿರರಸೀನ ದೋಕುಳಿಯಾs ಸೋಕುಳಿಯಾ। ॥೨೭೦॥

ಅಂಡೆ ತುಂಬಿದರಸಿನವಾ ಸಿರಿಹರಿ ಸಿರಿರಂಗ
ತಾನೋಗೇ ತರಸೀದನೆ
ಅಲ್ಲೆ ತುಂಬಿದರ್ ರನ್ನದ ಚಿನ್ನದ ಓಕುಳಿಯ
ಬ್ಯಗಾಡಿರರಸೀನ ದೋಕುಳಿಯಾs ಸೋಕುಳಿಯಾ। ॥೨೭೧॥

ಅಂಗಯ್ಸರಳಂಗ ಮುಂಗಯ್ಸರಳಂಗ
ಉಂಗಲ ನೀರಲ್ಲೆ ಮುಳಗೀತೆ। ಅತ್ತುಗಬಾಮೆ
ನಿನ್ ತಮ್ಮಯ್ಗೆ ತಗ್ಗ[೧] ಕೊಡನಾರೆ। ॥೨೭೨॥

ತಮ್ಮಯ್ಗೆ ತಗ್ಗ ನೀಯೇನಕುಡುವೆ ಹಿಣ್ಣೆ
ನಾಕುಡುವೆ ಕೊರಳ ಪದಕವ। ॥೨೭೩॥

ಆಕಯ್ಸರಳಂಗ ಈಕಯ್‌ಸರಳಂಗ
ಜೋತರ ನೀರಲ್ಲೆ ಮುಳಗೀತೆ। ಅತ್ತುಗಬಾಮೆ
ನಿನ್ನಣ್ಣಗೆ ತಗ್ಗ ಕೊಡನಾರೆ। ॥೨೭೪॥

ಅಣ್ಣಯ್ಗೆ ತಗ್ಗ ನೀಯೇನ ಕುಡುವೆ ಹಿಣ್ಣೆ
ನಾಕುಡುವೆ ಕೊರಳ ಮಣಿಸರವ। ॥೨೭೫॥

---

೧. ಸೋಲನ್ನು

ಬಚ್ಚೇಲ ನಾಣಗಿಗೇ ಅಚ್ಚತಾಮೀರನಿಟ್ಟೇ[೨]
ಕಚ್ಚಾಡುತವೆ ಎರೋಡಾನೆ। ಅತ್ತುಗಬಾಮಿ
ನಿನ್ನಣ್ಣಯ್ಗೆ ತಗ್ಗ ಕೊಡನಾರೆ ॥೨೭೬॥

ಅಣ್ಣಯ್ಗೆ ತಗ್ಗ ನೀಯೇನ ಕುಡುವೆ ಹಿಣ್ಣೆ
ನಾಕುಡುವೆ ಕೊರಳ ಸೆರಮುತ್ತ। ॥೨೭೮॥

---

೨. ಪಕ್ಕಾತಾಮ್ರವಿಟ್ಟು

೨೭. ಕರಜಿಗೆ ಬಡಸುವುದು

ತಿಂಗಳ ಬೆಳಕೀಗೇ ಬೆಂದವೇ ಕರಜೂಗೇ[೧]
ಬೊಂಬೀ ಹಚ್ಚಡದ ಮ_ರಿಯಲ್ಲೇ। ಅತ್ತೀಯಮ್ಮ
ಅಳಿಯಾಗೇ ಬಡಸ್ವಾಳೇ ಅರವತ್ತ। ॥೨೭೮॥

ಚಾರಕಲ[೨] ಬಿಳಕೀಗೇ ಬೆಂದವೇ ಕರಜೂಗೇ
ಸಾಲೀ ಹಚ್ಚಡದ ಮ_ರಿಯಲ್ಲೇ। ಬೆಂದ ಕರಜೂಗೇ
ಅಳಿಯಾಗೇ ಬಡಸ್ವಾಳೇ ಅಯನೂರ। ॥೨೭೯॥

ಕರಜೂಗೇ ಕರಜೂಗೇ ಯಾತರ ಕರಜೂಗೇ
ತುಪ್ಪದಲ್ ಬೆಂದ ಕರಜೂಗೇ। ಆವ್ರತ್ತೀಯಮ್ಮ
ಅಳಿಯಾಗೇ ಬಡಸೂದೇ ಅರವತ್ತ। ॥೨೮೦॥

ಬಟ್ಟಲ ತುಂಬೀದ ಬುಟ್ಟು ಕರಜಿಗಿಕಾಯ
ಮುಟ್ಟಾದೀರದ್ರ ಮುರಿಯಾದೀರ। ತಮ್ಮಯ್ಯ
ಬುಟ್ಟೀಗುಂಗಲವ[೩] ಎಡಬೇಕ। ॥೨೮೧॥

ಹರಿಯಾಳ ತುಂಬೀದ ಹರಳು ಕರಜಿಗಿಕಾಯಾ
ಕೆಟ್ಟಾದೀರದ್ರ[೪] ಮುರಿಯಾದೀರ। ತಮ್ಮಯ್ಯ
ಬಿರಳೀಗುಂಗುರವ ಎಡಬೇಕ। ॥೨೮೨॥

ತಿನ್ನು ತಿನ್ನಂದರೆ ತಿಂಬೂಕೆ ಹೆಡ್ಡನೆ।
ಸಿಣ್ಣವನಾದರು ಜಾಣನೆ। ಬಾಲಯ್ಯಗೆ
ಚಿನ್ನದುಂಗಲವ ಎಡಬೇಕ। ॥೨೮೩॥

ಕರಜೂಗೆ ಕರಜೂಗೇ ಯಾತರ ಕರಜೂಗೇ
ಸೂಸಿಕದಟ್ಟು ಸುಳಿಯಲ್ಲ। ಕರಜೂಗೇ
ಬೇಯ್‌ಸಾಕ ನಿನ್ನ ಕುದರೀಗೆ। ॥೨೮೪॥

---

೧. ಕರ್ಜೀಕಾಯಿ ೨. ನಕ್ಷತ್ರ ೩. ಬೆರಳಿಗುಂಗರವನ್ನು ೪. ಮುಟ್ಟದಿರು

೨೮. ಮನ್ದುಂಬುವದು (ಮನೆ ತುಂಬಿಸುವುದು)

ದೊಡ್ಡವನೆಡನಲ್ಲೇ ದೊಡ್ಡವನ ಬಲನಲ್ಲೇ
ದೊಡ್ಡಬಾಲವ್ವೇ ಸಯ್ವಾಗೇ। ಕೊಳತಾಗೇ
ದೊಡ್ಡಂಗಿ ಜರಿಯಾ ನೆಣದಂಗೆ। ॥೨೮೫॥

ದೊಡ್ಡ ಪಾದದ ತಂಕ ಪ_ಟ್ಟೇಯ ನಿರದೊಟ್ಟ
ಮುತ್ತ ಸೂಡೀನೇ ನುಸಲೀಗೆ। ಮೊದಮಗ
ಬಾವಾದೀರ್ ನಿಡಗೇ ಕೊಳತಾನೇ। ॥೨೮೬॥

ಪ_ಟ್ಟೇದಚ್ಚಡ ಹುದ್ದೇ ಮುತ್ತನ ಬಾಸಿಂಗಸೂಡೇ
ಮಾವ್ರೋಜಿ ಬಲನೇ ಕೊಳತಾನೇ।
ಮಾವ್ರೋಜಿ ಬಲನೇ ಕುಳತೇನಂದಾನೇ
ನಿಸ್ತ್ರೀ ತನ್ನೊಡನೆ ಕಳಗಂದ। ॥೨೮೭॥

ಅತ್ತೀ ಮನಿಯ ಮುತ್ತನ ಜಿಗಲೀ ಮ್ಯೆನೇ
ಚಿಕ್ರಪಡಿ[೧] ಹುಯ್ದೇ ಕೊಳತಾನೇ।
ಚಿಕ್ರಪಡಿ ಹುಯ್ದೇ ಕುಳತೇನಂಬಾನೇ
ನಿಸ್ತ್ರೀ ತನ್ನೊಡನೆ ಕಳಗಂದ। ॥೨೮೮॥

ಆರೇಳು ಉರಸೇ ಹಾಲು ಅನ್ನಾಯಿಕ್ಕೇ
ಬಾಲವ್ವಿ ನಾವ ಸಲಗದ್ದು। ಸಾಕಿದ ಮಗಳ
ಬಾಲಯ್ನ ಕಯ್ಲೆ ಕುಡತವ। ॥೨೮೯॥

ತ_ಟ್ಟೇಲ್ಹಾಲುಯ್ದೇ ಬುಟ್ಟೇನಲ್ ಕಪ್ಪಿಟ್ಟೇ
ಮುತ್ತೇ ಬಾರಂದೇ ಸಲಗದ್ದು। ಸಾಕಿದ ಮಗಳ
ಕುಡತವ ನಿಮ್ಮ ಕಯಲೇಗೆ। ಲತ್ತೂಗಿ
ಪುತ್ರನ ಸಿರಿಹಂಗೆ ಸಲಗವ್ವ। ॥೨೯೦॥

ತುಪ್ಪನ್ನೊಂಡಮಗಳ ಉಪ್ಪರಗಿಲುರಗಿದ ಮಗಳ
ಇಟ್ಟೊಬುದ್ಧಿಗಳಾ ಅರಿಯಾಳ। ನನ್ನಮ್ಮ
ಪುತ್ರನಪ್ಪಂತೆ ಸಲಗವ್ವ। ॥೨೯೧॥

---

೧. ಪದ್ಮಾಸನ

ಹಾಲನ್ನೊಂಡ ಮಗಳ ಹಾಸುಗಿಲುರಗಿದ ಮಗಳ
ಏಗೇ ಬುದ್ದಿಗಳ ಅರಿಯಾಳ। ಅಕ್ಕಮ್ಮ
ಬಾಲನಪ್ಪಂತೆ ಸಲಗವ್ವ। ॥೨೯೨॥

ಮಾಳೂಗಿ ಒಳಗೆ ಜೇರುಗಿ ಸಿಸೆಹುಟ್ಟೇ
ಮಾವಾದೀರಿಗೆಲ್ಲಲತಮುದ್ದ। ಬಾಲವ್ವಿ
ದೋರನ ರಾಜ್ಯಕೆ ಕುಡತವ। ॥೨೯೩॥

ಉಪ್ಪರಗಿಯೊಳಗೇ ಸೆಕ್ಕೂರಿಗಿಡಹುಟ್ಟೇ
ಅಪ್ಪದೀರಿಗೆಲ್ಲ ಲತಮುದ್ದ। ಬಾಲವ್ವಿ
ದೋರನ ರಾಜ್ಯಕೆ ಕುಡತವ। ॥೨೯೪॥

ನಾರೇ ನನ್ನಮ್ಮಗೇ ನಾಲ್ವತ್ತು ಚೆನ್ನೀಮಣಿಯೇ
ನಾಲ್ವತ್ತು ಮಂದೇ ಗೆಣತೇರ। ಬಿಟ್ಟಿರುವೆ
ತಾಯವ್ವಿ ಬಿಟ್ಟೇ ಎರನಂಬ್ಳ। ॥೨೯೫॥

ನಿಸ್ತ್ರೇ ನನ್ನಮ್ಮಗೇ ಇಪ್ಪತ್ತು ಚೆನ್ನದ ಸರವೇ
ಇಪ್ಪತ್ತು ಮಂದೇ ಗೆಣತೇರ। ಬಿಟ್ಟಿರುವೆ
ಅಪ್ಪೋಜಿ ಬಿಟ್ಟೇ ಎರನಂಬ್ಳ। ॥೨೯೬॥

ಏಗೇ ನನ್ನಮ್ಮಗೇ ಯಾತರ ಬಳುವಳೇ
ಅಪ್ಪೋಜೇ ಮೊಕತುಳವಾ ಕೊರಗಿಂಡಿ। ಕೊಟ್ಟುರ್ತು
ಮುತ್ತನ ಬಾಗಲವ ಗಳಿಯಾಳ। ॥೨೯೭॥

ಏಗೇ ನನ್ನಮ್ಮಗೇ ಯಾತರ ಬಳುವಳೇ
ತಾಯಮ್ಮ ಉಂಬಾ ಹರಿಯಾಳ। ಕೊಟ್ಟುರ್ತು
ಹೂಂವನ ಬಾಗಲವ ಗಳಿಯಾಳ। ॥೨೯೮॥

ನಿಸ್ತ್ರೇ ನನ್ನಮ್ಮನ ಆನೀಮ್ಯೆನ್ ಕುಳ್ಳೀಸೇ
ತಾಯದೀರೆಲ್ಲ ಮೊಕನೋಡೇ। ಕುರುಳಾತಿದ್ದೇ
ಪುತ್ತೂಳಿ ಚೆಂಡೇ ಅಳಬ್ಯೆಡಾ। ನಿನ್ನಾ ಸಂಗಡೇ
ತುತ್ತೇರಯ್ವರ್ರಾ[೨] ಕಳಗೂವೆ। ॥೨೯೯॥

ನಾರೇ ನನ್ನಮ್ಮನಾ ಕುದರೀಮ್ಯೆನ್ ಕುಳ್ಳೀಸೇ
ಅಪ್ಪದೀರೆಲ್ಲ ಮೊಕನೋಡೆ। ಕುರುಳಾತಿದ್ದೇ
ಮೋವದ[೩] ಚೆಂಡೇ ಅಳಬ್ಯೆಡ। ನಿನ್ನಾಸಂಗಡೇ
ತುತ್ತೇರಯ್ವರ್ರಾ ಕಳಗೂವೆ। ॥೩೦೦॥

---

೨. ದಾಸಿಯರಯ್ವರನ್ನು ೩. ಮೋಹದ ಹುಟ್ಟೀದ ಮನಿಯಾ ಹುಸ್ತಲುಗಳುವಂಕ್ರಿ[೪]

ಹೊಟ್ಟೇಯಲ್ ಬಾಳೂ ಕಳವಳ। ನನ್ನಮ್ಮನ
ಒಟ್ಟಿ ದೈವಾಂಗ ಬಿಗರೀತ। ॥೩೦೧॥

ಅಪ್ಪನ ಮನಿಯ ರಾಜಂಗಳಿಳಿವಂಕ್ರಿ
ದೇಹದಲ್ಲೆಲ್ಲ ತಳಮಳ। ನನ್ನಮ್ಮನ
ಒಟ್ಟಿ[೫] ಪಟ್ಟೆಲ್ಲ ಬಿಗರೀತ। ॥೩೦೨॥

ದಂಡೂಗಿ ಹತ್ತುವಾಳ ಹಿಂದೆಲ್ಲ ನೋಡುವಾಳ
ಸಂಜೀಗಾಡುವರ ಕರುವಾಳ। ನನ್ನಮ್ಮ
ಅಪ್ಪನ ಮನಿಯೇ ನಿಜವೇನ। ನನ್ನಮ್ಮ
ಗಂಡರ ಮನಿಗೇ ಸವನುವಾಳ। ॥೩೦೩॥

ಅಣ್ಣದೀರೆಲ್ಲ ಹೂಂವನದಡಪೀತಂಕ[೬]
ಮಿಕ್ಕೀದವರೆಲ್ಲ ಹೊಳಿತಂಕ। ಬಾಲವ್ವಿಯ
ಮಾವಾದೀರೆಲ್ಲ ಮನಿತಂಕ। ॥೩೦೪॥

ಹುಟ್ಟೀದ ಮನಿಯ ಹುಸ್ತಲಗಳುವಂಕ್ರಿ
ಹತ್ತಿಂಟುರೂವ ಬರದಾಳೇ।
ಹತ್ತಿಂಟುರೂವ ಏನಂದೇ ಬರದಾಳೇ
ಹುಟ್ಟೀದ ಮನೆ ಬಾಳೇ ಎರಲಂದೇ ॥೩೦೫॥

ಹುಟ್ಟೀದಾ ಮನಿಯಾ ಬಿಟ್ಟಿನ್ನೇ ಬರುವಾಗೇ
ಬೊಟ್ಟೀಲಿಂದ್[೭] ರೂವಾ ಬರದಾಳೇ। ಏನಂದೇ
ಅಪ್ಪೋಜಿ[೮] ಸಿವಬಾಗ್ಯ ತಿರವಂದೇ[೯]। ॥೩೦೬॥

ಚಪ್ಪರದಲ್ ನೆಂತ[೧೦] ಮುಂದೆದ್ದ ಗೆಣೆಯರೆ ಕೇಳಿ
ಆರೇಳುದಿನವರತೇ[೧೧] ಬಲುಚಿಂತೆ। ಪರರು ಹಡದ
ನಾರೀ ನಾಹೆಂಗೇ ಗೆಲಬೇಕ। ॥೩೦೭॥

ಚಿಂತಗೆಯ್ಯಲು ಬ್ಯೆಡಾ ಚಿಂತೀಮಾಡಲು ಬ್ಯೆಡಾ
ಚಿಂತಕನಿಡುವೆ ಕುರಳೀಗೆ। ತವರು ಮನೆಯ
ಚಿಂತೀಬಿಟ್ ಮನಿಗೇ ಸವನಂದ। ॥೩೦೮॥

ಜಾನೀಸಬ್ಯೆಡಾ[೧೨] ಜಾನಾ ಮಾಡಲು ಬ್ಯೆಡಾ
ವಾಲೀಯನಿಡುವೆ ಕಿಮಿದುಂಬೆ। ಅಪ್ಪನ ಮನಿಯಾ
ಜಾನಾಬಿಟ್ ಮನಿಗೇ ಸವನಂದ। ॥೩೦೯॥

---

೪. ಹೊಸ್ತಿಲುದಾಟುವವರೆಗೆ ೫. ಉಟ್ಟ ೬. ಹೂವಿನ ಗೇಟಿನತನಕ ೭. ಬೆರಳಿನಿಂದ ೮. ತಂದೆಯ ೯. ಸ್ಥಿರವೆಂದು ೧೦. ನಿಂತ ೧೧. ಆರೇಳು ದಿನ ಪ್ರೀತಿ ೧೨. ಧ್ಯಾನಿಸಬೇಡ

ಕಾಯೂ ಕಗ್ಗಾಯೇ[೧೩] ಇರಳೀ[೧೪] ಹಣ್ಣಾದಾವೇ
ಮಡದೀಗೆ ತಮ್ಮಯ್ಯ ತರಸೀದ। ಅಪ್ಪನ ಮನಿಯ
ಜಾನಾಬಿಟ್ ಮನಿಗೇ ಸವನಂದ। ॥೩೧೦॥

ಗ್ಯೆನಯ್ಸಲು ಬ್ಯೆಡಾ ಗ್ಯೆನಾ ಮಾಡಲು ಬ್ಯೆಡಾ
ಗ್ಯೆನಾ ಬಿಟ್ಟೊಡನೆ ಸವನಂದ। ಅತ್ತೀ ಮಗಳೆ
ಎಲ್ಲ ಸಿವಬಾಗೀ ತನಗಂದ। ॥೩೧೧॥

ರಾಗೀ ಕಾಳೀನಂಗೆ ರಾಯರ ಮುಂಡೆಸಕಟ್ಟೇ
ಬುದ್ದಿಲ್ ಬೂಪಾಲ್ರ ಚಿಲುವಾರ। ಹಿಣ್ಣೀನವ್ರ
ಸ್ವೊತೆನಂದ್ ಕಯ್ಯ ಮುಗುವಾರ। ॥೩೧೨॥

ಉದ್ದೀನ ಕಾಳೀನಂಗೆ ಮದ್ರಗಿ[೧೫] ಮುಂಡೆಸಕಟ್ಟೇ
ಬುದ್ದೀಲ್ ಬೂಪಾಲ್ರ ಚಿಲುವಾರ। ಗಂಡೀನವ್ರ
ಗೆದ್ದನೆಂದ್ ಹೆಮ್ಮಿಹುಡುವಾರ[೧೬]। ॥೩೧೩॥

ಕಾನಾ ಒಳಗಿನ ಬಳ್ಳೀ ಕಾಲಿಗೆ ಸುತ್ತೀದಂಗೆ
ಹೆಕಳವೇ ತಮ್ಮಯ್ನ ಮನದಲ್ಲೇ। ಪರರು ಹಡೆದ
ನಿಸ್ತ್ರೀಗಿದ್ ಮನಗೇ ಬರುವಾನೇ। ॥೩೧೪॥

ನೀರಾನೀರಾಗೆದ್ದ ನೀರಾತೆರಿಯಾಗೆದ್ದ
ದ್ಯೆವರ ಕೂಡಾಡೇ ವರುಗೆದ್ದ[೧೭]। ಬಾಲಯ್ಯ
ಮಾವನ ಕೋಡಾಡೇ[೧೮] ಮಗಳಗೆದ್ದ। ॥೩೧೫॥

ನೀರಾ ನೀರಾಗೆದ್ದ ನೀರಾತೆರಿಯಾ ಗೆದ್ದ
ಸೋಮೀ ಕೋಡಾಡೇ ವರುಗೆದ್ದ। ಅಣ್ಣಯ್ಯ
ಅತ್ತೀಕೋಡಾಡೇ ಮಗಳಾಗೆದ್ದ। ॥೩೧೬॥

ಕೊಟ್ಟ ಮಗಳೋಗ್ವಾಗೇ ಕ್ವೊಟೀಹತ್ ನೋಡ್ವಾಳ
ಕೊಟ್ಟ ಮಗಳ್ ಕ್ವೊಟೀ ಗಳದಾಳ। ಅಂಬುದಮಾಡೇ
ಕಡಗಣ್ಣಲ್ ಕಣ್ಣೀರ ಬಿಡುವಾಳ। ॥೩೧೭॥

ಉತ್ತುಮ್ನ ಮಗಳೇ ಮುತ್ತಾ ಜೋಗುಳಿಗೊಯ್ಯೇ[೧೯]
ಸೋಕಾಡುತ ಬಾರೇ ಬಯಲಲ್ಲೆ। ಬಾವಿಕೇರಿ
ಮುತ್ತು ರಾಜಣವೇ ಬಿಳಿಯಲೆ। ॥೩೧೮॥

---

೧೩. ಗಟ್ಟಿಕಾಯಿ ೧೪. ಅರಳಿ ೧೫. ರಂಗಿನ, ಆಕರ್ಷಕ ೧೬. ಹಿಗ್ಗುವರು ಹೆಮ್ಮೆಪಡವರು
೧೭. ಆಶೀರ್ವಾದ ಪಡೆದ, ವರಪಡೆದ ೧೮. ಹತ್ತಿರವಾಡಿ ೧೯. ಮಡಿಲಿಗೆಹೊಯ್ಯು

ಮಾರಾಯ್ನ ಮಗಳೆ ಮುತ್ತಾ ಜೋಗುಳಿಗೊಯ್ಯೇ
ಬಿತ್ತಾಡುತ ಬಾರೇ ಬಯಲಲ್ಲೇ। ಬಾವಿಕೇರಿ
ಮುತ್ತು ರಾಜಣವೇ ಬಿಳಿಯಲೆ। ॥೩೧೯॥

೨೯. ಬಾಗಿಲು ತಡೆಯುವುದು

ಬಾಗಲ ತಡದಕ್ಕಗೇ ಬಾಳೀಲು ಹಣ್ಣ ಕುಡತಿ
ಏಳೂರುಂಬಳಿಯಾ ಬರಕುಡತಿ। ಅಕ್ಕಮ್ಮ
ತಡದ ಬಾಗಲ ಬೆಡಬೇಕೇ। ॥೩೨೦॥

ಬಾಳೀಯ ಹಣ್ಣು ನೀತಂದ ಮಡದೀಗೆರಲೋ
ಹಿರಿಯರುಂಬಳಿಯೇ ನಿನಗೆರಲೋ। ತಮ್ಮಯ್ಯ
ಹೆಣ್ಣ ಕುಡ ನನ್ನಾ ಕೊಮರಾಗೇ। ॥೩೨೧॥

ಗಂಡೂ ಹುಟ್ಟಿದರೆ ನಿನ ಬೂಮಂಡಲಾಳಲೆ[1]
ಹೆಣ್ಣು ಹುಟ್ಟಿದರೇ ನನ್ನ ಸೊಸಿಯಂದೇ। ತಮ್ಮಯ್ಯ
ನುಡದುಂದೇಳೀ[2] ಕೊಡಬೇಕ। ॥೩೨೨॥

ಗಂಡೂ ಹುಟ್ಟಿದರೆ ನನ್ನ ಬೂಮಂಡಲಾಳಲೆ
ಹೆಣ್ಣು ಹುಟ್ಟಿದರೇ ನಿನ್ನ ಸೊಸಿಯಂದೆ। ಅಕ್ಕಮ್ಮ
ನುಡದುಂದೇ ಏಳೀ ಕುಡತೀನೇ। ॥೩೨೩॥

ಇಂದೇ ಕುಡತೀಯಂಬೆ ನಾಳಾಗ್ ಕೊಡೆನಂಬೇ
ಕುಡತೀ ಅಂದೇಳ್ಯ ಕೊಡ ಬೇಕೋ। ॥೩೨೪॥

ಚಪ್ಪರ ಚಪ್ಪರ ಸಾಕ್ಷ ಚಪ್ಪರ ಕಂಬು ಸಾಕ್ಷ
ಚಪ್ಪರದಲ್ಲೆದ್ದ ಜನ ಸಾಕ್ಷ। ಮಂದೇ ಸಾಕ್ಷ
ಕುಡತೀ ಅಂದೇಳ್ಯ ಕೊಡಬೇಕೋ। ॥೩೨೫॥

ಚಪ್ಪರ ಚಪ್ಪರ ಸಾಕ್ಷ ಚಪ್ಪರ ಕಂಬು ಸಾಕ್ಷ
ಚಪ್ಪರದಲ್ಲೆದ್ದ ಜನ ಸಾಕ್ಷ। ಮಂದೇ ಸಾಕ್ಷ
ಕುಡತೀ ಅಂದೇಳ್ಯ ಕುಡತೀನೇ। ॥೩೨೬॥

---

೧. ಭೂಮಂಡಲವನ್ನಾಳಲಿ ೨. ಹೇಳಿ ಒಂದು ವೀಳ್ಯ

೩೦. ಗೃಹಪ್ರವೇಶ

ಉಪ್ಪರಗೀ ಒಳಗೇ ಕಚ್ಚೆರಸೇ[೧] ದೇಪವ[೨]
ಮುತ್ತ ತಂದಿರಸ ತಳಗೀಲೇ[೩]। ನಿನ್ನಾ ಕೊಮ್ರ
ಲಕ್ಸ್ಮೀ ಒಡಗುಂಡೇ ಬರತೀನೇ। ॥೩೨೭॥

ಮಾಳೂಗಿ ಒಳಗೇ ಕಚ್ಚೆರಸೇ ದೇಪವ
ಹೂಂವ ತಂದಿರಸ ತಳಗೀಲೇ। ನಿನ್ನಾ ಬಾಲಯ್ಯ
ನಿಸ್ತ್ರೀ ಒಡಗುಂಡೇ ಬರತೀನೇ। ॥೩೨೮॥

ಪಕ್ಷೀ ಪಾದದಂಗೇ ಪಕ್ಷೀಯ ನೆಡಿಹಂಗೇ[೪]
ಮೆಲ್ಲಗೆ ನಿನ್ನಾ ಬಲಗಾಲ। ಮುಂದಿಟ್ಟೇ
ಎಲ್ಲ ಸಿವಬಾಗಿ ನಿನಗನ್ನ। ॥೩೨೯॥

ಮೋವಾದ ಚೆಂಡ[೫] ಮಾವನ ಕಾಣಲಬಂತೇ
ಕತ್ತೂದೀವಗಿಯ[೬] ಬಿಳಕೀಗೇ। ಮಾವೋಜಿ
ಮಾಳುಗಿಗೇ ತಕ್ಕಾದ ಸೊಸಬಂತ। ॥೩೩೦॥

ಮುತ್ತೀನ ಚೆಂಡ ಅತ್ತೀಕಾಣಲಬಂತೇ
ಗಂದಾ ದೀವಗಿಯ ಬಿಳಕೀಗೇ। ಅತ್ಯಮ್ನ
ಉಪ್ಪರಗೀಗ್ ತಕ್ಕಾದ ಸೊಸೆಬಂತ। ॥೩೩೧॥

ಅತ್ತೇ ಮುತ್ತೇ ನಿನ್ನ ಸೊಸಿಯೇ ಕಾಣಲಬಂತೇ
ತಾಣ ದೀವಗಿಯ ಬಿಳಕೀಗೆ। ನನ್ನಮ್ಮ
ಅತ್ತೆ ಬಂದ್‌ಮನಿಗೇ ಸೊಸೆಬಂತ। ॥೩೩೨॥

ಎಲ್ಲ ಊರೀಗೋಗೇ ಬಲ್ಲಾದ ಮಡದೀ ತಂದೆ
ಮಾಲ್ಲೂಗಿ ಹೂಂವಿಗಿಂತ ಚೆಲವೀಯ। ತಂದೀನೇ
ಸಂತೋಸಾದಲ್ಲೇ ಸಲಗಂಬ। ॥೩೩೩॥

ಅಂಕದೂರೀಗೋಗೇ[೭] ಬಿಂಕದ ಮಡದೀ ತಂದೆ
ಸಂಪೂಗಿ ಹೂಂವಿಗಿಂತ ಚೆಲವೀಯ। ತಂದೀನೇ
ಸಂತೋಸಾದಲ್ಲೇ ಸಲಗಂಬ। ॥೩೩೪॥

---

೧. ಹಚ್ಚಿಡು ೨. ದೀಪವನ್ನು ೩. ಬಟ್ಟಲಲ್ಲಿ ೪. ನಡಿಗೆಯಂತೆ ೫. ಚೆಂಡು ೬. ಉರಿಯುವ ದೀವಟಿಗೆ ೭. ಸ್ಪರ್ಧೆಯ ಊರಿಗೆ ಹೋಗಿ

೩೧. ಉಡುಗರೆ

ಅಟ್ಟಕೆ ಸರಪೂಳೇ ಪಿಟ್ಟೂಗೀಗೇ ಮುಚ್ಚೀಳ
ರಾಜಂಗಳೆಲ್ಲ ಜಿವಳೀಯೇ[೧] ಅಣ್ಣಯ್ಯನ
ಅಕ್ಕದೀರಿಗೆಲ್ಲ ಉಡುಗೆರೆ[೨] ॥೩೩೫॥

ಅಟ್ಟಕೆ ಸಪೂಳೇ ಪಿಟ್ಟೂಗೀಗೇ[೩] ಮುಚ್ಚೀಳ
ಅಂಗಂಗಳೆಲ್ಲ ಜಿವಳೀಯೇ। ಬಾಲಯ್ಯನ
ಬಳಗಾಕೆ ಎಲ್ಲಾ ಉಡುಗೆರೆ। ॥೩೩೬॥

---

೧. ಉಡುಗೊರೆಯ ವಸ್ತ್ರಗಳು ೨. ಉಡುಗೊರೆ ೩. ಪೆಟ್ಟಿಗೆಗೆ

೩೨. ಮರುದಿಬ್ಬಣ

ನಿಡದೇ[೧] ನಿಡದೇ ನಮ್ಮ ಮೊಡಗಾಲು ನೊಂದಾವೇ
ಬಾಲರ ಚಿಚ್ಚೇ[೨] ಬುಜನೊಂದು। ಅಣ್ಣಯ್ಯ
ಯಾವಲ್[೩] ಅತ್ಯಮ್ನ ಅರಮನೆ। ॥೩೩೭॥

ಉತ್ತಮ್ ಬೇಯಗರ[೪] ಮನೆ ಎತ್ತಾಗಂದರಿಯಾವೇ
ಸುತ್ತೇ ಓಡ್ಲದ[೫] ಹೊದಕೀಯೇ। ಹೊನ್ನಾಕಳಸ
ಅದನಮ್ ಬೇಯಗರ ಅರಮನೆ। ॥೩೩೮॥

ಉತ್ತಮರ ಮನಿತಂಕ ಮುತ್ತಿನ ದಡಪೀತಂಕ
ತಕ್ಕಸಗುಂಡೀಯಾವೇ[೬] ಎಲಬಳ್ಳಿ। ಅದನಮ್ಮ
ಉತ್ತಮ್ ಬೇಯಗರ ಅರಮನೆ। ॥೩೩೯॥

ಹಣ್ಣಡಕೀ ಬಂಡೇ ಹಣ್ಣು ಪಾನಕ ಬಂಡೇ
ತಣ್ಣೀರ ಬಂಡೇ ಮನಿಮುಂದೆ। ಅದನಮ್ಮ
ಪುಣ್ಣೊಳ್ಳ ಬೇಯಗರ ಅರಮನೆ। ॥೩೪೦॥

ನೋಡಿರಿ ಬೇಯಗರ ಮನಿಯಾ ಗ್ವೊಡಿಟ್ಟು ವರಣಾವೇ
ಸೇಡೇ ಬೈಗಡಿಯೇ ಹೊಳದಂಗೇ। ಇವ್ರಮನಿಯಾ
ನಿಸ್ತ್ರೇರಿನ್ನಿಟ್ಟ ಚಿಲವೇರೆ। ॥೩೪೧॥

ಸುತ್ತು ಸುತ್ತೆಲ್ಲ ಸೂವರ್ನದ ಮಾಳೂಗೇ
ಮಾಲಿಂಗನ ಕೇರೇ ಮಲಕೇಡಾ। ಚಿಗಲೀಮೈನೇ
ನೆಂಟರೀಗ್ ಹಾಸರೇ ಹಸಿಯೇಳ[೭] ॥೩೪೨॥

ಇಂಟೂ[೮] ಕಂಬೀನಾ ಇಂಟಂಟೂ ಮಾಳೂಗೇ
ಪಂಚಾಳರ ಕೇರೇ ಮಲಕೇಡಾ। ಜಿಗಲಿ_ಮೈನೇ
ಬೇಯಗರಿಗ್ ಹಾಸರೇ ಹಸಿಯೇಳ। ॥೩೪೩॥

ನೆಂಟರ ಮನಿಯಾ ಬಾವೀಗೇ ತೆಂಗೀನಾ ದಂಡೂಗೇ
ಬೈಗಾದಲ್ ನೀರ ಮುಗತನ್ನಿ। ಬೈಲಿಕೇರಿ
ಬೇಗರ್ ದಾವರಕೆ ಬರತರ। ॥೩೪೪॥

---

೧. ನಡೆದು ೨. ಎತ್ತಿಕೊಂಡು ೩. ಎಲ್ಲಿ ೪. ಬೀಗರ ೫. ಹಂಚಿನ ೬. ಹಬ್ಬಿವೆ ೭. ಹಾಸಿಗೆಯೇಳು ೮. ಎಂಟು

ನೆಂಟರ ಬತ್ತರಂದೇ ಇಂಟೂದಿನದಾ ಸುದ್ದೇ
ಇಂಟೂ ಗಿಂಡೀಲೇ ಹಣನೀರ। ತುಂಬೀಕಂಡೇ
ನೆಂಟರುಪಚರಕೇ ಬರುವಾರ। ॥೩೪೫॥

ನಾರೇರುಪಚರಕೇ ತಾಬಂದಾಳಕ್ಕಮ್ಮ
ಆರೂ ಗಿಂಡೀಲೇ ಹಣನೀರ। ತುಂಬೀಕಂಡೇ
ನೆಂಟರುಪಚರಕೇ ಬರುವಾಳ। ॥೩೪೬॥

ಬಗಿ ಬಗಿ ಬಣ್ಣದ ಸುಬಸುಬನದ[೧೦] ಸೇರೀಯೇ[೧೧]
ಇಳದೇ ನಾರೇರ ನಿರದುಟ್ಟೇ[೧೨]। ಮಾಣಿಕದ
ಜಿಗಲಿ ಮ್ಯೆನ್ ಕೊಳತಾರೇ। ॥೩೪೭॥

ಉತ್ತುಮರ ಕೊಳ್ಳಣಕೇ[೧೩] ಮತ್ತೇನು ಬರಬೇಕ
ಬೆತ್ತಾದಲ್ ಬೆಗದಾ[೧೪] ಸೆಳಮಂಚ। ತೂಗೂದೇಪ
ಉತ್ತುಮ್ರ ಕೊಳ್ಳಣಕೇ ಬರಬೇಕ। ॥೩೪೮॥

ನಾರೇರ ಕೊಳ್ಳಣಕೇ ಬ್ಯೆರೇನು ಬರಬೇಕ
ನ್ಯೆವಳದಲ್ ಬೆಗದಾ ಸೆಳಮಂಚ। ತೂಗುದೇಪ
ನಾರೇರ ಕೊಳ್ಳಣಕೇ ಬರಬೇಕ। ॥೩೪೯॥

ಹಾಸೂಕ್ ಹಸೆಬರಲೆ ಮುಂದೆ ದೀವುಗಿ ಬರಲೆ
ಸೂಲ್ಯಮ್ಮಗುಲುವಾ ಕೊಡೆಬರಲೆ। ಬೆಲೀಕೇರಿ
ಉತ್ತಮ್ ಬೇಯಗರು ಕೊಳತಲ್ಲೇ। ॥೩೫೦॥

---

೯. ಬೀಗರು ೧೦. ಶುಭಶುಭದ ೧೧. ಸೀರೆ ೧೨. ನರಿಗೆಯಿಂದ ಉಟ್ಟು ೧೩. ಕುಳಿತುಕೊಳ್ಳಲು ೧೪. ಬಿಗಿದ

೩೩. ದಿಬ್ಬಣದೂಟ

ತೊಂಡೀಕಾಯಡುವಾಕೇ ಗುಂಡೀ ಬಂಗಲೆ ಬೇಕ
ಇಂಗು ಸಂಬರದ ಹುಡಿಬೇಕ। ಬೈಲೀಕೇರಿ
ರಂಬೇರ ಪಂತೀಲೇ ಎಡಮಾಡಿ। ॥೩೫೧॥

ಬಯ್ಣೀಕಾಯಡುವಕೆ ದೊಡ್ಡ ಬಂಗಲೆ ಬೇಕ
ಎಲ್ಲ ಸಂಬರದ ಹುಡೆಬೇಕೇ। ನನ್ನಮ್ಮ
ಮಂಡ್ಳೀಕರ[೧] ಪಂತೀಲೇ ಎಡಮಾಡ। ॥೩೫೨॥

ಇಂಗು ಸಂಬರಕಿಂದು ತಾಮೇಲ ಬಿಳಿಯುಪ್ಪ
ನಾಗರ ಬಯ್ಲಲ್ಲೇ ಬಿಳುವಾದ[೨]। ಬಿಳಿಯುಪ್ಪ
ಬೇಗರ ಪಂತೀಲೇ ಎಡಮಾಡ। ॥೩೫೩॥

ಬೇಲಿಯ ಮ್ಯೆನನಾ ತುಟ್ಟು ತೊಂಡೀಕಾಯ
ತುಟ್ಟನೇ ತಿಗದೇ ಮಿಣಸಚ್ಚೇ। ಅಕ್ಕಮ್ಮ
ಉತ್ತಮರ ಪಂತೀಲೇ ಎಡಮಾಡ। ॥೩೫೪॥

ಗಡಗಡನೇ ಬಂದಾಳೇ ಗುಡಿಹಂಗೇ ಕೊಳತಾಳೇ
ಚಿಂಬೀನಂತ್[೩] ಮುದ್ದೀ ನೆಗದಾಳೇ। ನಂಟೂತೇ
ನಿನ್ನೊಟ್ಟೆ[೪] ಏಗೆಂತ[೫] ಕೆರಬಾವೆ। ॥೩೫೫॥

ಅತ್ತೀಯೆಲಿಯಾ ಸಿಟ್ಟೇ ಹತ್ತೂಕೊಳಗಕ್ಕೀಯಟ್ಟೇ
ಹತ್ತತ್ತೇ ಅಗಳ ತಳದಾಳ। ನನ್ನಮ್ಮ
ಬಡವೇ ಅಂದ ಕಯ್ಯ ಮೊಗದಾಳ। ॥೩೫೬॥

ಮೂರು ಸಿದ್ದಕ್ಕಿಯನ್ನ ಮೂಗಿನಳ್ಳಿತಂಕವುಂಡೇ
ಬಾಗೀದ ಅನ್ನ ಬರೋಗುಂಡೇ[೬]। ಬಾಚುಂಡೇ
ಹೊಟ್ಟೀಲೆ ಏಗೆಂತ ಕೆರೆಬಾವೆ। ॥೩೫೭॥

ಬೇಡೇ ತಂದಡಕೀಯ ಬೇಳಗದಲ್ಲಿಡುವಾಳ[೭]
ಹರಬಳ್ಳಿ[೮]ಕಕ್ಕ ಹರುವಾಳ। ಹರವಣ ತುಂಬೇ
ಬರದೆದ್ದವರೆಲ್ಲ ಕರುವಾಳ। ॥೩೫೮॥

---

೧. ಮಾಂಡಳಿಕರ ೨. ಬೆಳೆಯುವದು ೩. ತಂಬಿಗೆಯಂಥ ೪. ನಿನ್ನಹೊಟ್ಟೆ ೫. ಈಗೆಂಥ ೬. ಬರಗಿಉಂಡು ೭. ವೈಯ್ಯಾರದಿಂದ ಕೊಡುವಳು ೮. ಹಬ್ಬುವ ಬಳ್ಳಿಯ ಚಿಗುರನ್ನು

೩೪. ಹಸಗೆರೆ ಸಂಜೆಗೆ ಹಾಡುವ ಹಾಡು

ಕತ್ತೀಯ ಆಟವೇ ನಿಸ್ತ್ರೀಯ ಗ_ಂಡಗೇ
ಕತ್ತೇ ತಪ್ಪಿದರೆ ಗರಡೀಯೇ। ಜೂಂಜೀನಾಟ[೧]
ನಿಸ್ತ್ರೇ ನನ್ನಮ್ನ ಅರಸಾಗೇ। ॥೩೫೯॥

ಚೂರಿಯ ಆಟವೇ ನಾರಿಯ ನಲ್ಲಗೇ
ಚೂರೇ ತಪ್ಪಿದರೆ ಗರಡೀಯೇ। ಜೂಂಜಿನಾಟ
ಬಾಲೇ ನನ್ನಮ್ನ ಅರಸಾಗೇ। ॥೩೬೦॥

ಇಂದ್ರ ಲೋಕದಾನೇ ತೊಂಡ್ಲ ಬೀಸೀದಂಗೆ
ಚೆಂದವೆ ಬಾಲಯ್ನ ನಿಡತೋಳ। ಬಾಮಾಕೆ[೨]
ಇಂದ್ರ ಕರ್ನೆಯರೇ[೩] ಮನಸಿಟ್ಟೇ। ॥೩೬೧॥

ಮನಸೆಟ್ಟಾರೆಡಲೆ ಮನಗೊಮ್ಮೆ ಬರಾಲೆ
ಏಳ್ಯವ ಹಾಸೇ ಒರಗಲೆ।
ಏಳ್ಯವ ಹಾಸೇ ಒರಗಿದ ಮಂಚದ ಮ್ಯೆನೇ
ಉರಗೀಯವೇಳು ಮರಿಯಾನೆ। ಕುರಳಿಗೆ
ಅರವತ್ತೇಳೆಳಿಯಾ ಸರಪೂಳೆ। ಬೆಲೆಮಾಡುಕೆ
ದೊರಿಯೇ ಬಾಲಯ್ನ ಬರವೇಳಿ। ॥೩೬೨॥

ದೇವಲೋಕದಾನೆ ಬಾಲ ಬೀಸೀದಂಗೆ
ಚೆಂದವೆ ಬಾಲಯ್ನ ನಿಡತೋಳ। ಬಾಮಾಕೆ
ದೇವಕನ್ನೆಯರು ಮನಸಿಟ್ಟೇ। ॥೩೬೩॥

ಮನಸೆಟ್ಟಾರೆಡಾಲೆ ಮನಗೊಮ್ಮೆ ಬರಾಲೆ[೪]
ಕಪರವ[೫] ಹಾಸೇ ಒರಗಲೆ
ಕಪರವ ಹಾಸೇ ಉರಗಿದ ಮಂಚದ ಮೆ_ನೇ
ಉರಗೀಯಾವಯ್ದು ಮರೀಯಾನೆ। ಕುರಳೀಗೇ
ಅಯ್ವತ್ತಯ್ದೆಳಿಯಾ ಸರಪೂಳೆ। ಬೆಲೆ ಮಾಡೂಕೆ
ದೊರಿಯೇ ಬಾಲಯ್ನ ಬರುವೇಳಿ। ॥೩೬೪॥

---

೧. ಜೂಜಾಟ ೨. ಚೆಂದಕ್ಕೆ ೩. ಕನ್ನೆಯರು ೪. ಬರಲಿ ೫. ಕಪಡ?

ಗುತ್ತೀ ನಾಡ್ಹೊಳಿಯಲ್ಲೇ ಮುತ್ತ ರಾಸೀ ಮಾಡೇ
ಉತ್ತುಮ್ ತಮ್ಮಯ್ಯಾ ಬರವಾನೋಡೇ। ಸೋಳೇರೆಲ್ಲಾ
ಮುತ್ತನ ಕನ್ನಡಿಯ ತಡದಾರೇ। ॥೩೬೫॥

ಗುತ್ತೀ ನಾಡ್ಹೊಳಿಳಿಯಲ್ಲೇ ಏಗ್ಯೆರೀಗ್ ನೀರಾಟಾ
ನಿಸ್ತ್ರೇ ನನ್ನಮ್ನ ಅರಸಾಗೇ। ಬಾಲಯ್ಯಗೇ
ಮುತ್ತೀನ ಸರವೆಟ್ರ ಉಲುಪೀಯ[೬]। ॥೩೬೬॥

ಹನ್ನೆಯ್ಡಂಕಣ ಮನಿಯೇ ನಿಡಗೇ ಬೋಜನಸಾಲೇ
ಸೆಣ್ಣವಳೇ ಬಾಲಮ್ಮ ಸುಳದಾಡೇ। ಬರುವಾಗೇ
ಏಳೀಯ ಕುಟ್ಟೇ ಕಳಗೂವೆ। ॥೩೬೭॥

ಏಳೀಯ ಕಯ್ಯಲ್ಲೇ ಚಿನ್ನದಗಿಂಡೀಬಲನಲ್ಲೇ
ಬಣ್ಣದ ಬೀಸಣಗೇ ಬಗಲಲ್ಲೇ। ಇಟ್ಟಿಕಂಡೇ
ಉತ್ತಮನ ವಾಲಗಕೆ ಬರಬೇಕ। ॥೩೬೮॥

ಮೊಕ ಮೊಕೇ[೭] ಮಲ್ಲೂಗೇ ಮೊಕ ಮೊಕೇ ಸಂಪೂಗೇ
ಮೊಕಿಯೇ ರಾಜಣದ ಅರಮನೆ। ಒಳಗೇ
ಸೆಕಿಯೆಂದ ಬಾಳ ಮೊದಮಗ। ಅತ್ತಗದೀರ
ಹವಳದ ಬೀಸಣಗಿ ತಡದಾರ। ॥೩೬೯॥

ಮೊಕ ಮೊಕೇ ಜೂಂಜಿಯೇ[೮] ಮೊಕ ಮೊಕೇ ಜಾಂಜೀಯೇ[೯]
ಮೊಕಿಯೇ ರಾಜಣದ ಅರಮನೆ।ಯ ಒಳಗೇ
ದಗಿಯಂದ ಬಾಳ ಮೊದಮಗ। ಅತ್ತದೀರ
ಗಂದದ ಬೀಸಣಗಿ ತಡದಾರೇ। ॥೩೭೦॥

ಹವಳದ ಹಾಸಣಗೇ[೧೦] ಹವಳದ ಬೀಸಣಗೇ
ಅವರಿಬ್ಬರಾಡೂ ಚದರಂಗ। ಮಂಚದ ಮೆ_ನೇ
ಮೊದಮಗ ಚೆಂಡ ಮರದಾನೇ। ॥೩೭೧॥

---

೬. ಉಡುಗೊರೆ, ಪುಕ್ಕಟ್ಟೆ ೭. ಮೊಗ್ಗು ೮. ಜೂಜಿ ಹೂ ೯. ಜಾಜಿ ಹೂ ೧೦. ಹಾಸಂಗಿ

ಹಸಗೆರೆ ಮುಂಜಾನೆಯ ಹಾಡು

ಕಡವಣಕೀ ಗಿಡಹುಟ್ಟೀ ಕಡುರಾಜ್ಯಕೆನಿರಳಾದು
ಕಡದೇ ಮಾಡ್ವರೇ ಹಲಗೀಯ। ಮಂಚದಮ್ಯೆನೇ
ನಿಸ್ತ್ರೀಯರ್ ಹಾಡಾ ತುಡಗೂವಾರೇ। ॥೩೭೨॥

ಉದರುಮಲ್ಲಗಿಹೂಂವ ಉದರೀತಂಗಳದಲ್ಲೇ
ಚಿದರಂಗನಾಡೇ ಬರುವಾಗೇ। ಬಾಲಯ್ಯನ
ಉದರೀತ ಪ_ಟ್ಟೇ ಸಿರಗಲ್ಲೇ[1]। ॥೩೭೩॥

ಮಲ್ಲೂಗಿ ಹೂಂವ ಬ್ಯೆಗಿದ್ದೇ ಕುಯ್ತಾರೇ
ಉಲ್ಲೀಮೆ_ನಯ್ದು ತಳದೀಡ। ನನ್ನಮ್ಮನ
ನಲ್ಲ ಬಂದಲ್ಲೇ ಉರಗೂವ। ॥೩೭೪॥

ಸಂಪೂಗಿ ಹೂಂವ ಮುಂಚಿದ್ದೇ ಕುಯ್ತಾರೇ
ಮಂಚದ ಮ್ಯೆನಯ್ದು ತಳದೀಡ। ನನ್ನಮ್ಮನ
ನಲ್ಲ ಬಂದಲ್ಲೇ ಉರಗೂವ। ॥೩೭೫॥

ನಾಲ್ವತ್ತೇಳ್ಹೆಡಿಯಾ ಸಾಸಮಣಿನಾಗನೇ
ಹೆಡಿಯೇ ಬಾಲಯ್ಗೆ ತಲಗಿಂಬ। ಬಾಲಯ್ಯ
ಉತ್ತಮನ ನಿದ್ರೀಯೇ ಹುರಿಯಾವೇ। ॥೩೭೬॥

ಬೆಳ್ಳಗಾಯಿತ[2] ರಾಯಾ ಬಿಳ್ಳುಮೂಡಿತರಾಯಾ[3]
ಆಲಾದಾಕೆರೆ ತುಂಬೇ ಅಲದಾವೇ। ಬಾಲಮ್ಮ
ಇನ್ನೂ ನಿದ್ರೀಯೇ ಹುರಿಯಾವೇ[4]। ॥೩೭೭॥

ಪುಣ್ಣೀದೊಳ್‌ನಲ್ಲನ ತೋಳಾ ಮ್ಯೆನುರಗೀದೆ
ಇನ್ನೂ ನಿದ್ರೀಯೇ ಹುರಿಯವೆ। ನನ್ನಮ್ಮ
ಎಲ್ಲ ಸಿವಬಾಗೀ ನಿನಗನ್ನ। ॥೩೭೮॥

ಗಂಡರ ಮನಿಯಾ ಕಂಚೂ ತಾಮರ ಮರಗೀ
ಒಡಕೇ ತಂದಿರಸ ಮುದಲುದ್ದೆ[5]। ಬಾಲಮ್ಮ
ಅಟ್ಟೊ ಸಿವಬಾಗೀ ನಿನಗನ್ನ। ॥೩೭೯॥

---

೧. ಸೆರಗಿನಲ್ಲಿ ೨. ಬೆಳಗಾಯಿತು ೩. ಬೆಳ್ಳಿಚಿಕ್ಕೆ ಮೂಡಿತು ೪. ಮುಗಿಯಲಿಲ್ಲ ೫. ಮೊದಲು ಉದಿ

ಅತ್ತೀಯಾ ಮನಿಯಾ ತೂಗೂಮಂಚದ ಮ್ಯೆನೆ
ಉತ್ತಮ್ ಬಾಲಯ್ಯ ಹಗಲ್‌ನಿದ್ರೆ ಗಿಯ್ವಾಗೇ
ಮುತ್ತ ಹೊಯ್ದಂಗೇ ಬಿಗರೀತ। ಅತ್ತೀ ಮಗಳೆ
ಬೀಸಂದ ಸಿವನ ಸೆರಗಲ್ಲೇ। ಅತ್ತೀಮಗಳೆ
ಸ್ಯೆಕಂದ ಸತಿಯೇ ದಣದೀಯೇ। ॥೩೮೦॥

ಮಾವನ ಮನಿಯಾ ಕಟ್ಟದ ಹುಯ್ಲದ[೬] ಮ್ಯೆನೆ
ಮಂಡ್ಳೀಕ ಬಾಲಯ್ಯ ಸುಕನಿದ್ರೆ ಗಿಯ್ವಾಗೆ
ಹೂಂವ ಹೊಯ್ದಂಗೇ ಬಿಗರೀತ। ಅತ್ತೀಮಗಳೆ
ಬೀಸಂದ ಸಿವನಾ ಸೆರಗಲ್ಲೇ। ಮಾವನ ಮಗಳೆ
ಸ್ಯೆಕಂದ ಸತಿಯೇ ದಣದೀಯೇ। ॥೩೮೧॥

ಹರಚಪ್ಪರಾಡಾಲೇ[೭] ಗಿಳಿಪಾತಾರಾಡಲೆ
ಮಣಿನಾಗ ಇದ್ದೇ ಕತಿ ಹೇಳ। ಇವ್ರ ಮನಿಯಾ
ಸಿರಿಯೇ ಬೋಗಸಲೇ ಬೆಳತಂಕ। ॥೩೮೨॥

ಚಪ್ಪರಾಕದ ಮನಿಯಾ ಒಪ್ಪವನೋಡೂ ಬನ್ನಿ
ತಪ್ಪದೇ ಸಿರಿಯೇ ಲಕ್‌ಸ್ಮೆದೇವೇ। ಇವ್ರ ಮನಿಯ
ಬಾಲವ್ವಿಗೆಟ್[೮] ವಾಲೆ ತಿರವಾಗ್ಲೆ। ॥೩೮೩॥

ಅಂದಾಳಿಕ್ಕಿದ ಮನಿಯಾ ಚೆಂದಾನೋಡೂ ಬನ್ನಿ
ಬಂದರೇ ಸಿರಿಯೇ ಲಕ್ಷ್ಮೀದೇವೇ। ಇವ್ರ ಮನಿಯ
ಕಂದವ್ವೀಗೆಟ್ ವಾಲೆ ತಿರವಾಗ್ಲೆ। ॥೩೮೪॥

೬. ಉಯ್ಯಾಲೆ ೭. ವಿಶಾಲ ಚಪ್ಪರವಾಗಲಿ ೮. ಬಾಲೆಗಿಟ್ಟ

೩೫. ತೋರಣ ತೆಗೆಯುವುದು

ಮಾರಾಯ್ರ ಮನ್ನೇ ಉಚ್ಚಯವೇಗೇನ
ಗಂದಾವಾ ತೇದೇ ತಿಲಕಾವೇ। ಗಂಡೀನೋರ
ಬಾಲಯ್ನ ತೊಯ್ಣ ತಿಗುವಾರೇ[೧]। ॥೩೮೫॥

ಒಳಗೆದ್ದಕ್ಕಮ್ಮ ಒಳಗೇನ ಮಾಡೂತಿ
ಕಾಯೂ ಕತ್ತಿಗಳ ಎಡಮಾಡ। ನಿನ್ನನಲ್ಲ
ಬಾಗಲ ಪೋಜೀಕೇ[೨] ಅನಕಂಡ[೩]। ॥೩೮೬॥

ಹೆರಗೆದ್ದಕ್ಕಮ್ಮ ಹೆರಗೇನ ಮಾಡುತಿ
ಕೆಂಡದೇಪಗಳ ಎಡಮಾಡ। ನಿನ್ನನಲ್ಲ
ತೊಯ್ಣದ[೪] ಪೋಜೀಕೇ ಅನಕಂಡ। ॥೩೮೭॥

---

೧. ತೆಗೆಯುವರು ೨. ಪೂಜೆಗೆ ೩. ನಿಶ್ಚಯಿಸಿದ ೪. ತೋರಣದ

೦೨. ಹೋಮ, ದಿಂಡು (ಶೋಭನ)

ನಿನ್ನಾಗೇ ಮೊನ್ನಾಗೇ ಮಗನಾ ಚೊಳಿಂಗೀಯೇ[೧]
ಸೊಸಿಯೇ ಮಯ್ನೀರದಾ ಹೊಸ್ಕೀಯೇ[೨] ಸುಬಕಾರ್ಯ
ಆಗಲೇ ನಮ್ಮ ಮನಿಯಲ್ಲೇ। ॥೧॥

ಗುತ್ತೀರಾಜೀಕವ್ರಾ ಅಣ್ಣಾ ವಾಲೀಬರೆದಾ
ಇಂದೀನಾ ಹೂಂವು ನಮಗೆರ್ಲೆ[೩]। ನಮ್ಮನಿಯಾ
ತಂಗೀ ಸೋಬನ್ಕೇ ಬರ್ಬೇಕ। ॥೨॥

ಗೋವೀ ರಾಜೀಕವ್ರಾ ಅಣ್ಣಾ ವಾಲೀಬರ್ದಾ
ಇಂದೀನಾ ಮೊಕ್ಕೆ ನಮ್ಗೆರ್ಲೆ। ನಮ್ಮನಿಯಾ
ತಂಗೀ ಸೋಬನ್ಕೇ ಬರ್ಬೇಕ। ॥೩॥

ಗೋವೀನಾಡ ದೋಸೇರ[೪]। ಆನೀಮೇನ್ ಬಂದಾರೇ
ಮುತ್ತಿನಾ ಸತ್ತಗಿಯಾ ನಿರಳಲ್ಲೇ। ಬಾಲಮ್ಮಾ
ಮುತ್ತೀನಂತ್ ಹ್ವೊಮಾ ಗಿಯ್ಯೊಕೇ[೫] ॥೪॥

ಅಂಗಳಾ ಗುಂಡೀನಾ ತಿರುಳು ಬಾಳೆಲಿಯಾ
ಅಕ್ಕಮ್ಮಾ ಹ್ವೊಗೇ ಕುಯ್ತಾರೇ। ಬಾವಿಕೇರಿ
ದೊಡ್ಡಾದೋಸೇರೀಗ್ ಪಡಿಹುಯ್ಯ। ॥೫॥

ಗಲಗಲನಂಭಾ ಹುಲಿಯಾ ಕಾಲಿನ ಮಂಚಾ
ಮಲವ ತಂದಿರಸ ಮಲಕೀಗೆ। ತಿಂಗನಾ
ಕಾಯಾ ತಂದಿರಸ ಕಳಸಾಕೆ। ॥೬॥

ತಿಂಗಳಾ ದ್ಯೆವಾರಂತಾ ತಂಗೇ ಮಿಯ್ನಿರದಾಳ[೬]
ಹಿಂಗಾರಾ ಕೊನಿಯಾ ಹದನಾರ। ಕುಯ್ದೀಕಂಡೇ
ತಂಗೀಯಾ ಸೋಬನ್ಕೇ ಬರುವಾರ। ॥೭॥

ಮುಟ್ಟೀ ತುಂಬೀದೂಂವಾ ಮುಡಿಬಾರೇ ನನ್ನಮ್ಮಾ
ಮುತ್ತೀನಂತ್ ನಲ್ಲಾನಾ ಒಡಗುಂಡೇ। ನನ್ನಮ್ಮಾ
ಮುಟ್ಟೇ ತುಂಬೂಂವಾ ಮುಡಿಬಾರೇ। ॥೮॥

---

೧. ಚೌಲಕರ್ಮ ೨. ಒಸಗೆ, ಸಂತಸ ಸುದ್ದಿ ೩. ನಮಗಿರಲಿ ೪. ಜೋಯಿಷರು, ಪುರೋಹಿತರು, ೫. ಮಾಡಲು ೬. ಋತುಮತಿಯಾಗಿದ್ದಾಳೆ

ಹೆಡಗೀ ತುಂಬೀದೂಂಬಾ ಮುಡಿಬಾರೇ ನನ್ನಮ್ಮಾ
ಹವಳಾದಂತ್ ನಲ್ಲನಾ ಒಡಗುಂಡೇ। ನನ್ನಮ್ಮಾ
ಹೆಡಗೇ ತುಂಬೂಂವಾ ಮುಡಿಬಾರೇ। ॥೯॥

ದೊಡ್ಡಾ ಅಪ್ನಮನಿಯಾ ದೊಡ್ಡಕ್ಕೀ ಹೊರಬಂತೇ
ದೊಡ್ಡಾ ಹಿಂಗಾರ್ದಾ ಕೊನಬಂತೇ। ನನ್ನಮ್ಮಾ
ಅಯ್ವಾರೀಗ್ಹಚ್ಚೇ[೭] ಮುಡಿಬಾರೇ। ॥೧೦॥

ಸೆಣ್ಣ ಅಪ್ನಮನಿಯಾ ಸೆಣ್ಣಕ್ಕೀ ಹೊರಬಂತೇ
ಸೆಣ್ಣ ಕ್ಯೆಂದೂಗಿ ಕೊನಬಂತೇ। ನನ್ನಮ್ಮಾ
ಎಲ್ಲವ್ರೀಗ್ಹಚ್ಚೇ ಮುಡಿಬಾರೇ। ॥೧೧॥

ಅಯ್ದೂ ಸಿದ್ದಕ್ಕೇ ಎಯ್ದೂ ತಿಂಗನ ಪಲವೇ
ಅಯ್ದುಚ್ಚನಬೆಲ್ಲಾ ಪಲವಸ್ತು। ಇಕ್ಕಂಡೇ
ಅತ್ತಗ ತುಂಬದೆ ಮುಡ್ಳಾವಾ[೮]। ॥೧೨॥

ಹ್ವೊಮಕ್ಕುಳ್ಳಂದರೆ ತಾಮುಂದೆ ನಾಮುಂದೇ
ತಾನೂ ತನ್‌ಸತಿಯಾ ಒಡಗುಂಡೇ। ಅಕ್ಕನಕೋಡೇ್[೯]
ಹ್ವೊಮಕೆ ಮಣಿಯಾ ಇರ್ಸಂದಾ। ॥೧೩॥

ಅಗ್ಗೂನಿ[೧೦] ತಾರೇ ಮುದ್ದೂ ಮೊಕದಾ ರಾಣಿ
ಬದ್ರೇ ಬಾರತ್ನಾ ಹಿರಿಯಕ್ಕಾ। ನನ್ನಮ್ಮಾ
ಅಗ್ಗೂನೀ ಬ್ಯೆಗೇ ತಿಗತಾರೆ। ॥೧೪॥

ಅಗ್ನೀ ತಂದಕ್ಕಾನಾ ಚೆಂದಾದಲ್ ಬೆಸಗೊಂಡಾ
ಗಂದಾ ಅಕ್ಷತಿಯಾ ಕುಡ್ಸೀದಾ। ಹೋಗೂವಾಗೇ
ಬೊಂಬೀಯಾ ಸಾಲೇ ಉಡಗೇರೆ। ಹುದ್ದೋಗೂವಾಗೇ
ಕಾಲುಂಗ್ಲ ಗಮ್ಮು ಗಯಲಂದು। ॥೧೫॥

---

೭. ಅಯ್ವರಿಗೆ ಹಂಚಿ ೮. ಮಡಿಲನ್ನು ೯. ಅಕ್ಕನಹತ್ತಿರ ೧೦. ಅಗ್ನಿ

ಹಳದ್ಹಾಡು

ಹಿಂಡೂತೇ ಮೆಂದಾರೇ[೧೧] ಗಂಡಾಗೇ ಸಂತೋಸಾ
ಅತ್ತೇ ಮಾವಾಗೇ ಬಲು ಚಿಂತೇ। ಏನಂದೇ
ಕಾಯೂ ಬೆಲ್ಲಾವೇ ಕರಚಂದೇ। ॥೧೬॥

ಹೇರೀಕಾಯಡುವಾಕೇ ದಾರೀಬಂಗ್ಲೀಬೇಕೇ
ಇಂಗೂ ಸಂಬಾರ್ದ್ರಾ ಹುಡಬೇಕ। ನನ್ನಮ್ಮಾ
ಬೇಗರಾ[೧೨] ಪಂತೀಲೇ ಎಡಮಾಡ। ॥೧೭॥

ಹಳಸೀದಕ್ಕೀಯನ್ನಾ ಕುಳಕೂ ನಿಲ್ಲೀಕಾಯ
ಹಂಡೀ ಪಾಯಸವೇ ಮುಗಳಕ್ಕೆ ಹುಳ್ಗಾವೇ[೧೩]
ನೀರಾಗಿ ಅಂಗ್ಳಾಕೇ ಹರದೀದ ॥೧೮॥

ಗಡಗಡನೇ ಬಂದಾಳೇ ಗುಡಿಯಂಗೇನೆಂತಾಳೇ[೧೪]
ಮೊರನಂತಾ[೧೫] ಪುಕಳೀ ಇರಸೀತೇ। ಅಕ್ಕಮ್ಮಾ
ಚೆಂಬೀನಂತ್[೧೬] ಮುದ್ದೀ ನಿಗ್ವಾದ[೧೭]। ॥೧೯॥

ಆವ್ರೋಡ[೧೮] ಈಯೋಡ ಕಾಯೋಡ ಕಡಿಯೋಡ
ಹಾದೀಮೆನ್ ಬೆದ್ದಾಸೊರಿಯೋಡ। ನಂಟತಿ
ಈ ವ್ರೋಡಾ ಇಲ್ಲೇ ಕಲತದೆ। ॥೨೦॥

ನಾರೀಯರೆಟ್ಟದ್ದು ನಾಲ್ವತ್ತು ಸಾವೀರ
ಗೋವೀಯ ನಾಡ ಕಳವೀಯೇ। ಕಳ್ರರಾಜ್ಯ
ಹುತ್ತೀರುವಾಗ್‌ನಮ್ಮಾ ತಿರಳಾಸಿ[೧೯]। ॥೨೧॥

ಉಂಬಟ್ ಉಂಡ್ಕಣ್ಣಿ ಕಂಬ್ಳೀಲ್ ಕಟ್ಕಣ್ಣಿ
ಬಂದಾಳ ಕೋಡೇ ಹುರ್ಸೀರಿ। ನೀವೆಲ್ಲಾ
ಅದ್ರ್ಹಾದೀಹ್ಹೋಗೀ ಬಿಡ್ಸಣ್ಣಿ। ॥೨೨॥

ಗೊಂಡೀಯಾ ನಿಟ್ಟದ್ದೇ ಗೊಂಡೀಗ್ ನೀರ್ಹುಯ್ದದೇ
ಗೊಂಡೀಯಾ ಸುಪ್ಪ ತಲಗಿಂಬ। ಲೀವ್ರೂರಾ
ಪುಂಡೇರ ನಮ್ಹಾಡಾ ಹಳ್ದರ। ॥೨೩॥

---

೧೧. ಋತುಮತಿಯಾದರೆ ೧೨. ಬೀಗರ ೧೩. ಕುದೀಲ, ಸಾಂಬಾರು ೧೪. ಗುಡ್ಡೆಯ ಹಾಗೆ ನಿಂತಳು ೧೫. ಗೆರಸಿಯಂಥ ೧೬. ತಂಬಿಗೆಯಂಥ ೧೭. ನೆಗೆದಳು ೧೮. ಆ ಹೊಟ್ಟೆ ೧೯. ತಿರುಗಿಕಳಿಸಿ

ಅತ್ತೆ ಮನೆಗೆ ಹೋಗುವುದು

ಅತ್ತೀ ಮನಿಗ್ಹೋಗೂಕೇ ಪಟ್ಟೀ ಹಚ್ಚಡಬೇಕ
ಮುತ್ತ ರನ್ನಸ್ಹಾ[೨೦] ಕೊಡಬೇಕ। ಅಣ್ಣಯ್ಗೆ
ಮತ್ತೊಬ್ರ ಬೇಕ ಗೆಣಿಯಾರ। ॥೨೪॥

ಮಾವನಾ ಮನಿಗ್ಹೋಗೂಕೇ ಸಾಲೀದ ಹಚ್ಚಡಬೇಕ
ಹೂಂವ ರನ್ನಸ್ಹಾ ಕೊಡಬೇಕ। ಅಣ್ಣಯ್ಯಗೆ
ಏಗೊಬ್ರ ಬೇಕ ಗೆಣಿಯಾರ। ॥೨೫॥

ಹವಳದಾ ಚಪ್ಪರ್ವೇ ಹದಿನಾರು ನಾವುದ್ದ
ಹವಳಾದಾ ಸರವೆಟ್ಟ ಗರ್ತೇರ। ಅಕ್ಕದೀರ್ಯಾ
ನಾವ್‌ಹೋಗೀ ಬತ್ತವ ನಿಂತಿರಿ। ॥೨೬॥

ಅಕ್ಕಾ ತಂಗಾದೀರ್ ಮಾತು ಕೈಳಾದಿರ್ ತಮ್ಮಯ್ಯಾ
ನಾಳಾಗ್ ನಮ್ಮಲ್ಲೇ ಬಿಸಿಗಂಜಿ। ಬೆರ್ಕಿಯಾಸೆ
ಓಟಕ್[೨೧] ನಮ್ಮನಿಗೇ ಬರ್ಬೇಕ। ॥೨೭॥

ಮಾವ್ನ ಮನಿಯಾ ಮುಂದೇ ತೋಡೀದಾಬಾವುಂಟ
ಕೋಡೇ ಸಂಪಗಿಯಾ ವನವುಂಟ। ಲಣ್ಣಯ್ಯಾ
ಅತ್ತಗದೀರುಂಟ ಮನಿಯಲ್ಲೇ। ॥೨೮॥

ಅತ್ತಿಮನಿಯಾ ಮುಂದೇ ಕಟ್ಟಸ್ಹಾ ಬಾವುಂಟ
ಕೋಡೇ ಮಲ್ಲಗಿಯಾ ಬನವುಂಟ। ಲಣ್ಣಯ್ಯಾ
ಮಾದನದೀರುಂಟ[೨೨] ಮನಿಯಲ್ಲೇ। ॥೨೯॥

---

೨೦. ರಂಜಿಸುವ, ಹೊಳೆಯುವ ೨೧. ಊಟಕ್ಕೆ ೨೨. ಮೈದುನಿಯರು

೦೩. ಬಯಕೆ

ಮುಟ್ಟೂಮುಟ್ಟಂದೇ ಮೂರ್‌ನೀರಾಮೆಂದಾಳ[೧]
ಮುತ್ತಕಟ್ ಹೂಂವಾ ಮುಡುವಾಳ। ಬಾಲಮ್ಮಾಗೇ
ಮುತ್ತನ ಗರ್ಬಿಣಿಯೇ[೨] ಹೊರದಾದೇ[೩]। ॥೧॥

ಸೂಲ್ಯಮ್ಮನ್ಹಿಂಡಾರ[೪] ಸೂತಕದಲ್ಲಿರುವಾರ
ನಾನೀರಾ ಕಾಸೇ ಮಿಯ್ಸೂವೇ[೫]। ಬಾಲಮ್ಮಾಗೇ
ಆ ನೀರಾ ಮಿಂದೇ ಎಳಬಯಕೇ। ॥೨॥

ಬಯ್ಕೀಲೇ[೬] ಬಾಡೂತೇ ಓಟಾದಲ್[೭] ಹುಗಳೂತೇ
ಯಾವ್ವೈಳೀಕ್[೮] ಮೆಂದೇ ಹಸಬಾಲಿ। ಮಾವೀನ
ಹೂಂವ ಮಿಡಿಯಲ್ಲೇ ಎಳಬಯಕೇ। ॥೩॥

ಬುಸ್ರ್ ಬೇಡೀದೇ ಮುಸ್ರನ್ನಾ ಉಪ್ಪನಕಾಯಾ
ಹೊಸನಾಡಾ ಅರದೇ[೧೦] ಬುಸರೇನೇ। ನನ್ನಮ್ಮಾ
ಬಸ್ರ ಬೇಡೀದೇ ಹೊಸ್ಬಣ್ಣಾ[೧೧]। ॥೪॥

ಬುಸ್ರ ಬುಸ್ರಂದೇಳೇ ಒಟ್ಟಾಳೇ ಪಟ್ಟೀಯಾ
ಹೊಟ್ಟಿಲ್ ಕಂದಯ್ಯಾ ಬಿಗರೀದ। ಅಂಬುದಕೇಳೇ
ಒಟ್ಟಾದೇವಾಂಗ ಸಡಲಾಸೇ। ॥೫॥

ಅಬ್ಬರ್ಗಿ ಹೂಂವ್‌ಮುಡ್ಕಂಡೇ ಹಬ್ಬಾಕ್ಹೋಗೂವಳೇರೇ
ಹುಬ್ಬು ಕಂಡರ್ತೇ ಬುಸರೇನೇ। ಕಿರ್ದಂಗೀ
ತೊಳಾ ಕಂಡರ್ತೆ ಮಗನೇನೇ। ॥೬॥

ಬುಸರೇನೇ ಬಾಲಮ್ಮಾ ಬಯಕೀನಾ ಬಡಸೂವೆ
ಇಸಳು ಕೆಂದಗಿಯಾ ಮುಡಸೂವೆ। ಬಾಲಮ್ಮಾಗೆ
ದಸರೀಯಾ ತಂದೂ ಉಡಸೂವೆ। ॥೭॥

---

೧. ಮೂರು ದಿನ ಸ್ನಾನ ಮಾಡಿದಳು ೨. ಗರ್ಭವು ೩. ತುಂಬಿತು ೪. ಸೂರ್ಯನ ಹೆಂಡಿರು ೫. ಸ್ನಾನ ಮಾಡಿಸುವೆ ೬. ಬಯಕೆಯಲ್ಲಿ ೭. ಊಟದಲ್ಲಿ ೮. ಯಾವ ವೇಳೆಯಲ್ಲಿ ೯. ಬಸಿರು ೧೦. ಚೆಲುವೆ ೧೧. ಹೊಸಸೀರೆ

ಹರ್ವ ಹಳ್ಳದಲ್ಲೇ ನಿರ್ದೇಸಾಲೀ ಉಡ್ವಾಗೇ
ವಾಲೇ ಬೆದ್ದದ್ನೇ ಅರಿಯಾಳಾ। ಬಾಲಮ್ಮಾ
ಓದೂ ಕಂದಯ್ಯಾ ಬಯಕೀಲೇ। ॥೮॥

ಮಾಯೀನಾ ಹಣ್ಣೀಗೇ ಯಾವೂರಾ ಕಳ್ಳಾ ಬಂದಾ
ದೇವೇಂದ್ರನ ಮಗಳಾ ಬಯಕೀಗೇ। ನಾರೇಣಸೊಮೆ
ತಾ ಒಂದಾ ಮೊಡಾ ಮುಗಲಲ್ಲೇ। ॥೯॥

ಹಿತ್ತೀ ಅಂಬಾ ಸುದ್ದಿ ಹೇಳೇ ಕಳಗತ್ತೂಗಿ
ತುಟ್ಟೊಲಿಗ್ಡಾಕೂ ಉರಗೆಜ್ಜಿ। ಮುತ್ತನಸರವಾ
ಬಾಲಾರಾ ಕಯ್ಲೇ ಕಳಗೂವೆ। ॥೧೦॥

ಕಗ್ಗಾ ಬೆಳಿಯಾಲೇ ಕಾಳೀ ಹಯ್ಯಾಗಾಲೇ
ಮೊಗ್ಗೀಯಾ ತುಪ್ಪಾನೆರಗಾಲೆ। ನನ್ನಮ್ಮಾ
ಹಿಗ್ಗಡತೇ ಮಗ್ಗಾ ಹಡಿಯಾಲೆ। ॥೧೧॥

---

೧೧. ಗಜನಿ ಭೂಮಿಯಲ್ಲಿ ಬೆಳೆಯುವ ಒಂದು ಬತ್ತದ ಜಾತಿ.

೧೪. ಬಾಳಂತಿ – ನಾಮಕರಣ

ಹಳ್ಳದೇರಿೀ ಮ್ಯೆನೇ ಹರದೇ ಹೋಗ್ವನೆರೇ
ಹವಳದಾ ಕುಡಿಯಾ ಮಡವಾಳಾ। ಏಸುವಂತಾ
ಹಡದಮ್ಮಗ್ ಹ್ಯೆಳೋ ಹೊಸ ಸುದ್ದಿ। ನಮ್ಮನಿಯಾ
ಮಗಳ್ಹೆತ್ತು ಗಂಡೂ ಕೊಮರಾನಾ। ॥೧॥

ಬಾಳಂತೀ ಬಚ್ಚೀಲಾ ತ್ವೊಳಮೆನರಸೀನಾ
ಏನ್ ಒಸಗೀ[1] ತಂದೆ ಮಡವಾಳಾ। ತಮ್ಮಯ್ಯಾ
ಅಕ್ ಹೆತ್ಳೇ ಗಂಡೂಕೊಮರಾನಾ। ॥೨॥

ಅಕ್ಕಾ ಹೆತ್‌ಸುದ್ದೀ ಅಂಗಳದಲ್ ಕೇಳೀದ
ನ್ಯೆವೂಳಾಕೊರುವಾ[2] ಕಳಗೀದಾ। ಬಾಲಯ್ಯಾ
ಅಕ್‌ಹಿತ್ತೇ ಗಂಡೂ ಕೊಮಾರಾನಾ। ॥೩॥

ತಂಗೇ ಹೆತ್ತಾ ಸುದ್ದೀ ಅಂಗೂಡಿಯಲ್ ಕೇಳೀದ
ಉಂಗೀಲಕೊರುವಾಕಳಗೀದಾ। ಅಣ್ಣಯ್ಯ
ತಂಗ್ಹಿತ್ತೇ ಗಂಡೂ ಕೊಮರಾನಾ। ॥೪॥

ತಂದೀ ದೆಸಿಯೋರ ತಂದರ ಮುರಿಯಾಜೋಡಾ
ಕಂದಯ್ನ ಕಯ್ಯಾ ಮುರಿಜೋಡಾ। ಮುಂಗೈಸರ್ಗಿ
ತಂದೀ ದೆಸಿಯೋರ ತಂದರ। ॥೫॥

ಸುಕ್ರಾರದಿನದಲ್ಲಿ ಹುಟ್ಟೀದ ಕಂದಯ್ಯಾ
ಅಪ್ಪಗೆ ಅವ್ವೀಗೆ ಬಾಗ್ಯಾವಾತಂದಾ
ಪಾಂಡವ್ರ ತುಟ್ಟೀಲ ತನಗಾಗಬೇಕಂದಾ
ಮೂರಾಲುಲೋಕವಾ ತಾನಾಳಾಬೇಕಂದಾ ॥೬॥

ಗಮ್ಮುಗಯ್ಲೆಂಬು ಕೀಲನೆ ಜಡಿದು
ಮೆನೊಪ್ಪು ಸರಪೂಳೆ ವಜ್ರದ ಬೆಳಗು .
ಜೋಕಂದಾ ಜೋಕಂದಾ ಜೋಕಂದಾ
ತೂಗೀರೇ ಕಂದನಾ ತೂಗೀರೇ ಬಾಲಾನಾ
ತೂಗೀರೇ ಮುದ್ದೂ ಚೆನ್ನಿಗನಾ
ಜೋಕಂದ ಜೋಕಂದಾ ಜೋಜೋ ॥೭॥

---

೧. ಸಂತಸ ಸುದ್ದಿ ೨. ನೇವಳಕ್ಕೆ ಹಣವನ್ನು

೧೫. ಮನೆಯಿರವಣ (ಗೃಹಪ್ರವೇಶ)

ಅಣ್ಣದೀರೆಲ್ಲಾ ಎಣ್ಣೀಯನ್ನಾ ಉಂಡೇ
ಹೊನ್ನೀಯಾ ನಾಡಾ ಹೊಲಕ್ಹೋಗೇ। ಕಡುವಾರೇ
ಹೊನ್ನೀಚಂದಣದಾ ಹಲಗೀಯಾ ೧

ಹಲಗೀ ಕಡುವಾರ ಹಲವಂಗಾ ತಿದ್ದೂವಾರ
ಸಿವನಾ[೧] ಬಂಡೀಲೇ ಉಗುವಾರ[೨]। ಅಣ್ಣಯ್ಯಾ
ಮಾಳುಗೀ ಮನ್ಗೇ ಅಳತೀಯೇ। ೨

ತಮ್ಮಾದೀರೆಲ್ಲಾ ತುಪ್ಪನ್ನಾ ಉಂಡೇ
ಗುತ್ತೀಯನಾಡಾ ಹೊಲಕ್ಹೋಗೇ। ಕಡುವಾರೇ
ಹರಳು ಚಂದನದಾ ಹಲಗೀಯಾ। ೩

ಹಲಗೀ ಕಡುವಾರೇ ಹಲವಂಗಾ ತಿದ್ದೂವಾರೇ
ಹರಳೂ ಬಂಡೀಲೇ ಉಗುವಾರೇ। ತಮ್ಮಯ್ಯಾ
ಉಪರ್ಗೀ ಮನ್ಗೇ ಅಳತೀಯೇ। ೪

*   *   *   *

ಗ್ವೊವೀನಾಡ್ ಗವ್ಡೀಯಾ[೩] ಆನೀಮೆನ್ ಬರುವೇಳಿ
ಮುತ್ತನ ಪಿಚ್ಚಂಗರ ಹವಳದ। ತಾಪೀಯಾ
ತಡದೇ ಗವ್ಡೇರಣ್ಣ ಬಂದಾನೇ। ೫

ಬಂದಾ ಗವ್ಡೇರಣ್ಣಾ ಅಂಗಳ್ದಲ್‌ನೆಂದಾನೇ
ಚಂದ್ರಮ್ಮಗ್ಹೋಲೂವರ್ಗೆ[೪] ನಮೋಅಂದಾ। ದೇವಾರ್‌ಕೇಳಿ
ನಮ್ಮಾ ಕರ್ದಂತ ಬಗಿಯೇನ। ೬

ನಿಮ್ಮ ಕರ್ದದು ನಮ್ಮ ಕಾರೀಕಾಗೆ
ರನ್ನದ ಮನಿಯಾ ಗೆಯ್ಬೇಕ। ೭

ಗುತ್ತೀನಾಡಾಚೇರಿ ಇತ್ತನಮೆನ್ ಬರುವೇಳಿ
ಮುತ್ತರನ್ನಸ್ಗಾ ಉಳಿಬಾಚಿ। ತಡಕಂಡೇ
ಗುತ್ತೀ ನಾಡಾಚೇರಿ ಬಂದಾನೇ। ೮

---

೧. ಶಿವನ ೨. ಒಗೆಯುವರು ೩. ದಾಸಿಯನ್ನು ೪. ಚಂದ್ರನನ್ನು ಹೋಲುವವರಿಗೆ ಗಟ್ಟಗಲ್ಲಿಟ್ಟೇ[೫]
ಇಪ್ಪತ್ತು ಬಾಗೀಲಿಟ್ಟೇ

ಗಟ್ಟಿಗಲ್ಲಿಟ್ಟೇ ಹರಳಿಟ್ಟೇ। ಕಟ್ಟೀದಾ ಮನಿಯಾ
ಪುತ್ರರು ಬಾಳೇ ಎರ್ಲಂದೆ। ೯

ಹರಳೂಗಲ್ಲಿಟ್ಟೇ ಹದಿನಾರು ಬಾಗೀಲಿಟ್ಟೇ
ಹರಳೂಗಲ್ಲಿಟ್ಟೇ ರವಿಯಿಟ್ಟೇ। ಕಟ್ಟೀದಾಮನಿಯೇ
ಬಾಲರು ಬಾಳೇ ಎರ್ಲಂಬೆ। ೧೦

ಸಿದ್ದೀಗೇ ಸರಣಂದೇ ತಿದ್ದೀದಾ ಆಚೇರೆ
ಉಜ್ರದುಂದುಳಿಯಾ[೬] ತಡಕಂಡೇ। ಬಾಲಯ್ನಾ
ಮಾಳುಗಿಯಾ ತಿದ್ದೇ ಗೆಯ್ದಾನೇ। ೧೧

ಅತ್ತಿಯಾ ಮರನೇ ಅತ್ತೀಯಾ ಕಟಕಟ್ಟ[೭]
ಹೊನ್ನೀಯಾ ಮರನೇ ನಿಡಕಟ್ಟ। ಮೈನೇನಿಂತೇ
ಉಪ್ಪರ್ಗಿ ಮನಿಯಾ ಗೆಯ್ದಾರೇ। ೧೨

ಅತ್ತೀಯಾ ಹಲಗೇ ಅತ್ತೀಯಾದಂಡೂಗೇ
ಮತ್ತೀಯಾ ಹಲಗೇ ನಿಡಕಟ್ಟ। ಮೈನೇ ನಿಂತೇ
ಮಾಳೂಗಿ ಮನಿಯಾ ಗೆಯ್ದಾರೇ। ೧೩

ರಾಜಾ ಕಟ್ಟಿದ ಮನಿಯಾ ಚೋಜೀಗಾ[೮] ನೋಡೀರಿ
ಚೂಂಜೀಯಲ್[೯] ಮುತ್ತಾ ಸೊರ್ದಂಗೆ[೧೦]। ಬಾಲಯ್ಯ
ರಾಜಾ ಕಟ್ಟಿದನೇ ಗರಡೀಯಾ। ೧೪

ಉತ್ತುಮ ಕುಳ್ಳೂ ಮನಿಗೇ ಪಟ್ಟೇ ಮೇಲೂಗಟ್ಟೇ
ಚಿತ್ತೋರಾ[೧೧] ಚಿತ್ತರವಾ ಬರದಾರೆ। ಬಾಲಯ್ಯಾ
ಉತ್ತುಮ್ ಕುಳ್ಳೂವಾ ಅರಮನೆ। ೧೫

ಮಾರಯ್ಯಾ ಕುಳ್ಳೂಮನಿಗೇ ಹವಳದಾ ಮೇಲೂಗಟ್ಟೇ
ಬಾಲರ್ ಚಿತ್ತರವಾ ಬರದಾರೆ। ಬಾಲಯ್ಯಾ
ಮಾರಯ್ಯಾ ಕುಳ್ಳೂ ಅರಮನೆ ೧೬

*   *   *   *

ಇತ್ತನಾ ಸಿಗಣೀ ತಂದೇ ಹುಸ್ತೀಲಾ ಲಾರೀಸೇ
ಮುತ್ತೂ ರನ್ನದಲ್ಲೇ ಹಲಿ ಹುಯ್ದೇ। ಬಾಲಯ್ಯಾ
ಉತ್ತುಮ್‌ಕುಳ್ಳಿರುವಾ ಅರಮನ್ನೆ ೧೭

---

೫. ಗಟ್ಟಿಕಲ್ಲನ್ನಿಟ್ಟು ೬. ವಜ್ರದ ಒಂದು ಉಳಿಯನ್ನು ೭. ಕಟಾಂಜನ ೮. ಸೋಜಿಗ ೯. ಸೂಜಿಯಲ್ಲಿ ೧೦. ಸುರಿದಂತೆ ೧೧. ಚಿತ್ರಗಾರ

ಹೋರಿ ಸಿಗಣಿ ತಂದೇ ಬಾಗೀಲಾ ಸಾರೀಸೇ
ಹೂಂವ್ನ ರಜದಲ್ಲೇ ಹಲಿಹುಯ್ದೇ। ಬಾಲಯ್ಯಾ
ಮಾದೊರಿ ಕುಳ್ಳೂವಾ ಅರಮನ್ನೇ। ೧೮

ಮಾಳೂಗೀಗ್ ರತವಾ ಏಗೆರು ಬರುವಾರೆ
ಬೂಮೀ ಬರತನ ಹಿರಿಯಕ್ಕ। ನನ್ನಮ್ಮ
ಮಾಳೂಗೀಗ್ ರತವಾ ಬರುವಾದೇ[೧೨]। ೧೯

*   *   *   *

ಗ್ವೊವೀನಾಡ್ ದೋಸೇರ ಆನೀಮೆನ್ ಬಂದಾರೇ
ಮುತ್ನ ಸತ್ತಗಿಯಾ ನಿರಳಲ್ಲೇ। ಇವ್ರಮನಿಯಾ
ಮುತ್ತೀನಂತ ಹ್ವೊಮಾಗಿಯ್ಯೂಕೇ[೧೩]। ೨೦

ಅಂಗಳಾ ಮುಂದೀನಾ ತಿರುಳು ಬಾಳೆಲಿಯಾ
ಅಕ್ಕಮ್ಮಾ ಹೋಗೇ ಕುಯ್ತಾರೇ। ಅಂಕೋಲೀಯಾ
ದೊಡ್ಡ ದೋಸೇರೀಗ್ ಪಡಿಹೊಯ್ಯೇ। ೨೧

ಉಪ್ಪರ್ಗಿ ಒಳಗಾನಾ ಜೇರಗ್‌ಸಾಲಕ್ಕೀಯಾ
ಅಕ್ಕಮ್ಮಾ ಹ್ವೊಗೇ ತಿಗ್ತಾರೇ। ಅಂಕೋಲಿ
ದೊಡ್ಡಾದೋಸೇರೀಗ್ ಪಡಿಹೊಯ್ಯೇ। ೨೨

ಅಗ್ಲೂನಿ ತಾರೇ ಮುದ್ದೂಮೊಕದಾ ರಾಣಿ
ಬದ್ರೇ ಬಾರತ್ನಾ ಹಿರಿಯಕ್ಕಾ। ನನ್ನಮ್ಮಾ
ಅಗ್ಲೂನಿ ಬ್ಯೆಗೇ ಮುಗ್ತಾರೇ। ೨೩

ಅಗ್ಲೂನಿ ತಂದಕ್ಕಗೇ ಚೆಂದಾದಲ್ ಬೆಸಗೊಂಡಾ
ಗಂದಾ ಅಕ್ಷತಿಯಾ ಕುಡಸೀದಾ। ಹೋಗೂವಾಗೇ
ಪಟ್ಟೀಯಾ ಸೇರೇ ಉಡಗೇರೆ। ೨೪

ಅಟ್ಟಕೇ ಸರಪೂಳೇ ಪಿಟ್ಲೂಗೀಗ್ ಮುಚ್ಚೀಳಾ
ಮೆಟ್ಟಂಗಳೆಲ್ಲಾ ಜಿವಳೀಯೇ। ಅಣ್ಣಯ್ಯಾ
ಉಪ್ಪರ್ಗಿ ಗೆಯ್ದವ್ರೀಗ್[೧೪] ಉಡಗೇರೆ। ೨೫

---

೧೨. ಬರೆಯುವಳು ೧೩. ಹೋಮ ಮಾಡಲು ೧೪. ಮಾಡಿದವರಿಗೆ

ಆ. ಕೌಟುಂಬಿಕ ಗೀತಗಳು

	ನಿರೂಪಕರ ಹೆಸರು	ಊರು
೧.	ದೇವಮ್ಮ ರಾಮ ನಾಯಕ	ಭಾವಿಕೇರಿ
೨.	ದೇವಮ್ಮ ನಾರಾಯಣ ಕಲಗುಜ್ಜಿ	ಬೇಲೇಕೇರಿ
೩.	ಗಂಗಾ ಬೀರಣ್ಣ ನಾಯಕ	ಭಾವಿಕೇರಿ
೪.	ದೇವಮ್ಮ ಹೊನ್ನಪ್ಪ ನಾಯಕ	ಭಾವಿಕೇರಿ
೫.	ಹೊನ್ನಮ್ಮ ನಾಯಕ	ಭಾವಿಕೇರಿ
೬	ಲಕ್ಷ್ಮೀ ನಾಯಕ	ಭಾವಿಕೇರಿ
೦೭.	ಹನಮು ನಾಯಕ	ಭಾವಿಕೇರಿ
೮.	ವೆಂಕಮ್ಮ ನಾಯಕ	ಭಾವಿಕೇರಿ
೯.	ತಿಪ್ಪು ನಾಯಕ	ಭಾವಿಕೇರಿ
೧೦.	ಬೀರಮ್ಮಾ ನಾಯಕ	ಭಾವಿಕೇರಿ
೧೧.	ಸುಬ್ಬಿ ನಾಯಕ	ಭಾವಿಕೇರಿ
೧೨.	ಲಕ್ಷ್ಮಿ ನಾಯಕ	ಭಾವಿಕೇರಿ
೧೩.	ದೇವಮ್ಮ ನಾರಾಯಣ ಕಲಗುಜ್ಜಿ	ಬೇಲೇಕೇರಿ
೧೪.	ಲಕ್ಷ್ಮಿ ನಾಯಕ	ಬೇಲೇಕೇರಿ
೧೫.	ಬೀರಮ್ಮ ನಾಯಕ	ಬೇಲೇಕೇರಿ
೧೬.	ಸಾವಿತ್ರಿ ನಾಯಕ	ಬೇಲೇಕೇರಿ
೧೭.	ದುರ್ಗಿ ನಾಯಕ	ಬೇಲೇಕೇರಿ
೧೮.	ಸಣ್ಣಮ್ಮ ನಾಯಕ	ಬೇಲೇಕೇರಿ
೧೯.	ಸರಸ್ವತಿ ನಾಯಕ	ಬೇಲೇಕೇರಿ
೨೦.	ಬೊಮ್ಮ ನಾಯಕ	ಬೇಲೇಕೇರಿ
೨೧.	ನಾಗಮ್ಮ ನಾಯಕ	ಬೇಲೇಕೇರಿ
೨೨.	ಮಂಕಾಳಿ ನಾಯಕ	ಬೇಲೇಕೇರಿ
೨೩.	ಗಿರಿಯಮ್ಮ ನಾಯಕ	ಬೇಲೇಕೇರಿ
೨೪.	ರಾಕಮ್ಮ ನಾಯಕ	ಬೋಳೆ
೨೫.	ಕೃಷ್ಣಾಬಾಯಿ ಉಮೇಶ ನಾಯಕ	ಬೋಳೆ
೨೬.	ಬೀರಮ್ಮ ನಾಯಕ	ಬೋಳೆ
೨೭.	ತಿಮ್ಮಕ್ಕ ನಾಯಕ	ಬೋಳೆ
೨೮.	ಲಕ್ಷ್ಮಿ ವೆಂಕಟೇಶ ನಾಯಕ	ಬಾಸಗೋಡ

೨೯.	ನಾಗಮ್ಮ ನಾಯಕ	ಬಾಸಗೋಡ
೩೦.	ಹೊನ್ನಮ್ಮ ನಾಯಕ	ವಂದಿಗೆ
೩೧.	ಬೀರಮ್ಮ ನಾಯಕ	ವಂದಿಗೆ
೩೨.	ಸಣ್ಣಮ್ಮ ನಾಯಕ	ವಂದಿಗೆ
೩೩.	ಚಂದ್ರಿ ನಾಯಕ	ವಂದಿಗೆ
೩೪.	ಬೀರಮ್ಮ ಗಾಂವಕರ	ನಾಡುಮಾಸ್ಕೇರಿ
೩೫.	ಹೊನ್ನಮ್ಮ ನಾಯಕ	ನಾಡುಮಾಸ್ಕೇರಿ
೩೬.	ರಾಕಮ್ಮ ನಾಯಕ	ಸೀಳ್ಯ
೩೭.	ವೆಂಕು ನಾಯಕ	ಸೂರ್ವೆ
೩೮.	ಶಾರದಾ ನಾಯಕ	ಕಣಗಿಲ
೩೯.	ಲಕ್ಷ್ಮಿ ನಾಯಕ	ಪಡುವಣಿ
೪೦.	ಬೊಮ್ಮ ನಾಯಕ (ಕೆರೆಮನೆ)	ಹಿರೇಗುತ್ತಿ
೪೧.	ಬೀರಮ್ಮಾ ನಾಯಕ	ದೇವರಬಾವಿ
೪೨.	ಮಂಕಾಳಿ ನಾಯಕ	ದೇವರಬಾವಿ
೪೩.	ಲಕ್ಷ್ಮೀ ನಾಯಕ	ದೇವರಬಾವಿ
೪೪.	ನಾಗಮ್ಮ ನಾಯಕ	ಅಗ್ಗರಗೋಣ
೪೫.	ದುರ್ಗಿ ನಾಯಕ	ಮಳಲಿ
೪೬.	ಸಾತಮ್ಮ ನಾಯಕ	ಮೊಗಟಾ
೪೭.	ಲಕ್ಷ್ಮಿ ನಾಯಕ	ಮೊರಳ್ಳಿ
೪೮.	ತಿಮ್ಮಕ್ಕ ನಾಯಕ	ಮೊರಳ್ಳಿ
೪೯.	ಶಿವಮ್ಮ ನಾಯಕ	ತೊರ್ಕೆ
೫೦.	ಸರಸ್ವತಿ ನಾಯಕ	ತೊರ್ಕೆ
೫೧.	ಸರಸಿ ನಾಯಕ	ಅಡ್ಲೂರ

ಹಾಡು ಸಂಗ್ರಹಿಸಿದ ಕಾಲ : ೧೯೫೬ ರಿಂದ ೧೯೭೧

ಆಕರ ಮೂಲ : ಪಡುಕೋಗಿಲೆ (೧೯೭೩) ಡಾ. ಎನ್.ಆರ್. ನಾಯಕ
ಆದರ್ಶ ಪ್ರಕಾಶನ ಕಾರವಾರ

ತಾಯೇ ಬಾ ನನ್ನಾ ವಚ್ನಾಕೇ

ಬಾರಂದಾ ಮಾತೀಗೇ ಬಾರಾಳೇ ಸರಸ್ವತೇ
ಬಾಳೀ ತಿಳ್ಳಂಗೇ[೧] ಬಳ್ಕೂ–ತೇ! ಹುಳಿಯುತೇ[೨]
ತಾಯೇ ಬಾ ನನ್ನಾ ವಚ್ನಾಕೇ. ೧

ಮುದ್ದೂ ನನ್‌ಬಾಲವ್ವಿಗೇ ಹಾಡೂಗಳ್ ಬರ್ಲಂದೇ
ತಾಯೇ ಸರಸ್ವತಿಯಾ ಬುಡ್ಕೋಗೇ[೩]। ಬೇಡೂವೇ
ಹಾಡಾ ಬಾಲಮ್ಗೇ ಕೊಡ್ಬೇಕೇ. ೨

ಹೆಚ್ಚಾಲೇ ನಮ್ಮಾ ಮನಿಮಕ್ಳ

ಗಂಡೂ ಮಗ್ನಾ ಕೊಡೋ ದಂಡೀನಾ ಹನ್ಮಂತಾ
ಗೊಂಡೀಗೇ ಮುತ್ತಾ ಸುರಿಸೂವೆ! ದ್ಯೆವಾರೇ
ಕಂಡಲ್ಲೇ ಕಾಯಾ ಉಡಿಸೂವೆ. ೧

ಗಂಡೂ ಮಕ್ಳ ಪಲ್ವಾ ಒಂಬತ್ತಾ ಕುಡ್ತಾಯೇ
ಒಂಬತ್ರಾ ಮ್ಯೆನೇ ಕಳ್ಸಾವೇ।ವ। ತಡ್ದೇಬರಾ[೪]
ರಂಬೇರಯ್ವರ್‍ರಾ ಕುಡ್ತಾಯೇ. ೨

ಮಕ್ಕಳು ಮಕ್ಕಳು ಎಲ್ಲವ್ರೂ ಸರಿಯಂದೇ
ಹಚ್ಚೂವಳಮ್ಮಾ ಕಡ್‌ಲೀಯಾ। ಬೆಳಿಯಂಗೇ
ಹೆಚ್ಚಲೇ ನಮ್ಮಾ ಮನಿಮಕ್ಳ. ೩

---

೧. ಎಳೆಯ ಎಲೆ ೨. ಹೊಳೆಯುತ್ತ ೩. ಸಮೀಪಕ್ಕೆ ಹೋಗಿ ೪. ಹಿಡಿದು ಬರುವ

ಪಂತೀಲಾಡುಂಬಾ ಮಗ್ನಾದಾ

ಸಿರಿದೇವೀ ಕೋಡೇ[೫] ವರುವೇನಾ[೬] ಬೇಡೂವೇ
ಅರ್ವೀಯಾ[೭] ಹಾಲೂ ಗುರುಬಲ। ತೂಗೂತುಟ್ಲಾ
ವರ್ವಾಗ್ಲೇ[೮] ನಮ್ಮ ಮನಿಯಲ್ಲೇ. ೪

ಸಂತೋಸಾ ನನಗಾಗೇ ಚಿಂತೇ ದೋರಾದಾವೇ
ಕಂಚೀನಾ ತಟ್ಟೇ ಎಯ್ದಾದು। ನಮ್ಮನಿಲೇ
ಪಂತೀಲಾಡುಂಬಾ ಮಗ್ನದಾ. ೫

ಎಲ್ಲೋರೋಕ್ಸಿದಿಂದೇ ಬಲ್ಲೋರಿಗ್ ಮಗ್ನದಾ
ಬಲ್ಲಿಂದ್ರಪ್ಪೋಜೀ ತೊಡಿಮ್ಯನೇ। ಆಡುಂಬಾ
ಬಿಳ್ಳೀ ದ್ಯೆವ್ರಂತಾ ಮಗ್ನಾದಾ. ೬

ಹಡದಾ ತಾಯೀಗೇ ಹುಳ್ವ್[೯] ಕನ್ನುಡಿಯಾದಾ
ಈರಾಜೀದಲ್ಲೇ ಉದಿಯಾದಾ[೧೦]। ಬಾಲಯ್ಯಾ
ಬಳಗಾಕೇ ಮಾಣಕ್ದಾ ಹರ್ಳಾದಾ। ೭

ನಿಲ್ಲೀ ಅಣ್ಣಾದರೇ ಎಲ್ಲವ್ರೀಗ್ ಚೋಜಿಗಾ
ಬಲ್ಲಿಂದ್ರ್ನ ಕುಲ್ಕೇ[೧೧] ಮಗ್ನೊಬ್ಬ। ಬಾಲಯ್ಯ
ದೀರಾ[೧೨] ಹುಟ್ದ್ಯೋ ಕುಲ್ದಲ್ಲೇ. ೮

---

೫. ಹತ್ತಿರ ೬. ಆಶೀರ್ವಾದ ೭. ಬಟ್ಟೆ ೮. ಲಭ್ಯವಾಗಲಿ ೯. ಹೊಳೆಯುವ ೧೦. ಹುಟ್ಟಿದ ೧೧. ಬಲೀಂದ್ರನ ಕುಲಕ್ಕೆ ೧೨. ಧೀರ

ಹಾಡೀನಾ ದಿನ್ನಾ ಆಲೀಸಿ ಕೇಳ್ವಾನೇ

ತೂಗೂ ತುಟ್ಟಕೇ ತುಂಬೀ ಹುಂವ್ವಾ[೧೩] ಗೆಜ್ಜೇ
ಯಾವೂರಾಚೇರೀ ಮಗ್ಗೆಯ್ದಾ। ಬಾಲಯ್ಯಾನಾ
ಮಾವ್ವೋಜೇ[೧೪] ಕುಳ್ತೇ ಗಿಯ್ಸೀದಾ[೧೫]. ೯

ಬಾಲೀ[೧೬]ತುಟ್ಟದಾ ಕೀಲೆಲ್ಲಾ[೧೭] ಉರುಗೆಜ್ಜೇ
ಯಾವುರಾಚೇರೀ ಮಗ್ಗೆಯ್ದಾ। ಬಾಲಯ್ಯಾನಾ
ಅಪ್ಪೋಜೇ[೧೮] ಕೂತೇ ಗಿಯ್ಸೀದಾ ೧೦

ಹಲ್ಗೀ ತುಟ್ಟಕೇ ಹದ್ನಾರು ಬಾಗೀಲಾ
ಎಳ್ನೀರಾಮಿಂದೇ ಉರ್ಗೀದಾ[೧೯]। ಬಾಲಯ್ನಾ
ಅರ್ಗೇ[೨೦] ನೋಡದ್ಳೇ ಸಿರ್ದೇವೇ ೧೧

ತುಟ್ಟದಾ ಬಾಲೀಯಾ ಹೊಟ್ಟೀಗೋಳಸ್ದಾವೇ[೨೧]
ನೆಟ್ಟಾದೀಲ್[೨೨] ಬಾರೇ ಎಳ್ಗಂದೀ[೨೩]। ಕಾಳೀಮಣ್ಣಾ
ಕಟ್ಟಾದೇ ಕರ್ವೇ ನೊರಿಹಾಲಾ ೧೨

ತುಟ್ಟಾಳದಲ್ಲುಂದಾ ತೊಳ್ದಾ ಮುತ್ತಾ ಕಂಡೇ
ಹೊಟ್ಟೀ ಮೆನ್ಮಾಡೇ ಮನಗೀನೇ ।ದ। ಕಂದಯ್ಗೇ
ಮುತ್ತೀನಾ ದಿಟ್ಟೀ ತಿಗ್ದಿಡ್ವೇ ೧೩

ಹಾಲೈಕೇ ಕಾಯಾವೇ ಬಾಲೈಕೇ ಯಾಳಾನೇ
ಬಿಳ್ಳೀಯಾ ತಟ್ಟೇ ಬೆಳ್ಗಾವೇ[೨೪]। ಬಾಲಯ್ನಾ
ಹಾಲೊಂಡಾ ದುಳ್ಳ[೨೫] ಹಸ್ದಾವೆ. ೧೪

ಮಾಳೂಗೀ ಒಳಗೇ ಮಗ್ನಾ ತುಟ್ಟಾಳಕಟ್ಟೇ
ಮಾಡೂವಳಮ್ಮಾ ಕೆಲ್ಸವಾ। ತಾಯಮ್ನಾ
ಕಾಲುಂಗ್ನ ದಿನಿಗೇ ಮಗ್ನೆದ್ದ. ೧೫

ಅಳ್ಬ್ಯೇಡಾ ನನ್ಬಾಲಯ್ಯಾ ಚಲ್ಗಾರಾ[೨೬] ನಿನ್ನಪ್ಪೋಜ್ಜೇ
ಚಲ್ಕೇ ಗಿಯ್‌ಸ್ವರೋ[೨೭] ಉರ್ಗೆಜ್ಜೆ। ಅಪ್ಪೋಜೇ

---

೧೩. ಹೂವಿನ ೧೪. ಮಾವ ೧೫. ಮಾಡಿಸಿದ ೧೬. ಮಗು ೧೭. ಸಂದು ಸಂದು ೧೮. ತಂದೆ ೧೯. ಮಲಗಿದ ೨೦. ಇಣಿಕಿ ೨೧. ಹೊಟ್ಟೆ ಹಸಿದಿದೆ ೨೨. ಸರಿಹಾದಿಯಲ್ಲಿ ೨೩. ಹಾಲು ಹಸು ೨೪. ಬೆಳಗಿವೆ ೨೫. ಹೊಟ್ಟೆ ೨೬. ಹಟವಾದಿ ೨೭. ಮಾಡಿಸುವರು ೨೮. ಕೊರಳಿಗೆ ೨೯. ಹರಿಬಾರೋ

ಕುಳ್ಳೀಗ್[೨೮] ಮಾಡ್ಸ್ವರ ಪದ್ಕಾವಾ.

೧೬

ಹಾಲಾಕುಡಿಬಾರೋ ಬಾಲಕೃಷ್ಣಾಬಾರೋ
ನಾರಾಯಣ ಬಾರೋ ಹರ್ಬಾರೋ[೨೯]। ತುಟ್ಟದಾ
ಬಾಲಯ್ಯಾ ಹಾಲಾಕುಡಿಬಾರೋ। ೧೭

ಕಂದ ಕರ್ದರೆ ಬಾರೋ ಪಂಜರ್ದಾಗಿಳ್ಬಾರೋ
ನಂದಾಗೋಪಮ್ನಾ ಮಗ್ಬಾರೋ। ಬಾಲಯ್ಯಾ
ನೀಬಾರೋ ನನ್ನಾ ತೊಡಿಮ್ಯೆನೇ। ೧೮

ಅಜ್ಜಾ ಅಜ್ಜಿಗೇ ಮುದ್ದೇ ಗೆಜ್ಜೇ ಕಾಲಿಗೆ ಮುದ್ದೇ
ಹಣ್ಗೊಳ್ಳಾ ಮರ್ಕೇ ಗಿಳ್ಮುದ್ದೇ। ಬಾಲಯ್ಯಾ
ನೀ ಮುದ್ದೋ ನಮ್ಮಾ ಬಳ್ಗಾಕೇ। ೧೯

ಹೂಂವ ಕುದ್ಲಿಗೆ[೩೦] ಚೆಂದಾ ಮುತ್ತ ಕುಳ್ಳಿಗೆ ಚೆಂದಾ
ಲಕ್ಷತ್ರ[೩೧] ಚೆಂದಾ ಗಗ್ನಾಕೇ। ಬಾಲಯ್ಯಾ
ನೀ ಚೆಂದಾ ನಮ್ಮಾ ಬಳ್ಗಾಕೇ। ೨೦

ಯಾರಾನೇ ಕಂಡರೂ ಬಾಲ್ನಾ ಕಂಡಂಗಲ್ಲಾ
ತುಡ್ಯೇ[೩೨] ಹಗ್ಳಾದಾ[೩೩] ಕುಡಿಯಂಗೇ। ಬಾಲಯ್ನ
ಮಾತಾ ಕೇಳದ್ರೇ ಮನ್ಸಂತ। ೨೧

ತೂಗೂತುಟ್ಟದಾ ಕೀಲೆಲ್ಲಾ ಉರ್ಗೆಜ್ಜೆ
ನಾ ತೂಗೇ ಸಿವ್ನಾಮರ್[೩೪] ತೂಗೇ। ಬಾಲಯ್ಯಾ
ದೇವ್ತಗಳ್ತೂಗೇ ದಣ್ದಾರೇ। ೨೨

ಹಾಡೀನಾ ದಿನ್ನ್ಯಾ[೩೫] ಆಲೀಸೀ ಕೇಳ್ವಾನೇ
ತಾಯಾ ಹಂಬಲ್ವಾ ಮರ್ವಾನೇ। ಬಾಲಯ್ಯಾ
ಹಾಲೀನಾ ಗೆನಾ[೩೬] ಮರ್ವಾನೇ। ೨೩

ನಿದ್ದೂರೇ[೩೭] ಬಂದ್ಕಣ್ಣೀಗೇ ಮದ್ದೆರು[೩೮] ಮಾಡ್ವಾರೇ
ಗದ್ದೀಯಲೆದ್ದಾ ಗರ್ಗಾನೇ[೩೯]।ನಾ। ಸುಪ್ಪಾತಂದೇ
ಮದ್ದಾ ಮಾಡದ್ಯೇ ಅದ್ರವ್ವೇ। ೨೪

ನಿದ್ದೂರೇ ಬಂದಾವೇ ನನ್ಮುದ್ದೂ ಬಾಲಯ್ಗೇ
ನಿದ್ದೂರಿಯಲ್ಲಾ ನಿದ್ವಾನ್ನಾ[೪೦]। ಗೊಕ್ನದಾ[೪೧]
ಸಿದ್ದವ್ರು[೪೨] ಕೊಟ್ಟಾ ಸಿವ್‌ದೆನಾ[೪೩]। ೨೫

---

೩೦. ಕೂದಲಿಗೆ ೩೧. ನಕ್ಷತ್ರ ೩೨. ತುಟಿ ೩೩. ಹವಳದ ೩೪. ಶಿವನಮರಿ ೩೫. ಧ್ವನಿ ೩೬. ನೆನಪು ೩೭. ನಿದ್ರೆ ೩೮. ಔಷಧವನ್ನಾರು ೩೯. ಔಷಧಿ ಸಸ್ಯ ೪೦. ನಿಧಾನ, ಗುಪ್ತಸಂಪತ್ತು ೪೧. ಗೋಕರ್ಣದ ೪೨. ಸಿದ್ಧರು ೪೩. ಶಿವಧ್ಯಾನ

ಸಿರ್ಗಾ ಬಿಡನನ್ನಾ ಸಿರ್ಗೀನಾ ಕಂದಯ್ಯಾ

ಬಾಲೇ ಹುಟ್‌ದ್ನೇ ಕಾಲೀಗ್ ಕೀಲಾದಾನೇ[೧]
ಚೆಚ್ಚೇದಾ[೨]ಕೊಡ್ನಾ ತರ್ಗೊರ್ಡಾ। ಬಾಲಯ್ಯಾ
ಹಾಕಿದಾ ತುತ್ತಾ ಉಣ್ಗೊಡಾ[೩] ೨೬

ಸಿರ್ಗಾ[೪] ಬಿಡ ನನ್ನಾ ಸಿರ್ಗೀನಾ ಕಂದಯ್ಯಾ
ನಿರ್ಯಾ[೫] ಬಿಡ ನನಾ ರಗುರಾಮಾ। ರಾಮಚಿಂದ್ರಾ
ಕಡ್ಲೀಯಾ ಕುಡ್ವೇ ಅಳ್ಬೇಡಾ ೨೭

ಯಾಕಳ್ತೀ ಬಾಲಯ್ಯಾ ಬೂಪತೇ ನಿನ್ಮಾವಾ
ಗೋಕುಲದಲ್ ಬಿಳ್ವಾ[೬] ರಸ್ದಾಳೆ। ಕಬ್ಬಯ್ದಾ
ಬೂಪತ್ಮಾವೋಜೇ[೭] ತರ್ವಾನೋ ೨೮

ಬಟ್ಟಿದಾ ಅನ್ನಾ ಬರ್ಗುಣ್ಣ ಬಾಲಯ್ಯಾ
ಮುತ್ತಯ್ತೆ ನಿನ್ನಾ ಹಡ್ಡಮ್ಮಾ। ನೋಡ್‌ದ್ರೇ
ಮುತ್ನ ಸೆಳ್ಬೆತ್ತಾ[೮] ಹಿಡ್ವಾಳ ೨೯

ಎಲ್ಲವ್ರ್ ಮಕ್ಕಾಳಿಗೂ ಬೆಲ್ಲಾಬಾಳೀಹಣ್ಣ
ನನ್ನಬಾಲಯ್ಗೇ ಅವ್ಲಕ್ಕೇ ।ಕ್ಕ। ಚ್ಚನಬೆಲ್ಲಾ
ಕೊಟ್ಟುರ್ತು ಮಿಟ್ಟಾ[೯] ಗಳ್ಯಾನೇ ೩೦

ಅಳ್ವ ಮಕ್ಕಾಳೀಗೇ ಅಳ್ಗೀಯಾ[೧೦] ಅಂಬೂಲೇ
ಸೊರ್ಯಾಕಾಯ್ಕಡ್ಬಾ[೧೧] ಹದ್ನಾರ ।ರಾ। ತಕ್ಕಂಡೇ
ಅಳ್ವಾದಾ ಬಿಟ್ಟೇ ನಲ್ದಾನೇ ೩೧

ಹೇಳೀದಾ ಮಾತಾ ಕ್ಯೆಳಾನೇ ಬಾಲಯ್ಯಾ
ತುಂಬೀದಾ ಕೊಡ್ನಾ ಮರ್ಗೀದಾ[೧೨]। ಹೊನ್ನೊಡಿಯರಾ[೧೩]
ಕಲ್ಲಾಬಾಗ್ಲವೇ ಅರ್ಲಾದು[೧೪] ೩೨

---

೧. ಬಂಧಿ ೨. ಎತ್ತೊಕೊಂಡ ೩. ಊಟಮಾಡಕೊಡ ೪. ಸೆರಗು ೫. ನೀರಿಗೆ ೬. ಬೆಳೆಯುವ ೭. ರಾಜನಾದ ಮಾವ ೮. ಬೆತ್ತದ ಕೋಲು ೯. ಮೆಟ್ಟಿಲನ್ನು ೧೦. ಪಾತ್ರೆ ೧೧. ಸೋರೆಕಾಯಿ ಕಡಬು ೧೨. ಚೆಲ್ಲಿದನು ೧೩. ದೇವತೆಯ ಹೆಸರು ೧೪. ಕೆಸರಾಯಿತು

ಅರ್ಲಾದಾರಾಗಾಲೇ ಹೊಸ್ಮಣ್ಣಾ ಹುಯ್ಲೊವೇ
ಬಾಲಾರಿಗ್ ಸುಕ್ವಾ ಕುಡ್ತಾಯೇ ೩೩

ಹೊಸ್ಬಾಲೇ ಹೊಟ್ಬಾಲೇ ಈ ಬಾಲೇ ನಮ್ಗೆರ್ಲೇ[೧೫]
ಕೆಟ್ಬಾರೂ ಕೆಡ್ಲೇ ಮನಿಕೆಲ್ಸಾ। ಬಾಲಯ್ಯನಾ
ಚಿಚ್ಚೇ[೧೬] ಮುದ್ದಾಡೇ ಇರ್ವಾನೇ ೩೪

ಬಾಲಾರಾಡದ್ರೇ ಬುಗ್ರೀಯಾ

ಬಾಲಾನಾ ತುಟ್ಟಕೇ ಬಣ್ಣಾದಾ ಬುಗ್ರೀಯೇ
ಮ್ಯೆನುಂದೂ ತರ್ದಾ ಉರ್ಗ್‌ಜ್ಜೇ।ಜ್ಜೀ। ತಡ್ಕಂಡೇ
ಬಾಲೆ ಆಡ್ವಾನೇ ಬುಗ್ರೀಯಾ। ೩೫

ಬಣ್ಣಾದಾ ಕೋಲ್ಹಿಡ್ದೇ ಬಾಗಲ್ದಲ್ಲಾಡೂವಾ
ಗೋದೀ ಬಣ್ಣಗಿಯಾ[೧೭] ಮಣಿನಾಗಾ। ದ್ಯೆವ್ರಕಂದಾ
ಬಾಲಯ್ಯಾಡ್ವಾನೋ ಬದಿಗಾಗ। ೩೬

ಆಡೂವಾರಿಲ್ಲಾದೇ ಅಂಗಾಳಾ ಬಯ್ಲಾದಾವೇ
ಹೂಡುವರ್ಹೊನ್ನಾ ತುಳ್ಚೀಯಾ[೧೮]। ಕಂಟೀಮ್ಯೆನೇ[೧೯]
ಬಾಲಯ್ಯಾಡ್ವಾನೇ ಬುಗ್ರೀಯಾ। ೩೭

ಹಲ್ಗೀಯಾ ತುಟ್ಳಾವೇ ಹದ್ನಾರು ಬಾಗೀಲಾ
ಮಾಳೂಗಿ ಮನ್ಯಾ ಎಳ್ಳೂಗಸ।ಸ್ನ। ಮನಿಒಳ್ಗೇ
ಬಾಲಾರಾಡದ್ರೇ ಬುಗ್ರೀಯಾ। ೩೮

ಬಾಲೇ ಬರ್ಮಚಾರೇ ಬಾವೀ ನೀರೊಣ್ಣಾನೇ[೨೦]
ದೆವಾರೆಗ್ಗೆರಿಯಾ ಹಣ್ಣೀರಾ[೨೧]। ಮಿಂದೀ ಕಂಡೇ
ಬಾಲಾರಾಡದ್ರೇ ಬುಗ್ರೀಯಾ। ೩೯

ಸಾರಸ್ದಾ ಮನಿಯಲ್ಲೇ ನೀರಾ ಚೆಲ್ದವ್ರ್ಯೆರೇ[೨೨]
ಪಾರೀಗ್ವೊಳಾಡೇ ಗಿಳಿಯಾಡೇ। ನಮ್ಮನಿಯಾ
ಹಸ್ಬಾಲಾರಾಡೇ ದೂಳೆದ್ದು। ೪೦

---

೧೫. ನಮಗಿರಲಿ ೧೬. ಎತ್ತಿಕೊಂಡು ೧೭. ಬಣ್ಣದ ೧೮. ತುಲಸಿಯನ್ನು ೧೯. ಕಟ್ಟೆಯ ಮೇಲೆ ೨೦. ನೀರುಣ್ಣನು ೨೧. ಸ್ವಚ್ಛನೀರು ೨೨. ಚೆಲ್ಲಿದವರಾರು

ಬಾಲಕರಾಟಾವಾ ತಾನೊಡಾಬೇಕಂದೇ
ಬಾಳೀ ಬನ್ದಲ್ಲೇ ಗುರಿಹೊಡೇ। ನಾರೇಣಸೊಮೆ
ಬಾಲಯ್ಯರಾಟಾ ತಿಳಿಯಾವ್ರೋ। ಸಿರಿದೇವಿ
ನೂಗ್ಲಸೂತ್ರವಾ[೨೩] ತಡಿಬ್ಯೆಗೆ। ೪೧

ಬಾಲಾನಾ ಬ್ಯೆಗೇ ದಿನ್ಗಯ್ಯ

ಆಡೀಬಾ ಬಾಲಯ್ಯಾ ಬೇಡೇ ಬೆಲ್ಲಾ ಕುಡ್ವೇ
ನೀಡೂವೇ ಕಬ್ಬೂ ಕಡ್ಡಿಯಾ। ಬೆಲ್ಲದಚ್ಚಾ
ಆಡೀಬಾ ಜನ್ರಾ ಮಟ್ಕೋಗೇ। ೪೨

ಹಡ್ದಮ್ಮಾ ಹಿಗ್ಗಡ್ತೇ[೨೪] ಒಳ್ಗೇನಾ ಮಾಡೂತೀ
ನೋಡಬಾ ನಿನ್ನಾ ಮಗ್ನಾಟಾ। ಬಾಲಯ್ಯಾ
ಗುರ್ಗುಂಜಿ ಚೆಂಡಾ ಇಸ್ವಾದಾ[೨೫]। ೪೩

ಆಡೂಕ್ವೊದ ಬಾಲಯ್ಯಾ ನ್ವೊಡಾದೇ ನಾಬಂದೇ
ಯಾರೂ ಬಾಲಯ್ಗೆ ಗೆಣೆಯಿಲ್ಲಾ। ಸೋದರ್ರಾ
ಮಾವನಾ ಮಗ್ಳಾ ಗೆಣ್ತಾನಾ। ೪೪

ಆಡೂಕ್ವೊದ ಬಾಲಯ್ಯಾ ಕ್ವೊಡಾಕುಂಡ್ಹೋಗ್ವಾಗೇ[೨೬]
ಓಡೋಡೇ ಬಂದಾ ಅವ್ರಣ್ಣಾ। ಹಿರಿಯಣ್ಣಾ
ಕೊಡಾನಾಗೂಡಾ ಹರ್ತಂದಾ[೨೭]। ೪೫
ಮುದ್ದೂ ಬಾಲಯ್ನ ಹದ್ದು ಕುಂಡ್ಹೋಗ್ವಾಗೇ
ಇದ್ದಿದ್ದೇ ಬಂದಾ ಅವ್ರಣ್ಣಾ। ಏನಂಬಾನೇ
ಹದ್ದೀನಾ ಗೂಡಾ ಅಳ್ವಾನೇ[೨೮] ೪೬

ಆಡೂಕ್ವೊದ್ ಬಾಲಯ್ಯಾ ಯಾರಪ್ಪಾ ಹೊಡ್ದವ್ರ
ಹೊಡ್ದವ್ರಾ ಕಯ್ಯಾ ಮುರ್ಕುಡ್ವೇ
ಹೊಡ್ದವ್ರಾ ಕಯ್ಯಾ ಮುರ್ದೇ ಮೊಟ್ಟೇಕಟ್ಟೇ
ಬಂದವ್ರಾ ಕಯ್ಲೇ ಕಳ್ಗೂವೇ. ೪೭

---

೨೩. ನೂಲಿನ ಸೂತ್ರವನ್ನು ೨೪. ಹೆಗ್ಗಡೆಗಿತ್ತಿ ೨೫. ಹೊಡೆಯುವುದನ್ನು ೨೬. ಮಂಗಕೊಂಡೊಯ್ಯುವಾಗ
೨೭. ಎಳೆದು ತಂದ ೨೮. ನಾಶಪಡಿಸುವನು

ಆಡೂಕ್ಹೊದ ಬಾಲಯ್ಯಾ ಬೈಗಾದಲ್ ದಿಂಗಯ್ಯ[೨೯]
ಕುಳ್ಳೀಗೇ ಉಜ್ರದಾ ಸರ್ರೂಪ್ಳೇ।ಳಿ। ತಿಗ್ವಾರ
ಬಾಲಾನಾ ಬೈಗೇ ದಿಂಗಯ್ಯ। ೪೮

ಕುಕ್ಕೂರಾ ಹೊಳಿಯಲ್ಲೇ ಸೊಲ್ಲೂಗೇ ನೀರಿಲ್ಲಾ
ಅಲ್ಲೇ ನನ್ಬಾಲೇ ದುಳ್ಳಾಡೇ[೩೦]। ಬರ್ವಾಗೇ
ಮಲ್ಲೂಗಿ ಕೆರ್ಯೇ ಅಲ್ಡಾವೇ। ೪೯

ಬಿಸ್ಲೀಗ್ ಹ್ವೊದ್ಬಾಲಾ ಹಸ್ದೇ ಬರ್ವದಕಂಡೇ
ಬಸಲೀಯಾ ಕುವ್ವೆ ಮೊರ್ರುಂಬೆ[೩೧]। ಬಾಲಯ್ಯಾ
ದಸವಂತ್ರೀಗ್ ಕುವ್ವೇ ಎಳ್ನುಗ್ಗೀ। ೫೦

ಉದ್ದಾಮಲ್ಲುಗಿ ಮೊಕ್ಕೇ ಉದ್ರಿತಂಗಳದಲ್ಲೇ
ಚಿದ್ರಂಗಾನಾಡೇ[೩೨] ಬರುವಾಗೇ। ಬಾಲಂಯ್ಯಾ
ಉಲ್ಲೀಮೆನ್[೩೩] ಹೂಂವ ಉದ್ರೀತ। ೫೧

ಬಾಡಾಬೈಡ್ ಮಲ್ಲೂಗೀ ಬಯ್ಸೂರಿಗ್[೩೪] ನೀರ್ಹುವ್ವೆ
ಕೂಡೆಲೀಯಾಗ ಕೊನ್ಯಾಗ। ಬಾಲಯ್ಯಾ
ಆಡೂ ಅಂಗ್ಳಕೇ ನಿಳ್ಳಾಗ[೩೫]। ೫೨

---

೨೯. ಕೆರೆ ೩೦. ಸೋಕಾಡಿ ೩೧. ಮೊರತುಂಬಿ ೩೨. ಚದುರಂಗವಾಡಿ ೩೩. ಉತ್ತರೀಯ
೩೪. ಸಂಜೆಗೆ ೩೫. ನೆರಳಾಗು

ಕುಲ್ದಲ್ಲಿ ಸ್ರೊಳ್ಳಾ ಮಗ್ನಾಗ

ಜಾಣಜಾಣರ ನಿಡ್ಗೇ ಹೋಗೀ ಬಾ ಬಾಲಯ್ಯಾ
ಮಾಡೀಸಿ ಕುಡ್ವೇ ಹಲ್ಗೀಯಾ। ಮಂಚದ ಮ್ಯನೇ
ಓದೀಬಾ ಜಾಣ್ರಾ ಮಟ್ಕೋಗೇ[೩೬] ೫೩

ಬುದ್ವಂತಾನಾಗೋ ಬುದ್ದೀಲೇ ಬೂಪತಿಯಾಗೋ
ರುದ್ರಾಕ್ಸಿನಾಗೋ ಕುಳ್ಳೀಗೆ। ಬಾಲಯ್ಯಾ
ಬುದ್ವಂತನಾಗೋ ದರಿ[೩೭]ಯಲ್ಲೇ. ೫೪

ದೊಡ್ಡಾದೊಡ್ಡೆಲಿಯಾಗ ಉಜ್ರದಾ ಕುಡಿಯಾಗ
ದೆವಾರಂಗಳಕೇ ನಿರ್ಳಾಗ। ಬಾಲಯ್ಯಾ
ಕುಲ್ದಲ್ಲಿ ಸ್ರೊಳ್ಳಾ ಮಗ್ನಾಗ ೫೫

ಯಾವ ಹುಂವ್ವೊಮ್ಡಾದ್ರೂ ನುಗ್ಗೀ ಹೂಂವ್ವುಮ್ಡಿಬಾರಾ
ಹಗ್ಗಾರ್ರ[೩೮] ನಿಡ್ಗೇ ಎರ್ಬಾರಾ। ಬಾಲಯ್ಯಾ
ಬಿಸ್ಲಾದ್ರ ದಾರೀ ನಿಡಿಬಾರಾ. ೫೬

ಹಗಿಯೋರಾ ಮುಂದೇ ಹಸನೆಗ್ಗೆ[೩೯] ಬ್ಯಡಾವ್ಹೋ
ಬಿಸ್ಲುತ್ತೀಗ್ ದಾರೀ ನಿಡಿಬಾರಾ। ಬಾಲಯ್
ಹಗ್ಯೋರ್[೪೦] ಕೊಟ್ವಾಲಾ ಕುಡಿಬಾರಾ. ೫೭

ಕಂಡದ್ದೇಳೂವವ್ನಾ ಕರ್ವೆಮ್ಮ ಹೆಚ್ಚಾಲೆ
ಹಿಂಡೂತೇ ಮಗ್ನಾ ಹಡಿಯಾಲೇ। ಬಾಲಯ್ಯಾ
ಕಂಡದ್ದುಂದೇಳ ಸಬ್ಯಲ್ಲೇ. ೫೮

ಕಾಲಾಮಿಟ್ಟಿಕ್ಕಂಡೇ[೪೧] ಕಾಳಕ್ಕಂಜೂವಾರೇ
ತಾಯಾ ಹೊಟ್ಟೀಲೂ ಮಗ್ನೊಬ್ಬಾ। ಹುಟ್ಟೀಕಂಡೇ
ಹೇಡೀಯಾಗ್ವಾರೇ ರಣ್ಕೋಗೆ[೪೨]. ೫೯

ಮಾರುದ್ದಾ ಮಂಡೀಯಾ ನೀರಲ್ ಬಿಟ್ಟೀಕಂಡೇ
ಹೋರಾಡುವಾಳೋ ಹೊಳಿಯಲ್ಲೇ। ಬಾಲಯ್ಯಾ
ಸೊಲ್ಬೆಡಾ ಪರ್ರಾಮಗ್ಳೀಗೇ. ೬೦

---

೩೬. ಮಠಕ್ಕೆ ಹೋಗಿ ೩೭. ಭೂಮಿಯಲ್ಲಿ ೩೮. ವೈರಿಗಳ ೩೯. ನಸುನಗೆ ೪೦. ವೈರಿಗಳು ೪೧. ಚಪ್ಪಲಿತೊಟ್ಟು ೪೨. ಯುದ್ಧಕ್ಕೆ ಹೋಗಿ

ಅಂಚಂಚ್ನಾ[೪೩] ಗದ್ದೀಯಾ ಮುಂಚೇ ಬಿತ್ಬಾಲಯ್ಯಾ
ಕೆಂಚಿಯರ್ ನಿನ್ನಾ ಅರ್ದೇರ[೪೪]ಕದೀರ
ಮುಂಚನಾ[೪೫] ಬಿದ್ದಕ್ಕೇ[೪೬] ಬರ್ವರ. ೬೧

ಕೆರ್‍ಯಂಚ್ನಾ ಪಚ್ಚೀಯಾ ಮುರ್ದೇ ನಿಡ್ಬಾಲಯ್ಯಾ
ತುರ್ಬೀನಾ ಗಮ್ನೆ[೪೭] ಹಿರಿಯಕ್ಕಾ। ನೋಡದ್ರೇ
ಕೊನ್ಬಿಟ್ ಕುಂಡಕ್ಯಾ[೪೮] ಮುಡ್ವಾಳ. ೬೨

ಸೇರೆ[೪೯] ಹರ್ದ್ದಾರೂ ಸೇರೀಸೇ ಒಡ್ಬವ್ದ[೫೦]
ನಾರೇ ತಪ್ಪದ್ರೂ ತರ್ಬವ್ದ। ಬಾಲಯ್ಯಾ
ತಾಯಮ್ಮಾನ್ಯೆರೂ ತರ್ನಾರೋ[೫೧]। ೬೩

---

೪೩. ಸಮೀಪದ ೪೪. ಪ್ರೀತಿಯವರು ೪೫. ಮೊದಲಿನ ೪೬. ಸಮಾರಂಭಕ್ಕೆ ೪೭. ಚೆಲುವೆ ೪೮. ತೆನೆ ೪೯. ಸೀರೆ ೫೦. ಉಡಬಹುದು ೫೧. ತರಲಾರರು

ಒಡ್ನೇ ಒಂಡ್ಟುರ್ತು ಹಸ್ನೆಲ್ಲಾ

ಅರ್ರೂಸ[೫೨] ನನ್ಬಾಲಯ್ಯಾ ಯಾವಾಗ್ ದೊಡ್ಡಾಗೂನೆ
ಹಾಲನ್ನಾ ಒಂಡಾ[೫೩] ಚಿಗ್ರಿಯಾ। ಮರಿಹಂಗೇ
ಬಾಳಾಲೇ ನನ್ನಾ ಅಸ್ಬಾಲೇ[೫೪] ೬೪

ಕಾಣಾದೇ ಕಣ್ಣ್‌ನೆಲ್ಲಾ ಕೈಳದೇ ಕಿಂವ್ನೆಲ್ಲಾ[೫೫]
ಹೋಗೀಲೂ ಬಂದುರ್ತು ಮನ್ನೆಲ್ಲಾ। ಬಾಲಯ್ಯಾ
ಒಡ್ನೇ[೫೬], ಒಂಡುರ್ತೂ ಹಸ್ನೆಲ್ಲಾ[೫೭] ೬೫

ಮಾಣಿಕ್ದಾ ಹರ್ಳ್ಳಾ ಮಾಣೇ ಮಾರಲಬಂದಾ
ನಾಕುಂಬೆ[೫೮] ಮಾಣೀ ಬೆಲಿಹೇಳ। ಬಾಲಯ್ಯಾ
ಹಾಲುಂಬುವಯ್ದ್ಯಾ ಬಿರಳೀಗೂ ೬೬

ಕಾದಾವೇ ಕಲ್ಲರೇ ಆದಾವೇ ಮಜ್ಜಾನಾ
ಹೊವ್ಗಾಬೈಡ್ಬಾಲೀ ಬಿಸಲೀಗೆ। ಹಣಿಯಲೆದ್ದಾ
ಕಸ್ತೂರೀಬುಟ್ಟ ಬಿಗ್ರೂದ[೫೯] ೬೭

ಸಿರಿಗಂದಾ ಚೆಕ್ಕೀಯಾ ಸಿಗ್ದೇನಾಣ್ಗೀತುಂಬೇ
ತಿರ್ಗಾಡೇ ತಣ್ಣೀರಾ ಬಿರ್ರೂವೆ। ನನ್ನಾಲೋ
ಮಗರಾಜೀನಾಳೇ ಬರುವಾಗೇ। ೬೮

ಅರಿಯಾಮ್ಮೆನುಟ್ಟೂವಾದ[೬೦] ಅಡ್ಕೀಗೋಳೀಮರ್ನೇ
ಅದಕೇ ಬಂದರ್ಗ ಗಿಳಿರಾಮ। ಬಾಲಯ್ಯಾ
ಬುಜಕೇ ಬಂದರ್ಗ[೬೧] ಸಿರಿಗಂದಾ। ೬೯

ತೋಳುದ್ದಾ ತಲ್ದಿಂಬ ಮಾರುದ್ದಾ। ಹಾಸೂಗೆ
ಮಾಣೀಕಾದಂತಾ ಮುಗ್ಮಂದೆ ಮನಗದ್ರೇ
ಮಾರಾಯ್ರ ಗೊಡ್ವೇ ನನ್ಗಿಲ್ಲಾ ೭೦

---

೫೨. ರಾಜ ೫೩. ಊಟ ಮಾಡಿದ ೫೪. ಹಸುಮಗು ೫೫. ಕಿವಿನಿಲ್ಲದು ೫೬. ಜೊತೆಯಲ್ಲಿ ೫೭. ಹಸುನಿಲ್ಲದು ೫೮. ನಾನು ಕೊಳ್ಳುವೆ ೫೯. ಬೆವರುವುದು ೬೦. ಕಲ್ಲಿನಮೇಲೆ ಹುಟ್ಟುವುದು ೬೧. ಬಂದು ಕುಳಿತಕೋ

ಸಾಗರಗಲ್ಲಾಯಿಸಾವಾಗಲೇ

ನನ್ನಾಯಿಸ ನಿಮ್ಮಾಗ್ಲೇ ಚಿನ್ನಾದಂತ್ಬಾಲಾರೇ
ನಿಮ್ಮಾಯ್ಸು ಕಡ್ಳಾ ತೆರ್‍ಯಂಗೇ[೬೨]। ಆ ಗಾಲಂದೇ
ನಿಮ್ಮಮ್ಮಾ ನಿಮ್ಗೆ ಹರ್ಸೂವೇ. ೭೧

ಕಲ್ಲಪ್ಪಸ್ವೊಮೀಯೇ[೬೩] ನೀವಿಲ್ಲೀಗೋಗ್ವರೀ
ನೆಲ್ಲಾಬೇಕ್ಮಾತಾ ನುಡಿಬೇಕ। ಬಾಲಯ್ಗೇ
ನಿಮ್ಮಟ್ಬಾಯಿಸ್ವಾ ಕೊಡ್ಬೇಕ ೭೨

ಸಾಗರಗಲ್ಲಾಯಿಸಾವಾಗಾಲೇ[೬೪] ಬಾಲಯ್ಗೆ
ಹಾಲಿಳ್ಳೀ[೬೫] ಮರ್ಕೇ ಹಲಿಹುವ್ವೇ। ಬಾಲಮ್ಮಾ
ವಾಲೀ ಬಾಗ್ಯಾಕೂ ಹರ್ಸೂವೆ. ೭೩

ಎಲ್ಲಾ ದ್ಯೆವರ ಕೋಡೇ ಹುಲ್ಲಾಕಚ್ಚ[೬೬] ಬೇಡೂವೇ
ಹುಲ್ಲಾಕಡಿಯಂತಾ ಹಸ್‌ಬಾಲ್ರುಲ್ರೀ। ಗಾಯಸ್ಬೇಡೇ
ಎಲ್ಲಾ ದ್ಯೆವ್ರೀಗೂ ಸರಣಂಬೇ ೭೪

ಬಾಳಂದೇ ಹೇಳೀರಿ ಬಡ್ವೀಯಾ ಬಾಲಾರ
ಬಾಳೀ ಬುಡ್ಕಬ್ಬೂ ಕರ್ಕೀಯ। ಹುಲ್ಲಿನಂಗೇ
ಬಾಳನ್ನೀ ಬಡ್ವೀ[೬೭] ಕೊಮ್ರಾರ ೭೫

ಆಳೂ ಕಾಳೆಚ್ಚಾಲೇ ಬಾಳೂ ಮನ್ತೊಂಬಾಲೇ
ಬೂಮಾತಾಯ್[೬೮] ಕಯ್ಯಾ ಹಿಡಿಯಾಲೇ। ಬಾಲಯ್ಯಾಗೇ
ಸರಸ್ವತಿಯಮ್ಮಾ ಉಲ್ಯಾಲೇ[೬೯] ೭೬

---

೬೨. ತೆರೆಯ ಹಾಗೆ ೬೩. ಕಲ್ಲು ದೇವರೆ ೬೪. ಸಮುದ್ರಕಲ್ಲಿನಷ್ಟು ಆಯುಷ್ಯವಾಗಲಿ ೬೫. ಹಾಲು ಅಶ್ವತ್ಥ ೬೬. ದೈನ್ಯತೆಯಿಂದ ೬೭. ಬಡವೆಯ ೬೮. ಭೂಮಿತಾಯಿ ೬೯. ಒಲಿಯಲಿ

ಚೆಂದಾ ಕಂಡರ್ಸ ಕರ್ದಾನೇ

ಆತಾ ಸೊಳ್ದಾರೇ[೧] ಯಾರಾರಾ ಪರ್ಮ್ಳಾ[೨]
ನಮ್ಮಾ ಮನಿಯಲ್ಲೇ ಬಾಲಯ್ಯಾ। ಸೊಳ್ದಾರೇ
ಗಂದದಾ ಗಿಟ್ಕಾ[೩] ತೆಗದಂಗೇ. ೭೭

ಬಾಲನಾ ಮಿಯ್ಯ ಬಾಳೀಹೆಣ್ಣೀನಂಗೇ
ಏನುಂಡೇ ಮಗ್ನಾ ಪಡ್ದೀಯೇ। ತಾಯಮ್ಮಾ
ಹಾಲುಂಡೇ ಮಗ್ನಾ ಪಡ್ದಾಳೇ. ೭೮

ಎಲ್ಲವ್ರಂಗಲ್ಲಾ ಬಲ್ಲಿಂದ್ರಾ[೪] ನನ್ಬಾಲಯ್ಯಾ
ನೆಲ್ಲಂಗೀತೋಳ[೫] ನೆಗ್ಮೊರೇ[೬] ಬಾಲಯ್ನಾ
ಕಾಲಾಮೆನ್ಪದ್ಮಾ ಹುಳ್ವಾದ[೭] ೭೯

ಹಾಡೂ ಹೆಂಗೆದ್ರೂ ಹಾಡೀನಾ ದಿನ್ಚೆಂದಾ
ತೋಳೂಹೆಂಗೆದ್ರೂ ನೆಡ್ಚೆಂದಾ। ಬಾಲಯ್ಯಾ
ನ್ಯವಾಳ್ಹೆಂಗೆದ್ರೂ ನಿಡ್ಚೆಂದಾ. ೮೦

ಹಾದೀ ಸಾಲಂಕೋಲೇ ಬೀದೀಸಾಲ್‌ಗೊಕಾನಾ
ರಾಜಂಗ್ಳಸುದ್ದಾ ಬಟ್ಗೋಳ।ಳ್। ತೆಣಿಯಾಮ್ಯನೇ[೮]
ಓದೂ ಬಾಲಯ್ನಾ ದಿನ್ಸುದ್ದಾ. ೮೧

ಮಾವ್ರೋಜೇ ಕಳ್ಗೀದಾ[೯] ಮನ್ತಾನಾದೊಲೀಯಾ[೧೦]
ಯಾರೂ ಓದ್ವಾಕೂ ಅರಿಯಾರೇ। ಬಾಲಯ್ಯಾ
ತಾನೂ ಓದದ್ನೇ ಗಿಳಿಹಂಗೆ. ೮೨

ಕಂಚೀತೇ ಅಂಕೋಲೇ ಮಿಂಚೀತೇ ಗೊಕನ್ವೇ
ನಿಂತೇ ಪಾಲಿಸುವಾ ಅಯ್ದೂರಾ। ಸಾರಾದಲ್ಲೇ[೧೧]
ಮಿಂಚಿತ ಬಾಲಕ್ರಾ ಜಿರಿಯಂಗೇ. ೮೩

---

೧. ಸುಳಿದರೆ ೨. ಪರಿಮಳ ೩. ಮುಚ್ಚಳ ಬುರುಡೆ ೪. ಬಲೀಂದ್ರ ೫. ಸುಂದರ ಅಂಗಿ ತೋಳು ೬. ನಗೆ ಮೋರೆ ೭. ಹೊಳೆಯುವುದು ೮. ಜಗಲಿ ಮೇಲೆ ೯. ಕಳಿಸಿದ ೧೦. ಮನೆತನದ ಪತ್ರ ೧೧. ಶಹರದಲ್ಲಿ

ಉದ್ದೀನಾ ಗದ್ದೀಯಲ್ಲೇ ಹುಬ್ಬಾ ತಿದ್ವವ್ರೇರೇ
ಉಂದವ್ವೀಗುಂದೂ[೧೨] ಮಗ್ನೇನೆ। ಬಾಲಯ್ಯಾ
ಹುಬ್ಬಾತಿದ್ ಮನಿಗೇ ಬರುವಾನೇ ೮೪

ಮೆಂದಾ ನೀರ್ ಮ್ಯೆಯಾನೇ ಒಂಡೆಂಜ್ಲಾದಾಟಾನೇ[೧೩]
ಗಂಡೆಲ್ದೇದೌಳಾ[೧೪] ಮೊಕನೊಡಾ[೧೫]। ಬಾಲಯ್ಯಾ
ಗಂಡಾಗ್ಹುಟ್ಟೀನೇ ಕುಲ್ದಲ್ಲೇ ೮೫

ಬಿನ್ನಾಕೇ ಹೋಗ್ವನಾ ಬಿನ್ನಿಟ್ಟು ವರ್ನಾವೇ
ಮನ್ನೇ ಪಂಡಿತ್ನಾ ಅಳಿಯಾನೇ। ಬಾಲಯ್ಯಾಗೇ
ಬಿನ್ನೀಗೇ ಸಾವ್ರವಾ ಇಡುವಾರ ೮೬

ಇಜ್ಜಾನಾಡಾಸೋಳೇ ಕುದ್ರೀ ಕುಟ್ಕಳ್ಗೀದ[೧೬]
ಏಗೇ ಬಾಲಯ್ಯಾ ಬರ್ಲೆಂದೇ। ಆ ಸೋಳೆ
ಮುದ್ರೀದುಂಗ್ಲಾನೇ ಕಳ್ಗೀದ। ೮೭

ಕಂಡದ್ರೇ ನನ್ನಾ ಕುಂಡೂ ಕೊನ್ಬಾಳೀಯಾ
ದಂಡಗ್ ನಾಯಕ್ನಾ[೧೭] ಕೊಮ್ರಾನಾ। ಬಾಲಯ್ಯಾ
ಕಂಡದ್ರೇ ನಾಡಾ ಸಬಿಯಲ್ಲೇ। ೮೮

ಸಿರ್ಗುಂಜೀ ಗುಡಿಹತ್ತೇ ತಿರ್ಗೇನೋಡ್ವನ್ನೆರೇ
ಜೆಡಿಯಾ ಜೋತ್ರದಾ ಹೊಸ್ಬಾಲೇ। ಬಾಲಯ್ಯಾ
ನಿನ್ನೆದಿಯಾಮ್ಯೆನ್ಪದ್ಮಾ ಹುಳುವಾದ[೧೮]। ೮೯

ತೊಂಡೀ ಕಾಯ್ನಂತಾ ತುಂಡೂ ನಾಮಾಯಿಟ್ಟೀ
ಚಾವ್ಡೀಗೂ ಮನಿಗೂ ತಿರ್ಗೀದಾ। ಬಾಲಯ್ಯಾ
ಚೆಂದಾ ಕಂಡರ್ಸ ಕರ್ದಾನೇ।ಕರ್ದೇ। ನಂಬೂವಾ
ಯಾವಾ ತಾಯ್ ಹಡ್ದಾ ಕೊಮರಾನೇ। ೯೦

---

೧೨. ಒಂದು ತಾಯಿಗೊಬ್ಬ ೧೩. ಮುಸುರೆಯನ್ನು ದಾಟನು ೧೪. ಗಂಡಸತ್ತವಳ ೧೫. ಮುಖನೋಡನು ೧೬. ವಿಜಯನಗರ ಸೂಳೆ ಕುದುರೆ ಕೊಟ್ಟು ಕಳಿಸಿದ್ದಾಳೆ ೧೭. ದಂಡನಾಯಕನ ೧೮. ನಿನ್ನೆದೆಯ ಮೇಲೆ ಪದ್ಮ ಹೊಳೆಯುತ್ತದೆ

ನೀರಾಮ್ಯೆನ್ ತೇಜೀ ನಿಡಿಸೂನೇ

ಹುಟ್ಟೀದಾ ಮೂರೂ ದಿನ್ಕೇ ಪಟ್ಟಾನೇ ತನಗಂದಾ
ದಿಟ್ಟೀ[೧] ಕಾಣಮ್ಮಾ ಬಾಲಯ್ಗೇ। ತಾಯಮ್ಮಾ
ಬಟ್ಟೀಲು[೨] ಮಣ್ಣಾ ಬಳದೀಡ। ೯೧

ಮಗ್ನೇ ಹುಟ್ಟೀದಾನೇ ಮದಲಿಂಗಾರಾಯಾನೇ
ಹುಲಿಯಾ ಮುಂಗಾಲಾ ಹಿಡುವಾನೇ। ಅಡವೀಯಾ
ಕಯ್ಡೀ[೩] ಕಟ್ಟಾಲಾ ಕರುವಾನೇ। ೯೨

ಮಗ್ನೇ ಹುಟ್ಟೀದಾನೇ ಮದರಂಗೀರಾಯನೇ
ಸದರಾದಲ್ಲಾಡೂ[೪] ಸರ್ಪಾನೇ। ಬಾಲಯ್ಯಾ
ನೀರ್ ಮೆನ್ ತೇಜೀ[೫] ನಿಡಿಸೂನೇ[೬]। ೯೩

ಯಾರಾ ಮಗನಪ್ಪಾ ಸಾರಂಗೀ ಬೂಪತೇ
ನೀರಾ ಮೆನ್ ತೇಜೀ ನಿಡಸೀದಾ। ಬಾಲಯ್ಯಾ
ದೀರಾ ಹುಟ್ಟದ್ನೇ ಕುಲ್ದಲ್ಲೇ। ೯೪

ಕಲ್ಲೂಕವಣೀಗೊಂಡಾ ಬಿಲ್ಲೂ ಬಾಣಾ ತೊಟ್ಟಾ
ಎಲ್ಲವ್ರ್ ಮಕ್ಕಳ್ನೇ ಒಡ್ಗೊಂಡಾ। ಬಾಲಯ್ನಾ
ಬಿಲ್ಲೂ ಹೊವ್ದಲ್ಲೇ ಹುಸಿಯಿಲ್ಲಾ। ೯೫

ಹಂದೀ ಬ್ಯೆಟೀಗೆ ಉಂಡೆದ್ದಾ ಬಾಲಯ್ಯಾ
ಹಂದೇ ಚಿಂದರ್ನಾ[೭] ಮರ್ಸೇಸೇರೆ। ಬಾಲಯ್ಯಾ
ಹಂದೀ ಕುಂದ್ ಮನ್ಗೇ ಬಾರ್ವಾನೇ ೯೬

ಆರಾಣೀ ಅಡ್ವೀಲೇ ಮೂರೀಡು[೮] ಆದಾವೇ
ಏನ್ಹೊಡ್ದೆ ನನ್ನಾ ಹಸ್ಬಾಲಿ।
ಉಂದೀಡೀಗ್ ಕಡ್ನಾ[೯] ಹೊಡ್ದೆ ಉಂದೀಡೀಗ್ ಮೀಗ್ನಾ ಹೊಡ್ದೆ
ಉಂದೀಡೀಗ್ ಜೋಡೂ ಹುಲಿ ಹೊಡ್ದೆ। ೯೭

---

೧. ದೃಷ್ಟಿ ೨. ರಸ್ತೆಯ ೩. ಕರಡಿ ೪. ಸಮೀಪದಲ್ಲಾಡುವ ೫. ಕುದುರೆ ೬. ನಡೆಸುತ್ತಾವೆ ೭. ಚಂದ್ರ ೮. ಮೂರು ಗುಂಡು ೯. ಕಡವೆ

ಕಲ್ಲಾ ಕಟ್ದಾ ಮನಗೇ ಕಬ್ಬೀಣಸಳ್ಳೂಗೇ[೧೦]
ಬೂಮೀ ಬಾರತ್ನಾ ಮನಿಯಲ್ಲೂ। ಬಾಲಯ್ಯಾ
ತಾನು ಕಟ್ಸ್ದೈ ಗರ್ಡೀಯಾ[೧೧]। ೯೮

ರಾಜಾ ಕಟ್ದಾ ಮನಿಯಾ ಸೋಜೀಗಾ ನೋಡಮ್ಮಾ
ಸೂಜೀಯಲ್ ಮುತ್ತಾ ಸೊರ್ದಂಗೆ। ಬಾಲಯ್ಯಾ
ಕಟ್ಸೀಯಾ ತನ್ನಾ ಗರ್ಡೀಯಾ। ೯೯

ಆನೀಗಂಕುಸತಂದಾ ಕುದ್ರೀಗ್ ಚಿಬಕಾ ತಂದಾ
ಬಳಿತಂದಾ ಮುದ್ದೂ ಮಡ್ದೀಗೇ। ಬಾಲಯ್ಯಾ
ಹೆತ್ತಮ್ಗೆ ಮುತ್ತೀನಾ ಸರತಂದಾ। ೧೦೦

ಕೊಗ್ರೀಯಾ ಗುಡಿಮೆನೇ ಕೊಳಲೂಬ್ವನ್ಯೆರೇ
ಲೂಟೀಗಾರ್ತಮ್ಮಾ ನಿನ್ಮಗಾ। ತಾಯಮ್ಮಾ
ಕೊಳಲೂಬೇ ಕ್ವೊಟೀ ಗೆಲಬಂದಾ। ೧೦೧

ಕರಿಯಂಗೀ ತೆಗ್ದಾನೇ ಬಿಳಿಯಂಗೀ ಜೆಡ್ದಾನೇ
ಬಿಳಿಕೊಡಿ ಮ್ಯೆನೇ ತಿರ್ಗೀದಾ। ಬಾಲಯ್ಯಾ
ದೊರತನ್ದಾ ಟೀವಿ ಕುಡುವಾನೇ। ೧೦೨

ಹಾದೀಲ್ ಬಂದವ್ನೆರೇ ಪಾದಾ ತೊಳ್ದವ್ನೆರೇ
ಅಂಗಳ್ಕೇ ನೀರ ಹರ್ದವ। ನಮ್ಮನಿಯಾ
ಮಗ್ರಾಜೀ ನಾಳೇ ಬತ್ತೀನೇ। ೧೦೩

ಮಾತುಗಾರಣ್ಣಯ್ಯಾ ನೀತೀಗಾರ್ತಮ್ಮಯ್ಯಾ
ಲಾಲಿಂಕೀಗಾರಾ[೧೨] ಹಸಬಾಲಾ। ಕಂದಯ್ಯಾ
ಲಾಲಂಕೀಲ್ ಗೆದ್ದಾ ನಗ್ರವಾ। ೧೦೪

ಗಂದಾದಾ ಗುಡಿಮೆನೇ ಕುದ್ರೀಕಾಳಗಾನಾಡೇ
ಮದ್ಗದಾ[೧೩] ನೀರ ಅಲ್ದಾವೇ। ನನ್ಬಾಲಾ
ರಾಜೀಯಾ ನಾಳೇ ಬರ್ವಾಗೇ। ೧೦೫

ಅಂಗಳ್ದಾಬಾವೀಗೆ ತಿಂಗೀನಾದಂಡೂಗೇ[೧೪]
ಮಂಡ್ಳೀಕ್[೧೫] ಮಾರಾಯ್ರಾ ಹಿಸ್ರೀಗೆ। ಬಾಲಯ್ಗೀ
ಕರ್ ಕರ್ದೇ ಹಿಣ್ಣಾಕುಡುವರ ೧೦೬

---

೧೦. ಸರಳಿಗೆ, ಕಿಟಕಿ ೧೧. ಗರಡೀಮನೆ ೧೨. ಸೋಗಸುಗಾರ ೧೩. ಜಲರಾಶಿ ೧೪. ತೆಂಗಿನ ದಂಡಿಗೆ ೧೫. ಮಾಂಡಲಿಕ

ಸರಕಾರಾ ಅಂಬೂವಾ ದರಕಾರಾ ನನ್ಗೇನ
ಸರ್ಕಾರದಲ್ಲೂ ಸರಿಪಾಲ। ತರುವಂತಾ
ಸರದಾರಾ ಬಾಲಾ ಒಳ್ಗೇಂವಾ[೧೬] ೧೦೭

---

೧೬. ಒಳಗಿದ್ದಾನೆ

ತೋಳೀಗ್ ಸಾವ್ರವಾ ಕೊಡ್ಬವ್ದ

ಕುಂಬಿಲ್ಲಾದಾನೀಗೇ ಕುಂಬೂ[೧೭] ಬತ್ತೀದಿಂದೇ
ಸಂಬ್ರಮವೇ ನಮ್ಮಾ ಅರ್ಮನ್ನೆ। ತಮ್ಮಯ್ಗೇ
ಕುಂಬುಡ್ದೇ ಬಂದೂ ಕೊನ್ಮೇಸೆ। ೧೦೮

ತೋಳಿಕ್ಕೀ ಹೋಗ್ವವ್ನಾ ತೋಳಿಟ್ಟು ವರ್ನಾವೇ[೧೮]
ತೋಳೂಕಾಳಿಂಗ್ನಾ ಹೆಡಿಯಂಗೇ। ತಮ್ಮಯ್ನಾ
ತೋಳೀಗ್ ಸಾವ್ರವಾ ಕೊಡ್ಬವ್ದ। ೧೦೯

ಹಳ್ಳಾದಾ ಅಂಚೇ[೧೯] ನೆಲ್ಲಾದಿರ್ ತಮ್ಮಯ್ಯಾ
ಬೆಳ್ಳಕ್ಕೇ ನೀರಾ ದರ್ಸಾವ್ರೋ[೨೦]। ನಿನ್ಕಯ್ಯಾ
ಬಿಳ್ಳೀದುಂಗಲದಾ[೨೧] ಬಿಳ್ಕೀಗೇ[೨೨]। ೧೧೦

ಮರ್ಕೇ ಬಳ್ಳೀನಿಟ್ಟೇ ಹೂಂವೀನೇಣೀಚಾಚೇ೨೩
ಚೆಂಡಾಡೇ ಎಲಿಯಾ ಕುಯ್ವಾಗೇ। ಅಣ್ಣಯ್ನಾ
ಮುಂಗಾಲಿನ್ನಿಟ್ಟೂ ವರ್ನಾವೇ। ೧೧೧

ಎಲ್ಲೋರ್ಮಾತಾಡದ್ರೇ ಹುಲ್‌ಕಟೇ ಎಳ್ದಂಗೇ೨೪
ಬಲ್ಲಿಂದ್ರಣ್ಣಯ್ಯಾ ಸಬಿಯಲ್ಲೇ। ಮಾತಾಡದ್ರೇ
ಬಳ್ಳೀಯಾ ಅಕ್ಷರಾ ಬರ್ದಂಗೇ। ೧೧೨

ಅಪ್ಪನಾ ಮನಿಯಲ್ಲೇ ಇಪ್ಪತ್ ತಿಂಗ್ನಮರ್ವೇ
ವಾಲಾಡೇ ಬಿಳುವಾ ಗಜನಿಂಬೇ।ಬೀ। ಮಡ್ಗೀಮೆನೆ
ಓದೂ ಬಾಲಯ್ನಾ ದಿನ್ಚೆಂದಾ[೨೫]। ೧೧೩

ಸಾಂವತ್ಗೀ ಹೂಂವೀಗೇ ಅರ್ವತ್ತೇಳಿಸಳ
ಅರ್ರೂ ಅಣ್ಣಯ್ನಾ ಕಿಮಿ[೨೬]ಯಲ್ಲೇ। ಎದ್[೨೭]ಹೂಂವ
ಅರ್ವತ್ತೇಳುರಸೇ[೨೮] ಪರ್ಮಾಳಾ[೨೯]। ೧೧೪

ಸೆರಹೊನ್ನಾ ಕುಟ್ಟೀನೇ ಕೆರಬಾವೀ ಕಡಸೀಯಾ
ಸೆರಮನ್ನೆದ್ದವ್ರಾ ಬಿಡಸೀಯಾ। ತಮ್ಮಯ್ಯಾ
ದೊರಿಯಾ ಕೀರ್ತಿಯೇ ಜಗದಲ್ಲು। ೧೧೫

---

೧೭. ಕೋಡು ೧೮. ಚೆಂದ ೧೯. ಸಮೀಪ ೨೦. ಸ್ವೀಕರಿಸದು, ಕುಡಿಯದು ೨೧. ಬೆಳ್ಳಿಯುಂಗುರ ೨೨. ಬೆಳಕಿಗೆ ೨೩. ಹೂವಿನ ನಿಚ್ಚಣಿಕೆಯನ್ನು ಆನಿಸಿ ೨೪. ಹುಲ್ಲುಕಟ್ಟನ್ನು ಎಸೆದಂತೆ, ರಸಹೀನ ೨೫. ಧ್ವನಿಚೆಂದ ೨೬. ಕಿವಿ ೨೭. ಇದ್ದ ೨೮. ಅರವತ್ತೇಳುವರುಷ ೨೯. ಪರಿಮಳ

ಅಕ್ಕಾತಂಗ್ದೀರಾಟಾ ಅಪ್ಪಾನಾ ಮನಿಯಲ್ಲೇ
ಕನ್ನೀಯರಾಟಾ ಕೆರಿಯಲ್ಲೇ। ತಮ್ಮಯ್ಯಾ
ನಿನ್ನಾಟಾಗರಡೀ ಮನಿಯಲ್ಲೇ। ೧೧೬

ಆನೀಮೆನ್ ಒರುವಂವ್ಗೇ ಬುಟ್ಟೆರು[೩೦] ಎಟ್ಟಾರೇ[೩೧]
ಸೂಲ್ಯಮ್ಮಾ ಮನಿಯಾ ಗರ್ತೇರ। ಅಣ್ಣಯ್ಯಗೆ
ಬುಟ್ಟೆಟ್ಟರ ದೊರಿಯಾ ಮಗ್ನಂದೇ। ೧೧೭

ಸರ್ದ್ದಾರಾಬರ್ವಾಗೇ ಸೊರ್ದ್ದಾವೇ[೩೨] ಮಲ್ಲೂಗೇ
ದೊರ್ನನ್ನಾ ತಮ್ಮಾ ಬರ್ವಾಗೇ। ಯಾಲಕ್ಕೀ
ಕೊನ್ಮುರ್ದೇ ಹಾಲ ಸೊರ್ದ್ದಾವೇ। ೧೧೮

ನಾಡೂಮೊನ್ದಾರಮ್ಮಾ[೩೩] ನಾಳಾಗುಂದಾಗ್ವಾರ[೩೪]
ನಾಯಕ ತಮ್ಮಯ್ಯಾ ಮೊನ್ದಾರೇ। ತಾಯಮ್ಮಾ
ನಾಡಿದ್ದೇ ಕಯ್ಯಾ ಮುಗ್ವಾದ[೩೫]। ೧೧೯

ಮುದಿಯಾ[೩೬] ಕಡನನ್ನಾ ಮಾಮೋಜೂಗಾರಾನಾ
ತಾಂಬೂರಿ[೩೭] ಮೊಕದಾ ಚಿಲುವಾನಾ। ಬಾಲಯ್ಯನಾ
ಮುದಿಯಾಕಡ[೩೮] ಸುಗ್ಗೀ ಮರದೇನೆ[೩೯]। ೧೨೦

---

೩೦. ಗಂಧ ೩೧. ಹಚ್ಚಿದರು ೩೨. ಉದುರಿತು ೩೩. ನಾಡು ಸಿಟ್ಟಾದರೆ ೩೪. ಒಂದಾಗುತ್ತಾರೆ ೩೫. ನಾಡುಎದ್ದು ಕೈ ಮುಗಿಯುತ್ತದೆ ೩೬. ಮದುವೆ ೩೭. ತಾವರೆಯ ೩೮. ಮದುವೆಯಂತೆ ೩೯. ಮರುದಿನ

ಬಿಳ್ಳೀ ಹಚ್ಚದ್ನೇ ಬಳಗಾಕೆ

ಇತ್ತ[೪೦] ಮುಂದ್ಲೊಡದಾನೇ ಬೇಜಾ[೪೧] ಬಂಡೀ ತುಂಬೇ
ಹೊತ್ತಾ ಬಾಲಯ್ಯಾ ಸಿರಿನೇಗ್ಲಾ। ದಾಮ್ಯೆನೇಗೇ[೪೨]
ಹಕ್ಕೇ ಚಿತ್ರವಾ ಬರ್ದಾವೇ।
ಹಕ್ಕೇ ಚಿತ್ರವಾ ಏನಂದೇ ಬರದಾವೇ
ಕಂಡ್ಗಾಬಿತ್[೪೩] ಕಾಡೀ[೪೪] ಬಿಳಿಯಂದೇ ೧೨೧

ಜಿತ್ತೂಗೇ[೪೫] ಮುಂದಾದು ನೇಗೀಲಾ ಹಿಂದಾದು
ಬೇಜಾದಾ[೪೬] ಹೆಡಗೇ ನಿಡಗಾಗೇ[೪೭]। ಬಾಲಯ್ಯಾ
ಬಿತ್ತೂ ಗದ್ದೀಯಾ ಎಳದಾನೆ। ೧೨೨

ಹೆತ್ತಮ್ಮಾ ಹಿಸ್ರೇಳೇ ಬಿತ್ತಣ್ಣಾ ಬೇಜಾವಾ
ಹೊತ್ತಾ ಸೂಲ್ಯಮ್ಗೆ ನಮೋ ಅಂದೇ। ಬಿತ್ತದ ಬೇಜಾ
ಮೋಡೀ ಬಿತ್ ಕಾಡೀ ಬಿಳುವಾದ। ೧೨೩

ಇತ್ತು ನೆಂತ ಗದ್ದೀಲೇ ಬಿತ್ತೇ ನೆಂತವ್ನೆರೇ[೪೮]
ಮುತ್ತಿನಾ ಕಾಲಾ ಹಸಬಾಲೇ। ಬಿತ್ತದ ಗದ್ದೇ
ನಿಚ್ಚಯ್ದು ಕಾಡೇ ಬಿಳಿಯಾಲೇ। ೧೨೪

ಆಳಾ ಹಾಕೂವಾನೇ ಹೋರಿಯಾ ತಿದ್ದೂವಾನೇ[೪೯]
ತಾನೂ ಸತ್ತಗಿಯಾ ನಿರಳಲ್ಲೇ। ಬಾಲಯ್ಯಾ
ಆಳಾಗಿಯ್ಸಿ[೫೦] ಮನಿಗೇ ಬರುವಾನೇ। ೧೨೫

ಕಾರಗದ್ದೀ[೫೧] ಬಿತ್ತೇ ಕೋಲೂ ಬೇಲೀಕಟ್ಟೇ
ತೋಳಾ ಬೀಸ್ ಮನಿಗೇ ಬರುವಾಗೇ। ಬಾಲಯ್ಯಾ
ಗಾಳೇಬೀಸ್ ಕದರಾಸೊಗದಾವೇ[೫೨]। ೧೨೬
ಗಂಜೀಯಾ ಮಡಕೀಯಾ ಅಂಗಳದಲ್ಲಿರಸೂವೇ
ಸಂಬಳದಾ ಆಳಾ ಕರವಾನೇ। ಬಾಲಯ್ಯಾ
ಉಂಬೂಳಿ[೫೩] ಗದ್ದೀ ಕುಯ್ಲಾಕೇ[೫೪]। ೧೨೭

---

೪೦. ಎತ್ತು ೪೧. ಬೀಜ ೪೨. ಮೇಲೀಗ ೪೩. ಖಂಡುಗಬಿತ್ತಿ ೪೪. ಇಪ್ಪತ್ತು ಖಂಡುಗ ೪೫. ಜೋಡೆತ್ತು ೪೬. ಬೀಜದ ೪೭. ನಡುವೆ ೪೮. ನಿತ್ತವನಾರು ೪೯. ಹೂಡಕಲಿಸುವನು ೫೦. ಆಳು ಕೆಲಸ ಮಾಡಿಸಿ ೫೧. ಬೇಸಿಗೆ ಬೆಳೆಯ ಗದ್ದೆ ೫೨. ತೆನೆಬಂತು ೫೩. ಉಂಬಳಿ ೫೪. ಕೊಯ್ಲಿಗೆ

ಕಡ್ಮಣ್ಣ್ ಗದ್ದೀಯಾ ಕಡ್ದೇ ಬಿತ್ ಬಾಲಯ್ಯಾ
ಕಡ್ಗದಾ ಕೈನಾರೇ ಅರಮಾಡೇ[೫೫]। ಹೊರಿಯಾಕಟ್
ನಗಮೊಕದಾ ದೊರೆಯೇ ಹುರಬಾರೋ[೫೬]॥ ೧೨೮

ಬಾಗೀದೊಳ್ಳಾ ಬೆಳಿಯೇ ಬಂಡೀಮ್ಯೆನ್ ಬರುವಾಗೇ
ಒಳಗಿಂದೇ ನ್ವೊಡೇ ಸಿರ್ದೇವಿ। ನಿನ್ನ ಕೊಮರಾರ
ಬಾಗೀಒಳ್[೫೭] ಬೆಳಿಯಾ ಬಿಳತಂದ್ರ[೫೮]। ೧೨೯

ಸ್ಯೆಕು[೫೯] ಸ್ಯೆಕಂದರೇ ಸಾಗರವಾ ಬೆಳ್ದಾನೇ
ದೂಕೇ ಕಟ್ಟದಾ ಕಣಜವಾ। ಬಾಲಯ್ಯಾ
ಸಾಕಂದೇ ಸಾಗರವಾ ಬೆಳದಾನೇ। ೧೩೦

ಸಾವರಾ ಸಟ್ಟೀಗಾರ್ರಾ ಹೇರು ಬಂದೆಳದಾವೇ
ನನ್ನಾ ಬಾಲಯ್ನೇ ಒಳಗೇಂವಾ।ಗಿದ್ದೇ। ನಂಬಾನೇ
ತಾರೋ ಬಣ್ಣಾದಾ ಸೆಳಮುತ್ತಾ। ೧೩೧

ಬತ್ತಕ್ ಬಣಜಿಗ ಬಂದಾ ಎಣ್ಣೀಗ್ ಗಾಣಿಗ ಒಂದಾ
ಲೆಕ್ಕಕ್ಕ್ ನನ್ನಮ್ಮಾ ಮಗ್ಬಂದಾ। ಸುದ್ದೀಯಾ
ಕೇಳದ್ನೇ ಬಾವೀ ತಡಿಯಲ್ಲೇ। ೧೩೨

ಬತ್ತದಾ ಕಾಣ್ಜಾನೇ[೬೦] ಹತ್ತದನೇ ಬಾಲಯ್ಯಾ
ಸುತ್ತೇ ಮುತ್ತದ್ರ ಬಣಜಿಗ್ರ। ಬಾವಿಕೇರಿ
ಉತ್ತುಮ್ರಾ[೬೧] ಮಗ್ನೇ ಹಸಬಾಲೇ। ೧೩೩

ಬತ್ತಾಮಿರುವಂಗಳ್ಳೇ ನಿಚ್ಚಾಪಟ್ನಾವಂದ್ರೆ
ಅಕ್ಕೀ ಕಂಡವ್ರ ಸಿರಿಯಂದ್ರ। ಬಾಲಯ್ನಾ
ಚಾವೂಡೀಲ್ ಕಂಡವ್ರ ದೊರಿಯಂದ್ರ। ೧೩೪

ಬಿಳ್ಳೀ ಕೊಳಗ್ದಾ ಮ್ಯೆನೇ ಅಳ್ಳೀಹೂಂವ್ನಬರವೇ[೬೨]
ಅಳ್ತೇಗಿನ್ಯೆರ ಕೊಳ್ತಾರೇ[೬೩]। ನನ್ನಮ್ಮಾ
ಚೆನ್ನಾದಾ ಕಾಲಾ ಹಸಬಾಲೇ ಕೊಳತಾನೆ[೬೪]
ಬಿಳ್ಳೀ ಕೊಳಗದಾ ಅಳತೀಗೇ। ೧೩೫

ಹಳ್ಗಾದಾ ಅಕ್ಕೀಯೆ ಬಿಳ್ಳಿಯಾ ಕೊಳ್ಗಾಪೇ
ಅಲ್ಲೇ ಬಾಲಯ್ನಾ ಅಳತೀಯೆ।ಯಾ। ಕೊಳಗದ ಮೆನೆ
ಅಳ್ಳೀ ಹೂಂವ್‌ಯಾರ ತೆಗದಾರ ೧೩೬

---

೫೫. ತೆಕ್ಕೆಯಷ್ಟು ರಾಶಿ ಮಾಡಿಟ್ಟಿದ್ದಾಳೆ ೫೬. ಹೊರಲು ಬಾ ೫೭. ಭಾಗ್ಯವುಳ್ಳ ೫೮. ಬೆಳೆದು ತಂದರು ೫೯. ಸಾಕು ೬೦. ಕಣಜಕ್ಕೆ ೬೧. ಒಳ್ಳೆಯವರ ೬೨. ಕಮಲದ ಹೂವಿನ ಬರಹ ೬೩. ಅಳತೆಗೆ ಯಾರು ಕುಳಿತರು ೬೪. ಕುಳಿತನು

ಹಿಚ್ಚು[೬೫] ಹಿಚ್ಚಂದೇಳೇ ಹಿಚ್ಚಾನೇ ಬಿಳುವಾನೇ
ಇಕ್ಕೇರಿ ಮೋಡೇ[೬೬] ಕೊಳಗಾವೆ। ಕೈದೀವೂಗೇ
ಹೆಚ್ಚಾಲೆ ತಮ್ಮಯ್ಯಾ ಮನಿಯಲ್ಲೇ। ೧೩೭

ರಾಗೀಯಾ ಬಿತ್ತಿದಾ ರಾಜೀಯಾ ಆಳಸ್ದಾ
ಉದ್ದಾ ಬಿತ್ತದ್ನೇ ಬಯ್ಲೀಗೆ। ಬಾಲಯ್ಯಾ
ಬಿಳ್ಳೀ ಹಚ್ಚದ್ನೇ ಬಳಗಾಕೆ। ೧೩೮

ತಗರೂರಲ್ಲೆದ್ದವರ[೬೭] ಇವರೆರೀಗಂಜಾರ
ಉಗರಾಮ್ಯೆನ್ ಇಳ್ಳಾ ಬಿಳುವರ। ನನ್ನಮ್ಮಾ
ಬದ್ರೇ[೬೮] ತಾಯ್ ಹಡದಾ ಕೊಮರಾರ। ೧೩೯

ಇತ್ತು ಬರ್ಲೇಲಂದೇ[೬೯] ಹಿತ್ತಲಾ ಅರಸೂನೇ
ಬತ್ತಾದಾ ಕಣ್ಣಾ ಮರಿಯಾಗೆ। ಬಾಲಯ್ಯಾ
ಇತ್ತು ಮುತ್ತ್ಹೋರೇ ಬತ್ತೀದೇ[೭೦]। ೧೪೦

ಬಾಳೀಹಣ್ಣಿನ ಸಾಟೇ ಕೋಳೀಹುಂಜನ ಅಂಕ
ಬ್ಯೆಡಂದರೆ ಕ್ಯೆಳಾ ಕಿರಿತಮ್ಮಾ। ತಮ್ಮಯ್ಯಾ
ಜೂಜಾಡೇ ಕೋಳೀ ಗಿದ್‌ಬಂದಾ[೭೧]। ೧೪೧

ತಾಯೀಗೇ ತಂದೀಗೇ ತಂದುಂಡ ಸಾಲಾಕೇ
ಗಂಡೇರಿ ಅಂಬಾ ಮಗಹುಟ್ಟೇ। ಬಾಲಯ್ಯಾ
ತಂದೀ ಪತ್ರವಾ ಹರ್ದಾನೆ[೭೨]। ೧೪೨

---

೬೫. ಹೆಚ್ಚು ೬೬. ಮೂಡೆ ೬೭. ತವರಿನದ್ದವರು ೬೮. ಚೆಲುವೆ ೬೯. ಬರಲಿಲ್ಲವೆಂದು ೭೦. ಎತ್ತು ಮುತ್ತು ಹೊತ್ತು ಬರುತ್ತದೆ ೭೧. ಗೆದ್ದುಬಂದ ೭೨. ತಂದೆಯ ಸಾಲದ ಪತ್ರವನ್ನು ಹರಿದನು

ಅತ್ತೀಯರಮನೆಗೇ ಬರುವಾನೇ

ಮಾವಗಳಿಯನಾದಾ ಮಗ್ಳೀಗೇ ಪತಿಯಾದಾ
ನನಗೇ ಅತ್ತಗಿಯಾ ಮಗನಾದಾ। ಗೋವಿಂದಾ
ಬಣ್ಣದಾಚಾವುಡಿಯಾ ದೊರಿಯಾದಾ। ೧೪೩

ಅಳಿಯಾದೀರಲ್ಲೇ ಯಾವಳಿಯಾ ಚಿಲುವಾನೇ
ಬಿಳಿಯಾ ಜೋತ್ರದಾ ಸರ್ದಾರಾ। ಹಿರಿಯಳಿಯಾ
ಅಳಿಯಾದೀರಲ್ಲೇ ಚಿಲುವಾನೇ। ೧೪೪

ಹಾಲಬ್ಬಾ ಹರ್ಬಾಗೇ ಕೋಲಬ್ಬಾಕುರ್ಬಾಗೇ
ಮಾನಮ್ಮೀ ಹಬ್ಬಾ ಮಗಳೀಗೇ। ಮನೇ ಬರ್ವಾ
ದೇಪಳಗಿ[೭೩] ಹಬ್ಬಾ ಅಳಿಯಾಗೇ। ೧೪೫

ಎಲ್ಲವ್ರಳಿಯಾಗೇ ಎಳ್ಳಡ್ಗೀ ಪಾಯಸ್ವೇ
ನನ್ನ ಸೋದರ್ದಾ ಅಳ್ಯಾಗೇ। ಬಾಲಯ್ಯಗೇ
ಎಳ್ಳಡಗೀಮೆನೇ ಎರತುಪ್ಪ। ಒಡಸೂವ
ನಿನ್ನತ್ತೆ ಬಾಳೇ ಎರ್ಲನ್ನೋ। ೧೪೬

ಹಾಲಾನೇ ಬಿಸ್ಮಾಡೇ ಸೆಕ್ಕೂರೀ[೭೪] ಸಿಮಿಮಾಡೇ
ಮತ್ತೆಲಯ್ದ ಬಿಳ್ಳಾ ಮರ್ಮಾಡಿ। ಬಡ್ಸೂವಾ
ಅತ್ತೇಯರಮನ್ಗೇ ಬರುವಾನೇ। ೧೪೭

---

೭೩. ದೀಪಾವಳಿ ೭೪. ಸಕ್ಕರೆ ೭೫. ಸವಿಮಾಡಿ

ಹಿಣ್ಣಲ್ಲಾ ಹೊನ್ನಾ ಕಳಸಾವೇ

ಉಂದಾಕುಟ್[೧] ಸೊಮೀ ಉಂದ್ಯೆಕೇ[೨] ಕೊಡ್ಲೇಲಾ
ಮಂದೀಯಾ ನಿಡ್ಗೇ ಕಳ್ಸಾವಾ। ತಡದೇಬರ್‍ವಾ
ರಂಬೇರಯ್ವರಾ ಕೊಡ್ಲೇಲಾ। ೧೪೮

ಹಿಣ್ಣ ಹುಟ್ಟೀದಂದೇ ಎಣ್ಣಾದೀರ್[೩]ಮನ್ದಲ್ಲೇ
ಹಿಣ್ಣಲ್ಲಾ ಹೊನ್ನಾ ಕಳ್ಸಾವೇ। ಅಣ್ಣಯ್ಯಾ।
ಹಿಣ್ಣೀನಿಂದ್ ಹಿಸ್ರ ನಿಡ್ವದ। ೧೪೯

ಹಿಣ್ಣ ಹುಟ್ಟೀದಂದೇ ಎಣ್ಣಾ ಬ್ಯೆಡಕ್ಕಮ್ಮಾ
ಸಿಟ್ಟಾಗೇ ಸಿವ್ಗೇ ಬೊಯ್ಬೆಡಾ। ಅಕ್ಕಮ್ಮಾ
ಹಿಣ್ಣು ಹೋಗ್ವಾಗೇ ಅಳ್ಬೆಡಾ। ೧೫೦

ಹಿಣ್ಣೆದ್ದಾ ಮನಿಗೇ ಕನ್ನೊಡಿಯಾತಕೇ
ಹಿಣ್ಣು ಸೆಣ್ಣವ್ಳ ಒಳ್ಗೀದ। ಬಾಲಮ್ಮಾ
ಕನ್ನೊಡ್ಹೊಳ್ದಂಗೇ[೪] ಹುಳ್ವದ[೫]। ೧೫೧

ಹಿಣ್ಣ ಹೊಟ್ಟಾಬೇಕೇ ಪುಣ್ಯಾಒಳ್ಳವ್ರೀಗೇ
ಅಯ್ವಾರಣ್ಣಾದೀರಾ ನಿಡ್ಡಾಗೇ। ಹುಟ್ಟೀದರೆ
ಇಣ್ಣೀದ[೬] ಬಂಗಾರ ಎಡ್ಬವ್ದು। ೧೫೨

ಚುಚ್ಚಾಲಬುಸ್ರೀಗೆ[೭] ಹಿಣ್ಣೆತ್ತವ್ಳಪುಣ್ಯಸ್ತೆ
ಹುಟ್ಟೀದೂರಲ್ಲೇ ಕೊಡ್ಬವ್ದು। ಕೊಟ್ಟಾರೆ
ಚಿಚ್ಚೊವ ಕೊಡ್ಕೇಬರುವಾಳ। ೧೫೩

ಒಬ್ಬಳೇ ಮಗಳಂದೇ ಗಬ್ಬೂಗರಗಲೆಬೆಡಾ[೮]
ಹಿಣ್ಣ ಹುಟ್ಟೀದಂದೇ ಎಣ್ಣಾದಿರ ಅಕ್ಕಮ್ಮಾ
ಕಬ್ಬೀಗೆ ಮರಿಹಿಳ್ಳೆ ಉಡುವಾದ। ಬಾಲಮ್ಮಾ
ಒಬ್ಬಾಳಿಂದ್ ಕುಡಿಯೇ ತಿಗರೂದ್[೯]। ೧೫೪

---

೧. ಒಂದನ್ನು ಕೊಟ್ಟು, ೨. ಒಂದನ್ನೇಕೆ ೩. ದುಃಖಿಸಬೇಡ ೪. ಕನ್ನಡಿ ಹೊಳೆದಂತೆ ೫. ಹೊಳೆಯುವಳು ೬. ಹಂಬಲಿಸಿದ ೭. ಚೊಚ್ಚಲ ಬಸುರಿಗೆ ೮. ದುಃಖಿಸಬೇಡ ೯. ಚಿಗುರುವುದು

ಹಿಣ್ಣ ನೆರಮನಿಯಾ ಸಿರಿದೇವೆ

ಹಿಣ್ಣಾಹಡದೀಯಂದೇ ಹೆಚ್ಚಾಳಾ ನಿನಗೇಕೇ
ಹಿಣ್ಣ ನೆರಮನಿಯಾ ಸಿರಿದೇವೆ। ಬಾಲಮ್ಮಾ
ಮಗನೇ ನಿಮ್ಮನಿಯಾ ಕೋಳ್ಗಂಬ। ೧೫೫

ಯಾಲಕ್ಕೀ ಗಿಡಹುಟ್ಟೇ ಎಲಿಗುಂದು ಕಾಯಾದು
ಹಿಣ್ಣುಟ್ಟೇ ಪರರಾ ಮನಿಯಾದು। ಗೋವಿಂದಾ
ಗಂಡುಟ್ಟೇ[೧೦] ನಮ್ಮಾ ಮನಿಯಾದು। ೧೫೬

ತುಳಸೀಯಾ ಗಿಡಹುಟ್ಟೇ ದೇವರಿಗೆ ನಿರಳಾದು
ಹಿಣ್ಣುಟ್ಟೇ ಪರರಾಮನಿಯಾದು। ಅಣ್ಣಯ್ಯಾ
ನೀಹುಟ್ಟೇ ದೊರಿಯಾಮಗನಾದೇ। ೧೫೭

ಸನ್ನೇಸೆ ಜಪವಾ ಮರ್ತಾನೇ

ನಿಡಿ ನಿಡೀ ಬಾಲಮ್ಮಾ ನೆಡಗೀಯಾ ನೋಡುವೆ
ಎಡಗಾಲಾಮ್ಯೆನೇ ಪದುಮಾವೇ। ಕೋಮನಗೆಜ್ಜೆ
ನಿಡಿಯೇ ದೇವ್ತಮ್ಮಾ ಮನಿತಂಕಾ। ೧೫೮

ನಾರೀ ಮಂಡಿಕುದ್ಲ[೧೨] ನೌಲಕ್ಕೀ ಗಿರಿಯಂಗೆ
ನಾರೇ ಪತ್ರೀಮಾ ಎಲಿಯಂಗೆ। ಬಾಲಮ್ಮಾ
ಹಲ್ಲು ಯಾಲಕ್ಕೀ ಕರಿಯಂಗೆ[೧೩]। ೧೫೯

ಚಂದ್ರ್ರಗಾವೀ ಸೇರೆ ಚೆಂದ ನಮ್ಮಗಳೀಗೆ
ಸಂದೂಕೀಲೆಲ್ಲಾ ಸರಗೀಯೇ। ಸೇರನಪಟ್ಟೆ
ಚೆಂದಾ ನನ್ನಮ್ಮನಾ ನಿಡತೋಳ। ೧೬೦

ಬಾಲನ ತುಟ್ಲವಾ ತೂಗೀ ಬಾ ಬಾಲಮ್ಮಾ
ಮುಚ್ಚೀಕೊ ಕೊರಳಾ ಸೆರಮುತ್ತಾ। ರಬಸಕೇ
ಬಿಚ್ಚೂವಾ[೧೪] ಬಾಲೇ ಬಿದರೂವಾ ೧೬೧

ನಾರೇಣ ಸ್ವೊಮಿ ಬಿಳ್ಕ[೧೫] ಹೇರಿ ಹೂಂವನಮ್ಯೆನೆ
ನಾರಿಯರ ಕುಳ್ಳಾ ಮಣಿಮ್ಯೆನೆ। ಬಾಲಮ್ಮಾ
ನಿನ್ನಾ ಬಿಳ್ಕನಮ್ಮಾ ಮನಿಯಲ್ಲೇ। ೧೬೨

ಕಸ್ತೂರೀಬುಟ್ಟ ಇನ್ನೆರಿಗ್ ವರ್ನಾವೇ।
ನಾಯಕ ಸರ್ದಾರ್ನ ಮಗಳೀಗೆ। ಬಾಲಮ್ಮಗೆ
ಕಸ್ತೂರ್ರಿಬುಟ್ಟ ಹಣಿಗೊರ್ನ[೧೬]। ೧೬೩

ದುಂಡುಗಯ್ಯವಳಿಗೆ ಕೆಂಡದಾ ಬಳಿವರ್ನಾ
ದಂಡಗ್ ನಾಯಕ್ನಾ ಮಗಳೀಗೆ। ಬಾಲಮ್ಮಗೆ
ಕೆಂಡದಾ ಬಳಿಯೇ ಕೈಗೊರ್ನ। ೧೬೪

ಗಾಳೀಗೇ ಹಾರುವ ದೂಳು ಪಟ್ಟೇಯುಟ್ಟೇ
ದೋರ್ನ[೧೮] ಬೀದ್ಯಲ್ಲೇ ಬರುವಾಗೇ। ಬಾಲಮ್ಮಾ
ತೋಳು ಮಿಂಚೇತೇ ಬಿಸಲೀಗೆ। ೧೬೫

---

೧೦. ಗಂಡುಹುಟ್ಟಿ ೧೧. ನಡೆ ೧೨. ತಲೆಗೂದಲು ೧೩. ಸಿಪ್ಪೆಯ ಹಾಗೆ ೧೪. ಬೆಚ್ಚುವನು ೧೫. ಬೆಳಕಿ ೧೬. ಹಣೆಗೆಶೋಭೆ ೧೮. ದೂರದ

ಗದ್ದೀಯಾ ಬಯ್‌ಲಲ್ಲೇ ದೊಡ್ಡಿಳ್ಳೀ ಮರಹುಟ್ಟೀ
ಬದ್ರೇ ಬಾಲಮ್ಮಾ ಕಯ್‌ಬೀಸೇ। ಬರುವಾಗೇ
ಸನ್ನೇಸೇ ಜಪವಾ ಮರ್ತಾನೆ। ೧೬೬

ಪಟ್ಟಾದಾ ರಾಣೀಯು ಕಟ್ಟಿದ್ರೆ ಮುಡ್ಜೆಂದಾ
ಬೆಟ್ಟಾದಲ್ ಸೇಗೀ ಎಲೆಚೆಂದಾ। ಬಾಲಮ್ಮಾ
ಪಟ್ಟೀಯಾ ಒಟ್ಟರೆ ನಿಡುಚೆಂದಾ। ೧೬೭

ನನ್ನಾ ಬಾಲಮ್ಮಾ ಸಾಲಿದಳಿಯಾ ಮ್ಯೆನೆ
ನಾಲ್ವತ್ತು ಕೋಟೇ ಕಡಮಿರ್ಗ[೧೮]। ಆಡಿದಂಗೆ
ಹಕ್ಕೀ ಚಿತ್ತರವಾ ಬರ್ದಂಗೆ[೧೯]।

ಮಾತೂಗಾರ್ನಾ ಮಗಳ ನೀತಿಗಾರ ಬಾಲಮ್ಮಾ
ಮಾತೇ ಮಾಣಿಕ್ಡಾ ಕಯ್ಯೊಡ್ಗೆ[೨೦]। ಬಾಲಮ್ಗೆ
ಚಿಲುವೆ ಅಂಬರ ದೊರಗೋಳ। ೧೬೯

ಕ್ಯೆಂದೂಗಿ ಮುಡ್ಕಂಡೇ ಕೇರೀಲ್ ಹೋಗ್ವರೇ
ನಾನು ಕೇಲರದಾ[೨೧] ಒಳ್ಗೇಂವೆ। ಬಾಲಮ್ಮಾ
ವಾಲೀಯಾ ಬಿಳ್ಕ ಹೊಳದಾವೇ। ೧೭೦

ಹೆಗ್ಗೇರಿ ಕೆಳಗಾನಾ ಹಿಗ್ಗಡತೇ ಬಾಲಮ್ಮಾ
ಹುಬ್ಬು ಚಿಂತಕದಾ ಕುಳ್ಳವಳೇ। ಬಾಲಮ್ಮಾ
ಜಿಲ್ಲೀಸೇ[೨೨] ನೀರಾ ತರುವಾಳೇ। ೧೭೧

ಇಳ್ಳು ಹೂಂವನ ಸೇರೆ ಬಿಳ್ಳೀ ಕಾಲುಂಗೀಲಾ
ಹಳ್ಳದಾ ನೀರಾ ತರುವಳ। ಬಾಲಮ್ಮಾ
ಹಳ್ಳೀ ಹಿಗ್ಗಡತಿ[೨೩] ಹಿರಿಮಗ್ಳ। ೧೭೨

ಕವ್ವಾತೆಂದಾಬಾಯ[೨೪] ಹವ್ವಾದಾ ಕುಡಿಯಂಗೆ
ಹೆತ್ತಮ್ಮಾ ಕಂಡೇ ಮರ್ಗಳ[೨೫]
ಹೆತ್ತಮ್ಮಾ ಕಂಡೇ ಏನಂದೇ ಮರ್ಗಳ।
ಬಡವರೀಗ್ ಸಲ್ವಾ ಮಗಳಲ್ಲಾ। ೧೭೩

ಕರಿಯ ಮಂಡೀ ಮೆನೇ ಬಿಳಿಯಾ ಮಲ್ಲುಗಿ ಜೆಡಿಯೇ
ಹುಬ್ಬೀನ ಕೆಳ್ಗೇ ಬಿಳ್ಗಣ್ಣ[೨೬]। ಬಾಲಮ್ಮಾ
ಬಡವರೀಗ್ ಸಲ್ಲೂ ಮಗಳಲ್ಲಾ। ೧೭೪

---

೧೮. ಚಿಗರೆ ೧೯. ಬರೆದಂತೆ ೨೦. ಕರಡಿಗೆ ೨೧. ಕ್ಷೀರಾಗಾರ ೨೨. ಬಾಗಿ ಬಳುಕುತ್ತ ೨೩. ಹೆಗ್ಗಡತಿ ೨೪. ತಾಂಬೂಲ ಸೇವಿಸಿದ ೨೫. ಕಳವಳಿಸುವಳು ೨೬. ಬಿಳಿಕಣ್ಣು

ದೊಡ್ಡವನಾ ಮಗಳೀಗೇ ದೊಡ್ಡಾ ಮೋಗತೆಬೇಕೇ[೨೭]
ಉಡ್ಯಾಣಾ ಬೇಕೇ ನಿಡುವೀಗೆ। ಬಾಲಮ್ನಾ
ದೊಡ್ಡವ್ರ ಮನಿಗೇ ಕೊಡಬೇಕೇ। ೧೭೫

ಏಗೇ ತಂಗಮ್ನಾ ಅಲ್ಲಿಲ್ಲೇ ಕೊಡಬ್ಯೆಡಿ
ಸ್ವೊಳೀತಿಂದ್ ಬ್ಯೆಳೀ ಉಗ್ವಲ್ಲೇ। ಕೊಟ್ಟಾರೆ
ಹ್ವೊದೋರಿಗ್ ಹೊರಿಯಾ ನಿಗುವಾಳ। ೧೭೬

ಅತ್ತೀಯಾ ಮರನಡಗೇ ನಿಂತೇ ಮೀವಳ್ಯೆರೇ
ಉತ್ತಮ ಬತ್ತಾನೇ ಮನಿಗ್ಹೋಗ। ಬಾಲಮ್ಮಾ
ಮುತ್ತಾ ಜಿಲ್ಲಯ್ಸಿ[೨೮] ತುರಬೀಗೆ। ೧೭೭

ಕಂಕಣದಾ ಕ್ಯೆಯವಳೇ ಕನ್ನೂಡಿ ಮೊಕದವಳೆ
ಇಸ್ತಾರದ ಸಿಂಗೂ ದಿನಿಯವ್ಳೆ। ಬಾಲಮ್ಮಾ
ಬೇಲೂರ ಅಳಿಯ ದೊರಬಂದ। ೧೭೮

ಮಂಡ್ಯೀಕ್ನಾ ಮಗ್ಳ ಮಂಡೀಕಟ್ಟೂವಾಗೇ
ಕಂಡನೇ ರಾಯಾ ಕಡಗಣ್ಣಾ। ಬಾಮಾಕೇ[೨೯]
ತಂದೆಟ್ಟಾ ಕೀಲ ಕಡಗವ। ೧೭೯

---

೨೭. ಮೂಗುತಿ ೨೮. ಚೆನ್ನಾಗಿ ತುಂಬು ೨೯. ಚೆಂದಕ್ಕೆ

ಹುತ್ತಾದ್ರು ಓಟಾ ಒಣಬೇಕೇ

ಬಟ್ಟೀಯಾ ಕರ್ಕೀಯಾ ಮಿಟ್ಟೂವರ್ ತುಳ್ವರ
ಮತ್ತುಂದ ಕವ್ರ ಉಡುವದ। ಬಾಲಮ್ಮಾ
ಬಟ್ಟೀ ಕರ್ಕೀಯಂಗೇ ಸುಕ್ಬಾಳ। ೧೮೦

ಬತ್ತಾ ಮೆರ್ದಾರೇ ಕಟ್ಟಾಣೇ ಚೂರಂಬಾರ
ಕೊಟ್ಟಗಿಯಾ ಹುಕ್ಕೇ ಸಿಗ್ಣೀಯ। ತೆಗ್ದಾರೇ
ಮುತ್ತೇ ನೀನ್ಯೆರಾ ಮಗ್ಗಂಬ್ರು। ೧೮೧

ಸೋದರಾ ಮಾವಾಗೇ ಸೊಸಿಯಾಗ ಬಾಲಮ್ಮಾ
ಇಣ್ಣೀದಾ ಪಟ್ಟೀನೆ ಒಡ್ಬವ್ದ। ನನ್ನಪ್ಪೋಜಿ
ಗಂದಾದಾ ಮಾಳ್ಗೀಲೇ ಎರ್ಬವ್ದ। ೧೮೨

ಗಂಡ್ರ ಮನಿಯಾಕೆಲ್ಲಾ ಕಂಡಂಗೇ ಗೆಯ್ಬೇಕೇ
ಉತ್ತುಮ್ರಾ ಹಿಸ್ರಾ ತರ್ಬೇಕೇ। ಬಾಲಮ್ಮಾ
ಹುತ್ತಾದ್ರು[೩೦] ಓಟಾ[೩೧] ಒಣ್ಬೇಕೇ। ೧೮೩

ಗಂಡಾರಾ ಮನಿಯಲ್ಲೇ ಉಂದುಂದಾಡೂವರ
ಗಂದ್ಯೆಸದೀರ[೩೨] ಹಸಬಾಲೀ। ನನ್ನಮ್ಮಾ
ಗಂಡನಾಯಸ್ವೇ ಹಿರ್ದನ್ನ। ೧೮೪

ಗಂಡಾ ಸಣ್ಣವ್ನಂದೇ ಪುಂಡಾಟಾ ಬ್ಯೆಡಾಮ್ಮಾ
ಮಂಡೂಕಿಕಾಯಾ ಎಲಿಸೆಣ್ಣ। ಬಾಲಮ್ಮಾ
ಗಂಡ ಸಸ್ತ್ರವ ಹಿಡದಾನೇ। ೧೮೫

---

೩೦. ತಡವಾದ್ರು ೩೧. ಊಟ ೩೨. ಹೆದರದಿರು

ಬದ್ರೀಯಾ ಮೆನೇ ಹಳಿಯಿಲ್ಲಾ

ನಾರೀಮಂಡೀಕುದ್ಲ ನಾಲ್ವತ್ತು ಮಾದರುದ್ದಾ
ಯಾರು ಕಟ್ಟೂಕೇ ಅರಿಯಾರ। ಅಕ್ಕಮ್ಮಾ
ಕಟ್ಟಾಳೇ ತಾನೂ ಸಿರಿಮುಡಿಯಾ। ೧೮೬

ಬದ್ರಿಯಾ ಬಗತಾಲೇ ಉದ್ದೀನಾ ಸ್ವೊಡ್ಗೀಯಂಗೇ
ಉಜ್ರದಾ ಹುರಿಯಾ ಹೆಡ್ಡಂಗೇ[೩೩]। ಅಕ್ಕಮ್ಮಾ
ಬದ್ರೀಯಾ ಮೈನೇ ಹಳಿಯಿಲ್ಲಾ[೩೪]। ೧೮೭

ಮಜ್ಜನ್ಕಿಳ್ಳೂದ[೩೫] ಮಜ್ಜಾಮಲ್ಗೀಹೂಂವ
ಸುಗ್ಗೀಗಿಳ್ಳೂದ ಸುರ್ಗಿಯೇ। ಸಾವಂತೂಗೇ
ನುಗ್ಗಾದು ಅಕ್ಕಮ್ಮಾ ಮುಡಿಯಲ್ಲೇ। ೧೮೮

ಮುತ್ತೀನಾ ಮುಡಿಯಮ್ಮಾ ಮತ್ತ್ವೊದಳ ನೀರೀಗೇ
ಸುತ್ತೇ ಅರಗ್‌ದ್ವೆ ಗಿಳಿರಾಮಾ। ಅಕ್ಕಮ್ಮಾ
ಮುತ್ತೀನಾ ಮುಡಿಗೇ ಬಿಸ್ಲಂದೇ। ೧೮೯

ಸರ್ಪಾನಾ ಕುಂದದ್ದೇ ಸರ್ವೂಳಿ ನಣದದ್ದೇ
ಸರ್ದಾರ್ರಾ ಮಡ್ಡೇ ಹಿರಿಯಕ್ಕಾಕ್ಕಾ। ಕುಳ್ಳಲ್ಲೇ
ಸರ್ಪಾನಾ ಸರ್ವೂಳೇ ಹುಳುವಾದ[೩೬]। ೧೯೦

ಹಾಡೀನಾ ದಿಸಿಕೇಳೇ ಹೂಡೂಕೊದಣ್ಣಾಬಂದಾ
ಹಾಡೇಳೆ ತಂಗಿ ದಿನ್‌ಚೆಂದಾ। ತಂಗಮ್ಮಾ
ಹಾಡಾ ಕೇಳದ್ರೇ ಹಸುವಿಲ್ಲಾ। ೧೯೧

---

೩೩. ಹಿಡಿದಂತೆ ೩೪. ದೋಷ ೩೫. ಮಧ್ಯಾಹ್ನ ಆರಳುವದು ೩೬. ಹೊಳೆಯುವುದು

ಗಂದಾದಾ ಬೀಸಣಗಿ ಕಳಗೀದೆ

ಯಾರೂ ಬಂದಾರೂ ನನ್ನಾ ಚಾವುಡೇ ತೊಂಬಾವೇ[೪೮]
ಜೋಡೀನಾ ಕುದ್ರೀ ಹಿರಿಯಣ್ಣಾ। ಬಂದಾರೆ
ಚಾವೂಡಿ ತುಂಬೇ ಮಿಗ್ಲಾದು। ೨೦೫

ಬಳಗಾ ಬಾಳೆದ್ದಾರೆ ನನ್ಗಂತಾ ದೈರ್ಯಾವೇ
ದೊರತೀಪುರದಾ ಅಣ್ಣಯ್ಯಾ। ಬಾಳೆದ್ದರೆ
ದೈರ್ಯಾವೇ ನನ್ನಾ ಮನ್ದಲ್ಲೇ। ೨೦೬

ಹಿಣ್ಣಾ ಕೇಳೂವಾಕೇ ನನ್ನಣ್ಣಾ ಬಾಳೆರಲೇ[೪೯]
ಮಾತಾ ಕಲ್ತವ್ನೇ ಹಿರಿಯಣ್ಣಾ। ಬಾಳೆದ್ದರೆ
ಮಾತೀಗೇ ನೂರ್ಥಿಣ್ಣಾ ತರ್ಬವ್ದ। ೨೦೭

ಬಾಳೂರೀಗೊದಣ್ಣಾ ಬಯಕೆ ಬಣ್ಣವಾ[೫೦] ತಂದಾ
ನಾಒಟ್ರೇ[೫೧] ನಾರೇ ಮುನುವಾಳ। ಅಣ್ಣಯ್ಯಾ
ಮಡ್ದೇಉಟ್ ಮಗ್ನಾ ಹಡಿಯಾಲೆ। ೨೦೮

ಮಡದೇಮೊನ್ನಾದರೆ ಮುಡ್ಳೇಳೀಕೊಟ್ಟಾ[೫೨]
ಒಡ್ನೂಟ್ಟೇದಕ್ಕಾ ಮೊನ್ನಾದರೇ। ತಮ್ಮಯ್ಯಾ
ಮಗಳಾ ಕುಟ್ ಮನವಾ ತಣಿಸೀದಾ। ೨೦೯

ಕಂಡವ್ರ ಕೋಡ್ಡೇಳದ್ರೇ ಕೇಳ್ದಲ್ಲೇ ಮರ್ವರ
ತಂದೆತಾಯ್ ಹಡೆದಾ ಕೊಮರಾರ। ಕೋಡ್ಡೇಳದ್ರೆ
ಇಣ್ಣಸ್ ಕಣ್ಣೀರಾ ಬಿಡ್ವರ। ೨೧೦

ಅಗಸೀಯಾ ಹೊಳಿಯಲ್ಲೇ ಜಗ್ತಾರ್ದ ಮಲ್ಲೂಗೇ
ಕುಯ್ತಾ ತಮ್ಮಯ್ಯಾ ಸೆರ್ತುಂಬೇ। ನಿನ್ನಕ್ಕಮ್ಮಾ
ಬಗ್ತಾಲಿ ಮುಟ್ಟೊ[೫೩] ಮುಡ್ವಾಳ। ೨೧೧

ಅಂಗೀಮ್ಯೆನಂಗೇ ಸಾನಾಬಯ್ನಾ ತಂಗೇ
ಏನಾ ಬೇಡ್ಯಾಳೇ ಕಿರ್ದಂಗೇ। ಅಣ್ಣನ ಕೈಲೇ
ತೋಳೀಗ್ ಬೇಡಾಳೇ ಸರ್ಗೀಯಾ। ೨೧೨

---

೪೮. ತುಂಬದು ೪೯. ಬದುಕಿರಲಿ ೫೦. ಸೀರೆ ೫೧. ನಾನುಟ್ಟರೆ ೫೨. ಮಡಿ ಅನವೀಳ್ಯಕೊಟ್ಟ ೫೩. ವರೆಗೂ

ತಂಗಿಲ್ಲಾದಣ್ಣಾ ಕಡುಪಾಪೇ

ಅಣ್ಣಾ ತಂಗೀ ಬಿಲ್ಲ ನೆಂತಾವಂಗಳದಲ್ಲೇ
ತಂಗಿಲ್ಲಾದಣ್ಣಾ ಕಡುಪಾಪೇ। ಬಿಲ್ಲೋಗೇ
ನೆಂತಾವೇ ನೀರಾ ನಿಡ್ಡಾಗೆ। ೨೦೦

ಬಿಳ್ಳುಳ್ಳೇ ಬೆಳ್ಳಾಗೇ ನನತಮ್ಮಾ ತೆಳ್ಳಾಗೇ
ನಾಕಂಡೇ ಗುರ್ತಾಹಿಡುವಾನೇ। ತಮ್ಮಾಯ್ಯಾ
ಕಾಲಾಳಾ ಜನಕೇ ಕಡಿಯಿಲ್ಲಾ[೪೩]। ೨೦೧

ಮೋಗೂತಿ ಮೊರದಾರೆ[೪೪] ಯಾರ್ಕಯ್ಲೇ। ಹೇಳೀಯೆ
ರಾಜೀಯನಾಳ್ವ ಹಿರಿಯಣ್ಣಾ। ಕೈಲೇಳದ್ರೆ[೪೫]
ಮೋಗೂತಿಗೊರುವಾ[೪೬] ಕಳಗೂನೆ। ೨೦೨

ಸಂಪೂಗಿ ಹೂಂವಿಲ್ದೇ ಸಂಪಿಲ್ಲಾ ನಮ್ಮಂಡೆ
ಸಂತೀಗೋಗೀನೇ ಹಿರಿಯಣ್ಣಾ। ಬರುವಂಕ್ರೀ
ಸಂತೋಸವಿಲ್ಲಾ ಮನ್ದಲ್ಲೇ। ೨೦೩

ಅಕ್ಕಾಗೇ ತಮ್ಮಾಗೇ ಉಂದ್ ತರದಾ ಬಟ್ಟಾವೇ
ಚೆನ್ದಾ ಬಟ್ಟಲ್ಲೇ ಎರದುಪ್ಪಾ। ಬಡಸೂವಾ
ಅಕ್ಕಮ್ಮಾ ಬಾಳೇ ಎರ್ಲಂಬೆ[೪೭]। ೨೦೪

---

೪೩. ಕಡಿಮೆಯಿಲ್ಲ ೪೪. ಮುರಿದರೆ ೪೫. ಹತ್ತಿರಹೇಳಿದರೆ ೪೬. ಮೂಗಿತಿಗೆ ವರಹಗಳನ್ನು ೪೭. ಇರಲಿಯೆನ್ನುವೆನು

ಹಿಂಗಾರ್ದ್ಹಾ ಎಳ್ಬೆಟ್ರೋ ನಮ್ಮಾ ಗೆಳ್ಬೆಡಾ

ಅಕ್ಕಾ ತಂಗಾದೀರ ಲೆಕ್ಕಕ್ಕಿಂಟೂ[೩೭] ಮಂದೇ
ಸಕ್ಕೂರಿಯಲ್ಲೇ ಕರಿಯಿಳ್ಳ। ಬಿರ್ಸೀದಂಗೇ
ಅಕ್ಕ ಕುದ್ರವಾ[೩೮] ಅರಿಯಾಳ। ೧೯೨

ಅಕ್ಕಾ ತಂಗಾದೀರ ನಾವ್ ಹಿಚ್ನಾ ಗರ್ತೇರ
ಅರ್ಯಾಮೆನ್ ಹುಟ್ದಾ ಅಡಕೀಯಾ। ಹಿಂಗಾರ್ದ್ಹಾ
ಎಳ್ಬೆಟ್ರೋ ನಮ್ಮಾ ಗೆಳ್ಬೆಡಾ। ೧೯೩

ಕೇರೀಕೇರೀಹುಕ್ಕೇ ನಾನಿನ್ನಾ ಅರ್ಸೀದೆ
ಬಾರೇ ಅಕ್ಕಮ್ಮಾ ಬಳಿಯಿಕ್ಕು। ಬನವಾಸೀಯಾ
ತೇರನಾ ಬಳ್ಬಂದೇ ಸಿರ್ದೀದರ್[೩೯]। ೧೯೪

ಅಕ್ಕೋಗು ಬಾರೇ ಇಕ್ಕೇರಿ ಸಂತೀಗೇ
ತಕ್ಕಂಬು ಬಾರೇ ಹವಳಾವಾ। ಮುತ್ನಸರ್ವಾ
ಇಕ್ಕಂಬು ಬಾರೇ ಕುರಳೀಗೇ। ೧೯೫

ಅಕ್ಕಾ ನಿನ್ಸೇರೇ ಯಾಲಕ್ಕೀ ಪರ್ಮಳಾ
ಏನಾಕೇ ಅಕ್ಕಾ ಉಗ್ದದೇ। ಅಂಕೋಲೀಯಾ
ಸಿಟ್ಟೇ ಅಂಗ್ಡೀಯಾ ಸಬ್ಕಾರಾ। ತಂಗಮ್ಮಾ
ಕ್ಯೆಂದೂಗಿ ಕೆರಿಯಾ ಹಣನೀರಾ। ೧೯೬

ಕಾಲುಂಗ್ಲದಾಕೀಗೆ ಕರವೇಬಂದೀದೇಗೆ
ಮ್ವೊಡಿಲ್ದೇ ಹುಯ್ಯ ಮೊಳಿರಾಯ। ಅಕ್ಕಮ್ನಾ
ಇಂದೋಗೂ ಪ್ಯೆಣಾ[೪೦] ಎರ್ಲಂಬೆ। ೧೯೭

ಅಕ್ಕೆದ್ದ ರಾಜೀಕೇ ಅಕ್ಷತೆ ಒದಗಾಲೆ[೪೧]
ಹಕ್ಲಾದಲ್ ಸುರ್ಗೇಒದ್ರಾಲೆಳ್ತ । ತಾಯಮ್ಮಾ
ಅಕ್ಕೆದ್ದಾ ರಾಜ್ಯಾ ಸುಬನಾವೇ। ೧೯೮

ತಂಗೆದ್ದ ರಾಜೀಕೇ ತಂಗಾಳೇ ಬ್ಯೆಸಾಲೇ
ಅಂಗ್ಳಾದಲ್ ಸಂಪೂಗಿ ಒದ್ರಾಲೆ। ತಾಯಮ್ಮಾ
ತಂಗೆದ್ದಾ ರಾಜ್ಯಾ ಸುಬನಾವೇ। ೧೯೯

---

೩೭. ಲೆಕ್ಕಕ್ಕೆ ಎಂಟು ೩೮. ಕ್ಷುದ್ರ ೩೯. ತುಂಬಿದೆ ೪೦. ಪಯಣ ೪೧. ಹೆಚ್ಚಲಿ ೪೨. ಸುರಿಗೆ ಉದುರಲಿ

ಅಡ್ಡೀಯಂಚ್ನಾ ಗದ್ದೇ ಮಡಲಾಸೇ ಬಿದ್ದೀದ
ಮಕ್ಕಳಂಡಗ್ನೇ[೫೪] ಹಿರಿಯಣ್ಣಾ ಗದ್ದೀಯಾ
ಮೆಟ್ಟಾದೇ ಬಾರೋ ಹುಲಿಯಪ್ಪಾ। ೨೧೩

ಮಂಜಗೂಣಿ ತೇರೀಗೇ ಇಂದೀಗೇಳೂ ದಿನಾ
ಮಂದೀಲ್ ತಮ್ಮಯ್ಯಾ ಬಿದರೀದಾ। ಸುದ್ದೀಕೇಳೇ
ಗಂದಾದಾ ಬೀಸಣ್ಗೀ ಕಳಗೀದೆ। ೨೧೪

೫೪. ಮಕ್ಕಳಿದ್ದವ

ಅಣ್ಣಯ್ಯಾ ತಂಪೀಗೇ ತಿಂಗಾ ನಿಡ್ಸೀದಾ

ಕಾರ‍್ಗದ್ದೇಕಿಸ್ರಂದೇ[೫೫] ಅರಿಯಾಮ್ಯೆನ್‌ಮುಳ್ಳಂದೇ
ಅಕ್ಕೋಗೂ ಹಾದೇ ಬಿಸ್ಲಂದೇ। ತಮ್ಮಯ್ಯಾ
ತಂಪೀಗೇ ತಿಂಗಾ[೫೬] ನಿಡ್ಸೀದಾ। ೨೧೫

ಎಲ್ಲರೀಗ್ವೊಲೀಯಾ ಬಲ್ಲೀಂದ್ರಾ ಬರದಾನೇ
ಮಲ್ಲೂಗೀ ಮುಡಿಯಾ ಬಾಲಮ್ಮಾಗೇ। ಅಕ್ಕಾಗೇ
ಎಲ್ಲಾರ ನಿಡಗ್ವೊಲೀ[೫೭] ಬರ್ದಾನೇ ೨೧೬

ಬಾಳೂರೀಗ್ವೊಲೀಯಾ ಕೇಳಾದೇ ಬರ್ದಾನೇ
ಯಾಲಕ್ ಸಾಗರ್ವೇ ಎಳಗಾಯಾ। ದೋಣೀ ತುಂಬೇ
ಬಾವಾದೀರ್ ಸಹಿತಾ ಬರ್ಲಂದೇ। ೨೧೭

ಅಂಕೋಲೀ ಊರಲ್ಲೇ ಸುಂಕದ ಕಟ್ಟೀಮೆನೇ
ನಿಂತ್ಯರೀಗ್ವೊಲೀ ಬರ್ದೇಂವ। ಅಣ್ಣಯ್ಯಾ
ಕುಚ್ಚೀನಾಡಳ್ಳೇ ಅಯ್ವತ್ತು ಒಳಗೆದ್ದಾ
ಅರತೇ ಕಿರ್ದಂಗೀ ಬರ್ಲಂದೇ। ೨೧೮

ಅಚ್ಚಮಲ್ಗೀ ಹೂಂವಾ ಮುಚ್ಚೀ ಮಾರುವ ಜಾಣಾ
ನಾಕೊಂಬೆ ಅದ್ರ ಬೆಲಿಹೇಳ। ತಂಗೀಗೆ
ಸುರುಳೀಗೂದಲಿನಾ ಸುಗುಣೀಗೆ। ೨೧೯

ಹಿಂಗಾರಾ ಕೊನಿಯಾ ಕುಯ್ದಲ್ಲೇ ಒಡ್ದಾನೇ
ತಂಗೀಗೇ ಹೇಳ್ಕೀಯಾ ಕಳಗೀದಾ। ಅಣ್ಣಯ್ಯಾ
ಕೊನಬಿಟ್ ಕುಂಡಕೀಯಾ ಮುಡ್ದೋಗ। ೨೨೦

ಎಳಿಯಾ ಹಿಂಗಾರ್ಕೊನೆ ಪರ್ಮಾಳಾ[೫೮] ಜಾಂಜೀಕಟ್ಟ[೫೯]
ದೊರಿಯೇ ಅಣ್ಣಯ್ಯಾ ಕಳಗೀದಾ।
ದೊರಿಯೇ ಅಣ್ಣಯ್ಯಾ ಏನಂದೇ ಕಳಗೀದಾ
ಮುತ್ತೈದೇ ತಂಗೀ ಮುಡಿಲಂದೇ। ೨೨೧

---

೫೫. ಕೆಸರೆಂದು ೫೬. ತೆಂಗನ್ನು ೫೭. ನಡುವೆ ಓಲೆ ೫೮. ಪರಿಮಳದ ೫೯. ಜಾಜಿಹೂವಿನಕಟ್ಟು

ಪಟ್ಟೀ ಉಟ್ಟೀಕಂಡೇ ಪಟ್ಣಾದಲ್ ನೆಂತವ್ನೆರೇ
ಚೆಬ್ಬೀ ತುಂಬ್ ಹೂಂವಾ ತಡಕಂಡೇ। ಆಣ್ಣಯ್ಯಾ
ತಂಗ್ದೀರರ್‍ರೂನೇ ಸಬಿಯಲ್ಲೇ। ೨೨೨

ಹೇರೂ ಹೇರ್‍ರಾ ಬೆಲ್ಲಾ ಜೇನುತುಪ್ಪಾ ಕೊಡ್ವೇ
ಅಕ್ಕಾಗೇ ತಮ್ಮಯ್ಯಾ ಕಳಗೂವಾ।
ಅಕ್ಕಾಗೇ ತಮ್ಮಯ್ಯಾ ಏನಂದೇ ಕಳ್ಗೂವಾ
ಪಾಯೀಸನಟ್ಟೇ ಒಣಲಂದೇ। ೨೨೩

ತಂಗ್ಣೆತ್ತಾ ಸುದ್ದೀಯಾ ಅಂಗ್ಡೀಲೇ ಕೇಳೀದಾ
ಉಂಗೀಲಕೊರುವಾ ಕಳಗೀದಾ। ಅಣ್ಣಯ್ಯಾ
ತಂಗ್ಣೆತ್ತಾ ಗಂಡೂ ಕೊಮರಾಗೇ। ೨೨೪

ಅಕ್ಕಾ ತಂಗ್ದೀರ್ ಬರ್‍ದಾಮ್ಯೆನೇ ಸೋಳೇರಾ ಬರ್‍ದಾ
ತಾನೂ ತಾಂಬರಿಯೇ ಕುಸ್ಮಾಲೇ। ಕುಳ್ಳೂ ಮನಿಗೆ
ಬೊಂಬೇ ಬ್ಯೆಗಡಿಯಾ ಬರ್‍ದಾನೇ। ೨೨೫

ಹಣ್ಣಡಕೀ ಕೊನ ಬಿದ್ದೇ ಹನ್ನೆಯ್ದು ಬಳನಗ್ಗೇ[೬೦]
ಮುತ್ತೀನಾ ಸರ್‍ಕಡ್ದೇ ಮಣ್ಜಿಲ್ಲೇ। ತಂಗಮ್ಮಾ
ಅಣ್ಣಾಗೊಂದ್ವೊಲೀ ಬರುವಳ
ಅಣ್ಣಾಗೊಂದ್ವೊಲೀ ಏನಂದೇ ಬರ್‍ವಳ
ಮುತ್ತೀನಾ ಸರವ್ಯೆದ ಕಳಗೀಸ। ೨೨೬

ತಂಗೀಯಾ ಮನಗೋಗೇ ಅಣ್ಣಾಯ್ಯಾ ಬರುವಾಗೇ
ಯಾವಾಗ್ ಬತ್ತೀಯಣ್ಣಾ ಕರ್ವಾಕೆ।
ಕಾರ್‌ಗದ್ದೀ ಬಿತ್ತೂವಾಗೇ ಕಣ್ಗೀಲ ಹೂಂವಾಗ್ವಾಗೇ
ನೀನು ಕಂದಯ್ನಾ ಹಡದಾಗೇ। ತಂಗಮ್ಮಾ
ಜಿರಿಯಂಗೀ ತಕ್ಕಂಡ್ ಬರ್ತೀನೇ। ೨೨೭

ಜಿರಿಯಂಗೀ ತಂದಾರೇ ಅಳಿಯಾಗಾಯೀತಣ್ಣಾ
ನಂಗೇನಾ ತರುವೆ ಉಲುಪೀಯ।
ಕಡ್ಡೀ ಕಣ್ಣೀನ ಸಾಲೆ ಬೇಕಂಬು ಕುಪ್ಪಸಾ
ಸೇರ್‍ರೊರನ್ವಾಲೆ ಸರ್ಗೀಯಾ। ಮುತ್ನದಂಡೆ
ಸಾಕೇನೇ ತಂಗೀ ಬಿರ್ದೀಗೆ[೬೧]। ೨೨೮

೬೦. ಬಳೆಒಡೆದು ೬೧. ಹೆಗ್ಗಳಿಕೆಗೆ

ಗಿಂಡೀಲ್ ಹಾಲುಯ್ದೇ ಕಳ್ಗೂವೇ

ಬಂದೀ ಕುಳ್ಳಾ[೧೨] ಮಗ್ಳ ಬಂದೀದೋ ಬರ್ಲೇಲಾ[೧೩]
ಅಂಗ್ಳದಲ್ಲಿಲ್ಲಾ ಒಳ್ಗಿಲ್ಲಾ। ನಮ್ಮನಿಯಾ
ಮಗ್ಳು ಬಂದ್ಹುರ್ತು ಸುಬ್ನಿಲ್ಲಾ[೧೪]। ೧೨೯

ಗಂಡ್ರಮನಿಲೆದ್ದವ್ಳಾ ಕಂಡದ್ರೇ ನನ್ನಮ್ನಾ
ಮಂಡೇ ಮಾರುದ್ದಾ ಸೆಳ್ಗಿಂಟ। ಹುಯ್ಕಂಡೇ
ಗಿಂಡೀಯಲ್ ಹಾಲಾ ಕರ್ವಳಾ। ಕಯ್ಯಲ್ಲೇ
ನೋಡದ್ರೇ ಕೀಲೂ ಕಡ್ಗಾವಾ। ೧೩೦

ಮರ್ಕೇ ಬಳ್ಳೀ ನಿಟ್ಟೇ ಬುಡ್ಕೇ ನೀರಾ ಹುಯ್ದೇ
ದಿನ್ಕಯ್ದೂ ಮೊಕ್ಕೀ[೧೫] ಕಳ್ಗೂವೆ[೧೬]।
ದಿನ್ಕಯ್ದು ಮೊಕ್ಕೀ ಏನಂದೇ ಕಳ್ಗೂವೆ
ನಿಸ್ತ್ರೇ ಬಾಲಮ್ಮಾ ಮುಡಿಲಂದೇ। ೧೩೧

ಗಂಡ್ರ ಮನಿಯಾ ಕೆಲ್ಸಾ ಇಂದೇ ಮಜ್ಜಾನಾದು
ಸೆಣ್ಣವ್ಳ ಬಾಲಮ್ಮಾ ಹಸ್ದಾಳೇ। ಸುದ್ದೀ ಕೇಳೇ
ಗಿಂಡೀಲ್ ಹಾಲುಯ್ದೇ ಕಳ್ಗೂವೇ। ೧೩೨

ಆವಳ್ಕೇ[೧೭] ಅಬ್ಬಳ್ಕೇ[೧೮] ನನ್ನೆರು ನೆನ್ದಾರೇ
ಕೀಲಾ[೧೯] ಸಾಗದ್ರಾ ಮನಿಯಮ್ಮಾ। ತಾಯಮ್ಮಾ
ಏನಟ್ಟೇ ನಮ್ಮಾ ನನ್ದದ್ದೇ। ೧೩೩

ಹಾಲಡ್ಗೀ[೨೦] ಸುಟ್ಟದೇ ಬಾಲರೀಗ್ ಬಡ್ಸದೇ
ಹರಳೂ ಮಲ್ಲೂಗಿಯಾ ಸುರ್ದದ್ದೇ। ಬಾಲಮ್ಮಾ
ಆವಾಗೇ ನಿನ್ನಾ ನನ್ದದ್ದೇ। ೧೩೪

---

೧೨. ಕೊರಳಿನ ೧೩. ಬರಲಿಲ್ಲಾ ೧೪. ಶುಭವಿಲ್ಲ ೧೫. ಮೊಗ್ಗೆ ೧೬. ಕಳಿಸುತ್ತೇನೆ ೧೭. ಆಕಳಕೆ ೧೮. ತಳಮಳ ೧೯. ಕ್ಷೀರ ೨೦. ಒಂದು ಬಗೆಯ ರೊಟ್ಟಿ

ಮಂಡೇ ಮಾಸಿದ್ರೇ ಹೇಳೀಕಳ್ಗ ಬಾಲಮ್ಮಾ
ಉಂದು ಗಿಂಡೆಣ್ಣೀ ಹಣಗೀಯಾ[೭೧]। ಜಾಂಜೀಕಾಟ್ಟಾ
ತಮ್ಮಯ್ಯಾ ಒಡ್ನೇ ಕಳ್ಗೂವೇ। ೨೩೫

ಕಾರಕ್ಕೀ ಅನ್ನಾಕೇ ಬೋರೆಂಬಾ ಮಜ್ಜೂಗೇ
ಯಾಕೆ ನನ್ನಮ್ಮಾ ಮೊಕ ಬಾಡ್ತೇ। ಗಂಡ್ರಮನಿಯಾ
ಕೀಲು ಸಾಗರದಾ ಕೆಲಸಾಕೇ। ೨೩೬

ತಂಗೀಯಾ ಕರತಾರೋ ಹಿಂಗಾರಾ ಮುಡವಳಾ

ತಂಗೇ ಹೋಗೂವಾಗೇ ತಿಂಗೆಲ್ಲಾ ಸಿಸ್ಮಡ್ಗೇ[೭೨]
ತಿಂಗೂ ಕೊನಬಿಡ್ಸೇ ಪಲಬಂದು। ಬಾಲಯ್ಯಾ
ತಂಗೀ ಕರತರುವಾ ದಿನವಾದು। ೨೩೭

ತಂಗೀಯಾ ಕರತಾರೋ ಹಿಂಗಾರಾ ಮುಡುವಳಾ
ನಿಂಗೇ ಅಗ್ಗುನಿಯಾ[೭೩] ಇರುವಳಾ। ಬಾಲಯ್ಯಾ
ಸುಂಗಾರ್ದಾ ಮೈನೇ[೭೪] ಕರ್ತಾರೋ। ೨೩೮

---

೭೧. ಬಾಚಣಿಕೆ ೭೨. ಸಣ್ಣಮರ ೭೩. ಅಗ್ನಿ ೭೪. ವೈಭವದಿಂದ

ಆಳೂ ದಂಡಗಿಯಾ ಕಳ್ಗಸ

ಕಾರೀವೇ[೭೫] ಆದಾರೆ ಹೇಳೇ ಕಳಗಸಣ್ಣಾ
ಕಾಲೂ ದೂಳಲ್ಲೇ ಬರನಂಬ್ಳ[೭೬]। ನಿಮ್ಮನಿಯಾ
ಆಳೂ ದಂಡಗಿಯಾ ಕಳ್ಗಸ[೭೭]। ೨೩೯

ಬಾರಂದೇ ಕಳಗದ್ರೆ ಬರ್ವಕೆ ಹೆಡ್ಡೀಯಲ್ಲಾ
ದೂರಿಯೇ ನಿನ್ನಕ್ಕಾ ಬಡವೀಯೇ। ಅಲ್ಲಾದ್ರೆ
ಆನೀ ಕುಟ್ಬಾಳಾ ಕಳ್ಗಸ। ೨೪೦

ತಂಗೀಯರ ಮನಗೇ ಸವ್ನೀದಾ

ತಂಗೀ ಮನಗೋಗೂಕೇ ಒಳಗಿಂದೇ ಸತ್ತಗಿ ತಂದಾ
ಕೊಟ್ಟೂಗಿಲಿರುವಾ ಕುದರೀಯಾ। ಹತ್ತೀಕಂಡೇ
ತಂಗೀಯರಮನಗೇ ಸವ್ನೀದಾ। ೨೪೧

ಹರಿಯಾ ಹೊತ್ತರಮುಂಚೇ[೭೮] ದೂರಿಯೇ ಏಳ್ವದ ಕಂಡೇ
ಕೆರಿಯಂಚೇ ಕೈಂದಗೀಯಾ ಕೊನಿಕಂಡೇ। ಅಣ್ಣಯ್ನಾ
ಕಾಲಾಳಾ ಕಂಡೇ ತಿರ್ಗೀದೇ। ೨೪೨

ಹಾಲೀಗಕ್ಕೀ ಹುಯ್ದೇ ನೀರೀಗಂದೋಗದ್ದೇ[೭೯]
ದಾರೀಮೆನ್ ಕಂಡೇ ಕುದ್ರೀಯಾ। ತಮ್ಮಯ್ನಾ
ಕಾಲಾಳಾ ಕಂಡೇ ತಿರ್ಗೀದೆ। ೨೪೩

ಏಗೇ[೮೦] ಬೀಸ್ಗಾಳೇ ಇಂದ್ರಾಲೋಕದ ಗಾಳೇ
ಇನ್ನುಂದು ಗಾಳೇ ಸುಳ್ಗಾಳೇ। ಅಣ್ಣಯ್ನಾ
ಬಾಸಿಂಗ್ದಾ ಗಾಳೇ ಬೈಲಲ್ಲೇ। ೨೪೪

---

೭೫. ಕಾರ್ಯ ೭೬. ಬರುವುದಿಲ್ಲವೆನ್ನುವಳು ೭೭. ಕಳುಹಿಸು ೭೮. ಬೆಳಿಗ್ಗೆ ೭೯. ನೀರಿಗೆಂದು ಹೋಗಿದ್ದೆ ೮೦. ಈಗ

ಅಳ್ಳೀಯಾ[೮೧] ಬಯ್ಲಲ್ಲೇ ಬಿಳ್ಳೀಯಾ ಕೊಡಿಕಂಡೇ
ನಮ್ಮಣ್ಣಾನ್ಹುರ್ತು ಪರ್ರಲ್ಲಾ। ಅತ್ಯಮ್ಮಾ
ಇಸ್ರೀಗೆ[೮೨] ತುಳಿಯೇ[೮೩] ಸೆಣ್ಣಕ್ಕಿ। ೨೪೫

ಹೆಸರಾ ಗದ್ದೀಯಲ್ಲೇ ಹಸ್ದೇ ಬರ್ವನ್ನೆರೇ
ಹಸ್ರು ಮುಂಡೆಸ್ದಾ ಹಿರಿಯಣ್ಣಾ। ಬರುವಾಗೇ
ಇಸ್ರೀಗೇ ತುಳಿಯೇ ಸೆಣ್ಣಕ್ಕಿ। ೨೪೬

ಅಂಗೀಮ್ಯೆನಂಗೇ ಸಿಂಗಾರ್ದಾ ನಿಡಕಟ್ಟಿ
ತಂಗೀಯಾ ಮನಿಗಣ್ಣಾ ಬರುವಾಗೆ। ಅಣ್ಣಯ್ಯಗೇ
ಅಂಗೀಮೆನ್ ನಿಂಗಾ[೮೪] ಹೊಳ್ದಂಗೆ। ೨೪೭

ಬಚ್ಚಾಲ ಬಳ್ಳೀಮ್ಯೆನ್‌ನಾ ಹಚ್ಚಾಡಾ ಹೆಗಲಾಮ್ಯೆನ್
ಅಚ್ಚಕರ್ನಿಯರಾ[೮೫] ಅಳಿಯಾನೇ। ಅಣ್ಣಯ್ಯಾ
ನಿಚ್ಚಾ ಬಿದೀಲೇ ಬರುವಾನೆ। ೨೪೮

ಅಣ್ಣಾ ಬರುವದ ಕಂಡೆ ಬ್ಯೆಲಲ್ಲಾನೀ ಕಂಡೆ
ತಂದಿಡುವೇ ಸದ್ರಾ[೮೬] ಜಿಗಲೀಗೇ। ಅಣ್ಣಯ್ಯಾ
ಗುಣಕೇ ತಂದಿಡುವೇ ನೊರಿಹಾಲಾ। ೨೪೯

ದೋರಿಂದಾ[೮೭] ಬಂದವ್ನೆರೇ ಕಯ್ಯಾಕಲಾ ತೊಳ್ದವ್ನೆರೇ
ದಾರಿಯಲ್ ನೀರ ಹರ್ದಾವೇ। ತಮ್ಮಯ್ಯಾ
ದೋರಿಂದ್ ಬಂದ್ ಕುದ್ರೀ ಎಳ್ದಾನೇ[೮೮]। ೨೫೦

ಕೆಂದು[೮೯] ಕುದ್ರಿಯೇರೇ ಮಂದೀಲ್ ಬಂದೌನ್ಯೆರೇ
ನಾನೂ ಕೇಲಾರ್ಡಾ[೯೦] ಒಳ್ಗೀಂವೆ। ಅಣ್ಣಯ್ಯಾ
ಉಂಗಲ್ದ ಬಿಳ್ಕ[೯೧] ಹೊಳ್ದಾವೇ। ೨೫೧

ಅಕ್ಕಾನಂತೇ ಬಂದಾ ಲಕ್ಷಾಪತಿ ತಮ್ಮಯ್ಯಾ
ಉಚ್ಚಯಗೊಂಡಾ ಕುದ್ರೀಗೇ। ತಮ್ಮಯ್ಯಾ
ಅಕ್ಕಾನಂಗಳ್ಕೇ ಸವ್ನೀದಾ। ೨೫೨

ಮಲ್ಗೀ ಹೂಂವ್ನಾ ಗಮ್ತಾ[೯೨] ಮನ್ಗೇ ಬಂದವ್ನೆರೇ
ಗಂದಾದಾ ಗಮ್ತಾ ಒಳ್ಗಿಲ್ಲಾ। ತಯಮ್ನಾ
ಮಗನೇ ಬಂದಲ್ಲೇ ಉರ್ಗೀದಾ। ೨೫೩

---

೮೧. ಕಮಲದ ೮೨. ಎಸರಿಗೆ ೮೩. ತೊಳೆ ೮೪. ಲಿಂಗ ೮೫. ಅಚ್ಚಕನ್ನೆಯರ ೮೬. ಗದ್ದುಗೆ ಸಿಂಹಾಸನ ೮೭. ದೂರದಿಂದ ೮೮. ಇಳಿದನು ೮೯. ಕೆಂಪು ೯೦. ಕ್ಷೀರಾಗಾರ ೯೧. ಬೆಳಕು ೯೨. ಸುವಾಸನೆ

ಇಜ್ಜಾನಾಡೋರ್ ಬಂದ್ರೇ ಇರ್ವೆನಾ ತೆಳ್ಳಗ್ನಾ[೯೩]
ಕೊಡ್ನಾ ಸಕ್ರೀಯಾ ಮಗ್ರೂವೇ। ತಮ್ಮಯ್ಯಾ
ಇಜ್ಜಾನಾಡ್[೯೪] ದೊರಿಯೇ ಉಣ್ಣೇಳ। ೨೫೪

ಕೀಲೂ ಮಣಿಯಾಲಿಟ್ಟೀ ಹಾಲೂ ಪಾಯಸನಟ್ಟ
ಉಂಡೋಗಣ್ಣಯ್ಯಾ ಹಗ್ಲೂಟಾ। ಸಣಿಯಾರ
ದಿನ್ದಲ್ಲೇ ತನ್ಗೇ ಒಪ್ಪತ್ತಂದಾ। ೨೫೫

ಸಿಕ್ಕೀದವ್ರಾ ಮನ್ನೇ ಒಣ್ಣಂದಾ। ಅಣ್ಣಯ್ಯ
ಸಿಕ್ಕೀದವ್ರೇನಲ್ಲಾ ನಾನಿನ್ನಾ। ತಂಗಮ್ಮಾ
ಉಂಡೊಗೋ ಅಣ್ಣಾ ಹಗಲೂಟಾ। ೨೫೬

---

೯೩. ಒಂದು ಬಗೆಯ ರೊಟ್ಟಿ ೯೪. ವಿಜಯನಗರ

ತಗ್ರೂರಾ ದಾರೀ ಮೆನುಂಟ ಎಲ್ಮಾವ

ತಾಯೇ ನನ್ನಮ್ಮಾಗೇ ಜೇಂವಾ[೯೫] ನನ್ಮೆನೇ
ಜೇನಾ ಬಿಡರಾಯಾ ಕುದ್ರೀಯಾ। ತಗ್ರೂರ್[೯೬]
ಬಾಗ್ಯಾವಾ ನೋಡೇ ಬತ್ತೀನೋ। ೨೫೭

ಕಾಯಾ ತಿಂಬವ್ರಾ ಬಾಯೇನಾ ನೋಡೂನೇ
ನಾ ಹೋಗ್ವೇ ನನ್ನಾ ತಗ್ರೀಗೆ। ಅಪ್ನಮನ್ಲೇ
ಜೋಡೀನಲ್ ಕಾಯಾ ಉಡ್ತಿಂಬೆ। ೨೫೮

ತಗ್ರೂರೀಗ್ ಹೋಗೂಕೇ ನಂಗೇ ಸಂಗ್ದಬ್ಯೆಡಾ
ತಣ್ಣೀರಾ ಬೂಮೇ ತಲ್ತಂಪು। ತಗ್ರೂರಾ
ದಾರೀಮ್ಯೆನುಂಟ ಎಲ್ಮಾವ್[೯೭]। ೨೫೯

ಅರ್ಸೂ ಅಪ್ನಮನಿಗೇ ಉರ್ಸಾಕೋಗೀಬರ್ವೆ
ಅರ್ಸೂಗೋಳ್[೯೮] ತಂದಾ ದಸರೀಯಾ। ಉಟ್ಟೀಕಂಡೇ
ಉರ್ಸಕಪ್ಪೋಜಿ ಮನಿಗ್ಹೋದೆ। ೨೬೦

ಉಜ್ರಾದೊಲೀಯಿಟ್ಟ್[೯೯] ಮುದ್ದೂ ಕಂದ್ನ ಚಿಚ್ಚೇ
ಗೆಜ್ಜೀ ಕಾಲ್ಮಗ್ನಾ ನಿಡ್ಸೂತೇ। ಬಾಲಮ್ಮಾ
ತಗ್ರೂರ್ ಬಿದ್ದಕ್ಕೇ[೧೦೦] ಬರುವಳ। ೨೬೧

ಕಂದ್ನ ಚಿಚ್ಚೇ ಕಂಡೇ ಕಡ್ಲೀ ಹೂಂವ ಮುಡ್ಕಂಡೇ
ಬಂದಳ್ ನಮ್ಮೂರಾ ಬೈಲಲ್ಲೇ। ಬಾಲಮ್ಮಾ
ಚಿಚ್ದ ಕಂದಾನಾ ಹಿಸ್ರೇಳ। ೨೬೨

ನನ್ಹಿಸ್ರ ಕೆಂದೂಗೇ ಕಂದಾನಿಸ್ರ ಮಲ್ಲೂಗೇ
ರಾಯಾರ ಹಿಸ್ರ ರವಿರತ್ನಾ। ೨೬೩

ಪಟ್ಟೀಯಾ ಸೇರೀಯೇ ದುಂಡೂ ಕಾಲುಂಗೀಲಾ
ಗಂಡಾನಾ ಹಿಂದೇ ಬರ್ವಳ। ಕಿರ್ದಂಗೇ
ಗಂಗೀಗೀಸ್ವರ್ರೀಗೊರ್ನಾರ್ವೇ[೧೦೧]। ೨೬೪

---

೯೫. ಜೀವ ೯೬. ತವರೂರು ೯೭. ಎಲೆಯುಳ್ಳ ಮಾವು ೯೮. ಅರಸರು ೯೯. ವಜ್ರದೋಲೆಯನ್ನಿಟ್ಟು ೧೦೦. ಔತಣ ೧೦೧. ಗಂಗೆ ಈಶ್ವರರ ಹೋಲಿಕೆ

ಆಕಾಸ್ದ ಬಿಸ್ಲಲ್ಲೇ ಯಾಕ್ ಬಂದೇ ಬಾಲಮ್ಮಾ
ತೋಳ್‌ಕುಂದೇ ತೋಳಾ ಬಳ್ಕುಂದೇ। ಚಿಚ್ಚೇದಾ[೧೦೨]
ಬಾಲಾ ಬಾಡದ್ನೇ ಬಿಸ್ಲೀಗೇ। ೨೬೫

ಗಂಡ್ರ ಮನ್ಲಿಂದೇ ಇಂದೇ ಬಂದ್ಬಾಲಮ್ಮಾ
ದಂಡೇ ಬಾಡದ್ವೇ ಬಿಸ್ಲೀಗೇ। ಬಾಲವ್ವೀಯಾ
ಗಂಡಾ ಬಾಡದ್ನೇ ಬಿಗ್ರೀಗೇ[೧೦೩] ೨೬೬

ಏನ್ ಕಂಡ್ ನಮ್ಮಾ ಮರ್ದೇಂವೆ

ಬೆಂದಾ ಬೆಟ್ಬಾದಲ್ಲೇ ನಂದಗನಾ ಗಿಡ ಹುಟ್ಟೇ
ತಂಗಾಳೀಯಿಲ್ಲ ತನಸಿಲ್ಲ।ದ। ರಾಜೀದಲ್ಲೇ
ಯಾರಾ ಕಂಡ್ ನಮ್ಮಾ ಮರ್ದೀಯೇ। ೨೬೭

ಯಾರಿಲ್ಲಾದ ರಾಜೀದಲ್ ಹೆಂಗೇಂವೆ ಬಾಲಮ್ಮಾ
ಕಾರಿಲ್ಲಾ[೧೦೪] ಸರನಾ[೧೦೫] ಬೆಳಿಯಿಲ್ಲಾ। ಬಾಲಮ್ಮಾ
ಏನಾ ಕಂಡ್ ನಮ್ಮಾ ಮರ್ದೇಂವೆ। ೨೬೮

---

೧೦೨. ಎತ್ತಿಕೊಂಡ ೧೦೩. ಬೆವರಿಗೆ ೧೦೪. ಬೇಸಿಗೆಬೆಳೆ ೧೦೫. ಮಳೆಗಾಲದ ಬೆಳೆ

ಅರ್ಸಾರಾಯ್ಸಾಬೇಡೇ ತರ್ಸೇ ದಂಡೀ ಮುಡ್ವೇ

ಯಾವಾಸಿರಿಗಿಂದೂ ಗಂದಾದಾ ಸಿರ್ಮೇಲ[೧]
ಕಂದಯ್ಯಾ ಹಡೆದಾ ಸಿರಿಗಿಂದು। ದ್ಯೆವಾರೇ
ಗಂದಾದಾ ಸಿರಿಯೇ ಅದಮೇಲ। ೨೭೦

ಕರಿಮಣಿ ಗಂದದ ಬುಟ್ಟಿ[೨] ಇನ್ನೆರೀಗ್ ವರ್ನಾವೇ[೩]
ಮನ್ನೆ ಮಾರಯ್ಯಾ ಮಗಳೀಗೇ। ನನ್ನಮ್ಮಾಗೇ
ಕಸ್ತೂರಿ ಬುಟ್ಟು ವರ್ನಾವೇ। ೨೭೧

ಮುತ್ತೈದೇತನ್ಕೇ ಇನ್ನೇನು ಲೇಸಮ್ಮಾ
ಮುತ್ತೀನಾ ಮೋಗತಿಯೇ ಕರಿಕಾಂಜ[೪]। ಕಾಲುಂಗೀಲಾ
ಮುತ್ತಯ್ದೆತನಕೇ ಅದಲೇಸ। ೨೭೨

ಮೋಗೂತುಂದೆದ್ದರೆ ಮುನ್ನಾರಾ ಗೆಲ್ಬವ್ವ
ಮಂಡೀಗೇ ಚವ್ಲೇ[೫] ಕಿಮಿಗ್ವೊಲೆ। ಉಂದೆದ್ದರೆ
ನಾಯಕ್ ಸರ್ದಾರ್ನಾ ಗೆಲ್ಬವ್ವ। ೨೭೩

ನಮ್ಮಾ ಮಂಡಿಯಾ ಮ್ಯೆನೇ ಹನ್ನೆಯ್ಯೂಡ್ಡ ಕ್ಯೆಂದೂಗೇ
ನನ್ನಮ್ಮಾ ತೆಗದಾ ಬಗತಾಲೆ। ಮ್ಯೆನೇಗೇ
ನನ್ನವ್ರ ಮುತ್ತಾ ಸುರ್ದರ। ೨೭೪

ಅರ್ಸಾಗೇ ಆಯ್ಸಾಬೇಡೇ[೬] ತರ್ಸೇ ದಂಡೀ ಮುಡ್ವೇ
ನನ್ನತ್ತೇ ಹಡ್ದಾ ಕೊಮರಾಗೇ। ಆಯ್ಸಾ ಬೇಡೇ
ತರ್ಸರು ಮುಡ್ವೆ ಸುರ್ಗೀಯಾ। ೨೭೫

ಗಂಡಾದೀರಂಬವ್ರ ಉಂದುರಾಸೀ ಚೆನ್ನಾ
ಪುತ್ತಾಳಿ ಚೆನ್ನಾ ಸರ್ಪಳಿಯೇ। ದೆವಾರೇ
ಗಂಡಾ ಸಿಕ್ಕಿದ್ನೇ[೭] ದೊರರಾಯಾ। ೨೭೬

ಅಡ್ಡೀ ಅಂಚ್ನಾಗದ್ದೇ ತೊನದಾಡೇ ಬಿಳಿಯಾಲೆ
ರೇಸೂಮೀಸೇರೀ ನಿರಿಹುವ್ವೆ ಅರ್ಸಾರಾ
ರಾಸೀಗಾರತಿಯಾ ಬಿಳ್ಗೂವೆ। ೨೭೭

---

೧. ಸಿರಿಯು ಮೇಲೆ ೨. ಸೌಭಾಗ್ಯ ಕುಂಕುಮ ೩. ಚೆಂದ ೪. ಮಂಗಲಸೂತ್ರ ೫. ಚವರಿ ೬. ಆಯುಷ್ಯಬೇಡಿ ೭. ದೊರೆತನು

ಉರ್ಸಾಕೇ[೮] ಬರುವದ ಅರಸೀನಾದೇಪಳ್ಗೆ[೯]
ಅರ್ಸಾಗಾರತಿಯಾ ಬಿಳ್ಗೂವೆ[೧೦]ಳ್ಗೀ। ತಿರ್ಗೂವಾಗೇ
ಅರಸೀನ ಬುಟ್ಟಿ ಹಣಿಯಲ್ಲೇ। ೨೭೮

ಅಂಗಾಳಾಮುಂದೇ ನಿಂಗಾಮೂಡೀತಂದೇ
ಮಂಗಾಳಾರತಿಯಾ ಬಿಳ್ಗೂವೇಳ್ಗೀ। ಬೇಡೀಕಂಬೇ
ಮಾರಾಯ್ರಾ ಮುಂದೇ ಮಯ್ಣವಾ। ೨೭೯

ಅಣ್ಣಾ ಬಾಳೆದ್ದಾರೆ ಬಣ್ಣಾ ಬಾಳೊಡಬವ್ದ[೧೨]
ಸಿಣ್ಣಿಂದೇ ಕೈಹಿಡಿದಾ ಅರಸಾರ। ಬಾಳೆದ್ದರೆ
ಇಣ್ಣೀದಾ ಪಟ್ಟೀ ಒಡ್ಬವ್ದ। ೨೮೦

ತುಪ್ಪನ್ನಾ ಉಂಬೂಕೇ ಅಪ್ನಾಮನೆ ಬಾಳೆರ್ಲೇ
ಇಪ್ಪತ್ತು ದೈವಾರಾ ಬೇಡೂವೇ। ಏನಂದೇ
ಗಂಡಾರಾ ಮನ್ಬಾಳೇ ಎರ್ಲಂದೆ। ೨೮೧

ಹಾರಾಬೇಕೇ[೧೩] ಹರ್ಸ್ನಾಸ್ಯೆರಾಬೇಕೇ ಸಿವ್ನಾ[೧೪]
ಪಾಲಯ್ಸಬೇಕೇ ಪತಿಗಳಾ। ಮಾಡಿದಬದ್ಕ[೧೫]
ನಾನುಂಡೇ ದಾನಾ ಕುಡುವಾನೇ। ೨೮೨

ಅಂಬೂಲಿ ಒಂಡಾರು ಗಂಡಾನಾ ಮನಲೇಸ
ಅಂದಲ್ದ ನಿಡ್ಗೇ ಚವ್ಲಾವಾ। ದಾಳ್ಸಕೊಟ್ರೂ
ಹಂಗಿನ ತವ್ರ ಮನಬೇಡಾ। ೨೮೩

ಮುತ್ತೈದತನವಾ ಹಿಚ್ಚ್ಯಾಕುಡ ಗೌರಮ್ಮಾ
ಮುಟ್ಟೀಲೇ ತುಂಬೇ ಮೊರ್ತುಂಬೇ[೧೬] ಹಿಚ್ಚ್ಯಾಗೆದ್ರೆ
ಕಟ್ಟೋಗ ನನ್ನಾಸಿರ್ಗೀಗೆ[೧೭] ೨೮೪

---

೮. ವರ್ಷಕ್ಕೆ ೯. ದೀಪಾವಳಿ ೧೦. ಬೆಳಗುವೆ ೧೧. ಮರಣ ೧೨. ಬಹಳಷ್ಟು ಉಡಬಹುದು ೧೩. ಆಶಿಸಬೇಕು ೧೪. ಸೇರಬೇಕು ಶಿವನನ್ನು ೧೫. ಸಂಪತ್ತು ೧೬. ಗೆರಸಿತುಂಬ ೧೭. ಸೆರಗಿಗೆ

ಮಾವಜ್ಜೀ ಆಯೀಸೇ ಹಿರ್ದನ್ನ

ಸೋದರಾ ಮಾವನಾ ಸ್ವೊದೀಯಲ್[೧೮] ಕಂಡದ್ದೇ
ಬಾರೋ ಮಾವಜ್ಜೀ ಮನಗೋಗು। ಅಂದೇಳಿ
ಜೋತರದ ಸಿರ್ಗ್ಗಾ ತಡ್ಡಾಳ। ೨೮೫

ಸೋದರಾ ಮಾವನೇನೆ ಸೂಲ್ಯಚಂದ್ರಾನೇನೆ[೧೯]
ಬಿಳ್ದಿಂಗಳೇನೇ ಬಿಸಲೇನೇ। ಹಡದಮ್ಮಾ
ಇವ್ನೇ ನಿಮ್ಮಣ್ಣಾ ಹೌದೇನೇ। ೨೮೬

ಸೋದರಾ ಮಾವನಾ ಚೇಚೇ[೨೦] ಕಾಲಿತ್ತೀ ಕೊಣ್ಡಾವೇ
ಹಾಲಲ್ಲೇ ಇಸ್ರಿತ್ತ ಹಡ್ದಮ್ಮಾ। ಒಳಗಿರುವಾ
ಸದ್ದನ ಕೋವೀನೇ ತಿಗ್ದಿರ್ಸ। ೨೮೭

ಉಂದಾನೇ ಬಂದಾರೇ ಉಂದಾನೇ ಬರ್ಲೇಲಾ
ಮಂದೀ ಒಳಗೆದ್ದಾ ಮರಿಯಾನೇ। ಮಾವಜ್ಜೀಯಾ
ಸಂಗ್ರಾಮದಾನೇ[೨೧] ಬರ್ಲೇಲಾ। ೨೮೮

ಹಾಸೂ ಕೈಗೇ ಹಚ್ಚಡಾ ಬೀಸೂಕ್ಕೈಗೇ ಉಂಗೀಲಾ
ಚಿಂಡಾಡು ಕೈಗೆ ಸರ್ಗೀಯಾ। ಮಾಡಿಸಿಕುಡುವಾ
ಮಾವಜ್ಜೀ ಆಯೀಸೇ ಹಿರ್ದನ್ನ। ೨೮೯

ಮಾವಜ್ಜೀ ಬರುವಾ ಹಾದೀಗೇ ಏನೆಲ್ಲಾನಿಡುವಾಳೇ
ತ್ವೊಳಾ ಮಾಳಗಿಯಾ ಮುಡಿಯಾಳಾ। ಪಚ್ಚೇಕದ್ರಾ
ತೋಳಾ ಬೀಸದ್ರು ಪರಮಾಳಾ। ೨೯೦

---

೧೮. ಸ್ವಾದಿಯಲ್ಲಿ ೧೯. ಸೂರ್ಯಚಂದ್ರನೇನು ೨೦. ಕುದುರೆ ೨೧. ಯುದ್ಧದಾನೆ

ಬಂಗಾರಾ ಗೋಲ ಹಿರಿಬಾವಾ

ಮಾವನಾ ಮಗ್ನಾತಾ ತಾಯೀಗೇ ಅಳಿಯಾನೇ
ನಂಗೇ ಸೋದರ್ದಾ ಹಿರಿಬಾವ। ನೆಂತಾನೇ
ನನ್ನಾಗಿ ಮಲ್ಲೂಗಿ ಬನ್ದಲ್ಲೇ। ೨೯೧

ಬಾವಾಗೇ ಸರಣನ್ನ ಬಿಳಿಯ ಕೈ ಕಿರ್ದಂಗಿ
ದೈವಾರಂಗೇಂವ ಹಿರಿಬಾವಾ। ಕಿರ್ದಂಗಿ
ದೈವಾಂಗ[೨೨] ಇಟ್ಟೇ ಸರಣನ್ನ। ೨೯೨

ಅತ್ತೇಲತ್ತೀ ಕಾಯೇ ಮಾವಾಮಲ್ಲಿಗೆ ಸರವೇ
ಬಂಗಾರಾಗೋಲ ಹಿರಿಬಾವ।ವ್ನ। ಪಾದಾಕೆ
ಬಂಗಾರನಿಟ್ಟೀ ಸರಣಂಬು। ೨೯೩

ಬಾವಾ ಬಾವಾ ಅಂದೇ ಬಾದರಸಿ[೨೩] ಕರ್ದ್ದಾರೇ
ಯಾವಾ ಮಾದನಿಯಾ ದಿನಿಯಂದಾ। ಬಾವಯ್ಯಾ
ಬಾಳಂದಾ ಬಾಳೀ ತಿರಳಂದಾ। ೨೯೪

ಬಾವಾನು ಮಾದುನಿಯಾ[೨೪] ಏನಂದೇ ಕರುವಾನೇ
ಬಾಳೀ ಮೈನಾಡು ಅರಗಿಳಿ। ಮುತ್ತನಚಿಂಡೇ
ಬಾರಂದೇ ಮಾದುನಿಯಾ ಕರುವಾನೇ॥ ೨೯೫

ಹಿರಿಯಣ್ಣಾ ಹೆಗ್ಡೀಯೇ ಕಿರಿತಮ್ಮಾ ಸಾನ್ಬಯ್ಯಾ
ಅಕ್ಕನ ಗಂಡಾ ಸರ್ದ್ದಾರಾ।ರ್ನ। ಬಿನ್ನೀಗೇ
ನೂರಾಳು ನೂರು ಕುದ್ರೀಯೇ। ೨೯೬

ಕುಡಕಾ ನಿನ್‌ಸಂಗಾ ಕುಳ್ಕು ಮಾಯೀನಣ್ಣಿ
ಜೋಗೀ ನಿನ್ ಸಂಗಾ ವನವಾಸಾ। ಬಾಲಯ್ಯಾ
ಬಾವಾದೀರ್ ಸಂಗಾ ಬೆಲ್ಪಾಯ್ಸಾ। ೨೯೭

ಬಾವೀಯಾ ಬುಡದಲ್ಲೇ ಬಾವಾದೀರೋಲಗಾ
ಹೈಂಗೋಗೇ ನೀರಾ ಮುಗಿಯಲೆ[೨೫]। ಅಕ್ಕಮ್ಮಾ
ಸಾಲೀದಚ್ಚಡ್ಡಾ ನಿರಳಲ್ಲೇ। ೨೯೮

---

೨೨. ದೇವಾಂಗ ೨೩. ಜೋರಾಗಿ ೨೪. ಮೈದುನಿ ೨೫. ಮೊಗೆಯಲಿ

ಅತ್ತೀಯಾ ಮಗ ಬಂದಾ ಅಟ್ಟಲ್ಲೇ ಅಡ್ಗಿಲ್ಲಾ
ಅತ್ತೀಯಾ ಕಾಯಾ ಒಲಿಹೂಡೇ। ಮೆಗ್ರಾಮಾಡೇ
ಅತ್ತೀಯಾ ಮಗ್ನೇ ಒಣಲೇಳ[೨೬]। ೨೯೯

೨೬. ಊಟಕ್ಕೇಳು

ಮಯ್ದೂನರೆದ್ದಾ ಮನಿ ಅರ್ತೆ

ಹಬ್ಬಾ ಮಗ್ಳೀಗರ್ತೇ[೨೭] ಕೊಯ್ದೂಂವ್ ತುರ್ಬೀಗರ್ತೇ
ಅಯ್ದೊರನ್ವೊಲೇ ಕಿಮಿಗರ್ತೇ। ಅಕ್ಕಮ್ಗೇ
ಮಯ್ದೂನರೆದ್ದಾ ಮನಿ ಅರ್ತೇ। ೩೦೦

ಮಯ್ದೂನಾ ಮನಗಿಂಬ[೨೮] ಕೊಯ್ದೂಂವ ತಲಗಿಂಬ
ಅಯ್ದೂ ಸಾಲಿಂಬ ಸರಳಿಂಬ। ಮಂಚ್ದಾಮ್ಯೆನೇ
ಮಯ್ದೂನ್ ಮಾದೊರಿಯೇ ಮನಗೀನೇ। ೩೦೧

ಅಡ್ಡಾ ಜಿಗ್ಲೀ ಮೆನೇ ನಿದ್ರೀ ಮಾಡ್ವನ್ಯೆರೇ
ಮುದ್ರೀದುಂಗಲ್ದಾ ಮಯ್ದೂನಾ। ಮಾದೊರಿಯೇ
ನಿದ್ದೂರಿ ಸ್ಯೆಕೋ[೨೯] ಉಣ್ಣೇಳ। ೩೦೨

ತುಪ್ಪಿಲ್ಲದೊಣ್ಣಾನೇ ಉಪಚಾರ್ದ ಮಯ್ದೂನಾ
ಉಪ್ರಗಿಲ್ಲಾದೇ[೩೦] ಒಗ್ರಾನೇ। ಮಯ್ದೂನಾ
ಕಾಲೀಗೇ ಜೋಡಿಲ್ದೇ ತೆರ್ಗಾನೇ[೩೧]। ೩೦೩

ಮಯ್ದೂನಾ ಮಾದೊರಿ ಮರಹತ್ತ್ ಮಲ್ಲುಗಿ ಕೊಯ್ದಾ
ಯಾಗು ಬೇಡದ್ರು ಕೊಡನಂದಾ। ಮಯ್ದೂನಾ
ಅತ್ತೂಗಿ ಹಚ್ಚಗೇ[೩೨] ಮುಡಿಯಂದಾ। ೩೦೪

ಸೋಳ್ಗಾರ್ನಾ ಮಂಡೀಲೇ ಸುರಗೀ ಹೂಂವ್ನಾ ದಂಡೇ
ಮಾಸುಕಗಾರಾ ಮಯ್ದೂನಾನ್ನಾ। ಮಂಡೀಯಲ್ಲೇ
ನಾಗ ಸಂಪೂಗಿ ಪರಮಾಳಾ। ೩೦೫

ಬಾಳಿ ಹಣ್ಣಿನ ಸಟ್ಟೇ[೩೩] ಕೋಳಿ ಹುಂಜ್ನಾ ಅಂಕಾ
ಬ್ಯೆಡೆಂದ್ರೆ ಕ್ಯೆಳಾ ಮಯ್ದೂನಾ। ಮಾದೊರೆ
ಜೂಜಾಡೇ ಕೋಳೀ ಗೆದ್ಬಂದಾ। ೩೦೬

ಮಯ್ದೂನ ಮಾದೊರಿಯೇ ಗೆಜ್ಜೀಕಾಲಜರ್ಜೂನಾ
ಗದ್ದಸ್[೩೪] ನನ್ನೊಡ್ನೇ ತಿಗ್ರೂವಾ। ಮಯ್ದೂನ್ನಾ
ಗದ್ದೂಗಿ। ಇಳುವಲ್ಲೇ ಕರದರೇ। ೩೦೭

---

೨೭. ಮಗಳಿಗೆ ಪ್ರೀತಿ ೨೮. ಮನೆಗೆ ನೆರಳು, ಆಶ್ರಯ ೨೯. ಸಾಕು ೩೦. ಮಾಳಿಗೆಯಿಲ್ಲದೆ
೩೧. ತಿರುಗನು ೩೨. ಚೆನ್ನಾಗಿ ೩೩. ಸಟ್ಟಿ ವ್ಯಾಪಾರ ೩೪. ಬಿಂಕದಿಂದ

ಅತ್ತೂಗೀ ಮಯ್ದೂನಾ ಹತ್ತಿದ್ರೇ ದೋಣೀಯಾ
ಹೊಂಗಾವೇ ದೋಣೇ ಹೊಡ್ಕಾವೇ। ಗಂಗಾ ಜಿಲ್ಡಿ।
ಉಂಗೀಲಾ ಕುಡ್ವೆ ನೆಲಿಯಾಗ। ೨೦೮

ಅತ್ತೂಗೇ ಹಿರ್ದಂದೇ ಇತ್ತೇ[೩೫] ಕಯ್ಯ್ಯಾಮೊಗ್ದಾ
ಮುತ್ತೀನುಂಗಲ್ದಾ ಮಯ್ದೂನಾ। ಉತ್ತುಮ್ಗೇ
ಅತ್ತೂಗಾಯಸ್ವಾ ಹರ್ರೂನೆ। ೨೦೯

ಅತ್ತಾದೀರಳಿಯಾ ಕಸ್ತೂರೀ ಕಾಮಯ್ಯ್ಯಾ
ಮುತ್ತ ಮುಕ್ಕಳ್ಳೇ ಉಗುವಲ್ಲೇ। ಮಯ್ದೂನಾ
ಅತ್ತಾದೀರಳಿಯಾ ಸುಕಬಾಳ। ೨೧೦

ನಾವು ದೊಡ್ಡವ್ರಾ ಸೊಸದೀರ

ಕಾಲುಂಗ್ಲಾ ಕಣಕಣೇ ನೈವಲ್ದಾ ಮಿಣಮಿಣೇ
ನಾವೂ ದೊಡ್ಡವ್ರಾ ಸೊಸದೀರ। ಬರುವಾಗೇ
ಸಾಲು ಮಾಳುಗಿಯೇ ಗಲಗಲಾ। ೨೧೧

ಮೋಡಲಾ[೩೬] ದಿಕ್ಕೀಗೇ ನೋಡಮ್ಮಾ ಗಿಳಿಗೋಳಾ
ಗಿಳಿಗೋಳೀಗ್ ತಕ್ಕಾದಾ ಮರ್ಗ್ಗೋಳಾ[೩೭]। ತಾಯಮ್ಮಾ
ಮಗದೀರೀಗ್ ತಕ್ಕದಾ ಸೊಸದೀರಾ। ೨೧೨

ನಿನಗೇನೇ ಬಾಲಮ್ಮಾ ಇಬ್ಬಾರಣ್ಣಾತಮ್ಮಾ
ಅಯ್ಯೋಗೀದಾನೇ ಅರಸಾನೇ[೩೮]। ಬಾಳಿದ್ದಾರೆ
ನಿನಗೇನೇ ಬಾಲೀ ಬಡ್ತಾನಾ ೨೧೩

ಬಾಗೀದೊಳ್ಳವ್ರ[೩೯] ಮನಿಯಾ ಬಾಗಲ್ವಾ ನೋಡಮ್ಮಾ
ನೇಗೀಲಾ ನೂರ ಕುಳನೂರ। ನಮ್ಮನಿಯಾ
ಹೂಡೀ ಬಂದಿತ್ತ[೪೦] ಅಯ್ನೂರ। ೨೧೪

ಪುಣ್ಣೀ ಒಳ್ಳವ್ರ ಮನಿಯಾ ಎಮ್ಮಿ ಎಳಗಂದಿ[೪೧]
ತಣ್ಣೀರಿಗ್ ಬೆಣ್ಣೀ ಬರ್ವದ। ಬಾಲಮ್ಮಾ
ಪುಣ್ಣೊಳ್ಳವ್ರ ಮನಿಯಾ ಸೊಸನೀನ। ೨೧೫

---

೩೫. ಎತ್ತಿ ೩೬. ಪೂರ್ವ ೩೭. ಮರಿಗಳು ೩೮. ವೈಭವ ಆನೆ ೩೯. ಭಾಗ್ಯಯಿದ್ದವರ ೪೦. ಬಂದ ಎತ್ತುಗಳು ೪೧. ಎಳೆಕರುವಿದ್ದದ್ದು

ಹೆಗ್ಗೇರಿ ಕೆರಿಯಾ ಹಿಗ್ಗಡತೇ ಅಕ್ಕಮ್ಮಾ
ಹುಬ್ಬು ಚಿಂತಾಕದಾ ಕುರುಳವಳ। ಅಕ್ಕಮ್ಮಾ
ಮಜ್ಜೂಗೀದಾನಾ ಇರ್ದೋಗ। ೩೧೬

ಅಬ್ಬೀಯಾ ನೀರನೇ ಒಬ್ಬಳೇ ಮುಗುವಳ್ಳೆರೇ
ಹೆಬ್ಬಾರ್ತೆ ನನ್ನಾ ಹಸ್ಬಾಲೇ। ಬಾಲಮ್ಮಾ
ಅಬ್ಬೀಗೂ ಮನಗೂ ಹರಣೀಯೇ। ೩೧೭

ಹಿಸ್ರೊಳ್ಳವ್ರ ಮನ್ನೇ ಇಸ್ರಿತ್ತೂಕ್ ನೀರಿಲ್ಲಾ
ಬಸವಾ ಬಾಯರ್ಕೇ[೪೨] ಕೊಣ್ದಾವೇ। ದೊಡ್ಡೋರ್ಮನಿಯಾ
ಸೊಸೆ ತಂದ್ಳ ಬಿಳ್ಳೀ ಕೊಡನೀರಾ। ೩೧೮

ಹತ್ತೂ ಕೊಳ್ಗಾ ಬತ್ತಾ ಬತ್ತದ ಬಾವೀನೀರ
ಮತ್ತೇಳ ಅತ್ಯಮ್ಮಾ ಕೆಲಸಾವಾ। ಸೊಸಮುದ್ದೇ
ಇಕ್ಕೊಳ್ಳೇ ಹಿಂಗಾರ್ವಾ ಮುಡಿಬಾರೇ। ೩೧೯

ಸೋದರದಾ ಸೊಸ ಬಂದೇ ಪಾದಕೆರಗೀಯಾಳೇ
ಏನಾ ಕುಟ್ಟದರಾ ಕಳಗೂವೇ। ಬಾಲಮ್ಮಾಗೇ
ಜೋಗೂಳಿಗುವ್ವೆ[೪೩] ಸೆರಮುತ್ತಾ। ೩೨೦

ಉಂಗ್ಲಮಂಡೀಕುದ್ಲ[೪೪] ರಂಬೇ ನನ್ಬಾಲಮ್ಮಾ
ಉಂಬಲ್ಲೇ ಮಾವಾ ಕರದಾರ। ಏನಂದಾರ
ಬಂಗಾರಾ ಇಡ್ವಾ ಸೊಸನೀನ। ೩೨೧

ಬಾಲಮ್ನಾ ಮಂಡೀ ಕುದ್ಲ ತೊಂಡೀಬಳ್ಳೀಯಂಗೆ
ಉಂಬೂವಲ್ ಮಾವಜ್ಜೇದಿಂಗ್ಯೆದಾ[೪೫]। ಏನಂದೇ
ಬಂಗಾರ್ದಾ ಕುಳ್ಳಾ ಸೊಸಬಾರೇ। ೩೨೨

ತಂದೀಯಾ ದೆಸಿಯೋರ[೪೬] ತಂದಾರೇ ಕೊಡನೆಣ್ಣೀ
ಕಂದವ್ವಿ ಕಿಮಿಯಾ ಮುರಿಜೋಡ। ಮುಂಗೈಸರ್ಗಿ
ತಂದರ ಬಾಲವ್ವೀ ಬಳಿಗಾಗೇ। ೩೨೩

ನನ್ನಮ್ಮಾ ಬಾರೇ ಚಿನ್ನದರ್ಥಳೂಬಾರೇ
ಪುಣ್ಣೀದೊಳ್ಳವ್ರಾ ಸೊಸಬಾರೇ। ಬಾಲಮ್ಮಾ
ಹಾಲೋಗರನ್ನಾ ಬಡಸೂವೆ। ೩೨೪

---

೪೨. ಬಾಯಾರಿಕೆಯಿಂದ ೪೩. ಜೋಳಿಗೆಗೆ ಹೊಯ್ಯುವೆ ೪೪. ಉಂಗುರಕೂದಲು ೪೫. ಕರೆದನು
೪೬. ಕಡೆಯವರು

ಹಿಸ್ರೊಳ್ಳವ್ರಾ ಮನಿಯಾ ಸೊಸನನ್ನಾ ಬಾಲಮ್ಮಾ
ಬಿಸಲೊತ್ತೀನಾದೀ ನಿಡಿನಾರಾ[೪೭]। ತಮ್ದೀರ
ಬಿಸಲೀಗ್ ಬಿಳ್ಗುದ್ರಿ[೪೮] ಕಳಗೂರೇ। ೩೨೫

೪೭. ನಡೆಯಲಾರಳು ೪೮. ಬಿಳಿಕುದುರೆ

ತನ್ನಾ ಕಂಡ್ ತಗರೂ ಮರಿಯಂದ್ರ

ಹಿಂಡೂತೇ ಸೆಣ್ಣವಳೆಂದೇ ಹೆಗಲಾ ಏರಿಸಿಕಂಡಾ
ತಂಗೀಯಾ ಕಯ್ಯಾ ತಡಕಂಡಾ। ಬಾಲಯ್ಯಾ
ಅಂಗಡಿಗೂ ಮನಗೂ ತಿರ್ಗೀದಾ। ೩೨೬

ಗಂಡಾ ಸರ್ದಾರಾ ಹಿಂಡೂತೀಗೇನಂಬಾ
ದುಂಡೂ ಮಲ್ಲುಗಿಯಾ ಮುಡಿಯಂಬಾ। ಮಡದೀಕೋಡೇ
ದೊಂಬರಾಟಕೆ ತಾ ಸವ್ವಂಬಾ। ೩೨೭

ಇಲ್ಲೇ ನೋಡಿದ್ರೂ ನಲ್ಲಾನಂತೋರಿಲ್ಲಾ
ಹಲ್ಲು ನೋಡಿದ್ರೆ ನಿಜಹವ್ವಾ। ಅರಸಾರಾ
ತೋಳ ಕಾಳಿಂಗ್ನಾ ಹೆಡಿಕಟ್ಟು। ೩೨೮

ನುಗ್ಗೀ ಹೂಂವೀನಂಗೇ ಬಗೀದರಸನ ಮೇಸೆ[೪೯]
ಇಲ್ಲಿಲ್ಲು ಹಿಣ್ಣ ದೊರಕೇಲಾ[೫೦]। ಹೊನ್ನೂರಾ
ಪುತ್ತಳಿ ಚೆಲವಿ ದುರಕೀತ। ಕಾರಣದಿಂದೇ
ಉತ್ತುಮಾ ಮೇಸೀನೇ ಹುರಿಹೊಡ್ದಾ। ಅರಸಾನೇ
ಸಾದು ಸಾಗರದಾ ಸಬಿಯಲ್ಲೇ। ೩೨೯

ಅತ್ತೇ ಅತ್ತೀಕಾಯ ಮಾಂವಾ ಮಲ್ಗೀ ಹೂಂವ
ಬಂಗಾರಾ ಗೋಲ ಹಿರಿಬಾವಾ। ನಮ್ಮನಿಯಾ
ಅರಸೀನಾ ಕೆನಿಯೇ ಅರಸಾರ। ೩೩೦

ಮಡದೀಯಾ ಹೊಡದಾನೇ ಮನದಲ್ಲಿಣ್ಣಿದಾನೇ
ಒಳಗೋಗೇ ದೈನಾಗುಣಸೀದಾ[೫೧]। ಮೊವದ ಸರವೇ[೫೨]
ನಿನ್ಬಿಟ್ಟೇ ನಾನ ಎರ್ಲೆಂಗೇ[೫೩]। ೩೩೧

ಮೋವಾದ ಗಂಡಾದೀರ ನೆವಳದಲ್ಲೊಡದರ
ನೋವಿಲ್ಲವತ್ತೆ ಉರಬಾಳ[೫೪]। ನಿನ್ನಾ ಕೊಮರಾರ
ಮೋವಕುಂದ್ ಪಿಟ್ಟಾ[೫೫] ಹೊಡದಾರೆ। ೩೩೨

---

೪೯. ಮೀಸೆ ೫೦. ದೊರಕಲಿಲ್ಲ ೫೧. ದುಃಖಿಸಿದ ೫೨. ಮೋಹದ ೫೩. ಹೇಗಿರಲಿ? ೫೪. ಉರಿ ಬಹಳ ೫೫. ಪೆಟ್ಟು

ಅಡಗೀಯಾ ಮಾಡೇ ಮಡದಿ ಚಿಂತಾಮಣಿಯೇ
ಬಿಸ್ನೀರಾ ಕಾಸೇ ಕುಸ್ಮಾಲಿ। ನಿನ್ನಾನಲ್ಲಾ
ಬಿಸ್ನೀರಾ ಮಿಂದೇ ಮನಗೂವೆ। ೩೩೩

ಮಾತಾಡ್ದೇದ ನಲ್ಲಾನಾ ಮಾತೆಂಗೇ ಆಡಿಸ್ಲೆ
ಸೀತಾಳಿ ಚಿಪ್ಪ ಸಿರಿಗಂದಾ। ಚಿಪ್ಪ[೫೬] ಹಿಡ್ದೇ
ಮಾತಾಡುವಂಕ್ರೀಗ್[೫೭] ನಗಬಂತ। ೩೩೪

ದೇಸದಾ ಸುಕಗಾಳೇ ಬ್ಯೆಸೇ ನಮ್ ಜಿಗ್ಲೀಗೇ
ದೇಸಾಲಾಳ್ವವಂಗೇ ಹಗಲ್ನಿದ್ರೆ। ಗಿಯ್ವಾಗೇ
ಬೀಸೇ ಕುಂಕುಮ್ದಾ ತನಗಾಳಿ[೫೮]। ೩೩೫

ಹಾಸಗೀ ಹಾಸಂದ್ರ ಬೀಸಣ್ಗೀ ಬೀಸಂದ್ರ
ಬ್ಯೆಸತ್ರೇ ಮಡದೀ ಮನಗಂದ್ರು। ಪುರಿಸಾರ
ತನ್ನಾ ಕಂಡ್ ತಗರೂ ಮರಿಯಂದ್ರು। ೩೩೬

ಹಾಸಗೀ ಹಾಸಂದ್ರ ಬೀಸಣ್ಗೀ ಬೀಸಂದ್ರ
ದೇಪಕೂ[೫೯] ಸಿರ್ಗಾ ಹೊಡಿಯಂದ್ರು। ಅರಸಾರ
ಹಾಸೂಗೀ ಮ್ಯೆನೇ ಮನಗಂದ್ರು। ೩೩೭

ಆರೂ ತಿಂಗಳ ಮೊಳಿಯೇ ವಾಲಾಡೀ ಹುಯ್ವಾಗೇ
ನಾನನ್ನಾ ತವ್ರಾ ಮನಿಗೋಗಿ। ಇರ್ವಾಗೇ
ಆನೀಮ್ಯೆನ್ ರೂವಾ ಬರುವಾರೇ।
ಆನೀಮ್ಯೆನ್ ರೂವಾ ಏನಂದೀ ಬರುವಾರೇ
ಬ್ಯೆಗಾನೇ ನಾರೀ ಬರಬೇಕ। ೩೩೮

ಯಾಲಕ್ಕೀ ಕಾಯ್ ಸುಲ್ದೇ ಯಾವಡಗೀ ಮಾಡಲೆ
ಊರೀಗೋಗರ ರಾಯರ। ಬಾರದೇ
ಯಾವಡಗಿ ಮಾಡೂ ಪಲವಿಲ್ಲಾ। ೩೩೯

ಕಾಂಕೇ[೬೧] ಕೆಲ್ದಾವೇ ಕುಡ್ಪು ಬೋರಂದಾವೇ
ಯಾಕೇ ನಮ್ಮವ್ರ ಬರ್ಲೇಲಾ[೬೨] ತಾಯಮ್ಮಾ
ಸೆಣ್ಣಕ್ಕಿ ತುಳಿಯೇ ಇಸ್ರೀಗೆ। ೩೪೦

೫೬. ಸವಟು ೫೭. ಮಾತಾಡುವರೆಗೆ ೫೮. ತಂಪುಗಾಳಿ ೫೯. ದೀಪಕ್ಕೆ ೬೦. ಸೆರಗು ೬೧. ಕಾಗೆ ೬೨. ಬರಲಿಲ್ಲಾ

ತಗ್ರೂರಾ ಮರಿಯೆಂದರ್‍ಯೆಂಗೇ ಮರಿಯಾಲೆ

ಬಾಗೀಲಾ ಮುಂದೀನಾ ತಿಳ್ಳುಬಾಲೆಲಿಯಾ
ಕುಯ್ಯೆಂದರ್‍ಯೆಂಗೆ ಕೊಯ್ಯಲೆ। ತಗರೂರ
ಮರಿಯೆಂದರ್‍ಯೆಂಗೇ ಮರಿಯಾಲೆ। ೩೪೧

ತವ್ರಾಮನಿಯಾ ದೇಪಾ ತೆವ್ರೇರೇ ನೋಡುವೇ
ಹತ್ತೂ ಬಿಳ್ಳಾ ಹಚ್ಚೇ ಸರಣಂಬೆ। ನನ್ನಣ್ಣಾ
ಜಯವಂತನಾಗೇ ಎರ್ಲಂಬೆ। ೩೪೨

ಹುಟ್ಟೀದೂರಾ ನಾನ ಬಿಟ್ಟಿನ್ನೇ ಎರ್ನಾರೆ[೬೩]
ನೆಟ್ಟಾ ಸಂಪಗಿಯಾ ನಿಳ್ಳೀನಾ। ತಗ್ರೂರಾ
ಬಿಟ್ಟುಂದರಗಳಗೆ ಎರ್ನಾರೆ। ೩೪೩

ಶ್ರೀ ನಾಮಾದೂರಲ್ಲೇ ಶ್ರೀನಾಮ್ದಾ ಮರಹುಟ್ಟೇ
ಶ್ರೀ ನಾಮಾದೂರ ತಗರೂರ। ಬಯ್ಲಲ್ಲೇ
ಶ್ರೀ ನಾಮಾದೂಂವ ಇರಳೀದು[೬೪] ೩೪೪

ತಾಯೇ ನನ್ನಮ್ಮಾ ಯಾವಾಗಾ ನನುವಳ[೬೫]
ಮೇವಲ್ಲಿ ಮಡಿಯಾ ಉಗುವಲ್ಲಿ। ನನುವಾಳ
ಹಿತ್ತಲ್ದ ಹೂಂವಾ ಕುಯ್ವಲ್ಲೇ। ೩೪೫

ತಾಯೇ ಕಟ್ದಾಬುತ್ತೇ ಯಾಲಕ್ಕೀ ಪರ್ಮ್ಳಾ
ಗಾರು ಬೋರಂಬಾ ಹೊಳಿಯಲ್ಲೇ। ಬಿಡ್ಸುಂಬಾಗೇ
ತಾಯಮ್ನಾ ನಾನ ನನುವಾನೇ। ೩೪೬

ನನ್ನಪ್ಪನಾ ಮನ್ನೇ ಸೆಣ್ಣಕ್ಕೀ ಸಣಿಯಾರಾ
ನಂಗೇ ಹೇಳಕಿಯೇ[೬೬] ಬರ್ಲೇಲಾ। ಅಂಬುದ ಕೇಳೇ
ಕಡಗಣ್ಣಲ್ ನೀರ ಬರುವಾದ। ೩೪೭

ನೆಂಟಾರು ಬಂದಾರೆ ನೀರಾ ಕುಡಕ್ಕಮ್ಮಾ
ಸಂತೋಸಾ ಕೇಳ ತಗ್ರೂರಾ। ಅಪ್ನಮನಿಯಾ
ಇಂಟೂದಾಮಣ್ಗೀದನಗೋಳಾ[೬೭]। ೩೪೮

---

೬೩. ಇರಲಾರೆ ೬೪. ಶ್ರೀಹೆಸರಿನ ಹೂವು ಅರಳಿದೆ ೬೫. ನೆನೆಯುವಳು ೬೬. ಕರೆ ೬೭. ಎಂಟುದಾವಣಿಗೆಯ ದನಗಳನ್ನು

ಅಪ್ಪನಾ ಮನಿಸುದ್ದಿ ಏನ್ ಹ್ಯೆಳ್ಲೆ ಸಿರಿಕವ್ಲಿ
ಮಡ್ಡಾಸೇ ಬಿದ್ದೀದ ಎಲಬಳ್ಳಿ। ನಾಗಾಬಳ್ಳೀ
ಅದನನ್ನಪ್ಪೊಜಿ ಅರಮನ್ನೆ। ೩೪೯

ಅಪ್ಪನಾ ಮನಿಯಾ ಮುತ್ತಿನ ದಡ್ಡೀತಂಕಾ[೬೮]
ಪಲ್ಲೆಸೇ ನಿಂತೀದೇ ಎಲಿಬಳ್ಳಿ। ನಾಗಾಬಳ್ಳಿ
ಅದನನ್ನಪ್ಪಯ್ಯಾ ಅರಮನ್ನೆ। ೩೫೦

ಹಣ್ಣಡಕೀ ಹಾಸೂಮಂಚಾ ಬಣ್ಣಾದಾ ಮೇಲುಪ್ಪರಗೆ
ತಣ್ಣೀರಾ ಬಾವೇ ಮನಿಮುಂದೆ। ಅದನನ್ನಾ
ಪುಣ್ಣುಳ್ಳಪ್ಪೊಜಿಜ್[೬೯] ಅರಮನ್ನೆ। ೩೫೧

ಅಪ್ಪನಾ ಮನಿಯಾ ಮುಂದೇ ಇಪ್ಪತ್ ತಿಂಗ್ನಾಮರ್ವೇ
ವಾಲಾಡಿ ಬಿಳುವಾ ಗಜನಿಂಬೀ। ಮಡ್ಗೀಮೆನೇ[೭೦]
ಗೂಡಾ ಹಾಕದ್ವೇ ಗಿಳಿರಾಮಾ। ೩೫೨

ಉಳ್ಳೀಗೇ[೭೧] ವಜ್ಜೀರಾ[೭೨] ವನಕೀಗೇ ತಾಂಬೀರಾ[೭೩]
ಗೇರೂವ ಮೊರಕೇ ಜಗತಾರಾ। ಅಪ್ನಮನಿಯಾ
ನಾರೇರೀಗೆಲ್ಲಾ ದೊರತಾನಾ। ೩೫೩

ಬಾಳೂರಪ್ನಮನಿಯಾ ಬಾಳೀ ಹಣ್ಣಾಗುವಾಗೇ
ನೋಡುವಾರ್ ನಮ್ಮಾ ಅರ್ದೇರ[೭೪]। ಅಕ್ಕಾದೀರ
ಬಾಳೀ ಹಣ್ಣಾಗು ದಿನದಲ್ಲೇ। ೩೫೪

ಅರಸೂ ಅಪ್ನಮನ್ನೇ ಹಲ್ಸಿನಣ್ಣಾಗೂವಾಗೇ
ಅರಸೂವರ್ನನ್ನಾ ಹಸ್ಸಾಲೀ। ತಂಗಾದೀರ
ಹಲಸೀನಣ್ಣಾದಾ ದಿನದಲ್ಲೇ। ೩೫೫

ಅತ್ತೀಯಾ ಮರ್ಕೀ ಮುತ್ತೀನೇಣೀಚಾಚಿ
ಹತ್ತೆ ನೋಡಳ ತಗರೂರಾ। ಅಪ್ನಮನಿಯಾ
ಸೆಣ್ಣಾ ಮುಂಡೆಸ್ದಾ ದೊರಗೋಳಾ। ೩೫೬

ತುಂಬೀ ಹೂಂವೀನಂಗೆ ತುಂಬೀದ ನಮಬಳ್ಗಾ
ನಾಒಬ್ಬಳೇಂವೆ ಬಲ್ದೋರೆ[೭೫]। ಅಣ್ಣಯ್ಯಾ
ಆನೀ ಕುಟ್ಟಾಳಾ ಕಳ್ಗೂವಾ। ೩೫೭

---

೬೮. ಗೇಟಿನವರೆಗೆ ೬೯. ಪುಣ್ಯವುಳ್ಳ ೭೧. ಒಳಳಿಗೆ ೭೨. ವಜ್ರ ೭೩. ತಾಮ್ರ ೭೪. ಪ್ರೀತಿಯವರು ಅಪ್ಪನ ೭೦. ಮರದ ಮೇಲೆ ೭೫. ಬಹುದೂರ

ದೋರಾ[೭೬] ಹೇಳದ್ರೆ ನನ್ನಾ ದೋರ್ಯೆರ ಕೇಳ್ವರ
ದೊರತೀ ಪುರ್ವೇ[೭೭] ತಗ್ರೂರ। ಅಣ್ಣಯ್ಯಾ
ದೋರಾ ಕೇಳೀನೇ ನನ್ನಾಗೇ। ೩೫೮

ಅಪ್ಪನ ಮನಿಯಾ ಬಿದ್ಕೇ[೭೮] ತಿಂಗಳ ದಿನದಾ ಬಿದ್ಕೇ
ತಿಂಗಳದಾ ಮ್ಯೆನೇ ದಿನದೂಕೇ। ಬಾವೀತಡಿಯಾ
ರಂಬೇರಿಗೆಲ್ಲ ಹೊಸನಗ್ಗೆ। ೩೫೯

ಯಾರೋ ಬತ್ತರಂದೇ ದಾರಿಯಾ ನೋಡದೆ
ಸಾದೂಗಂಬಳಿಯೇ ಸಕಲಾತೆ। ಹುದ್ದೀಕಂಡೀ
ದೋರಿಂದಪ್ಪೋಜೀ[೭೯] ಬರುವಾನೇ। ೩೬೦

ಮಾಳೂಗಿ ಒಳಗೇ ಮುತ್ತೀನೇಣೀ ಚಾಚೇ
ಹತ್ತೀ ನೋಡಾಳೇ ತಗ್ರೂರಾ। ಬಯ್ಲಲ್ಲೇ
ದೊರಿಯೇ ತಮ್ಮಯ್ಯಾ ಬರುವಾದಾ। ೩೬೧

ಹಿಟ್ಟ ಕುಟ್ಟೂವಾಳ ಹೆಡಗೀ ತುಂಬೂವಾಳ
ಏರೇ ನೋಡಾಳೇ ತಗ್ರೂರಾ। ಬಯ್ಲಲ್ಲೇ
ಉತ್ತಮ ತಮ್ಮಯ್ಯಾ ಬರುವಾದಾ। ನೋಡೀಕಂಡೇ
ಹಿಟ್ಟೀಗೇ ಸಕ್ಕುರಿಯಾ ಇರುವಾಳ। ೩೬೨

ಕಲ್ಲಾ ಮನಿಯಲ್ ನಾನ್ಯೆವಾಗೂ ಆಳೂವೇ
ಗುಡಿಯಲ್ಲೇ ಮೂರೇ ದಿನಮಾತ್ರಾ। ಉಳ್ದೇ ಬತ್ತಿ[೮೦]
ಕಳಗಸ ನನ್ನಾ ತವರೀಗೆ। ೩೬೩

ಹಾಲನ್ನಾ ನಾನ ಯಾವಾಗೂ ಉಂಡೇಂವೆ[೮೧]
ನೀರನ್ನಾ ಮೂರೇ ದಿನದಲ್ಲೇ। ಉಂಡೇ ಬತ್ತಿ
ಕಳಗಸ ನನ್ನಾ ತಗ್ರೀಗೇ। ೩೬೪

---

೭೬. ತಕರಾರು ೭೭. ದ್ವಾರಕಾಪುರ ೭೮. ಔತಣಕೂಟ ೭೯. ದೂರದಿಂದ ತಂದೆ ೮೦. ಉಳಿದು ಬರುತ್ತೇನೆ ೮೧. ಉಂಡೀದ್ದೇನೆ

ತಾಯಮ್ಮಾ ಸಂತಾನಾ ಕುಡಿಯೇ ತೆಗ್ರಾಲೇ

ಅಪ್ಪಾನಾ ಮನಿಜೋತೇ ತಪ್ಪಾದೇ ಉರಿಯಾಲೆ
ತುಪ್ಪದ ಚಿಂಬಯ್ದು[೮೨] ಕಳಗೂವೇ। ನನ್ನಮ್ಮಾ
ಸತ್ಯದಿಂದುರಿಯೇ ಜಗಜೋತಿ। ೩೬೫

ಹಚ್ಚಡದ ಕೈಗೆ ಅಚ್ಚ ನೇರಳ ಬಳಿಯೇ
ಚಿಂಡಾಡು ಕೈಗೇ ಸರ್ಗೀಯಾ। ಮಾಡಸುವಾ
ಅಪ್ಪೋಜಿ ಆಯಿಸವೆ ಹಿರ್ಡಂಬು। ೩೬೬

ಸಂತಾನಾ ಇಲ್ಲದೇ ಸಂಪೂಗಿ ನಿಟ್ಟದೇ
ಸಂಪಗ್ ಸಾವರ್ದಾ ಹೆಗಿ[೮೩] ಉಡ್ದೇ ತಾಯಮ್ಮಾ
ಸಂತಾನ್ದಾ ಕುಡಿಯೇ ತೆಗ್ರಾಲೇ[೮೪]। ೩೬೭

ಹಲ್ಲು ಹುಳಿಯಲೆಬೇಕೇ[೮೫] ಎಲಿಯಾ ಮೆಲಿಯಾಬೇಕೇ
ಮಲ್ಲೂಗಿ ಬೇಕೇ ತುರಬೀಗೆ। ತಾಯಮ್ಮಾ
ನೀಬೇಕೇ ನನ್ನಾ ತವರೀಗೆ। ೩೬೮

---

೮೨. ತಂಬಿಗೆ ೮೩. ಟೊಂಗೆ ೮೪. ಚಿಗುರಲಿ ೮೫. ಹೊಳೆಯಬೇಕು

ಕತ್ತೀಮೆನ್ ರೂವಾ ಬರ್ದಾನೇ

ಅಕ್ಕನಾ ಕರತಾರಂದ್ರೆ ಸಂಜೀಯಾಯೀತಂದಾ
ಸೆಣ್ಣಿಂದಾ ಕಯ್ಬಿಡದಾ ಮಡ್ದೀಯಾ। ಕರತಾರಂದ್ರೆ
ತಿಂಗಳಾ ಬಿಳ್ಕ ಹಗ್ಲಂದಾ। ೩೬೯

ಸಾಂವತ್ಗೀ ಹೂಂವಿನಾ ತಾಣವೇ ತನಗಂದಾ
ಮಡದೀಯಾ ಬಿಟ್ಟೇ ಎರ್ನಂದಾ। ತಮ್ಮಯ್ಯಾ
ಕತ್ತೀಮ್ಯೆನ್ ರೂವಾ[೧] ಬರ್ದಾನೆ। ೩೭೦

ಅಣ್ಣಾ ದಂಡೀಗೊದಾ ದುಂಡೂ ಮಲ್ಗೀ ತಂದಾ
ತಂಗೀ ಕೇಳದ್ರೇ ಇಲ್ಲಂದಾ। ಅಣ್ಣಯ್ಯಾ
ಮಡದೀ ಕೇಳದ್ರೆ ಮುಡಿಯಂದಾ। ೩೭೧

ಪತ್ತರಾ[೨] ಬಂದರೆ ಹೊತ್ತೂರಿಗೋದೂನೇ[೩]।
ಮುತ್ತನಾ ಮುಡಿಯಾ ಕಡ್ಜಾಣೆ। ಮಡದೀಯಾ
ಬಿಟ್ಟುಂದರಗಳಗೇ ಎರ್ನಂದಾ। ೩೭೨

ಸಾಂವತ್ಗೀ ಹೂಂವಂಬಾ ನೂರುಂದು ಇಸ್ಳಂಬಾ[೪]
ವನವಾ ನೋಡಂಬಾ ಮಡ್ದೀಗೆ। ತಮ್ಮಯ್ಯಾ
ಬದ್ರೇ ನೀಯಾರ ಮಗ್ಳಂಬಾ। ೩೭೩

ಪುಣ್ಣೀದೊಳ್[೫] ನಲ್ಲಾನಾ ತ್ವೊಳಾಮ್ಯೆನುರಗಳ
ಏಳೇ ತಂಗಮ್ಮಾ ಬೆಳಗಾಯ್ತು। ನಮ್ಮನಿಯಾ
ಕೊಟ್ಟೂಗಿ ಕವ್ಲೆ ಕೆಲ್ದಾವೆ। ೩೭೪

ಕಂಚೀಹಣ್ ಕಳ್[೬] ಅಂದಾ ನಿಂಬೀಹಣ್ ಹುಳಿಯಂದಾ
ಮಾಯೀನಾ ಹಣ್ಣೇ ರುಚಿಯಂದಾ। ಅಣ್ಣಯ್ಯಾ
ಮಾವನ ಮಗ್ಳೇ ತನ್ಗಂದಾ। ೩೭೫

ನಾಲ್ವತ್ತೇಳ್ಹಳ್ಳೀಯಾ ನಾಯಕ್ನಾ ಮಗನೀನ
ನ್ಯೆವಾಳಿನ್ನೆಲ್ಲೇ ಮರ್ದೀಯೋ[೭]। ಬೆಲಿಕೇರಿ
ಅತ್ತೀಯಾ ಮಗ್ಳಾ ಹಸಿಯಲ್ಲೇ। ೩೭೬

---

೧. ಚಿತ್ರ ೨. ಪತ್ರ ೩. ಬೆಳಿಗ್ಗೆ ಓದುವ ೪. ಎಸಳೆನ್ನುವನು ೫. ಪುಣ್ಯವುಳ್ಳ ೬. ಕಹಿ ೭. ಮರತೆಯೋ

ದಂಡೀ ಮುಡಿಸೂನೆ ತುರ್ಬೀಗೆ

ಮರಸುತ್ತೇ ಮಲ್ಲೂಗೇ ಕೆರೆಸುತ್ತೇ ಕ್ಯೆಂದೂಗೇ
ಪಲ ಮಾವ್ನಾ ಸುತ್ತೇ ಅರಗೀಳೇ। ಅರಗವೇ
ನೆರೆಮನೆ ಸುತ್ತೇ ಮಯ್ದೂನಾ। ೩೭೭

ಉಂಡುಂಡೇ ಕಳ್ಳೂವ ಪುಂಡೂಗಾರ್ ಮಯ್ದೀನಾ
ತೊಂಡೀಗೇ ಸೋಗಾ[೮] ಕುಡುವಲ್ಲೇ। ಮಯ್ದೀನಾ
ಪುಂಡೇರಾ ಕಂಡೇ ಮರ್‍ಯಾದಾ। ೩೭೮

ಹಳ್ಳಾದಾ ತಡಿಯಲ್ಲೇ ಎಳಿಯಾ ಸೋಳೀ[೯] ಕಂಡಾ
ಇಳಿಯಾಬೇಕಂದಾ ಕುದ್ರಿಯಾ। ಮಯ್ದೀನಾ
ಸಿರಗಾ ಬೀಸದ್ರಾ ಕರಿಯಂದಾ। ೩೭೯

ಕಂಡವ್ರಾ ಹಿಂಡಾರಾ ಮಂಡಿ ಚೆಂದಂದೇಳೇ
ಕಂಡಕಂಡಲ್ಲೇ ಬೆಸಗೊಂಡಾ। ಮಯ್ದೀನಾ
ದಂಡೀ ಮುಡಿಸೂನೆ ತುರ್ಬೀಗೆ। ೩೮೦

ಮಾವನಾ ಮಕ್ಕಳೇ ಮಾನೇರಿ[೧೦] ಪುಂಡರೇ
ಮೇವಲ್ಲಿ ಚಿಂಡಾ ಉಗುವಾರೇ। ಚಿಲುವಾರು
ಮಾವಾ ಮಾದೊರಿಯಾ ಕೊಮರಾರ। ೩೮೧

ನನ್ನೇನ ನೋಡೂತಿ ಕಣ್ಣೇನಾ ಜಿಡಿಯೂತಿ
ನಿನ್ನಂತೇ ನನ್ನಾ ಮಯ್ಬಣ್ಣಾ।
ಅತ್ತೂಗ್ ಅತ್ತೂಗ್ ಚೆಂದಾ ಅತ್ತುಗಿ ಮೊಕಚೆಂದಾ
ಚಿಕ್ಕೂಲಿ ಮುರುವಾ ಕೈಚೆಂದಾ। ೩೮೨

ಹಗಲೇನ ಇರಳೇನ ಜಗದಾ ಪಲ್ಲಟರಿಯಾ[೧೧]
ಮಯ್ದೀನಾ ಮಾದೊರೆ ಗುಂಗಾಗಿ। ತಿರ್ಗೀದಾ
ರಸಬಾಳಿ ಹಣ್ಣಂತಾ ಹಿಣ್ಣೀಗೆ। ೩೮೩

---

೮. ಆಧಾರಕ್ಕೆ ೯. ಸೂಳೆ ೧೦. ಬಹಳ ಎತ್ತರ ೧೧. ಬದಲಾವಣೆ

ಅತ್ತೀಯಾ ಮಗ್ಳೇ ಮಿಚ್ಚೀದೇ ನಿನ್ಮಾತೀಗೇ

ದಂಡೀಗೇ ಹ್ವೊದಾ ತನ್ನಾ ಗಂಡಾ ಬರುವಂಕ್ರೀಗೇ
ಮಂಡೀಯಾ ಕಟ್ಳೇ[೧೨] ಮಡಿಯೊಡ್ಳೆ। ಬಾಲಮ್ಮಾ
ಗಂಡಾಗುಂದ್ವೊಲೀ ಬರದೀದ[೧೩]।
ಗಂಡಾಗುಂದ್ವೊಲೀ ಏನಂದೇ ಬರದೀದ
ದಂಡೂಗ್ ಸಯ್ತಾಗೇ ಬರ್ಬೇಕ। ೩೮೪

ಮಂಡೀಕಟ್ವಾಲೇಳಿ ದಂಡೀಮುಡಿಲೇಳಿ
ಹಿಂದೇ ಎದ್ದಂಗೇ ಎರ್ಲೇಳಿ। ಈ ಊರಾ
ರಂಬೇರೇವರ[೧೪] ನನಗಿಲ್ಲೇ। ೩೮೫

ಹಂಗೇಳೀ ಅರಸಾರೇ ಹೀಂಗೇಳೀ ಅರಸಾರೇ
ಸಾವರ್ದ್ರಾ ಕೋಟೇ ಸರ್ದ್ದಾರ್ರು ನಿಮ್ಮಂತಾ
ರಾಯರೇವರ ತನಗಿಲ್ಲೇ। ೩೮೬

ಅತ್ತೀಯಾ ಮಗ್ಳೇ ಮಿಚ್ಚೀದೇ ನಿನ್ಮಾತೀಗೇ
ಮುತ್ತಾ ತಂದಿರ್ರೂವೇ ಕುಳ್ಳೀಗೇ। ಸೋಳೀ ಮನಿಯಾ
ಬೆಟ್ಟಿನೇ ಕಾಲೂ ಗಳಗೀಲೇ। ೩೮೭

---

೧೨. ಮಂಡೆ ಕಟ್ಟಳು ೧೩. ಗಂಡಗೊಂದು ಪತ್ರ ಬರೆದಳು ೧೪. ರಂಬೆಯರಿದ್ದಾರೆ

ಹೊನ್ನಾವರ್ರ್ಕೋದಣ್ಣಾ ಚಿನ್ನದ ಕೆಂದುಗಿ ತಂದಾ

ಹೊನ್ನಾವರ್ರ್ಕೋದಣ್ಣಾ ಚಿನ್ನದ ಕ್ಯೆಂದುಗಿ ತಂದಾ
ಸುಣ್ಣದಾ ಹೆಳಿಯಲ್ಲೇ[೧೫] ಒಳಗೊದಾ। ನಾರೀಕೋಡೇ
ಸುಮ್ಮಾನೋ ಇದ್ರಾ ಮುಡಿಯಂದಾ। ೩೮೮

ಸುಮ್ಮನೇ ಮೊಡದಾರೆ ಗಮ್ಮಂದೇಳೂವಾದ
ಮಾದ್ನೆ ಕೇಳದ್ರೆ ಮುನುವದ।
ಮೊನದಾರೆ ಮುನಿಯಾಲೆ ನಾಳಾಗೇ ತಂದ್ಕಡುವೆ
ಸುಮ್ಮನೇ ನಾರೀ ಮುಡಿಯಂದಾ। ೩೮೯

ನಿನ್ನಾ ಸಂಗಾವಾ ಬೆಡ್ನಾರೆ

ಎಳಿಯಾಗಾಣ್ಣಾಗರುಡ್ಗಿ ಇಡುವೇ ನೇಲರ್ಾಬಳಿಯಾ
ವಾಲಾಡೆಣ್ಣೀನೇ ತಿಗುವಳೇ। ಅಂದೇಳೇ
ತ್ವೊಳಾ ಮ್ಯೆನಾತಾ ಉರ್ಗಿದಾ[೧೬]। ೩೯೦

ತೊಳಾಮ್ಯೆನುರ್ಗ್ವಂವಾ ಹಾಳೀಮೆನುರ್ಗಪ್ಪಾ
ನಿನಗಿಂತಾ ಚೆಲುವಾ ಪುರಿಸಾರ। ಕಂಡಾರೆ
ತಲ್ದಂಡಾ ನೀನ ಕೊಡ್ಬೇಕೋ
ದಂಡಕದಂಡಾ ಕುಡುವೆ ಹುಂಡೆಮ್ಮೀ ಬರ್ಕುಡ್ವೆ[೧೭]
ನಿನ್ನಾ ಸಂಗಾವಾ ಬೆಡ್ನಾರೆ। ೩೯೧

---

೧೫. ನೇವ ೧೬. ಮಲಗಿದ ೧೭. ಬರೆದುಕೊಡುವೆ

ಕಡ್ಡಾ ಬೇಡಿದ್ನೇ ಮಡ್ದೀಯಾ

ನಾರೀನೂ ನಲ್ಲಾನೂ ಉಂದೂರೀಗೋಗ್ವಾಗೇ
ಕಟ್ಟೇ ಮ್ಯೆನುಂದೂ ಬಣಜೀಗಾ। ಕೂತಿಕಂಡೇ
ಕಡ್ಡಾ ಬೇಡಿದ್ನೇ ಮಡ್ದೀಯಾ। ೩೯೨

ಕಡ್ಡಾ ಕುಡುವಾಕೆ ಕಡ್ಳೆಗೋದಿಗಳಲ್ಲಾ
ಒಡ್ನಾಡೇ ತಂದಾ ಮಡದೀಯೇ। ಮಾವನಮಗ್ಳಾ
ಕಡ್ಡಾ ಬೇಡಿದ್ನೇ ಮಡ್ದೀಯಾ। ೩೯೩

ಇಲ್ಲೇ ಬೀಡಕಿಯಾ ಬೆಡ್ಲೇನೇ?

ಒಳ್ಳಾದವ್ರಾ[೧೮] ಮನ್ಗೇ ಇಳ್ಳಾ[೧೯] ಮಾರಲ ಬಂದಾ
ಇಳ್ಳುಂಟೇ ನಾರೀ ಮನಿಯಲಿ
ಇಳ್ಳಿಳ್ಳ ಕಾರಿಳ್ಳ ಇಳ್ಳಿಳ್ಳ ಸರನಿಳ್ಳ
ಹಕ್ಕಲ್ದಲ್ ಬೆಳದಾ ಕರಿಯಿಳ್ಳ। ತಕ್ಕಂಡೇ
ಇಳ್ಳಳುಕೆ ನಾರೇ ಕೊಳತಾಳ[೨೦]। ೩೯೪

ಇಳ್ಳಳೂ ನಾರೀಯಾ ಕಿಲ್ಲುಗ್ರಾ ನೋಡಂದಾ
ಕಿಲ್ಲುಗ್ರಾ ಮ್ಯೆನೇ ಕಲಸುಣ್ಣಾ। ಇಲ್ನಾರಿ
ಇಲ್ಲೇ ಬೀಡಕಿಯಾ ಬೆಡ್ಲೇನೇ। ೩೯೫

ಬೀಡೂಕಿ ಬಿಡುವಾಕೆ ಚಾಡೀಗಾರರುಂಟ
ಗಾಣಕ್ ಕಟ್ಟೀದ ಎಯ್ದಿತ್ತ। ಬಂದಾರೆ
ಇಲ್ಲೇ ಬೀಡಕಿಯಾ ಬೆಡಬವ್ದ। ೩೯೬

---

೧೮. ಒಳ್ಳೆಯವರ ೧೯. ಎಳ್ಳು ೨೦. ಕುಳಿತಳು

ಸೇರೂಗಾರ್ನಾಕೊಡೆ ಸೇರೇಹೊದಳ ನಾರೆ

ಸೇರೂಗಾರ್ನಾಕೋಡೇ ಸೇರೇ ಹ್ವೊದಳ ನಾರೆ
ಆರಾಣೀದಲ್ಲೇ ಹಸುವಂತ ಸೇರೂಗಾರಾ
ಕೆಟ್ಟಿನೊ ನಿನ್ನಾ ಬಳಿಸೇರಿ। ೩೯೭

ಕೆಟ್ಟರೂ ಕೆಡಲಂಬೆ ಪಟ್ಟೀ ತಂದುಡಸೂವೆ
ಹೆತ್ತಮ್ಮಾ ಜಾನಾ[೨೧] ಮರಸೂವೆ।
ಹಸುವೇ ನಿನ್ಗಾದರೆ ಕಟ್ಟೀಕಲ್ಲುಲಗೂವೆ[೨೨]
ಒಲಿಯಾ ಹೂಡ್ ಮಡ್ಕೀ ಇತ್ಕಂಡೆ। ಇಬ್ಬರೂ
ಅಟ್ಟಂಬು ಬಾರೇ ಹಗ್ಲೂಟಾ। ೩೯೮

ಅಟ್ಟೀ ಉಂಬೂವಾಕೇ ಚಿಪ್ಪಿಲ್ಲಾ ಸಿಟಿಗಿಲ್ಲಾ[೨೩]
ಕುಳ್ಳೂವಾ ಮಣಿಯೇ ಮೊದಲಿಲ್ಲಾ।
ಚಿಪ್ಪುಂಟೇ ಸಿಟಗುಂಟೇ ಕುಳ್ಳೂಕೇ ಮಣಿಯುಂಟೇ
ಅಟ್ಟುಂಬು ಬಾರೇ ಹಗ್ಲೂಟಾ। ೩೯೯

ಹಾರಿಬಾ ನನ್ನಾ ಮುಡಿಯಲ್ಲೇ

ಒಳ್ಳೊಳ್ಳೇ ಕ್ಯೆಂದೂಗೇ ಮುಳ್ಳಲೇ ಮೂಡೀದ
ಇಲ್ಲೊದ್ರು ಅದರಾ ಪರಮಾಳಾ। ಕ್ಯೆಂದೂಗೇ
ಹಾರಿಬಾ ನನ್ನಾ ಮುಡಿಯಲ್ಲೇ। ೪೦೦

ಹಾರಿಬರುವಾಕೇನಾ ಹಕ್ಕೀ ಪಕ್ಕೀಯಲ್ಲಾ
ಹುಕ್ಕೇ ಮುಡಿ ನನ್ನಾ ವನ್ದಲ್ಲೇ। ೪೦೧

---

೨೧. ನೆನಪು ೨೨. ಕಟ್ಟೆಯ ಕಲ್ಲು ಕೆಡವುತ್ತೇನೆ ೨೩. ಸಟ್ಟುಗ

ಆ ಹೆಣ್ಣಾ ಪಾಸಾ ಬೆಡ್ಲಾರೆ

ಅಮ್ಮಾ ನಿನ್ಮಗ ಉಲ್ಲೀಯ ಹೊದ್ದಾನೆ
ಎಲ್ಲಾ ಮಲ್ಲುಗಿಯಾ ಮೊಡದಾನೆ। ಸೂಳೀ ಮನಿಲೇ
ಚೆಲ್ಲಾಡೇ[೨೪] ಬಂದಾ ಸೆರಮುತ್ತಾ। ೪೦೨

ಪರರಾ ಹೆಣ್ಣೀಗೋಗೇ ಹಗಲೂ ನಿದ್ರೀಗೆಯ್ಯಾ
ಸರದಾರನಾಗೀ ತಿರ್ಗೀದಾ। ತಮ್ಮಯ್ಯಾ
ತಲಹೋಗೂ ಹುತ್ತಾ[೨೫] ಅರಿಯಾನೇ। ೪೦೩

ತಲ ಹ್ವೊದಾರೊಗಾಲೆ ಮನ ಹ್ವೊದಾರೊಗಾಲೆ
ಆ ಹೆಣ್ಣಾ ಪಾಸಾ[೨೬] ಬೆಡ್ಲಾರೆ। ೪೦೪

ತೊಳಾಮ್ಯೆನೆಂತಾ ಕಲಿಹುಣ್ಣ

ಸೋಳೇರಾ ಕೇರೀಲೇ ಸುಳದಾಡೂ ಮಯ್ದೂನಾ
ತ್ವೊಳಾ ಮ್ಯೆನೆಂತಾ ಕಲಿಹುಣ್ಣ।
ನಿನ್ನಾಗೇ ಮೊನ್ನಾಗೇ ಎಣ್ಣೀಯಾ ಜಳಕಾವೇ
ಕಲ್ಲಾ ಬಾವೀನೇ ಮುಳ್ಕೀದೆ[೨೭]। ೪೦೫

ಕಲ್ಲಾ ಗಾಯಲ್ಲಾವ್ಹೋ ಮುಳ್ಳಾ ಗಾಯಲ್ಲಾವ್ಹೋ
ಸಿಣ್ಣಾ[೨೮] ಸೋಳೇರಾ ಉರ್ಗಾಯಾ[೨೯]। ೪೦೬

ಗೊಕನದಾ ಸೋಳೀಗೆ ನಾಚೂಕೇ ಇಲ್ಲವೇ
ಜಾತ್ರೀಯ ಮುಂದೇ ಕುಣುವಾಳ। ಮಯ್ದುನನಾ
ಜೋತರ ಸಿರ್ಗ ಹಿಡುವಾಳ। ೪೦೭

---

೨೪. ಚೆಲ್ಲಿ ೨೫. ವೇಳೆಯನ್ನು ೨೬. ಮೋಹ ೨೭. ಮುಳುಗಿದೆ ೨೮. ಸಣ್ಣ ೨೯. ಉರಿಗಾಯ

ವಾಲಾಡಕ್ಕೀಯಾ ತಳ್ಳೂವೇ

ಬತ್ತಾ ಮಿರುವಂಗ್ಯಾದಲ್ಲೇ ಎಕ್ಕೀ ಹೂಂವ್ಹಾ ಪರಮಾಳಾ
ಎತ್ತಾಗಿಂದ್ ಬಂದಾ ಸಿಂಹರೇ। ಕೃಷ್ಣಸೊಮೇ
ಎಕ್ಕೀ ಹೂಂವಿಟ್ಟೇ ಸರಣಂಬೆ। ೪೦೮

ಮೂರೊನಕೇ ಮಿರುವಾಗೇ ಯಾರಂದೂ ಅರಿಯಾನೇ
ನಾರಾಯಣನೊಬ್ಬ ಹರಿಯೊಬ್ಬ। ಬಾಲಮ್ಮಾ
ಕೋಲೂ ನೆವಳದಾ ಅರಸೊಬ್ಬಾ। ೪೦೯

ಕೋಲೂ ನೆವಳದಾ ಅರಸಾನಾ ಒಡಗೂಡೇ
ಹೆಡದಾಳೇ ಬಯ್ಣೀ ಒನಕೀಯಾ। ಮೆರ್ದಾಬತ್ತಾ
ಬೋರಿಟ್ಟೇ ಬಂದೂ ಮಿಗ್ಲಕ್ಕೇ[1]। ೪೧೦

ವನಕೀಯಾ ದಿನಿಕೇಳೇ ತಾ ಬಂದ್ರೇ ಸಿರಿಹರೇ
ಕನಕಾದುಂಗುಲವಾ ಕಯ್ದುಂಬೇ। ಏನಂದಾರೇ
ನಾರೀ ಕಯ್ಯೊನಕೇ ನನಗೆರಲೇ। ೪೧೧

ಉಳ್ಳಕ್ಕೀ ತಳ್ಳೂಕೇ ಒಳಗೆದ್ದಕ್ಕಾ ಬಾರೇ
ಮಾಳೂಗಿಲಿರುವಾ ಸೊಸಬಾರೇ। ಬಾಲಮ್ಮಾ
ಉಳ್ಳಕ್ಕೀ ತಿಗ್ದೇ ಒಳಹುಯ್ಯ। ೪೧೨

ಅಕ್ಕೀಬ್ಚಾಲುಳ್ಳಲ್ಲೇ ಮುತ್ತೀಬ್ಚಾಲ್ ಕುಳ್ಳಲ್ಲೇ
ಮಕ್ಕಾಳಿನ್ನೀಬ್ಚಾಲೆ ಮನಿಯಲ್ಲೇ। ಸಂಕ್ರಬೆಳಿಯೇ
ನೀ ಹಿಚ್ಚ ನಮ್ಮಾ ಕಳ್ನಲ್ಲೇ[2]। ೪೧೩

ಈ ಬತ್ತಾ ಮಿರ್ವಾಕೆ ನಮ್ಗೆದಾವೂತಿಲ್ಲಾ
ಹಾವೂ ಮುಟ್ಟದ್ರೂ ಇಸ್ವಿಲ್ಲಾ[3]। ನಾಗಪ್ಪಾನಾ
ಹೆಡಿಯಾ ದಾಟಿದ್ರೂ ಬಯ್ವಿಲ್ಲಾ। ೪೧೪

ನಾನೂ ನನ್ನಕ್ಕಮ್ಮಾ ಸಾಮೀಯಾ ಮಿರ್ವಾಗೇ[4]
ದೂಳು ಹಾರಿದ್ವೇ ಸಿರ್ಸೀಗೇ। ಆ ದೂಳಾ
ಸೋಳೇರಿಡುವರೇ ಸಾದನ್ನಾ[5] ಬುಟ್ಟಂದೇ। ೪೧೫

---

೧. ಹೆಚ್ಚಿಗೆಅಕ್ಕಿ ೨. ಬಣಿವೆ ಹಾಕುವ ಸ್ಥಳ ೩. ವಿಷವಿಲ್ಲಾ ೪. ಸಾಮಿಯಕ್ಕಿ ಮಿರಿಯುವಾಗ
೫. ಕುಂಕುಮದ

ಉಳ್ಳೀಗ್ಲೊಯ್ದಕ್ಕೀ ಹಾಲೊರ್ಮೀ[೬] ಮಾಡುವೇ
ಸಾನೂಬೈ ನನ್ನಾ ಕಿರಿತಮ್ಮಾ। ಉಂಬಕ್ಕೀಯಾ
ಮೂರೊನ್ಕೀ ಬಿಟ್ಟೇ ತಳ್ಳೂವೇ। ೪೧೬

ಹಾಲೀಗುಯ್ವಕ್ಕೀಯಾ ವಾಲಾಡೇ ತಳ್ಳೂವೇ
ಗ್ಲೊಲೀಲೇ ಕೆಂದೇ ಹಯ್ನಾದು।ದ। ಸುದ್ದೀಕೇಕೇ
ವಾಲಾಡಕ್ಕೀಯಾ ತಳ್ಳೂವೇ। ೪೧೭

ಬಲಗಯ್ಯ ಒನಕೀಯಾ ನಿಗದೆಕ್ಕೇ ಎಲ್ನಾರಿ
ಒಡ್ನೇ ಮಿರುವರೀಗ್ ತಲಸೋಲಾ[೭] ಬಲಗಯ್ಗೆ
ಬೇಮಾನಾಸಗ್ತೇ[೮] ನಿನಗಾಗ್ಲೇ। ೪೧೮

ಬತ್ತಾ ಮಿರುವಂಗಳ್ಕೇ ಬಂದಾನೇ ಗಿಳಿರಾಮಾ
ಕನ್ನಡಾ[೯] ಹೇಳುಕತಿ ಹೇಳ। ಗಿಳಿರಾಮಾ
ನೀ ಬಂದಾ ಕಾರಣ್ವಾ ತಿಳ್ದೇಳ। ೪೧೯

ಬತ್ತಾ ಮಿರ್ವಾಹಿಣ್ಗೇ ಸುತ್ತೇನಾ ನೋಡೂತಿ
ಬತ್ತರ ನಿನ್ನಾ ಗೆಳ್ತೇರ। ಅಕ್ಕಾದೀರ
ತತ್ತರ ನಿಂಗೇ[೧೦] ಅವಲಕ್ಕಿ। ೪೨೦

ಕಯ್ಯೊನಕೇ ಬಿದ್ದೇ ಕಯ್ಬಳೀ ನಗ್ಗೀದು[೧೧]
ಕೊಲ್ಲಾಬ್ಯೆಡಣ್ಣಾ ಮಡ್ದೀಯಾ। ಮವ್ನ ಮಗ್ಳಾ
ಕಯ್ಯೊಡದಾ ಬಳಿಯಾ ಎಡ್ಬವ್ದ। ೪೨೧

ಇಂದೇ ಬತ್ತಾ ಮಿರ್ದೇ ನೊಂದಾವೇ ನಮ್ತೋಳ।
ನಂದಣ್ಣಾ ಪುರ್ದಾ ಸುರ್ಗೀಯಾ। ಹೂಂವಾ ಸುರ್ದೇ
ನೊಂದಾವೇ ನಮ್ಮಾ ನಿಜತೋಳ। ೪೨೨

ಲಕ್ಷ್ಮೀ ಬತ್ತೀದಂದೇ[೧೨] ಮುತ್ತನ ತ್ವೊರಣಗಟ್ಟೇ
ಹುಸ್ತಲಿಗ್ಲೊನ್ನಾ ಕಳಸಾವೇ। ದೊರಗೋಳ
ಲಕ್ಷ್ಮೀ ಒಡಗೂಡೇ ಬರುವರ। ೪೨೩

ಹಾಲಾ ಬಣ್ದಾ ಗೌರೇ ನೀರಾ ಬಣ್ದಾ ಗಂಗೇ
ಅರ್ಸೀನಾ ಬಣ್ಣದಾ ಸರಸ್ಪತೇ[೧೩] ನಂಬಿನ್ನೇ
ಒನಕೀಯಾ ಕೆಳಗೇ ಇರ್ರೂವೇ[೧೪]। ೪೨೪

---

೬. ಒಂದು ಸಲಕುಟ್ಟಿದ ಅಕ್ಕಿ ೭. ತಲೆ ಶೂಲೆ ೮. ಭೀಮನಶಕ್ತಿ ೯. ಒಗಟು ೧೦. ನಿನಗೆ ೧೧. ಒಡೆದವು ೧೨. ಬರುತ್ತಾಳೆಂದು ೧೩. ಸರಸ್ವತಿ ೧೪. ಇಡುವೆನ್ನು

ಇಜ್ಜೇ ನಾಗ್ರಾದಿಂದೇ ಅಜ್ಜಪ್ ದಾರಿಗೆ ಬಂದಾ

ಹಾಡಾ ಹೇಳ್ಳೀಕಂಡಾ ದುಡ್ಡ ಕುಡ್ತೀಯಂದಾ[೧೫]
ಉದ್ದೀನಾ ಗದ್ದೀಲೇ ಅಡ್ಗೀದಾ। ಬಾಲಯ್ನಾ
ಗಡ್ಡಾ ಸುಲ್ವಂಗೇ ಉಗ್ತನ್ನಿ[೧೬]। ೪೨೫

ಹಾಡೇಳ ಅಂದರೆ ನಾಯೇನಾ ಹ್ಯೆಳಾಲೆ
ಕಾಡೇರಿ[೧೭] ಬಳ್ಳೀ ಕರ್ತೆಂತ[೧೮]। ತಮ್ಮಯ್ಯಾ
ಹಾಡಗಾರ್ತಿ ಪುಕ್ಳಿ[೨೦] ಇಲ್ತೆಂತ[೨೧]। ೪೨೬

ಅಂದಾ ಚೆಂದಾ ನೋಡೇ ತಂದೀನೇ ಗಿಡ್ಡೀಯಾ
ಅಂಗ್ಳದಲ್ಲಾಡೂ ಬುಗ್ರೀಯಾ। ಮಾವ್ನ ಮಗ್ಳಾ
ತಂದಾನೇ ಕೇಲೂ[೨೨] ಕೆಲಸಾಕೇ। ೪೨೭

ಕಿತ್ತೀದ ಮೊಕದೌಳ ಕಲ್ಲಾರೀ[೨೩] ಮಿಯ್ನವ್ಳ
ಉದ್ದಲ್ಲೀನಕ್ಕಾ ಜಿಗ್ಗಕ್ಕಾ[೨೪]। ದುಬ್ಬಕ್ಕಾಗೇ[೨೫]
ಗೊಗ್ಗಲ್ನಾ ಗಂಡಾ ದುರಕೀದಾ। ೪೨೮

ಕಾಕೀಕಿಂದ್ ಕರಿಯುವ್ಳ ಸೂಜಿಗಿಂದ್ ಸಪುರೌಳ
ಏನ್‌ಕಂಡೇ ರಾಯಾ ಮರುಳಾದಾ। ೪೨೯

ಇಸ್ಳಾ[೨೬] ಮೋಗತಿಕಂಡೇ ಕರಿಯಾ ಕುದ್ಲಾ ಕಂಡೇ
ಇಸ್ತಾರ್ದಾ ಬುಟ್ಟ ಹಣೆಯಲ್ಲೇ। ಕಂಡೀಕಂಡೇ
ಇಸ್ತಾರ್ಕೆ ರಾಯಾ ಮಳ್ಳಾದಾ। ೪೩೦

ನಾಚೂಕಿಲ್ಲದ ಹಿಣ್ಣ ಹೇಸೂಕಿಲ್ಲದ ಗಂಡಾ
ಬಾಯಾ ಮುಕ್ಕಾದ ಕಡ್ಗತ್ತೇ।ತ್ತಿ। ಜಿಲ್ಮಾವಾ
ಇಲ್ಲೇ ಕೂಡ್ಸಿದ್ಯೋ ಸಿರಿಹರಿ। ೪೩೧

ಕುಂಟಿತ್ತು ಕುಯ್ಡಿತ್ತು ಇಂಟೂರ್ನಾ ಬೇಸಾಯಾ
ಗೆಂಟೇ ತೂಗ್ವಾನಾ ಗೆಣತಾನಾ। ಮಾಡಿದ್ರೆ
ದಂಟೂ ಗೆಯ್ಬೀನೇ ಹಿಡಿಬೇಕ। ೪೩೨

---

೧೫. ಕೊಡುತ್ತೇನೆಂದ ೧೬. ಎಳೆದು ತನ್ನಿ ೧೭. ಕಾಡು ಹೀರೆ ೧೮. ಕುರುತಿಂದಿತು ೧೯. ಕುಂಡಿ ೨೦.ಇಲಿ ೨೧.ತಿಂದಿತು ೨೨.ಮುಖ್ಯವಾದ ೨೩.ಕಲ್ಲುಬಂಡೆ ೨೪.ರಸಹೀನಕ್ಕ ೨೫. ಪೊಳ್ಳುಮೈಯಕ್ಕನಿಗೆ ೨೬. ಎಸಳು

ಅರ್ಗೊಡಾ[೨೭] ನೀರ್ತಂದೇ ಗುರುಗಳಾ ಪಾದಾ ತುಳ್ದೇ
ತಾಮಿಂದೇ ತನ್ನಾ ಕರ್ಕುಡ್ದೇ। ಮಿಕ್ಕೀದೆ ನೀರ
ಬಾಳೀಯಾ ಬನವಾ ಸಲ್ಗೂವೇ। ೪೩೩

ಅಣ್ಣಯ್ಯಾ ಅಪ್ಪಯ್ಯಾ ದಮ್ಮಯ್ಯಾ ದತ್ತಯ್ಯಾ
ಮುದ್ಗಂಡ್ಗೇ ನನ್ನಾ ಕೊಡ್ಬೆಡೀ। ಕೊಟ್ಟರೇ
ಇದ್ದಿದ್ದೇ ದಂಟಾ ಕೊಡ್ನಾರೇ[೨೮]। ೪೩೪

ಇಜ್ಜೀ ನಗ್ರಾದಿಂದೇ[೩೧] ಅಜ್ಜಪ್ ದಾರೀಗ್[೩೨] ಬಂದಾ
ಜಿಪ್ಪೂವಾ[೩೩] ಗುಂಡಾ ಎಡಮಾಡಿ। ನೆಂಟರೆ
ಬಯ್ಣೀಯ ದಂಟಾ ನಿಗ್ತನ್ನಿ। ೪೩೫

ತಿಂದೋಡಿ[೩೪] ನಿನ್ಗಂಡಾ ತಿಂದೇನು ಮಾಡಂಬಾ
ತಿಂದೇಳು ಮನಿಯಾ ತಿರ್ಗಂಬಾ। ಸೇರಿಯಾ
ಉಂಗೂಟ ಹಾಕೇ ಹರಿಯಂಬಾ। ೪೩೬

ಚಿನಮೂರಿ ಚಿಂತಕಾ ದಾರೇ ಕುಪ್ಪಸ ಬಣ್ಣಾ
ಮುದಗಂಡ್ನಾ ಕೂಡೇ ಚಿದ್ರಂಗಾ[೩೫]। ಆಡೂವಾಗೇ
ಇಲಬಂದೇ ಕಿಮಿಯಾ ಕೊರ್ದಾವೇ। ೪೩೭

ಹಿಡಿಹಿಡಿಯೆಂದರೆ ಹಿಂತಿರ್ಗೇ ನೋಡೂತಿ
ನಿನ್ನೆರು ಕರ್ದಾರೋ ಮರ್ಕ್ಳುಡ್ದಾ। ನಮ್ಮನಿಯಾ
ಗುಡ್ಲೂವಾ ಹಿಡಿಯಾ ಅರ್ಸದೆ। ೪೩೮

ಬಿಳ್ಳುಳ್ಳೀಯಂಗೇ ಬೆಳ್ಳಗಾಗಿದ್ ಹಿಣ್ಣೆ
ಮಳ್ಳ ಮಾಡಿದ್ಯೇ ನೆರಿಯವ್ನಾ। ಗಡ್ಡಾಕೇ
ಕಲ್ಲ ಕಟ್ದ್ಯೇ ಹದ್ನಾರಾ। ೪೩೯

ಒಕ್ಕಾಲಾ ಪೊರಾಗೆ ಹರ್ಕಂಗಿ ಕುಪ್ಪಸ
ಹರ್ಕಂಗಿ ಮ್ಯೆನೇ ಪರ್ಕಳೆ[೩೬]। ಇಟ್ಟೇಕಂಡೇ
ತುರ್ಕಲ[೩೭] ಬೀದಿಗೆ ತಿರ್ಗೀದ। ೪೪೦

ಒಕ್ಕಾಲಾ ಪೊರಾನೇ ಸುಕ್ಕೇ ಸೋಳೀಗ್ ಬೆದ್ದಾ

ಉಕ್ದಾ ಬತ್ತಟ್ಟೂ ಅವ್ಲೀಗೇ[೩೮]। ಆಯೀತಂದೇ
ದುಕ್ಕಾ ಮಾಡೂನೇ ಕಳಕೋಗೇ। ೪೪೧

---

೨೭. ಅರ್ಧಕೊಡ ೨೮. ಕೊಡಲಾರೆ ೩೧. ವಿಜಯನಗರದಿಂದ ೩೨. ಮುದುಕ ಮದುವೆಗೆ ಬಂದ ೩೩. ಕುಟ್ಟುವ ೩೪. ತಿಂದು ಓಡುವವಳು ೩೫. ಚದುರಂಗ ೩೬. ದೋತರ ೩೭. ಮುಸಲ್ಮಾನರ ೩೮. ಉಕ್ಕಿದ ಬತ್ತವೆಲ್ಲ ಅವಲಕ್ಕಿಗೆ

ಅಳಿಯಾಗಂದಟ್ಟದ್ದೇ ಮುಟ್ಟೇ ಕಿಸ್ನಗೆಂಡೀಯಾ[೩೯]
ಮಗಳು ಬಾಲಮ್ಮಾ ತಿಗತಿಂದೇ। ಏನಂಬಾಳ
ಹಳ್ಳಾ ಕಟ್ಟಳಿಯಾ ಬರ್ಲೇಲಾ[೪೦] ೪೪೨

ಇತ್ತೀನಾ ಕುಂಬೀನಂಗೇ ಸೊಟ್ಟಾ[೪೧] ಸೂಳೀರುಟ್ಟೇ[೪೨]
ಹಳ್ಳಾ ಕಟ್ಟಳಿಯಾ ಬರ್ಲೇಲಾ। ನಮ್ಮನಿಯಾ
ಮಗಳು ಬಾಲಮ್ಮಾ ತಿಗತೆಂದ್ಳ[೪೩]। ೪೪೩

ಅಲ್ಲೊಂಡಾ ಇಲ್ಲೊಂಡಾ ದುಳ್ಳೊಟ್ಟೇ ಗಣಪಯ್ಯಾ
ಕಲ್ಲತ್ತೇ ಕಲ್ಲಾ ಇಳುವಲ್ಲೇ। ಅತ್‌ಕೊಟ್ಟಾ
ನೆಲ್ಲನ್ನಾವುಂಡೇ ಹರ್ದಬೆದ್ದಾ[೪೪]। ೪೪೪

ಆಗನ ಕಾಲ್ದವ್ರ ಚೆಂದಕ್ಕೀ ಚೆಲುವೇರ
ಏಗನ ಕಾಲ್ದವ್ರ ನಿಗಣೇರ[೪೫]। ನವ್‌ನೋತ್ನದಾ
ಉದ್ದುದ್ದಾ ಜೆಡಿಯಾ ಹುಡಗೇರ। ೪೪೫

ಈ ಊರ ಹಿಣ್ಮಕ್ಳ ತಾಂವೇ ಜಾಣೇರಂದ್ರ
ಹುಲ್ ಹಾಕೇ ತುರ್ಬಾ ಬೆಗ್ದಾರೇ[೪೬]। ನಮ್ಮನಿಯಾ
ಬಸ್ವಪ್ಪಾ ಅದ್ರಾ ಸುಗ್ತೆಂತ[೪೭] ೪೪೬

ಆ ಊರ ಹಿಣ್ಮಕ್ಳ ತಾಂವೇ ಜಾಣೇರಂದ್ರ
ತೋರೀನ್ ಹಾಕ್ ತುರ್ಬ ಬೆಗ್ದಾರೇ। ನಮ್ಮನಿಯಾ
ಮ್ವೊಳಾ[೪೮] ಬಂದದ್ರಾ ಸುಗ್ತೆಂತ। ೪೪೭

ಮಾರುದ್ದಾ ಮಂಡೀಯೇ ಗೇಣುದ್ದಾ ಸೆಳ್ಗಂಟ
ಈ ಮಂಡೇ ಮಾಸಿದ್ರೇ ಎರ್ನಾರೇ ಅಪ್ಪಯ್ಯಾ
ಅಂಚೇ[೪೯] ಗಾಣಗ್ನಾ ಮನ್ಸೇಕ। ೪೪೮

ಕಚ್ಚೇ ಹರ್ಕಾನೇ ತಿಂಬೆಲೀ ಮುರ್ಕಾನೇ
ಮೇಸೀಯೊಳ್ಳವ್ನೇ ತುಡಹರ್ಕ[೫೦]। ಹಲ್‌ಮುರ್ಕ
ಮಾತಾ ಕುಳ್ಳಸ್ದಾ ನಮ್ಗುಂದಾ। ೪೪೯

ನಮ್ಮನೀಗ್ ಬರ್‍ವರ ಸುಮ್ಮನೇ ಬರ್‍ಬ್ಯೆಡಿ
ಕಿಮ್ಮೊತೇ ಕಜ್ಜೀ ತುರ್‍ಲೊತೇ। ಬಂದಾರೆ
ಕಜ್ಜೀಗೇ ಮದ್ದಾ ಕುಡ್ತವ। ೪೫೦

---

೩೯. ಕೆಸುವಿನ ಗಡ್ಡೆ ೪೦. ಬರಲಿಲ್ಲಾ ೪೧. ಸುಟ್ಟ ೪೨. ಒಂದು ಬಗೆಯ ರೊಟ್ಟಿ ನಾಗರ ಪಂಚಮಿಯ ತಿಂಡಿ ೪೩. ತೆಗೆದು ತಿಂದಳು ೪೪. ಅಕ್ಕಿಯನ್ನು ಉಂಡು ಬಿದ್ದನು ೪೫. ನಿಪುಣೆಯರು ೪೬. ಮುಡಿಕಟ್ಟಿದರು ೪೭. ತಿಂದು ಬಿಟ್ಟಿತು ೪೮. ಗಂಡುಬೆಕ್ಕು ೪೯. ಸಮೀಪ ೫೦. ಹರಕು ತುಟಿಯುವ

ಯಾಕಾದೇಸಿ ಪಲವಾ ಯಾಕ್ ಕೊಟ್ಟೆ ಸಿರಿಹರಿಯೆ
ಅಕಾಳ್ಡಾಲುಂಡೇ ಹಗಲ್ ನಿದ್ರೇ। ಗಿಯ್ಯೊಾವಾ
ಪಾಪೀಗ್ ಯಾಕ್ ಕೊಟ್ಟೆ ಬಗ್ತೀಯಾ। ೪೫೧

ಯಾಸಾಗಾರ್ತೀಗುಂದ ಕೋಸ ಹುಟ್ಟಿಯಾನೇ
ಎಸಾ ಬ್ಯೆರದ್ರಾ ಪರಬ್ಯೆರೆ। ಗಂಡಾನಾ
ದಾಸಾನಾ ಮಾಡೇ ಕುಳ್ಸೀದ। ೪೫೨

ಹಿತವಚನಗಳು

ಕಬ್ಬೂ ಸಿಮಿಯಂದೇ ಬೇರಾ ತಿನ್ನಲುಬಾರಾ

ಕಬ್ಬೂ ಸಿಮಿಯಂದೇ[೧] ಬೇರಾ ತಿನ್ನಲೂ ಬಾರಾ
ಒಬ್ಬಂಡಾಗಿಣ್ಣಾ ಕೊಬ್ಬಾರಾ।
ಒಬ್ಬಂಡಾಗಿಣ್ಣಾ ಕೊಟ್ಟದ್ದಾದರೆ
ಹಬ್ಬಾಕೇ ಮಗ್ಗಾ ಕಳ್ಗಾರ। ೪೫೩

ಕೆಂಡಲಬ್ಬರ್ಗೀ ಹೂಂವಾ ಕಂಡಲ್ಲೇ ಕೊಯ್ಬೆಡಾ
ಮುಂಡಾಸ್ದಾ ಮ್ಯನೇ ಮುಡಿಬ್ಯೆಡಾ। ತಮ್ಮಯ್ಯಾ
ಹಿಂಡಾರೀಗ್ ಸಲ್ಗೀ ಕೊಡ್ಬೆಡಾ।
ಹಿಂಡಾರೀಗ್ ಸಲ್ಗೀ ಕೊಟ್ಟದ್ದಹುದಾದ್ರೆ
ನಾಳಾಗ್ ನಿನ್ಮಾತ ನಿಡಿಯಾವೋ[೨]। ೪೫೪

ಅರಸರೊಳ್ಳವ್ರೆಂದೇ ಸರಸಾನಾಡದಿರ
ಬಿರಸುಂಟೇ ಅವ್ರಾ ಎದಿಯಲ್ಲೇ। ತಿಂಗೀನಾ
ಕೊನಿಯಾ ಕಡ್ವಂಗೇ ಕಡ್ವರ। ೪೫೫

ಅರಸರೊಳ್ಳವ್ರೆಂದೇ ವಿರಸಾವಾಡಲು ಬ್ಯೆಡಾ
ಉರಸದಾ ಮಾತಾ ಮನ್ದಲ್ಲೇ। ಇಟ್ಟೇಕಂಡೇ
ಪರೂರಿಗ್ಹೋದಲ್ಲೇ[೨] ತಿಗುವರ[೩]। ೪೫೬

ಹಾರೂ ಇತ್ತನ ಕೈಲೇ ಹಾರಾದೀರ್ ತಮ್ಮಯ್ಯಾ
ಹಾರಿದ್ರೆ ಹಗ್ಗಾ ಹರ್ವದ। ತಮ್ಮಯ್ಯಾ
ಹಾರಾದಿರ್[೪] ಪರರಾ ಮಗಳೀಗೆ। ೪೫೭

ಕಾಡ್ತೊಂಡೀ ಕಾಯ ಕಾಂಬೋರಿಗ್ ಬಲುಚೆಂದಾ
ಕಾಣಾ ಬಾರದ್ರಾ ನೆಡಬಾರಾ। ತಮ್ಮಯ್ಯಾ
ಪರರೆಣ್ಣೀಗ್ ಕಣ್ಣಾ ಕೊಡಬಾರಾ। ೪೫೮

ಕಂಡೋರವ್ವಾ[೫] ಕಯ್ಲೇ ಎಂಗಿಯಾ[೬] ಮಾತೇಕೇ
ಕಂಡವ್ರ ಹಡದಾ ಕೊಮರಾರ। ಕಯ್ಯಲ್ಲೇ
ಎಂಗೀಯ ಸಲ್ಲಾ ನಗಸಲ್ಲಾ। ೪೫೯

---

೧. ಸಿಹಿಯೊಂದು ೨. ನಡೆಯದು ೨. ಬೇರೆಯೂರಿಗೆ ಹೋದಾಗ ೩. ತೆಗೆಯುತ್ತಾರೆ ೪. ಆಶಿಸಬೇಡ ೫. ಬೇರೆಯವನ ೬. ವ್ಯಂಗ್ಯ

ಸರ್ದಾರಾ ಅಣ್ಣಯ್ಯಾ ಕರ್ದೇತಾ ಹೇಳೀದಾ
ನೆರಹೊರಿ ಮನಿಗೇ ಬರ್ಬೆಡಾ। ತಂಗಮ್ಮಾ
ಬರ್ದೇದ[೭] ಮಾತ ಬತ್ತವ। ೪೬೦

ನೆರಮನೆ ಅಂಬೂದ ಅರ್ದಾ ತಾಯೀತಂದೆ
ಅರ್ದಟ್ರೆ[೮] ನನ್ನಾ ಕರ್ವರ। ನನ್ನಮ್ಮಾ
ಮೊರ್ದಾ[೯] ತುಂಡುಂದಾ ಕುಡ್ವರ। ನನ್ನಮ್ಮಾ
ಬಿನ್ನೀಗ್[೧೦] ನೂರಿಂಟಾ ಗಡುವರ[೧೧]। ೪೬೧

ಸೋಳೀಗಾಕೂ ಹಣ್ವಾ ನಾರೀಗ್ಹಾಕಣ್ಣಯ್ಯಾ
ನಾರೇ ನಿನ್ನೊಡ್ನೇ ಬರುವದ। ಕಾರಾಗದ್ದೀ
ಮೋಲ್ಕೇ[೧೨] ಹಾಕದ್ರೆ ಬಿಳವಾದ। ೪೬೨

ಹೆಣ್ಣಾಕಿ ಒಳ್ಳವ್ನೆ ಹೆಣ್ಣೀನಾ ಸೋದರದವ್ನೆ
ನಾರೀಯೊಳ್ಳವ್ನೇ ಮನಿಗೋಗ। ಪಟ್ಟಣ್ದಾ
ಸೋಳಿಗೊಳ್ಳವ್ನೇ ತಿರ್ಗುಣ್ಣ। ೪೬೩

ಸೋಳೀಯಾ ಮಗ್ನೋಗ್ವನಾ ಸುಡವ್ನಾ ಜಿಲ್ಮಾವಾ
ನಾಳಾಗ್ ನೋಡವ್ನಾ ಬವಣೀಯಾ। ಗೊಕನ್ದಾ
ಸೋಳೇರ್ ಬೀದಿಲೇ ಉಗ್ವಾಗೇ। ೪೬೪

ನೆರ್ಮನಿ ಮಾತಾ ಕೇಳಿ ತಾಯೀ ತಂದೀ ಮರ್ದಾ[೧೩]
ಬಾಗೀಲಾ ಮುಂದೀನಾ ಬಯ್ಣೀಯಾ। ಮಾತಾಕೇಳಿ
ಮನಿಯಾ ಮಡ್ದೀಯಾ ಮರ್ದದಾ। ೪೬೫

ಮಾತೂಗಾರ್ರಾ ಮನಿಯಾ ನೀತೊಳ್ಳಾ ಉಪ್ನಕಾಯ
ಮಾತಾಡಬವ್ದ ಎರ್ಬವ್ದ। ಬಾಲಯ್ಯಾ
ನೀತಿ ಮಾತಯ್ದ ಕಲಿಬವ್ದ। ೪೬೬

ಸಂಗಾ ಮಾಡಾಬೇಕೇ ನಮ್ಗಿಂದು ದೊಡ್ಡವ್ರಾ
ಬಂಗಾಗಿಟ್ಟುಂಬೂ ಹೊಲಿಯಾನಾ। ಸಂಗಾಮಾಡೇ
ಬಂಡಾದೇ ಬಾವೀ ತಡಯಲ್ಲೇ। ೪೬೭

ಸುಳ್ಳ ಮಾತಾಡ್ವಾರಾ ಸೂಲ್ಯಮ್ನಾ ಬೊಯ್ವಾರಾ[೧೪]
ಚಾಡೀಯಾ ಮಾತಾ ಕೇಳ್ವಾರಾ। ಕೇಳಿದ್ರೆ
ಗೋವಿಂದಾಗಣಿಯಾ[೧೫] ಕುಡುವಾನೇ। ೪೬೮

---

೭. ಬರದಿದ್ದ ೮. ಅಡಿಗೆ ಮಾಡಿದರೆ ೯. ಮುರಿದ ೧೦. ಹಿಂದಿನಿಂದ ೧೧. ನುಡಿಯುವರು ೧೨. ಸ್ವಂತ ಜಮೀನು ೧೩. ಮರೆತ ೧೪. ಬಯ್ಯಕೂಡದು ೧೫. ಗೋವಿಂದ ಕಷ್ಟವನ್ನು

ಸಾವೀರೆದ್ದಾರು ಸತ್ಯವಾ ಬೆಡಬ್ಯೆಡಾ
ಮಕ್ಕಳ ಆಣೀ ಕೊಡ್ಬೆಡಾ। ನನ್ನಮ್ಮಾ
ಸತ್ಯದೊಳ್ ಕುಡಿಯೇ ತಿಗರೂದ। ೪೬೯

ಅಬ್ಬರ್ಗೀ ಹೂಂವ್ನ ತ್ವೊಟಾ ಮನ್ಸೀಗ್‌ಬರ್ದೇದೋಟಾ[೧೬]
ಹಗಿಯಂವ್ನಾ ಕಯ್ಲೀ ಇಸ್ವೇಸಾ। ಮಾಡೂಕಿಂತಾ
ಹಸುವಾದ್ರೆ ದಾರೀ ನಿಡಿಬವ್ದ। ೪೭೦

ಹಗಗಾರ್ರ[೧೭] ಮುಂದಾಗೇ ದಗಗಾರ್ರ ಹಿಂದಾಗೇ
ನನ್ನಾ ಬಾಲಾರ ನಿಡ್ಗಾಗೇ। ಬರುವಾಗೇ
ಹಗಗಾರ್ರೀಗ್ ಕಯ್ಯಾ ಮುಗ್ದಬರ್ರಿ। ೪೭೧

ಕುದ್ರಗೇಡೀ[೧೮] ಕುಲವಾ ನಂಬೂವರ್‍ಯೆರೇ
ಹಲವಾ ಮಾತಾಡೇ ಕಿಡಸೀದಾ। ಕುರುಬಾನಾ
ಕುಲವಾ ನಂಬೂವಾರೇ ದರಿಯಲ್ಲೇ। ೪೭೨

ಪಾಪಾ ಪುಣ್ಣೀ ಮಾಡೇ ಆಕ್ವಾ ದರ್ಮಕ್ ಕೊಟ್ರ
ತಾಟಗ್ತೀ ಹಿಣ್ಣ ಅರಹೊಟ್ಟಿ। ಬಡ್ಸಿದ್ರಿಂದೇ
ಆ ಪಾಪಾ ಬಿನ್ನಾ ಬೆಡ್ಲೇಲಾ। ೪೭೩

ಆಸರ್ಕೆ ಬಂದವ್ರೀಗ್ ಬಾವೀಯಾ ತೋರಮ್ಮಾ
ಸೇದೂವಾ ನೇಣಾ ಕೊಡಪಾನಾ। ಕೊಟ್ಟರೆ
ಅಜ್ಜಜ್ಜೀ ಹಿಸ್ರ ನಿಡ್ವದ। ೪೭೪

ಹೊತ್ತಿಗೆ ಮಾಡಿದ ದಾನಾ ಸತ್ತಾಮೊತ್ತವ್ರೀಗೆ
ಮತ್ತೂ ಮಜ್ಜನ್ನಾ ಬಿಸ್ಲೀಗೇ। ಮಾಡಿದ ದಾನಾ
ಅಜ್ಜಜ್ಜೀಗವ್ರಾ ಬಳಗಾಕೇ। ೪೭೫

ನಾಡಂಬು ಜಾತೀಗೇ ಮಾಡೀ ಪಲವಿಲ್ಲಾವೋ
ನಾಗೋಲೀ ಅಂಬಾ ದನುವೀಗೇ। ಮಾಡಿದ್ರೆ
ಮ್ಯೆನೇ ಮೋಕ್ಷದಾ ಪಲವುಂಟು। ೪೭೬

ಕಾಲಲ್ಲೀ ಬರ್‍ದಾ ಬರ್‍ವೆ ತೇದೀ ಹೋಗೂವದಿಂದೇ
ದ್ಯೆವಾರೇ ನನ್ನಾ ಹಣೆಯಲ್ಲೇ। ಬರ್‍ದಾ ಬರ್‍ವ
ಓದೂವರ್ ಸಿವ್ನಾ ಮಟ್ಕೋಗೇ[೧೯] ೪೭೭

---

೧೬. ಮನಸ್ಸಿಗೆ ಸೇರದ ಊಟ ೧೭. ವೈರಿಗಳ ೧೮. ಕೆಟ್ಟವ ೧೯. ಮಠಕ್ಕೆ ಹೋಗಿ

ಮಗಳಾ ಮಕ್ಕಳಕಿಂತು ಮಗ್ನಾ ಮಕ್ಕಳ ಲೇಸ
ಕೊಯ್ದಾ ಹೂಂವೀಗಿಂತು ಗಿಡಲೇಸ। ಮುತ್ತನಾ
ಸರಕಿಂತು ಕರಿಯಾ ಮಣಿಲೇಸ। ೪೭೮

ಬಂಗಾರಾ ಇಟ್ಟೀಯಂದೇ ಬಡವರಿಗೇ ಮುನಿ ಬ್ಯೆಡಾ
ಬಂಗಾರಾ ನಿಂಗೇ ತಿರವಲ್ಲಾ। ಮಜ್ಜನ್ದಾ
ಬಿಸಲೀನಾ ತಂಪ ಎಳ್ದಂಗೆ। ೪೭೯

ಕುಳ್ತೇ ಒಂಡಾರೇ[೨೦] ಕೂಳ್ಯೆರೂ ಹಾಕ್ವರ
ಆಗೂವಟ್ ತನ್ನಾ ಕೆಲ್ಸಾವಾ। ಮಾಡಿದ್ರೆ
ಯಾರಾ ಹಂಗಿಲ್ದೇ ಒಣಬವ್ದ[೨೧]। ೪೮೦

ಕೆಲ್ಸಾಗಾರಾ ನಿಂಡಾರ ಮುಸ್ರನ್ನಾ ಉಂಬರ
ಕೆಲ್ಸಿಲ್ಲಾದವ್ನೇ ಕುರುಬಾನೇ। ಹಿಂಡಾರ
ಬೇಡೇ ಅಂಬಲಿಯಾ ಉಂಬರ। ೪೮೧

ನನ್ನವರಂಬಾರ ಅನ್ಯರಾಗುವರೇನೇ
ಹೆನ್ನೇರಿ[೨೨] ಬಯ್ಣೀಯಾ ಮರ್ಕೋಗೇ। ಕೊಳತಾರೆ
ಬಿನ್ನೀಗೇ ತಂಪಾ ನಿರುವದೇ[೨೩]। ೪೮೨

ಬಿಳ್ಳುಳ್ಳಿ ನೀರುಳ್ಳಿ ಸಿರ್ ಬಿರ್ಸೇ ನೆಡ್ಬಾರಾ
ಉರ್ಮ್ಕೊದ್ದಾ ಹಿಣ್ಣಾ ತರ್ಬಾರಾ। ತಂದಾರೆ
ಇಂಟಿಂಟು ದಿನ್ಕೇ ಜಗಳಾವೇ। ೪೮೩

ಕೆಂಪೂ ಹೆಂಡತಿಯಂದೇ ಸಂತೋಸಾ ಪಡಬ್ಯೆಡಾ
ಅತ್ತೀಯಾ ಹಣ್ಣ ಅರಗೆಂಪು। ಆದಾರೂ
ಉಡ್ದೇ ನೋಡಿದ್ರೇ ಹುಳಬಾಳ। ೪೮೪

ಕರಿಯಾ ಹಿಂಡತಿಯಂದೇ ಕರ್ಕ್ಕಾರಿ ಕೊಡ್ಬೆಡಾ
ನೇರಲಾ ಹಣ್ಣ ಅತಿಕಪ್ಪು। ಎದ್ದಾರು
ತಿಂದೇ ನೋಡದ್ರೇ ರುಚಬಾಳ। ೪೮೫

ಸಂಪೂಗಿ ಹೂಂವ ಕೊಯ್ದಾಗೇ ಪರಮಾಳಾ
ಸೂಡಿ ಬಾಡದ್ವೇ ಮರ್ದೇನೆ। ಬಾಲಯ್ಯಾ
ಕೂಡಿದುಂದುರ್ಸೆ ಕಡ್ಮೇವಾ[೨೪]। ೪೮೬

---

೨೦. ಕುಳಿತು ಉಂಡರೆ ೨೧. ಊಟ ಮಾಡಬಹುದು ೨೨. ನೆಟ್ಟಗಿನ ದೊಡ್ಡ ೨೩. ಕೊಡುವುದೆ?
೨೪. ಬಹಳ ಪ್ರೀತಿ

ಅಡುವಾಗೇ ಉಂಬಾಗೇ ಗಿಡುವೆಲ್ಲಾ ನೆಂಟಾರ
ಅಡವೀಯಾ ಸುಪ್ಪಾ ಮುಡ್ಲಲ್ಲೇ। ಇಟ್ಟೇ ಬರ್ವಾಗೇ
ಬಡವೀ ನೀಯಾರಾ ಮಗಳಂಬ್ರ। ೪೮೭

ಅರಿಯಾಲುಟ್ಟೀ ಬಂದ್ರೇ ಅರಿಯಾರೇ ನನ್ನವ್ರ
ಅರವತ್ತು ಮೊಳನಾ ದಸರೀಯಾ। ಒಟ್ಟಾರೆ
ಚಿಕ್ಕಪ್ಪಾ ತನ್ನಾ ಮಗ್ಳಂದಾ। ೪೮೮

ತಕ್ಕವ್ರೂ[೨೫] ಬಂದಾರೇ ಇಕ್ಕೂವರ ಮಂಚಾನೇ
ತಕ್ಕವ್ರು ಅಲ್ಲಾ ಬಡವರ। ಬಂದಾರೇ
ಇಕ್ಕೀದ ಮಂಚಾ ತಿಗುವಾರ। ೪೮೯

ಕಾಡುಕಾಡಂದೇ ಕಾಲಲ್ಲೇ ತ್ಲೂರಾಬೆಡೀ
ಕಾಡು ಕಾರಣ್ಕೆ ಬರುವಾದ। ದೈವಾರೆ
ಕಾಡೀನಿಂದ್ ಹಿಸ್ರ ನಿಡುವದ। ೪೯೦

೨೫. ಯೋಗ್ಯರು, ಶ್ರೀಮಂತರು

ಬಿಡಿ ಎಸಳುಗಳು

ನುಡಿಯಾಕಲ್ತಮ್ಮಾ ನಿಡಿಯಂದ್ರ[೧] ಅರ‍್ಮನ್ಗೆ
ನುಡಬಂತೇ[೨] ಬಾಳೀ ತಿರಳಂಗೇ। ಅಕ್ಕಮ್ಮಾ
ನುಡಿಯಾಮ್ಯೆನ್ ಪಡಿಯಾ[೩] ತರುವದ। ೪೯೧

ಅಳಿಯದೀರಂಬರ ಅಡಕೀಯಾ ಸಿಸಿಯಂಗೆ[೪]
ಹಿಣ್ಮಕ್ಳ ಹಿಂಗಾರ‍್ದ ಕೊನಿಯಂಗೆ। ನನ್ನಮ್ಮಾ
ಮಗದೀರ ಮಾಣಿಕ್ದಾ ಹರ‍್ಳಂಗೆ। ನನ್ನಮ್ಮಾ
ಸೊಸದೀರ ಕೆಂದೂಗಿ ಇಸ್ಳಂಗೆ। ೪೯೨

ಯಾರಾ ಚಿಂತ್ ಯಾರೀಗೇ ನಾರೀ ಚಿಂತ್ ನಲ್ಲಾಗೇ
ಹೋರಿಯಾ ಚಿಂತೇ ಒಡಿಯಾಗೇ। ಈ ಊರಾ
ಅಳೂವಾ ಚಿಂತೇ ಅರಸಾಗೇ। ೪೯೩

ಕಟ್ಟೀನಾ ಬುಡ್ದಲ್ಲೇ ಹುಟ್ಟತೇ ಗುರ್ಗುಂಜೇ[೫]
ಕಟ್ಟಿ ಕಟ್ವರೀಗ್ ನಿಳ್ಳಾದು। ನಮ್ಮನಿಯಾ
ಮುತ್ತಾ ಮಾರ‍್ವರೀಗ್ ಬೆಲಿಯಾದು। ೪೯೪

ಹರ‍್ಗೇ ನಿನ್ನಾ ಹಿಸ್ರ ಹರಿಚಂದ್ರರಾಯನೇ
ಸುರ‍್ಗೇ ನಿನ್ಹಿಸ್ರ ಸುರ‍್ತಾಳಾ। ನಮ್ಮನಿಯಾ
ಬಾಳೀಯ ಹಿಸ್ರ ಬಂಗಾರಾ। ೪೯೫

ಚಿನ್ನದಾ ಕಾಲುಂಗೀಲಾ ತಿಗ್ದಕೇ ಬಂದೀಯೇ
ಸಿವ್‌ಗಂಗೀ ತಂಕಾ ನಮ್‌ಸೇಮೆ। ಬೆಲೀಕೇರಿ
ಹೊಳಿಮುಟ್ಟು ಅಪ್ಪೋಜಿ ದೊರತಾನಾ। ೪೯೬

ಕರಿಯವ್ರ ಕಸ್ತೂರೆ ಬಿಳಿಯವ್ರ ಕೂಕುಮ್ಮಾ
ಕೆರಿಯೊಳಗಿರುವಾ ಪದ್ಮಳ್ಳಿ। ಹೂಂವೀಗೆ
ದೊರರಾಯ್ರ ತೇಜೀ[೭] ಇಳುವಾರೇ। ೪೯೭

ಅಕ್ಕೀಯಾ ಕಂಡಲ್ಲೇ ಸಿಟ್ಟೇ ತನ್‌ಮುತ್ತಂದಾ
ಬಿತ್ತೀದಂವ ತನ್ನಾ ಬೆಳಿಯಂದಾ। ಕಂದಯ್ಯಾ

---

೧. ನಡೆಯೆಂದರು ೨. ಮಾತುಬಂತು ೩. ಗೌರವ ೪. ಗಿಡ ೫. ಗುಲಗಂಜಿ ೬. ಕಮಲ
೭. ಕುದುರೆ

ಉಂಬಾಗೇ ಹಾಲೂ ಕೆನಿಯಂದಾ। ೨೯೮

ಬೆಟ್ಟಕೆ ಬಿದರಾದು ಉಪ್ಪೀನ ಕಾಯಾದು
ಮುತ್ತಯ್ದೆ ಗೇರೂ ಮೊರ್ನಾದು। ಉಡಪೀಯಾ
ಶ್ರೀಕೃಷ್ಣ ಊಬು[೮] ಕೊಳಲಾದು। ೨೯೯

ಕಾಣ್ಕೆ ಬಂದೀಯಾವೇ ಅಯ್ದೂ ತಿಂಗ್ಳಾ ಪಲವೇ
ಯಾರ್ಯೆರೀಗದ್ರಾ ಕೊಡ್ಲಮ್ಮಾ। ತಿಂಗೀನಾ
ಬೇರು ಬೆಟ್ಟಂಗೇ[೯] ಬಳ್ಗಾವು। ೩೦೦

ಹಿಪ್ಪೀ ಹೂಂವೀಗಾಗೇ ಹೆತ್ತಾತಾಯೀ ಕುಂದೇ
ಮತ್ತೇ ಕೋಗಿಲಾ ಮರಸೇರೇ। ಏನಂದಾವೇ
ಹೆತ್ತಾ ತಾಯಿಲ್ಲೇ ದೊರಕಾಳ। ೩೦೧

ಸೋಳೀಗೆ ಸುತ್ತೀನ್ವೊಲೆ ನಾರೀಗೆ ಮುತ್ತೀನ್ವೊಲೆ
ಮಿಚ್ಚೇ ಬಂದವ್ಳೀಗೇ ಮರನ್ವೊಲೆ। ಅಣ್ಣಯ್ಯಾ
ನಿಚ್ಚಾ ಹಿಂಡ್ತೀಗೂ ಹರಳ್ವೊಲೆ। ೩೦೨

ಮಲ್ಲೂಗಿ ಹೂಂವಾ ಇಲ್ಲಿಲ್ಲೇ ಮಾರೂವಾರ
ಬೆಲ್ಲಾದಂಗಡಿಯೇ ಬಿದನೂರ। ಸಾರಾದಲ್ಲೇ
ತೂಗೀ ಮಾರ್ವದ ಮುಡಿಯಾಳಾ। ೩೦೩

ಉಂದ್ ಬರೀ ಅಂದಾರೇ ಒಂಬತ್ತಾ ಬರ್ವಾನೇ[೧೦]
ಸಂದೀಲೇ ಸಾಗರ್ವಾ ಬರ್ದಾನೇ। ಸಾನ್ಬಯ್ಯಾ[೧೧]
ಮಂದೀಯಾ ಗೋಳಾ ಹೊಯ್ದಾನೇ। ೩೦೪

ಹುಬ್ಬಳ್ಳಿ ಬೈಲಲ್ಲೇ ಇಬ್ಬರ್ ಬರ್ವರೇ
ಕಬ್ಬೂ ಸೊಲ್ದಂಗೇ[೧೨] ಜಿರಿಯಂಗೇ। ಇಬ್ಬರಲ್
ಒಬ್ಬಾಗಿಂದೊಬ್ಬಾ ಚೆಲುವಾನೇ। ೩೦೫

ಬಂಗೀಯಾ ಸೇವವ್ನಾ ಸಂಗಾವೇ ಬ್ಯೆಡಮ್ಮಾ
ತಿಂಗೀನಾ ಕಾಯೀನ ಬುರುಡೂಗಿ। ತಕ್ಕಂಡೇ
ಕೆಂಡ ಅರಸಾನೇ ಒಳಗೆಲ್ಲಾ। ೩೦೬

ರಾಗೀಯ ರಾಯಾನಾ ಬೇರೆಲ್ಲಾ ಬೆಳ್ಳಾಗೇ
ರಾಗೆಲ್ಲಾ ಮುತ್ತೂ ಹವಳಾವೇ। ರಾಗೀರಾಯಾ
ಇಂಬಾ ಬೇಡಿದ್ನೇ ಅಡ್ವೀಯಾ । ೩೦೭

---

೮. ಊದುವ ೯. ಬಿಟ್ಟ ಹಾಗೆ ೧೦. ಬರೆಯುವನು ೧೧. ಶಾನುಭೋಗ ೧೨. ಸುಲಿದಂತೆ

ಹಬ್ಬಾ ಬತ್ತೀದಂದೇ ಗುಬ್ಬೇ ಸುಂಗರಗೊಂಡು
ಹಬ್ಬಲ್ಲಾ ಗುಬ್ಬೀ ಹರ್ದೇನಾ[೧೩]। ಕೋಗೀಬತ್ತಿ
ಬಿದ್ದೀರ್ರೈದಳ್ಳಿ ಪುರ್ದಲ್ಲೇ। ೫೦೮

ಗಾಂದೀಜೇ ಹತಿಯಾದ್ರಾ ಪಾರ್ತನಿ[೧೪] ಮಾಡ್ವಾಗೇ
ಸೂರ್ಗಾದಾ ಹಾದೀನೇ ಹೆಡ್ದಾರ। ಹಿಡ್ದೇ। ಹೋಗೂವಾಗೇ
ಊರ ಪರ್ಜೆಲ್ಲಾ ಮರ್ಗರ। ೫೦೯

ಕಡಮೊಳೆ ಹೊಯ್ಯ್ಯಾಲೆ ಬಿದ್ರು ಸೆಳಗೊಣ್ಣಾಲೆ[೧೪]
ಕಳ್ಳೀ ಮುಕ್ಕರಿಕೆ[೧೫] ನಿರಿಯಾಲೆ। ತಾಯಮ್ಮಾ
ಮಗನೇ ಮಂಗಲ್ಕೆ ನಿರಿಯಾಲೆ[೧೬]। ೫೧೦

ಆಕಾಸ್ದ ಮೈನೇ ಆಕಾಳ ಹಯ್ನಾದಾವೇ
ಗೋಪುಚೆಂದಣದಾ[೧೭] ಕಡಗೀಲಾ। ತಕ್ಕಂಡೇ
ಗವ್ಡೇರ ಮಜ್ಜೂಗಿ ಕಡ್ವರ। ೫೧೧

ನಾಗಪ್ಪನಾದರೆ ಹೋಗಪ್ಪಾ ಗುತ್ತೀಗೆ
ಬಾರಪ್ಪಾ ಸುಗ್ಗೀ ಮರ್ದೇನೆ[೧೮]। ಬಂದಾರೆ
ನಾಗಾ ತೊಂಡ್ಳವ ಗಿಯ್ಯೂಸ್ವೇ। ೫೧೨

ಕಣ್ಣಕಾಣದ ಮುದ್ಕ ಹಣ್ಣಾ ಮರ್ಕೊದಾನೆ
ಹಣ್ಣಂದೇ ತಂದಾ ಹಸಗಾಯ[೧೯]। ಆ ಕುಯ್ಡ
ಹಿಣ್ಣಂದೇ ತಂದಾ ಹುಲ್ತೀಯಾ। ೫೧೩

ಎತ್ತಾಗಿಂದೊಬ್ಬಾ ಮುತ್ತಾ ಮಾರುತ್ತಾ ಬಂದಾ
ಮುತ್ತೀಗಿಂತವ್ನಾ ಮೊಕ ಚೆಂದಾ। ನಗಗಾರ್ನಾ
ಮರಿಯಂದ್ರೇ ಮನಕೇ ಆಗ್ನಾರಾ[೨೦]। ೫೧೪

ಕಚ್ಚೀದರೆ ಕಬ್ಬೀನಂಗೆ ಒರದರೆ[೨೧] ಸೂಲಿನಂಗೆ
ಜಗದಲ್ಲೇ ಆತಾ ಚೆಲುವಾನೇ। ನಮ್ಮನಿಯಾ
ಮಗಳೀಗೆ ಈ ನಲ್ಲಾ ವರ್ನಾವೇ। ೫೧೫

ಜಾಣಾ ಬತ್ತೀನಂದೇ ಜಾತೂರೀಗ್ ಹೋಗದೆ
ಜಾಣಾ ಜಾತ್ರೀಗೇ ಬರ್ಲೇಲಾ। ಬನವಾಸೀ
ತೇರಾ ನೋಡೂಕೇ ಮನಸಿಲ್ಲಾ। ೫೧೬

---

೧೩. ಹರಿದಿನ ೧೪. ಪ್ರಾರ್ಥನೆ ೧೪. ಟಿಸಿಲೊಡೆಯಲಿ ೧೫. ಮೊಳಕೆ ೧೬. ನೆರೆಯಲಿ ೧೭. ಗೋಪಿಚಂದನದ ೧೮. ಮರುದಿನ ೧೯. ಹಣ್ಣಾಗದ ಕಾಯ ೨೦. ಆಗದು ೨೧. ಉರಿದರೆ

ತಿಂಗಳಾ ಬೆಳಕುಂಟೇ ತೊಂಡೀ ಚಪ್ಪರವುಂಡೇ
ತಂಗೀಯಪ್ಪೋರ ಒಳಗುಂಟೇ। ಎಲಜಾಣಾ
ತೊಂಡೀ ಚಪ್ರಲ್ಲೇ ಉರಗೀರ[೨೨]। ೫೧೭

ಕರಿಯೋಳೇ ಕಸ್ತೂರೆ ಬಿಳಿಯೋಳೇ ಕೂಕುಮಾ[೨೩]
ಕೆರಿಯೊಳಗಿರುವಾ ಪದ್ಮಳ್ಳಿ ಹೂಂವಿಗೆ
ದೊರರಾಯಾ ತೇಜೀ ಎಳ್ದಾನೆ। ೫೧೮

ಕರಿಯೋಳಾ ಕಂಡಾರೆ ಕಣ್ಣೆರು ಇಡುವಾರೆ
ಬಿಳಿಯವ್ರಾ ಕಯ್ಲೇ ಹುಕ್ಮೋತೇ[೨೪]। ದ್ಯೆವಾರಾ
ಪೋಜೀಕೆ[೨೫] ಹೋಗ್ವವ ಉಳ್ಳಂಡಾ। ೫೧೯

ಹನ್ನೆಯ್ಹುಡರಸೀನಾ ಕನ್ನೆ ಹಿಣ್ಣಿನ ಮ್ಯೆನೇ
ಮನಸೇನೋ ರಾಯಾ ಮನದಲ್ಲೇ। ಬಾಳೀಯಾ
ಹಣ್ಣೆನೋ ರಾಯಾ ಮಿಲುವಾಕೆ[೨೬]। ೫೨೦

ಹುಟ್ಟೋವಾಗಣ್ಣಾ ತಮ್ಮಾ ಬಿಳುವಾಗೇ[೨೭] ದಾಯದಕಾರ್ರ
ಕೊಟ್ಟೋಗಿ ದನವೇ ಸರಿಪಾಲ। ಆಗೂವಾಗೇ
ಹೆತ್ತಮ್ಮಾ ಕಳ್ಳಾ[೨೮] ಕರಗೀತೆ। ೫೨೧

ರಾಗೀ ಬೀಸೂ ಕಲ್ಲ ಗೋದೀ ಬೀಸು ಕಲ್ಲ
ರಾಯರಾ ಮನಿಯಾ ಪತ್ತಗಲ್ಲ। ಪಚ್ಚಾಕಲ್ಲ
ಚಾಡೀ ಹೇಳ್ವವ್ನಾ ಎದಗಲ್ಲ। ೫೨೨

ಬೇವದಾ ಮರಕೇ ಬೆಲ್ಲಾದಾ ಕಟ್ಟೇ ಕಟ್ಟೇ
ಹಾಲೂ ಸಕ್ರೇಲೇ ಅಬಸೇಕಾ। ಮಾಡಿದ್ರು
ಬೇವತನ ಹೆಗ್ಗಿ[೨೯] ಬೆಡ್ನಾರಾ[೩೦]। ೫೨೩

ಮುಡಿಯಾಳಾ ಮುಪ್ಪಾದಾರೆ ಪರಮಾಳಾ ಮುಪ್ಪಾಗೂದೇ
ದೊರಿಯಾ ಮುಕ್ಳೀಗೇ ಬಡ್ತಾನಾ। ಬಂದಾರೆ
ದೊರ್ತನ್ನಾದ ಕೀರುತೇ ಮರ್ವದೇ[೩೧]। ೫೨೪

ಅತ್ತೀಗೇ ಸೊಸ ಮೂಲಾ ಹಿತ್ಲಾಕೇ ಕರಮೂಲಾ
ಹೆತ್ತಮ್ಗೇ ಮೂಲಾ ಹಿರಿಮಗಾ। ಮೂಡ್ಬರ್ವಾ
ಸೂಲ್ಯಮ್ಗೇ ಮೂಲಾ ಗಯ್ಣಾವೇ[೩೨]। ೫೨೫

---

೨೨. ಮಲಗಿರು ೨೩. ಕುಂಕುಮ ೨೪. ಸಲಿಗೆ ೨೫. ಪೂಜೆಗೆ ೨೬. ತಿನ್ನಲಿಕ್ಕೆ ೨೭. ಬೆಳೆಯುವಾಗ ೨೮. ಕರುಳು ೨೯. ಟೊಂಗೆ ೩೦. ಬಿಡಲಿಲ್ಲ ೩೧. ಮರೆಯುವುದೆ?

ಕಳ್ಳೀಯಾ ಕರು ಚೆಂದಾ ತುಡವೀ ಮಕ್ಕಳು ಚೆಂದಾ
ಎಳಗಬ್ಬಾದಾಕೀ ಮೊಕಚೆಂದಾ। ಬಳ್ಗೆದ್ದವ್ರ[೩೩]
ಹಾದ್ರಾ ಮಾಡದ್ರೂ ಅದಚೆಂದ। ೫೨೬

ಕಡ್ಲೇಳಾ ಸಮ್‌ದ್ರಾದಲ್ಲೇ ನಿಡ್ಗೇ ಮಾಯ್ನಾ ಮರ್‍ನೇ
ಹಣ್ಣಾದರೇನ ಫಲವಿಲ್ಲಾ। ಅಂಬೇರುಡ್ಗಿ
ಹಿಣ್ಣಾದರೇನ ಕುಲವಿಲ್ಲಾ। ೫೨೭

ಕಡದರೆ ಕಬ್ಬೂ ಚೆಂದಾ ಉದ್ದರಗಿ ಎಳಚೆಂದಾ
ಎಳಗಬ್ಬದಾಕೀ ಮೊಕಚೆಂದಾ। ಬಾಲಮ್ಮಾ
ಕಂದನಾ ಬಿಚ್ಚಿದ್ರೆ[೩೪] ನೆಡಚೆಂದಾ। ೫೨೮

ಪಾಪವಾ ಮಾಡೀದೆ ಪರರಗಲಾ ಕಿಡಸೀದೆ
ಕುಂಬಳಾ ಕುಡಿಯಾ ಮುರ್‍ದದೆ। ನನ್ನಮ್ಮಾ
ಆ ಪಾಪ ನಂಗೇ ಅರಗೀತ। ೫೨೯

ಆಕಾಳಾ ಕುಂದೀನೇ ಗ್ವೊಬೀಲೇ ಬಿದ್ದೀನೇ
ಬಡವರಾ ಹಿಣ್ಣಾ ಕಿಡಿಸೀನೇ। ಆ ಪಾಪಿ
ಯಾವಾ ಮೋಕ್ಷವಾ ಪಡದೀನೇ ೫೩೦

* * * * * * *

ಸಂತೀ ಸೋಳಿಯಾ ಮಚ್ಚೇ ಮನಿಮಡ್ಡಿ ಮರ್ದಾನೇ
ಬಾಗಲ ಮುಂದೀನಾ ಬಯ್ಣೀಯಾ। ಕಾಯ್‌ಮಿಚ್ಚೇ
ಕರು ಎಮ್ಮೀ ಬೆಟ್ಟಾ[೩೬] ಬಯ್ಲೀಗೇ। ೫೩೧

ಗಟ್ಟದ ಮೆನಿನಾ ಸೋಳೀ ಕುಟ್ಟೋಗೇ[೩೭] ಸುಂಕವಾ
ಅಚ್ಚ ಪಂಡಿತನಾ ಅಳಿಯಾಗೇ। ಬಾಲಯ್ಗೇ
ಕುಟ್ಟೋಗ ಕುಳ್ಳಾ ಪದ್ಕಾವಾ। ೫೩೨

* * * * * * *

ತಿರ್ಕನ ಹಿಂಡೂತೇ ಬಡತಾನಾ ಅರಿಯಾಳ
ತಿರ್ಗೇ ತಂದಕ್ಕೀ ಇಡ್ಲೂಗಿ। ಪಾಯಸ ಮಾಡೇ
ತಿರ್ಕಗೂ ತಂಗೂ ಒಡ್ನೋಟಾ। ೫೩೩

---

೩೨. ಗ್ರಹಣ ೩೩. ಬಳಗವಿದ್ದವರು ೩೪. ಎತ್ತಿಕೊಂಡರೆ ೩೫. ಮೆಚ್ಚಿಕೊಂಡು ೩೬. ಬಿಟ್ಟನು ೩೭. ಕೊಟ್ಟು ಹೋಗು

ಬಾವಾ ಹೇಳಿದ ಮಾತ ಬಾಳೀಹಣ್ಣೀನಂತೆ
ಅಕ್ಕಾ ಹೇಳಿದ ಮಾತ ಕುರ್ಜಾತ। ನಮ್ಮನಿಯಾ
ಅತ್ತೂಗಿ ಮಾತ ಉರ್‌ಮಿಣ್ಸಾ। ನಮ್ಮನಿಯಾ
ಅತ್ತೀಯಾ ಮಾತ ಸೆಣಮಿಣ್ಸಾ। ೫೩೪

ಕುರ್ಸಕ್ಕೀ ಬಿಣ್ತಕ್ಕೀ ಸಿರಬಿರ್ಸೇ ಪಾಯಸನಟ್ಟೇ
ಸರಸಾಪತಿಯಂಬಾ ಸೊಸಬಂದೇ। ತಮ್ಮಯ್ಯಾ
ಸಣಿಯಾರ ಬಗ್ತೀ ಕಿಡಸೀತ। ೫೩೫

ನಿಲ್ಲಾಟ ಕುಳ್ಳಾಟ ಮ್ಯೆನೇ ತಿಂಗನ ತ್ವೊಟಾ
ಸಾರಿಂಗದಟಾ ನಯ್ಲಾಟಾ। ದೊಂಬಾರುಡ್ಗಿ
ಕಾಲೂ ತಪ್ಪಿದ್ರೆ ಕಯ್ಲಾಸಾ। ೫೩೬

ಹರಗೀ ನೆಟ್ಟವ್ಳ ಹಲವ ಮಕ್ಳತಾಯೆ
ಸುರಗೀ ನೆಟ್ಟವ್ಳ ಸುರನಾರೆ। ತಮ್ಮಯ್ಯಾ
ಬೋಜನಟ್ಟವ್ಳ ಹಡದಮ್ಮಾ। ೫೩೭

ಬೆಲ್ಲಾ ಕೊಟ್ಟಮ್ಮಾಗೆ ಎಲ್ಲಾ ಬಾಗ್ಯಾ ಬರ್ಲೆ
ಪಲ್ಲಂಗ್ದಾ ಮ್ಯೆನಾಡು ಮಗಒರ್ಲೆ। ನನ್ನಮ್ಮಾಗೆ
ಮಲ್ಲೂಗಿ ಮುಡ್ವಾ ಸೊಸ ಬರ್ಲೆ। ೫೩೮

ಅರಗೀನಂತಾ ತಾಯೆ ಮರದಂತಾ ಮಕ್ಕಳ
ಕರಗಿದ್ರೆ ಬೆಣ್ಣೀ ತಿಳಿತುಪ್ಪಾ। ದಂತಾಕಿ
ಎರ್ಬೇಕ ನನ್ನಾ ಮನಿಯಲ್ಲೇ। ೫೩೯

ತಿಂಗಳಾದಿನದಾ ಬುತ್ತೀ ಕಟ್ಟಬ್ಯೆಡಣ್ಣಯ್ಯಾ
ತಂಗಾದೀರಾ ದೋರೇ ಕೊಡದೀರೋ। ನಿನ್ನಾಕಾಲ
ಬಿಂದವ[೩೮] ಬ್ಯೆಸಗಿಯಾ ಬಿಸ್ಲಲ್ಲೇ। ೫೪೦

ನಾಡವ್ರ ಅಂದಾರೇ ನಾಡೀಗೇ ಅರಸಾರ
ಕೂಲಿ ಮಾಡದ್ರೆ ಕಡ್ವರ। ಕುಲ್ದವ್ರ
ಬೇಡದ್ರೆ ಚಿಲ್ಲೀ ಸುಲ್ವರ। ೫೪೧

ದುಂಡೂ ಸೇಗೀ ಮುಳ್ಳ ಕೊಂಡಾವೇ ನನ್ಸಾಲೀಯಾ
ದಂಡಾವಾ ಕುಡ್ತಿ ಬಿಡಮುಳ್ಳೆ। ನನ್ಸಾಲೀಯಾ
ತಂದವ್ರಾಯಸ್ವೇ ಹಿರ್ದಂಬೆ। ೫೪೨

---

೩೮. ಬೆಂದಾವು

ಅಜ್ಜೀ ಸಾಕಿದ ಮೊಮ್ಮಾ ಬುದ್ದೀಗೋಳರಿಯಾನೇ
ಅಜ್ಜೀ ನೀನುಂಬಾ ಹರಿಯಾಳಾ। ಕೊಟ್ಟಾರು
ತಿದ್ದೇಲುಂಬೂಕುಲರಿಯಾನೇ। ೫೪೩

ಯಾವಾ ಕಾಳಾಗಕಿಂತಾ ಕೋಳೀ ಕಾಳಗಾ ಮೇಲ
ಹಾರಾಡು ಹಕ್ಕೀ ಗಿಡಗಾನ। ಕಾಳಗಕಿಂತು
ಕೋಳೀ ಕಾಳಗ್ವೇ ಅದಮೇಲ। ೫೪೪

ಕುಂಬಾರ್ನ್ಯಾ ಕೈ ತಟ್ಟೇ[೩೯] ರಂಬೇ ಮಣ್ಣಾದಳ
ಒಂಬತ್ತು ಮೊಳನಾ ಅಗಳೀಯಾ। ಉಟ್ಟೀಕಂಡೇ
ರಂಬೇ ಜಾತ್ರೀಗೂ ಬರ್ವಳ। ೫೪೫

ವಾಲೀಕಾರಾ ನಿಂಗೇಕೇ ಒಳ್ಳಾ ಹಿಂಡತಿ ಬೇಕ
ನೀ ಹೋಗ್ವೆ ಊರಾ ತಿರ್ಗೂಕೇ[೪೧] ನಿನ್ನಾ ಮಡ್ದೇ
ಬಾಡ್ವಳ ಬಾಳೀ ತಿರಳಂಗೇ। ೫೪೬

ಸಾವರೊರವಾ ಕುಟ್ಟೇ ಕಟ್ಟಸಿದಾ ಗರ್ಡೀಯಾ
ಸುತ್ತೇ ಸಾಳಗ್ನಾ[೪೨] ಬಲ ಹಬ್ಬೇ। ಬ್ಬೀದ। ಅಣ್ಣಯ್ಯಾ
ಮಡದೀಗಿನ್ನೆಂತಾ ಬಿದ್ಕೀಯೋ। ೫೪೭

ಅಕ್ಕಾ ಸಾಕ್ದಾ ಕೋಳೇ ಅಂಕೋಲಿ ಅರ್ಜೂನಾ
ನಾ ಸಾಕ್ದಾ ಕೋಳೇ ಪಡಿಹುಂಜಾ। ಸರಗಿಯ್ವಾಗೇ
ಲಂಕಾ ಪಟ್ಣೆಲ್ಲಾ ಬೆಳಗಾದು। ೫೪೮

ಬಾಗೂ ಬಾಯ್ಣೀಕುವ್ವೆ ತೂಗೂ ತೊಂಡೀಕುವ್ವೆ
ನಾಗಾ ಬಳ್ಳೀ ನಿಟ್ಟೆ ಎಲಿಕುವ್ವೆ। ಬಾಲಯ್ಯಾ
ಗೆಣಗಾರ್ರೀಗ್ ಕುವ್ವೆ ಎಳನುಗ್ಗಿ। ೫೪೯

೩೯. ಹಿಡಿದು ೪೧. ತಿರುಗಲಿಕ್ಕೆ ೪೨. ಜೇಡದ

ಸಂಗಡ್ತಿೀಗ್ ಸಾವಾ ಕೊಡ್ಬೆಡಾ

ಸಂಗಡ್ತೇ[೪೩] ಸತ್ತಾರೇ ಅಂಗಳ್ದಲ್ ಸುಡ್ಲೂವೇ
ತಿಂಗೂ ಬಾಳೀನೇ ನಿಡ್ಲೂವೇ। ದೆವಾರೇ
ಸಂಗಡ್ತಿೀಗ್ ಸಾವಾ ಕೊಡ್ಬೆಡಾ। ೫೫೦

ಅಕ್ಕಾ ನಿನ್ನಾ ಮಂಡೇ ನಾಗೂಂವ್ನಾ ಪರಮಾಳಾ
ಯಾವೂರೇ ಅಕ್ಕಾ ನಿಮ್ ಸೇಮೆ। ಬಾವಿಕೇರಿ
ನಾಗಾ ಸಂಪಗಿಯಾ ವನವೇನೇ। ೫೫೧

೪೩. ಜೊತೆಗಾರ್ತಿ

ನಾಡಗ್ತೇರ ಉಪ್ಪೀನಾ ಮುಟ್ಟೀ ಹೆಡದಾರೇ

ಕಾಸೀ ಸ್ವೊಮೀಗೋಳ ಹೊನ್ನಾವರ್ದಾ ಉಕ್ಕೀಲ್ರ[೧]
ಅಂಕೋಲೀಗ್ ಬಂದೇ ಇಳ್ದರ। ಏನಂಬರ
ಕ್ವಾಟೀ ಬೈಣಾದಲ್ಲೇ ಸಬಗೋಟಾ[೨] ಇಟ್ಟೀಕಂಡೇ
ಗಾಂಧೀಯವ್ರೀಗ್ ಪತ್ರಾ ಬರದಾರ।
ಗಾಂಧೀಯವ್ರೀಗ್ ಪತ್ರಾ ಏನಂದೇ ಬರ್ದಾರ
ಉಪ್ಪೀನಾ ಕಾಯ್ದೇ ಮುರಿಯಾಲೆ। ೫೫೨

ಪಟ್ಟೀಯಾ ಬೆಟ್ಟಾರೇ[೩] ಕಾದೀಯಾ ತೊಟ್ಟಾರೇ
ಉಪ್ಪೀನಾ ಮುಟ್ಟೀ ಹೆಡ್ದಾರೇ[೪]। ನಾಡಗ್ತೇರ
ಉಪ್ಪೀನಾ ಕಾಯ್ದೀ ಮೊರ್ದಾರೇ। ನಾಡಗ್ತೇರ
ಪರ್ದೇಸ್ದಾ ಸಾಲೀ ಸೊಟ್ಟಾರೇ[೫]। ೫೫೩

ಗಾಂಧೀ ಮಾತಾ ಕೇಳೇ ಉಪ್ಪೀನಾಗ್ರಾ ಹುತ್ತೇ
ಸರ್ಕಾರ್ದವ್ರ ಬಂದೇ ಹೆಡದಾರೇ। ೫೫೪

ಹೆಣ್ಣೊ ಗಂಡೆಲ್ಲಾ ತಂಡಾತಂಡಾ ಕಟ್ಟೀ
ಬಂಡಿಗದ್ದೀಲೇ ಸಬಗೋಟಾ। ಆಗೂವಾಗೇ
ಕೋಟದಾ[೬] ಪೋಟ ತೆಗ್ದಾರೇ। ಏನ್ಮಾಡರೇ
ಕೋಟದ ಪೋಟಾ ತಿಗ್ದೇನ ಮಾಡಾರೆ
ನಾಡಾಮ್ಯೆನೆಲ್ಲಾ ಕಳ್ಗಾರೇ। ೫೫೫

ಪುಂಡೂ ಪೊರ್ಗೋಳೆಲ್ಲಾ[೭] ಬಂಡಿದ್ದೇ ಕೊಣ್ದಾರೇ
ಜಂಗಲ್ಲಾ ಕಾಯ್ದೇ ಮೊರ್ದಾರೇ। ಪೋಲಿಸ್ರಾ
ಲಾಟೀಯಾ ಪಿಟ್ಟಾ[೮] ತೆಂದಾರೇ। ನಾಡವ್ರ
ಸೆರ್ಮನಿಯಾ ಅನ್ನಾ ಒಂಡಾರೇ। ೫೫೬

ಕರ್ಬಂದೀ ಕಾಲಕ್ಕೇ ಮನಮಾರು ಹ್ವೊದಾವೇ
ಕಣ್ಣೀರು ಕೂಳೂ ತೆಂದಾರೆ। ಹಿಂಡಾರು ಮಕ್ಕಾಳು
ಬೆಂದೊಟ್ಟೀಲ್ ಬಟ್ಟೀಲೇ ಅಲ್ದಾರೇ। ೫೫೭

---

೧. ವಕೀಲರು ೨. ಸಭೆಕೂಟ ೩. ಬಿಟ್ಟರು ೪. ಹಿಡಿದರು ೫. ಸುಟ್ಟರು ೬. ಕೂಟದ ೭. ಮಕ್ಕಳು ೮. ಪೆಟ್ಟು

ನನ್ನಾ ಬಳಿ ಮೇಲ

ನನ್ನಾ ಬಳಿ ಮೇಲ ಹೊನ್ನೂರಾ ರಾಜ್ಯಾ ಮೇಲ
ಬಣ್ಣಾಕು ಮೇಲ ಗುರಗುಂಜೆ। ಸಬಿಯಲ್ ಕೊಳ್ತಾ
ತಮ್ಮಯ್ಗೆ ಮೇಲ ತಲಸುತ್ತ[೧೦]। ೫೫೮

ತ್ವೊಳೀನಾ ಬಳಿಯವ್ರ ತೊಳ್ದಾ ಮುತ್ತೀನಂಗೆ
ನೋಡದ್ರೆ ಪಂಜಾರ್ದಾ ಗಿಳಿಯಂಗೆ। ನೋಡದ್ರೆ
ಕಿನ್ನೂರೀ ಇಂಪೂ ನುಡಿಯಂಗೆ। ೫೫೯

ನಮ್ಮಾ ಬಳಮೇಲ ಹೊನ್ನೂ ರಾಜಣ ಮೇಲ
ಬಣ್ಣಾಕೆ ಮೇಲ ಗುರಗುಂಜೆ। ಕುಜ್ಜೂ ಬಳಿಯಾ
ಕುಲ್ದಲ್ ಕೊಂಡಾಡೂ ಮಗಮೇಲ। ೫೬೦

ಕುಲವೇ ಕುಲವೇ ಎಂದೇ ಕುಲವಿತ್ತೇ ಬೊಯ್ದೀರ
ಕುಲಮೇಲ ನನ್ನಾ ಚಲ ಮೇಲ। ರಾಣೀ ಬಳಿಯಾ
ಕುಲವಾ ಕೊಂಡಾಡೂ ಮಗಮೇಲ। ೫೬೧

ನನ್ನಾ ಬಳಿಯವ್ರ ಮನ್ನೀ ಮಾಜಾಣಾರ
ಹೊನ್ನಾ ಜೂಜಾಡೇ ಬರುವರ। ಅಜ್ಜನ ಬಳಿಯಾ
ಮನ್ನೇರಂದಾರೆ ಇವ್ರೇನೇ। ೫೬೨

ಅಜ್ಜನ ಬಳಿಯಾ ಹಿಣ್ಣ ಬೂಮೀತ್ವೊರಾದಿಣ್ಣ
ಕೇಳೀ ಬಾರಾಯಾ ಕೊಮರಾಗೇ। ನಮ್ಮನಿಯಾ
ಕುಲದ್ಯೆವಾರೂಡೂ ಅರಸಾಗೇ। ೫೬೩

---

೯. ಬೆಂದ ಹೊಟ್ಟೆಯಲ್ಲಿ ೧೦. ಮುಂಡಾಸ

ದೇಸಾದಲ್ ನಾನ ಬಡವೀಯೇ

ಉತ್ತುಮ್ರಾ ಮನಿಯಾ ಬಿಕ್ನಾ[೧೧] ಬಾಗೀನೋಡಿ
ಅಕ್ಕೀಯಾ ಮೋಡೇ ತರ್ದಲ್ಲೇ। ಕೂತಿಕಂಡೇ
ಬಿಕ್ಕ ಬಯ್ಸವೇ ನೊರಿಹಾಲಾ। ೫೬೪

ಸಿದ್ದಗಲ್ನವ್ರ ಸಿದ್ದೀಲ್ ಮುತ್ತಾ ಹುಯ್ಕಂಡೇ
ಮುದ್ದೊಳ್ ಬಾಲಮ್ಮಾ ಕ್ಯೆಳ್ಬಂದ್ರ[೧೨] ಅವ್ರಪ್ಪೋಜೇ
ಸಿದ್ದಾಗಲ್ ದೊರಿಗೇ ಕೊಡ್ನಂದಾ। ೫೬೫

ಸೇರಗಲ್ಲೀನವ್ರ ಸೆರ್ ಮುತ್ತಾ ತಕ್ಕಂಡೇ
ಮುದ್ದೊಳ್ ಬಾಲಮ್ಮಾ ಕ್ಯೆಳ್ಬಂದ್ರ। ಅವ್ರಪ್ಪವ್ವೆ
ಸೇರಾಗಲ್ ದೊರಿಗೇ ಕೊಡ್ನಂದ್ರ। ೫೬೬

ಕೊಟ್ಟಾ ಮನೆ ಕ್ವಾಟೀಯೆ। ಹುಟ್ದಾ ಮನೆ ಗರ್ಡೀಯೇ
ಬೆಳದಾ ಮನೆ ಅರ್ಸೂ ಅರಮನೆ। ತಾಯಮ್ಮಾ
ದೇಸದಲ್ ನಾನ ಬಡವೀಯೆ। ೫೬೭

ಅಪ್ಪೋಜಿ ಕುಟ್ಟದಾ[೧೩] ಹತ್ತೆಮ್ಮಿ ಕರಗೋಳಾ
ಕೊಟ್ಪೋಗಿ ತುಂಬೇ ಹಯ್ನಾದು। ಅಪ್ಪೋಜಿ[೧೪]
ಹಿಸ್ರೇಳಿ ಮುಸ್ರ ಗಯ್ದೊವೇ। ಅಪ್ಪೋಜಿ
ಬಿರ್ದೇಳೀ[೧೫] ಬೆಣ್ಣೀ ತಿಗುವಾನೇ[೧೬]। ೫೬೮

ಬಲ್ಲಿಂದ್ರನ ಮಗ್ಳ ನಿಳ್ಳುಡುಗೀ ಬಾಲಮ್ಮಾ
ನಲ್ಲಾ ಬಂದುತರ್ಗೂ ಸವ್ನಾಳೇ। ಬಾಲಮ್ಮಾ
ಬಲ್ಲಿಂದ್ರಪ್ಪೋಜಿ ಬಲ್ಮೀಗೇ। ೫೬೯

ಕಡಗಾದ ಕ್ಯೆಬಾಲೇ ಹುಡುವಾಳೇ ನ್ಯೆಯಾವಾ[೧೭]
ತಲ್ನೀರ ಬೂಮೇ ತನ್ಗಂದೇ। ಅಣ್ಣಯ್ನಾ
ಒಡನಿಂತೇ ನ್ಯೆಯಾ ಹುಡುವಾಳ। ೫೭೦

ಅಂಜೂಕೀ ತೋರಿದ್ರೇ ಅಂಜೂವ ಮಗ್ಳಲ್ಲಾ
ಮಜ್ಞಾನದಲ್ಲೇ ಹುಲಿಕಯ್ಡೆ[೧೮]। ತೋರಿದ್ರು
ಅಂಜೀ ತಿರ್ಗೂವ ಮಗ್ಳಲ್ಲಾ। ೫೭೧

೧೧. ಬೆಕ್ಕಿನ ೧೨. ಕೇಳಲು ಬಂದರು ೧೩. ಕೊಟ್ಟಿದ್ದ ೧೪. ಅಪ್ಪನ ೧೫. ಬಿರುದನ್ನು ಹೇಳಿ ೧೬. ತೆಗೆಯುವಾಗ ೧೭. ಜಗಳ ೧೮. ಹುಲಿಕರಡಿ

ನಾನು ಅಂಬ್ಲೀಯಾ ಒಣ್ಣಾರೆ

ಗೋಪೀ ಹೊಟ್ಟೀಲುಟ್ಟೇ ಪಾಪೀಯಾ ಸೊಸಿಯಾದೇ
ಮಾನಾ ಗೆಟ್ಟಂವ್ಗೇ ಸತಿಯಾಗೇ। ಈ ನಾರೆ
ನಾನಾ ಬಂಗಾಕೇ ಒಳಗಾದೆ। ೫೭೨

ಗೋಪೀ ಹೊಟ್ಟೀಲುಟ್ಟೇ ಪಾತಕನಾ ಕೈ ಹಿಡದೆ
ಏನಾ ಇಣ್ಣಿದಳೇ ಮನದಲ್ಲೇ। ದೈವಾರೇ
ಹಾಳೂ ಸಂಸಾರ್ವೇ ತರವಲ್ಲಾ। ೫೭೩

ರಾಗೀಯಾ ಬೈಸಾನಾರೇ ರಾಯಾರೀಯಡನಾರೆ
ನಾನು ಅಂಬಲಿಯಾ ಒಣನಾರೆ। ಕಾರ್ಗದ್ದೀ
ವಾರಂತೇ[೧] ಹಳ್ಳಗ್ನಾ ಬಿಳಿಯಾಲೆ। ೫೭೪

ಅರಿಯಾ[೨] ಉಟ್ಟೀಕಂಡೇ ಕೆರಿಯಾ ನೀರ್ತ್ತರನಾರೆ
ಸರುವಾದನ್ನಿಕರಾ[೩] ನಿಡ್ಗೇಂವೆ। ತಮ್ಮಯ್ಯಾ
ಸಲುವರೀಗ್[೪] ಬಂಗಾ ತರ್ನಾರೆ। ೫೭೫

ಅರಿಯಾ ಗುರ್ಸಾಗೇ[೫] ಕೆರಿಯಾ ನೀರ್ತ್ತರನಾರೆ
ಹಂಗೀನಾ ಬ್ವೊನಾ ಒಣ್ಣಾರೆ। ದೈವಾರೆ
ಬಂಗಾವಾ ತಾಳೇ ಎರ್ನಾರೆ। ೫೭೬

ತಣ್ಣೀ ಅನ್ನದಾ ಮೈನೇ ಹಂಬಾಲಿಲ್ಲತ್ತೀಯಮ್ಮಾ
ಮಗನೋರಾ ಮೈನೇ ಮನಸಿಲ್ಲಾ। ಯಾಕಾಗೇ
ಹುಬ್ಬು ತಾಟಗ್ತಿ ಮನಿಗೊದ್ರು। ೫೭೭

ಅಡಗೀಯಾ ಮನಿಯಲ್ಲೇ ಅರ್ವತ್ತು ದಿವೂಗೇ
ನಾನರಿಯೆನತ್ತೇ ಕೆಲಸಾವಾ। ನಮ್ಮಪ್ಪವ್ವೆ
ಸೆಣ್ಣ ಮುತ್ತಂದೇ ಸಲ್ಗರ[೬]। ೫೭೮

ಸಲ್ಗಿದ್ರೆ ಸಲ್ಗಲೆ ಪಂಜರ್ದಲ್ ಬಯ್ತಿಡೆ
ಮಿಟ್ಟೀಬಾ ಕೊಟ್ಗೀ ಸಿಗ್ಣೀಯಾ। ಗಂಡ್ರಮನಿಯಾ
ಸಮದಂಡಾಳಿದ್ರೆ[೭] ಪಲವುಂಟ। ೫೭೯

---

೧. ಒಂದೇ ಸವನೆ ೨. ವಸ್ತ್ರತುಂಡು ೩. ಎಲ್ಲಧನಿಕರ ೪. ಹಿರಿಯರಿಗೆ ೫. ಸಲುವಾಗಿ ೬. ಸಲಹಿದ್ದಾರೆ ೭. ಸಮಾಧಾನದಿಂದ ಆಳಿದರೆ

ಗಂಜೀಯಾ ಹಾಕೂಕೇ ಅಂಜೂಕಿ ಬ್ಯೆಡಮ್ಮಾ
ಗಂಜೀಯಲುಂದೂ ಅಗ್ಳಿಲ್ಲಾ। ಲತ್ಯಮ್ಮಾ
ನೀ ಒಣ್ಣೇ ನಿನ್ನಾ ಮಗಗಾಕೇ। ಒಣ್ಣಾದಿದ್ದರೆ
ಕರುವೆಮ್ಮೀಗಾಕೇ ಕರದುಣ್ಣ। ೫೮೦

ತಣ್ಣೀಯಾ ಅನ್ನಾಕೇ ಬಣ್ಣಾಣೀ ಮಾತೀಗೇ
ಕುಟ್ಟರ ಅಪ್ಪವ್ವೆ ಸೋದರ್ಕೆ। ಹಿಣ್ಣೀನಾ
ಕಸ್ಟಾ ಸುಕವಾನೇ ಅರಿಯಾದೇ। ೫೮೧

ಗಂಡಾರಾ ಮನಿಯನ್ನಾ ತುಂಡೂ ಸೇಗಿಯನ್ನಾ[೮]
ಗಂಡಾಲಂಬವ್ನೇ ಅರಹಾವೇ[೯]। ದ್ಯೆವಾರೇ
ಸಮ್‌ದ್ರಾವೇ ಬೇಕ ಮನಬ್ಯೆಡಾ। ೫೮೨

ಚಿಂತೀಯಾ ಮಾಡದೇ ಚಿಂತಾಕವೆಡ್ಲೇಲಾ
ಯಾಕೇ ಕುಟ್ಟದೆ ಹಡ್ದಮ್ಮಾ। ನಿಡ್ಮನಿಯಾ
ಜಂತೆ ಜರ್ದಾಂಗೇ[೧೦] ಜಿರ್ದೀನೇ। ೫೮೩

ಮಾತಾನಾಡಿದ್ರು ಮನವೆಲ್ಲ ಕುದ್ರವೇ[೧೧]
ಆತಾಮಾದಲ್ಲೇ ಎಯ್ಡಂಗ। ಮಾಡೂವರ ಕಯ್ಲೇ
ಮಾತಾನಾಡೂಕೇ ಮನಸಿಲ್ಲ। ೫೮೪

---

೮. ಸೇಗಿಮುಳ್ಳಿನಂತೆ ೯. ಅರ್ಧಹಾವು ೧೦. ಮುರಿದಂತೆ ೧೧. ಕ್ಷುದ್ರ

ಅತ್ತೇ ನಿನ್ ಬೀಡ ಹೆರ್ಬೀಡ

ಗಂಡೂ ಮಗನಾ ಹೆತ್ತಾ ಹಿಣ್ಣೇನೀ ಕೇಳ
ಚಂಡಾಳಿ ಅಂಬಾ ಸೊಸ್ಬಂದೇ। ಏನಂಬಾಳ
ಅತ್ತೇ ನಿನ್ ಬೀಡ ಹೆರ್ಬೀಡ। ೮೫೮

ಹೇಸಿ ನಿನ್ ಬದಕೀಗೆ ಆಸೀನಾ[೧೨] ಮಾಡೇಲಾ[೧೩]
ರೇಸಿಮೆ ಉಡುವಾ ದೊರ್ನನ್ನ। ಅರಸರಾ
ಆಸೀ ಮಾಡೀನೆ ಅನುಗಾಲೇ। ೫೮೬

ಅತ್ತೇ ನಿನ್ನಾ ಮಂಡೇ ಹುಟ್ಟಾಯ್ತು ಹುಡಿಯಾಯ್ತು
ಸೊರ್ಗಾರ್ಕೋಗೂವಾ[೧೪]ದಿನ್ಬಂತ। ಅತ್ಯಮ್ಮಾ
ದುರ್ಬುದ್ದೇ ನಿಂಗೇ ನಿಜ್ವಾಯ್ತೇ। ೫೮೭

ಅತ್ತೇ ಸಾಯಾಲೇ ಹತ್ತೆಮ್ಮೇ ಕರಿಯಾಲೇ
ಹಿತ್ಲಾದಲ್ ಜ್ವೊಳಾ ಬಿಳಿಯಾಲೇ। ನಮ್ಮನಿಯಾ
ಅತ್ತೂಗಿ ಕಣ್ಣ ಉಡಿಯಾಲೆ। ೫೮೮

ಅತ್ತೇ ಸತ್ತರೇ ಸೊಸೇನಂದಳುವಾಳೇ
ಹಿತ್ತಲ್ದಾ ಕದ್ವಾ ತಡ್ಕಂಡೇ। ನನ್ನ ಮನಿಯಾ
ಮಿತ್ತೂ[೧೫] ದೇವತ್ಯೇ ತುಲ್ಗೀತೇ[೧೬] ೫೮೯

೧೨. ಆಶೆಯನ್ನು ನಾನು ೧೩. ಮಾಡಲಿಲ್ಲ ೧೪. ಸ್ವರ್ಗಕ್ಕೆ ಹೋಗುವ ೧೫. ಮೃತ್ಯು ೧೬. ತೊಲಗಿತು

ಕೊಡಮ್ಮಿಗಿಂತಾ ಕಡಿಯಾದೆ

ಮಾಡಬಾರ್ದಾ ಕೆಲ್ಸಾ ಮಾಡಂದಾಳತ್ತೀಯಮ್ಮಾ
ಹುಲಿಯಾ ಮುಂಗಾಲಾ ಹಿಡಿಯಂಬ್ಳ। ಅಡವೀಯಾ
ಕಪ್ಲೀ ಕಟ್ಟಾಲಾ ಕರಿಯಂಬ್ಳ। ೫೯೦

ಹುಳ್ಬತ್ತಾ ಕುಡುವಾಳ ಹುಲಿಯಾ[೧೭] ಕುಡಂಬಾಳ
ಒಳಗೆದ್ದಾ ಸೊಸಿಗೇ ಜೀರ್ಗುತ್ತಾ। ಅತ್ಯಮ್ಮಾ
ಹುಳ್ಳಾ ಬತ್ತಾಕೆಂತಾ ಹುಲಿಕುಡ್ವೆ। ೫೯೧

ಬಾದೀಯಾ ಒನ್ಕೀಗೆ ಮೂಡೀದಾ ಬಿಸ್ಲೀಗೇ
ನೋಡಮ್ಮಾ ನಮ್ಮಾ ಸಂಸಾರಾ। ಅಡ್ವೀಯಾ
ಕ್ಕೊಡಮ್ಮೀಗಿಂತಾ ಕಡಿಯಾದೆ। ೫೯೨

ಕಾಂಕೀಕಣ್ಣಿನಾ ಬತ್ತಾ ಗೋಪ್ಪೂ[೧೮] ಚಂದಣದೊನ್ಕೆ
ಕಾಯ್ಲೆಲ್ಲಾ ರನ್ನಾ ಹುಗ್ಗೆದ್ದು। ಬಾಲಮ್ಮಾ
ನಲ್ಲಾಗೇ ತೋರ್ಸಳ ಬಲಗಯ್ಯಾ। ೫೯೩

ಮೋಡಲಾ ದಿಕ್ಕೀಗೇ ಮೂಡೀತೇ ಸೂಲ್ಯಮ್ಮಾ
ಹೋಗೇ ಬರುವೆಂದ್ರೂ ತೆರ್ಣಿಲ್ಲಾ[೧೯]। ನಮ್ಮನಿಯಾ
ಕೀಲು ಮಾಳುಗೀಯಾ ಕೆಲಸಾವೇ। ೫೯೪

ಎಣ್ಣೀಯಾ ಕುಡಕೀಗೂ ಬೇಗಾ[೨೦] ತಣ್ಣೀ ಮಡ್ಕಿಗುಬೇಗಾ
ಮತ್ತು ನಮ್ಮತ್ತೀ ಕಯ್ಬೇಗಾ। ದ್ಯೆವಾರೇ
ಹೆಂಗೇ ಕಾಲಾವಾ ಕಳಿಬೇಕ। ೫೯೫

ಬುಯ್ದೇ ಬಡ್ಲೂ ಅತ್ತೇ ಬಡ್ದೇ ಬಡ್ಲೂ ಅತ್ತೀಗೇ
ಮುಡ್ಳ ಸೋಯಿಸುವಾ ಮಯ್ದೀನಾ।ನ್ನಾ। ಗುರ್ಸಾಗೇ
ಅಡ್ವೀಯರು ಬೇಕ ಮನಬೆಡಾ। ೫೯೬

ಮಾರಾಯ್ರ ಬೊಯ್ದಾರೇ ಬಾರಾವೇ ಕಣ್ಣೀರ
ಮಾರಾಯ್ರಾ ತಮ್ಮಾ ಮಯ್ದೀನಾ। ಬೊಯ್ದಾರೇ
ಕಂಚೀಲೇ ನೀರ ಸೊರ್ದಂಗೇ[೨೧]। ೫೯೭

---

೧೭. ಗಟ್ಟಿಭತ್ತ ೧೮. ಗೋಪಿ ೧೯. ಪುರಸತ್ತಿಲ್ಲ ೨೦. ಬೀಗ ೨೧. ಸುರಿದಂತೆ

ಕಟ್ಟಾ ಬಂತಂದೇ ಕೊಟ್ಟವ್ರೀಗ್ ಬೊಯ್ಲೇಲಾ[೨೨]
ಕೊಟ್ಟೋಗೀ ಹುಕ್ಕೇ ಅಳ್ಳೇಲಾ। ದೆವಾರೇ
ಕೊಟ್ಟವ್ರು ಬಾಳೇ ಎರ್ಲಂಬೆ। ೫೯೮

ಹಕ್ಕೀಯಂತಾ ಜೇಂವಾ ಸಿಕ್ತ ಸಿಂವ್ನಾ ಕಯ್ಲೆ
ರೊಕ್ದಾ ಗಿಂಟೆಲ್ಲಾ ಬಯ್ತೂವ[೨೩]। ತಾಯಮ್ಮಾ
ಸಿಕ್ಕಿದ್ನೇ ಸಿಂವ್ನಾ ಬಲಿಯಲ್ಲು। ೫೯೯

ಯಾರೂ ಇಲ್ಲಂದೇ ಸೇರದ್ನೇ ಸಮ್ದ್ರಾವಾ
ಪರ್ವತದಂತಾ ತೆರ್ಬಂದೇ। ಬಡುವಾಗೇ
ಈಸ್ವರ್ನೆ[೨೪] ನನ್ನಾ ಬೆಡಬ್ಯೆಡಾ। ೬೦೦

೨೨. ಬಯ್ಯಲಿಲ್ಲ ೨೩. ಬಚ್ಚಿಡುವ ೨೪. ಈಶ್ವರನೇ

ಅಣ್ಣಾ ನಮ್ಮಂವ್ನಂದೇ ಅತ್ತೂಗ್ ನಮ್ಮವ್ಳಲ್ಲಾ

ಅಕ್ಕೀಯಲ್ ಕರಿಯುಂಟ ಅಕ್ಕೀಯಲ್ ಬಿಳಿಯುಂಟ
ಅಕ್ಷರದಲ್ಲೆ ಎರಡಿಲ್ಲ। ಅಣ್ಣನ ಮಡದಿ
ನಮ್ಮಣ್ಣ ನಮಗೆ ಎರಡೇನೆ। ೬೦೧

ಅಣ್ಣಾನಾ ಮಡದೀಯು ಕಾಣಲು ಸೆಣ್ಣವ್ಳು
ಸುಣ್ಣಾ ಬೇಡದ್ರೂ ಕೊಡ್ಡಾರಾ। ಅತ್ತೂಗೇ
ಹಿಣ್ಣಾ ಬೇಡದ್ರೇ ಕುಡುವಾಳೆ? [೧]। ೬೦೨

ಅಣ್ಣನಾ ಹಿಂಡೂತೇ ನಂಗೊಂದು ಅತ್ತೂಗೇ
ಸುಣ್ಣದಾ ನೀರಾ ಒಲಿಮುಂದೆ। ಇಟ್ಟೀಕಂಡೇ
ಎಮ್ಮೀ ಹಾಲಂದೇ ಇರುವಳ[೨]। ೬೦೩

ಅಣ್ಣನಾ ಹಿಂಡೂತೇ ಎಣ್ಣೀಯಾ ಉದ್ದಿದ್ರೇ
ಹನ್ನೆಯ್ಡು ಕುದ್ಲೂ ನನಿಯಾವೇ। ಅತ್ತೂಗೇ
ಅಣ್ಣಾಗಿಟ್ಟೊರವಾ ಗಳಸಿಟ್ಟೀ[೩]। ೬೦೪

ಒಳ್ಳಾ ಅತ್ತಗ್ಬಾಮೇ ಬೆಲ್ಲಾ ಪಾಯಸ್ನಟ್ಟೇ
ಹಳ್ಳೆಣ್ಣೀ ನಮ್ಮಾ ತಲಗುದ್ದೇ[೪]। ಅತ್ತೂಗೇ
ಕಳಗಳೇ ನಮ್ಮಾ ಮನಿಗಾಗೇ। ೬೦೫

ಅಣ್ಣಾ ನಮ್ಮಂವ್ನಂದೇ ಅತ್ತೂಗ್ ನಮ್ಮವ್ಳಲ್ಲಾ
ಹಿತ್ತಲ್ದಾ ಹೂಂವಾ ಕೊಯ್ಗೊಡಾ[೫]। ಅತ್ತೂಗೇ
ಅಣ್ಣಾ ಬರುವಂಕ್ರೀಗೆರಗೊಡಾ[೬] ೬೦೬

ವಾಲೇ ಎದ್ದಾರೇನ ನಮ್ಗೇಒಳ್ಳೇ ಬಂಗಾರಿಲ್ಲಾ
ಸಾಲೆದ್ದರೇನ[೭] ಸಿರ್ಗಿಲ್ಲಾ। ತಮ್ಮಯ್ನಾ
ನಾರೇ ಒಳ್ಳವ್ಳ ಗುಣವಿಲ್ಲಾ। ೬೦೭

ಅಬ್ಬರ್ದಾ ಮಾಳೂಗೇ ಕಬ್ಬಿಣ್ದಾ ಸರಳೂಗೇ
ಒಬ್ಬಳೇ ಸಾರಸ್ದೆ ಇರಳೆದ್ದು। ಅಣ್ಣಯ್ಯಾ
ಅಬ್ಬರ್ಲೋ[೮] ನಿನ್ನಾ ಮಡದೀಯಾ। ೬೦೮

---

೧. ಕೊಡುತ್ತಾಳೆಯೆ? ೨. ಎರೆಯುತ್ತಾಳೆ ೩. ಅಣ್ಣನಿಗೆ ಎಷ್ಟು ವರಹಗಳನ್ನು ಗಳಿಸಿಟ್ಟಿದ್ದಿ? ೪. ತಲೆಗೆ ಉದ್ದಿ ೫. ಕೊಯ್ಯಬಿಡಳು ೬. ಬರುವಲ್ಲಿಯವರೆಗೆ ಇರಗೊಡಳು ೭. ಸೀರೆಯಿದ್ದರೇನು? ೮. ಹೆದರಿಸು

ರಾಗೀ ಬೀಸಂದರೇ ರ್‍ವ್ಗಾ ಬಂತಂಬಳ
ರಾಗೀ ಅಂಬೂಲಿ ಕೆನಮುಸ್ರು ಉಂಬಾಗೇ
ನೋಡಣ್ಣಾ ಅವ್ಳಾ ಕೈಬಾಯಾ। ೬೦೯

ಅಣ್ಣಾನಾ ಹಿಂಡುತಿಯಲ್ಲಾ ನಂಗೇ ಅತ್ತುಗಿಯಲ್ಲಾ
ಇದ್ದಿಲ್ಲಿಂದ್ ಬಂತೇ ಜಗನಾರೆ।
ನಾನಾಗೇ ತರ್ಲೇಲಾ ಅದ್ದಾಗೇ ಬರ್ಲೇಲಾ
ಮಂಗ್ಳೂರೀಗ್ ಹೋಗೇ ಬರ್‍ವಾಗೇ। ಅವ್ರಪ್ಪವ್ವೆ
ದರ್ಮಕ್ ಕಯ್ದಾರಿ ಇರ್ಕೊಟ್ರ್[೧೦] ೬೧೦

ಅಚ್ಚೀ ಮನಿಯಕ್ಕಾ ಇಚ್ಚೀ ಮನಿತಂಗೀ
ಅಕ್ಕೀ ಕುಡ್ತೀ ನಂಗೇ ನುಚ್‌ಕೂಡಿ[೧೧]। ನಮ್ಮನಿಯಾ
ಗಂಡಾನಾ ತಂಗೀ ಒಣಬಂತ। ೬೧೧

ಅತ್ತೂಗೀ ಅತ್ತೂಗಿ ನಮ್ಮೋರೀಗ್[೧೧] ಸಣಿಯಾರಾ
ಬಿಸಿಯಾ ಕಾವೂಲೀ ನಿಗ್ತಾರೇ।
ಕಾವೂಲಿ ಕೊಟ್ಟಾರೇ ಕತ್ತೂದ ಹುಟ್ಟೂದ
ನಾನು ಕಾವಲಿಯಾ ಕೊಡ್ನಾರೆ। ೬೧೨

ಪಟ್ಟೀ ಹಚ್ಚಡದವ್ರೆ ಕೋಲೂ ನೈವಾಳಾದವ್ರೆ
ನಿಮ್ಮಕ್ಕಾ ಕಾವುಲೀ। ಕೊಡ್ಲೇಲಾ ೬೧೩

ಕಾವೂಲೀ ಕೊಡದೇದ್ರೆ[೧೨] ಕುಂಬಾರ್‍ಸಾಲೀಗೋಗ
ಹಸಿಯಾ ಕಾವೂಲೀ ನಿಗ್ತಾರೇ। ಮಾವನಮಗ್ಳೆ
ಬಿಸಿಯಾ ತೆಳ್ಳಾಗ್ನಾ[೧೩] ಇರಿಬ್ಯೆಗೆ। ಮಾವನಮಗ್ಳೆ
ಅತ್ತೂಗಿ ಬ್ಯೆಗೇ ಕರತಾರೇ। ೬೧೪

ಅತ್ತೂಗಿ ಅಂಬೋಳಾ ಇತ್ತೂನೆ ಒಲಿಮ್ಯೆನೆ
ಸುತ್ತೇ ಸಾಕೂವೆ ಸವ್ದೀಯಾ। ಅತ್ತೂಗಿ
ಸತ್ತಾರೂ ನಿನ್ನಳ್ಳ[೧೪] ಮರಿಯಾನೇ। ೬೧೫

---

೯. ಎರೆದುಕೊಟ್ಟರು ೧೦. ನುಚ್ಚನ್ನು ಕೊಡಿರಿ ೧೧. ನಮ್ಮನವರಿಗೆ ೧೨. ಕೊಡದಿದ್ರೆ ೧೩. ಕೊಟ್ಟಿ ೧೪. ನಿನ್ನ ಮೇಲಿನ ಸಿಟ್ಟು

ಒಬ್ಬಾಳಕ್ಕಮ್ಮಾ ಮರ್ದಾನೆ

ಏಗೇ ನನ್ತಮ್ಮಯ್ಯಾ ರಾಜೀ ಆಳಿದ್ರೇನ
ಅವ್ನಾ ಹಿಂಡತಿಯಾ ಒಳಗಾದಾ। ಮಾತಾಕೇಳಿ
ಒಬ್ಬಳಕ್ಕಮ್ಮಾ ಮರ್ದಾನೆ। ೬೧೬

* * * * * *

ಅಣ್ಣಾನಾ ಮನಿಗ್ಹೋದಾರೇ ಅಕ್ಕಿ ತಳ್ಸಂಬರ
ನೋಡಣ್ಣಾ ನಿನ್ನಾ ಮಡದೀಯಾ। ಹೇಳಿದಮಾತಾ
ತಾಳದ್ನೋ[೧೫] ನಿನ್ನಾ ಗುಣಕಾಗೇ। ೬೧೭

ನಮ್ಮಾ ಹಿಂಡ್ರಸುದ್ದೀ ನಮ್ ಕೈಲೆ[೧೬] ಹ್ಯೆಳ್ಬೆಡಿ
ನಾಳಾಗ್ ನಮ್ಮನ್ನೇ ಎರ್ಬೆಡಿ।
ಆಡೀ ಬೊಯ್ಸಾಬ್ಯೆಡೀ[೧೭] ಹೇಳೀ ಕೊಲ್ಸಾಬ್ಯೆಡೀ
ನಾಳಾಗ್ ನಮ್ಮನಿಲೇ ಎರ್ಬೆಡಿ[೧೮]। ೬೧೮

ಕಟ್ಟೀದ ಬುತ್ತುಂಟ ಕಾಲೀಗೇ ಮಿಟ್ಟುಂಟ[೧೯]
ಪಟ್ಟಣದ ಹಾದೇ ಬಿಳ್ಕುಂಟ। ಅಣ್ಣಯ್ಯಾ
ಹುತ್ತಿರ್ವಾಗ್[೨೦] ನನ್ನಾ ಕಳ್ಗಸ। ೬೧೯

ಸಿಟ್ಟೀಗ್ಹೇಳ್ದಾ ಮಾತಿಗೆ ಸಿಟ್ಟಾಗುಂಬಾರೇನೇ
ಹುಟ್ಟೀದಾ ಮನಿಯಾ ಬಿಡುವರೆ। ೬೨೦

ಸಿಟ್ಟೀಗ್ಹೇಳ್ದಾ ಮಾತ ಇಟ್ಟೀಯಲ್ ಎರ್ದಾಂಗೆ
ಕತ್ತೀಯಲ್ ಕುಳ್ಳಾ ಕೊಯ್ದಂಗೆ। ಅಣ್ಣಯ್ಯಾ
ಹುಟ್ಟೀದ ಮನಿಯೇ ನಿಜವೇನೋ। ೬೨೧

ಅಟ್ಟಾ ಅಟ್ಟೂಬೂದೇ ಅಟ್ಟಾಕೇಮ್ಯೆನಾದು
ಕೊಟ್ಟೂಗಿ ಸಿಗಣೀಗೆ ಹುಳುವಾದು। ಅಣ್ಣಯ್ಯಾ
ದೂಕೀಬಾರದರಾ ತಗರೀಗೆ। ೬೨೨

---

೧೫. ಸಹಿಸಿಕೊಂಡೆ ೧೬. ಹತ್ತಿರ ೧೭. ಬಯ್ಯಿಸಬೇಡಿ ೧೮. ಇರಬೇಡಿ ೧೯. ಚಪ್ಪಲಿಯಿದೆ
೨೦. ಸೂರ್ಯ ಕಾಣುವಾಗಲೇ

ದೂಕೀಬಂದಾರಣ್ಣಯ್ಯಾ ಮಾತೂ ಬರುವಾದಲ್ಲಾ
ಹೇಳಿಬಾರದ್ರ ತಗರೀಗೇ।
ಆಡೀ ಕೊಲ್ಲಾಬ್ಯೆಡಾ[21] ಹೇಳಿ ಬೊಯ್ಸ ಬ್ಯೆಡಾ
ನಾಳಾಗ್ ನಮ್ಮನೇ ಎಬ್ಯೆಡಾ। ೬೨೩

ಏಗೇ ಅಣ್ಣಾಮನ್ಗೇ ಯಾಕೆ ಬಂದೆ ಮಗ್ಳೆ
ಪಾತಕಗೆಟ್ಟವ್ಳ ಮನಿಯಲ್ಲೇ। ಇರುಕಿಂತಾ
ತ್ಲೊಟಾ ನೋಡ್ ಮನ್ಗೇ ಸವ್ನೂವೇ। ೬೨೪

*   *   *   *   *   *

ಸುವ್ವಿ ಕುಟ್ಟಂದರೆ ಸುವ್ವಂಗಾನಾಡ್ವಾಳ
ನೋಡಣ್ಣಾ ನಿನ್ನಾ ಮಡ್ದೀಯಾ। ೬೨೫

ಉಂದುಬ್ಬೀ ಮಾಡಿದ್ರೆ ನುಚ್ಚಾಗಾ ನುರಿಯಾಗಾ
ಒಬ್ಬಾಳಿಗುಬ್ಬೆ ಅರಿಯಾವೋ। ಅಣ್ಣಯ್ಯಾ
ಎಬ್ಬೀಸೋ ನಿನ್ನಾ ಮಡದೀಯಾ। ೬೨೬

ಮಡದೀಯಾ ಇಬ್ಬಿದ್ರೆ[22] ಅರ್ನಿದ್ರೀಯಾದಾವೇ
ಉಂದುಬ್ಬಿ ಮಾಡೇ ಹಣಿತಂಗಿ। ೬೨೭

ಉಂದುಬ್ಬೀ ಮಾಡಿದ್ರೆ ಕುರಡಕ್ಕೀನಾದಾವೋ
ಸಾಕಣ್ಣಾ ನಿನ್ನಾ ಮನಿಕೆಲ್ಸಾ।
ನಮ್ಮಾ ಮನಿಕೆಲ್ಸಾ ನನ್ನಾ ಮುಂದ್ಹೆಳಲುಬ್ಯೆಡಾ
ನಮ್ಮಾ ಮನಿಯಲ್ಲೇ ಎರಬ್ಯೆಡಾ। ೬೨೮

ಕುದ್ರೀಯಾ ತರ್ಸಣ್ಣ ಜೇನಸಾ[23] ಬಿಗಿಸಣ್ಣಾ
ನನ್ನೂರೀಗ್ ನನ್ನಾ ಕಳಿಸಣ್ಣ ೬೨೯

ಕುದ್ರೇ ನಮ್ಮಲ್ಲಿಲ್ಲಾ ಜೇನಸ್ ನಮ್ಮಲ್ಲಿಲ್ಲಾ
ನಿನ್ನೂರಿಗ್ ನೀನ ನಿಡಿತಂಗಿ।
ಅತ್ತೀಹಣ್ಣಾ ತಿಂದೇ ಕಯ್ತುಂಬ್ ನೀರಾ ಕುಡ್ದೇ
ಕಕ್ಕರಗಲ್ಲಾಗೇ ನಿಡಿಯೂತಿ। ೬೩೦

ತಂಗ್ಯೊದಾ ಮೂರ್ದಿನ್ಕೇ ಬಂದಾವೇ ಚಿಳಿಜರಾ
ಮನಿಯಾ ಮಡ್ದೀಗೇ ತಲಿಸೋಲ[24]। ಬಂದಾಗೇ
ದ್ಯೆವಾರಾ ಕ್ಯೆಳಲೇ ಹೊರಟಾನೇ। ೬೩೧

---

೨೧. ಹೊಡಿಸಬೇಡ ೨೨. ಎಬ್ಬಿಸಿದರೆ ೨೩. ಕುದುರೆ ತಡಿ ೨೪. ತಲೆಶೂಲಿ

ದೈವ್ರಲ್ಲಾ ದಿಂಡ್ರಲ್ಲಾ ದಿವ್ವಲ್ಲಾ[೨೫] ಬೋತಲ್ಲಾ
ಮನಿಯಾ ಹಿಣ್ಮಕ್ಕ ಉಯ್‌ಮನ್ಸ[೨೬] ಅಂದೇಳೇ
ತಂಗೀ ಕರ್ವಕೇ ಹೊರ್‍ಬ್ಯಾನೇ। ೬೩೨

ಕುದ್ರೀ ತಂದೀನೇ ಜೇನಸ ಬಿಗಿಸೀನೇ
ಬರಬೇಕೇ ತಂಗೀ ಮುದವೀಗೆ
ಅಂಗ್ಯಾ ಗುಡ್ಸ್ವರಿಲ್ಲಾ ಬಟ್ಯಾ ಹಿಡ್ಕ್ವರಿಲ್ಲಾ
ಹೆಂಗೇ ಬರ್ಲಣ್ಣಾ ಮುದವೀಗೆ। ೬೩೩

ಅಂಗ್ಯಾ ಗುಡ್ಸ್ವರ್ ಕುಡ್ತಿ ಬಟ್ಯಾ ಹಿಡ್ಕ್ವರ್ ಕುಡ್ತಿ
ಬರಬೇಕೇ ತಂಗೀ ಮುದವೀಗೆ।
ಬೈಸೂಗಿ ಬಿಸಲಣ್ಣಾ ಕೂಸೀನಾ ತಾಯಣ್ಣಾ
ಹ್ಯಂಗೇ ಬರ್ಲಣ್ಣಾ ತಗರೀಗೆ। ೬೩೪

ನಿನಗೇ ಪಲ್ಲಕೇ ಕೂಸೀಗೇ ಮರಿತೇಜೇ[೨೭]
ಬರಬೇಕೇ ತಂಗೀ ಮುದವೀಗೆ।
ಮೊಳಿಯಾದ್ರೆ ಬಂದೀತ ಹೊಳಿಯಾದ್ರೆ ತುಂಬೀತ
ಹ್ಯಂಗೇ ಬರ್ಲಣ್ಣಾ ಮುದವೀಗೆ। ೬೩೫

ಚಿನ್ನದಾ ಹರಿಗೋಲೀಗೇ ರನ್ನಾದಾ ಹುಟ್ಟಾಗೆ
ಜೋಕಾಲ ಮ್ಯೆನೆ ಕರದುಯ್ವ್ಹಿ। ೬೩೬

ಅಪ್ಪಾ ಎದ್ದರೆ ನನ್ನಾ ಒಪ್ಪಾದಲ್ ಕರದುಯ್ವ
ಅಪ್ಪಾ ಇಲ್ದಾ ಮನ್ಗೆ ಬರ್ನಾರೆ।
ಅಮ್ಮಾ ಎದ್ದರೆ ನನ್ನಾ ಸುಮ್ಮನೇ ಕಳ್ಗಾಳ
ಅಮ್ಮಾ ಇಲ್ಲಾದ ಮನ್ಗೆ ಬರ್‍ನಾರೆ। ೬೩೭

ಬಂದಾರೆ ಬತ್ತೀನೋ ಅಂಗ್ಯಾದಲ್ ನಿಲ್ತೀನೋ
ಕಂದವ್ವೀ ದಾರೀ ಇರ್ವೆನೋ। ಅಣ್ಣಯ್ಯಾ
ಹೆರಬಾಗ್ಲಲಿಂದೇ[೨೮] ತಿರ್ಗೂನೋ। ೬೩೮

*   *   *   *   *   *

ಅಣ್ಣಾ ತಂದಾ ಸೇರೇ ಅಯ್ದಾ ಮೊಳನಾ ಸೇರೇ
ಮ್ಯೆದಾಲುಗಳಿಯಾ ನಿರಿಬಾರಾ। ಅಣ್ಣಯ್ಯಾ
ಮಾರಿಕೊ ನಿನ್ನಾ ಗರ್ಜಿಗೇ। ೬೩೯

---

೨೫. ದೆವ್ವವಲ್ಲಾ ೨೬. ಮುನಿಸು ೨೭. ಮರಿಕುದುರೆ ೨೮. ಹೊರಬಾಗಿಲಿನಿಂದ

ಮಾರೀಕಂಬುಕೆ ತಂಗೀ ನಾ ಸಿಟ್ಟೀ ಪ್ವೊರಾನಲ್ಲಾ
ಉಟ್ಟೀಕೊ ನಿನ್ನ ನಿರಿಹುಯ್ದೆ।
ಉಟ್ಟೀಕಂಬುಕೆ ನಾನ ಒಕ್ಲಾ ಪೋರೀಯಲ್ಲಾ
ಕಟ್ಟೆಕ್ಕೋ[೨೯] ನಿನ್ನಾ ಮಡ್ಡೀಗೆ। ೬೪೦

ಕಾಸೀನ ವಾಗ ಅಡವೀಲೆ

ಮಂಗ್ಳೂರೀನಣ್ಣಯ್ಯಾ ತಂಗೀ ಕರಿಯಾಲ್ವೊದಾ
ಎಂಜಲೋ ಅಣ್ಣಾ ಹೆರ್ಗೀರ। ಪಾಪೀ ತಂಗೇ
ಕಿಂಜರಕೀನಾಗೇ[೩೦] ಉರ್ಗಂದಾ। ೬೪೧

ಕಿಂಜರಕೀನಾದರೆ ಹರುವಾರ ಉರುವಾರ
ಬಾಳೇ ಇನ್ನಾಗ ಬನದಲ್ಲೆ।
ಬಾಳೇ ಇನ್ನಾದರೆ ಬಗತರ ಕುಯ್ದುಂಬಾರ
ಹೋಳು ಮೀನಾಗ ಹೊಳಿಯಲ್ಲೇ ೬೪೨

ಹೋಳೂ ಮೀನಾದರೆ ಅಂಬೇರ ತಿಂಬಾರ
ಅಸುವಂತನಾಗ ನಿಳ್ಳೀಗೆ
ಅಸುವಂತನಾದರೆ ನಿಳ್ಳೀಗೇ ಬಂದುಗ್ರೂವರ
ಕಾಸೀನವಾಗ[೩೧] ಅಡವೀಲೇ। ೬೪೩

---

೨೯. ಕಟ್ಟಿಡು ೩೦. ಒಂದು ಜಾತಿಯ ಕೆಂಪಿರುವೆ ೩೧. ಕಾಸರಕನಮರ

ಸೋದರಕೇ ಹೆಣ್ಣಾ ಕೊಡಬೇಕ

ಅಣ್ಣಾ ನಿನ್ಮೋರೇ ಕುಂದೀದಾ ಬಗಿಹೇಳ
ಮುತ್ತೀನಾ ಮುಡಿಯಾ ಮಗಳಾನೇ। ಕುಡ್ತೀಯಂದೇ
ಮುಟ್ಟೀಬಾ ಹರ್ವಾ[೩೨] ಜಿಲದೀಯಾ। ೬೪೪

ಬಾರೇ ಬಾರತ್ತೀಗೇ ಬಳಿಯಿಟ್ಟೇ ಜೂಜಾಡು
ಮಾಳೂಗೀಯೊಡ್ಡಾ ಮನಿಯೊಡ್ಡಾ। ಲತ್ತೂಗೀ
ನೀ ಸ್ವೊತ್ರೆ ನಿನ್ನಾ ಮಗ್ಳೊಡ್ಡಾ। ೬೪೫

ಕ್ವಾಟೀ ಮ್ಯೆನ್‌ನಾ ತಂಗೇ ಮಾತ್ತೇಳೇ ಕಳ್ಗಳ
ಕ್ವೊಪಿಲ್ದೇ ಕೇಳ ಹಿರಿಯಣ್ಣಾ। ನಿನ್ನಾ ತಂಗೇ
ಕೂಸಾ ಬೇಡ್ಯಾಳೋ ಕೊಮರಾಗೇ। ೬೪೬

ಗಂಗಿಮ್ಯೆನಿನ ಪಾಸ[೩೩] ಗವ್ರೀಮ್ಯೆನಿಲ್ಲವೇ
ಹೊಳಿಯಟ್ಟು ತಂಪ ದಿಡಕಿಲ್ಲ। ಅಣ್ಣಯ್ಯಾ
ಸೋದರಿದ್ದಟ್ಟೂ ಸುಕವಿಲ್ಲ। ೬೪೭

ಹಾಲಟ್ಟು ಕಸುವಿಲ್ಲಾ ನೀರಟ್ಟು ತಂಪಿಲ್ಲಾ
ಸೋದರದಟ್ಟೂ ಸುಕವಿಲ್ಲಾ। ಅಣ್ಣಯ್ಯಾ
ಸೋದರಕೆ ಹೆಣ್ಣಾ ಕೊಡಬೇಕ। ೬೪೮

*   *   *   *   *

ಅಣ್ಣಾನಾ ಮನಿಗೇ ಹೆಣ್ಣೀಗಂದೋಗದೆ
ಬಣ್ಣಾದಾ ತೆಣಿಗೇ ಹಸಿಹಾಕೇ। ಅಣ್ಣಯ್ಯಾ
ಹೆಣ್ಣೆದ್ದಾ ದೊರಿಯೇ ಕುಡ್ಮಾತಾ। ೬೪೯

ಹೆಣ್ಣಾ ಕುಡ್ವಕೆ ತಂಗಿ ಹಿರ್‍ಯರಾ ಕೈಬ್ಬೇಕೇ
ಮನಿಯಾ ನೋಡ್ಡಿಣ್ಣಾ ಕೊಡ್ಬೇಕ। ೬೫೦

ಮನಿಯೇನಾ ನೋಡೂವೆ ಮುಗುಳು ಮಂಟಪಸಾಲೆ
ಗಲಗಲನಂಬಾ ಗರಡೀಯೇ। ಒಳಗೆದ್ದಾ
ದೊರೆಯಾದಾ ನಿನ್ನಾ ಅಳಿಯಾನೇ। ೬೫೧

---

೩೨. ಹರಿಯವ ೩೩. ಪ್ರೀತಿ

ದೊರೆಗೋಳಂಬವ್ರ ದುರ್ಗಾದಲ್ಲಯ್ದಾರೆ
ದೊರೆಗೋಳೀಗಳಿಯಾ ಹಸಬಾಲೇ। ಬಾಲಯ್ಯಾ
ದುರ್ಗದ ಗುತ್ತಗಿಯೇ ತನ್ಗಂದಾ। ೬೫೨

ಹಿಣ್ಣೀಗೇ ಬರುವಾ ತಂಗೇ ನಿನ್ನಾಗೇ ಬರ್ಲೇಲಾ
ನಿನಕಿಂತ್ಲು ಮುದ್ಲೇ ಕಯ್ಲೋರ। ಪಾಂಡೋರ
ಹಿಣ್ಣೀಗ್ ಚೊಡಂಗಿ[೩೪] ಇಡ್ಲೊದ್ರ। ೬೫೩

ಎಟ್ಟಾ ಚೊಡಂಗೀಯಾ ಕಿತ್ತೇ ಒಲ್ಲಾಡೂವೆ
ಅಣ್ಣಾ ಶ್ರೀಕೃಷ್ಣನ್ ದಯವುಂದ। ಎದ್ದಾರೆ
ಕಟ್ಟೂವೆ ಪಾಂಡೋರೀಗ್ ಸೆರ್ಮುತ್ತಾ। ೬೫೪

*   *   *   *   *

ಅಣ್ಣಾನಾ ಕೋಡೇ ಹಿಣ್ಣಾ ಕೇಳಲು ಬಂತ
ಬಣ್ಣಾಣೀಯಲ್ಲೇ ಹುಸಿಯಿಲ್ಲಾ। ಅಣ್ಣನ ಮಡ್ಡೇ
ಕಣ್ಣಾ ಕಿಂಪಿದ್ಲೇ ಅರಸಾಗೆ। ೬೫೫

ಕಣ್ಣಾ ಕೆಂಪಲು ಬ್ಯೆಡಾ ನಿಮ್ಮಣ್ಣ ನನ್ಗೆಬ್ಯೆಡಾ
ನನ್ನೂರಲ್ಲುಂಟ ಸದಮದ್ಗಾ[೩೫]। ಅತ್ತೂಗಿ
ತಾಸೀಗಯ್ದಿಣ್ಣಾ ತರುವಾನೇ। ೬೫೬

೩೪. ಚೂಡಾಮಣಿ ೩೫. ಬೇಕಷ್ಟು

ತಾಯಮ್ಮಾ ನೀನೆದ್ರೇ ನಮ್ಗೇ ತಗ್ರೂರ

ಹಕ್ಕೀಗೇ ಹಣ್ಣರ್ತೇ ಮಕ್ಕೀಗೇ ಕಬ್ಬರ್ತೇ
ಮಕ್ಕೀ ಗದ್ದೀಗೇ ಮೊಳಿಯರ್ತೇ। ತಾಯಮ್ಮಾ
ನೀನ ಬಾಳೆದ್ರೇ ನಮಗರ್ತೇ। ೬೫೭

ಯಾರಾಮನ್‌ಬಾಳದ್ರು ದೀರ್ಯಾವೇನಂಗಿಲ್ಲಾ
ದ್ವೊರತಿ ಪುರವೇ ತಗ್ರೂರ। ಬಾಳೆದ್ರೆ
ದೀರ್ಯಾವೇ[೧] ನನ್ನಾ ಮನದಲ್ಲೇ। ೬೫೮

ತಾಯೆದ್ರೇ ತಗರೂರ ನೀರೆದ್ರೇ ಹೆಗ್ಗೆರೆ
ಆನೆದ್ರೇ ಅರ್ಸ್ನೂ ಅರ್ಮನೆ। ತಾಯಮ್ಮಾ
ನೀನೆದ್ರೇ ನಮ್ಗೇ ತಗ್ರೂರ। ೬೫೯

ಯಾರು ಎದ್ದಾರೇನೇ ಹೇರೇ ಹಬ್ಬಿದರೇನೇ
ಸಾವೀರಾ ಕೋಟೇ ಬಳಗಾವೇ। ಉಂಡೆದ್ದರು
ನನ್ನಮ್ಮಾಗೋಲುವಾರೆ ದರಿಯಲ್ಲು ೬೬೦

ಹೆತ್ತಮ್ಮಾ ಇರುವಂಕ್ರೀಗ್ ಹೊಟ್ಟೇತುಂಬ್‌ಬಡ್ಸ್ವಳ
ನಿತ್ತೀ ತುಂಬೆಣ್ಣೀ ಇರುವಳ। ತಾಯಮ್ಮಾ
ಅರ್ದಾದೀಮುಟ್ಟೂ[೨] ಬರ್‍ವಾಳ। ೬೬೧

ತಾಯೀಸತ್ರೆ ಮಗ್ಳ ಏನಂದೇ ಅಳ್ವಾಳೇ
ಬಾಗ್ಲದಾ ಕದವಾ ತಡ್ಕಂಡೇ। ನಮ್ಮನಿಯಾ
ಬಾಗೀ ಲಕ್ಷ್ಮೀಯೇ ತಲುಗೀತ। ೬೬೨

ನನ್ನಮ್ಮಿರುವಂಕ್ರೀಗ್[೩] ಏನೊಂಡ್ರೂ ಹಂಗಿಲ್ಲ
ನಾಳಾಗಣ್ಣಯ್ನಾ ಮಡದೀಯಾ। ಕಾಲಾದಲ್ಲೇ
ಹಾಲನ್ನಾ ಒಂಡ್ರೂ[೪] ನಿಜವಿಲ್ಲಾ। ೬೬೩

ಯಾರೂ ಇಲ್ಲದಮನ್ಗೇ ಜೋಗೇ ಬಿಕ್ಷಕೆ ಬಂದಾ
ತಾಯಿಲ್ದಾ ಮನ್ಗೇ ಮಗ್ಳೋಗೇ। ಬರುವಾಗೇ
ಕಡ್ಗಣ್ಣಲ್ ನೀರ ಸುರ್ವಾದ। ೬೬೪

---

೧. ಧೈರ್ಯ ೨. ತನಕ ೩. ತನಕ ೪. ಉಂಡರೂ

ಹಡದಮ್ಮೀದಂದೇ ಗಡಗಡ್ನೇ ಹೋಗದೆ
ಒಳಗೆ ಅಣ್ಣಯ್ಯಾ ಮಡದೀಯಾ। ದಿನಿಕೇಳೇ
ಹೆರಬಾಗ್ಲದಲ್ಲಿಂದೇ ಹೆರಬೆದ್ದೆ[೫]। ೬೬೫

ಹಡದಮ್ಮಿರುವಂಕ್ರೀಗೇ ನಿಡ್ಮನೆ ನಮ್ಮಾಗ್ದು
ನಾಳಾಗಣ್ಣಯ್ಯಾ ಮಡದೀಯೇ। ಆಳೂವಾಗೇ
ತಲಬಾಗ್ಲಿಂದೇ ಹೊರಟದು। ೬೬೬

ಕಡಗಾಯಿಲ್ಲದ ಕಯ್ಯ ಕಡ್ಮೋವವಿಲ್ಲದನಲ್ಲಾ
ಹಡದಮ್ಮಾನಿಲ್ದಾ ತಗ್ರೂರ।ರ್ಗೆ। ಹ್ವೊದಾರೇ
ಅಡ್ವೀಲೇ ವ್ಯಳೀ[೬] ಕಳ್ದಂಗೆ ೬೬೭

ಅತ್ತೂಗೇ ತಾಯಲ್ಲಾ ಹಿತ್ತಾಳೇ ಚಿನ್ನಲ್ಲಾ
ವಗ್ರಾಣೀಗಿಡುವೇ ಮರ್ನಲ್ಲಾ। ಅಣ್ಣಯ್ಯಾ
ತಾಯಿಲ್ದಾ ಮನಿಯೇ ತಗ್ರಲ್ಲಾ। ೬೬೮

ಕುಂದೊದೇ ಮುಳ್ಳಾ ಮೊನಿಯಂಗೇ

ಅಚ್ಚಾ ಪಾಂಡವ್ರೀಗ್ ಬಂದಂತಾ ಬಡತನಾ
ನಮಗೇನು ತಾಡೇ ಮರಳಮ್ಮಾ। ಕುಂತೀಯಾ
ಪಾಂಡವ್ರೀಗ್ ಬಂದಾ ಬಡತಾನಾ। ೬೬೯

ಸಿಟ್ಟೀನಲ್ ಬುಯ್ದದೇ ಸತ್ತೀದೊಳ್ ಗಿರಾಮಕೇ[೧]
ಸಿಟ್ಟೊ ಸಂಗ್ಟಾಕೇ ಒಡಿಯಾರಾ। ದ್ಯವಾರಾ
ಕಟ್ಟಕೇ[೨] ಸಾವ್ರಾ ಬುಯ್ದದೇ[೩]। ೬೭೦

ಮಕ್ಕಾಳು ಮನಿತುಂಬಾ ಕಟ್ಟಾಕೇ ಒಬ್ಬಳ
ಬತ್ತಾಕುಡ್ ಸಿವ್ನೇ ಅನುಗಾಲಾ। ಮಕ್ಕಳಿಗೆ
ನುಚ್ಚಂಬ್ಲಿ ಮಾಡೇ ಸಲ್ಲೂಗವೇ। ೬೭೧

ಅಂದೀಗೇ ನಾಕುಂದೇ ಇಂದೀಗೇ ಬಡವಾದೇ
ಹಿಂದೀನಾ ತೇಚಾ[೪] ಎರ್ಲೇಲಾ। ದೇವಾರೇ
ಕುಂದ್ವೊದೇ[೫] ಮುಳ್ಳಾ ಮೊನಿಯಂಗೇ। ೬೭೨

---

೫. ಹೊರಬಿದ್ದ ೬. ವೇಳೆ ೧. ಸತ್ಯವುಳ್ಳ ಗ್ರಾಮಕ್ಕೆ ೨. ಕಷ್ಟಕ್ಕೆ ೩. ಬಯ್ದಿದ್ದ ೪. ತೇಜಸ್ಸು
೫. ಕುಂದಿಹೋದ

ಯಾರೀಗೇ ಯಾರಿಲ್ಲಾ ಈ ಮನ್ಕೇ ದೀರಿಲ್ಲಾ
ಆ ರಾಣಿದಲ್ಲೊ ಪರದೇಸೆ ಸತ್ತಾರೆ
ಯಾರೀಗೇ ದುಕ್ಕಾ ಹಡ್ದಮ್ಮಾ ೬೭೩

ಆಸರ್ಕಿ[೬] ಅಳದಿಟ್ಟೇ ಬ್ಯೆಸರಿಕಿ[೭] ಬಳದಿಟ್ಟೇ
ಚಿಂತೀ ಕಾಲಲ್ಲೇ ತುಳ್ದಿಟ್ಟೇ। ಈ ದೇಹಾ
ಸೀಲೀ[೮] ಮಾಡಿಟ್ನೇ ಜನ್ರಲ್ಲೇ। ೬೭೪

ಬಡವಾರಾ ಮಕ್ಕಳ ನಿಡುವಾಗೇ ಸಂತೋಸಾ
ಹುಡಿಯಾಡೇ ಮನ್ಗೇ ಬರುವಾಗೇ। ಅವ್ರಾತಾಯೇ
ಬಡ್ತನ್ದಾ ಜಾನಾ ಮರ್ದ್ದಾಳೆ। ೬೭೫

ಬಡ್ತಾನಾ ಬಂತೆಂದೇ ಮಕ್ಕಾಳಾ ಬಡಿಲೇಲಾ
ಆಡಾಡೇ ಬಂದೇ ತೊಡಿಯಲ್ಲೇ। ಕೊಳತಾಗೇ[೯]
ಬಂದಾ ಬಡ್ತಾನಾ ಬ್ಯೆಲಾದು। ೬೭೬

ಬಡ್ತಾನಾ ಅಂಬೂದ ಬೆಡದೇ ಬೆನ್ನ್ಬುಡೆದಾವೇ
ನಿಡ್ವೀಲೇ ಬಾಲಾರಾ ತಲನಿರ್ದೇ[೧೦]। ಬರುವಾಗೇ
ಬಡ್ತಾನಾ ತುಲ್ಗೇ ಸಿರಬಂದು। ೬೭೭

---

೬. ನೀರಡಿಕೆ ೭. ಬೇಸರಿಕೆ ೮. ಕಲ್ಲು ೯. ಕುಳಿತಾಗ ೧೦. ತಲೆಬೆಳೆದು

ಒಡ್ಲಾ ಬ್ಯೆಗಣಿಯಾ ಸುರ್ಗೂವೇ

ಹೊಟ್ಟೀಲುರ[೧೧] ಬಂದಾರೇ ಕುಡ್ವೇನಾ ತಣ್ಣೀರಾ
ಹಿಡ್ವೇ ಚಂದಣದ ಒನಕೀಯಾ। ತಡದೀಕಂಡೇ
ಒಡ್ಲಾ ಬ್ಯೆಗಣಿಯಾ[೧೨] ಸುರ್ಗೂವೇ[೧೩]। ೬೭೮

ಕಟ್ಟಾ[೧೪] ಹೇಳೂವಾಕೇ ಅಕ್ಕಾ ತಂಗ್ದೀರಿಲ್ಲಾ
ಮುಚ್ಚಾ ಮಡ್ಕೀಲೇ ಇಸ್ರಕ್ಕೆ[೧೫]। ಬೇವಂಗೇ
ಬೇಯೂವೆನಮ್ಮಾ ಒಡ್ಲಲ್ಲೇ। ೬೭೯

ಹೆಣ್ಣಾಗೇ ಹುಟ್ಟೂದ್ಕಿಂತಾ ಮಣ್ಣಾದ್ರೆ ಲೇಸಮ್ಮಾ
ಮಣ್ಣೀನೊಳಗೆಯ್ದ ಸಂಪ್ತೀಯಾ। ಕಾಯಾದ್ರೆ
ತಣ್ಣಗೆ ಅದ್ರ ಮಿಲ್ವರ। ೬೮೦

ಹೆಣ್ಣೀನಾ ಕುರ್ತಾಗಾ[೧೬] ಏಗ್ಯೆರು ಅರಿಯಾರೇ
ಪಾಳ್ಯದಲ್ಲಿರುವಾ ಕುದ್ರೀಯಾ। ಕುರ್ತಾಕ
ರಾವತನುರ್ತು ತಿಳಿಯಾವೇ। ೬೮೧

ಹೆಣ್ಣೀನಾ ಉರ್ತಾಗೇ ಹೊನ್ನೀಯಾ ಮರ್ಬಾಡೇ
ಹನ್ನೆಯ್ದು ತ್ವೊಟದಾ ಏಲ್ತಾಟೇ। ದ್ಯೆವಾರೆ
ಹೆಣ್ಣೀನ ಉರಿಯೇ ತರವಲ್ಲಾ। ೬೮೨

ಪೂರು[೧೭] ಜಿಲ್ಮಾದಲ್ಲೇ ನಾಪುಣ್ಣೀ ಪಡಿಯಾಲಿಲ್ಲಾ
ಸುಮ್ಮನೇ ಸಿರಿಹರಿ ಬುಯ್ದದ್ದೆ। ನಮ್ಮಾ ಹಣೆಯಲ್ಲೇ
ಬೇಡೀ ಬಂದದ್ದ ಒಣಬವ್ದ। ೬೮೩

ಬೆಟ್ಟಬೇಯೂದಾ ಸಿಟ್ಟೆಲ್ಲೇ ಅರುವಾನೇ[೧೮]
ಹೊಟ್ಟೀಯಲ್ ಬೇವಾದ ಅರಿಯಾರ। ಅಡಿವೀಯಾ
ಗಿಡ ಬಲ್ಲು ನಮ್ಮಾ ಬೆಕ್ಳವಾ[೧೯]। ೬೮೪

ಕನ್ನೊಡೇ ಕಯ್ತಪ್ಪೆ ಹನ್ನೆಯ್ದು ಚೂರಾಗೇ
ಹೆಣ್ಣೀನಾ ಮನ್ಸ ಎಯ್ಡಾಗೇ। ದಾಳಿಂಬ್ದಾ
ಹಣ್ಣಾದರೇನ ಪಲವಿಲ್ಲಾ। ೬೮೫

---

೧೧. ಹೊಟ್ಟೆಯಲ್ಲಿ ಉರಿ ೧೨. ಬೇಗೆ ೧೩. ಸೊರಹುತ್ತೇನೆ ೧೪. ಕಷ್ಟ ೧೫. ಎಸರಿನ ಅಕ್ಕಿ ೧೬. ಕಷ್ಟವನ್ನು ೧೭. ಪೂರ್ವ ೧೮. ತಿಳಿಯುತ್ತಾನೆ ೧೯. ಕಷ್ಟ

ಹಾಲೂ ನುಂಗ್ವಂಕ್ರೀಗ್ ಗಿಳ್ಮೆಂದು

ಮಕ್ಕಳಾ ಪಾಸಕೇ ಹಕ್ಕೇ ಗೂಡಾ ಕಟ್ಟೇ
ಸಿಕ್ಕೀತೋ ಸಿವನಾ ಬಲಿಯೊಳಗೇ। ಯಮರಾಯಾ
ಹಕ್ಕೀಯಾ ಗೂಬೇ ಅರ್‍ಗಾಲೋ। ೬೮೬

ಅಗ್ಲೀದೆ ಅಗ್ಲೀದೆ ಜಗದಲ್ಲೊಂದುಸ್ತಾವಾ
ಹಗಲು ದೀವಟಗಿ ಬಿಳ್ಕೀಗೇ। ಬಾಲಯ್ನಾ
ಅಗ್ಲೀದೆನುಂದು ಗಳಗೀಲೇ। ೬೮೭

ಹಾಲೂ ಕೊಡ್ದಾ ಬಾಲಯ್ಯಾ ಹಾರೀದ ಗನ್ನಾಕೇ
ಮಾದೊಡ್ಡ ಕುಲದಾ ಎಳಿಹಿಳ್ಳೆ। ಬಾಲಯ್ಯಾ
ಸೇರೀದಾ ಸಿವ್ನಾ ಬಳ್ಗಾಕೇ। ೬೮೮

ನನ್ನಂತಾ ಪಾಪೇ ಇನ್ನೂ ದರಿಯಲ್ಲಿಲ್ಲಾ
ಹೊನ್ನಾ ತುಂಡೋಯ್ತೇ ಹೊಳಿಯಲ್ಲೇ। ದೇವಾರೆ
ಚಿನ್ನದಂತವ್ನಾ ಅಗಲೀದೆ। ೬೮೯

ತಿಂಗಳಾ ಬಿಳ್ಕೀಗೇ ಬಂದೋಗೋ ಬಾಲಯ್ಯಾ
ಚಿಂದ್ರ ಸೂಲ್ಯಮ್ನಾ ಬಿಳ್ಕೀಗೇ। ಬಾಲಯ್ಯಾ
ಕಂಡೋಗ ನನ್ನಾ ಕನಸೀಗೆ। ೬೯೦

ಕಾದಾ ಕಲ್ಲರಿಮ್ಯೆನೇ ಚೇರಗ್ ಸಾಲೀ ಬಿತ್ತೇ
ಹಾಲೂ ನುಂಗ್ಪಂಕ್ರಿಗ್ ಗಿಳಮೆಂದು। ಬಾಲಯ್ನಾ
ಆಯ್ಸು ತುಂಬ್ವಂಕ್ರೀಗ್ ಸಿವ್ನೊಯ್ದಾ ೬೯೧

ಬೆಟ್ಟಾದಾ ಬಾಳೀಯಾ ಹುಕ್ಕೇ ಸವ್‍ರ್ದನ್ಯೆರೇ[೨೦]
ನೆಟ್ಟವ್ನಾ ಹುರ್ತೂ ಪರ್‍ತ್ರಲ್ಲಾ। ಯಮರಾಯ
ಹುಕ್ಕೇ ಸವ್ರ್‍ದ್ನೇ ಎಳಿಯವ್ನ। ೬೯೨

ಸತ್ತಾವಾರುಟ್ಟೂವಾರೇ? ಬತ್‍ಮರಾ ತಿಗ್ರೂದೇ?[೨೧]
ಬೆಂದಿಳ್ಳೇ[೨೨] ಬೇರಾ ಉಡುವಾದೆ?। ಬಾಲಯ್ಯಾ
ಸರ್ಗಕ್ಕೊದಾರೆ ಬರುವಾನೆ?। ೬೬೩

---

೨೦. ಕಡಿದು ಹಾಕಿದವನಾರು? ೨೧. ಚಿಗುರುವುದೆ? ೨೨. ಸುಟ್ಟುಹೋದ ಅಶ್ವತ್ಥ

ಮರ್‍ಗೂವೇ ಕಡಲಾ ತೆರಿಹಂಗೇ

ಗಂಡಾ ಇಲ್ಲದ ಬಾಳ್ಯ ತಿಂಗೂ ಇಲ್ಲದಾ ತ್ವೋಟಾ
ಗಂದಾ ಕಸ್ತೂರಿಯೇ ಹಣಿಯಲ್ಲೇ। ಇಲ್ಲಾದಾ
ನಾವುಳ್ದೇ ಇನ್ನೇ ಪಲವೇನ। ೬೬೪

ಗಂಡಾ ಸತ್ತಮ್ಯಾಗೇ ಗಂದಾ ಕಸ್ತೂರ್‍ಯೆಕೇ
ಬಂಗಾರಾವ್ಯೆಕೇ ಬಳಿಯಾಕೇ। ನಂಗಿರುವಾ
ಬಂಗಾರಾ ಸಿವ್ನೇ ಕಸ್ಕಂಡಾ। ೬೯೫

ಉತ್ತುಮ್ರಾ ಹೊಟ್ಟೇಲುಟ್ಟೇ ಮುತ್ತೀನಾ ಸರ್‍ವಾದೆ
ಮುತ್ತ ತರ್ಸದ್ರೇ[2] ರಾಯರ। ಪುಣ್ಯಾದಿಂದೇ
ಮುತ್ತಾನಾ ಕ್ಯೆಂದಗಿಯಾ ಮುಡ್ದದೆ। ಯಮರಾಯಾ
ಎತ್ತಾಗಿಂದ್ ಬಂದೇ ಕಸ್ಕಂಡೆ। ೬೯೭

ಅಟ್ಟನ್ನಾ ಉಂಬಂಕ್ರೀಗ್ ಮುಟ್ಟದ್ನೇ ಯಮರಾಯಾ
ಬೆಟ್ಟಾದಲ್ ಮುಗಳ ಅರಗೀದ। ದ್ಯೆವಾರೇ
ಬಿತ್ತೀದ ಬೆಳಿಯಾ ಒಣ್ಣೇಲಾ[3]। ೬೯೮

ಅರಸೂ ನನ್ರಾಯರ ಅರಸದ್ರೂ ಕಾಣಾರೇ
ಅರಸ್ರ ದಂಡೂಗಿ ಇಳುವಲ್ಲೇ। ಅರಸಾರ
ತಲಸುತ್ತಾ[4] ಕಂಡೇ ಮರ್ಗೂವೇ। ೬೯೯

ರಾಜಾ ಮಾರ್ಗಾದಲ್ಲೇ ರಾಯಾರಾ ನಿರಳಿಲ್ಲಾ।
ಯಾವಾ ತಾಣಾಕೇ ನೆಡದಾರ। ಗಿಳಿರಾಮಾ
ನೀನೋಗೇ ನಲ್ಲಾನ ಕರ್ತಾರೋ। ೨೦೦

ಕಂದಾನಾ ಹೆರ್ಲೀಲಾ ಕ್ಯೆ ಬೀಸಿ ನಿಡಿಲೇಲಾ[5]
ಗಂಡಾನಾ ಪುಣ್ಯಾ ಒಣ್ಣೇಲಾ। ದ್ಯೆವಾರೇ
ರಂಡೀತನಕೇಗೇ[6] ಗುರಿಯಾದೆ। ೨೦೧

---

೧. ಕಳೆದುಹೋದ ೨. ತರಿಸಿದ್ದರು ೩. ಉಣಲಿಲ್ಲ ೪. ಮುಂಡಾಸು ೫. ನಡೆಯಲಿಲ್ಲ
೬. ವೈಧವ್ಯಕ್ಕೀಗ

ಬೆಂದಾ ಬೆಟ್ಟಾದಲ್ಲೇ ನಂದನ್ನಾ ನಿಸಹುಟ್ಟೇ
ತಂಗಾಳಿಯಿಲ್ಲಾ ತನಸಿಲ್ಲಾ। ಅರಸಾಗೇ
ಗಂದಾದಾ ಮರ್ನೇ ನಿಳ್ಳಾಗ। ೭೦೨

ತಂದೆಯಿಲ್ದಾ ಮಕ್ಳಾ ಆಯಾನೋಡ ಸಿರಿಹರಿ
ಬೆಂದಾ ಕುಂಬ್ರೀಯಾ ಕುರ್ಲಂಗೇ[೭] ಬಾಲಾರಾ
ಚೆಂದಾ ಕಿಡಸಿದ್ಯೋ[೮] ನಿಡವೀಗೆ। ೭೦೩

ಅಪ್ಪಾನಂಬ್ ಬಾಸೆ ತಪ್ಪೀ ಹೋಯಿತ ಸಿವ್ನೇ
ಸಿಕ್ಕೀದಲ್ ಬಾಯಾ ಕಳುವಾರ। ೭೦೪

ಹಿಣ್ಣೂ ಮಕ್ಕಳ ತಾಯೆ ಪುಣ್ಣುಳ್ಳ ಅರಸಾರ
ಹೊನ್ನಾಕುಟ್ ತಿಂಗಾ ನಿಡ್ಸರ। ಅರಸಾರ
ಹಿಣ್ಣೀನಿಂದ್ ಹಿಸ್ರ ನಿಡ್ವದ। ೭೦೫

ಯಾಲಕ್ಕೀ ತ್ವೋಟಾವೇ ಕಾಡಕ್ಕೀ ಬೂಮೀಯೇ
ಯಾಕೇ ನನ ಜಿಲ್ಮಾ ದುಳಬಾಡೇ। ಅರಸಾರ
ಲೋಕಾ ಆಳ್ವರೇ ಮಡ್ದರ। ೭೦೬

ಹತ್ತೂ ಕಲ್ಲೆಟ್ರೇ ಹತ್ತೂ ಬಾಗಿಲೆಟ್ರೇ
ಹತ್ತೂ ಮುತ್ತೆಟ್ರೇ ಸರಳೆಟ್ರೇ। ಅರಸಾರ
ಮಕ್ಕಳ ಬಾಳೇ ಎರ್ಲಂದ್ರೇ। ೭೦೭

ಪುರುಸರೊಳ್ಳರಂದೇ ಸರಸಾನಾಡದಿರ
ಬಿರ್ಸುಂಟೇ ಅರ್ವಾ ಎದಿಯಲ್ಲೇ। ತಿಂಗೀನಾ
ಕೊನಿಯಾ ಕಡ್ವಂಗೇ ಕಡ್ವರ। ೭೦೮

ಗಂಡಾ ಸತ್ತಾಮ್ಮಾಗೇ ರಂಡೆಯೆನ್ನಲುಬ್ಯೆಡಿ
ಗಂಡು ಬಾಲಕನೇ ಒಳ್ಗೇಂವಾ|ಳ್ಗಿದ್ದೇ। ನಂಬೂನೇ
ಪುಂಡೀ ನಾಲಗಿಯಾ ಸಿಗಳೂವೇ। ೭೦೯

ಗಂಡೆದ್ದಮ್ಮಾನಾಕಯ್ಲೇ ಮಂಡಾಲಾ ಬರಿಯಂದ್ರ
ಗಂಡಿಲ್ಲಾದಮ್ಮಾನಾ ಮೊಕನೋಡೇ। ಏನಂಬಾರ
ಎಂಜಲ್ದಾ ಎಲಿಯಾ ಉಗಿಯಂದ್ರ। ೭೧೦

ಅರ್ಸೆದ್ದಮ್ಮಾನಾ ಕಯ್ಲೇ ಆರತಿ ತಾರಂದ್ರೇ
ಅರ್ಸಿಲ್ಲಾದಮ್ಮಾ ಮೊಕನೋಡೇ। ಏನಂದಾರ
ಮುರ್ಸಲಿ ಮಡ್ಕೀ ತುಳಿಯಂದ್ರ। ೭೧೧

೭. ಒಣಗಿದ ಕೋಲಂತೆ ೮. ಕೆಡಿಸಿದೆ

ಒಡ್ಲಲ್ಲೇ ಉರಬ್ಯೆರೇ ಉಯ್ಯಾಕಸ್ದಾ ದಗ ಬ್ಯೆರೇ
ಕಂಡೋರ ಮಾಡೀದಾ ಹೊಗಬ್ಯೆರೇ। ಅರಸಾರೇ
ನೀವೇ ಇದ್ದೊದಾ ದಿನ್ದಲ್ಲೇ। ೭೧೨

ಮಗ್ರೂವ ಅಕ್ಕೀಗೇ ತುಳ್ದೇ ಅಕ್ಕೀ ಹುವ್ವೆ
ಮರ್‍ಗೂವೇ ಕಡ್ಲಾ ತೆರಿಹಂಗೇ। ಯಮರಾಯ್ನಾ
ಮಗ್ಳು ನನ್ನಂತೇ ಮರ್‍ಗಲಿ। ೭೧೩

ಬಂಜೀ ನಿನ್ಬದ್ಕ ಪರ್ರೀಗೇ

ಬಂಜೀ ಬಾಗಲ್ದಲ್ಲೇ ತಿಂಗೀನಾಗಿಡ ಹುಟ್ಟೇ
ಹೆಡಿಯಾಮ್ಯೆನೆಲ್ಲಾ ಗಿಳಕೊಳ್ತು। ಕುಳ್ತೇ। ಏನಂದು
ಬಂಜೀ ನಿನ್ ಬದ್ಕ ಪರ್ರೀಗೆ ೭೧೪

ಮಕ್ಕಾಳಿಲ್ಲೆಂದೇ ಮೈಲೂರೀಗೋಗದೇ
ಮಯ್ಲೂರ ಗಂಗೇ ಮರಸೇರೇ। ನಿಂತೀಕಂಡೇ
ಚಿಕ್ಕೋಳೀಗೆಂತಾ ಪಲವಂತ। ೭೧೫

ಕಂದನಾ ಕುಡಸ್ವೋಮೀ ಬಂದಾನಾ ಪಡ್ಲಾರೆ
ಹಂಗೀನಾ ಬ್ವೊನಾ ಒಣ್ಲಾರೆ। ದ್ಯೆವಾರೆ
ಬಂಜೆಂಬ ಸಬ್ದ ಹೊರನಾರೆ। ೭೧೬

ಸಂತಾನಾವಿಲ್ಲೆಂದೇ ಸಂಪೂಗಿ ನೆಟ್ವಾಳೇ
ಸಂಪಗ್ ಸಾವರ್ದಾ ಹೆಣಿಯುಡ್ದೆ। ದ್ಯೆವಾರೆ
ಸಂತಾನ್ದ ಹಿಸ್ರ ನಿಡಿಯಾಲೆ। ೭೧೭

ಬಾಲರಿಲ್ದಕ್ಕಮ್ಮಾ ಏನಾ ದೊಡ್ದಾರೇನೆ
ಗಾಣಾದಾ ಇತ್ತ ದೊಡ್ದಂಗೆ ದ್ಯೆವಾರೆ
ಉಂಡೇ ಬಾಳೆಲಿ ಸೊಣ್ದಂಗೆ। ೭೧೮

ಬಂಜೀಯಾ ಮನಿಯಲ್ಲೇ ಎಂಜಾಲಾ ಚೆಲ್ಲಾವೇ
ತುಂಬೀದಾ ಕೊಡನೇ ತೊಳ್ಕಾವೇ। ಸಿವಸಿವಾ
ಬಂಜೀ ಅಂಬ್ ಸಬ್ದ ಬರ್ದೆರಲೇ। ೭೧೯

ಮಾಳೂಗಿ ಒಳಗೇ ಬಣ್ಣಾದುಳ್ಳಾತಿಗದೇ
ಹಣ್ದಮಿರ್ವೇ ಅಂದ್ರೇ ಸೊಸಿಯಿಲ್ಲಾ। ದ್ಯೆವಾರೆ
ಪನ್ನೀ ತಿದ್ವಂತಾ ಮಗ್ನಿಲ್ಲಾ ೭೨೦

ಪುತ್ರಾ ಸಂತಾನಿಲ್ಲಾ ಪುರಿಸರ್ಕೋಡ ಗುಣಯಿಲ್ಲಾ
ಹೋಗೀ ಬರುವಂದ್ರೂ ತಗ್ರಿಲ್ಲಾ। ಗೋವಿಂದಾ
ನೆಂತಲ್ಲೇ ಜೇಂವಾ ಮಡಿಯಾಲೋ। ೭೨೧

ಮಡದೇ ಮೊನದಾರೇ ಮಂಚಾಕೇ ಬಾರಾಳೇ

ಗಂಡಾನಾ ಗುಣವನೇ ಕಂಡೇ ಬಂದಳ ನಾರೇ
ಮಂಡೂಕಿ ಮೇವಾ ಬಸವನಾ। ಹೆಜ್ಜೀಯಾ
ಕಂಡೇ ಬಂದಾಳೇ ಕಡಜಾಣೇ। ೭೨೨

ಹಾಲಾಗುಂಬಳವ ಕಾಯಾ ಹಾಲುಯ್ದೇ ಪಾಯಸನಟ್ಟೇ
ಹಾದೀಯಾ ಮನಿಯಾ ನಿಸಣಕ್ಕಾ[1]। ಮಾತಾಕೇಳೇ
ಹಾಲಂತಾ ಮನವೇ ಗಯ್ದೀತ[2]। ೭೨೩

ಗಂಡಾನಾ ಗುಣವೇ ಗುಂಡೀಯಾ ನೆಲಿಯೇನೆ
ಕೆಂಡ ಮಜ್ಜಗಿ ರುಚಿಯೇನೆ। ನನ್ನಮ್ಮಾ
ಗಂಡಾನಾ ಗುಣವೇ ಅವಗುಣಾ। ೭೨೪

ಮಡದೇ ಮೊನದಾರೇ ಮಂಚಾಕೇ ಬಾರಾಳೇ
ಹೂಂವನಾ ಬಾಗ್ಲಾವಾ ಗಳಿಯಾಳ। ನಲ್ಲಾತಂದಾ
ಮಲ್ಲೂಗಿ ಸರ್ವಾ ಮುಡಿಯಾಳ। ೭೨೫

---

೧. ವಿಷದಕ್ಕನ ೨. ಗರಡಿತು

ಗಂದಾದಾ ಮಾಳಗ್ಯೇ ಎಯ್ಡಾದು

ಮನಗೀದಾ ಮಡದೀಯಾ ಬಡದೇ ಏಳಿಸಿಕಂಡಾ
ಕಡಜಾಣೇ ಕೇಳೇ ಕನಸುಂದಾ। ಮಂಚ್ದಮ್ಯೆನೇ
ಆಡಾಡೇ ದಾಳಾ ಹೊಡ್ದಂಗೇ। ೭೨೬

ದಾಳಾ ಅಂಬುದ ರಾಯ್ರಾ ರಾಣೀಕಾಣಾ ನಿಮ್ಗೆ
ಮತ್ತುಂದು ಜಾಣೇ ಬರುವಾದ। ೭೨೭

ಸಿದ್ದೀಯಲ್ ಸೆರಮುತ್ತ ಕೊಳ್ಗಾದಲ್ ಕೊಳ್ಗ ಹೊನ್ನ
ಗುತ್ತೀ ರಾಜ್ಯದಾ ಆಪರಂಜೀ। ಚಿನ್ನಾವೇ
ನಿನ್ನಾ ಮೈನುಂಟ ಪ್ರಾಣಾವೇ। ೭೨೮

ಉಂಬೋಟಾ ಒಂಡಾನೇ ಉಂದೆಲಿಯಾ ಮೆಲ್ದಾನೇ
ಏಗೆದ್ದಾರಾಯಾ ಮುದವೀಗೆ। ಹೋಗ್ವಾಗೇ
ಮಡ್ಡೋಗೇ ಸಿರ್ಗ ತಡ್ದಾಳೇ। ೭೨೯

ಸಿರ್ಗಬಿಡ ಮಡ್ಡೀ ಸಿರಿ ಹೊನ್ನಾ ಹುಯ್ಲೂವೇ
ಬಿಡಮಡ್ಡೀ ನಿನ್ನಾ ಉಯ್‌ಮನಸಾ[೧]। ಬೆಟ್ಟಾರೆ
ತಂಗೀ ತತ್ತೀನೆ ನಿನ್ಗುಂದಾ। ೭೩೦

ತಂಗೀ ತಂದ್ರೆ ಸ್ವೊಮೀ ಸಂಗ್ರಾಮಾ ನನ್ಗಿಲ್ಲಾ
ಗಂದಾದಾ ಮಾಳಗ್ಯೇ ಎಯ್ಡಾಗು। ನಮ್ಮಾನಿ
ಬಂದೀಯ ಕುಳ್ಳ ಬದಲಾದು ೭೩೧

*   *   *   *   *

ಎಯ್ಡಾ ಹಿಂದ್ರ ಗಂಡಾ ಗದ್ದೀಲೇ ಗರ್ಗನ ಕಂಡಾ
ಎಯ್ಡೊ ಕಯ್ಯಲ್ಲೇ ಸೆಳಬೆತ್ತಾ। ಹಿಡಕಂಡೇ
ಹಿಂಡ್ರಾ ಗಿಯ್ಲೂನೇ ಬಯ್ಲಲ್ಲೇ। ೭೩೨

---

೧. ವೈಮನಸ್ಸು

ಮಡದೀ ಸೆಣ್ಣವಳೆಂದೇ ಗಂಡಾ ದಂಡೀಗೊದಾ

ಮಡದೀ ಸೆಣ್ಣವಳೆಂದೇ ಗಂಡಾ ದಂಡೀಗೊದಾ
ಏಳುರಸನ ಮ್ಯನೇ ಮನಿಗ್ಬಂದಾ। ಏಸೂರಾಯಾ
ಸಿಣ್ಣವ್ಳೆ ಕದ್ವಾ ತಿಗಿಯೆಂದಾ। ೭೩೩

ಕದವಾ ತಿಗುವಾಕ ಸ್ವೊಮೀ ನಾನೊಬ್ಬಾಳಲ್ಲಾ
ತೊಡಿಯಾ ಮ್ಯನುಂಟ ಹಸಬಾಲೆ।
ತೊಡಿಮ್ಯನ್ನಾ ಬಾಲಯ್ನಾ ಬೂಮೀಮ್ಯನಿಡಂದಾ
ಸೆಣ್ಣವ್ಳೇ ಕದ್ವಾ ತಿಗಿಯೆಂದಾ। ೭೩೪

ಗಡಗಡಾ ಅನ್ನುತ್ತೇ ಮುಡಿಯಾ ಅಲ್ಲಾಡುತ್ತಾ
ಸಡಗಾರ್ಸೆ[೧] ಕದ್ವಾ ತೆಗ್ದಾಳೆ। ೭೩೫

ನಾಹೋಗೂವಾಗನೀ ಸೆಣ್ಣವಳಾಗದೆ
ಏಗಿಟ್ಟು ಬ್ಯಗೇ ನೆರ್ದೀಯೇ। ಮಡದೀ ಕೇಳೇ
ಯಾರುಂಡೇ ಬಾಯಾ ತೊಳ್ದಾರೇ। ೭೩೬

ನೆಟ್ಟ ಮಲ್ಲುಗೆ ಸ್ವೊಮೀ ನೆಟ್ಟಂಗಿರುವಾದೇನ
ಚಪ್ಪಾರಾ ತುಂಬೇ ಅಲ್ವಾದ।ಲ್ದೇ। ಹೂಂವಾಗ್ವಾಗೇ
ನಿವ್ಮಂತಾ ಜಾಣಾ ಮುಡ್ದೊದಾ। ೭೩೭

ನಿಲ್ಲೀಕಾಯ್ ನಿರಿಯಮ್ನಾ ನಿಲ್ಲಸ ದಂಡೀಗೊದಾ
ಹಾರಾಟ್ದಾ ಮ್ಯನೇ ಹಾರ್ಬಂದೇ। ಏನಂಬಾನೇ
ನಾರೀ ನಿನ್ಮಗ್ನಾ ಹಿಸ್ರೇನೇ। ೭೩೮

ರಾಮ ಲಕ್ಷ್ಮಣ ಈರಬದ್ರಾ ಸ್ವೊಮೀ
ತೋಳು ಪಲ್ಲಂಕೀ ಸುಬ್ರಾಯಾ। ಮುತ್ತನ ಚೆಂಡ
ನಿಮ್ಮಪ್ಪಾಗೋಗೇ ಸರಣನ್ನಿ। ೭೩೯

ಹಾದ್ರ ಕುಟ್ಟೀದವ್ರಾ್ಯ ನೀವ್ ಹಲವಾಬಲ್ಲಿಟ್ರ್ಯಾ[೨]
ಸಾವಂತೂಗೀನಾಗಿ ಇರಳೀರಿ।

---

೧. ರಭಸದಿಂದ ೨. ಹಲವರನ್ನು ಬಲ್ಲವರೆ

ಕಳ್ಳಾ ಕಳುವಾಕೊದಾ ಬಿಳ್ಳೀ ಸೋಲಾಕೆ ಬೆದ್ದಾ

ಬಿಳ್ಳೊ ಮೂಡೂವಾಗೇ ಬಿಳ್ಳೂಳಿ ಮಾರಲು ಬಂದಾ
ಕಳ್ಳಾನೇ ಅಮ್ಮಾ ಬಣಜೀಗಾ। ನಮ್ಮನಿಯಾ
ಕವ್ಲಿತ್ತಿನ ದಾಂಬಾ[೧] ಬಿಡಸೀದಾ। ೭೪೦

ಮಾವನಾ ಮಗನಂದೇ ಹಾಸೀದಾಸುಗಿ ಕೊಟ್ಟೆ
ಮಾವನಾ ಮಗನಲ್ಲಾ ಜನಗಳ್ಳಾ। ಜಾತ್ರಗಳ್ಳಾ
ವಾಲೀಯಾ ದಳಿಯಾ ಕೊಯ್ದಾನೇ। ೭೪೧

ಕಳ್ಳಾ ಕಳುವಾಕ್ವೊದಾ ಬಿಳ್ಳೀಸೋಲಕೆ ಬೆದ್ದಾ
ಕಳ್ಳನಾ ತಂಗೀ ಅಳಬ್ಯೆಡಾ। ಅಣ್ಣಯ್ಯಾ
ಬಿಳ್ಳೀಯ ಸೋಲ್ಕೇ[೨] ಬೆದ್ದಾನೆ। ೭೪೨

ಕಿಣ್ಕೇದವ್ರೆರೇ ಜಗ್ಗಾವಾ

ಹಿತ್ಲಾಕೊದವರ್ಯೆರೇ ಹೂಂವಾ ಕೊಯ್ದವರ್ಯೆರೇ
ಮಿಟ್ಟೀದವ್ರೆರೇ ಸರ್ಪಾನಾ। ಕಾಳಿಂಗಾನಾ
ಕಿಣ್ಕೇದವ್ರೆರೇ ಜಗ್ಗಾವಾ। ೭೪೩

ಹುಬ್ಬೊ ಕೊಣದಾವೇ ಹುಯ್ಮಾಲೀ[೧] ಮಾತೀಗೇ
ದುಬ್ಬೀ ತಾಟಗ್ತೀ ಜವ್ನಾರೀ[೨] ಮಾತೀಗೇ
ನುಗ್ಗೀ ಬೇರಿದ್ದೇ ಕೊಣ್ದಾವೇ। ೭೪೪

ಸೆಣ್ಣವಳಾದರೂ ಸರ್ಪಾನಾ ಮರಿಯಂಗೇ
ಸೆಣ್ಣವ್ಲಾ ಕಿಣ್ಕೇ ಕೆಡಬ್ಯೆಡಾ। ಎಲ್ನಾರಿ
ಸ್ವೊರ್ಗಾಕೇ ಹೋಗೂ ದಿನ ಬಂತೇ। ೭೪೫

ಕ್ವೊಣಾನಾ ಕಟ್ಟಾಳೇ ಎಮ್ಮಿಯಾ ಬೆಟ್ಟಾಳೇ[೩]
ಮರ್ಗಲ[೪] ದನದಂಗೇ ಕೊಣ್ದಾಳೇ। ಈ ಹಿಣ್ಣೀಗೇ
ಯಾವಲ್ಲಿ ನಲ್ಲಾ ದುರ್ಕೀನೇ। ೭೪೬

---

೧. ಕಣ್ಣಿ, ದಾಬು ೨. ಶೂಲಕ್ಕೆ ೧. ಹೊಯ್ಮಾಲಿ ೨. ಯೌವ್ವನದ ಹೆಣ್ಣು ೩. ಬಿಟ್ಟಳು ೪. ಬೆದೆಗೆ ಬಂದ

ಮಡ್ಕೀಯಾ ರಾಸೀಲೇ ಬುಡ್ಕಂಬೂದೇ ನಮ್ಮಾ
ಅಡ್ಕತ್ರಿಲ್[೫] ಅಡ್ಕೀ ಒಡ್ದಂಗೇ। ಎಲ್ನಾರಿ
ಮಿಡ್ಕಾಡು ತುಡಿಯಾ ಕುಯ್ಕಂಬೇ। ೭೪೭

ಬೆಟ್ಟಾಕೋಗೂವಾಳೇ ಬುಟ್‌ಮಿಣ್ಣ ಕುಯ್ವಾಳೇ
ಬೆಟ್ಟಕೇ ಹುಬ್ಬಾ ಜಿಡುವಾಳೇ[೬]। ಏ ಹೆಣ್ಣೇ
ನಾ ಕುಡ್ತಿ ಬಾರೇ ಚೆಲುವಾನಾ। ೭೪೮

ಹಗಲು ಹಾದರ್ತಿ ಬಸಲೀಗು ಮುಳ್ಳೇನೇ
ಹಾಲೀನಾ ಒಳಗೂ ಇಸವೇನೇ। ಅರಿಯದಾ
ಬಾಲಮ್ನಾ ಮೈನೂ ಹಳಿಯೇನೇ। ೭೪೯

ಹುಲ್ಲಗ್ವೊಣೀ[೭] ಬುಡ್ಕೆ ಪಲ್ಲೆಯ್ಸೀ ನೆಂತತ್ತಿಗೇ
ಬಲ್ಲಾನೇ ನಿನ್ನಾ ಗುರ್ತಾವಾ। ನಿಲ್ಲೂರಾ
ಹುಲ್ಲಾ ಮಾರ್ವನಾ ಮಗಳೇನೇ। ೭೫೦

ಉತ್ತುಮ್ನಾ ಹೊಟ್ಟುಲುಟ್ಟೆ ನಾ ತಪ್ಪುಂದನಾಡೂನೇ
ತಪ್ಪಾದೇ ನನ್ನಾ ಬುಯ್ದರ। ಬಾಯೀಗೇ
ನಿಪ್ಪಾ[೮] ಸೋಕ್ದರು ಉರಿಹೊವ್ಗಾ। ೭೫೧

ಕಡಗತ್ತೀ ಗಾಯಾವೇ ತಟ್ಟಾನೇ ಮಾಣೂವಾದ
ಸೀಳು ನಾಲಗಿಯಾ ಉರ್‌ಸಿಂಗೀ[೯]। ಹೇಳಿದ ಮಾತ
ಇಚ್ಚರ್ಕೇ[೧೦] ಬೆಂದಾ ಒಡ್ಲಲ್ಲೇ। ೭೫೨

* * * * *

ಹೊತ್ತಾರ ಮುಂಚಿದ್ದೇ ತಿಪ್ಪೀಲೇ ಮೇವ್ ಹುಂಜಾ
ಮುತ್ತನಾ ತೋರಣ್ದಾ ಪಡಿಹುಂಜಾ। ಸರಗೆಯ್ದರೆ
ಕೋಳೀಯಾ ಕುಳ್ಳಾ ಮುರುವಾನೇ। ೭೫೩

ಆಳೀಗೇ ಸರಗಯ್ದೆ ಅರಸೂಗೇ ಸರಗಯ್ದೆ
ಹೊತ್ತಾರಾ ಮುಂಚೇಳೂ ಗರತೀಗೆ। ಸರಗಯ್ದೆ
ನಿನಗಿಲ್ಲೆ ಸರಗಯ್ದೆ ನಿದಗೇಡಿ। ೭೫೪

* * * * *

ಕಣ್ಣೊ ಕಣ್ಣನಾ ಸಾಲೇ ಕುಂಡೀಮ್ಯೆನಿಳಬಿಟ್ಟೇ[೧೧]
ಪುಂಡರಾ ಬಿನ್ನತ್ತೇ ತಿರ್ಗಳ। ಎಲ್ನಾರಿ
ಗಂಡಿಲ್ಲವೇನೇ ಮನಿಯಲ್ಲೇ। ೭೫೫

---

೫. ಅಡಿಕೆ ಕತ್ತರಿ ೬. ಹಾರಿಸುವ ೭. ಬಣಿವೆ ೮. ಉರಿಯುವ ಬೂದಿ ೯. ತನ್ನನ್ನು ತಾನೇ ಕಚ್ಚಿಕೊಳ್ಳುವ ಕಾಲ್ಪನಿಕ ಪ್ರಾಣಿ ೧೦. ನೆನಪು ೧೧. ಎಸಳು ಬಿಟ್ಟು ೧೨. ಉರಿಯುವ ಜ್ವರ

ಹಗಲು ಹಾದರ್ಗಿತ್ತೇ ಇರಳೀಗ್ ನೀರೀಗೋಗೇ
ಬುಗರೀಯಾ ಮುಳ್ಳೂ ಮೊರದಾವೇ। ಆ ಮುಳ್ಳಾ
ಆಯೊಳ್ಳಾ ಜಾಣಾ ಸುಗತೆಗ್ದಾ। ೭೫೬

ಬತ್ತಾ ಮಿರುವರೀಗೇ ಸಂತೋಸಾ ಆಗಾಲೇ
ನಿಂತೇ ನೋಡ್ವರಿಗೆ ಉರ್ಜರಾ[೧೨]। ಕರ್ಜರಾ
ನಾಳಾಗಿಟ್ಟೋತೀಗ್[೧೩] ಬಿಡಜರಾ। ೭೫೭

ಹತ್ತಿಂಟಾ ಮಕ್ಕಳಾ ಹಿತ್ತೇನೂ ಪಲವಿಲ್ಲಾ
ಸತ್ಯಕೂ ಇಲ್ಲಾ ಸುಕಕಿಲ್ಲಾ। ಮಕ್ಕಾಳಾ
ಹೆತ್ತಾಳೇ ಬೂಮೀ ಹೊರಿಯಾಗೇ। ೭೫೮

ಮಕ್ಕಾಳಾ ತಾಯೇ ನೀ ಕೆಟ್ಟೆನೆನ್ನಲು ಬ್ಯೆಡಾ
ಪಕ್ಷೀ ಜಾತೀಲೇ ಗರುಡಾನೇ। ಹುಟ್ಟೀದಾನೆ
ತಮ್ಮವ್ವೀ ಸೆರಿಯಾ ಬಿಡಿಸೀನೆ। ೭೫೯

ಹುಕುಮುತ್‌ಗಾರ[೧೪]ಹೆಣ್ಣೀನ ಹುಕುಮೂತಿ[೧೫] ತಿಳಿಯಾವೇ
ಜಪಮಾಡು ತಾಳೇ ಕೆರಿಯಲ್ಲೇ। ಆ ಹೆಣ್ಣೀನ
ಹುಕುಮೂತಿನ್ನೆರೀಗ್ ತಿಳಿಯಾವೇ। ೭೬೦

ಆಕೆ ಬಯಸೀಯಾಳ ನೀತೊಳ್ಳಾ ನಲ್ಲಾನಾ
ಆಚಾರಾ ಸುದ್ದಾ ಚೆಲುವಾನಾ। ಹಣ್ಣಡಕೀಯಾ
ಬಯಸೀಯಾಳ ತೋಳಾ ಮರಿಯಲ್ಲೇ। ೭೬೧

ಹಾಡಾಗಾರ್ತಮ್ಮಾನಾ ಹಡಗ್ಹತ್ತೇ ಕರ್ತಂದು
ಬಾಗೀಲು ಹಿಡಿಯಾ ಮನಿ ಹಿಡಿಯಾ। ಹಾಡ್ಗಾರ್ತಿ
ಬಾಳೆಲಿ ಕುಟ್ಟೇ[೧೬] ಹೆರ್ಗಿಕ್ಕಿ[೧೭]। ೭೬೨

ಬಾಳೆಲಿಲುಂಬೂಕೇ ಕುಲಗಿಟ್ಟೇ ಬರ್ಲೇಲಾ
ತಾರೇ ನೀನುಂಬೂ ಹರಿಯಾಳಾ
ಹರಿಯಾಳಾ ಕುಡುವಾಕೇ ಹರಳೂ ನಗ್ಲೂವಾದ
ತಿರುಳು ಬಾಳೆಲಿ ಕುಯ್ತಾರೇ। ೭೬೩

ಹಾಡಾ ಹೇಳಬಾರೇ ಹಲವಾ ಗವ್ಡನ ಮಗ್ಳೆ
ಬೇಡಿಳ್ಳಿ ಸೊಸಿಯೇ ಜಗಬಾಯೆ। ಜಾಣ್ರಬಸ್ವೀ
ಹಾಡೀಗ್ ಜೋಡಣಿಯಾ ಕುಡಬಾರೇ। ೭೬೪

---

೧೩. ನಾಳೆಯಿಷ್ಟು ಹೊತ್ತಿಗೆ ೧೪. ಮೋಸ ಮಾಡುವ ೧೫. ಮೋಸ ೧೬. ಕೊಟ್ಟು ೧೭. ಹೊರಗೆ ಹಾಕಿ

ಹಾಡೀಗ್ ಹನ್ನೆಯ್ಡ ಸುತ್ತೇ ರ್‍ವ್ಗಾಕುಳ್ಳಿ ಗೆಂಡೆ
ಕಾಳೂ ಜೇರಗಿಯಾ ಹುಡಮಾಡೆ। ಪುಡಮಾಡೇ
ಹಾಡ್‌ಗಾರ್ತಿೀಗ್ ಬೈಗೇ ಎಡಮಾಡೇ। ೭೬೫

ಹಾಡ ತಿಳಿಯಾದೇರೇ ಬೈಳೇ ನನ್ನಾದಾಕೇ
ಹಾಡುಂಟ ನನ್ನಾ ಒಡ್ಲಲ್ಲೇ। ಎಲ್ನಾರಿ
ಹಾಡೀಗ್ ಜೋಡಣಿಯಾ ಕುಡುಬಾರೇ। ೭೬೬

ನಾಯೀ ಪಾದಕೇ ನಾಯಾಕೇ ಬೀಳೂವೆ
ನಾಗ ಸಂಪಗಿಯೇ ಕೊಯ್ದೂಂವ। ತಕ್ಕಂಡೇ
ಸ್ವೊಮೀ ಹನುಮೊಡಿಗೇ ಸರಣಂಬೇ। ೭೬೭

ಇ. ಗ್ರಾಮದೇವತೆಗಳ ಹಾಡುಗಳು

ಪರಿವಿಡಿ			ನಿರೂಪಕರ ಹೆಸರು	ಊರು
೦೧.	ಭೂಮಿದೇವತೆ	:	ದೇವಮ್ಮಾ ರಾಮ ನಾಯಕ,	ಭಾವಿಕೇರಿ
೦೨.	ದೇವತೆ	:	ದೇವಮ್ಮ ನಾರಾಯಣ ಕಲಗುಜ್ಜಿ,	ಬೇಲೇಕೇರಿ
೦೩.	ಬಿಳಿಗಿರಿ ದೇವತೆ	:	ದೇವಮ್ಮಾ ರಾಮ ನಾಯಕ,	ಭಾವಿಕೇರಿ
೦೪.	ಸೆಣ್ಣಮ್ಮ	:	ದೇವಮ್ಮಾ ಹೊನ್ನಪ್ಪ ನಾಯಕ,	ಭಾವಿಕೇರಿ
೦೫.	ಸಿರಸಿಯಮ್ಮ	:	ದೇವಮ್ಮಾ ರಾಮ ನಾಯಕ,	ಭಾವಿಕೇರಿ
೦೬.	ದಂಡಿನ ಹನುಮ	:	ದೇವಮ್ಮಾ ರಾಮ ನಾಯಕ,	ಭಾವಿಕೇರಿ
೦೭.	ಬೊಮ್ಮಯ್ಯ	:	ರಾಕಮ್ಮಾ ನಾಯಕ, ಕಣ್ಣುಮನೆ,	ಬೋಳೆ
೦೮.	ಜೈನಬೀರ	:	ದೇವಮ್ಮ ನಾರಾಯಣ ಕಲಗುಜ್ಜಿ	ಬೇಲೇಕೇರಿ
೦೯.	ರಾಕೋಡಿಯಾ	:	ದೇವಮ್ಮಾ ರಾಮ ನಾಯಕ,	ಭಾವಿಕೇರಿ
೧೦.	ಹೊನ್ನ	:	ದೇವಮ್ಮಾ ರಾಮ ನಾಯಕ,	ಭಾವಿಕೇರಿ
೧೧.	ಹೊಲೆಟ್ರು–ಬೇಡಗ್ತಿ	:	ನಾಗಮ್ಮ ನಾಯಕ,	ಬೇಲೇಕೇರಿ
೧೨.	ಜಾಣ್ರು–ಬೇಣ್ರು	:	ಸರಸ್ವತಿ ನಾಯಕ,	ಬೇಲೇಕೇರಿ

ಸಂಗ್ರಹಿಸಿದ ಕಾಲ ೧೯೭೦– ೧೯೭೧

ಆಕರ ಮೂಲ : ಉತ್ತರ ಕನ್ನಡ ಜಿಲ್ಲೆಯ ಗ್ರಾಮದೇವತೆಗಳ ಹಾಡುಗಳು
ಡಾ. ಎನ್. ಆರ್. ನಾಯಕ, ಜಾನಪದ ಪ್ರಕಾಶನ ಹೊನ್ನಾವರ

೦೧. ಭೂಮಿ ದೇವತೆ

ತಿರಗಲ ಹೂಂವಾ ತಿರದೇ ಚಬ್ಬೀತುಂಬೇ
ಯಾವೂರಾ ದೇವ್ರೀಗೇ ಕಳಗಾಲೆ। ಅಂಕೋಲೀಯಾ
ಬೂಮಾದೇವ್ತಮ್ನಾ ಬುಡದಲ್ಲೇ। ೦೧

ಬಾಳೀ ಕೊನಿಯಾ ಕಡ್ದೇ ಬೇಗದಪಿಟಗೀ[೧] ತುಂಬೆ
ಬಾಲರಾ ಕಯ್ಲುದ್ರಾ[೨] ಕಳ್ಗೂವೇ। ಬೂಮಾತಾಯೇ
ಮುಟ್ಟಿಸ್ಕೋ[೩] ನನ್ನಾ ಹರಕೀಯಾ। ೦೨

ಸಾಕು ಸಂಕ್ರಾಬೆಳಿಯೇ[೪] ನೀಕೇಳಬೂಮಾತಾಯೆ
ನಾನು ಅಂಬ್ಲೀಯಾ ಒಣ್ಲಾರೆ[೫]। ನಮ್‌ಗದ್ದೆ
ವಾರಂತ್ ಹಳ್ಳಗ್ನೇ[೬] ಬಿಳಿಯಾಲೆ[೭]। ೦೩

ದೈವಾರ್ಸ್ವಾಮನಿಯಲ್ಲೇ ಬೋರಂದೇ ಹೇಳ್ವಾದೇ
ಹಾವಂದೇ ಜೇಂವಾ[೮] ಹಿದರೀತೇ। ಸಾಮೀಮಕ್ಕ
ಗೆಜ್ಜೀಯಾ ಕಟ್ಟೇ ಕುಣುವಾರ। ೦೪

ಅರಸೀನಾದಂತಾ ಅರಸರಾ ಕಯ್ಯ್ಯೆಡ್ಡದಮ್ಮಾ
ಉರಸಕ್ಕೆ ಸಾಗರವಾ[೯] ಬಿಳುವಮ್ಮಾ। ಬೂಮಾತಾಯೇ
ವಾಲಾಡೇ[೧೦] ನಮ್ಮನ್ನೇ ಎರಬದ್ದ[೧೧]। ೦೫

೧. ಬೀಗದ ಪೆಟ್ಟಿಗೆ ತುಂಬಿ ೨. ಕಯ್ಯಲ್ಲಿ ೩. ಸ್ವೀಕರಿಸು ೪. ಒಂದು ಜಾತಿಯ ಬತ್ತದ ಬೆಳೆ ೫. ಉಣ್ಣಲಾರೆ ೬. ಒಂದು ಜಾತಿಯ ಬತ್ತ ೭. ಬೆಳೆಯಲಿ ೮. ಜೀವ ೯. ಸಾವಿರವನ್ನು ೧೦. ತೊನೆದಾಡುತ್ತ ೧೧. ಇರಬಹುದು

೧೨. ದೇವತೆ

ಕಾಯರ್ತೇ[೧] ಕಂಚೀಯೇ ಹೂಂವರ್ತೇ ನಿಂಬೀಯೇ
ಬೇಜಾದಲ್ಲರ್ತೆ ಬಿಳಿಹರ್ಗೆ। ದೇವೂತಮ್ಮಾ
ಪೋಜೀದಲ್ಲರ್ತೇ ಗುನಗಾಗೇ। ೬

ಇಂದೇ ನಮ್ಮನ್ನೇ ಮಾಡೊಡ್ಡ ಸಂಗ್ರಾಮಾ[೨]
ಗಂದಾವಾತೇದೇ ತಿಲಕಾವೇ। ಅಮ್ಮನಾ
ಸಂಗ್ರಾಮವೇಗೇ[೩] ಮನಿಯಲ್ಲೇ। ೭

ಒಬ್ಬಾಳಿದ್ದಲ್ಲೇ ಹಬ್ಬಾಬ್ಯೆಡ್ ಮಲ್ಲೂಗಿ
ಹಬ್ಬದೇವ್ತಮ್ಮಾ ಪುರದಲ್ಲೇ। ಹಬ್ಬಿದರೆ
ಹಬ್ಬಕ್ ಬಂದವ್ರ ಕುಯ್ವರ[೪]।
ಹಬ್ಬಕ್ ಬಂದವ್ರ ಕುಯ್ದೇ ದಂಡೀಕಟ್ಟೇ
ಹಾಕ್ವರ್ ದೇವ್ತಮ್ಮಾ ಕಳಸಾಕೇ[೫]। ೮

ಹರಗೀ ನಿನ್ನಿಸ್ರ[೬] ಹಲವಂಗಾಯರಾಯಾನೇ
ಸುರಗೀ ನಿನ್ನೂಂವ ಸುರುವಾನೇ[೭] ರ್ದೇ। ದಂಡೀ ಕಟ್ಟೇ
ಹಾಕೂವೇ ದೇವ್ರಮ್ಮಾ ಕಳಸಾಕೇ। ೯

ಕಾನಲ್ಲೇ ಹುಟ್ಟೂವಾದ ಕರಿಯಾತುಳಿಸೀಡವೇ
ನೆಟ್ರ ದೇವ್ತಮ್ಮಾ ತಳನಲ್ಲೇ। ರಾಯಾಗುನಗಾ
ನಿಗದೊತ್ತಾ[೮] ಬಿಳ್ಳೀ ಕಳಸಾವಾ। ಸ್ದ। ಸಿಡಿಯಾಮ್ಯೆನ್
ಇಳಬಿಡ್ವೇ ಮಲ್ಲೂಗಿ ಸರವಯ್ದಾ। ೧೦

ದೇವೂತಿ ಕಾನಲ್ಲೇ ಗೋಳಂಬೂದೇನಮ್ಮಾ
ಮೀವರೇ[೯] ಮಡಿಯಾ ಉಗುವಾರ[೧೦]। ಬಂಟರಮಕ್ಳ[೧೧]
ಗೆಜ್ಜೀ ಕಟ್ಕಂಡೇ ಕುಣುವರ। ೧೧

ದೇವೂತೀ ಕಾನಲ್ಲೇ ಬೋರಂಬೂದೇನಮ್ಮಾ
ಮೀರವರೇ ಮಡಿಯಾ ಉಗುವರೇ। ದೇವ್ತಮ್ಮಾ
ಕಟ್ಟಗಿಯವ್ರ ಕಾನಾ ಎಳದಾರೆ[೧೨]। ೧೨

---

೧. ಕಾಯಿ ಪ್ರೀತಿ ೨. ಸಂಭ್ರಮ ೩. ಈಗ ೪. ಕೊಯ್ಯುವರು ೫. ಕಲಶಕ್ಕೆ ೬. ನಿನ್ನ ಹೆಸರು ೭. ಸುರಿಯುವೆನು ೮. ಎತ್ತಿ ಹೊತ್ತನು. ೯. ಸ್ನಾನ ಮಾಡುವರು ೧೦. ಒಗೆಯುವರು ೧೧. ವೀರರ ಮಕ್ಕಳು ೧೨. ಇಳಿದರು

ನಮ್ಮೂರ ದೇವ್ತಮ್ಗೇ ಕಾಲೀಗುಂಗೂಲಿಲ್ಲಾ
ಕಾದಾಹುಡಿಯಲ್ಲೇ ಬರ್ನಾರಾ[೧೩]। ದೇವ್ತಮ್ಗೇ
ಕಾಲಾಳು ಕುದ್ರೀ ಕಳಗಸ[೧೪]। ೧೩

ದೇವ್ತಮ್ನಾ ಪುರ್ಟೇ ಇಲ್ಲಂದೇ ಅರಿಯಾನೇ
ಹಣ್ಕಾಯಾ ತಂದೇ ಹುಡ್ಕೂವೇ। ದೇವ್ತಮ್ಮಾ
ಕಾಣಿಸ್ಕೊ ನಿನ್ನಾ ನಿಜರೂವಾ[೧೫]। ೧೪

ದ್ಯೆವಾರಾ ಮನಿಯಲ್ಲೇ ನ್ಯೆವಾಳಾ ಬಿದ್ದೀಯಾವೇ
ಹಾವಂತದೇ ಜೇಂವಾ ಹಿದರೀದು। ದೇವ್ತಮ್ನಾ
ಪೋಜಾರಿ ಕೊಳ್ಳಾ[೧೬] ಪದಕಾವೇ। ೧೫

ಸಿಸಿಯಾಗೇ ಹುಟ್ಟೂವಾದ ಮರ್ನಾಗೇ ಬಿಳುವಾದ[೧೭]
ಎಲ್ಲಾ ದೆವ್ರೀಗೂ ಸಲುವಾದ। ಮಡ್ಡೀದೇಪಾ[೧೮]
ಉರುವಾದ[೧೯] ದೇವ್ತಮ್ನಾ ತಳ್ನಲ್ಲೇ। ೧೬

ಪಟ್ಟೀ ಒಟ್ಟಮ್ಮಾನಾ ಮೊಟ್ಟಾದೇ ಎರ್ನಾರೆ[೨೦]
ಪಟ್ಟೀಯಾ ಮ್ಯೆನೇ ಹರಚಿನ್ನಾ। ದೇವ್ತಮ್ನಾ
ಮೊಟ್ಟಾದರಗಳ್ಗೂ ಎರ್ನಾರೆ। ೧೭

ನಂಬೀನೇ ನಾನಿನ್ನೂ ಇಂಬೊಳ್ಳಾ ದೇವ್ತಮ್ನಾ
ಕಂಬೀನಾ ಮಾಳುಗಿಯಾ ಗರಡಿಯಮ್ಮಾ। ದೇವೂತಮ್ಮಾ
ನಂಬೆದ್ದಾ ಮಗಳಾ ಬೆಡದೀರೇ। ೧೮

ಕಾನಲ್ಲೇ ಕೊಳತಮ್ಮಾ[೨೧] ಗೆನಯ್ಸ[೨೨] ನನ್ನಾಮಾತಾ
ಹೂಂವ್ನಾ ಕ್ಯೆಂದಗಿಯಾ ಮೊಡದಮ್ಮಾ[೨೩]। ದೇವೂತಮ್ಮಾ
ಮುಟ್ಟ ನನ್ನಂತಾ ಬಡವೀಗೆ। ೧೯

ಹಣ್ಣ ಹಚ್ಚಿಸಿ ಕುಡ್ವೆ[೨೪] ಪನ್ನೀರಾ ಮಾಡಿಸಿಕುಡ್ವೆ
ದಾದಿಯರ ಕ್ಯೆಯ್ಲೇ ಚವಲಾವಾ[೨೫]। ದಾಳಿಸಿಕುಡ್ವೆ[೨೬]
ಬಾಗೀ ಕುಡ[೨೭] ನಮ್ಮಾ ಮನಿಯಲ್ಲೇ। ೨೦

ಕಾಯಾಕುಡ್ವೇ ತಾಯೇ ಜೇಂವಾ[೨೮] ರಕ್ಷಣಿ ಮಾಡ
ಈ ಬಾಲೇ[೨೯] ಬಂದಾ ತುರತಾವಾ। ಅತಿಕಟ್ಟವ
ದೋರ್ಡುಡಿ ಮಾಳುಗಿಯಾ ಮನಿಯಮ್ಮಾ। ೨೧

---

೧೩. ಬರಲಾರಳು ೧೪. ಕಳುಹಿಸು ೧೫. ನಿಜರೂಪವನ್ನು ೧೬. ಪೂಜಾರಿ ಕೊರಳ ೧೭. ಬೆಳೆಯುವುದು ೧೮. ಮಡ್ಡಿದೀಪ ೧೯. ಉರಿಯುವುದು ೨೦. ಪಟ್ಟೆಯುಟ್ಟಮ್ಮನನ್ನು ಮುಟ್ಟದೇ ಇರಲಾರೆ ೨೧. ಕುಳಿತಮ್ಮ ೨೨. ಕೇಳು ೨೩. ಮುಡಿದಮ್ಮ ೨೪. ಕೊಡುವೆ ೨೫. ಚವರಿ, ಬೀಸಣಿಗೆ ೨೬. ಬೀಸಿ ಕೊಡುತ್ತೇನೆ ೨೭. ಭಾಗ್ಯವನ್ನು ಕೊಡು ೨೮. ಜೀವ ೨೯. ಈ ವರ್ಷ

ಬಾಳೀ ಕೊನಿಯಾ ಕಡ್ದೇ ಬೇಗದ ಪಿಟಗೀತುಂಬೇ
ಬಾಲಮ್ಮಾ ಕಯ್ಲೇ ಕಳಗೂವೇ। ದೇವೂತಮ್ಮಾ
ಮುಟ್ಟಿಸ್ಕೋ ನನ್ನಾ ಹರಕೀಯಾ। ೨೨

ಬಿದ್ದರ ಬಾಲಕ್ರ ಬಿಳಿಯಂಗೀ ಮ್ಯೆನಾಗೇ
ಉಜ್ರದಾ ದುಳ್ಳ ಅಡಗಾಗೇ। ಬಾಲರ
ಬಿದ್ದರ ದೇವ್ತಮ್ಗೇ ನಮೋಅಂದೇ। ೨೩

ಏಗೇ ದೇವ್ರಮ್ಮಾ ಹೂಂವ್ನಾಗದ್ಗೀ ಮ್ಯೆನೇ
ಹೋಗೇ ಬಾಲಕ್ರ ಕೊಳತಾರ। ತೇ। ಏನಂಬಾರ
ಜೀವಂಕೆ ಸುಕವಾ ಕುಡತಾಯೇ। ೨೪

ಎಲ್ಲವ್ರೂ ಬೇಡೂವಾದ ಎಳ್ಳಕ್ಕೀ ಸಿವದಾನ್ಯ
ನಾನೂ ದೇವ್ತಮ್ಮಾ ಪುರಕೋಗೇ। ಬೇಡೀಕಂಬೇ
ಬಾಲಾರಿಗ್ ಸುಕವಾ ಕುಡ ತಾಯೆ। ೨೫

೦೩. ಬಿಳಿಗಿರಿ ದೇವತೆ

ಅಳ್ಳೀ[೧]ಹೂಂವ್ ಕುಯ್ದೇ ಬಿಳ್ಳೀ ಚೆಬ್ಬೀ[೨] ತುಂಬೇ
ಯಾವೂರ ದ್ಯೆವ್ರೀಗೆ ಕಳಗಾ[೩]ಲೆ। ಬಿಳಗೇರಿ
ದೇವ್ತಮ್ಮಾ ಪುರಕೇ ಕಳ್ಗೂವೇ। ೨೬

ರಂಬೆ ಬಿಳಗೇರಿಯಮ್ಮ ನೀಯಿದ್ದೇ ಸುಂಗಾರಾಗ[೪]
ದಾಳಿಂಬ ದಸರಿಯಾ ನಿಗದೂಡ[೫]। ಬೊಮ್ಮೊಡಿಯಾರ
ದಾಳನಾಡ್ವಲ್ಲೇ[೬] ಕರದರ ೨೭

೦೪. ಸೆಣ್ಣಮ್ಮ

ಪಟ್ಟದಾ ರಾಣೀಯಾ ಕಟ್ಟಿದ್ರೆ ಮುಡಚೆಂದಾ
ಬೆಟ್ಟಾದಲ್ ಸೇಗೀ ಎಲಚೆಂದಾ। ಸೆಣ್ಣಮ್ಮಾ
ಪಟ್ಟೀ ನಿರ್ದೊಟ್ರೆ[೭] ಬಲುಚೆಂದಾ। ೨೮

ಕಂಡೀ ಕಂಡೀ[೮] ನಾನ ನಿಂಬೀ ತ್ವೊರದ್ ಮುತ್ತಾ
ಕಂಡೀ ಸೆಣ್ಣಮ್ಮಾ ಕುಳ್ಳಲ್ಲೇ। ಕಂಡಾಮುತ್ತ
ಹೋಗೇ ನೆಂತವ್ರೀಗ್ ಹುಳುವದ[೧೦]। ೨೯

ಕ್ವೋಟೀ ಕ್ವೊಟೀ[೧೧] ಕಂಡೆ ಕ್ವೊಟೀಗುಡಿಯಾ ಕಂಡೆ
ದಾಟಾಡುದ್[೧೨] ಕಂಡೆ ದಡಪೀಯಾ। ಸೆಣ್ಣಮ್‌ದ್ಯೆವ್ರಾ
ಗುಡಿಯಾ ಮ್ಯೆನ್ ಕಂಡೆ ಕಳಸಾವಾ। ೩೦

ಮಜ್ಜಾನಾದುತ್ತೀಗೇ[೧೩] ಗೆಜ್ಜೆ ಗಯ್ಲುಂದಾವೇ
ತಾಯೇ ಸೆಣ್ಣಮ್ಮಾ ಪುರದಲ್ಲೇ। ಸಾಮೀಮಕ್ಳ[೧೪]
ಗೆಜ್ಜೀ ಕಟ್ಕಂಡೇ ಕೊಣ್ದಾರ[೧೫]। ೩೧

---

೧. ಕಮಲ ೨. ಬುಟ್ಟಿ ೩. ಕಳುಹಿಸಲಿ ೪. ನೀನೆದ್ದು ಶೃಂಗಾರ ಮಾಡಿಕೋ ೫. ಎತ್ತಿಉಡು ೬. ಪಗಡೆಯಾಡುವಲ್ಲಿ ೭. ನೆರಿಗೆಮಾಡಿ ಉಟ್ಟರೆ ೮. ನೋಡಿದ್ದೇನೆ ೯. ಲಿಂಬೆಹಣ್ಣಿನಷ್ಟು ದೊಡ್ಡ ೧೦. ಹೊಳೆಯುವದು ೧೧. ಕೋಟೆ ೧೨. ದಾಟುವುದನ್ನು ೧೩. ಮದ್ಯಾಹ್ನದ ಹೊತ್ತಿಗೆ ೧೪. ದೇವರ ಮಕ್ಕಳು ೧೫. ಕುಣಿದರು

೦೫. ಸಿರಸಿಯಮ್ಮ

ಸಿರಸೀಯಾ ಸೇವಮ್ಮಾ[೧] ಊರೀಗೇ ದೊಡ್ಡವ್ವ
ಕಡುಗೆಂಪಿನೋಳ್[೨] ಕಲಿಯವ್ವ[೩]। ದೊಡ್ಡಮ್ಮಾ
ಸಿರಸೀಯಾ ಕ್ವೋಟೀ[೪] ಮನಿಯವ್ವ। ೩೨

ಕಾಲಿಗೆ ಕಡಗಾ ನಿಟ್ಟೇ ನಿಳ್ಳಿಗೆ[೫] ಸತ್ತಗಿ ಹಿಡಿದೇ
ಹಾಲಾದುತ್ತರಗಿ[೬] ಬುಜಕಿಟ್ಟೇ। ದೊಡ್ಡಮ್ಮಾ
ದಾಲೂಗತ್ತೀನೇ[೭] ಹೆಡದಾಳೇ[೮]। ೩೩

ಸಿರಸೀಯಾ ಸೇವಮ್ಮಾ ಕಾಂಬೂಕೇ[೯] ದೊಡ್ಡವ್ವ
ರಜಗೆಂಪೀನೋಳ[೧೦] ರವಿಯೋಳ। ಕುಳ್ಳಲ್ಲೇ[೧೧]
ನೇತ್ರದ ಮುತ್ತ[೧೨] ಹುಳುವಾದೇ। ೩೪

ಸಿರಸೀಯಾ ಸೇವಮ್ಮಾ ನೋಡೂಕೆ ದೊಡ್ಡವ್ವ
ಪಿಂಜಾರದ್ವೊಲೀ[೧೩] ಕಿಮಿಯಲ್ಲು[೧೪]। ಇಟ್ಟೇಕಂಡೇ
ಕೆಂಡದ ರತವಾ[೧೫] ಎಳದಾಳೇ[೧೬]। ೩೫

ಸಿರಿಸೀಯಾ ಸೇವಮ್ಮಾ ಕಾಂಬೂಕೇ ದೊಡ್ಡವ್ವ
ಬುಸ್ರೀಗೇ[೧೭] ಬಂಗಾ[೧೮] ಕುಡುವಾಳೇ। ಏನಂದೇ
ಸಿಸುಗೆ[೧೯] ತನ್ಹೆಸ್ರ[೨೦] ಹಾಕಂದೇ। ೩೬

ಕ್ವೊಣಾ[೨೧] ಕುರಿಯಾ ಕುಟ್ಟೇ[೨೨] ಜಾಣ್ರ[೨೩] ಬಂಡಿ ತುಂಬೇ
ಸಿರಸಿ ಸೇವಮ್ಮಾ ರತವೇಕೆ। ಬರುವಾಗೇ
ಬಾಲರ ಕಾಣಕಿಯಾ[೨೪] ಹಿಡವಾರೇ। ೩೭

ಹರಕೆ ಹನ್ನೆಯ್ದುರ್ಲಾ ನೀಕ್ಯೆಳೇ ಸೇವಮ್ಮಾ
ಬಂಡಾರ ಕರ್ತಾ[೨೫] ಬಾಲಯ್ಯ। ಬಾಳದ್ರೆ
ಬಂಡೀ ತುಂಬ್ ಹಣವಾ ಕಳಸೂನೇ। ೩೮

---

೧. ಶಿವಮ್ಮ ೨. ಬಹಳ ಕೆಂಪುಳ್ಳವಳು ೩. ಶಕ್ತಿಶಾಲಿ ೪. ಕೋಟೆ ೫. ನೆರಳಿಗೆ ೬. ಹಾಲು ಬಣ್ಣದ ಉತ್ತರೀಯ ೭. ಢಾಲು ಮತ್ತು ಕತ್ತಿಯನ್ನು ೮. ಹಿಡಿದಳು ೯. ನೋಡಲಿಕ್ಕೆ ೧೦. ನಸುಗೆಂಪುಳ್ಳವಳು ೧೧. ಕೊರಳಲ್ಲಿ ೧೨. ಒಂದು ಜಾತಿಯ ದೊಡ್ಡ ಮುತ್ತು ೧೩. ಬಂಗಾರದ ಓಲೆ ೧೪. ಕಿವಿಯಲ್ಲಿ ೧೫. ಬೆಂಕಿಯ ರಥವನ್ನು ೧೬. ಇಳಿದಳು ೧೭. ಗರ್ಭಿಣಿಗೆ ೧೮. ತೊಂದರೆ ೧೯. ಮಗುವಿಗೆ ೨೦. ತನ್ನ ಹೆಸರನ್ನು ೨೧. ಕೋಣ ೨೨. ಕೊಟ್ಟು ೨೩. ಜಾಡರು? ಜಾಣರು? ೨೪. ಕಾಣಿಕೆಯನ್ನು ೨೫. ಭಂಡಾರಕ್ಕೆ ಒಡೆಯ

೧೬. ದಂಡಿನ ಹನುಮಾ – (ಚಪ್ಪರ ದೇವರು)

ದ್ಯೆವಾರು ಬರುವಾಗೇ ಹಾವೂ ತಲದೂಗೀದು
ಸಾಂವತ್ಗಿ ಕುಪ್ಪ[೧] ಅರಳೀದು। ದಂಡೀನೊಡೆಯಾ
ಚಪ್ಪರೊಲ್ಲಾಡೇ ಬರುವಾನೇ। ೩೯

ಕಗ್ಗಲ್ಲು ಹುಡಿಯಾಗೇ ಬಿಳ್ಗಲ್ಲು ಚೂರಾಣಾಗೇ
ಬಗ್ಗೀದ ಮರನೇ ಬಯಲಾಗೇ। ಹನುಮೊಡಿಯಾರ
ಚಪ್ಪರೊಲ್ಲಾಡೇ ಬರುವಾಗೇ। ೪೦

ಇತ್ತ ಹೇರೀಕಂಡೇ[೨] ಮುತ್ತ ಸೂಡೀ ಕಂಡೇ
ಬೆತ್ತದ ಕೋಲ ತಡಕಂಡೇ। ಹನುಮೋಡಿಯಾರ
ಮತ್ತೆದ್ರ ಗಿರಿಯಾ ಪುರಕಾಗೇ। ೪೧

ಅಚ್ಚೀ ಕಂಬಿನ ಗರುಡ ಇಚ್ಚೀ ಕಂಬಿಗ್ ಬಾರೋ
ಪಾತಾಳ ಗರುಡಾ ಹನುಮೋಡಿಯಾನ। ಕುಳ್ಳಲ್ಲೇ
ನೇತ್ರದ ಮುತ್ತು ಹುಳುವಾದೇ। ೪೨

ತಿರುಪತಿಗೋಗ್ವರ ತಿರಗೇ ನೋಡಲು ಬ್ಯೆಡಿ
ಮನಿಯಾ ಮ್ಯೆನ್ ಚಿಂತೀ ಎಡಬ್ಯೇಡಿ। ದಂಡೀನೋಡಿಯಾ[೩]
ಮನಿಯಾ ಕಾವಲ್ಕೆ ಕಳಗೂವಾ। ೪೩

ಜಾಂಜೀ ಹೂಂವಿನಲ್ಲೇ ಪೋಜೀ[೪] ಕಟ್ಟಿಸಿ ಕುಡ್ವೇ
ದಾಸಿಯರ ಕೋಡೇ ಚವಲಾವೇ। ದಾಳಿಸಿಕುಡ್ವೆ
ಸೋಮಿ ಹನುಮೊಡೆಯಾ ಹರಕೀಯಾ। ಉಪ್ಪಿಸಿಕುಡ್ವೆ
ಜೇಂವಕೆ[೫] ಸುಕವಾ[೬] ಕುಡು[೭] ತಂದೆ। ೪೪

---

೧. ಕೊಪ್ಪ? ೨. ತೋಟಾ?, ಹತ್ತಿಕೊಂಡು

೦೭. ಬೊಮ್ಮಯ್ಯ

ಕಾಳಾಗಾದಲ್ಲೇ ಕಲಿಯಾದ್ರ ಬೊಮ್ಮಾಡಿಯಾರ
ಆಳಾದರಡಕೀ ಸಿಸಿಯಂಗೆ[೧]। ಬೊಮ್ಮೊಡಿಯಾರ
ತಾವೇವ್ರ[೨] ಹುಲಿಯಾ ಮರಿಯಂಗೇ[೩]। ೪೫

ಕಟ್ಟವೇ[೪] ಬಂತಂದೇ ನಾ ನೀರಾ ಬ್ಯೆಳಾಹ್ವೊದೆ[೫]
ನೀರಲ್ಲೇ ಬೊಮ್ಮಾಡಿಯಾ ನಿಳ್ಳಾಗೇ[೬]। ಏನಂಬಾರೇ
ನಾಯೇಂವೆ[೭] ಬಡವೀ ಕೆಡಬ್ಯೆಡಾ। ೪೬

ಅಂಜಾಬ್ಯೆಡಂಬಾರೇ ತಂದೆ ಬೊಮ್ಮಾಡಿಯಾರ
ನಂಬೂಗಿ[೮] ಕುಟ್ಟರ್[೯] ಬಲಗಯ್ಯ। ಬೊಮ್ಮೊಡಿಯಾರ
ನಂಬೆದ್ದಾ ಮಗ್ಳಾಬೆಡ್ನಂಬ್ರ[೧೦]। ೪೭

---

೧. ಆಳ್ತನವು ಅಡಿಕೆಯ ಮರದಂತೆ ೨. ತಾವಿದ್ದರೆ ೩. ಮರಿಯ ಹಾಗೆ ೪. ಕಷ್ಟ ೫. ಬೀಳ ಹೋದೆ ೬. ನೆರಳಾಗಿ ೭. ನಾನಿದ್ದೇನೆ ೮. ನಂಬಿಗೆ ೯. ಕೊಟ್ಟಿದ್ದಾರೆ ೧೦. ನಂಬಿದ ಮಗಳನ್ನು ಬಿಡೆನೆನ್ನುವರು.

೦೮. ಜೈನಬೀರ

ಸಿದ್ದೀಗೇ ಸರಣಂದೇ ಬಗ್ಗೀದ ಆಚೇರೆ
ಉಜ್ರದುಂದುಳಿಯಾ[೧] ತಡದಾನೆ। ಜೇನೋಡಿಯಾನ
ತಿದ್ದೇ ಚಾವಡಿಯಾ ಗೆಯ್ದಾನೆ। ೪೮

ಅಚ್ಚೇಲೇ[೨] ಚಾಳೀಯೇ ಇಚ್ಚೇಲೇ[೩] ಬಲಿಯಾ ಬೇರಾ[೪]
ನಿಡಗೇ[೫] ಜೇನೊಡೆಯಾನ[೬] ಗರಡೀಯೇ[೭]। ಕಲ್ಲಕಂಬ
ಉಜ್ರ[೮] ಹುಳುವಂಗೇ[೯] ಹುಳುವದು। ೪೯

ಕಾಳಗಕ್ಕೋದಲ್ಲೇ ಕಲಿಯಾದ್ರ ಬಂಟರ
ಆಳೇವರಡಕೀ ಮರನಂಗೇ। ಜೇನೊಡಿಯಾರ
ದಂಡಗ್ ನಾಯಕರ[೧೦] ಬಂಟರ। ೫೦

ಬೇಡರೆಲ್ಲಾ ಕೂಡೇ ಬೇಡಿದ್ರ ಈ ರಾಜ್ಯ
ಸೇಡಿ ನೀರೊಂಡಾ[೧೧] ಹೊಲಿಯಟ್ಟ[೧೨]। ಜೇನೊಡಿಯಾರ
ಬೇಡಾರೀಗ್[೧೩] ಇಂಬಾ ಕೊಡ್ನಂದಾ। ೫೧

ಕಡಗಲ್ಲು ಕರಗದು ಬಿಳಿಗಲ್ಲು ಚೂರಾದು
ಬಗ್ಗೀದ್ದ ಮರನೇ ಬಯ್ಲಾದು। ಜೇನೊಡಿಯಾನ
ದಂಡೂ ದಂಡಾಳೇ ಬರುವಾಗೇ। ೫೨

ಉಂದಲ್ಲಾ[೧೪] ಎಯ್ದಲ್ಲಾ ಒಂಬತ್ತು ಹಡಗಾಬಂದೇ
ಮುಂಗಾಲ್ ಊರಿದ್ವೇ ಹೊಳಿಯಲ್ಲೇ। ಜೇನೊಡಿಯಾನ
ಬಂಗಾರ್ದ ಹಡಗೂ ಜತನೇನೇ। ೫೩

ಇಂಟೂ ದೆವ್ರಲ್ಲೇ ಬಂಟಾರ ಜೇನೊಡಿಯಾರ
ನೆಂತಲ್ಲೇ ನೀರ ಹರುವದ। ಜೇನೊಡಿಯಾರ
ಬಂಟಾರಿಗೆಲ್ಲಾ ಇಡಗಾಯ[೧೫]। ೫೪

---

೧. ವಜ್ರದ ಒಂದು ಉಳಿಯನ್ನು ೨. ಆಚೆ ೩. ಈಚೆ ೪. ಬಲಿಬೀರ ೫. ನಡುವೆ ೬. ಜೈನಬೀರ ೭. ಗರಡಿ ೮. ವಜ್ರ ೯. ಹೊಳೆಯುವಂತೆ ೧೦. ದಂಡನಾಯಕ ೧೧. ನೀರುಂಡನು ೧೨. ಹೊಲೆಯ ಭಟ? ೧೩. ಬೇಡರಿಗೆ ೧೪. ಒಂದಲ್ಲ ೧೫. ದೇವರು ಉಲಿಚಪ್ಪರ ಹತ್ತುವಾಗ ಗುನಗ ಮತ್ತು ಚಾಜ್‌ದಾರರು ಕಲ್ಲಿಗೆ ತೆಂಗಿನ ಕಾಯನ್ನು ದೂರದಿಂದ ಬೀಸಿ ಒಡೆದ ಕಾಯಿ

ಏಗೇ ಜೇನೋಡಿಯಾರ ಏನೆಲ್ಲಾ ಬೆಳದಾರೇ
ಕಾರಿಳ್ಳು ಕಬ್ಬೊ ಕಡಲೀಯೇ। ಬಿಳದುಂಬಾಗೇ
ಜಾಣ್ರಾ[೧೬] ಜೇರಗಿಯಾ ಬೆಳದಾರ। ೫೫

ಅಮ್ಮನಾ ಮನಿಮುಂದೇ ಕಲ್ಲೊಬಾವಿ ಕಡಿಸೇ
ಸೂಸಕದಂತಾ ಹಣನೀರ। ತುಂಬೀಕಂಡೇ
ಹೊವ್ದಾರ ಜೇನೊಡಿಯಾನ ಜಳಕಾಕೇ। ೫೬

ದ್ಯೆವಾರಾ ನೋಡೂಕೇ ಬ್ಯೆಗಾದಿಂದ್ ಬಂದಾನೇ
ದ್ಯೆವರ ದ್ಯೆವಲ್ಲಿ ಒಳಗಿಲ್ಲಾ। ಜೇನೊಡಿಯಾರ
ತಾಯೇವ್ರ[೧೭] ಜಪದಾ ಹೊಳಿಯಲ್ಲೇ। ೫೭

ಅಚ್ಚಾಣಿ ಕೊಚ್ಚಾಣಿ[೧೮] ನಿಚ್ಚಾ ಜೇನೋಡಿಯಾಗೇ
ಅಚ್ಚಕೆಮ್ಮಣ್ಣಾ ಒಲಿ ಹೂಡೇ। ಜೇನೊಡಿಯಾಗೇ
ನಿಚ್ಚಾದಿನದಲ್ಲೇ ಅಚಣೀಯೇ[೧೯]। ೫೮

ಕಡ್ಯೇಳ ಸಮ್‌ದ್ರದ ನಿಡಗೇ ತೇಗನಮರನೇ
ಹಡಗದಾ ಮ್ಯೆನೋಗಿ ಕಡತನ್ನಿ। ಗಂದದ ಕುಯ್ಯಾ[೨೦]
ಸಾಣಾಗಲ್ಲಲ್ಲೇ[೨೧] ಹುಡ[೨೨] ಮಾಡಿ। ಗಂದಾವಾ
ಇಡ್ರೇ ಜೇನೊಡಿಯಾನಾ ಹಣಿಯಲ್ಲೇ। ೫೯

ಪೋಜೀ ಕಟ್ಟೂವಾಕೇ[೨೩] ಪೋಜಾರಿ ಬರುವೇಳಿ
ಜೂಂಜೀಯಾ ಮೊಕ್ಕೇ[೨೪] ಹೊಸದಂಡೇ। ತಕ್ಕಂಡೇ
ಪೋಜೀ ಕಟ್ಟದ್ರೇ ಒಡಿಯಾಗೇ। ೬೦

ಹಂಬೀಯಾ[೨೫] ಹಚ್ಚೂವಾಕೇ ರಂಗಯ್ಯಾ ಬರುವೇಳಿ
ಮಲ್ಲೂಗಿ ಮೊಕ್ಕೇ ಹೊಸದಂಡೇ। ತಕ್ಕಂಡೇ
ಹಂಬೀ ಹಚ್ಚಿದ್ರೇ[೨೬] ಒಡಿಯಾಗೇ। ೬೧

ಹಾಲಲ್ ಅಬಸೇಕಾವಾಗಾಲೇ ಜೇನೊಡಿಯಾಗೇ
ಸಾಲೀದಚ್ಚಡದಾ ಮರಿಯಲ್ಲೇ। ಆದಾ ಅಬಸೇಕಾ
ಮುಟ್ಟೀದ ಜೇನೊಡಿನಾ ಪುರದಲ್ಲೇ। ೬೨

---

೧೬. ಜಾಡ ದೇವತೆ ೧೭. ತಾವೊದ್ದಾರೆ ೧೮. ದೇವರ ನೈವೇದ್ಯ ೧೯. ದೇವರಿಗೆ ಬೇಯಸಿದ ಚರು, ಬೆಣತಕ್ಕಿ ಅನ್ನ ೨೦. ಕೊರಡು ೨೧. ಬೀಸುಗಲ್ಲಲ್ಲಿ ೨೨. ಹುಡಿ ೨೩. ಪೂಜೆಕಟ್ಟಲಿಕ್ಕೆ ೨೪. ಮೊಗ್ಗು ೨೫. ಬಾಳೆಯ ಹಂಬೆ ೨೬. ಹಂಬೆಯ ಪೂಜೆ

ಕಾಣೂಕೀ ಬಂದೀದ ಆಯ್ದೂ ನಿಂಬೀಕಾಯ
ಬೇರುಡದೇ ಬಂತೇ ಬಿಳಿಯಲೆ। ಜೇನೊಡಿಯಾರ
ಹೇರನ[೨೭] ಬಂತ ಇಡಗಾಯ। ೬೩

ಯೇಚೀದ[೨೮] ಕಾರ್ಯ ನಿನ್ನಿಂದೇ ಜಯವಾದರೆ
ಇಳ್ಳೆಣ್ಣಿ ಕುಡುವೇ[೨೯] ಜಳಕಾಕೇ। ಜೇನಬೇರ[೩೦]
ಯೇಚೀದ ಕೌರ್ಯ ಜಯ ಮಾಡ। ೬೪

ಅರಿಯಾದೇ ಜೇನೊಡಿಯಾರ ನಿಡ ಪಖ್ಖೀ[೩೧] ಮಿಟ್ಟೀದೇ
ನಿಡಹೊಳೀಗ್ಹೋದಾರೂ[೩೨] ನೆಲಿಯಿಲ್ಲಾ[೩೩]। ಜೇನೋಡಿಯಾ
ಮುಡಿಯಾ ತಟ್[೩೪] ಬಡವೀ ತಡದೀದಾ। ೬೫

ಬಾಗೀಲಾ ಮುಂದೀನಾ ತಿಂಗ ಪಲಬಂದಾವೇ
ಹೋಗ್ಹೇಳ ತುಂಬೀ ಒಡಿಯಾಗೇ। ಜೇನೋಡಿಯಾ
ಜೋಡೀನಲ್ ತಿಂಗ ಪಲಬಂದೂ। ೬೬

ಗಂಡು ಮಕ್ಕಳಾಟಾ ಬಂದೀನೋಡ್ ಜೇನೊಡಿಯಾ
ಬಂಡೀಯಾ ಮೈನೇಗುರಿ ಹೂಡೇ। ಆಡೂವಾರ
ತಂದೇ ಜೇನೋಡಿನಾ ಹರಕೀಯಾ। ೬೭

ಮಕ್ಕಳು ಮಾಣೀಕಾ ಎತ್ತಲಾಡಿದರೇನೇ
ಸುತ್ತೇ ಜೇನೊಡಿನಾ ಸಂರಕ್ಷ[೩೫]। ಉಂದಿದ್ದರೆ[೩೬]
ಎತ್ತಲಾಡಿದ್ರೂ ಬಯ್ವಿಲ್ಲಾ। ೬೮

ಇಟ್ಹೊತ್ತಿಗ್[೩೭] ನೆನುವಾನೇ ದುಟ್ಹೊತೀಗಾರನಾ[೩೮]
ಇಪ್ಪತ್ತು ನಾಮದಾ ಒಡಿಯಾರಾ। ಜೇನೊಡಿಯಾನಾ
ಕಟ್ಟ[೩೯] ಬಂದಲ್ಲೇ ನೆನುವಾನೇ। ೬೯

ಹಲವಾ ಇಣ್ಣೀದ[೪೦] ಮನವೇ ಸುಣ್ಣ ಇಂಗ್ಲಸ್ದಾ ೞಂಗೇ[೪೧]
ಎಣ್ಣಾದಿರ್[೪೨] ಮನವೇ ಕಲಿಯಾಗ। ಜೇನೊಡಿಯಾರ
ಕಲ್ಲಾಬಾಗಲ್ಕೇ[೪೩] ಕದವಾಗ। ೭೦

---

೨೭. ಹೊರೆ ೨೮. ಯೋಚಿಸಿದ ೨೯. ಎಳ್ಳೆಣ್ಣೆಯನ್ನು ಕೊಡುವೆ ೩೦. ಜೈನಬೀರ ೩೧. ಮಧ್ಯದ ಹೊಳೆಯಲ್ಲಿ ಹೋದರೂ ೩೩. ಆಳವಿಲ್ಲ ೩೪. ಮಂಡೆ ಮುಟ್ಟಿ, ತಲೆತಟ್ಟಿ ೩೫. ಸಂರಕ್ಷಣೆ ೩೬. ಒಂದಿದ್ದರೆ ೩೭. ಎಷ್ಟು ಹೊತ್ತಿಗೆ ೩೮. ದಿಟ್ಟನಾದವನನ್ನು ೩೯. ಕಷ್ಟ ೪೦. ನೆನೆಸಿದ ದುಃಖಕ್ಕೀಡಾದ ೪೧. ಸುಟ್ಟಂತೆ ೪೨. ದುಃಖಿಸಬೇಡ ೪೩. ಕಲ್ಲಿನ ಬಾಗಿಲಿಗೆ

೦೯. ರಾಕೊಡಿಯಾ

ಮಂಜೂಕರಿಯೀತಂದೇ[೧] ಅಂಜೂತೇ ನಾಬಂದೇ
ಮಂಜಲ್ಲಾ ಮೊಳಿಯಾ[೨] ಹನಿಯಾಲ್ಲಾ। ರಾಕೊಡಿಯಾರ
ಮಿಂದೆ ಚೆಂಡಕಿಯಾ ಸೆಳದಾರೇ[೩]। ೭೧

ಹಿಸರೊಳ್ಳಾ[೪] ರಾಕೊಡಿಯಾಗೇ ಹಸರೂ ಪಟ್ಟೀ ಕುಡ್ವೇ
ದಸರೀಯಾ ಕುಡ್ವೇ ತಲ್ದಿಂಬಾ। ರಾಕೊಡಿಯಾರಾ
ಹಿಸರನ[೫] ಕೀರುತಿಯೇ ಬಲುದೊಡ್ಡಾ। ೭೨

ಹಾವೀಂಗಂಜೀದ ಕೆಪ್ಪೆ ಸೀರೇ ಬಾವಿಗ್ ಬೆದ್ದು
ನೀರೀಗಂಜಿದವೇ ಮಣಿನಾಗಾ। ರಾಕೊಡಿಯಾರ
ಪಾದಾಕಂಜಿದರೇ ಬಡವಾರ। ೭೩

ಹಳ್ಳಗನಾ[೬] ಅಕ್ಕೀಮ್ಯೆನೇ ಹುಳಚೀಹೂಂವನಾ ಬಣ್ಣಾ[೭]
ಅರಸೇ ಕಟ್ಟರೇ ಹರಕೀಯಾ। ರಾಕೊಡಿಯಾಗೆ
ಅರ್ತೀಲ್[೮] ಮಾಡೂನೇ ಅಬಸೇಕ್[೯]। ೭೪

ಹಣ್ಣೂಕಾಯೂ ಕುಡುವೆ ಕೂಗೂ ಹುಂಜನ ಕುಡುವೆ
ಮತ್ತೇ ರಾಕೊಡಿನ ಬಂಟಗೇ। ಹರ್ಕಿಕುಡ್ವೆ
ಬಾಲಾರಿಂದ್ ಹಿಸ್ರ ನಿಡಿಲಂದೇ। ೭೫

ಸಂಜೀಯಾ ಹುತ್ತೀಗೇ ಬಂದೋರುಯಾರವ್ವಾ
ತಾಯೀಯಾ ಮನಿಯಾ ಕುಲಸ್ವೊಮ। ರಾಕಾಹೊನ್ನಾ
ಬಾಲ್ರಕಾವ್ಲಕೇ ಬರ್ಬೇಕ[೧೦]। ೭೬

ಕೆಂಬಗ್ರೀ[೧೧] ಸುಪ್ಪೀನಾರಸವಾ ಕಂಡಂಜೀನೇ
ಸಿಸುವಾ[೧೨] ಕಾಳಗಕೆ ಕಳಗೀಸಿ। ರಾಕೊಡಿಯಾರೆ
ಕುಸಿಯಾಗಿ[೧೩] ನಿಮ್ಮಾ ಮನಸೀಗೆ। ೭೭

ಹರಕೇ ಹನ್ನೆಯ್ಡುರುಸೆ[೧೪] ಮುನಿಬ್ಯೆಡಾ ರಾಕೊಡಿಯಾ
ಹರಕೀಲೆ ತಮ್ಮಯ್ಯಾ ಬಡವಾನೇ। ಬಾಳಿದರೆ
ಹರಕೀ ಉಪ್ಪುಸ್ವಾ[೧೫]। ಪುರಕೋಗೇ। ೭೮

---

೧. ಮಂಜು ಕವಿಯಿತೆಂದು ೨. ಮಳೆಯ ೩. ಸ್ನಾನಮಾಡಿ ಚಂಡಿಕೆಯನ್ನು ಬೀಸಿದರು ೪. ಹೆಸರು ವಾಸಿಯಾದ ೫. ಹೆಸರಿನ ೬. ಒಂದು ಜಾತಿಯ ಅಕ್ಕಿ, ಹಳ್ಳಗ ೭. ಹುಳಸಿ ಹೂವಿನ ಬಣ್ಣದ ಸೀರೆ ೮. ಪ್ರೀತಿಯಿಂದ ೯. ಅಭಿಷೇಕ ೧೦. ಬಾಲರ ಕಾಯಲು ಬರಬೇಕು ೧೧. ಕೆಂಪು ಹರಿವೆ ೧೨. ಬಾಲನನ್ನು ೧೩. ಸಂತೋಷ ೧೪. ಹನ್ನೆರಡು ವರ್ಷ ೧೫. ಒಪ್ಪಿಸುವವನು

೧೦. ಹೊನ್ನ

ದ್ಯೆವರಾ ಮನಿಬುಡ್ಕೇ ಆಲದಾ ಸಿಸಹುಟ್ಟೇ[೧]
ಟೊಂಗೀ ಮ್ಯೆನೆಲ್ಲಾ ಗಿಳಿಯಾಡೇ। ಹೊನ್ನೊಡಿಯಾರ
ಬಂಗಾರ್ದಾ ಮನಿಗೇ ನಿಳ್ಳಾದು[೨]। ೭೯

ಸ್ವೊಮೀ ಹೊನ್ನೊಡಿಯಾರ ಮನಿಯಾ ನ್ವೊಡಾಲ್ವೊದೆ[೩]
ಮನಿಯಾಮ್ಯೆನ್‌ನವ್ಲ[೪] ಸರಗೆಯ್ದು[೫]। ಹೊನ್ನೊಡಿಯಾರ
ಕಂಬನ ಮ್ಯೆನ್‌ಕಾ[೬]ಳೇ ಕೆಲ್ದಾವೆ[೭]। ೮೦

ಸೊಮೀ ಹೊನ್ನೊಡಿಯಾರಾ। ಬಾಗಲ್ದಲ್ ಬಾವೀಯೇ
ಇಟ್ಟುತ್ತೊ[೮] ನೋಡಿದ್ರೂ ಜಳಕಾವೇ। ಸಂಜನ ಮಾಡೇ[೯]
ಹೂಂವನಾ ಬಾರ್ದಲ್ಲೇ ಕುಳತೇವ್ರ[೧೦]। ೮೧

ತುಪ್ಪದಲ್ ಅಬಸೇಕ ಆಗಾಲೆ ಹೊನ್ನೊಡಿಯಾಗೆ
ಪಟ್ಟೇದ್ಹಚ್ಚಡದಾ ಮರಿಯಲ್ಲೇ। ರಂಗಾಪ್ವೋಜೆ
ನಿಚ್ಚಾ ಹೊನ್ನೊಡಿಗೇ ಸಿವಪ್ವೋಜೆ। ೮೨

ಕುಚ್ಚೇನಾಡ್ತಂಕಾ[೧೧] ಅಚ್ಚಾ ಮೊಳಿಹುಯ್ದೆ[೧೨]
ಹಚ್ಚಡಾ ನಂದೇ ಹಸನಂದೇ। ಹೊನ್ನೊಡಿಯಾರಾ
ಕಟ್ಟಗಿಯರ್[೧೩] ನಂದ್ರೇ[೧೪] ಪುರದಲ್ಲೇ। ೮೩

ಪರವೂರ ಪರಸೇಮೆ[೧೫] ಇರುವಾದು ಬಾಳಿಗ್ಗೀನ[೧೬]
ತವರೂರಾ ಹೊನ್ನಾ ಒಡಿಯಾನಾ। ಕರುಣೆದ್ದಾರೆ
ಯಾವೂರೀಗ್ವೊದಾರೂ ಬಯವಿಲ್ಲಾ। ೮೪

---

೧. ಗಿಡಹುಟ್ಟಿ ೨. ನೆರಳಾದು ೩. ನೋಡಹೋದೆ ೪. ನವಿಲು ೫. ಕೂಗಿದವು ೬. ಕಹಳೆ ೭. ಕೂಗಿದವು ೮. ಯಾವಾಗಲೂ ೯. ಸ್ನಾನಮಾಡಿ ೧೦. ಸ್ವಲ್ಪ ಮ್ಯೆಮೇಲೆ ಭಾರಬಂದು ಕುಳಿತಿದ್ದಾರೆ ೧೧. ಕುಚ್ಚನಾಡವರೆಗೆ ೧೨. ಚೆನ್ನಾಗಿ ಮಳೆ ಹೊಯ್ದು ೧೩. ಕಟ್ಟಿಗೆ ದಾರರು ೧೪. ನೆನೆದರು ೧೫. ಪರಸೀಮೆ ೧೬. ಬಹಳ ವಿಘ್ನ, ತೊಂದರೆ

೧೧. ಹೊಲಿಯಟ್ರು – ಬೇಡಗ್ತಿ

ಬೇಡಗ್ತಿ ಬಂದೇ ಬೇಡಿದಳೇ ಈ ರಾಜ್ಯ
ಸೇಡೀ ನೀರೊಂಡ್ರ ಹೊಲಿಯಟ್ರು ಏನಂಬಾರೇ
ಬೇಡಗ್ತಿಗ್ ರಾಜ್ಯ ಕೊಡ್ನಂಬ್ರು ೮೫

೧೨. ಜಾಣ್ರು – ಬೇಣ್ರು

ಜಾಣ್ರು– ಬೇಣ್ರು ಕೂಡೇ ಒಗ್ಗಿ ಬಾವಿ ತೋಡೇ
ಕಾರಿಳ್ಳು ಕಬ್ಬೂ ಬೆಳದಾರೇ। ಜಾಣ್ರತಮ್ಮಾ
ತಾನೋಗೇತಂದಾ ಹೊರಗೊಡನಾ। ಜಾಣ್ರತಮ್ಮಾ
ಜೇನ ಸಕ್ಕರಿಯಾ ಬೆಳ್ದಾರೇ ೮೬

ಜಾಣ್ರು ಬೇಣ್ರು ಕೂಡೇ ಒರಗೀ ಬಾವೀ ತೋಡೇ
ಜಾರೂಕಿ ಬಾಳ ತಳನಲ್ಲೇ। ಜೇನೊಡಿಯಾ
ತಾನೊರದಾ ಕೊಡನಾ ಕೊಡದೀರೆ। ೮೭

ಈ. ಹಬ್ಬ ಹರಿದಿನಗಳ ಹಾಡುಗಳು

ಪರಿವಿಡಿ	ನಿರೂಪಕರ ಹೆಸರು	ಊರು
೦೧. ಹೊಸಬತ್ತ	ದೇವಮ್ಮ ರಾಮ ನಾಯಕ	ಭಾವಿಕೇರಿ
೦೨. ದನಬೆಚ್ಚುವುದು	ದೇವಮ್ಮ ರಾಮ ನಾಯಕ	ಭಾವಿಕೇರಿ
೦೩. ದೀಪಾವಳಿ	ದೇವಮ್ಮ ರಾಮ ನಾಯಕ	ಭಾವಿಕೇರಿ
೦೪. ತುಳಸಿ	ದೇವಮ್ಮ ರಾಮ ನಾಯಕ	ಭಾವಿಕೇರಿ
೦೫. ಹರಿದಿನಾಚರಣೆ	ದೇವಮ್ಮ ರಾಮ ನಾಯಕ	ಭಾವಿಕೇರಿ

೦೧. ಆಕರ ಮೂಲ : ಬಂದಾನೆ ಬಲಿಯಂದ್ರರಾಯ
: ಡಾ. ಎನ್. ಆರ್. ನಾಯಕ
: ಜಾನಪದ ಪ್ರಕಾಶನ ಹೊನ್ನಾವರ (೧೯೮೯)

೦೨. ಆಕರ ಮೂಲ : ತುಳಸಿ ತಿಮ್ಮಪ್ಪರಾಯ
: ಡಾ. ಎನ್. ಆರ್. ನಾಯಕ
: ಜಾನಪದ ಪ್ರಕಾಶನ ಹೊನ್ನಾವರ (೧೯೮೭)

ಸಂಗ್ರಹ ಕಾಲ : ೧೯೬೯– ೧೯೭೧

೧೧. ಹೊಸಬತ್ತ

ಬಾಗೀಒಳ್ಳ್[೧] ಬೆಳಿಯೇ ಬಂಡೀ ಮ್ಯೆನ್ ಬರುವಾಗೇ
ಒಳಗಿಂದೇ ನೋಡೇ ಸಿರಿದೇವಿ
ಒಳಗಿಂದೇ ನ್ವೊಡೆಲೋ ಸಿರಿದೇವಿ ಕೊಮರಾರ[೨]
ಬಾಗೀವೊಳ್ಳ ಬೆಳಿಯಾ ಬಿಳತಂದ್ರೇ[೩]॥ ॥೧॥

ರಾಸೀಯ ಮ್ಯೆನೆಲೋ ಬೀಸೆಟ್ರೇ[೪] ಕೊಳಗಾವ
ಸಾಸರ ಪತಿಯಂಬಾ ಮನಿಯಿತ್ತ। ಬಿಳ್ಳಪ್ಪ
ರಾಸೀಬಿತ್[೫] ಮನಿಗೇ ಬರುವಾದ॥ ॥೨॥

ಮೋಡೀಯ ಮ್ಯೆನೆಲೋ ಹೂಡಿದನೇ ಕೊಳಗಾವ
ರಾಯಪತ ತಮ್ಮ ಮನಿಯಿತ್ತ। ಬಂದೇಗೆ[೬]
ಮೋಡೀ ಬಿತ್ ಕಾಡೀ ತರುವಾದ॥ ॥೩॥

ಇತ್ತೂ[೭] ಕಾಣಾದೇರೆ[೮] ಹಿತ್ಲ ಕಡಗರಸೀದಾ
ಬತ್ತದ ಕಣಜ ಮರಿಯಾದು[೯]। ನಮ್ಮನಿಯಾ
ಇತ್ತೂ ಮುತ್ತೇರೆ ಬರುವದ॥ ॥೪॥

ಆಯಾ ಚಾಯಾದಲ್ಲೇ[೧೦] ಉಳ್ಳ[೧೧] ಪೋಜೀ[೧೨] ಮಾಡೇ
ಚೇರಗ್‌ಸಾಲ್ ಭತ್ತ ಉಳ್ಳೀಗೇ। ಹುಯ್ದೀಕಂಡೇ
ನಾರೇ ತನ್ನಾಡ ತೊಡಗವ್ಳೇ॥ ॥೫॥

ಹೊಸಬತ್ತ ಮಿರುವಾಗೇ ಹಸದವ್ರು ದುಮ್‌ದುಮಿ
ಹಸ್ತಕನೊಡಿನಾ ಹಸ್ತಕಂಡೆ। ಬರುವಾಗೇ
ಹೊಸ ಮುತ್ತನಾರತಿಯಾ ಬಿಳಗರೇ॥ ॥೬॥

ದೇವೇ ಬರ್ತ್ಯದಂದೇ[೧೩] ಹೂಂವನ[೧೪] ತೋರಣಾಗಟ್ಟೇ
ಬಾಗೂಲಿಗ್ ಹೊನ್ನ ಕಳಸವೇ। ಬಾಲಯ್ಯ
ದೇವೀ ಒಡಗೂಡೇ ಬರುವಾನೇ। ॥೭॥

---

೧. ಭಾಗ್ಯವುಳ್ಳ ೨. ಕುಮಾರರ ೩. ಬೆಳೆದು ತಂದರು ೪. ಬೀಸಿಟ್ಟರು ೫. ಬಹಳಷ್ಟು ಬಿತ್ತಿ ೬. ಬಂದು

ಕೈಸಯ್ಣೀ[೧೫] ಗದ್ದೇ ಬೀಸಾಡೇ ಬಿಳಿಯಾಲೇ
ರೇಸೂಮಿ ಸಾಲಿ ಒಡಬವ್ದ[೧೬] ನಮ್ಮನಿಯ
ರಾಸೀಗಾರತೀ ಬಿಳಗೂವೆ॥ ॥೮॥

ಮನಿಯಂಚನ ಗದ್ದೇ ಮಡದ್ದಾಸೇ ಬೆದ್ದವೇ[೧೭]
ಒಡೆಯಾಗುತ್ತರವ ಕೊಡಲಿಲ್ಲ। ಬಾಲಯ್ಯ
ತಡವಿಲ್ಲದೆ ಕಟ್ಟೋ ಕಣಜವ॥ ॥೯॥

ಬಂದ ಲಕ್ಷ್ಮ್ದೇವೇ ಅಂಗ್ಳದಲ್ ನಿಂತೀದ[೧೮]
ಇಂಬುಂಟ[೧೯] ಮಾಣಿಕದಾ ಜಿಗಲುಂಟ[೨೦]। ಬಾಲಯ್ಯಾ
ತೊಡಿಯಾ ಮೈನಾಡೇ ಎರಬವ್ದ[೨೧]। ॥೧೦॥

ಬಾಗ್ಯಲಕ್ಸ್ಮೇ ಬಂದೇ ಬಾಗಲ್‌ದಲ್ ನೆಂತಾಳೇ
ಬಾಗಲಿಗು ಹೊನ್ನಾ ಹಲಿ ಹುವ್ವೆ ಕೊಲ್ಲಾಪುರ್ದಾ
ಅಂಬಾಬಂತ ನಮ್ಮಾ ಮನಿತುಂಬೆ। ॥೧೧॥

---

೧೫. ಕೆಂಪು ಬತ್ತದ ೧೬. ರೇಶಿಮೆ ಸೀರೆ ಉಡಬಹುದು ೧೭. ಅಡ್ಡಬಿದ್ದವು ೧೮. ನಿಂತಿದ್ದಾಳೆ
೧೯. ಸ್ಥಳವಿದೆ ೨೦. ಜಗುಲಿಯಿದೆ ೨೧. ಇರಬಹುದು

೦೨. ದನ ಬೆಚ್ಚಿಸುವುದು

ಕೊಟ್ಟೂಗಿಲೆದ್ದ ಇತ್ತ[೧] ಬಿಚ್ಚುವದಿಂದೇ[೨]
ಮುತ್ತೀನಾವುಗಿಯಾ[೩] ಸಡಲಾಸೊ[೪]। ಲಣ್ಣಯ್ಯ
ಇತ್ತೀಗೇ ಸಿಂಗೂ[೫] ದಿನಿ ತೋರ[೬]॥ ೦೧

ಬೆಚ್ಚಬ್ಯಾಡಮನೆ[೭] ಬೆದರ ಬ್ಯಾಡಮನೆ
ವರಾಕುಂದ್[೮] ಹುಲ್ಲಾದ್ರು ಒಡಿ ತಂದ್ಹಾಕ್ವೆ[೯]
ಕವ್ಲಕೆರಿ[೧೦] ನೀರ್ ಕುಡ್ಕಂಡ್[೧೧] ಮನಿಗೇ ಬಾಮನೆ[೧೨]॥ ೦೨

ಇತ್ತೂ ಕಾಣಾದೇರೆ[೧೩] ಹಿತ್ತಲಕಡಗರಸೂವೆ[೧೪]
ಬತ್ತದ ಕಣಜ ಮರಿಯಾದು[೧೫]। ನಮ್ಮನಿ
ಇತ್ತೂ ಮುತ್ತೇರೇ[೧೬] ಬರುವಾದ॥ ೦೩

ಇತ್ತು ಸುಕ್ರಪ್ಪ ಮೇವೂದು[೧೭] ಕರ್ಕೀಯೇ
ಸೋಬಾನ್ದ ಕೆರಿಯ ಹಣಿನೀರ। ಕುಡದೀಕಂಡೇ
ಬಂದಾವೇ ದಾಬಣಗಿ[೧೮] ಬಿಸ್ಲಲ್ಲೇ॥ ೦೪

ಕೊಟ್ಟೂಗೇ ಕಿಸರಂದೇ[೧೯] ಹೊಕ್ಕವೇ[೨೦] ಸುಕ್ರಪ್ಪ
ದಿಟ್ಟೀಸ್[೨೧] ನೋಡೂದ ಒಡಿಯಾನ। ಕೋಡೇಗೇ[೨೨]
ಹಾಸಂತ ವಜ್ರದ ಹಲಗೀಯ। ಸುಕ್ರಪ್ಪ
ಬೀಸಂತ ಬಿಳ್ಳೀ[೨೩] ಚವಲಾವ॥ ೦೫

ನಮ್ಮಾ ಮನಿಯಾ ಇತ್ತ ಸಣ್ಣ ಕುಂಬೀ ನಿತ್ತ[೨೪]
ಬಣ್ಣವ ಹೇರೇ ಬಳ್ದುಂಬೇ[೨೫]। ಬಂದಿತ್ತೀಗೇ
ಪಾದಕ್[೨೬] ನೀರ್ಹುಯ್ದೇ[೨೭] ಸರಣಂಬೇ॥ ೦೬

---

೧. ಕೊಟ್ಟಿಗೆಯಲ್ಲಿದ್ದ ಎತ್ತು ೨. ಹೆದರುವುದು ಈ ಹೊತ್ತು ೩. ಕಾಲ್ಮೆಟ್ಟು ೪. ಸಡಿಲಿಸು, ತೆಗೆದಿಡು ೫. ಸೊಗಸಿನ ಚೂಪು ಧ್ವನಿ ೬. ಧ್ವನಿಮಾಡು ೭. ಹೆದರ ಬೇಡಪ್ಪ ೮. ವರಕ್ಕೊಂದು ೯. ಒಡೆಯ ತಂದು ಹಾಕುತ್ತೇನೆ ೧೦. ಒಂದು ಕೆರೆಯ ಹೆಸರು ೧೧. ನೀರು ಕುಡಿದುಕೊಂಡು ೧೨. ಮನೆಗೇ ಬಾರಪ್ಪ ೧೩. ಕಾಣದಿದ್ದರೆ ೧೪. ಹಿತ್ತಿಲೆಡೆ ಅರಸುವೆ ೧೫. ಮರೆಯಾಯಿತು ೧೬. ಮುತ್ತು ಹೊತ್ತು ೧೭. ಮೇಯುವುದು ೧೮. ಬೇಯುವ, ಉರಿಯುವ ೧೯. ಕೆಸರೆಂದು ೨೦. ಪ್ರವೇಶಿಸದು ೨೧. ದಿಟ್ಟಿಸಿ ೨೨. ಹತ್ತಿರ ಈಗ ೨೩. ಬೆಳ್ಳಿಯ ೨೪. ಸಣ್ಣ ಕೋಡಿನೆ ಎತ್ತು ೨೫. ಸುತ್ತಾಡಿ ೨೬. ಪಾದಕೆ ೨೭. ನೀರು ಹೊಯ್ದು

೦೩. ದೀಪಾವಳಿ

ಹಾಲ್ಹಬ್ಬಾ ಹರವಗೆ ಕೋಲ್ಹಬ್ಬಾ ಕುರುಬಗೆ
ಮಾನಮ್ಮಿ[೧] ಹಬ್ಬಾ ಮಗಳೀಗೆ। ಮೆನೆಬರುವಾ
ದೇಪಳಿಗೆ[೨] ಹಬ್ಬಾ ಅಳಿಯಗೆ। ೦೧

ವರುಸಾಕೇ ಬರುವಾದ ಅರಸು ದೇಪಳಿಗೆ
ಅರಸಾರೊಳ್ಳಮ್ಮಾ ಒಳಗೀದ। ಮಂಡೀಕಟ್ಟೇ
ಗಂದಾವಾ ಇಟ್ಟೇ ಬರುವಾದ। ನಾರೀಯು
ಅರಸೀನಾರತಿಯಾ ಬಿಳಗಿದಳೇ। ನಾರೀಗೆ
ಮಂಗಲದ ಬುಟ್ಟ ಹಣಿಮ್ಯೆನೆ। ೦೨

೦೪. ತುಳಸಿ

ದಾಸಾಳ ಹೂಂವ್[೩] ಚೆಂದ ತುಲಸೀ ತೊಯ್ಣ್[೪] ಚೆಂದ
ತುಳಚೀಲೇ[೫] ಕೊಳತವ್ನ್[೬] ಮೊಕಚೆಂದ[೭] ಬಾಲಮ್ಮ
ಕೆಂಡ ತರುವವ್ಳ ಮೊಕಚೆಂದ। ೦೧

ಹೊತ್ರಮುಂಚ್ನ[೮] ಕೆಲ್ಸ ತಪ್ಪ್[೯] ನಮ್ಮನಿಯಲ್ಲೇ
ನಿಚ್ಚ ಮುತ್ತಯ್ದೆ ತುಳಚಮ್ನ। ತೇರ್ತವ[೧೦]
ತಪ್ಪದೇ[೧೧] ಬಾಲಯ್ಯದರಸೂನೇ[೧೨]। ೦೨

ಒಬ್ಬಾ ಬಾಲಯ್ಗೇ ಕಬ್ಬಾಯಸಾಗಲೇ[೧೩]
ಕಬ್ಬ ಏರಿಸುವೆ[೧೪] ತುಳಸೀಗೇ। ತುಳಚಮ್ಮ
ಹಬ್ಬಕೇ ತರ್ಸೂವೇ[೧೫] ಹೊಸಪಟ್ಟೇ। ೦೩

---

೧. ಮಹಾನವಮಿ ೨. ದೀಪಾವಳಿ ೩. ಹೂವು ೪. ತೋರಣ ೫. ತುಲಸಿಯಲ್ಲಿ ೬. ಕುಲೆತವನ ೭. ಮುಖ ೮. ಬೆಳಗ್ಗಿನ ೯. ತಪ್ಪದ ೧೦. ತೀರ್ಥವನ್ನು ೧೧. ಬಿಡದೇ, ಮರೆಯದೇ ೧೨. ಸ್ವೀಕರಿಸುವನು ೧೩. ಕಬ್ಬಿನ ಆಯುಷ್ಯವಾಗಲಿ ೧೪. ಕಬ್ಬನ್ನು ಏರಿಸುತ್ತೇನೆ ೧೫. ತರಿಸುತ್ತೇನೆ

೦೫. ಹರಿದಿನಾಚರಣೆ

೧

ಬಾಗಲ ಗುಂಡೀನ[೧] ಬಾಮೆ ತುಳಚಮ್ಮಗೇ
ಹೊತ್ತೂರಿಗ್[೨] ನೆಣಿಯಾ ಬಿಳಗೂ[೩]ವೆ। ತುಳಚಮ್ಮನ
ಉಚ್ಚಯದ[೪] ಹಾಡ ತುಡಗೂವೇ[೫]। ೦೧

ಅಂಗಳ ಗುಂಡೀನ ರಂಬೇ ತುಳಚಮ್ಮಗೇ
ಸಂಜೀಗ್ ನೆಣಿಯಾ ಬಿಳಗೂವೆ। ತುಳಚಮ್ಮನ
ಮಂಗಳದ ಹಾಡ ತುಡಗೂವೇ। ೦೨

ಇಟ್ಟೋತಿಗ್[೬] ನೆನುವಾನೆ[೭] ದುಟ್ಟೊತಿಗಾರನ[೮]
ಎಪ್ಪತ್ತು ನಾಮದ ಒಡಿಯಾನ। ಗೋವಿಂದಾನ
ಇಟ್ಟೋತಿಗ್ ಸೈವಿಕರ[೯] ನನುವಾರ॥ ೦೩

ಎಲ್ಲೋರಿಗಿಂದ್[೧೦] ಮುಂದೇ ಬಲ್ಲಿಂದ್ರನ[೧೧] ನೆನುವಾನೆ
ಅರವತ್ತು ನಾಮದ ಒಡಿಯಾನಾ। ಗೋವಿಂದನಾ
ಯಾವಾಗು ಸೈವಿಕರ ನನುವಾರ॥ ೦೪

ಒಡಗುಂಬೆ[೧೨] ಒಡಗುಂಬೆ ಉಲದೇ[೧೩] ಬರುವಾತನ
ಹರಿಯೇ ನಾರೇಣ್ಣಾ[೧೪] ಮಡದೀಯ। ತುಳಚಮ್ಮನ
ಇಟ್ಟೋತಿಗ್ ಸೈವಿಕರ ನನುವಾರೆ। ೦೫

ಬಲಗುಂಬೆ[೧೫] ಬಲಗುಂಬೆ ಉಲದೇಬರುವಾತನ
ಹರಿಯೇ ಗೋವಿಂದ್ನಾ ಮಡದೀಯ। ಮಾಲಕ್ಷ್ಮಿಯಾ
ಯಾವಾಗು ಸೈವಿಕರ ನನುವಾರೆ। ೦೬

ನುಡಿತಪ್ಪೇ ನಡುತಪ್ಪೇ[೧೬] ನಡುವಾ[೧೭] ನಾಲಗ್‌ತಪ್ಪೇ
ಶ್ರೀಕೃಷ್ಣರೋದು ಬರತಪ್ಪೇ[೧೮]। ಗೋವಿಂದನಾ
ಹಾಡು ತಪ್ಪಿದರೆ ನಗಸಲ್ಲಾ[೧೯]॥ ೦೭

---

೧. ಮುಂದಿನ ೨. ಬೆಳಿಗ್ಗೆ ೩. ಬೆಳಗುವೆ ೪. ಉತ್ಸವದ ೫. ಆರಂಬಿಸುವೆ ೬. ಎಷ್ಟು ಹೊತ್ತಿಗೆ ೭. ನೆನೆಯುವೆನು ೮. ? ೯. ಭಕ್ತರು ೧೦. ಎಲ್ಲರಕ್ಕಿಂತ ೧೧. ಬಲೀಂದ್ರನ ೧೨. ಕೂಡಿಕೊಳ್ಳುವೆ ೧೩. ಒಲಿದು ೧೪. ನಾರಾಯಣನ ೧೫. ಪ್ರದಕ್ಷಿಣೆ ಹಾಕುವೆ ೧೬. ಮಧ್ಯದಲ್ಲಿ ತಪ್ಪಿ ೧೭. ನುಡಿಯುವ ೧೮. ಬರೆಹತಪ್ಪಿ ೧೯. ನಗೆಸಲ್ಲದು

೨

ತಿರುಪತಿಗ್ಹೋಗುವರ್[೯] ನಮಗುಂದ[೧೦] ಹ್ಯಾಳಾಲಿಲ್ಲಾ[೧೧]
ಕಾಯುಡದೇ ಕಡಿಯಾ[೧೨] ಕೊಡಲಿಲ್ಲಾ। ಅವರಿನ್ನೇ
ದ್ಯೆವರೇ ಗತಿಯೆಂದೇ ನೆಡದಾರೇ। ೦೮

ದ್ಯೆವರೀಗ್ಹೋಗೂವರ ನಮಗುಂದ ಹ್ಯಾಳಾಲಿಲ್ಲ
ಕೊನಿಯುಡದೇ ಹಿಸಕಿ[೧೩] ಕೊಡಲಿಲ್ಲಾ। ಹರಿಗೋಳ[೧೪]
ನೆಡದರ[೧೫] ಗೋವಿಂದ್ನೇ ಗತಿಯಂದೇ॥ ೦೯

ಕಟ್ಟಿದ ಮನಿಯಾ ಬೆಟ್ರೋ[೧೬] ಹೂಡಿದೋಲಿಯಾ ಬೆಟ್ರೋ
ಸೆಣ್ಣಿಂದ[೧೭] ತಂದಾ ಮಡದೀಯಾ। ಬಿಟ್ಟೇಗೇ[೧೮]
ನೆಡದರ ಗೋವಿಂದ್ನೇ ಗತಿಯಂದೇ॥ ೧೦

ತಿರುಪತಿಗ್ಹೋಗ್ವರ ತಿರ್ಗೇ[೧೯] ನೋಡಲು ಬ್ಯಾಡಿ
ಮನಿಯಂತ ಚಿಂತೀ ಹಿಡಿಬ್ಯಾಡಿ। ದಂಡೀನ್ ಹನ್ಮ
ಮನಗೇ ಕಾವಲ್ವಾ[೨೦] ಕಳಗೂನೇ[೨೧]॥ ೧೧

ತಿರುಪತಿಗ್ಹೋಗ್ವಲ್ಲೇ ಕಲ್ಲಿಲ್ಲ ಮುಳ್ಳಿಲ್ಲ
ನಿಲ್ಲೀಲು[೨೨] ಕಾಯಂತ ಹರಳಿಲ್ಲ। ಹರಿಗೋಳ
ನೆಡದರ ಗೋವಿಂದ್ನೇ ಗತಿಯಂದೇ॥ ೧೨

ದ್ಯೆವೂರೀಗ್ಹೋಗ್ವರ ತಿರ್ಗೇ ನೋಡಲು ಬ್ಯಾಡಿ
ಬದ್ಕೀನಾ[೨೩] ಚಿಂತೀ ಹಿಡಿಬ್ಯಾಡಿ। ತಿಮ್ಮಪ್ಪಾಯಾ
ಹತ್ತಿಸ್ಕೋ[೨೪] ನಿನ್ನಾ ಪುರಕೇಗೇ। ೧೩

ಉಂದುಮಿಟ್ಟಾ[೨೫] ಹತ್ತೂವಾರೇ ಉಂದುಮಿಟ್ಟಾ ಅಳುವಾರೇ[೨೬]
ಹರಿಯೇ ಗೋವಿಂದ್ನಾ ನನುವಾರೇ। ಹರಿಗೋಳ
ನೆಡದರ ಗೋವಿಂದ್ನೇ ಗತಿಯಂದೇ॥ ೧೪

ಹತ್ತು ಕಂಟಾಳೀಯೇ[೨೭] ಹತ್ತನಾರದಗಿರಿಯೇ
ಸ್ವಾಮೀ ಗೋವಿಂದಾ ಕಯ್ಯುಕ್ಕಟ್ಟೇ[೨೮]। ಕಾಲ್ಕುಟ್ಟೇ
ಹತ್ತಸ್ಕೊ ನಿನ್ನಾ ಗಿರಿಮ್ಯೆನೆ। ಗೋವಿಂದಾ
ಇಕ್ಕಿಸ್ಕೊ ನಿಂಗೆ ವನಮಾಲ್ಯ। ೧೫

---

೯. ತಿರುಪತಿಗೆ ಹೋಗುವವರು ೧೦. ನಮಗೆ ೧೧. ಹೇಳಲಿಲ್ಲ ೧೨. ಕಾಯಿಯ ಅರ್ಧಭಾಗ ೧೩. ಸೀಳು ೧೪. ಹರಿಭಕ್ತರು ೧೫. ನಡೆದರು ೧೬. ಬಿಟ್ಟರು ೧೭. ಸಣ್ಣಿಂದ ೧೮. ಬಿಟ್ಟು ೧೯. ತಿರುಗಿ ೨೦. ಕಾಯಲಿಕ್ಕೆ ೨೧. ಕಳಿಸುವನು ೨೨. ನೆಲ್ಲಿಯ ೨೩. ಬದುಕಿನ ೨೪. ಹತ್ತಿಸಿಕೋ ೨೫. ಒಂದು ಮೆಟ್ಟಿಲು ೨೬. ಅಳೆಯುವರು ೨೭. ಮೆಟ್ಟಿಲು ೨೮. ಕಯ್ಯೊಕಟ್ಟು

೩

ಕರಿಯವ್ರು ನನ್ನವ್ರ್[೨೯] ಬಿಳಿಯವ್ರು ನನ್ನವ್ರ
ಹರಿದಾಸ್ರ ನನ್ನಾ ಬಳಿಯವ್ರ[೩೦]। ತಿರುಪತಿಯಾ
ಗಿರಿಯಾ ಮ್ಯೆನ್ ತಾಯೀ ಬಳಗಾವೇ॥ ೧೬

ಸುಪ್ಪೀನಾ[೩೧] ಬೆಟ್ಟಂದೇ ಹುಕ್ಕೂಕೇ[೩೨] ಅಂಜೀದೆ
ಮುತ್ತಯ್ದೆ ಏವ್ರೇ ಗುಡುಲಲ್ಲೇ[೩೩]। ಗೋವಿಂದ್ನಾ
ಮೋವದ ರಾಣಿ ತುಳಚಮ್ಮ॥ ೧೭

ಮುತ್ತೀನಾಗುಡ್ಲಂದೇ ಮುಟ್ಟೂವಾಕ್ ಅಂಜೀದೆ।
ಮುತ್ತಯ್ದೆಯೇವ್ರೇ ಗುಡ್ಲಲ್ಲೇ। ಗೋವಿಂದ್ನಾ
ಮೋವದ ರಾಣಿ ತುಳಚಮ್ಮ॥ ೧೮

ರಂಬೆ ತುಳಚಮ್ಮಾ ನಿನ್ಗಂಡಿಲ್ಲಿಗ್ ಹೋಗೀನೇ[೩೪]
ನಿಂಬೀ ಹಣ್ಣಿನಂತಾ ಚೆಲುವಾರ[೩೫] ತುಳಚಮ್ಮಾ
ಗಂಡೇವರ[೩೬] ಸ್ವೊಮಿ ಗಿರಿಮ್ಯೆನೆ॥ ೧೯

ನಿಸ್ತ್ರೀ ತುಳಚಮ್ಮಾ ಗಂಡಿಲ್ಲೀಗ್ಹೋಗೀನೇ
ನಿಂಗಾಣ[೩೭] ನೇಲಾ[೩೮] ಕುದರೀಯೇ।ಯ। ಹೇರೀಕಂಡೇ
ಗಂಡೇವರ ಸ್ವೊಮಿ ಗಿರಿಮ್ಯೆನೆ॥ ೨೦

ಕಂಚೀಯಾ ಬನದಲ್ಲೇ ಕೆಂಚೇಲಾಲಿಸಿದಳೇ[೩೯]
ಚಿಂತೀ ಮಾಡುವಳ ಮನದಲ್ಲೇ। ನಲ್ಲನಕಯ್ಲೇ
ಚೆಂದಾದಲ್ ಪರ್ಜಿ[೪೦] ಇಳಿಯಾಲೆ॥ ೨೧

ನಿಂಬೀಯಾ ಬನದಲ್ಲೇ ರಂಬೇ ಲಾಲಿಸಿದಳೇ
ತುಂಬೇ[೪೧] ಹೇಳಿದಳೇ ಮನದಲ್ಲೇ ಗಂಡನಕಯ್ಲೇ
ಸಾಂಬಾಳಿಸಿ[೪೨] ಪರ್ಜಿ ಇಳಿಯಾಲೆ॥ ೨೨

ಹಣ್ಣಡಕೀ[೧] ಕೊನಮುಂದೇ ಎಣ್ಣೀಹೇರೂ ಮುಂದೆ
ಸ್ವೊಮಿ ಗೋವಿಂದ್ನಾ ಮನಿಮುಂದೆ। ಗಿರಿಯಾಮ್ಯೆನೆ
ಮಕ್ಕಳ ಬೇಡುವರ ಕಡಿಯಿಲ್ಲಾ[೨]॥ ೨೩

ಮೇಲುಗಿಯವ್ರೋ ಬಂಗಾರ್ದಗಿಯವ್ರೋ
ಸಂಗಾರ್ದ[೩] ಎಳಿಯವ್ರೋ ಸುಳಿ ಸುಳಿ ಮಂಡಿಯವ್ರೋ

೨೯.ನನ್ನವರು ೩೦. ಕುಲದವರು ೩೧. ಸೊಪ್ಪಿನ ೩೨. ಪ್ರವೇಶಿಸಲಿಕ್ಕೆ ೩೩. ಗುಡಿಯಲ್ಲಿ ೩೪. ನಿನ್ನ ಗಂಡನು ಎಲ್ಲಿಗೆ ಹೋಗಿದ್ದಾನೆ? ೩೫. ಚೆಲುವರು ೩೬. ಗಂಡ ಇದ್ದಾರೆ ೩೭. ಕಪ್ಪು ೩೮. ನೀಲಿ ೩೯. ಕೆಂಪಿ ಕೇಳಿದಳು ೪೦. ಪರಿಷೆ ೪೧. ತುಂಬಿ ೪೨. ಸಂಬಾಳಿಸಿಕೊಂಡು ೧. ಹಣ್ಣಡಿಕೆಯ ೨. ಕಡಿಮೆಯಿಲ್ಲ

ಸವರ್ನದ[೪] ಬಗತಾಲಿಯವ್ರೋ[೫] ಮುತ್ತೀನ ಮುಡಿಯವ್ರೋ
ನಗಮೊಕದಾ ರಾಯರೋ ಗಿರಿಯಾ ತಿಮ್ಮಪ್ಪ ರಾಯರೋ. ೨೪

ಮುತ್ತನ[೬] ಮುಡಿದಾಸರ ಎತ್ತಾಗಿಂದೆಳದಾರೇ[೭]
ಕೊಚ್ಚಕ್ಕೀವರ್ನ[೮] ಕೊರಿವರ್ನ । ದಾಸಾರ
ಎತ್ತಾಗಿಂದ್ ಗಿರಿಯಾ ಎಳದಾರೇ॥ ೨೫

ಸ್ವೊಮಿ ಗಿರಿಯಾ ಮ್ಯನೇಯೇಗೇನು[೧೦] ಮಾರಾಟ
ಬಾಳೀ ಹಣ್ಣೀನ ಅಮರೂತ[೧೧]। ಬೆಲ್ಲದಚ್ಚ
ತೂಗಿ ತುಂಬ್ವಾರೇ ಹಡಪಕೆ। ಹರಿದಾಸರು
ತರುವಾರು ಮನಿಯಾ ತುಳಚೀಗೇ॥ ಹರಿದಾಸರು
ಹಚ್ಚೂವರ್ ತಮ್ಮಾ ಬಳಗಾಕೇ॥ ೨೬

ತಿರುಪತಿ ರಾಜೀದಲ್ಲೇ ಯೇಗೇನು ಮಾರಾಟ
ಅನ್ನ ಪರ್ಸದಲ್ಲೇ[೧೨] ಅಮರೂತ। ಹರಿದಾಸರು
ತೂಗಿ ತುಂಬ್ಯಾರೇ ಹಡಪಕೆ। ಹರಿದಾಸರು ೨೭

ತರುವಾರು ಮನಿಯಾ ತುಳಚೀಗೇ। ಹರಿದಾಸರು
ಹಚ್ಚೂವರ್[೧] ತಮ್ಮ ಬಳಗಾಕೇ॥ ೨೮

ಅಟ್ಟಟ್ಟ ಮಡಕೀ ಕುಟ್ಟೇ ನೆಟ್ಟನಾಮಾತಿಗದೇ
ಬೆಟ್ಟದ ಬೀದ್ಯಲ್ಲೇ[೨] ಹಸರವಾ[೩]। ಹರಿದಾಸರು
ತೂಗೇ ತುಂಬಾರೇ ಹಡಪಕು। ಹರಿದಾಸರು
ತರುವಾರೇ ತಮ್ಮಾ ತುಳಚೀಗೇ। ತಂದಾನಾಮಾ[೪]
ಹಚ್ಚೂವಾರ್ ತಮ್ಮಾ ಬಳಗಕೇ॥ ೨೯

---

೩. ಶೃಂಗಾರದ, ಚೆಲುವಿನ ೪. ಬಂಗಾರದ ೫. ಬೈತಲೆಯವರು ೬. ಮುತ್ತಿನ ೭. ಯಾವ ಕಡೆಯಿಂದ ಇಳಿದರು ೮. ಕುಚ್ಚಿಗೆ ಅಕ್ಕಿ ಬಣ್ಣ, ಗೋದಿ ವರ್ಣ ೯. ಜರಿಬಣ್ಣ ೧೦. ಈಗ ಏನು ೧೧. ಅಮೃತ ೧೨. ಅನ್ನ ಪ್ರಸಾದ ೧. ಹಂಚುವರು ೨. ಬೀದಿಯಲ್ಲಿ ೩. ಹಸರ, ಅಂಗಡಿ ೪. ಜೇಡಿಮಣ್ಣಿನಿಂದ ಮಾಡಿದ ನಾಮದ ತುಂಡು

೫

ಎಲ್ಲಾ ದೇಸಾ ತಿರ್ಗೇ ದಾಸರ ಬತ್ತಾರಮ್ಮ[೫]
ಹಾಸೂಗಿ ಹಾಸೇ ದಸರೀಯಾ। ಮೈಲೂಗಿರಿಯಾ
ದಾಸರ ಹಡಗ್ಗತ್ತೇ ಇಳದಾರಾ। ೩೦

ದೇಸಾ ದೇಸಾ ತಿರ್ಗೇ ದಾಸರ ಬಂದೀಯಾರ[೬]
ನೀರ ಕುಡಮ್ಮಾ ಮಣಿಯಿಡ್ಸ[೭] ತಿರುಪತಿಯಾ
ದಾಸರ ಬಂದೀಯಾರ ಸರಣನ್ನ॥ ೩೧

ಸಾಲೀ ಸೇರೀಯಾ[೮] ತೋಳ್‌ಹುಯ್ದ್[೯] ಉಡುವಾರ
ದಾಳಿಂಬನ್ಹೂಂವ ಮುಡುವಾರ। ಗಿರಿಯಾ ಮೈನ್ನಾ
ಸಾಲೀ ತಂದರೇ ತುಳಚೀಗೆ॥ ೩೨

ಪಟ್ಟೀ ಸೇರೀಯಾ ತುಂಡ್ ಹುಯ್ದೇ[೧೦] ಉಡುವಾರ
ಮಂಡ್ಲೀಕನ್ಹೂಂವ ಮುಡುವರ ಗಿರಿಯಾ ಮೆನ್ನಾ
ಪಟ್ಟೀಯ ತಂದಾರೇ ತುಳಚೀಗೆ॥ ೩೩

ಮುಟ್ಟೇ[೧] ತುಂಬಿದ ಚಿನ್ನಾ ಪಿಟ್ಟೊಗಿ[೨] ತುಂಬಿದ ಬಟ್ಟೆ
ಸ್ವೊಮಿ ಗೊಯ್ದರಾಯ್ರ ಕಳಗರ[೩] ಯೇನಂದೇ
ಚೆಂದಕೇ ತುಳಚಮ್ಮ ಒಡಲಂದೇ[೪]॥ ೩೪

ಹರಿಯಾಳಾ[೫] ತುಂಬೀದ ಹರಳು ಸಿರಿಗಂದವ
ಸ್ವೋಮೀ ತಿಮ್ಮಪ್ಪ ಕಳಗೀನೇ। ಯೇನಂದೇ
ಅರ್ತೀಗೇ ತುಳಚಮ್ಮ ಎಡಲಂದೇ[೬]॥ ೩೫

ಗಂದಟ್ಟ ತುಂಬೀದ ಗಂದ ಸಿರಿಗಂದವ
ಸ್ವೊಮೀ ಗೋಯ್ದರಾಯಾ ಕಳಗೀನೇ। ಯೇನಂದೇ
ರಂಬೇ ತುಳಚಮ್ಮ ಎಡಲಂದೇ॥ ೩೬

೭

ಸಾಲೀ ಜೋತಾರಿಕ್ಕೆ ಪಟ್ಟಿಯಾ ಹೊದ್ದಾನೇ
ದೊಡ್ಡಾ ಬಾಳೆಲಿಯಾ ಬಿಡ್ಸ್‌ಹಾಸೇ। ಮಾವೋಜಿ
ಹರಿಗೋಳ[೭] ಸಿರಿಪಾದ ತೊಳದಾನೆ[೮]॥ ೩೭

---

೫. ಬರುತ್ತಾರಮ್ಮ ೬. ಬಂದಿದ್ದಾರೆ ೭. ಮಣ್ಣಿಯನ್ನಿಡು ೮. ಸೀರೆಯನ್ನು ೯. ತೋಳು ಹೊಡೆದು ೧೦. ನೆರಿಗೆಮಾಡಿ ೧. ಖುಟ್ಟಿ ೨. ಪೆಟ್ಟಿಗೆ ೩. ಕಳುಹಿದ್ದಾರೆ ೪. ಉಟ್ಟುಕೊಳ್ಳಲಿ ೫. ಹರಿವಾಣ ೬. ಇಟ್ಟುಕೊಳ್ಳಲಿ ೭. ಹರಿದಾಸರ ೮. ತೊಳೆದನು

ಉದ್ಕವಾ[೯] ತಕ್ಕಂಡೇ ತುಳಸೀ ಮಾಲಿಯಿಕ್ಕೇ
ದೊಡ್ಡ ಬಾಳೆಲಿಯಾ ಬಿಡ್ಸ್‌ಹಾಸೇ। ಮಾವ್ರೋಜೆ
ಹರಿಗೋಳ ಸಿರಿಪಾದ ತೊಳದಾನೆ॥ ೩೮

ಪಾದವ ತುಳ್ದೇ[೧೦] ಪಾವ್ರೂಡದಲ್ಲುದ್ದೀದ
ಹರಿಗೋಳ ತಂದ ತುಳಚೀಗೆ। ಮಾವ್ರೋಜೆ
ನೆನೆದಾ ಗೋವಿಂದ್ನಾ ಮನದಲ್ಲೇ॥ ೩೯

ಅಣ್ಣದೀರೆಲ್ಲಾ ಎಣ್ಣೀಯನ್ನಾವುಂಡೇ
ಹೊನ್ನೀಯಾ ನಾಡಾ ಹೊಲಕ್ಹೋಗೇ। ಕಡುವಾರೇ
ಗೋಕು ಚೆಂದಣದಾ ಹಲಗೀಯಾ[೧]। ೪೦

ಹಲಗೀ ಕಡುವಾರೇ ಹಲವಂಗ ತಿದ್ದೂವಾರೇ
ಸ್ವೊಮೀ ಗೋವಿಂದ್ನಾ ಹಂದ್ರಾಕೇ[೨]। ಅಣ್ಣಯ್ನಾ
ಉಪ್ಪರ್ಗಿ[೩] ಮನ್ಗೇ ಅಳತೀಯೇ॥ ೪೧

ತಮ್ಮಾದೀರೆಲ್ಲಾ ತುಪ್ಪನ್ನಾವುಂಡೇ
ಗುತ್ತೀಯ ನಾಡಾ ಹೊಲಕ್ಹೋಗೇ। ಕಡುವಾರೇ
ಹೊನ್ನೀಯ ಮರದಾ ಕವಿಕಂಬ[೪]। ಕಡದೇಗೇ
ಗೆಯ್ದಾರೇ ಸುಂಗಾರ್ದ[೫] ಹಂದರಾವ। ೪೨

ಚಪ್ರಾ[೬] ಸಾರೀಸೇ ನಿಸ್ತ್ರೇರ್ ಚಿತ್ತರ ಬರ್ದೇ
ಅಂಬಾರ್ದ ಗಿಳಿಯೇ ನೊಡದಾವೇ। ಗೋವಿಂದನ
ತಾಯೇ ಬಂತ ನಮ್ಮ ಮನಿಯಾಗೇ। ೪೩

ಅಂಗ್ಳಾ ಸಾರೀಸೇ ನಿಸ್ತ್ರೇರ ಚಿತ್ತರ ಬರದೇ
ಅಂಗಳ್ದ ಗಿಳಿಯೇ ನೊಡದಾವೇ। ಗೋವಿಂದ್ನ
ತಂದೇ ಬಂದ ನಮ್ಮ ಮನಿಯಾಗೇ॥ ೪೪

ಇಂದೇ ನಮ್ಮಂಗಳ ಸಿರಿಗಂದದ ಪರಮಾಳಾ[೭]
ಬಂದರೆಯಿಲ್ಲೇ ಸಿರಿಹರೆ। ನಮ್ಮಂಗಳಕೆ
ಗಂದದ ಮಡುವಾ ತುಳಕೂತ[೮]॥ ೪೫

---

೯. ನೀರು ೧೦. ತೊಳೆದು ೧. ಚಂದನದ ಹಲಿಗೆ ೨. ಚಪ್ಪರಕ್ಕೆ ೩. ಮಾಳಿಗೆ ೪. ಹರಿದಿನದ ಚಪ್ಪರಕ್ಕೆ ಬೇಕಾಗುವ ಕವೆಯುಳ್ಳ ಕಂಬ ೫. ಚೆಂದದ ೬. ಚಪ್ಪರ ೭. ಪರಿಮಳ ೮. ತುಳುಕಾಡುತ್ತ

ಬಾಳೂರಿಗ್ವೊಲಿಯಾ[೧] ಬ್ಯೆಗಾದಲ್ ಬರ್ದಾರೇ[೨]
ಬಾಳೆಲಿ ಸಯ್ತಾಗೇ[೩] ಬರಲಂದೇ। ಮಾವ್ರೋಜೆ
ಸ್ವೊಮೀ ಗೋವಿಂದ್ನಾ ಹರಿದಿನ್ಕೇ। ೪೬

ಮಂಗ್ಳೂರಿಗ್ವೊಲಿಯಾ ಚೆಂದಾದಲ್ ಬರದಾನೇ
ಕಾಯೂ ಹಣ್ಣೆಲ್ಲಾ ಬರಲಂದೇ। ಮಾವ್ರೋಜೆ
ಸ್ವಾಮಿ ಗೋವಿಂದ್ನಾ ಹರಿದಿನ್ಕೇ। ೪೭

ದೇಸ ದೇಸ ತಿರ್ಗೀ ದಾಸರ ಬತ್ತರಂದೇ
ಹಾಸಗಿ[೪] ಹಾಸ್ಯರೇ ಜಿಗಲೀಗೆ। ಮೇಲೂಗಿರಿಯಾ
ದಾಸರ ಬಂದಾರೇ ತುಳಚೀಗೇ॥ ೪೮

ಸಾಲೀ ಜೋತಾರಿಕ್ಕೇ ಪಟ್ಟೀಯಾ ಹೊದ್ದಾನೇ
ದೊಡ್ಡ ಬಾಲೆಲಿಯಾ ಬಿಡಸ್ವಾಸೇ। ಮಾವ್ರೋಜೆ
ಹರಿಗೋಳ ಪಾದಾ ತೊಳದಾನೇ। ೪೯

ಉದ್ದಾವಾ ತಕ್ಕಂಡೇ ತುಳಸೀ ಮಾಲಿಯಿಕ್ಕೇ
ದೊಡ್ಡಾ ಬಾಳೆಲಿಯಾ ಬಿಡಸಾಸೇ। ಮಾವ್ರೋಜೆ
ಹರಿಗೋಳ ಪಾದಾ ತೊಳದಾನೆ। ೫೦

ಪಾದಾವ ತೊಳದಾನೇ ಪಾವ್ರೂಡದಲ್ಲುದ್ದೀದಾ
ಹರಗೋಳ ತಂದಾ ತುಳಚೀಗೆ। ೫೧

ಹರಳೂಗಲ್[೧] ತುಳಚೀಗೆ ಹದಿನಾರು ಬಾಗೀಲ
ಹರಳೂ ಗಲ್ಲುಂಟ ನಿರಳುಂಟ[೨]। ಗೋವಿಂದನಾ
ಸ್ಯೆವೀಕರುಂಟ[೩] ಬುಡದಲ್ಲೇ। ೫೨

ಗಟ್ವೊಗಲ್[೪] ತುಳಚೀಗೆ ಇಪ್ಪತ್ತೂ ಬಾಗಿಲಾ
ಗಟ್ವೊ ಗಲ್ಲುಂಟ ನಿರಳುಂಟ। ತುಳಚಮ್ಮನಾ
ಸ್ಯೆವೀಕರುಂಟ ಬಲನಲ್ಲೇ। ೫೩

ನಾಕೂ ಮೋಲೀಗೇ[೫] ನಾಕೂ ದೇಪದ ಕಂಬೇ[೬]
ನಾಲ್ವರು ಗೆಯ್ದು ತುಳಚೀಯೇ।ಯ। ಕಟ್ಟೀಮ್ಯೆನೇ
ಸ್ವೊಮೀ ಗೋವಿಂದ್ನ ಹರಿದಿನ॥ ೫೪

---

೧. ಬಹಳ ಊರಿಗೆ ಓಲೆಯನ್ನು ೨. ಬೇಗನೆ ಬರೆದು ೩. ಸಹಿತವಾಗಿ ೪. ಹಾಸಿಗೆ
೧. ಹೊಳೆಯುವ ಕಲ್ಲು ೨. ನೆರಳುಂಟು ೩. ಭಕ್ತರಿದ್ದಾರೆ ೪. ಗಟ್ಟಿಕಲ್ಲಿನ ೫. ನಾಲ್ಕು ಮೂಲೆಗೆ

ಆಕಾಸ್ದ ಮ್ಯೆನೇ ಇರಳೀತೇ[೭] ಹಿಂಗಾರಾ
ಲೋಕಕ್ ಪರಮಾಳಾ ಇಸುವಾದೇ। ಹಿಂಗಾರ್ದ[೮]
ಕೊನಿಯಾ ತಂದ್ಯಾರೇ ತುಳಚೀಗೇ॥ ೫೫

ಆಕಾಸ್ದ ಮ್ಯೆನೇ ಬೀಸಾಡೇ್ ಬಿಳುವಾದೇ[೧೦]
ದೇಸಕೆ ಪರಮಾಳಾ ಇಸುವಾದೇ[೧೧]। ಕ್ಯೆಂದಗಿ
ಕೊನಿಯಾ ಉಡ್ಯಾರೇ[೧೨] ತುಳಚೀಗೆ॥ ೫೬

ಸಾಲೀಯಾ ಸೇರೀಯಾ[೧೩] ನಿರಿಹುಯ್ದೇ[೧೪] ಉಂಡುವಂತ
ದುಂಡೂ ಮಲ್ಲುಗಿಯಾ ಮುಡುವಂತಾ। ಅಂಕೋಲಿಯಾ
ಸಾಲೀ ತಂದ್ಯಾರೇ ತುಳಚೀಗೆ। ೫೭

ಹಾಲಲ್ಲಬಸೇಕವಾಗಲೇ[೧] ತುಳಚಮ್ಗೇ
ಪಟ್ಟೀ ಹಚ್ಚಡದ ಮರಿಯಲ್ಲೇ[೨]। ರಂಗಾಪೋಜ್ಯಾ
ಆಗಲ್ ತುಳಚಮ್ನ ಬುಡದಲ್ಲೇ। ೫೮

ತುಪ್ಪಾದಲ್ಲಬಸೇಕವಾಗಲೇ ತುಳಚಮ್ಮಗೇ
ಸಾಲೀ ಹಚ್ಚಡದಾ ಮರಿಯಲ್ಲೇ। ರಂಗಾಪೋಜ್ಯ
ಆಗಲ್ ತುಳಚಮ್ನ ಪುರದಲ್ಲೇ। ೫೯

ಗುತ್ತೀಲಿಂದ್ ಬರುವೇಳಿ ಇಪ್ಪತ್ತು ಜೋಡಣತೂಗಿ[೩]
ತುಪ್ಪ ಸಾಲದಕೆ ನೆಣೆಸಾಲ। ಗೋವಿಂದನಾ
ಸತ್ತೀದಲ್ಲುರಿಯೇ[೪] ಜಗಜೋತಿ॥ ೬೦

ದಂಡೀಯಾ[೫] ಕಟ್ಟೂವಾ ಬಂಡಾರಿ ಬರುವೇಳಿ
ದುಂಡೂ ಮಲ್ಲುಗಿಯಾ ಹೊಸದಂಡಿ। ತಕ್ಕಂಡೇ
ದಂಡೀ ಕಟ್ಯಾರೇ ಒಡಿಯಾಗೇ॥ ೬೧

ಪೋಜೀಯಾ[೬] ಮಾಡೂಕೇ ಪೋಜೇರಿ[೭] ಬರುವೇಳಿ
ಜೂಂಜಿ ಮಲ್ಲುಗಿಯಾ ಹೊಸದಂಡಿ। ತಕ್ಕಂಡೇ
ಪೋಜಿ ಕಟ್ಟಾರೇ ಒಡಿಯಾಗೇ। ೬೨

ಹರವಾಣಾದಲ್ಲೇ ಹರಳು ಕೂಕುಮವಾ
ಒಡಿಯಾ ಗೋವಿಂದ ಕಳಗೀಯಾ ೬೩

---

೬. ದೀಪದ ಕಂಬು ೭. ಅರಳಿತು ೮. ಸಿಂಗಾರದ ೯. ತೊನೆದಾಡಿ ೧೦. ಬೆಳೆಯುವುದು ೧೧. ಎಸೆಯುವದು ೧೨. ಒಡ್ಡಿದ್ದಾರೆ ೧೩. ಸೀರೆಯನ್ನು ೧೪. ನೆರಿಗೆಯನ್ನು ಮಾಡಿ ೧. ಅಭಿಷೇಕವಾಗಲಿ ೨. ಮರೆಯಲ್ಲಿ ೩. ಜೊಡಿಹಣತಿಗೆ ೪. ಸತ್ಯದಿಂದ ಉರಿ ೫. ಹೂದಂಡೆ ೬. ಪೂಜೆಯನ್ನು ೭. ಪೂಜಾರಿಯನ್ನು

ಒಡಿಯಾ ಗೋವಿಂದ ಏನೇಳಿ ಕಳಗೀಯಾ
ಚೆಂದಕೆ ಪರಸೇ ಎಡಲಂದೇ॥ ೬೪

ಗಂದಾಟ್ಗಾ ತುಂಬೀದಾ ಗಂದಾ ಸಿರಿಗಂದಾವಾ
ಸ್ವೊಮಿ ಗೋವಿಂದ ಕಳಗೀಯಾ।
ಸ್ವೊಮಿ ಗೋವಿಂದಾ ಏನಂದೇ ಕಳಗೀಯಾ
ಆಯಕೆ ಪರಸೇ ಎಡಲಂದೇ ೬೫

ಆಕಾಸ್ದ ಮ್ಯೆನಿಂದೇ ದೋಪದಾ ಹೊಗಬಂತೇ
ಆಕಿ ತುಳಚಮ್ಗೇ ಸಿವಪೋಜ್ಯ। ಆಗೂವಾಗೇ
ಚಿನ್ನದಾ ಸೆರಗಂಟೇ[೧] ನೊಡದಾವೇ[೨] ೬೬

ಅಂಬಾರ್ದ ಮ್ಯೆನಿಂದೇ ಗಂದಾದಾ ಹೊಗಬಂತೇ
ರಂಬೆ ತುಳಚಮ್ಗೇ ಸಿವಪೋಜ್ಯ। ಗುಂಬಾಗೆ
ಬಿಳ್ಳೀ ಸೆರೆಗೆಂಟೇ ನೊಡದಾವೇ। ೬೭

ಉಂದುಂದ[೩] ಮುತ್ತ ನಿಂಬೀತ್ವೊರದ[೪] ಮುತ್ತ
ಕಂಡರ ತುಳಚಮ್ನ ಕೊರಳಲ್ಲೇ। ಎದ್ದಾಮುತ್ತ
ಬಂದೇ ನೆಂತಪ್ರೀಗ್ಹುಳುವಾದ[೫]॥ ೬೮

ಆ ಕಯ್ಲೇ ಆರೂತೇ ಈ ಕಯ್ಲೇ ಮೂರುತೇ
ದಾಸಯ್ಯ ಕದವಾ ತಿಗಿಬ್ಯೆಗೆ। ತುಳಚಮ್ಮಗೇ
ದೋಪಾದಾರತಿಯಾ ಬಿಳಗೂವೇ॥ ೬೯

ಅಂಗಯ್ಲೇ ಮೂರುತೇ ಮುಂಗಯ್ಲೇ ಆರೂತೇ
ರಂಗಯ್ಯಾ ಕದವಾ ತಿಗಿ ಬ್ಯೆಗೆ। ತುಳಚಮ್ಮಗೇ
ಗಂದದಾರತಿಯಾ ಬಿಳಗೂವೇ॥ ೭೦

೧೦

ಕುಂಬಳಕಾಯ್ ಕಡುವಾಗೇ ಸಂಬಾರಾ ಅರುವಾಗೇ[೧]
ಮಯ್ಲೊಗಿ ಬಿಟ್ಟೇ ಮಡಿಯುಟ್ಟೇ। ಮಾಡುವಾರೇ
ಸ್ವೊಮೀ ಗೋವಿಂದ್ನಾ ಹರಿದಿನ। ೭೧

ಬಣ್ಣದ ಬಯ್ಣೀಕಾಯೇ ಸೆಣ್ಣಕ್ಕಿ ಮ್ಯೆಗರ[೨]
ಎಣ್ಣೀಯಲ್ಲ ತುಪ್ಪಾ ಎರದುಪ್ಪಾ। ಮೇಲೂಗಿರಿಯಾ
ದಾಸಾರ್ಧೇಳಕಿಯ[೩] ಹರಿದಿನ। ೭೨

---

೧. ಸ್ವರದಗಂಟೆ ೨. ನುಡಿದವು ೩. ಒಂದೊಂದು ೪. ಲಿಂಬೆಯಷ್ಟು ದೊಡ್ಡ ೫. ಹೊಳೆಯುವದು
೧. ಸಂಬಾರವನ್ನು ಅರೆಯುವಾಗ ೨. ಮೇಲೋಗರ ೩. ಹೇಳಿಕೆಯ

ಕಲ್ಲೀಯಕಾಳುಡದೇ ಒಳ್ಳ್[೪] ಬೈಳಿಮಾಡೇ
ಬಲನ್ನುಟ್ಟೀದವ್ರಾ ಬಲಗುಂಡೇ। ಮಾಡೂವಾರೇ
ಯೇಗೇ ಗೋವಿಂದ್ನಾ ಹರಿದಿನ। ೭೩

ಹಣ್ಣಡಕೀಕೊನಿಯಾ ಹನ್ನೆಯ್ದು ತಕ್ಕಂಡೇ
ಹನ್ನೆಯ್ದು ಸುತ್ತ ಬಲಗುಂಡೇ। ಮಾಡೂವಾರೇ
ಸ್ವೊಮಿ ಗೋವಿಂದ್ನಾ ಹರಿದಿನ॥ ೭೪

ಇಂಗೂ ಸಂಬರ್ಕೇ ತಾಮೇಲ ಬಿಳ್ಳುಪ್ಪ್[೫]
ನಾಗರ ಬಯ್ಲಲ್ಲೇ ಬಿಳುವಾರ। ಬೆಳ್ದಾ। ಉಪ್ಪಾನೆ
ದಾಸರ ಪಂತ್ಯಲ್ಲೇ ಎಡಮಾಡಿ। ೭೫

ಹತ್ತೂಕಾಡಕ್ಕೀಯೇ[೧] ಹತ್ತೂಸಾವರಕಾಯ
ಅಪ್ಪಯ್ಯಾ ಮಾಡೀದ ಹರಿದಿನ।ನ್ದು। ಓಟಾವುಂಡೇ[೨]
ತುಪ್ಪಾದಲ್ ಬಾಯಾ ತೊಳದಾರ। ೭೬

ಆರೂ ಕಾಡಕ್ಕೀಯೇ ಆರೂ ಸಾವರಕಾಯ
ಮಾವಯ್ಯಾ ಮಾಡೀದ ಹರಿದಿನ।ನ್ದು। ಓಟಾವುಂಡೇ
ಹಾಲಲ್ಲೇ ಬಾಯ ತೊಳದಾರೇ॥ ೭೭

೧೧

ಸ್ವೊಮಿ ಸಿರಿಹರಿಯಾ ವಾಲಗವಾ ನಾಕಂಡೆ
ಹಾಲೂರೂಕ್ಷದಾ[೩] ಮರನಲ್ಲೇ। ಮದ್ದಾನೀಯಾ
ಹೇರೂವಾದ[೪] ಕಂಡೆ ಕನಸೀಲೆ॥ ೭೮

---

೪. ಒಳ್ಳೆಯ ೫. ಬಿಳಿಯುಪ್ಪು ೧. ಒಂದು ಕಾಡಿಗೆ ಇಪ್ಪತ್ತು ಖಂಡುಗ ೨. ಊಟವುಂಡು ೩. ವೃಕ್ಷದ
೪. ಹತ್ತುವುದನ್ನು

ಉ. ಪೌರಾಣಿಕ ಬಿಡಿ ಹಾಡುಗಳು

ಪರಿವಿಡಿ	ನಿರೂಪಕರ ಹೆಸರು	ಊರು
೦೧. ಹರಿಶ್ಚಂದ್ರ	ದೇವಮ್ಮ ರಾಮಾ ನಾಯಕ	ಭಾವಿಕೇರಿ
೦೨. ರಾಮಾಯಣದ	ದೇವಮ್ಮ ರಾಮಾ ನಾಯಕ	ಭಾವಿಕೇರಿ
ಬಿಡಿ ಹಾಡುಗಳು	ದೇವಮ್ಮ ಹೊನ್ನಪ್ಪ ನಾಯಕ	ಭಾವಿಕೇರಿ
೦೩. ಶ್ರೀಕೃಷ್ಣ	ದೇವಮ್ಮ ರಾಮಾ ನಾಯಕ	ಭಾವಿಕೇರಿ
೦೪. ಮಹಾಭಾರತ	ದೇವಮ್ಮ ರಾಮಾ ನಾಯಕ	ಭಾವಿಕೇರಿ
	ಚಂದ್ರಿ ಹಮ್ಮಣ್ಣ ನಾಯಕ	ವಂದಿಗೆ

ಸಂಗ್ರಹಿಸಿದ ಕಾಲ : ೧೯೭೦

೦೧. ಹರಿಶ್ಚಂದ್ರ

ಕನಕಾಲೋ[೧] ರಾಜೀದಲ್ಲೇ ಕಲಬಂದೇ[೨] ಕಾಲೂರೀತೇ
ಹರಿಚಿಂದ್ರನ ರಾಜೀ ಪರವಾಸೀ[೩]। ಆಯೀತಂದೇ
ಮಂತ್ರೇ ಆಲೋಚನಿಯಾ ತಡದಾನೇ। ॥೧॥

ಕಾಸೀ ರಾಜೀದಿಂದೇ ಕಾಲಿಗ್‌ಮಿಟ್ಟಬಂದು
ಮುಟ್ಟಾಬ್ಯೆಡಂದಾ ಹರಿಚಿಂದ್ರಾ[೪]। ಮಗ್ನಾಕೋಡೇ
ಕಾದಾ ಹುಡಿಯಲ್ಲು ನಿಡಿಯಂದಾ[೫] ॥೨॥

ಹೂಂವನ ರಾಜೀದಿಂದೇ ಮುತ್ತನ ಸತ್ತಗಿ ಬಂದು
ಮುಟ್ಟಾಬ್ಯೆಡಂದಾ ಹರಿಚಿಂದ್ರಾ। ಮಗ್ನಾಕೋಡೇ
ಬಿಸ್ಲಲ್ಲೇ ದಾರೀ ನಿಡಿಯಂದಾ। ॥೩॥

*   *   *   *

ಮಗ್ನೇ ರೋವೀದಾಸಾ ದರ್ಬೀ ಹುಲ್ಕುಯ್ವಾಗೇ
ಹುತ್ತೀನಲ್ಲೆದ್ದಾದುರುಳಾನೇ। ಇಸ್ವಾಮಿತ್ರ
ಸರ್ಪಾ ತಾನಾಗೇ ಹೊಡದಾನೇ। ರೋವೀದಾಸಾ
ಕಿಚ್ಚೀನಾ ಕೀಳ್ಯಂಗೇ ಮಿಡ್ಕೀದಾ[೬]। ॥೪॥

*   *   *   *

ಹಣಿಯಲ್ಲೇ ಬರದಾ ಬರವೇ ಹರದಾರೂ ತೈರಾವೇ[೭]
ಹರಿಚಿಂದ್ರ ರಾಯಾಸೊಡಗಾಡಾ। ಕಾದೀಕಂಡೇ
ಹೊಲಿಯಾಗಾಳಾಗೇ ಒಳದಾನೇ। ಹರಿಚಿಂದ್ರ
ಸತ್ತೀದಾ[೮] ದಾರೀ ಬೆಡ್ಲೇಲಾ[೯]। ॥೫॥

---

೧. ಬಂಗಾರದ ೨. ಕಲಿಬಂದು ೩. ಬೇರೆಯವರ ವಶ ೪. ಹರಿಶ್ಚಂದ್ರ ೫. ನಡೆಯೆಂದನು
೬. ಬೆಂಕಿಯ ಕೀಳಿಯ ಹಾಗೆ ಮಿಡುಕಾಡಿದ ೭. ತೀರವು ೮. ಸತ್ಯದ ೯. ಬಿಡಲಿಲ್ಲ

೦೨. ರಾಮಾಯಣದ ಬಿಡಿ ಹಾಡುಗಳು

ಸೀತೊಬ್ಬಳ್ಹುಟ್ಟಳ ರಾವಳಗೆ[೧] ಹೊಲ್ಲಾಗೆ
ಆತುಮದಲ್ಲೇ ಕಳವಳ। ರಾವಳ
ಸೀತ್ಹುಟ್ಟಳೋ ಲಂಕೀ ಗಯ್ಯೊಡ್ಕೆ[೨] ॥೧॥

ಸೀತೇ ಹುಟ್ಟೀಯಾಳ ಸಿರಿರಾಮಗ್ ಪಟ್ಟಾಗೇ
ಆತೂಮದಲ್ಲೇ ಅವಗುಣಾ। ಏನಂದೇ
ಸೀತ್ಹುಟ್ಟೇ ಲಂಕೀ ಗಯ್ಡ್ಬಳ। ॥೨॥

ಮಾತನಾಡುತ ಬಂದಾ ಮನಿಯಾ ಕೇಳುತ ಬಂದಾ
ಸೀತೀಗೇ ಉಂಗಲ್ವ ಎಡಬಂದಾ। ರಾವಳ
ಮಾತನಾಡ ಸೀತೀ ಗೆಲಬಂದಾ। ॥೩॥

ಪಟ್ಟೀಯಾ ಸೇರೀಯೇ ಸೊಂಟಕೇ ಉಡ್ಯಾಣ
ಜಾನಕಿನ್ನೆರಾ ಮಗಳವ್ವಾ। ॥೪॥

ಜನಕರಾಯನ ಮಗಳೆ ದಸರತ್ನಾ ಸೊಸಿಯೇ
ರಾಮದೇವರದರಾ ಅರಸಾರ। ಬಿನ್ನೀಗ್ ಬಂದಾ
ಲಕ್ಷಮಣನದರಾ ಮಯ್ದೂನಾ। ॥೫॥

ಅತ್ತೆ ಕವ್ಸಲೆ ಹತ್ತಿಂಟ ಹಡಿಯಾಲಿಲ್ಲಾ
ಒಬ್ಬನೇ ಮಗನೇ ಸಿರಿರಾಮಾ। ಪಾದಾನಂಬೇ
ಬಿದ್ದೀರ ಅಯೋದ್ಯಾ ಪುರದಲ್ಲೇ। ॥೬॥

ಮಜ್ಜಾನಾ ಹುತ್ತೀಗೇ ಬಿದ್ದವ ಮಾಯೀನ್ಹಣ್ಣ
ಇದ್ದೋಗ ಸೀತೇ ಸಿರ್ಗುಡ್ಡ[೩]। ಸಿರಿರಾಮರ
ಚೆಂಡೂ ಬತ್ತವ ಮುಡ್ಳುಡ್ಡ[೪]। ॥೭॥

ಕಾಮ ಕಸ್ತುರಿ ಬೇಜ[೫] ರಾಮರ ನಿಡುವಾಗ
ಜಾನಕೆ ನೀರಾ ಇರುವಾಳ।
ಜಾನಕೆ ನೀರಾ ಏನಂದೇ॥ ಇರುವಾಳ
ರಾಮರ ನೆಟ್‌ಪಚ್ಚೇ ಕದ್ರಾಗ್ಲೆ। ॥೮॥

---

೧. ರಾವಣನಿಗೆ ೨. ಹಾಳು ಮಾಡಲಿಕ್ಕೆ ೩. ಸೆರಗೊಡ್ಡು ೪. ಮಡಿಲೊಡ್ಡು ೫. ಬೀಜ

ಬರತ ಸತ್ರುಗ್ನರಿಗೆ ಪಟ್ಟವಾಗಲೆ ಬೇಕ
ರಾಮಲಕ್ಷ್ಮಣಗೇ ವನವಾಸ। ಆಗಾಲಂದೇ
ಕಯ್ಕಮ್ಮಾ ವರವಾ ಪಡದಾಳೆ। ॥೯॥

ರಾಮಡವೀಗೋಗೂವಾಗೇ ಲಕ್ಷಣಗೇಳಲಿಲ್ಲಾ
ಸೀತೋಗೇ ಸಿರಗ ತಡದಾಳೇ।
ಸೀತೋಗೇ ಸಿರಗ ಏನಂದೇ ತಡದಾಳೇ।
ಈ ಕಟ್ಟ ಇಲ್ಲೇ ದುರಕೀತ
ಕಟ್ಟಾದೊರಕಾಲಿಲ್ಲಾ ಅತ್ತೆ ಮಾವುಂಟ
ಸಂಜೀಗೇ ಬತ್ತಿ ಮನ್ಗೋಗ। ॥೧೦॥

ನಿಮ್ಗೇ ಪಟ್ಟಾವಾಯೀತಂದೇ ಉಂದೂ ಮುಂಡೇರದೆ
ಪಟ್ಟಲ್ಲಾ ಸೊಮೀ ಅಡವೀಯಾ। ಕೊಟ್ಟಾಳ
ಕಯ್ಕೀ ಕಯ್ಲೆಳೀ[೭] ಕಳಿನಾರೆ। ॥೧೧॥

*   *   *   *

ಸಿರಿರಾಮರ ಸೀತೀಯಾ ತಾನಾಳ ಬೇಕಂದೇ
ಕಳ್ಳಾ ರಾವಳನೇ ಕಲಿಯಾದಾ। ಲಂಕೀಗೇ
ಕೇಡ ಬರುವದ್ನೇ ಅರಿಯಾನೇ। ॥೧೨॥

ಜನಕ ಸೀತೀಮೆನೇ ಮನಸ ಮಾಡೀಯಾನೇ
ತಪಕೆ ಕುಳತೀನೇ ಅಡವೀಲೇ। ರಾವಳ
ರಜತಾದ್ರಿಗಿರಿಯಾ ನೆಗದಾನೇ। ॥೧೩॥

ರಾಮನಾ ಮಡದೀಯೋ ರಾಜೀಕೇ ದೊಡ್ಡವಳೋ
ಅಡವೀಲೇ ಕಾಲಕಳುವಾಳೋ। ರಾಮನ ಮಡ್ದೇ
ಅಂತವ್ರೀಗ್ ಬಂದಾ ಕುರ್ತಾವೇ[೮]। ॥೧೪॥

ಮಾರೀಚನ್ನಿಂಡೂತೇ ಉಡುವಾಳ ಪಟ್ಟೀಯಾ
ಅಚ್ಚಾ ಮಾರೀಚಾ ಕೆರ್ಕಾನೇ[೯]। ಹಿಂಡೂತೇ
ನಿಚ್ಚ ಪಟ್ಟೀನೇ ಉಡುವಾಳ। ॥೧೫॥

ಸೀತೇ ಸಿರಿರಾಮರ ನೂತನಾಬಾಳೀವೆ
ಸೇತಾಳ ನೆಂಬಾ ಮಿಗಬಂದೀ। ಸೀತಮ್ಮನಾ
ನೋತನದ[೧೦] ಬಾಳ ಕಿಡಸೀತ। ॥೧೬॥

---

೬. ಕೈಕೆಯಿ ೭. ಕೈಯಲ್ಲಿ ವೇಳೆಯನ್ನು, ದಿನವನ್ನು ೮. ಕಷ್ಟ ೯. ಕಂಜೂಸಿ, ಜಿಪುಣ ೧೦. ನವೀನ

ಸೀತೇ ಸಿಕ್ವಳಲ್ಲಾ ರಾವಳ ಬಿಡುವನಲ್ಲಾ
ಆರಾಣೀದಲ್ಲೇ ಅಡಗಾಟ। ಸೀತೀಯಾ
ಸಿರಗಾ ಮುಟ್ವದ್ರು ಬಲುದೊಸಾ[೧೧]। ॥೧೭॥

ಜನಕ ಸೀತೀಮ್ಯೆನೇ ಮನಸ ಮಾಡೀಯಾನೇ
ಕಿತ್ಕೊತ್ತಾ ತನ್ನಾ ತಲಿಮ್ಯೆನೇ। ರಾವಳ
ಕಿಡುವಾ ಮಾರ್ಗವಾ ಅರಿಯಾನೇ। ॥೧೮॥

ಸೀತೀಸೆರೆ ಹೋಗೂದಾ ನೋಡೂಬಾ ನನ್ನಮ್ಮಾ
ಬಾಚೀದಾ ಮಂಡೇ ಬಗತಾಲೇ। ಮುತ್ನದಂಡೇ
ಸೀತೀ ರಾವಳಗೇ ಸೆರಿ ಹೋಗೇ। ॥೧೯॥

ಹೇರೀ ಹೂಂವನ ಮ್ಯೆನೇ ಹಿತ್ತಲದಂಡಾವಳೆ
ಜಾತಾಮುತ್ತದ್ರಾ ಕುರಳೀಗೆ। ರಾವಳ
ಸೀತೀಕೊಂಡೊಯ್ದಾ ಅಡವೀಲೆ। ॥೨೦॥

ಸೀತೀಯಾ ಉಯ್ವಾಗೇ ಶ್ರೀರಾಮಾ ಸೆಣ್ಣವ್ನೇ
ಆಗೇ ಹನುಮಂತಾ ಹಸುಗೂಸು। ಇದ್ದರೆ
ಸೀತೀಯಾ ಸಿರಗಾ ಬಿಡುತಿಲ್ಲಾ। ॥೨೧॥

ರಾಮಾಬೆಟ್ವಾ ಬಾಣಾ ರಾಜ್ಯಕೆ ಮುಟ್ಟೀತೇ
ರಾಮಾ ಸೀತ್ಯೋರಾ ವನವಾಸಾ। ವಿದ್ದಲ್ಲಿ
ಹುಡುಕೂತ ಹ್ವೊದಾ ಹನುಮಂತಾ। ॥೨೨॥

ಅಚ್ಚೀ ಕಂಬನ ಗರಡಾ ಇಚ್ಚೀ ಕಂಬೀಗಾಗ
ಪಾತಾಳ ಗರಡಾ ಹನಮಂತ್ನಾ। ಕುರಳಲ್ಲೇ
ಸೀತಿ ಉಂಗಲವೇ ಹೊಳದಾದೇ। ॥೨೩॥

ರಾವಳನಾ ರತದಂಚೇ ಅಡ್ಡೇ ದಾಟುವರೆರೇ
ಅಂಜನಾ ದೇವೀಮಗ ಹನುಮಾ। ಬೆಟ್ವಾಬಾಣಾ
ಎಂಕೀ[೧೩] ಸುತ್ತಿಕ್ಕೇ[೧೪] ಸುಡುವಾದ ॥೨೪॥

ಸೀತಾದೇವೀಯಾ ತರುವಾಕೇ ಹನುಮಂತಾ
ಕಟ್ಟಿದನೇ ಸೇತಾ[೧೫] ಜಿಲುದೀಗೇ[೧೬]। ಹನುಮಂತಾ
ಸೇತಾ ಕಟ್‌ಸೀತೀ ತರುವಾನೇ। ॥೨೫॥

*   *   *   *

೧೧. ಬಹಳ ದೋಷ ೧೨. ಕೆಟ್ಟು ಹೋಗುವ ೧೩. ಲಂಕೆ ೧೪. ಸುತು ಹಾಕಿ ೧೫. ಸೇತುವೆ ೧೬. ಸಮುದ್ರಕ್ಕೆ

ಸೀತಟ್ಟಾ ಅಡಗೀಯಾ ಸಿರಿರಾಮರೊಣ್ಣಾರೇ
ಆತುಮದಲ್ಲೇ ಎರಡಿಲ್ಲ। ಸಿರಿರಾಮರ
ಜಾನಕೀಮೈನೇ ಹಳಿಯಿಲ್ಲಾ[೧೭]। ಯಾವಾಗೇ
ರಾವಣಸನ್ನೇಸೇ[೧೮] ಒಯ್ದಾಗೇ। ॥೨೬॥

ಸೀತಟ್ಟಾ ಅಡಗೀಯಾ ಸಿರಿರಮರೊಣ್ಣಾರೇ
ಆತೂಮದಲ್ಲೇ ಎರಡಾಗೇ। ಲಕ್ಷುಮಣ
ಸೀತೀ ಕೊಂಡೊಯ್ದಾ ಅಡವೀಗೇ ॥೨೭॥

ಲಕ್ಷುಮಣ ದೇವರ ಸೀತೀ ಕರದೀಕಂಡೇ
ಆರಾಣಿ ಅಡವೀಗೆ ನೆಡದಾರ। ಸೀತಾದೇವೆ
ನಗುತವನವಾಸ ಕಳೆದಾಳೆ। ಸೀತಾದೇವೆ
ಲವಕುಸರನಲ್ಲೇ ಪಡದಾಳೆ। ಸೀತಾದೇವೆ
ತೊಡಿಯಾ ತುಳುವೆಂದ್ರೂ ಜಿಲದಿಲ್ಲಾ ಹನುಮಂತಾ
ಸೀತಾಗಟ್ಟಿದನೆ ಸಮದ್ರವಾ ॥೨೮॥

ಅಯ್ವದ್ದೀ ಪುರದಲ್ಲೇ ಅಲಗನ ಮನಿಲುಂಟೇ
ನಿಂಬೀ ಹಣ್ಣಂತ ಪುರಿಸಾರು ಒಡನಾಡೇ
ಚಲಗಾರ ಕಂದಯ್ನಾ ಹಡದಾಳೆ। ॥೨೯॥

ಜನಕರಾಯನ ಮಗ್ಳ ವನಕೇ ತುಟ್ಳವಾಕಟ್ಟೇ
ಕುಸಲವರನಿಟ್ಟೇ ತೂಗಳ। ಸೀತಮ್ಮಾ
ನಗುತ ವನವಾಸ ಕಳದಾಳೆ। ॥೩೦॥

ಅಂದ ಚೆಂದದ ಬಳ್ಳೇ ಬಿಸಲೀಗ್ ಬಾಡದಬಳ್ಳೆ
ಕುಸ್ಲವ್ರು ನೆಟ್ಟಾ ಎಲಿಬಳ್ಳೇ। ನಾಗಾಬಳ್ಳೆ
ಬಿಸನೀರಮುಂದೇ ಸಲಗೂವೆ। ॥೩೧॥

---

೧೭. ದೋಷವಿಲ್ಲ ೧೮. ಸನ್ಯಾಸಿ

೦೩. ಶ್ರೀಕೃಷ್ಣ

ಕಡಲೇಳಾ ಸಮ್‌ದ್ರಾದಲ್ಲೇ ತಡವಾ ಕಟ್ಟಿಸಿಕಂಡೆ
ಗೋಕುಲ್ದಲ್ ಕೃಷ್ಣ ಬೆಳ್ದಾನೆ। ಸುದ್ದೀ ಕೇಳೇ
ಗೋಪಮ್ಮಾ ಮಾಲೀ ತಡದಾಳೆ। ॥೧॥

ಆಕಾಸದ ಮ್ಯೆನಿಂದೇ ಆಕಾಳ ಹಯ್ನಾದಾವೇ
ಗೋಪೂ ಚಂದಣದಾ ಕಡಗೀಲ। ತಕ್ಕಂಡೇ
ಗೋಪೇರ ಮಜ್ಜುಗಿಯಾ ಗಯ್ಡರ[1]। ॥೨॥

ಗೊಕನದಾ[2] ಊರಲ್ಲೇ ಗೂಕಂಬೂದೇನಮ್ಮಾ
ಗೋಪಾಲಾಕೃಷ್ಣ ಕೊಳಲೂಬೇ। ಬರುವಾಗೇ
ಗೋಪಮ್ಮಾ ಕದವಾ ತೆಗದಾಳೆ।
ಗೋಪಮ್ಮಾ ಕದವಾ ಏನಂದೇ ತೆಗದಾಳೆ।
ಗೋಪೀಯರೆದ್ದಲ್ಲೇ ತಡವಾಗ್ಲೆ। ॥೩॥

ಕ್ವೊಟೀ ಗುಡಿಯಾ ಮ್ಯೆನೇ ನಿಂತೇ ನೋಡುವನೆರೇ
ಲೂಟೀಗಾರಣ್ಣ ನಿನಮಗ। ಶ್ರೀಕೃಷ್ಣ
ಕೊಳಲೂಬೇ ಕ್ವೊಟೀ ಗೆಲಬಂದಾ। ॥೪॥

ಆದಾರಿಲ್ಲದ ಕೋಳೇ ಮದ್ದರಾತ್ರೀಗ್[3] ಸರಗಯ್ದು
ಬಡವರ ನಿದ್ರೀಯ ಕಿಡಸೀದು[4]। ಕೃಷ್ಣಸ್ವೊಮಿ
ತಾ ಕೋಳೀನಾಗೇ ಸರಗೆಯ್ದಾ। ॥೫॥

ಹರದಾಡು ಹಾವಾನೇ ಹಿಡದೇ ಬುರಡೀತುಂಬೇ
ಮನಿಮನಿಯಪ್ಪಂತೇ ತಿರಗೀದ। ಕೃಷ್ಣನ
ಗರಡಿದ್ದೀಯಿನ್ನೆರೀಗ್[5] ತಿಳಿಯಾವೇ। ॥೬॥

---

೧. ಕರಡಿದ್ದಾರೆ ೨. ಗೋಕರ್ಣದ ೩. ಮಧ್ಯರಾತ್ರಿಗೆ ೪. ಕೆಡಿಸಿದವು ೫. ಗಾರುಡಿವಿದ್ಯೆ ಇನ್ನಾರಿಗೂ

ಈ. ಮಹಾಭಾರತ

ನೀರಿಲ್ದಾ ಕೆರಿಯಲ್ಲೇ ಬೇರಿಲ್ದಾ ಸಿಸಹುಟ್ಟೇ
ದಾರಿಲ್ದೇ ಹೂಂವಾ ಸೊರ್ದಾಳೇ[೧] ಕುಂತೀದೇವೆ
ಗಂಡಿಲ್ದೇ ಮಗ್ನಾ ಹಡ್ದಾಳೇ। ||೧||

ಕುಂತೀಯಾ ಮಕ್ಳೀಗೇ ಬಂತಮ್ಮಾ ಬಡ್ತಾನಾ
ನಮ್ದೇನು ತಾಡೇ[೨] ಅವ್ರ್ಮುಂದೆ। ಕುಂತೀಯಾ
ಮಗ್ದೀರಿಗ್ ಬಂತೇ ಬಡ್ತಾನಾ। ||೨||

ಪಂಚಾ ಪಾಂಡವ್ರೀಗ್ ಬಂತಮ್ಮಾ ಬಡ್ತನಾ
ನೆಂತಲ್[೩] ಮಜ್ಜನವಾ ಕಳ್ದಾರ। ತಾಯಮ್ಮಾ
ಅಂತವ್ರೀಗ್ ಬಂದಾ ಬಡ್ತನ್ವೇ। ||೩||

* * * *

ಬಿಳ್ಳೀ ಬೆತ್ತದ ಕೋಲ ಬುಜಕೆ ಚಿನ್ನದಕಟ್ಟ
ಬಿನ್ನೀಗು ಬುಜಕೂ ಉರಬಾಳ[೪]। ಪಾಂಡವ್ರಾ
ಬೀಮಾ ಅಂಬ್‌ಹಿಸ್ರ ಗಯ್ದಲೆ। ||೪||

* * * *

ಉಂದೂ ಪಂತೀಲೇ ಎಯ್ಡಂಗಾ ಮಾಡ್ವಳ
ಬೆಂದಾ ಕಯ್ಲುವ್ರಾ[೫] ಕಿರ್ದಂಗೇ[೬] ಕೃಷ್ಣನ ಮಡ್ದೇ
ಪಂತೀಯಲ್ ಮಾಡ್ವಳ ಎಯ್ಡಂಗಾ। ||೫||

ಆರೇಳು ಉರಸೀನಾ ಬಾಲೇ ಜೋಗೀನಾದಾ[೭]
ಹೋಗೇ ಸಮ್‌ದ್ರವ ಗಳಕೀದಾ। ಅರ್ಜೂನಾ
ಈಎಸಾ[೮] ಇನ್ನೆಕೋ ಬದ್ಲೆಸಾ। ||೬||

ಹರದಾಡೂ ಸರ್ಪನ ಹಿಡದೇ ಕಾಲಲ್‌ಮಿಟ್ಟೇ
ಹೆಡಿಯಾ ಮೆನ್ ಮಡಿಯಾ ಒಗದಾನೇ। ಅರ್ಜೂನ
ಈ ಎಸಾವ್ಯೆಕೋ ಬದ್ಲೆಸಾ[೯]। ||೭||

---

೧. ಸುರಿದಳು ೨. ನಿಲ್ಲುವದು ೩. ನಿಂತಲ್ಲಿ ೪. ನೋವು ಬಹಳ ೫. ಕೌರವರ ೬. ಕಿರಿತಂಗಿ ೭. ಜೋಗಿಯಾದ ೮. ಈ ವೇಷ ೯. ಬದಲುವೇಷ

ಬೆಟ್ಟಾಮಂಡೀ[೧೦] ಜೋಗೇ ಬಿಕ್ಷಿಕೋಗೂವಾಗೇ
ಅಕ್ಕಾ ನೋಡವ್ನಾ ಅಯ್ಬೋಗಾ। ಅಯ್ದಳ್ಳೀಯಾ
ಚಿಕ್ಕೂ ಮಾಳುಗಿಯಾ ದೊರರಾಯಾ। ॥೮॥

ಹೊತ್ರೀಗ್ ಬಂದಾ ಜೋಗಿ ಹುತ್ತಕಂತತ[೧೧] ಜೋಗಿ
ತಕ್ಕಣೊ[೧೨] ಜೋಗೀ ಪಡಿದಾನಾ। ॥೯॥

ತುತ್ತೇ[೧೩] ಕೊಟ್ಟಾ ಪಡಿಯಾ ಮುಟ್ಟೂ ಜೋಗೀಯಲ್ಲಾ
ಕೊಡಬೇಕೇ ಮನಿಯಾ ಗರ್ತೀರ। ಕೊಟ್ಟಾಪಡಿಯಾ
ಮುಟ್ಟೇ ಜೋಳ್ಗೀಗೇ ಹುಯ್ಕಂಬೆ[೧೪]। ॥೧೦॥

* * * *

ಸಿರಿಕೃಷ್ಣನ ತಂಗೇ ಸಿರಿದೇವೆ ಸಿವ್‌ಬದ್ರೆ[೧೫]
ಕೆಂಡದಾ ರತವೇರೆ ಗರಡಿಯಾ। ಮನಿಯಲ್ಲೇ
ಚೆಂದಾದಿಂದ್ ಎಳೀ[೧೬] ಕಳುವಾಗೇ। ಅರಜೂಣ
ಕೇಳೂತೇ ಬಂದಾ ದಿನಿಹಾಡಾ। ಏನಂದಾನೇ
ಮತ್ತ್ಹೋಳ ನಾರೀ ದಿನ[೧೭] ಚೆಂದಾ। ॥೧೧॥

ನನ್ನತ್ತೇ ಕುಂತೀಯೇ ನನ್ನಕ್ಕಾ ದುರ್ಪತೇ
ನನ್ನಾ ಬಾವ್ನೋರ ದರ್ಮಾರ। ಬಿನ್ನೀಗ್‌ಬಂದಾ
ಅರ್ಜೂನಾ ಸ್ವೊಮ್‌ನನ್ನಾ ಅರಸಾರ ॥೧೨॥

ನಾಸೆಣ್ಣವ್ಳಿರುವಾಗೆ ಅಪ್ಪವ್[೧೮] ಹೇಳ್ದಾಮಾತುಂಟ
ಅತ್ತೆ ಕುಂತಮ್ನಾ ಕೊಮರಾಗೇ। ಪಾರ್ತರಹುರ್ತು
ಪರರೀಗ್ ಸಿಟ್ಟಗವಾ[೧೯] ತಡಿನಾರೆ। ॥೧೩॥

ನನ್ನತ್ತೀಯಾ ಮಕ್ಕಳ ಪಂಚಯ್ದು ಮಂದೀಯೇ
ಪಂತಕೆ ಪ್ರಾಣಾ ಕುಡುವರ। ಕುಂತೀ ಕೊಮರಾರ
ಅವ್ರಾ ಆಯಸ್ವೇ ಹಿರ್ದಂಬೆ। ॥೧೪॥

* * * *

ಮೊಡಗಾಲೀಗುಲುವಾದ[೨೦] ಮುರಗೀನಾವಗಿಜೋಡ[೨೧]
ರಾಜೀಕಿನ್ನೋಲೂ ಬಿಸ್ಲಗೊಡೆ। ತಕ್ಕಂಡೇ
ಅಣ್ಣಾದೋಸೇರಾ ಮನಿಗ್ಹೊದಾ। ॥೧೫॥

---

೧೦. ಬಿಚ್ಚಿದ ಕೂದಲ ೧೧. ಸೂರ್ಯ ಮುಳುಗಿದ ೧೨. ತೆಗೆದುಕೋ ೧೩. ದಾಸಿ ೧೪. ಹೊಯ್ದುಕೊಳ್ಳುವೆ ೧೫. ಸುಭದ್ರೆ ೧೬. ವೇಳೆ ೧೭. ಧ್ವನಿ ೧೮. ತಂದೆ ತಾಯಿ ೧೯. ಸಟ್ಟುಗವನ್ನು ೨೦. ಮೊಡಗಾಲಿಗೆ ಒಪ್ಪುವುದು ೨೧. ಜರಮುರವೆನ್ನುವ ಜೋಡು

ನಮ್ಮಬಾವ್ ಕವ್ರವ್ಗೆ ತಂಗೀ ಸಿವ್‌ಬದ್ರೀಗೆ
ಸಾಳೀ ಮೋರ್ತವೆ ಉದ್ಗೀದೆ[೨೨]। ॥೧೬॥

ಸಿವ್‌ಬದ್ರೀ ಹುಲಿಯಾಗೀ ಕವ್ರವ್ ಆಕಾಳಾಗೀ
ಸಾಳೀ ಮೋರ್ತವೆ ಒದ್ಗೇಲಾ[೨೩]। ॥೧೭॥

ಅಟ್ಟಂಬೂ ಮಾತನೇ ಕೇಳಿದ್ನೇ ಶ್ರೀಕೃಷ್ಣ
ಸೆಣ್ಣದೋಸೇರಾ ಮನಿಗ್ಹೊದಾ।
ನಮ್ಮ ನೆಂಟ್ ಅರ್ಜುನಗೆ ತಂಗೇ ಸಿವ್‌ಬದ್ರೀಗೆ
ಸಾಳೀ ಮೋರ್ತವೆ ಉದ್ಗೀದೆ। ॥೧೮॥

ಸಿವ್‌ಬದ್ರೆ ಆಕಾಳಾಗೇ ಅರ್ಜೂನಾ ಹುಲಿಯಾಗೇ
ಸಾಳೀ ಮೋರ್ತವೆ ಉದ್ಗೀತ। ॥೧೯॥

*   *   *   *

ದೊರತೀ ಪುರ್ದಲ್ಲೇ ಮತ್ತೊಬ್ಬರಿಲ್ಲಾವೇ
ನಾನೊಬ್ಬಳೇಂವೆ ಕುಲ್ದಲ್ಲೇ। ಅತ್ತೂಗಿ
ಉದ್ದುದ್ದೇ ಹಲಿಯಾ ಹೊಯ್ಬೆಡಾ। ॥೨೦॥

ಕಯ್ಲವ್ರಾ ನಿಳ್ಳಿಲ್ಲಾ ಕಯ್ಲವ್ರಾ ಹುಳ್ಳಿಲ್ಲಾ
ಪಾಪೇ ಅರ್ಜೂನನಾ ನಿಜರೂಪಾ। ಅಂದ್ಹೇಳೇ
ಉದ್ದುದ್ದೇ ಹಲಿಯಾ[೨೪] ಬರ್ದಾನೇ। ॥೨೧॥

*   *   *   *

ಕೂಸೂ ಕಯ್ಲೋರೀಗ್ ಬಾಸೇ ಪಾಂಡವ್ರೀಗೆ
ಮೊಸಾವಾಯೀತೋ ಹಿರಿಯಣ್ಣಾ। ದರ್ಮಾರಾಯಾ
ಯಾಸಾದಿಂದ್ ಬಾರೋ ಮುದವೀಗೆ। ॥೨೨॥

*   *   *   *

ದ್ಯೆವಾಲೋಕಾದಲ್ಲೇ ದೆವ್ರ ತಂಗೀ ಮುದ್ಯಾ
ಉಂಡುಂಡೇ ಬಾಯಾ ತುಳುವಾರ। ಅರ್ಜೂನಾ
ಕಡಪಂತೀಲ್ ನಿಮ್ಮಾ ಕರ್ದರ। ॥೨೩॥

ನನ್ನಾ ಬಾವ್ನ ಮನಿಯಾ ಪಟ್ಟಾದಾಗಿಳಿರಾಮಾ
ನೀಒಂದಾ ಕಾರಣ್ವಾ ತಿಳ್ದೇಳ। ॥೨೪॥

---

೨೨. ಜಾತಕ ಕೂಡಿ ಬಂದಿದೆಯೆ? ೨೩. ಕೂಡಿಬರಲಿಲ್ಲಾ ೨೪. ರಂಗೋಲಿ

ನನ್ನಪ್ನ ಮನಿಯಾ ಮುತ್ತನಾಗಿಳಿಯೆ ಕೇಳ
ನನ್ನತ್ತೇ ಕುಂತಮ್ನಾ ಮನಿಗ್ಹೋಗ। ಪಾರ್ತನಕೋಡೇ
ಕಡಪಂತೀಗವ್ನಾ ಕರ್ತಾರೇ। ॥೨೫॥

*　　*　　*　　*

ಎಲ್ಲಾ ಮಾಡೂವಾದ ಒಳ್ಳಾದೇ ಸಿವ್‌ಬದ್ರೆ
ತಲಬಾಗೇ ನೆಲ್ನಾ ಬರ್ದೀರ್ಯೆ। ಪಾಂಡವ್ರೀಗೆ
ಹನ್ನೆಯ್ದು ಉರ್ಸೇ ವನವಾಸ। ॥೨೬॥

*　　*　　*　　*

ಸುಂಗಾಬದ್ರೀ[೨೫] ನಿನ್ನಾ ಉಂಗೀಲಾ ಗಮ್ಮಂದು
ಅಂಬೀಗಗ್ಯೆಕೇ ಸರಣಂದೇ।
ಕುಲದಲ್ ಕುಂತೀ ಮಗ್ನೇ ಚಲದಲ್ ಬೀಮಾನಣ್ಣಾ
ಹಿರಿಯಾ ಬಾವ್ನಂದೇ ಸರಣಂದೆ। ॥೨೭॥

*　　*　　*　　*

ಹಾವ್ನಾ ಹಲ್ಲೂ ಬೈರೇ ಇಸ್ದಾಕುಂಡ್ಕೇ ಬೈರೆ
ಬಲ್ಲಾದ್ರೇ[೨೬] ಮದ್ದಾ ಕುಡ್ರವ್ವಾ ಸಿವ್‌ಬದ್ರೀಗೇ
ಇಸ್ತಾರ್ದಾ[೨೭] ಗರ್ಬವೇ ಹುದೀರ್ದದ[೨೮]। ॥೨೮॥

*　　*　　*　　*

ಕ್ವೊಟೀ ಮ್ಯೆನನ ತಂಗೇ ಮಾತ್ಹೇಳೇ ಕಳ್ಗಳ
ಕ್ವೊಪಿಲ್ದೇ ಕ್ಯೆಳೋ ಹಿರಿಯಣ್ಣಾ। ನಿನ್ನಾ ತಂಗೇ
ಕೂಸಾ ಬೇಡಾಳೋ ಕೊಮರಾಗೆ। ॥೨೯॥

ಕೂಸ ಬೇಡೂತಂಗೆ ನಿನ್ನಾಗೇ ಮೊನ್ನಾಗೇ
ಅದಕಿಂತಾ ಮುದ್ಲೇ[೨೯] ಕಯ್ಲೋರ। ಪಾಂಡೋರಾ
ಹಿಣ್ಣೀಗೇ ಚೊಡಂಗಿ[೩೦] ಇಟ್ಹೋದ್ರು ॥೩೦॥

ಎಟ್ಟಾ ಚೊಡಂಗೀಯಾ ಕಿತ್ತೇ ಉಲ್ಲಾಡೂನೊ[೩೧]
ಅಣ್ಣಾ ಸಿರಿಕೃಷ್ಣನಾ ದಯವುಂದ। ಎದ್ದಾರೆ
ಕಟ್ಟೂವೆ ಪಾಂಡವ್ರಾ ಕರಿಮಣಿಯಾ। ॥೩೧॥

*　　*　　*　　*

---

೨೫. ಸುಭದ್ರೆ ೨೬. ಬಲ್ಲವರು ೨೭. ವಿಸ್ತಾರದ, ವಿಚಿತ್ರದ ೨೮. ತುಂಬಿದೆ ೨೯. ಮೊದಲೇ
೩೦. ಚೂಡಾರತ್ನ ೩೧. ಕಿತ್ತು ಬಿಸಾಡುವೆ

ಹಿಣ್ಣ ಹುಟ್ದಂವ ಕೆಟ್ಟಾ ಮನಿಲೆದ್ ಪಂಡಿತಕೆಟ್ಟಾ
ಸನ್ನೇಸೆ ಕೆಟ್ಟಾ ಜಪದಲ್ಲೇ। ಕೃಷ್ಣನ ಮಗ್ಳಾ
ತಂದಿನ್ನೇ ಕೆಟ್ಟಾ ಅಬಿಮನ್ಯ। ||೩೨||

ಚಿತ್ರ ಬೀಮನ ಕ್ವೊಟೇ ಹುಕ್ಕೇ ಮೊರ್ದ್ದವನ್ಯೆರೇ
ಪಾರ್ತ ಅರ್ಜುನನಾ ಕೊಮಾರಾನೇ। ಅಬಿಮನ್ಯನಾ
ಮರಿಯಲ್ ನಿಂತ್ ಹೊಡದಾ ಕರ್ಣನೇ। ||೩೩||

ಕ್ವೊಟೀಯಾ ಸುತ್ತೇ ದಾಸಾಳಾ ನಿಡುವಾರ
ಕೇಸಿಲ್ಲದಿಳ್ಳ ನಿಡುವರ। ಕೃಷ್ಣಸ್ವೊಮ
ಮ್ವೊಸಾದಿಂದ್ ಕೊಂದಾ ಅಳಿಯಾನಾ। ||೩೪||

ಕೂಸೂ ಪಾಂಡವ್ರೀಗೆ ಕೂಸು ಕಯ್ಲವ್ರೀಗೆ
ಎಸಾದಿಂದ್[೩೨] ಬಂದಾ ಸಿರಿಹರೆ। ಕೃಷ್ಣಸ್ವೊಮೆ
ಮ್ವೊಸಾದಿಂದ್ ಕೊಂದಾ ಅಳಿಯಾನಾ। ||೩೫||

ಸಾವುಂಟ ಮಯಣಾ[೩೩] ಯಾರಿಗ್ ತಪ್ಪದ್ದಲ್ಲಾ
ಸ್ವೊಮೀಯಾ ತಂಗೇ ಸಿವ್‌ಬದ್ರಿ ಮಗದೀರ
ಯುದ್ದಕ್ಕೊದಲ್ಲೇ ಮಡದರ। ||೩೬||

*   *   *   *

ದುರ್ಪತಿ ಸಾಲೀಯಾ ದುಸ್ವಾಸಾ ಸುಗುವಾಗೇ[೩೪]
ವಿಸ್ವಾಸದಣ್ಣನ ನನುದಾಳೆ। ಸಿರಿಹರಿ
ಮಾಯದ ಸೇರೀ[೩೫] ಮರಮಾಡ। ||೩೭||

ಕಟ್ಟೀದ ಮಂಡೀಯಾ ವಾಲಾಡಿ ಉಲಚೀದಾ[೩೬]
ದ್ರವ್ಪತಿ ಸಾಲೀ ಸುಗಿಸೀದಾ। ದುರ್ವಿದಾನ[೩೭]
ಪಡದಟ್ಟು ರಾಜೀ ತನಗಂಬಾ। ||೩೮||

ಅಡವೀಲರ್ಜೂನಾ ಮಡಿದಾ ಸುದ್ದೀ ಕೇಳಿ
ಹುಡಿಹುಯ್ಯುತಾ ಬಂದಾ ದುರ್ವಿಂದ್ರಾ। ಪಾಂಡವ್ರಾ
ಪಡದಟ್ಟೊ ರಾಜೀ ತನಗಂದಾ। ||೩೯||

*   *   *   *

ಕುಂತೇ ಬಿಕ್‌ಸೀಕ್[೩೮] ಹೋಗೇ ದರ್ಮರ ಪೋಜೀಕ್‌ಕೂತೇ
ನಕಲ ಸಾದೇವ್ರ ವನವಾಸಾ। ಕಳ್ದೇಬರುವಾ
ಮುದ್ದೊ ಬಾಲಕ್ರೇ ವನವಾಸಾ। ||೪೦||

---

೩೨. ವೇಷದಿಂದ ೩೩. ಮರಣ ೩೪. ಎಳೆಯುವಾಗ ೩೫. ಸೀರೆ ೩೬. ಅಳಿಸಿದ ೩೭. ದುರ್ಯೋಧನ ೩೮. ಭಿಕ್ಷೆಗೆ

ಕುಂತೀಯಾ ಸಾಲೀಗೇ ಬೇಮಾ ಬಿಕ್‌ಸೀಕ್ ಹೋಗೇ
ನಕುಲಾ ಸಾದೇವ್ರ ತಿರ್ಗುಂಡೇ। ಬರುವಾಗೇ
ಪಾಂಡೋರಿಗ್ ಬಂದಾ ತುರ್ತಾವೇ[೩೯]। ॥೪೧॥

ಅಟ್ಟೊಂಡಾ ಪಾಂಡವ್ರ ಕಿಟ್ಟೇಮುದ್ಗೋಗೂವಾಗೇ[೪೦]
ಬೆಟ್ಟಾದಲ್ ಬಾಳೇ ಪಲಬಂದು। ಪಾಂಡವ್ರ
ಅಟ್ಟೊಂಡಾ ಹೊಲನಾ ಮರ್ದಾರ। ॥೪೨॥

ಪಟ್ಟಾವಾಯೀತೆಂದೇ ಉಂದೂ ಮುಂಡೇರದ್ದೆ
ಪಟ್ಟಿಲ್ಲಾ ಸ್ವೊಮೀ ವನವಾಸಾ। ಕಳದೀಕಂಡೇ
ಬಂದರ ಕೀಚಕನ ಬಳಿಗಾಗೇ। ॥೪೩॥

*   *   *   *

ಆರೂ ಕಾಲ್‌ರತವಾ ಏರೇ ಬರುವರ್‍ರ್ರೇ
ಸೂಲೀನಂತವ್ನೇ ಅರ್ಜೂನ। ರತದಲ್ಲೇ
ಸಾರತಿಯಾದಾ ಸಿರಿಕೃಷ್ಣ। ॥೪೪॥

ಹಿಣ್ಣೀನಾಗುಸರ್ಾಗೇ[೪೧] ಮಣ್ಣಾದ್ರ ಕಯ್ಲುವ್ರ
ಹಿಣ್ಣೇದುರ್ಪತಿಯಾ ಕತ್ನಾಕೇ[೪೨]। ಕಯ್ಲುವ್ರ
ಮಣ್ಣಾದರೇಳೂದಿನದಲ್ಲೆ। ॥೪೫॥

ಸೀತಾದೇವೀಯಟ್ಟುದುಕ್ಕಾ ನೋಡಿದವರಿಲ್ಲಾ
ದ್ರವ್ವತೀಯಟ್ಟು ಹರ್ಲೀಯಾ[೪೩]। ಹೊತ್ತವ್ರು
ಈ ಲೋಕಾದಲ್ಲೇ ಇರುವಾರೆ। ॥೪೬॥

*   *   *   *

ತಿಂಗಳಾ ಬಿಳಕೀಗೇ ಬಂದಾವೇ ಜಂಬೂಲೋಕದಾನೇ
ಕಟ್ಟೇದವ್ಳೇರೇ ಕಡುಜಾಣೆ। ತಮ್ಮಯ್ಯನಾ
ಪಟ್ಟದ ರಾಣೇ ಪರ್ನೀಲೆ[೪೪]। ॥೪೭॥

ಅರ್ತೊಳ್ಳಾ ಆನೀಮರಿಯಾ ಅರ್ಸೇ ಬಂದವನ್ಯೆರೇ
ಕಟ್ಟಿಕ್ಕೀಯಾಳೇ ಕಡುಜಾಣೇ। ಅಣ್ಣನ ಮಡದಿ
ಪಟ್ಟದ ರಾಣಿ ಪರುನೀಲೇ[೪೫]। ॥೪೮॥

*   *   *   *

---

೩೯. ಕಷ್ಟವು ೪೦. ಕೆಟ್ಟುನೊಂದು ಹೋಗುವಾಗ ೪೧. ಹೆಣ್ಣಿನ ಸಲುವಾಗಿ ೪೨. ಜಗಳಕ್ಕೆ ೪೩. ತೊಂದರೆ, ಕಷ್ಟ ೪೪. ಪ್ರಮೀಳೆ ೪೫. ಪ್ರಮೀಳೆ

ಊ. ಪೌರಾಣಿಕ ಕಥನ ಕವನಗಳು

	ಪರಿವಿಡಿ	ನಿರೂಪಕರ ಹೆಸರು	ಊರು
೧.	ಮಂಡಾಳ ದುರ್ಗಿ (ಸೀತೆ ಮದುವೆ)	ಹನಮು ನಾಯಕ (ರಾಮಾಯಣ+ಭಾರತ)	ಬೇಲೇಕೇರಿ
೨.	ಪಾಂಡುಭೂಪತಿ (ಭಾರತ)	ದೇವಮ್ಮಾ ಹೊನ್ನಪ್ಪ ನಾಯಕ	ಭಾವಿಕೇರಿ
೩.	ದ್ರೌಪದಿ (ಭಾರತ)	ಲಕ್ಷ್ಮೀ ನಾಯಕ	ಭಾವಿಕೇರಿ
೪.	ರುಕ್ಮಿಣಿ (ಭಾಗವತ)	ದೇವಮ್ಮಾ ಹೊನ್ನಪ್ಪ ನಾಯಕ	ಭಾವಿಕೇರಿ
೫.	ಚಂದ್ರಾವಳಿ (ಭಾಗವತ)	ಶಿವಮ್ಮಾ ನಾಯಕ	ಭಾವಿಕೇರಿ
೬	ಶಿವಗಂಗೆ	ದೇವಮ್ಮಾ ಹೊನ್ನಪ್ಪ ನಾಯಕ	ಭಾವಿಕೇರಿ

: ಗಣಪಾ ಬಾ ನಮ್ಮ ಮನೆಗೆ :ಡಾ. ಎನ್.ಆರ್. ನಾಯಕ ಜಾನಪದ ಪ್ರಕಾಶನ ಹೊನ್ನಾವರ

೧. ನಾಡವರ ಪುರಾಣ ಕಥನ ಕಾವ್ಯಗಳು : ಡಾ. ಎನ್. ಆರ್. ನಾಯಕ ಜಾನಪದ ಪ್ರಕಾಶನ ಹೊನ್ನಾವರ

೨. ಆಕರ ಮೂಲ

ಸಂಗ್ರಹಿಸಿದ ಕಾಲ : ೧೯೬೯

೧. ಮಂಡಾಳ ದುರ್ಗಿ–ಸೀತೆ ಮದುವೆ

ಕರಿಯಾ ಕಾಳಿಂಗನೇ ಹುತ್ತೀನಲ್ಲೇಳೂ[೧] ಮರಿಯಾ ಹಾಕಿರುವಾನೇಗೂ
ಪಾಂಡವರು ವನವಾಸೀ ತಿರುಗೂತೇ ಬಂದಿರುವಾನೇಗೂ
ಅಡಗೀಗೇ ಎತ್ತಲೇ ಬೇಕಂದರೆ ಅವರಿಗೆ ಅಲ್ಲಿಲ್ಲು ನೀರಿಲ್ಲ
ಅಲ್ಲೇ ಕೋಡೊಂದು[೨] ಜಪದಾ ಹೆಗ್ಗರೀ ಕಂಡಿರುವಾರೇಗೂ
ಅಲ್ಲೇ ತಮ್ಮಾಲೋ ಬಟವೀನೇ[೩] ಇಕ್ಕಿರುವಾರೇಗೂ
ಜಪದಾ ಹೆಗ್ಗರಿಗೇ ನೀರನೇಕಂಡೇ ಅಲ್ಲೀಗೇ ಹೋಗಿರುವಾರೇಗೂ
ಸಂಪಾದ[೪] ಹೆಗ್ಗರಿಯಾ ತಂಪಾದ ನೀರಾನೇ ತುಂಬಿರುವಾರೇಗೂ
ನೀರಾನೇ ತಂದೇ ಅಯ್ದೂಸಿದ್ದೆ ಸೆಣ್ಣಕ್ಕಿ ಹಾಕೇ ಅಡಗೀ ಇತ್ತಿದ್ದಾರೇಗೂ[೫].
ಅಡಗೀಯಲಿತ್ತೇ ಬಿಂಕೀಯನೆ[೬] ಉಟ್ಟಿರಿವಾರೇಗೂ[೭]
ಅಡಗೀ ತಪ್ಪಲಿಮ್ಯೆನುಂದು ಮುಚ್ಚಳ ಮುಚ್ಚಿರುವಾರೇಗೂ
ಅಯ್ದೂಜನ ಪಾಂಡವರು ಜಪದಾ ಹೆಗ್ಗರಿಗೇ
ಮೀಯೂಕೋಗಿರುವಾರೇಗೂ[೮]
ಅಲ್ಲೇ ಅಯ್ದುಜನ ಪಾಂಡವರು ಸಂಜಣವ್ ಮಾಡಿರುವಾರೇಗೂ
ಒಲಿಯಾ ಮ್ಯೆನಿನ ಬಿಂಕೇ ಹರದೇಬಂದ್ ಸಾಸಮಣಿನಾಗನ[೧೦] ಮರಿಸತ್ತು
ಮರಿಸತ್ತ ಉರಿಗ್ ಬೆಂದಾ ಸಾಸಮಣಿನಾಗ ಓಡೋಡಿ ಬಂದೇಗೂ
ಅಡಗಿ ತಪ್ಪಲಿಯಲ್ಲೇ ಇಸವಾನೇ[೧೧] ಎದ್ದಟ್ಟೂ ಕಾರಿಹೋಯೀತೇಗೂ
ಸಂಜಣ ಮುಗಿಸಿದ ಪಾಂಡವರು ಅಯ್ದಗಲೂನೇ ಇಕ್ಕಂಡೇ
ದರ್ಮರಾಯರು ಉಂದು ಮುಟ್ಟನ್ನ ತಿಗದೇ ಬೀಮನಗಲೀಗಿಕ್ಕೇ
ಎಲ್ಲರು ತರದಲ್ಲೇ ಓಟಾಕೇ ಕುಳಿತಿರುವಾರೇಗೇ
ಮಂಡಳದುರ್ಗೆ[೧೨] ಹೋಗೇ ಅಯ್ದಗಲ ಮುಟ್ಟೇ ಆಚಿಗೆ ಕುಳಿರುವಾಳೇಗು೧

ಆಗೇ ದರ್ಮರಾಯರು ಕಾಲಮ್ಯೆನೇ ಅದ್ರ ಕುಳ್ಳಿಸಿಕಂಡೇ
ತಲಿಯಾ ಮ್ಯೆನ್‌ಕಯ್ಯಾ ಉಗದಿರುವಾರೇಗೂ
ಮಂಡಳದುರ್ಗಿ ಹಿಣ್ಣಾಗೇ ಕುಳಿತಿರುವಾಳೇಗೂ
ಆಗೇಲೇ ಇಲಕೇಳ ನನತಂಗಿ ಎದ್ದ[೧೩]ಸಂಗತಿ ಎದ್ದಂಗೇ[೧೪] ಹೇಳ
ನೆಡದ ಕಾರ್ಯವ ತಿಳಿಸ್ಥೇಳ ಅಂದ್‌ದರ್ಮರು ಕೇಳಾರೇ. ೦೨

---

೧. ಒರಲೆ ಹುತ್ತಿನಲ್ಲಿ ಏಳು ೨. ಸಮೀಪದಲ್ಲಿ ೩. ಚೀಲ ೪. ತುಂಬಿದ ೫. ಎತ್ತಿದರು ೬. ಬೆಂಕಿಯನ್ನು ೭. ಉರಿಸಿದರು ೮. ಸ್ನಾನಕ್ಕೆ ಹೋದರು ೯. ಸ್ನಾನ ೧೦. ಕಾಳಿಂಗನ ೧೧. ವಿಷವನ್ನು ೧೨. ಕಪ್ಪೆ ೧೩. ಇದ್ದ ೧೪. ಇದ್ದ ಹಾಗೇ

ಸಾಸಮಣಿ ನಾಗನೇ ಎಂಬವ್ನೇ ಇಸವನ್ನೇ ಕಾರೀಕೇ[೧೫]
ಕಡಲೇಳ ಸಮುದ್ರದ ಹೆರಗೆ ನಿಡದಿರುವಾನೇ
ಬೀಮಾನರು ಮುರದೇ[೧೬] ಬಿಡುವಾ ಅಂದೇ
ಇಸವನೆ ಕಾರೀಕೇ ಹೋಗೀದ ೦೩

ಹ್ವೊದಾ ಜೀಂವಾವಾನುಳಿಸೀದ[೧೭] ತಂಗೇ ನೀನೆಂಬಾನೇಗೂ
ಕಚ್ಚೀಕಂಡೇ[೧೮] ಮುದ್ದಾಡೇ ತಂಗೀಗೇ ಹೇಳೂವರೇಗು
ನಮಗೇ ಅಕ್ಕಿಲ್ಲತಂಗಿಲ್ಲ ನೀನೇ ಎದ್ದವ್ಳ[೧೯] ಒಬ್ಬಳೇ ತಂಗೆ
ನಾವೇಗೇ ವನವಾಸಕಳದೇ ನಿನ್ನ ಕರಕಂಡೇ ಹೋತವ[೨೦]
ಕಲ್ಲಕಂಚೀನ ಮನಿಯನೇ ಕಟ್ಟಿರುವಾರ
ಉಂದು ಇರಗ ಹ್ವೊಗದಾ ಪರಿಯಲ್ಲೇ[೨೧] ೦೪

ಸರ್ವಸಾಯಿತಯಿಟ್ಟೇ[೨೨] ಮನಿಯನ್ನೇ ಕಟ್ಟಿರುವಾರ
ಮೀವದು[೨೩] ಉಗವದು[೨೪] ಎಲ್ಲವ್ರೂ ಮನೆಯಾ ಒಳಗೇ
ಮಾಡಿನ್ನು ತಂಗೀಯ ಒಳಗಿಟ್ಟೇ ಅಯ್ದುಜನ ಪಾಂಡವರೇ
ವನವಾಸ ಕಳುವಾಕೇ ಆರಾಣಿ ಅಡವೀಗೆ ಹೋಗಿರುವಾರೇಗೂ
ಹನ್ನೆಯ್ದುರಸೇ ವನವಾಸ ಉಂದುರುಸ ಅಜ್ಞಾತ ಕಳದಿರುವಾರೇ. ೦೫

ಅವರ್ಹೊದಾ ಮೂರುದಿವ್ಸಕೆ ಕಳ್ಳ ರಾವಣನೆಂಬವನೇ
ಹೊನ್ನ ತುಂಬೀಯಾಗೇ ಮನಿಯಾನೇ ಸುತ್ತಿರುಗಿವಾನೇಗೂ
ಹೊನ್ನ ತುಂಬೀಯಾದಾರೂ ಒಳಗೋಗೂಕಾಗದೇ ರಾವಣ್ಣ
ಸೆಣ್ಣ ನುರುಜಾಗೇ[೨೫] ಒಳಗೇ ಹುಕ್ಕೇ ಬಿಳದಿರುವಾನೇಗೂ
ಮಂಡಾಳಾ ದುರ್ಗೀಯ ಕಿಡಸೇ ಹೆರಗೆ[೨೬] ಬಂದಿರುವಾನೇಗೂ
ಅಣ್ಣ ಹ್ವೊದಾ ಮ್ಯನೇ ಮೂರು ದಿನೇ ಉಂಡದ್ದ ಮತ್ತೊಣ್ಣಲಿಲ್ಲ
ಅದ್ರಮ್ಯನೇ ಮಂಡಾಳದುರ್ಗೇ ಕಂವಚೇ[೨೭] ಮನಗಿರುವಾಳಲ್ಲ. ೦೬

ಹನ್ನೆರಡು ಉರಸೇ ವನವಾಸೇ ಕಳದೇ ತಿರಗೇ ಬಂದಾರೇಗೇ
ಇಲಕೇಳೇ ನನತಂಗಿ ಕೇಳೂಕೇಳಂಬಾರೇಗೂ
ನಕುಲ ಸಹದೇವ ಬೀಮಾಲರ್ಜುಣ ಧರ್ಮರು ಬಂದೇ
ಹಾಕೀದ ಕದವನ್ನೇ ಉಡಡೇ ತಿಗದಿರುವಾರೇಗೂ ೦೭

೧೫. ಕಾರಿ ೧೬. ಕೊಂದು ೧೭. ಹೋದ ಜೀವವನ್ನು ಉಳಿಸಿದ ೧೮. ಕಚ್ಚಿ ೧೯. ಇದ್ದವಳು ೨೦. ಹೋಗುತ್ತೇವೆ ೨೧. ಒಂದು ಇರುವೆ ಹೋಗದ ರೀತಿಯಲ್ಲಿ ೨೨. ಸಾಮಗ್ರಿಯಿಟ್ಟು ೨೩. ಸ್ನಾನ ಮಾಡುವುದು ೨೪. ವಸ್ತ್ರ ಒಗೆಯುವುದು ೨೫. ಸಣ್ಣನೊಣ ೨೬. ಹೊರಗೆ ೨೭. ಕೆಳಮುಖಮಾಡಿ

ದರ್ಮರಾಯರು ಮಂಡಾಳದುರ್ಗಿ ಕಾಲಮ್ಯೆನೇ ಕುಳ್ಳಿಸಿ ಕಂಡೇ
ತಲಿಯಾ ಮ್ಯೆನೇ ಕಯ್ಯ್ಯಾಇಳಗೇ[೨೮] ಹೇಳಿದರೇಗೂ
ಏನನ್ನಾತಂಗೀ ಎದ್ದಾಸಂಗತಿಯೆದ್ದಂಗೇ ಹೇಳಂದಾರೇಗೇ
ಹೆದರಾಬ್ಯೆಡತಂಗಿ ಬೆದರಾಬ್ಯೆಡಾ ನಾವಿದ್ದೇವೆ ನಿಂಗೇ. ೧೮

ಆಗೆಲೋ ತಂಗೇ ಮಂಡಾಳದುರ್ಗೇ ಹೇಳಿದಾಳೆ
ರಾವಣ್ಣನ ರಾಜೀದಲ್ಲೇ ಮನಿಯಾ ಕಟ್ಟೇ ಹೋದಿರಿ
ಮೂರುದಿನವಟ್ಟೇ ನಾನು ಅಟ್ಟೊಂಡದ್ದೋ[೨೯]
ಅದ್ರಮ್ಯೆನೇ ಅಂವನನ್ನ ಕಿಡಸೇ[೩೦] ಹ್ವೊದಾನಂಬಳೇ. ೧೯

ಕಣ್ಣೀರ ಕರದೇ ದುಕ್ಕಾವೇ ಮಾಡಾರೇ ಪಾಂಡವರ
ಆ ಪಾಪೀ ತಂಗೀಯ ಜೇವುಂದ[೩೧] ಉಳಿಸಿಹ್ವೊದಾ
ಆದುಟ್ಟ[೩೨] ತಂಗೀಯ ಮಾನವ ಕಿಡಸಿಕ್ಕೇ ಹ್ವೊದಾ
ಅಂದೇಳೇಲವರೋ ರಾವಣ್ಣನ ಕರಸೇಲೇಬೆಟ್ಟರ[೩೩]
ಇಲಕೇಳೋ ರಾವಣ್ಣ ನೀಕೇಳೋ ನಮ್ಮಾಮಾತ
ನಮ್ಮಾ ತಂಗೀಯ ನೀನ ಚೆಂದಾದಿಂದಲಿ ನೋಡ
ನಮ್ಮಾ ತಂಗಿಯ ನೀನ ತಕ್ಕಂಡೇ ಹೋಗೆಸಲಗಂದೇ[೩೪]
ಕಟ್ಟೊನಿಟ್‌ಮಾಡೇ[೩೫] ತಮ್ಮಾರಾಜೀಕೇ ನೆಡದಾರೇಗೂ ೧೯

ಮಂಡಳದುರ್ಗೀಗೇ ದಿನವೇ ಆಗೇ ತುಂಬಿರುವಾದೇಗೂ
ಒಂಬತ್ತು ತಿಂಗಳಲಾಗೇ ಹಿಣ್ಣು ಬಾಲೀನೇ ಹಡದಿರುವಾಳ
ಸೂಲಗತ್ತೇ ಬಂದೇ ತನ್ನೆಲ್ಲಾ ಕೆಲಸಾ ಮಾಡೀದಾಳೇ
ಮಂಡಳದುರ್ಗಿ ರಾವಣನ ಕರದೇ ಹೇಳಿದಳೇಗೂ
ಇಲಕೇಳಿರಿ ಸ್ವೊಮೀ ಬಟ್ಟರ ಮನಗೇ ಹೋಗಿ ಬನ್ನೀರಿ
ಮಗಳೂ ಹುಟ್ಟೀದಗಳಗೀಯ ಫಲಕೇಳ್ಬನ್ನಿ ಎಂದಾಳೇಗೂ ೨೦

ಆಗೇ ರಾವಣ ಉಂದು ಕಾಯಾ ಪಲವನೇ ಸುಲದು
ಬಟ್ಟರಾ ಕೋಡೆಯಿಟ್ಟೇ[೩೬] ಪಂಚಾಂಗತಿಗದೇ ನೋಡಂಬಾನೇಗೂ
ಇಲಕೇಳ ರಾವಣ ಸೀತ್ಹುಟ್ಟೇ ಲಂಕೀಗೇ ಕೇಡಂದೇ ಬಂದೀದ
ಆ ಮಾತಾ ಕೇಳೇ ಅಲ್ಲಿಂದೇಲೆದ್ದೇ ಬಂದಾನೇ ರಾವಣ
ಇಲಕೇಳೇ ಮಂಡಳದುರ್ಗಿ ನೀ ಕೇಳ ನನಮಾತ
ನಿನಮಗಳ ಕುಂದೇ[೩೭] ಪಳದೀಯ ಮಾಡೇ
ಮಾಡಾದೇಯಿದ್ದಾರೆ ನಿನಕುಂದೇ ಬಿಡ್ತಿ ಅಂದಾನೇಗೂ ೨೧

೨೮. ನೇವರಿಸಿ ೨೯. ಅಡಿಗೆ ಮಾಡಿ ಉಂಡದ್ದು ೩೦. ಕೆಡಿಸಿ ೩೧. ಜೀವವೊಂದನ್ನು ೩೨. ಆದುಷ್ಟ ೩೩. ಕರೆಸಿಬಿಟ್ಟರು ೩೪. ಸಲಗು ೩೫. ಕಟ್ಟಪ್ಪಣೆ ಮಾಡಿ ೩೬. ಹತ್ತಿರವಿಟ್ಟು ೩೭. ಕೊಂದು

ಮಂಡಳದುರ್ಗಿಯೇ ಉಂದೂ ಜೋಳೂಗೇ ವರತಕ್ಕಂಡೇ
ಆಚೇರಿ ಮನೆಗ್ಹೋಗೇ ಪೆಟ್ಟೂಗಿ ಉಂದಾ ಮಾಡೀಸಿ
ಒಳಬೇಗ ಹೊರಬೇಗ ಮಾಡೀಕಂಡೇ ತಂದಳೇ
ಆರಾ ಸಮುದ್ರಕ್ಕೆ ತಕ್ಕಂಡೇ ತಾನೇ ಹೋಗುವಾಳೇ
ಹಿರು[೩೮]ವಕೆ ಹಿಂಗೂಕೆ[೩೯] ನಾದನ್ನೆ ಆಗದೆ
ಸಾಕೂಕೆ ಸಲಗೂಕೇ ನೀದನ್ನೆ ತಾಯೇ
ಮಗಳಾ ನಿನಗುಪ್ಪಸೇ ಕುಟ್ಟೀನೇ ತಾಯೇ
ಸೂಡಿದ ಹೂಂಗು ಬಾಡದಂತದ ಸಲಗೇ ನೀನು ಅಂದಾಳೇಗೂ
ಬೆಟ್ಟಕ್ಕೇ ಬಂದೆ ಉಂದು ಮೊಲದಾ ಮರಿಯಾನೇ ತಂದೇ
ಅದ್ರಾ ಕುಯ್ದೇ ಆಸೀ[೪೦] ಅಡಗೀಯಾ ಮಾಡೀದಳೇಗೂ.
ಹಸುವಾಗೇ ರಾವಣ ಹಲ್‌ಮಸಿತೇ[೪೧] ಮನಿಗೇ ಬಂದಾನೇಗೂ
ಮಗಳಾ ಕುಂದ್ ಮಾಡೀದ ಆಸೀಯ ಬಡಸೆಂದಾನೇಗೂ ೧೨

ಮಂಡಾಳದುರ್ಗೀ ಗಂಡಾಗೇ ಅಗಲಿಕ್ಕೇ ಬಡಿಸೀದಳೇಗೂ
ಗಂಡಗೇ ಅನುಮಾನ ಬರಬಾರಲಂದ್ಹೇಳೇ
ತಾನೂನೂ ಓಟಾಕೇ[೪೨] ಗಂಡನ ಉಡಗುಂಡೇ[೪೩] ಕುಳತೇ
ಆಸೀ ಅನ್ನವನೆಲ್ಲ ಅನಮಾನ ಬರದಂತೆ ಒಂಡಾಳೇಗೂ[೪೪] ೧೩

ಹಿಂಡೂತೇ ಕುಸಿಯಲ್ಲೇ ಉಂಬೂದ ಕಂಡರಾವಣ
ಮಾಯಾವ ನುಂಗೀದ ಹಿಂಗಸಾರ ಗ್ವೊಂಕೀಯೇ[೪೫] ಇಲ್ಲಾ
ಬಯವಿಲ್ಲದ ಹಿಂಗಸರ ಏನೂ ಮಾಡೂಕೆ ಹಿಂಜರಿಯಾರೇ
ನಂಗೇಗೆ ಒಂಡಾ ಅನ್ನ ಗಂಟ್ಟಕೇ[೪೬] ಸಿಕ್ಕಿರುವಾದಲ್ಲ. ೧೪

ಮಂಡಾಳದುರ್ಗೀಯಾ ಪಿಟ್ಟೂಗೇ ಜನಕರಾಯಾಗೇ
ಗದ್ದೀಯಾ ಹೂಡೂವಾಗೇ ನೇಗೀಲ ಮೊನಿಗ್ ಸಿಕ್ಕೇತೇಗೂ
ನೆಲಬಗದೇ ನೋಡಿದರೆ ದೊಡ್ಡಾಉಂದ್ ಪಿಟ್ಟೂಗೇ
ಪಿಟ್ಟೂಗಿ ಒಳಗೇ ಹನ್ನೆಯ್ಡಿರಸೀನ ಕನ್ನೇ ನೋಡೀದಾನೇಗೂ ೧೫

ಕಾಮಂಡಲ ಕಾಂಕೇ[೪೭] ಚಿನ್ನದ ಮೂಗನ ಕಾಂಕೇ
ಜನಕಾರಾಜನೇ ನಿಚ್ಚ ಜಪನೇ ಮಾಡೂತಿರುವಾಗೇ
ಜಡಿಯಾಮ್ಯೆನ್ ಪಿಟ್ಟೀಯಾ ಹಾಕ್‌ಹಾಕೇ
ಅವ್ನ ಜಪವಾ ಕಿಡಸೇ ಹಾಕೀ ಹೋತತೇ[೪೮]
ನನ ದನಸಾ ನಿಗದಿತ್ತೇ ಆ ಕಾಂಕೀ ಹೊಡದೋರಿಗ್
ನನ ಮಗಳಾ ಕುಡತೀನಂದೇಳೇ ವಾಲೀ ಬರದಿರುವಾನೇಗೂ ೧೬

೩೮. ಹಡೆಯಲಿಕ್ಕಿ ೩೯. ಕಳೆಯಲಿಕ್ಕೆ ೪೦. ಅನ್ನ ಕಲಸುವ ಪದಾರ್ಥ, ಪಳದಿ ೪೧. ಹಲ್ಲನ್ನೂ ಮಸೆಯುತ್ತ ೪೨. ಊಟಕ್ಕೆ ೪೩. ಜೊತೆಗೂಡಿ ೪೪. ಉಂಡಳು ೪೫. ಗಂಟಲು ಮೂಳೆ ೪೬. ಗಂಟಲಿಗೆ ೪೭. ಕಾಗೆ ೪೮. ಹೋಗುತ್ತಿತ್ತು

ರಾಮಲಕ್ಷ್ಮಣರು ಆ ಸುದ್ಧಿಕೇಳೀ ಬಂದಿರುವಾರೇಗೂ. ೧೭

ಆದನಸಾ ನಿಗದಿತ್ತೇ ಕಾಂಕೀಯ ಕೊಲ್ಲಬೇಕಾದರೆ
ಹನ್ನೆಯ್ದುಉರಸೇ ಹಣ್ಣೊಲಾಯರವಾ ಒಣ್ಣಾದವರೆ
ಆಗಲೇಬೇಕೆಂದೇ ತಿಳಕಂಡ ಲಕ್ಸಮಣನೇ
ಅಣ್ಣಾನಡಗಟ್ಟೇ[೪೯] ಬಿಲ್ಲಾ ತಾನೇ ಹಿಡಿದು ಹೇಳಿದನೇಗೂ ೧೮

ಅಣ್ಣೊಂಡರೆ ಅಣ್ಣನ ಹೊಟ್ಟೆ ತಮ್ಮೊಂಡರೆ ತಮ್ಮನ ಹೊಟ್ಟೆ
ಹನ್ನೆಯ್ದು ಉರಸೇ ಅನ್ನಾಯಾರವ ನಾನೇ ಮೆಲಲಿಲ್ಲ
ಅಂದೇಳೇ ಅಣ್ಣನ ಮುಂದೇಗೆ ಬಾಯನ್ನೇ ತೆಗೆದಾನೇಗೂ
ಬಾಯ್ತುಂಬೇ ಸಾಳಗನಾ[೫೦]ಬಲಿಯೇ ಹಬ್ಬಿರುವಾದಲ್ಲ. ೧೯

ಯಾಕೆ ಎಂಬುದು ಅರಿಯದೆ ರಾಮ್ ನೆಂತಾಯಾಳೀಕೇ
ಲಕ್ಸಮಣ ಬಿಲ್ಲಾನೇ ನಿಗದಿತ್ತೇ[೫೧] ಕಾಂಕೀಯ ಹೊಡೆದಾನೇಗೂ
ಚಿನ್ನದ ಮೂಗೀನ ಕಾಮಂಡಲ ಕಾಂಕೇ ಸತ್ತೇ ಬಿದ್ದೀತೇಗೂ
ಕನ್ನೇ ಸೀತಾದೇವೆ ಮಾಲೀತಕ್ಕಂಡೇ ಮುಂದೆ ಬಂದಿರುವಾಳಲ್ಲ. ೨೦

ತಾಹಿಣ್ಣಾ[೫೨] ಗೆದ್ದಾರು ಹಿರಿಯಣ್ಣನಿರುವಾಗೇ ಮುದಿಯಾನಂಗ್‌ಸಲ್ಲ[೫೩]
ಅಣ್ಣಗೇ ನೀನ ಮಾಲೀಯನಿಕ್ಕಿ ಮುದಿಯಾನಾಗಲೆಬೇಕೇ
ನೀನೂನಂಗೇ ಹಡೆದಾ ನನ್ನಮ್ಮಗೆ ಸಮ ಎಂದಾನೇಗೂ
ತಾಗೆದ್ದಾ ಹಿಣ್ಣಾ ಅಣ್ಣನ ಪಾದಕ್ಕೇ ಉಪ್ಪಸೇಕೊಟ್ಟ. ೨೧

ಹೆಡದಾ ಮಾಲೆಯ ಮುಂದ್‌ಮಾಡಿ ಜನಕರಾಜನ ಮಗಳೇ
ಸೀತಮ್ಮ ರಾಮನಾ ಕುಳ್ಳೀಗಿಕ್ಕಿದಳೆ ತಲಿಬಾಗೇ ೨೨

---

೪೯. ಅಣ್ಣನಿಗೆ ಅಡಗಟ್ಟಿ ೫೦. ಜೇಡ ೫೧. ನೆಗೆದು ಎತ್ತಿ ೫೨. ತಾನುಹೆಣ್ಣನ್ನು, ೫೩. ಮದುವೆ ನನಗೆ

೦೨. ಪಾಂಡುಭೂಪತಿ

ಪಾಂಡೂಭೂಪತಿಯೇ ಹೊಲಮುರ್ಗನ[೧] ಬೈಟೀಗೇ[೨] ಹೋಗಿರುವನಲ್ಲ
ಮುರ್ಗನ ಬೈಟೀಯೇ ಆಗದೆ ಹೋಗಿರುವದಲ್ಲ
ಮನಗೇ ಬರುವಾ ಕಾಲದಲ್ ಮುರ್ಗನ ಬೇಟೆ ಆಗಿರುವದಲ್ಲ
ಮುರ್ಗನ ಕಂಡಿರುವರಲ್ಲ ಬಾಣ ಹುಡದಿರುವರಲ್ಲ[೩]
ಗಂಡೂಲು ಮುರ್ಗನ ಪರಣವೇ ಹೋಗಿರುವುದಲ್ಲ
ಹಿಣ್ಣಂಬು ಮುರ್ಗನ ಪರಣವೇ ಉಳಿದಿರುವುದಲ್ಲ
ಮುರ್ಗನೇ ಪಾಂಡೂಭೂಪತಿಗೆ ಸಾಪಾನೇ ಕುಟ್ಟಿರುವದಲ್ಲ
ನನ್ನೆದಿಯಾ ಮೈನೇ ನನಗಂಡನ ಪರಣಾವೇ ಹ್ವೊದಂತೆ[೪]
ನಿಮ್ಮೆಂಡಾರೆದಿಯಾ ಮೈನೇ ನಿಮ್ಪರಣಾನೇ ಹ್ವೊಗಲಂದಿರುವಳಲ್ಲ
ಸಾಪಾನೇ ಹುಡದು ತನ್ನಾಲೋ ಪರಣಾನೇ ಬಿಟ್ಟಿರುವಾದಲ್ಲ ೦೧

ಮುರಗನ ತಕ್ಕಂಡೇ ಪಾಂಡೂಭೂಪತೆ ಮನಗೇ ಬಂದಿರುವರಲ್ಲ
ತಮ್ಮಟ್ಟಕೆ ತಾಂವ[೫] ಸುಮ್ಮನೇ ಉಳದಿರುವರಲ್ಲ.
ಕುಂತಾಲೋ ದೇವಿಯೇ ಏನಂದಾಲೋಚನಿ ಮಾಡಿರುವಳಮ್ಮ
ನಮ್ಮ ದಾಯದ್ಕಾರ್ತೆ[೬] ನೂರೊಂದು ಪುತ್ರರ ಹಡದಿರುವಳಲ್ಲ
ತಮಗೇಲೋ ಒಂದೂಲೂ ಪುತ್ರ ಸಂತತಿಯೇ ಇಲ್ಲಲ್ಲ
ಗಂಡದೀರಟ್ಟಕೆ ಗಂಡದೀರೊಳದಾರೆ ತನ್ನಟ್ಟಕೆ ತಾನ ಉಳಿದಾರೆ
ನಮ್ಮಾಲೋ ಮುಂದಿನ ಹಿಸರ್ಯೆಂಗೆ ನಿಡಿಯಬೇಕಂಬಳಲ್ಲ
ತಾನರೂ ಏಗೋಗೇ ಗಂಡನ ಕೇಳಲೆ ಬೇಕಂಬಳಲ್ಲ
ಇಲಕೇಳಿ ಸ್ವೊಮಿ ನಮ್ಮಟಕೆ ನಾವ ನಿಮ್ಮಟಕೆ ನೀವ ಉಳದಾರೆ
ನಮ್ಮ ಮುಂದೀನ ಹಿಸರ್ಯೆಂಗೆ ನಿಡಿಯಾಲೇ ಬೇಕಂಬಳಲ್ಲ
ನಮ್ಮ ದಾಯದ ಕಾರ್ತೆ ನೂರೊಂದು ಮಂದೆ ಪುತ್ರರ ಹಡದಾಳೆ ೦೨

ಇಲಕೇಳೇ ಹೆಣ್ಣೆ ಮುರಗನ ಬೈಟೀಗೇ ನಾಹೋದ ಸಮಿದಲ್ಲಿ
ಗಂಡಂಬು ಮುರಗನ ಹುಡದೆ ಪರಣಾವ ನಾ ತೆಗದಾರೇ
ಹಿಣ್ಣಂಬು ಮುರಗನೇ ನಂಗೇ ಸಾಪಾಹುಡದೇ ಪರಣಾ ಬಿಟ್ಟೇದೇ
ನಿನ್ನಾಲೋ ಸದರಕೆ ನಾ ಬಂದರೆ ನನ್ನಾ ಪರಣಾ ಹ್ವೊಗಲಂದಿರುವದಲ್ಲ
ಇಲಕ್ಯೇಳೆ ಮಡದಿ ಸ್ವಾಮೇರ[೭] ಕಯ್ಯಲೇ ಸಂತಾನ ಬೇಡಂದಾನಲ್ಲ

---

೧. ಮೃಗ ೨. ಬೇಟೆ ೩. ಹೊಡೆಯುತ್ತಾನೆ ೪. ಹೋರ ಹಾಗೆ ೫. ತಾವು ೬. ದಾಯಾದಿ
೭. ಸ್ವಾಮಿಗಳ

ಸ್ವಾಮೇರ ಬೇಡೀಲು ಬಂದರೆ ಜನಪರಜೆ ಏನಂದೇ ಹೇಳೂವರ
ಕುಂತಾಲೋ ದೇವಿಯೇ ಗಂಡಿಲ್ಲದೇ ಹಡದಾಳೇ ಅಂದಿರುವಾರ
ಮಡಕಿಬಾಯ್ಕಟ್ಟೀದಂಗೇ[೮] ಮನಸರಬಾಯ್ಕಟ್ಟೂಕಾಗೂದೇನೆ ಹೆಣ್ಣೆ
ಯಾರು ಹೇಳೇನಾ ಮಾಡೂವಾರು ನನ್ನ ಕಬುಲು ಸಿಕ್ಕಿದ ಮ್ಯೆನೆ
ಅಂಜೂಕಿಲ್ಲದೆ ಹೋಗೇ ಸ್ವಾಮೇರ ವರಪಡದೂ ಬಾರೇ. ೧೩

ಸ್ವಾಮೀಲು ಬರುವಾ ಹಾದೀಗೇ ಕುಂತಮ್ಮ ನಿಡದಿರುವಾಳಲ್ಲ.
ಸ್ವಾಮಿ ಇರಗು ಎಂಬತ್ತು ಕೋಟಿಗನ್ನ
ಪಡಿಯನೇ ಇಡುವಾಕೆ ನಿಡದಿರುವಾರಲ್ಲ
ಅವ್ರು ಬರುವಾಹಾದೀಲೇ ಕಣ್ಣನ್ನೇ ಮುಚ್ಚಿಕುಳತಿರುವಾಳಮ್ಮ
ಸ್ವಾಮಿ ಇರಗು ಎಂಬತ್ತು ಕೋಟನ್ನಕೋಟೀಯ
ಪಡಿಯಾನೇ ಪಡದೇ ಇಳದಿನ್ನೇ ಬಂದಿರುವಾರಲ್ಲ ೧೪

ಪಾರೋತೇಲಮ್ಮನೇ ಸಿವನೀಗೆ ಸ್ವಾಮೀಯೇ ಕೇಳೀರಿ
ನಾವೂಲೂ ಹೋಗುವಾಗ ಯಾರೂ ಇಲ್ಲಾಗದ್ರ ದಾರೀಯ ಮ್ಯೆನೇ
ನಾವೂಲೂ ಬರುವಾಗೇ ಹಿಣ್ಣೂಲು ಮಗಳ ಕುಳಿತದೆ ನೋಡಂಬಾಳಲ್ಲ
ಅದರಾನೇ ಮಾತಾನೇ ಆಡಸಲೇ ಬೇಕಂಬಾಳಲ್ಲ
ಕೊಳತಾರೋ ಕೊಳತವರೆಲ್ಲ ಮಾತಾನಾಡಿಸ್ತೇ ಹ್ವೊದಾರೆ
ನಾವೂಲು ಇಟ್ಟೋತೀಗ್ ಮನಗೋಗೆ ಮುಟ್ಟು ಅಂದಿರುವಾನಲ್ಲ
ಇದರಾನೇ ಮಾತಾನೇ ಆಡಿಸದೆ ಹ್ವೊದಾರೇ ಸ್ವಾಮೀಯೇ
ತನ್ನಾಲೋ ಪರಣಾಲೋ ತಿಕ್ಕಂಬೆ ನೋಡಂಬಾಳಲ್ಲೋ ೧೫

ಸ್ವಾಮೀಯೆ ಬಂದಿರುವಾರೇಗೂ ಕುಂತಲ್ಲೇ ನಿಡಿದಿರುವಾರೇಗೂ
ಮುಚ್ಚೀದ ಕಣ್ಣನೇ ಉಡಿಯೇ ಮಗಳೇ ನೋಡಂಬಾರಲ್ಲ
ಕೊಳತವ್ರ್ ಇದ್ದೇ ನಿಲ್ಲಂದೇ ಸ್ವಾಮಿ ಹೇಳಿರುವಾರಲ್ಲ
ಇದ್ದೇ ನಿಲ್ಲೂವರಿಗೂ ತಾನೂಲು ಹೇಳಿದ್ದ ಕುಡತೀ ಅಂದೇಳೇ
ಬಲಗಯ್ಯ ಬಾಸೀಗೇ ಕೊಡಲೂ ಬೇಕಂದೇ ಹೇಳಿರುವಾಳಲ್ಲ
ಅವ್ರೂಲು ಹೇಳಿದ್ದ ಕುಡತೇನೆ ಮಗಳೇ ಎಂದೇಲೇ
ಬಲಗಯ್ಯ ಬಾಸೀನೇ ಕುಟ್ಟಿರುವಾರಲ್ಲ
ಉಂದೇ ಉರಸಾಕೇ ತನಗಯ್ದು ಪುತ್ರರು ಬೇಕೆಂದೇ ಹೇಳಿರುವಳಲ್ಲ
ಅಯ್ದು ಹರಳ ಮಂತರಸೇ ಅವರು ಕುಟ್ಟಿರುವಾರಲ್ಲ
ಉಂದು ಹರಳಾ ನುಂಗಿಧರ್ಮರಾಯರ ಪಡೆದಿರುವಾಳಲ್ಲ

---

೮. ಮಡಿಕೆಯ ಬಾಯನ್ನು ಕಟ್ಟಿದಂತೆ

ಮತ್ತೊಂದು ಹರಳನೇ ನುಂಗಿರುವಾಳಿನ್ನಮ್ಮ
ಭೀಮಾಲೋ ಸೇನನೇ ಹುಟ್ಟಿರುವಾನಲ್ಲ
ಮತ್ತೆರಡು ಹರಳಾನೇ ಉಂದೇಲೆ ಸರತೀಗೆ ನುಂಗಿರುವಾಳಲ್ಲ
ನಕಲ ಸಾದೇವ್ರು ಎರಡೂ ಮಂದೀಯ ಹುಟ್ಟಿರುವಾರಲ್ಲ. ೧೬

ತಂದೀಯ ಕಯ್ಯಲೇ ವಾಕ್ಷ[೧೦] ಬೇಡಬೇಕಂದೇ ಕುಳತಿರುವಾರಲ್ಲ
ಇಲಕೇಳೋ ನನತಂದಿ ಕೇಳು ಅಂಬರಲ್ಲ
ನವಗಿದ್ದಿಬುದ್ದಿಗಳ ಹೇಳಬರಲ್ಲ
ನಿಮಗಿದ್ದೀಲು ಬುದ್ಧಿಗಳ ಬಾಯಲ್ಲೇ ಹೇಳದ್ರೆ
ಬರವಾಲೋ ಮಕ್ಕಳರ ತನ್ನ ಸಿವಕಳಕೇ ತಕ್ಕಂಡೇ ಹ್ವೊದಲ್ಲೇ
ಚಿಕ್ಕಣಕಿ ಬಿಳ್ಳನ್ನೇ ಕುಯ್ದು ಅಯ್ದೂ ಪಾಲ ಹಚ್ಚೇ
ನೀವಯ್ದೂಲು ಜನರು ನುಂಗೀಲು ಬಿಡರಿ
ಆವಾಗೇ ನಿಮಗಿದ್ದೀಲು ಬುದ್ದೀಲು ಅಂದಿರುವಾನಲ್ಲ.
ಪಾಂಡೂಲು ಭೂಪತಿಯೇ ಮರಣಾ ಪಡದೇ ಹೋಗಿರುವಾರಲ್ಲ
ನಾವೂಲು ತಂದೀಯ ಸಿವಕಳಕೇ ತಂದು ಅಂದಿ ಹೇಳಿರುವಾರಲ್ಲ
ಏನಾನೇ ನಾವೂಲು ಮರದೇಲೋ ಬಂದೆವೋ
ನಮ್ಮಲೋ ಭಾವಾಗೇ ಹ್ಯಳಾಲೇ ಇಲ್ಲಂಬರಲ್ಲೋ
ಭೀಮಾಲೋ ಅರುಜೀಣ ಧರ್ಮಲೋರಾಯರೋ ೧೭

ಸಿರಿಹರಿ ಸಿರಿಕರಟ್ನನ ಮನೆಗಿನ್ನೇ ಬರುವಾರಲ್ಲ.
ನಕುಲಾಲೇ ಸಾದೇವ್ರಿಗ್ ತಂದ್ಹೇಳಿದ ಮಾತ ಇಚ್ಚರಕಿ[೧೧] ಬಂತ
ಚಿಕ್ಕಣಕಿ[೧೨] ಬಿಳ್ಳನೇ ಕುಯ್ದು ಅಯ್ದೂಲೂ ಪಾಲ ಮಾಡಿರುವಾರಲ್ಲ ೧೮

ಎಯ್ದೂಲು ಪಾಲ ತಮ ತಮ್ಮ ಬಾಯಲ್ಲೇ ಇಕ್ಕಿರುವಾರಲ್ಲ
ಮೂರೂಲು ಪಾಲನೇ ಅಣ್ಣಂದೀರೀಗ್ ಇರಿಸಿರುವಾರಲ್ಲ ೧೯

ಸಿರಿಹರಿ ಕರಕಂಡೇ ಅಣ್ಣಂದಿರು ಸಿವಕಳಕೇ ಹೋಗಿರುವಾರಲ್ಲ
ನಕುಲಾಲೋ ಸಾದೇವ್ರ ಚಿಕ್ಕಣಕಿ ಬಿಳ್ಳನ್ನೇ ಕುಯ್ದೇ
ಬಾಯಲ್ಲೇ ಇಕ್ಕಿದ್ದ ಕರಟ್ನಗೇ ಗುತ್ತಿನ್ನೇ ಆಗಿರುವಾದಲ್ಲ
ಆಗೇಲೋ ಸಿರಿಕರಟ್ಣ ನಾನೂಲು ಸಿವಕಳಕೆ ಬರುದಲ[೧೩]
ನಕುಲಾಲೋ ಸಾದೇವ್ರ ಚಿಕ್ಕಣಕಿ ಬಿಳ್ಳನ್ನೇ ಕುಯ್ದೊಲೋ
ಬಾಯಲ್ಲಿ ಇಕ್ಕಿದ್ದ ಒಗದಾರೇ ನಾ ಬತ್ತಿ ಅಂದಿರುವಾನಲ್ಲ
ನಕುಲ ಸಾದೇವ್ರೋ ನುಂಗೀದ ಬಿಳ್ಳ ಉಗದಿರುವಾರಲ್ಲ.
ಸಿರಿಹರೆ ಹೋಗಿರುವಾರೇಗೇ ಸುಟ್ಟೇ ಬೂದಿ ಮಾಡಿರುವಾರಲ್ಲ
ಎಲ್ಲರೂ ತಮ್ಮಾಲು ಮನಗಿನ್ನೇ ಬಂದಿರುವಾರಲ್ಲ. ೨೦

೧೧. ನೆನಪಾಗಿ ೧೨. ಕಿರು ಬೆರಳು ೧೩. ಬರುವದಿಲ್ಲ

೩. ದ್ರೌಪದಿ

ಅಣ್ಣ ಶಿವಲಿಂಗ ಶಿವರಾಯನೆ,
ತಂಗೀಯೇ ಬಟ್ಟಲ ಕಣ್ಣಿನ ದ್ರೌಪತೆ
ಅಣ್ಣ ತಂಗಿ ಕೂಡೇ ನಾಗೋರಾಬಯ್ಲೀಗೆ
ಹಾಣಿ ಸೋಡೀನಾ ಆಟಾ ಆಡೂಕೇ ಹೋಗಿರುವಾರಲ್ಲ ೧೧

ನಿಚ್ಚದಿನದಲ್ಲೇ ಆರೂ ತಾಸೀಗೆ ಮನೆಗೇ ಬರುವಾರ
ತಣ್ಣೀರ ಸಾನವ[೧] ತಪ್ಪಾದೇ ಮಾಡೂವಾರೇ
ಅಣ್ಣ ತಂಗೀಯರಿಬ್ಬರು ಕೂಡಿಕಂಡೇ
ತುಳಸಿಸೇವಮ್ಮಾ[೨] ಪೋಜಿ[೩]ಗಿಯ್ದಿರುವಾರೇಗೂ[೪]
ಅಣ್ಣತಂಗಿಯೇ ಇಬ್ಬರೂ ಕೂಡಿಕಂಡೇ
ಉಂದುಎಲಿಮ್ಯೆನೇ ಕುಳ್ತೇ ಓಟಾವ[೫] ಮಾಡುವಾರ
ಓಟವ ಮಾಡಿಕಂಡೇ ಮತ್ತೂ ನಾಗೋರಬಯ್ಲೀಗೇ
ಹಾಣಿಸೋಡಿನಾಟಕೆ ನಿಡದಿರುವಾರೇಗೂ ೧೨

ಅತ್ತೀಸೋದರದವ್ರ ಕಯ್ಲುವ್ರ[೬] ಅಂಬವ್ರ
ಹಿಣ್ಣಾಕೇಳೂವಾಕೇ ಬಂದಿರುವಾರೇಗು
ಅದ್ರತಾಯೀಯೇ ಗುರುಗುಂಜೇ ಗುರುದೇವೆ
ಅಟ್ಟೂದೋರಿಂದೇ[೭] ನೋಡಿರುವಾಳಲ್ಲ.

ತನ್ನಾಅಣ್ಣನ ಮಗನೇ ಬರ್ತೀಯಾಲಂದು
ಪಟ್ಟೀಯಾಮಂಚಕೇ ಕುಡಕುಡ್ಗೆ[೮] ಹಾಸುವಾಳ
ಹಸುವೀಗೆ ಹಾಲ ನೀಡುವಾಳ,
ತಿನಸೀಗೆ[೯] ಬ್ಯೆಳಿಬೆಲ್ಲ ನೀಡಿರುವಾಳ ೧೩

ಅಣ್ಣನ ಮಗನೇ ದುರ್ವಿಸ್ಟ ದುರ್ವಿದಾನ
ಕಯ್ಕಾಲ ಮೊಕವಾ ತುಳದೇ ಪಟ್ಟದಾ
ಮಂಚದಮ್ಯೆನೇ ಕುಳಿತಿರುವಾನೇಗೂ ೧೪

---

೧. ಸ್ನಾನ ೨. ಶಿವಮ್ಮ ೩. ಪೂಜೆ ೪. ಮಾಡುತ್ತಿದ್ದರು ೫. ಊಟವನ್ನು ೬. ಕೌರವರು ೭. ಅಷ್ಟು ದೂರದಿಂದ ೮. ಕೊಡವಿ ೯. ತಿನ್ನಲು

ಇಲಕೇಳ ನನ್ನತ್ತೆ ನನ್ನ ಬಾವನೇ ಶಿವಲಿಂಗ ಶಿವರಾಯ
ಇಲ್ಲೀಗೇ ಹೋಗೀನೇ ನೋಡ
ನಾಗೋರಾ ಬಯ್ಲೀಗು ಆಟವನಾಡೂಕೇ
ಹೋಗರ[೧೦] ನನ್ನಳಿಯ ನೀಕೇಳ
ನಿನ್ಮನಿಯಾ ದಾಸೇರ[೧೧] ಕಳಸಾಲೇಬೇಕ
ನನ್ನಬಾವನ ಕರವಿತ್ತೇ[೧೨] ಕರಕಂಡೇ ಬರಬೇಕ
ಆಗಿನ್ನೇ ತುತ್ತೇ[೧೩] ದಾಸೇರ ಮಕ್ಕಳ
ಅತ್ತೇ ಕಳಗೀಸೇ ಕುಟ್ಟಿರುವಾಳಲ್ಲ ೧೫

ಅಟ್ಟುದೋರಿಂದೇ ಸಿವಲಿಂಗ ಸಿವರಾಯ ಕಂಡಿರುವಾನೇಗೂ
ಈ ಸುಗ್ಗೇ[೧೪] ಸಿವರಾತ್ರಿ ಬಿಸಲಲ್ಲೇ ನನ್ನ ಮನೆಯಾಳೂ ದಾಸೇರ
ಯಾಕೇ ಬತ್ತರಂದೇ ಮುಂದೆ ಮುಂದೆ ಬಂದಿರುವಾನೇಗೂ
ಇಲಕೇಳ ಸ್ವಾಮಿ ನಿಮ್ಮಮನೆಗಿನ್ನೇ ಯಾರೋ ಬಂದರ[೧೫]
ನಿಮ್ಮ ಕರವಿತ್ತೇ ಕರಕಂಡೇ ಬಾ ಅಂದಿರುವಾರೇಗೂ ೧೬

ನಮ್ಮ ಮನಗಿನ್ನೇ ಬಂದವರೇ ಯಾರಂಬುದ ತಿಳಿಯಿತೇಗೂ[೧೬]
ನನ್ನ ಬಾವನೇ ದುರ್ವಿಸ್ಟ ದುರ್ವಿದಾನನೇ ಬಂದಿರುವಾನೇಗೂ
ನನ್ನ ತಂಗಿ ದ್ರೌಪತೀ ಹಿಣ್ಣಾಕೇಳೂಕೇಲಾಗಿದ್ದೇ
ತಾನು ಅತ್ತೀಯ ಸೋದ್ರದವರು ಬಂದಾರು ಕುಡುವಾದಿಲ್ಲ[೧೭]
ಮಾವ್ನ ಸೋದ್ರದವರು ಬಂದಾರು ಕುಡುವಾದಿಲ್ಲ
ದ್ರೌಪತಿ ತನಗೇ ತಂಗಿಯು ಒಬ್ಬಳೇ
ಗಂಡುಯಾಸಾನೇ ಇಟ್ಟೀಕಂಡು
ತನ್ನೊಡನೆ ತಾನೇ ಇರಸೀಕಂಬೇ ಅಂದಿರುವಾನೇಗೂ ೧೭

ಆಗಿನ್ನೇ ತುತ್ತೇ ದಾಸೇರಮಕ್ಕಳ ತಿರ್ಗೇ[೧೮]ಮನ್ಗೇ ಬಂದಿರುವಾರ
ಇಲಕ್ಯೆಳೇ ನನ್ನಮ್ಮ ಗುರುಗುಂಜೀಯಮ್ಮ ನಿನ್ನಾಲು ಮಗದೀರ
ಅತ್ತೀಸೋದರಕು ಕುಡುವಾದಿಲ್ಲ ಅಂಬರ[೧೯]
ಮಾವನ ಸೋದರಕು ಕುಡುವಾದಿಲ್ಲ ಅಂಬರ
ತನ್ನೊಡನೆ ತಾನೇ ಇರಸೀಕಂಬೆ ಅಂದರ ೧೮

ಆಗೇದುರ್ವಿಸ್ಟ ದುರ್ವಿದಾನಗೇ ಕುಳತಲ್ಲೆ ಸಿಟ್ಟು ಬಂದಿರುವಾದ
ಕೊಟ್ಟ ಹಾಲು ಸಕ್ಕರೆಯ ಮಿಲಿಯಾಲಿಲ್ಲ[೨೦]
ತಟ್ಟಿ ಬ್ಯೆಳೆ ಬೆಲ್ಲದ ಮಿಲಿಯಾಲಿಲ್ಲ
ತನ್ನರಮನಗೇ ಇದ್ದೇ ನಿಡದಿರುವಾನೇಗೂ[೨೧] ೧೯

---

೧೦. ಹೋಗಿದ್ದಾರೆ ೧೧. ಆಳನ್ನು ೧೨. ಕರೆದು ೧೩. ಆಳು ೧೪. ಸುಗ್ಗಿ ೧೫. ಬಂದಿದ್ದಾರೆ ೧೬. ತಿಳಿಯಿತೀಗ ೧೭. ಕೊಡುವದಿಲ್ಲ ೧೮. ತಿರುಗಿ ೧೯. ಅನ್ನುವರು ೨೦. ತಿನ್ನಲಿಲ್ಲ ೨೧. ಎದ್ದು ನಡೆದನು

ಆಗಿನ್ನೇ ದುರ್ವಿಸ್ಪ ದುರ್ವಿದಾನನೆ ಬಂದುದಸುದ್ದೀಯಕೇಳಿ
ಪಾಂಡವರಾ ಅರ್ಜೂನ ಬಂದಿರುವಾನಲ್ಲ
ಗುರುಗುಂಜೆ ಗುರುದೇವ ಅಮ್ಮ ಒಳಗಿಂದೆ ಅಂಗಳಕೆ ಬಂದಿರುವಾಳ
ಗದ್ದೀಬಯ್ಲಲ್ಲೇ ಬರುವಾ ಅರ್ಜುನನ ಕಂಡಿರುವಾಳಲ್ಲ
ತನ್ನ ಅತ್ತೂಗಿ ಮಗನೇ ಬತ್ತೀಯಾ ನೋಡಂಬಾಳ
ಗಿಂಡೀ ತಕ್ಕಂಡೇ ಓಡೋಡೇ ಬಂದಿರುವಾಳ
ಪಾದಾತುಳುವಾಕೇ ಹಣನೀರ[೨೨] ಇಟ್ಟಿರುವಾಳ
ಪಟ್ಟೀ ಮಂಚನೇ ಕುಡಕುಡಗೇ ಹಾಸೂವಾಳ
ದಾವರಕೇ[೨೩] ಹಾಲನ್ನೇ ಗಿಂಡೀಲೆ ತಂದಿಟ್ಟಾಳ
ತಿನಸೀಗೆ ಬೈಳಿ ಬೆಲ್ಲವ ಇಟ್ಟಿರುವಾಳ ೨೦

ಅರ್ಜುನ ಬಂದು ಪಾದಾವ ತುಳದು
ಪಟ್ಟೀಮಂಚದ ಮ್ಯೆನೇ ಕುಳತಿರುವಾನಲ್ಲ.
ಇಲ ಕೇಳನನ್ನತ್ತೆ ನನಬಾವಾನೇ ಇಲ್ಲಿಗೇ ಹೋಗಿಯಾ
ನಿನ್ನ ಬಾವಾನೇ ನಾಗೋರ ಬಯ್ಲೀಗೆ
ಆಟಪಾಟವ ನೋಡುಕೆ ಹೋಗಿರುವಾನಂಬಾಳ
ದಾಸೇರಕೋಡೇ ಕರವಾ ಕಳಸಂಬಾನಲ್ಲ. ೨೧

ನಾಗೋರಬಯ್ಲೀಗೆ ದಾಸೇರ ಹೋಗಿರುವಾರೇಗು
ಇಲಕೇಳಿಸ್ವಾಮಿ ನಿಮ್ಮನಿಗೇ ಯಾರೋ ಬಂದರ
ಬ್ಯೇಗೇ ಬರುವಾಕೇ ಕರವ ಕಳಸರ ೨೨

ಅವ್ರಬಂದಾ ಸುದ್ದೀಯೇ ತನಗಿನ್ನು ತಿಳಿಯಿತು
ಪಾಂಡವರ ಕಡಿಯ ಅತ್ತೀಯ ಮಗನೋ
ಅರ್ಜುನನೇ ಬಂದಿರುವಾನಂದಿರುವಾನಲ್ಲ.
ತಮ್ಮ ತಂಗಿ ದ್ರೌಪತಿ ಹಿಣ್ಣಾಕೇಳೂಕೇ ಬಂದಿರುವಾನೇಗೂ
ಅತ್ತೀ ಸೋದರಕು ಕುಡುವಾದೇ ಇಲ್ಲ
ಮಾವನ ಸೋದರಕು ಕುಡುವಾದೇ ಇಲ್ಲ
ನನ್ನ ತಂಗೀಯು ಒಬ್ಬಳೇ ಎದ್ದವ್ಳ
ಗಂಡೂಯಾಸಾನೇ ಕಟ್ಟೀಕಂಡೇ
ತನ್ನೊಡನೇ ತಾನು ಇರಸೀಕಂಬೇ ಅಂದಿರುವಾನಲ್ಲ. ೨೩

ಆಗಿನ್ನೇ ತುತ್ತೇದಾಸೇರ ಬಂದ್ ಹಂಗೇ ಅಂದಿರುವಾರ
ನೋಡಮ್ಮ ನಿನ್ನಾಮಗದೀರ ಯಾರಿಗೂ ಕುಡುವಾಕೇ ಆಗಾ ಅಂದಿರುವಾರ
ಆಗಿನ್ನೇ ಸಿಟ್ಟೂ ಕೋಪಾದಿಂದೂ ಅರ್ಜುನ

೨೨. ಸ್ವಚ್ಛನೀರು ೨೩. ನೀರಡಿಕೆಗೆ

ಹಾಲು ಸಕ್ಕರಿಯಾ ತೆನ್ನಾಲೇ[24] ಇಲ್ಲ
ಸಿಟ್ಟೊ ಕ್ವೊಪಾದಿಂದೇ ಇದ್ದೇ ನಿಡದಿರುವಾನಲ್ಲ. ೨೪

ಅರ್ದಾದಾರೀಗೇ ಹೋಗಿ ನಿಲ್ತೀಕಂಡಿರುವಾ[25]
ಸಿಟ್ಟುಕ್ವೊಪಾದಿಂದೇ ಹನ್ನೆಯ್ಡು ಉರಸಾಕೇ[26]
ಹೆಣ್ಣು ಸಂಪತಿಯೋ[27] ಆಗಾಲೇ ಮಿಯ್ನೆರದೆ ನೆಲ್ಲಲೇ[28]ನೋಡ
ಕಣ್ಣಾನೇಕಟ್ಟು ಬಿನ್ನನೇ ಬಿಗದು[29]
ಗೋರಂಬು ಆರಣಿ[30]ಬೆಟ್ಟಾದಲ್ಲೇ, ಬಿಟ್ಟೇಬರುವಂಗೆ ಆಗಲೇ
ತಮ್ಮುರ್ತು[31] ಯಾರ್‍ಯಾರಿಗು ಸಿಕ್ಕಬಾರಾವೇ
ಎಂದೇ ನೆಲವ ಬಡ್ಡೀಕೇ[32] ಬಂದಿರುವಾನಲ್ಲ. ೨೫

ಅಣ್ಣಾತಂಗೀಯೇ ನಾಗೋರಾ ಬಯ್ಲಲ್ಲಿಂದು
ಇಬ್ಬರೂ ಮನ್ಗೇ ಬಂದಿರುವಾರಿನ್ನೇ
ತಣ್ಣೀರ ಸಾನಾವಾ ಮಾಡೂವಾರ
ತುಳಸೇಯಮ್ಮನಾ ಪೋಜ್ಯವಗಿಯ್ದಿರುವಾರ
ಇಬ್ಬರು ಕುಳ್ತು ಉಂದು ಎಲಿಮ್ಯೆನೇ ಓಟಾಮಾಡ್ವರ ೨೬

ಓಟಾವಾ ಮಾಡೇ ಎಂಜಲಾ ಕಯ್ಬಾಯ ತುಳುವಾರ
ಪಟ್ಟೀಮಂಚದ ಮ್ಯೆನೇ ಕುಳ್ತೇ ಕವ್ಳಮಿಲುವಾರ
ಇಲಕ್ಯೆಳೇ ನನತಂಗಿ ಎಳ್ಯಾವೇ ಆಯೀತ
ತಾವೂ ಹೋಗ್ವಾನೇ ನಾಗೂರಬಯ್ಲೀಗೆ ನೋಡ ೨೭

ಇದ್ದೇ ಸುಂಗಾರ ಆಗುವಳ ತಂಗೇ
ತಾಯೇ ಅಂಬಳ ಗುರುಗುಂಜೇ ಅಮ್ಮನೇ
ಇಲಕೇಳೇ ನನಮಗಳೇ ನೀಕೇಳ
ಇಟ್ಟೊ ದಿನಂಕ್ರೀಗೆ[33] ಸೆಣ್ಣವಳೇ[34] ಆಗಿದ್ದದೆ
ಏಗೂ[35] ಸೆಣ್ಣವಳೇನೇ ನೀನ?
ಹತ್ತೊ ಹನ್ನೆಯ್ಡು ಉರಸಾವೇ ಆಗೀಬಂತೇನೋಡ

ನಿನ್ನಣ್ಣನೇ ಒಬ್ಬಗೇ ಹೋಗಿಬರಲೇ ಮಗಳೇ ನೋಡ
ನೀ ಹೋಗೆ ನಿಂಬೀಯ ಬನಕು, ಎಯ್ಡೆಯ್ಡೇ[36]ಕೊಡ ತಿಗದೇ[37]
ಮುಗ್ದೇ[38] ನೀರ್ ಹುಯ್ದೇ[39]ಬಾ ಅಂದಿರುವಾಳೇಗೂ। ೨೮

---

೨೪. ತಿನ್ನಲೇ ೨೫. ನಿಂತುಕೊಂಡನು ೨೬. ವರ್ಷಕ್ಕೆ ೨೭. ಹೆಣ್ತನ ಬರಲಿ ೨೮. ಋತುಮತಿಯಾಗಿ ನಿಲ್ಲಲಿ ೨೯. ಬೆನ್ನು ಬಿಗಿದು ೩೦. ಘೋರ ಅರಣ್ಯದಲ್ಲಿ ೩೧. ತಮ್ಮ ಹೊರತು ೩೨. ನೆಲಬಡಿದು ೩೩. ಇಷ್ಟು ದಿನಗಳವರೆಗೆ ೩೪. ಸಣ್ಣವಳು ೩೫. ಈಗಲೂ ೩೬. ಎರಡೆರಡು ೩೭. ತೆಗೆದು ೩೮. ಮೊಗೆದು ೩೯. ಹೊಯ್ದು

ಅಣ್ಣನೇ ನಾಗೋರಾ ಬಯ್ಲೀಗೆ ನಿಡದಿರುವಾ
ತಂಗೀಯೇ ಅಂಬವ್ವ ಹಗ್ಗಕೊಡಪಾನ ತಕ್ಕಂಡೇ
ನೀರಾನೇ ಹುಯ್ಯೋಕೇ ಹೋಗಿರುವಾಳಲ್ಲ.
ಎಯ್ದುಕೊಡಪನವ ಮುಗದು ಎಯ್ದುಸಿಸಿಗೆ ಹೊಯ್ದಾಳೆ
ಮತ್ತೊಂದು ಕೊಡಪನ ಮುಗದು ಮ್ಯನೇ ತಂದಿಡುವಾನೇ ಮಿಯ್ನಿರ್ದೇ ನೆಂತಾಳ[೪೦]
ನಿಂಬೀಯಾ ಬನದಡಗು ತಲಿಯಾನೇ ತಗ್ಗೀಸೇ ಬಾಲೇ ರೌಪತೇ
ನಿಂತಿರುವಾಳೇಗೂ[೪೧]
ತನ್ನ ಮಗಳು ರೌಪತೇಹೋಗೇ ಬಾಳೂ ಹುತ್ತಾಯಿತ[೪೨]
ಇನ್ನೂ ಮನಗೇ ಬರಲಿಲ್ಲ ಹೋಗೇನೋಡ್ಬನ್ನಿ ಅಂದಿರುವಾಳೇಗೂ
ಆಳೂ ಮಕ್ಕಳು ಹೋಗಿರುವಾರೇಗೂ ೨೯

ಕಂಚೀಯ ಬನದಲ್ಲೇ ತಲಿಯಾನೇ ತಗ್ಗೀಸಿ ನಿಂತಿರುವಾಳೇಗು
ಯಾಕಮ್ಮ ಯಾಕೇ ನಿಂತಿರಿ ತಲಿಯಾನೇ ತಗ್ಗೀಸಿ
ಬಾಳೂ ವಾಕ್ಸದಿಂದ ಕೇಳೂವಾರ
ಬಾಯುಡ್ದೇ ಮಾತಾನಾಡಲೇಯಿಲ್ಲ ೩೦

ತುತ್ತೇದಾಸೇರ ಮಕ್ಕಳ ತಿರ್ಗ್ಗೇ ಮನ್ಗೇ ಬಂದಿರುವಾರೇಗೂ
ಅಮ್ಮಾ ನಿಮ್ಮಾ ಮಗಳ ಕಂಚೀಯಾ ಬನದಲ್ಲೇ
ತಲಿಯಾ ತಗ್ಗೀಸೇ ನಿಂತಳ, ಮಾತಾನಾಡಿದ್ರು ಮಾತಿಲ್ಲ. ೩೧

ನಿಮಗೂ ಏನೆಂದೇ ತಿಳುವಾದೇಇಲ್ಲ
ತನಮಗಳು ಮಯ್ನೆರದೇ ನೆಂತಾಳ, ತಾನ್ಹೆಂಗೇ ಹೇಳೂವಾಳ.
ಅದ್ರಕರವಿತ್ತೇ ಕರಕಂಡೇ ಬನ್ನೀರಿ
ಬಚ್ಚಲ ಹರವೀಗೇ[೪೩] ಬಿಂಕೀನೇ[೪೪] ಉಟ್ಟಿರಿ[೪೫]
ತಲದಿಳಿ[೪೬]ಮೀಯ್ಸಿರಿ, ಪಟ್ಟೆಲೋ ಪೀತಾಮ್ರ ಬೇಕಂದಾರೇಗೂ
ಚಿನ್ನಾನೇ ಆಭರಣ ಎಡ್ಲೇಬೇಕಂದಾರೇಗೂ[೪೭] ೩೨

ಕೇಸಕ್ಕಿ ತ್ಪೋಟದಾ ಜಾಂಜಿಜೂಂಜಿನೇ,
ಹಿಂಗಾರ ಕೊನಿನೇ ಸ್ಪೊಡಸಲೆಬೇಕಂಬಾರೇಗೂ[೪೮]
ತನ್ನಾಲೋ ಮಗನೇ ಬತ್ತೀಯಾ[೪೯] ನೋಡೂತಿ[೫೦]
ಅರದಾಲಾದೀಗೇ ಹೋಗಿರುವಾಳೇಗೂ ೩೩

ಆಗೇ ಸಿವಲಿಂಗ ಸಿವರಾಯ ಬಂದಿರುವಾನೇಗೇ
ಹೊನ್ನಾದಡಪ್ಪಲ್ಲೇ[೫೧] ನಿಂತಿರುವಾನೇಗೂ

೪೦. ಮಯ್ನೆರೆದು ನಿಂತಳು ೪೧. ಕರೆದಳು ೪೨. ಬಹಳ ಹೊತ್ತಾಯಿತು ೪೩. ಹಂಡೆ, ಪಾತ್ರೆ ೪೪. ಬೆಂಕಿ ೪೫. ಹಾಕಿರಿ, ಒಟ್ಟಿರಿ ೪೬. ತತಿಸಹಿತವಾಗಿ ೪೭. ಹಾಕಲೇಬೇಕೆಂದರು. ೪೮. ಮುಡಿಸಲೇಬೇಕೀಗ ೪೯. ಬರುತ್ತಾನೆಯೇ ೫೦. ನೋಡುತ್ತೇನೆ ೫೧. ಬಂಗಾರದ ದಡಪೆಯಲ್ಲಿ

ಇಲಕೇಳೋ ನನ್ನಾ ಮಗನೇ ಕೇಳ
ಚಿತ್ತೂರಿ[೫೨] ಕುಲಕೇ ಬಂಗವಾ ತಂದೀಯೋ
ನಿನ್ನಾತಂಗೇ ರೌಪತೇ ಮಯ್ನಿರ್ದೇ ನಿಂತಳ
ಅತ್ತೇಲು ಸೋದರದವ್ರ ಬಂದಾರೂ ಕೊಡದ್ಹೊದೆ ನೀನ
ಮಾವ್ನ ಸೋದರದವ್ರ ಬಂದಾರೂ ಕೊಡದ್ಹೊದೆ ನೀನ
ಇನ್ನೇನಾ ಮಾಡೂತೀ ನೋಡಂದಾಳೇಗೂ ೩೪

ಹರಹರ ಸಿವಸಿವ ಇನ್ನೇನು ಮಾಡಲೇ ತಾನ
ಬಟ್ಟೀಯಾ ಮಣ್ಣಾನೇ ಬರಗಿ ಬಾಯಲ್ಲೇ ತುಂಬೂವ
ಕಣ್ಣೀರ ಅಂಬೂವಾದ ಕಚ್ಚರಕೀ[೫೩] ಆಗೂವಾದ
ದಡಪೀಯ ಗಳದೂ ಮನಗೂ ಬರಲೇಯಿಲ್ಲ.
ಅಲ್ಲಿಂದೇ ದೊಡ್ಡಾ ದೋಸೇರಾ ಮನೆಗಿನ್ನೇ ನಿಡದಿರುವಾ ೩೫

ಇನ್ನಿನ್ನು ಬಾರದಾ ಸೊಮೀಸಿವಲಿಂಗ ಸಿವರಾಯ
ಇಂದೇ ತಮ್ಮನಗೂ ಬಂದಿರುವಾನಂದೇ
ಬಾಳು ಉಪಚರವ[೫೪] ಮಾಡೂವರ ದೋಸೇರ[೫೫]ಮನಿಲೇ ೩೬

ಉಪಚಾರ ಬ್ಯೆಡಾ ತನಗೇ ನನ ತಂಗೇ ಮಯ್ನಿರದೇ ನಿಂತಳ
ನಿಮ್‌ದೊಡ್ಡ ಪಂಚಾಂಗ ತಿಗದೋದೇ ಹ್ಯೆಳಲೆ ಬೇಕ ತನಗೇ ೩೭

ನಿನ್ನಾಲೋ ತಂಗೀಯೇ ನೋಡದೇನಿದೆ ಮಯ್ನಿರದೇ ನಿಂತಳ
ಕಣ್ತುಂಬೇ ನೋಡ್ವಾಕೇ ಆಗನೀನ ಕಿವಿಯಲ್ಲು ಕೇಳ್ವಾಕೇಯಿಲ್ಲ
ಕಣ್ಣನೇ ಕಟ್ಟೇ ಬಿನ್ನನೇ[೫೬] ಬಿಗದು ಯಾಳೀಯ[೫೭] ಕಳಿಯದೆ
ದೊಡ್ಡಾಹುಲಿಕಯ್ದೇಯಿದ್ದಾ[೫೮] ಬೆಟ್ಟಾದಲೆ ಬಿಟ್ಟೇ ಬರಬೇಕ ೩೮

ಹರಹರ ಸಿವಸಿವ್ನೇ ಇನ್ನೇನು ಮಾಡಲೆ ತಾನ
ತನ್ನ ತಂಗೀಯಾ ಮೊಕವ ತಾನೂ ನ್ವೋಡದೆ
ಈ ಸೊಟ್ಟ[೫೯] ಜಿಲ್ಮವ[೬೦] ತಕ್ಕಂಡೇ ಹ್ಯಾಂಗೇ ನಾಯಿರುವೆ
ಅಂದೇ ಪ್ಯೆಟೀ ಪಟ್ನಕೇ ನಿಡ್ದಿರುವ ಸಿವಲಿಂಗ ಸಿವರಾಯ. ೩೯

ನಾಕಯ್ದು ಜನರಾ ಆಳೂಮಕ್ಕಳನೇ ಹುಡಕೀನೇ
ಚಿನ್ನಾಬರಣನೇ ಉಂದು[೬೧] ಹೊರೆಯನ್ನೇ ಕಟ್ಟಿರುವ
ಎಲಿಯಡಕೇ ಉಂದೂಹೊರಿಯನ್ನೇ ಕಟ್ಟಿರುವ
ನಾಕಯ್ದು ಜನ್ರಾ ತಲಿಯಮ್ಯೆನುಂದುಂದು
ಹೊರಿಯನೇ ಕಟ್ಟೇ ಹುರಸೀಕಂಡ್[೬೨] ಮನ್ಗೇ ಬರುವಾನೇ. ೪೦

೫೨. ಕ್ಷತ್ರಿಯ ೫೩. ಕಾಲುವೆ ೫೪. ಉಪಚಾರ ೫೫. ಜೋಯಿಸರ ೫೬. ಬೆನ್ನನ್ನು ೫೭. ವೇಳೆಯನ್ನು ೫೮. ಕರಡಿಯಿದ್ದ ೫೯. ಸುಟ್ಟ ೬೦. ಜನ್ಮವನ್ನು ೬೧. ಒಂದು ೬೨. ಹೊರಿಸಿಕೊಂಡು

ಒಳಗಿಂದೇ ಹೆರಗೇ ಬಂದಿರುವಾಳ ತಂಗೇ ರೌಪತೇ
ಇಲಕೇಳೋ ನನ್ನಣ್ಣ ಇಟ್ಟೆಲ್ಲ ಸಾಯಿತವ[೧೩]ಯಾತಕೆ ತಂದಿ ೪೧

ನನತಂಗಿ ರೌಪತಿ ನೀ ಕೈಳೇ ನಿನ್ನಣ್ಣನ ಮಾತಾ
ನಮಗಿಂತು ಮುಂಚುಂದು[೧೪] ಅಕ್ಕ ಹುಟ್ಟಳಕಡ[೧೫]
ಅಕ್ಕನ ಮಗಳೋ ಮುದ್ಯಾವೇ ಕಡ[೧೬]ನೋಡ
ಏಳ್ಯಾವೇ[೧೭] ಬಂದೀದ ನನಗೇ ನೋಡಂದಾನೇಗೂ
ನಾಳಾಗೇ ಹ್ವೊಗಲೇಬೇಕ ನನತಂಗಿ ನೋಡ ೪೨

ಅಣ್ಣನ ನುಡಿಕೇಳಿ ಬಟ್ಟಲ ಕಣ್ತಂಗಿ ನುಡಿದಾಳೇಗೂ
ನಾನು ಬರತಿ ನನ್ನಣ್ಣ ನೋಡಂಬಾಳೇಗೂ ೪೩

ಆಯಿತು ನನ್ನಾತಂಗಿ ದುರ್ಪತೀ ನೋಡ
ಅದ್ಕೇ ಅಣ್ಣಾನೇ ನಿನ್ಗೆಲ್ಲಾ ತಂದೀನೇ ನೋಡ
ದಾತೂರಿ[೧೮] ಬೆಳಗೇ ಆಗಿರುವಾದೇಗೂ
ಹೊತ್ತಾರಾ ಮುಂಚಿದ್ದೆ ಇಲಕೇಳನನತಂಗಿ
ಅಕ್ಕನಾ ಮನಿಯೇ ಬಾಳಟ್ಟು ದೋರುದೋರೇ[೧೯]
ಆದಟ್ಟೊ ಬ್ಯೆಗೇ ತಯ್ಯಾರಾ ಆಗಂಬಾನೇಗೂ
ಇಲಕೇಳ ನನತಾಯೇ ನನತಂಗೀಗೇ
ಹಸ್ವೇ[೨೦] ಆಗೂದ ನೋಡಂಬಾನೇಗೂ ೪೪

ಉಂದೂಲು ಸಿದ್ದೇ ಸೆಣ್ಣಕ್ಕಿ[೨೧] ಉಂದೂಲಸಿದ್ ಮುಸ್ರನೇ[೨೨]ಹುಯ್ದೆ
ಉಂದೂಲು ಬುತ್ತೀನೇ ಕಟ್ಟಬೇಕಂಬಾನೇಗೂ ೪೫

ಸೆಣ್ಣಕ್ಕಿ ಹುಯ್ದೇ ಅನ್ನವಮಾಡಿ ಉಂದೂಸಿದ್ ಮುಸರನಿಕ್ಕಿ
ಉಂದು ಬುತ್ತಿಯನೆ ತಾಯಮ್ಮ ಕಟ್ಟಿರುವಾಳೇಗೂ
ಇಲಕೇಳೇ ನನತಂಗಿ ಬೇಕಾದ ಬಂಗರವ ಇಟ್ಟೀಕೋ
ಬ್ಯೆಡದಿದ್ದದ್ದೆಲ್ಲ ಉಂದೂಬದಿಗೇ ರಾಸಿಕುಡಂಬಾನೇಗೂ[೨೩]
ಬೇಕಾದ ಸೇರೀನೇ ಉಟ್ಟೀಕೋ ಬ್ಯೆಡಾದಟ್ಟೆಲ್ಲಾ
ಉಂದೂಬದಿಗೆ ದೂಡಿ[೨೪]ಕ್ಕೆ ತಂಗೀನೋಡ ೪೬

ಬೇಕಾದ ಹೂಂವನ್ನೇ ಮುಡ್ಡೀಕೋ ಬ್ಯೆಡದೇಯೆದ್ದದಾ
ಉಂದೂ ಬದಿಗೇ ನೀಯಿಕ್ಕೇ ತಂಗಿಯೆಂಬಾನೇಗೂ
ಅವೆಲ್ಲ ಕೂಡೀಸೇ ಉಂದ್ ಪೊಟ್ಳೇನೇ[೨೫]ಕಟ್ಟಿಕಂಬೆ

---

೧೩. ಸಾಹಿತ್ಯ, ಸಾಮಗ್ರಿ ೧೪. ಮೊದಲೊಂದು ೧೫. ಹುಟ್ಟಿದ್ದಾಳಂತೆ (ಗಡ>ಕಡ) ೧೬. ಮದುವೆಯಂತೆ ೧೭. ವೀಳ್ಯ ೧೮. ರಾತ್ರಿ ೧೯. ದೂರ ೨೦. ಹಸಿವೆ ೨೧. ನಿದ್ದೆಸಣ್ಣಕ್ಕಿ ೨೨. ಮೊಸರು ೨೩. ರಾಸಿಹಾಕು ೨೪. ತಳ್ಳು ೨೫. ಹೊರೆ, ಗಂಟು

ಅಕ್ಕನಾ ಮಕ್ಕೀಗರು ಆಗೂದೇ ತಂಗೀ ಕೇಳ
ಅಟ್ನೂನೂ[೭೬] ತಲೆಯಾ ಮ್ಯೆನ್ ಹುತ್ತೀಕಂಬೆ ನೋಡ. ೪೭

ಅಟ್ನೂನು ಉಂದು ಪೊಟ್ಲೀನೇ ಕಟ್ಟಿರುವರ
ಇಲಕೇಳ ನನತಾಯೆ ನಾವ್ದೋರೇ ನಿಡಿಯಲೆಬೇಕ
ನನಗುಂದು ಎಲಿಯನೇ ಮಾಡೇಬಡ್ಸ
ದುರ್ಪತೀಗುಂದ್ ಎಲಿಯನೇ ಮಾಡೇಬಡ್ಸ
ಎಯ್ಡೆಲಿಯಾ ಮಾಡೇ ಅಮ್ಮ ಬಡಸೂವಾಳ
ಅಣ್ಣತಂಗಿಯೇ ಓಟಾಕೇ ಕುಳ್ತಿರುವಾರೇಗೂ
ಇಟ್ಟೊಂಡಾರು ಅಣ್ಣನ ಹೊಟ್ಟೆಯು ತುಂಬುವದಿಲ್ಲ
ಅಣ್ಣ ಒಂದ್ ಮುದ್ದೀನೇ ತಂಗೀಗೆ ಕುಟ್ಟಿರುವ
ಆಗೇತಂಗೀ ಹೊಟ್ಟೇ ತುಂಬೇ ತೇಗುವಾದ
ತಂದುಂದು ಮುದ್ದೀನೇ ಅಣ್ಣಗೆಕೊಟ್ಟಳ ತಂಗಿ
ಅದನುಂಡೇ ಅಣ್ಣಾ ಹೊಟೆತುಂಬೆ ತೇಗುವಾನೇ ೪೮

ಇಲಕೇಳ ನನತಾಯೇ ನಾವ್‌ಹೋಗಿ ಬತ್ತವಂದಿರುವಾರೇಗೂ[೭೭]
ಅಣ್ಣಪೊಟ್ಲೂಲೀ ನಿಗ್ದೇ ತಲಿಮ್ಯೆನೇ ಹುತ್ತೀಕಂಡಿರುವಾನೇಗೂ
ಇಲಕೇಳೋ ನನ್ನಣ್ಣ ನೀನೂ ಮುಂದಾಗ
ನಾನು ಹಿಂದಾಗೇ ಬರ್ತಿ ಅಂಬಾಳ

ಇಲಕೇಳೇ ನನತಂಗಿ ದಾರಿ ಮ್ಯೆನ್ ಕಂಡವ್ರ
ಗಂಡಾಹಿಂಡಾರಂದೇ[೭೮] ಹೇಳೂವಾರ
ನೀನು ಮುಂದಾಗೇ ನಾನು ಹಿಂದಾಗೇ ಹ್ವೊದರೆ
ಅಣ್ಣಾತಂಗೀಲಂದೇ ಹೇಳುವಾರ ನೋಡಂದಾನೇಗೂ
ಆಗೆಲೋ ತಂಗೇ ಮುಂದಾಗೇ ಅಣ್ಣ ಹಿಂದಾಗೇ ನಿಡದಾರಲೋ
ತಂಗಿ ಉಂದು ಪರ್ಲಾಂಗ ಮುಂದೆ ಹ್ವೊದಾಳೇ
ಅಣ್ಣ ಉಂದು ಪರ್ಲಾಂಗ ಹಿಂದೇ ಉಳಿತೀಯಾ
ಅರ್ದಾದಾರಿಯಲ್ಲೇ ತಂಗ್‌ಹೋಗೇನಿಲ್ಲುವಾಳ ೪೯

ನನ್ನಣ್ಣ ನೀಯಾಕೇ ಬ್ಯೆಗೇ ಬರುವಾದಿಲ್ಲ
ನಿನ್ನ ಕಣ್ಣೈಕೇ ನನ್ನಣ್ಣ ಕೆಂಪುಗೊಂಡಿಯ ಹೂಂವಾಂಗೇ
ನಿನ್ನ ಕಣ್ಣಲ್ಲೇ ಕಣ್ಣೀರ ಕೋಡೇಯಾಕೆ ಹರಿತೀದ ೫೦

---

೭೬. ಅಷ್ಟನ್ನೂ ೭೭. ಬರುತ್ತೇವೆ ಎನ್ನುವರು ೭೮. ಗಂಡ ಹೆಂಡತಿಯೆಂದು

ನಾಗೋರ ಬಯ್ಲಲ್ಲೇ ಹಾಣೀಗೆಂಡೀ[೭೯] ಆಡೂವಾಗೇ
ಗೆಂಡೀಯೇ ಬಾಳ ಬಲ್ಮೀಲೇ[೮೦] ಕಣ್ಣೀಗೆ ಹುಡಿತ[೮೧]ನೋಡ
ಅದರಿಂದೇ ಅಣ್ಣಗೇ ಬಾಳು ಕಣ್ಣಬ್ಯೆನಿಯವೆನೋಡ ೫೧

ಹ್ವೊದರೆ ಹ್ವೊದರೆ ಆ ಗುಡಿಯಾ ಹತ್ತೂತೇ ಈ ಗುಡಿಯಾ ಇಳಿಯೂತೆ
ತುಳಚಿಯಾ ಗುಡಿಯಾ ಕೆಳಗೆ ಹೋಗೇ ಮುಟ್ಟೂವಾರ
ಏ ನನ್ನಣ್ಣ ತಾನು ನಿಡಿಯಾಲಾರೆನೋ
ಕಣ್ಣೀಗೇ ನಿದ್ದೂರೇ ಬತ್ತೀದ[೮೨] ನನಗೇ
ಹೊಟ್ಟೀಗೆ ಹಸುವೇಲಾತೀದ[೮೩] ನೋಡಂಬಾಳ
ಉಂದು ಕಟ್ಟೀಯೇ ಇರಳೀಯ ಕಟ್ಟೀಯೇ
ಅಣ್ಣತಂಗೀಯ ಕುಳ್ಳಿಸಿಕಂಬಾನೇಗೂ
ಬುತ್ತೀನೇ ಬಿಡ್ಸಿನ್ನೇ ಕುಟ್ಟಿರುವ
ಆಗಟ್ಟು ಉಂಡಿನ್ನೇ ಇರುವಾಳ
ಕಚ್ಚರ್ಕಿಯಲ್ಲೇ ನೀರೋ ಹರಿತಿತ್ತ ೫೨

ಬಾಯನೇ ಕಯ್ಯನೇ ತಂಗೀದಾ ತುಳಸೀದಾ
ಕಟ್ಟಿಯ ಮ್ಯೆನೇ ಗಾಳಿ ಹವಿಗೇ ಕುಳಿತಿರುವಾರಿನ್ನೇ
ಇಲಕೇಳೋನನ್ನಣ್ಣ ನಂಗೇ ನಿದ್ದೂರೇ ಬತ್ತೀದ ನೋಡ
ಕಾಲಮ್ಯೆನೆ ಕಂಬೂಳಿ ಹಾಸಿಕಂಬ
ಕಂಬೂಳಿ ಮ್ಯೆನೇ ಮನಗೀಸಿಕಂಬ

ಮಾಯದ ನಿದ್ರೀನೇ ಹಾಕಿರುವ
ಕಾಲನೇ ಹಗ್ಗರಕೆ[೮೪] ತಪ್ಪೀಸಿಕಂಬ
ಕರಿಯಾ ಕಂಬುಗಳಿಗದ್ದುಗೀ ಮಾಡೇ ಮುಂದೇಲಿಟ್ಟಿರುವಾ
ಹುಲಿಕರಡೀಗೇ ತಾಕೀತ ಕುಟ್ಟಿರುವಾ[೮೫] ೫೩

ಕಡಮಿರ್ಗಕ್ಕೇ ತಾಕಿತವಾ ಕುಟ್ಟಿರುವಾ
ಏನೇನು ತಂಗೀಗೇ ಮುಟ್ಟೂಕೇ ಆಗಾಲಂಬಾ
ಪಾಂಡವಲರ್ಜುನಾಗೇ ಸಿಕ್ಕಲೇ ಬೇಕಂಬಾ
ದೊಡ್ಡಮರಹತ್ತೇ ತುರಿಯಂಬರಕೇ ಕುಳ್ತೀಕಂಬಾ ೫೪

ಪಾಂಡವ್ರ ಎಂಬವ್ರ ಬೆಟ್ಟ ಕಟ್ಟೂಕೆ ಹೋಗಿರುವಾರ
ಬೀಮ ಅರ್ಜೂನ ಸಕಲ ಸಾದೇವ ಧರ್ಮರಂಬವ್ರ

---

೭೯. ಗುಲ್ಲಿ ಡಂಡಾ, ೮೦. ಜೋರಾಗಿ ೮೧. ಹೊಡೆಯಿತು ೮೨. ನಿದ್ರೆ ಬರುತ್ತದೆ ೮೩. ಹಸಿವೆಯಾಗುತ್ತದೆ ೮೪. ಸಾವಕಾಶ ೮೫. ಎಚ್ಚರಿಕೆ ನೀಡುತ್ತಾನೆ

ಅಯ್ಯೊ ಜನವೇ ಅಡವೀ ಆರಣಿಕೇ ನಿಡ್ದಿರುವಾರೇಗೂ
ಬೀಮ ಸೇನನೇ ಏನಂದೇ ಹೇಳಿರುವ
ನಾವಟ್ಟು ಜನರೇ ಉಂದೂ ದಾರಿಯಲ್ಲೇ ನಡ್ದರೆ ಹ್ಯೆಂಗೆ
ಒಬ್ಬೊಬ್ಬರುಂದುಂದೇ ದಾರಿಯಲ್ಲೇ ಹ್ವೊಗಬೇಕ ೫೫

ದರ್ಮಾರೇ ಉಂದ್‌ದಾರ್‍ಯಲ್ಲೇ ನೆಡದಾರೇ
ಬೀಮಾನುಂದ್ ದಾರ್ಯಲ್ಲೇ ನಿಡ್ದಿರುವಾ
ಸಕ್ಲಸಾದೇವ್ರ ಉಂದೂ ದಾರ್ಯಲ್ಲೇ ನಿಡುವಾರ
ಅರ್ಜೂನಲಂಬವ್ನೇ ತಾನುಂದು ದಾರೀಲೇ ಬಂದಿರುವಾ
ರೌಪತೆಯೆದ್[೮೬] ದಾರೀಗೇ ಅರ್ಜುನನೇ ತಿರ್ಗಿರುವಾ ೫೬

ಅವ್ನೇ ಬಂದಾಮ್ಯೆನೇ ಅದ್ರಾಮೊಕದ್ ಕಟ್ಟೇ
ಅಣ್ಣ ಸಿವರಾಯ ಮಾಯಾದ ನಿದ್ರೀ ಸುಗ್ದಿರುವಾ[೮೭]
ಗುಲ್ಲು ಗೊಬ್ಬೀನೇ ಕುಡುವಾಳ ರೌಪತೇ
ಬಟ್ಟೀಯ ಮಣ್ಣನ್ನೇ ಬರ್‌ಬರ್ಗೇ ಬಾಯಲ್ಲಿ ತುಂಬೇ
ಏಪಾಪಗೆಟ್ಟವ್ನೇ ಅಕ್ಕಾನ ಮಗ್ಳ ಮುದ್ಯಾಲಂದು[೮೮]
ಕಣ್‌ಕಟ್ಟೇ ಬಿನ್ನಾ ಬಿಗ್ದೇ ಇಲ್ಲೊದೇನೀನ
ಏ ಲೋಬೇಗೆಟ್ಟವ್ನೇ ನಿಂಗ್‌ಹ್ಯೆಂಗೆ ಮನ್ಸಬಂತ
ಎಂದೇ ಗುಲ್ಲು ಗೊಬ್ಬೀನೇ ಹುಡುವಾಳ ೫೭

ಆಗ ಅರ್ಜುನಸ್ವೊಮೆ ಏನಂದೇ ಹೇಳಿರುವಾ
ಇಲಕ್ಯೆಳೇ ಹಿಣ್ಣೆ ನಿನ್ ಕುಲವೆ ಯಾವುದೇ

ದಾರೀಲು ಮ್ಯೆನ್ ಹೋಗೂವಾತಾ ನಿನಗೇ
ನನ್ನಾಕುಲದಾ ಜಿಡತೇ[೮೯] ಯಾಕಪ್ಪ ನೋಡ
ಕಣ್ಣನೇ ಕಟ್ಟಿದ್ರು ಬಿನ್ನಾನೇ ಬೆಗದಾರು ೫೮

ಮಾತು ಹ್ವೊಗಾಲಿಲ್ಲಾ ನಂಗ್ಯೆಕೋ
ನನ್ನಾಲೋ ಕುಲದಾ ಜಿಡತೀನೇ ಮಾಡುತಿ ನೀನ
ನಿನ್ಕುಲವೇ ಯಾವೂದೇ ಎಂದೇ ಕೇಳೂವಾಳ ೫೯

ಕುಂತೀಮಗನೇ ತಾನ ಪಾಂಡವ್ರಾ ವಂಸವೇ ತಂದ
ಅರಜೂನನೆಂಬು ಹೆಸರು ನಂದೆಲೇ ೬೦

---

೮೬. ದ್ರೌಪದಿಯಿದ್ದ ೮೭. ತೆಗೆಯುತ್ತಾನೆ ೮೮. ಮದುವೆಯೆಂದು ೮೯. ವಿಚಾರ, ಚೌಕಾಸಿ

ಆಗಿನ್ನೇ ಲೇರಾಮಾ ರೌಪತೆ ತಾನಂಬ್ಬ
ಮಾವನ ಸೋದರಕು ಕೊಡದ್ದೊದಾ ನನ್ನಣ್ಣ
ಅತ್ತೀಯ ಸೋದರಕು ಕೊಡದ್ದೊದಾ ನನ್ನಣ್ಣ ೬೧

ರೌಪತಿ ಮಾತಾಕೇಳಿದ ಅರಜೂನ ಹೇಳಿದನೇಗೂ
ನಾಚೂಕೇಲೇಗೇ ಬರಲಿಲ್ಲ ನಿನ್ನಣ್ಣಗೇ
ದೊಡ್ಡಲೇ ಬೆಟ್ಟದಲ್ಲೇ ಬಿಟ್ಟೇಲೋ ಹೋಗೂವಾಗೆ
ಕಣ್ಣನೇ ಬಿಡಸೀದಾ ಬಿನ್ನಾನೇ ಬಿಡಸೀದ
ತೊಡಿಯಾನೇ ಬಗದಿರುವಾ ತೊಡಿಯಲ್ಲೇ ತುಂಬಿಕಂಬ ೬೨

ಆಗಿನ್ನೇ ಅಣ್ಣತಮ್ಮಂದಿರ ಉಂದೂದಾರಿಯಲ್ಲೆ ಒಟ್ಟೀಗಾಗೂವಾರ
ಬೀಮಸಯ್ನನೇ ಏನಂದೇ ಹೇಳೂವಾ
ಇಲಕೇಳೋ ನನ್ನಣ್ಣ ನರಮನ್ನ ಸುಣ್ಕೋ[೬೦] ಬರತೀದೋ
ಯಾತಾರ ಸುಣ್ಕ ಗಾಳಿತಕ್ಕಂಡೇ ಇರುವವ್ನೇ ನೀನ
ನಾಪಟ್ಟ ನೀಪಟ್ಟಲಂದೂ[೬೧] ಮನ್ಗೇ ಬಂದಿರುವಾರ
ಹೆಣ್ಣ ರೌಪತಿ ಒಡಗುಂಡೇ ತಮ್ಮನ್ಗೇ ಬಂದಿರುವಾರಲ್ಲ ೬೩

ತಾಯೇಲಂಬವ್ವ ಮತ್ತುಂದು ಮುದ್ಕೀಯೇ ಕುಂತಾದೇವಿ
ಮಜ್ಜೂಗಿ ಗರಡೂತೇ ಒಳಗೇ ಕುಳಿತಿರುವಾಳ ಕುಂತಾದೇವಿ
ಇಲಕೇಳೇ ತಾಯೇ ನಮಗುಂದು ಹೆಣ್ಣುಸಿಕ್ಕಳ
ಹಣ್ಣಾದ್ರೆ ಮಗನೇ ನೀವಯ್ದೂಲುಜನರೇ ಪಾಲಚ್ಚಿಕಂಡ್ ತಿನ್ನಿ ೬೪

ಹಣ್ಣಲ್ಲತಾಯೇ ಹೆಣ್ಣಸಿಕ್ಕಿದೆ ನಮಗೆ
ಹೆಣ್ಣಾದ್ರೆ ಮಗನೆ ನೀವಯ್ದೂಲು ಜನವೇ
ಆಳೀಕಂಡೂ ಉಳಿಯಾಬೇಕಂದು ಹೇಳಿರುವಳ
ಬೆಟ್ಟಾದಲ್ಲೇ ಸಿಕ್ಕೀದವ್ವ ಏನಾರು ಮುಟ್ಟಾವ್ರೋ[೬೨]
ಹೊಂಡವ ಕಡಿಯಲೆಬೇಕ ಕೆಂಡವ ಮಾಡಲೆಬೇಕ
ಹತ್ತಿಂಟು ಹೊರಿಸವ್ದೀಯಿಕ್ಕೇ ಕೊಂಡಾಮಾಡಲೆಬೇಕ.
ಅದರಲ್ಲೇ ಕಪಟಾವೆದ್ದಾರೇ ಅದ ಸುಟ್ಟೇಬರಲೇ
ಅದರಲ್ಲೇ ಕಪಟಾವೇ ಇಲ್ಲಾದೇಯಿದ್ದರೆ
ಮೊಡ್ಡಹೂಂವ ಬಾಡದೇ ಎದ್ದೇ ಬರಬೇಕ
ಅಂದೇಳೇ ಕುಂತಾದೇವೀಯೇ ಹೇಳಿರುವಾಳಲ್ಲ ೬೫

---

೬೦. ವಾಸನೆ ೬೧. ನಾನು ಹೇಳಿದ್ದೇ ಸರಿಯೆಂದು

ರೌಪತಿ ಅಂಬೋಳೇ ಪತಿವರ್ತೆ ನೋಡ
ಮೊಡದ್ದೂಂವ ಬಾಡದೆದ್ದಂಗೇ ಇದ್ದೇಲು ಬಂದಾಳ
ಅಯ್ದೂಲು ಜನರೇ ಅಯ್ದುಮಾಲೀನೆಯಿಕ್ಕಿ
ಅಯ್ದೂ ಅಣ್ಣತಮ್ಮಂದೀರು ಆಳಕಂಬಾರು ೬೬

೯೨. ಏನಾದರೂ ಮುಟ್ಟಿರಬಹುದು

೪. ರುಕ್ಮಿಣಿ

ಅಣ್ಣರುಕ್ಮಾಂಗನು ತಂಗೇರುಕ್ಮಿಣಿಯಮ್ಮ
ಸಿಸುಪಾಲಕರ ಮನಗೇ ರುಕ್ಮಿಣಿಯಮ್ಮನಾ
ಕುಡ್ತೀನಂದು[1] ಬರದಾನೆ, ರುಕ್ಮೀಣಿಯಮ್ಮನಾ ಮನಸುಗೋಳಂತೇ[2] ೬೭

ಉಂದು[3] ಮುಟ್ಟೇ ಹೂಂವು ಲೋಬಾನ ಪತ್ರಿಯು
ಅಯ್ದು ತೆಂಗಿನ ಕಾಯಾ ತಕ್ಕಂಡೇ ರುಕ್ಮಿಣಿಯಮ್ಮ
ಕಾಳೂಕಮ್ಮನ ಮನಿಯಾ ಪೋಜಿಸುಕೋಗಿರುವಳ್[4] ೬೮

ಇಲಕೇಳ ತಂಗೀಕೇಳ ಸಿಸುಪಾಲಕರ ಮನಿಯಾ
ದಿಬ್ಬಣವು ಬರುಹೊತ್ತು ಆಯ್ತಮ್ಮ ನೀನೆಲೇ
ಇಲ್ಲೀಗೇ ಹೋಗುತಿಯೇ ನನತಂಗಿ ೬೯

ಹುಟ್ಟೀದ ಹನ್ನೆಯ್ದು ದಿವಸಕೇ ನನ್ನಮ್ಮ
ಹೇಳಿದ ಹರಕೀ ಉಪ್ಪೀಸಿ[5] ಬರತೀನಣ್ಣ
ಎಂದುಂದು ಹೂಂವು ಪೂಜಿಸುವಾಳ, ಗ್ಯನಾ[6] ಮಾಡುವಳ ೭೦

ಹಾದೀಲೋಗೂ ನಾರದನ ಕರದಿರುವಾಳನನ್ನಮ್ಮ
ಇಲಕೇಳೋ ನಾರದ ನಾನುಂದು ಮಾತಾ ಹೇಳೂತೀ
ಕೇಳುವಿಯೋ ನೀ ಕೇಳನಾರಿಯೋ ಹೇಳ ೭೧

ಕೇಳೂ ಮಾತಾದ್ರೆ ಕೇಳೂವೆ ನನ್ನಮ್ಮ
ಕೈಳಾದಿದ್ದ[7] ಮಾತಾದ್ರೆ ಕೈಳೇನೇ[8] ನಾನ ೭೨

ಅಣ್ಣ ರುಕ್ಮಾಂಗನು ಸಿಸುಪಾಲಕರ ಮನಗೇ
ಹಿಣ್ಣನೇ ಕುಡತೀನಂದು ಕರಣೀಪಿ[9] ಲಂದಿರುವನೋ
ರುಕ್ಮಿಣಿ ಅಮ್ಮನ ಮನಸುಗೋಳಿಲ್ಲಂತೆ[10]
ಕಣ್ಣ ಕಾಡಗಿ ತಿಗದು ಕೊನಿಯಾ ಉಗರಲೆ ಬರಿದು
ಕೃಷ್ಣಗ್ವೊಲಿ ಪತ್ರವ ಬರೆದಿರುವಾಳಲ್ಲ. ೭೩

---

೧. ಕೊಡುತ್ತೇನೆಂದು ೨. ಮನನೊಂದಿತು ೩. ಒಂದು ೪. ಪೂಜಿಸ ಹೋಗಿದ್ದಾಳೆ ೫. ಒಪ್ಪಿಸಿ ೬. ಧ್ಯಾನ ೭. ಕೇಳದಿದ್ದ ೮. ಕೇಳೆನು ೯.ಲೆಕ್ಕಣಿಕೆ ೧೦. ಮನಸ್ಸಿಲ್ಲ

ಹದ್ದೀನಾ ನುಗಲ್ಫೇರು ಮುದ್ದುರಮಣನಾ
ಸವನಿಸಿಕೊಂಡು ಕಾಳೂಕಮ್ಮನ ಮನಿಮುಂದೆ
ಉರಗಿರುಲಂದೇಳೇ ಹೇಳಿರುವಾಳಲ್ಲ.
ನಾರದ ಹೋಗಿರುವ ಇಲಕೇಳಿ ಸ್ವಾಮೀಕೇಳಿ
ರಕ್ಮೀಣಿ ವಾಲಿ ಪತ್ತರವ ಬರದಳ
ಇಲಕೇಳ ಕೃಷ್ಣಸ್ವಾಮಿ ಅಣ್ಣರುಕ್ಮಾಂಗನು
ಸಿಸುಪಾಲಕರ ಮನೆಗೆ ನನ್ನ ಕುಡತೀನಂದ
ಹದ್ದೀನಾ ಹೆಗಲ್ಫೇರಿ ಕಾಳೂಕಮ್ಮನ ಗುಡಿಗೇ ಬರುಬೇಕೇ. ೭೪

ಹದ್ದೀನಾ ಹೆಗಲ್ಫೇರಿ ಮುದ್ದೂರಮಣನು
ಸವನಿಸಿಕಂಡು ಕಾಳೂಕಮ್ಮನ ಮನಿಮುಂದೆ
ಹದ್ದಾಗೆ ಉರಗೀದಾರ್ ಹರಿಯೇ ಶ್ರೀಕೃಷ್ಣ. ೭೫

ರುಕ್ಮಿಣಿ ಹೆರಗೇ ಬಂದಿರುವಳೇಗೂ
ಹದ್ದಾಗೇ ಹಾರಿಸಿಕೊಂಡು ಬಂದಿರುವಾರ. ೭೬

ಅಲ್ಲೇ ರುಕ್ಮಾಂಗನು ಇಲಕೇಳೋ ಕಳ್ಳಕೃಷ್ಣ
ನಮ್ಮ ಹಿಣ್ಣನ್ನು ಎಲ್ಲೇ ಕದ್ದೊಯ್ದಿತ್ತಿಯೋ ೭೭

ಮನಸು ಇಲ್ಲಾದವರೀಗೆ ಕೊಡ್ತಿ ಅಂದೇ ಬಂದೇ
ಅದರಿಂದೇ ನಾನು ಹದ್ದಾಗಿ ಹಾರೀಸಿದೆ
ಅಂದಿನ್ನೇ ಹರಿಯೇ ಮನೆಗೆ ಹೋಗಿರುವಾರ ೭೮

ಕಪ್ಪೂ ರೂಪವು ನಾನ ತಕ್ಕಾದವ ನಿನಗಲ್ಲ
ರುಕ್ಮೀಣಿ ಉಪ್ಪುದರ[೧೧] ಉಪ್ಪೆಂದರ[೧೨] ಹರಿಯೇ ೭೯

ಹರಿಯೇ ಕುಳ್ಳುವ ಮಂಚ ಹವಳದ ತಲಗಿಂಬ
ನುಕ್ಕೀ ಹಿಟ್ಟಿನ ತಬುಕ ಕಾಪೂ[೧೩] ಸಿರಿಗಂದ ೮೦

ಇತ್ತಿತ್ತಾಗ್[೧೪] ಬಾ ಹಿಣ್ಣೆ ಏನಾ ಹೇಳಿದಾರು
ಸನುಮತು ನಿನಗಿಲ್ಲ ಮನಸೀನ ಪರಿಯೇನು
ನಿನ್ನ ಗುರಸಾಗ್ ನಾನು ಇಟ್ಟೂಬಾಲ್ ಹುರೀದದ್ದೇ
ರಾಯ ರಾಯರಿಗೆಲ್ಲ ವಯ್ರೀಯೇ ನಾನಾದೇ
ನಾರೀ ಕುಚಿಗಳ[೧೫] ನಾರಾಯಣ ಕಂಡಾನೇ
ಹಿಗ್ಗೀ ಹೆಬ್ಬಾಗಲ್ ಹಿಡಿಯೂ ಪರಿಯೇ

---

೧೧. ಒಪ್ಪುವುದಾದರೆ ೧೨. ಒಪ್ಪು ಎಂದರು ೧೩. ರಕ್ಷಾ ತಿಲಕ ೧೪. ಇತ್ತಿತ್ತ ೧೫. ಮೊಲೆಗಳನ್ನು

ಕಂಬೂ ಚಿವಳ್ಯನೇ[೧೬] ತಂದು ರುಕ್ಮಿಣಿಗೇ
ಏನಾ ಹೇಳೀದಾರೂ ರುಕ್ಮಿಣಿ ಮನಸು ಇಲ್ಲ
ಮೊರದಾರ ಹರಿಯೇ ನೆಡದಾರ ಸತಿಬಾಮಿ ಮನಗೇ ೮೧

ರುಕ್ಮಿಣಿ ಉರಿತಾಪ ಉರಿ ಬಿಂಕೀಲ್[೧೭] ಹುಡುಕೂವಾಳ
ನಾರದ ಬಂದಿರುವ ಅಲ್ಲಿಗೇಗೆ
ಇಲಕೇಳೇ ನನ್ನಮ್ಮ ಕೇಳೇ ನೀನು
ನಿಮಗೆಂತ ಇದರಾಮಾಡೇ ಹ್ವೊದಾರ
ಕುನ್ನೀನೇ ತಂದಿರುವಾ ನಾರಾದ ಸುಟ್ಟೀ ಬೂದಿಮಾಡೂ
ಬಿದರಂಡೀಲ್ ತುಂಬೀದ ನಾರದ ೮೨

ಇಲಕೇಳಿ ಕೃಷ್ಣ ಸ್ವಾಮಿ
ರಕ್ಮಿಣಿ ಅಮ್ಮನು ಸತ್ತೇ ಹ್ವೊದಳು, ಸುಟ್ಟೀ ಬೂದಿನೇ ಮಾಡೂ
ಬಿದರಂಡೀಲ್ ತುಂಬೀಬಂದೀತಾನ
ಎಂತಾ ಮೋಸಾ ಮಾಡೇ ಬಂದಾರಿ
ಅಪ್ಪನಾ ಮನಿಯಾ ದಾಸೇರ ಕರದಾಳ ರುಕ್ಮಿಣಿ ೮೩

ಇಲಕೇಳಿ ದಾಸೇರಿಯ ಕೇಳಿ
ಸತಿಯಾ ಬಾಮೀಯಾ ಮನಗೇ ಹೋಗರ ಹರಿಯೇ
ಕರವಿತ್ತೇ ಕರದೇಕಂಡೇ ಬನ್ನಿ
ಸತಿಯಾ ಬಾಮಿಯ ಮನ್ನೇ ಲತ್ತನಾಡುವ ನಲ್ಲನ
ಜತ್ತನೇ[೧೮] ಉಗತರು ನಾವ
ಇಲಕೇಳಿ ಸತಿಯಾ ಬಾಮಿ

ರುಕ್ಮೀಣಿ ಅಪ್ಪನ ಮನಿಯಾ ದಾಸೇರೇ ಇಟ್ಟೊರನ
ದಾಸೇರು ಹೋಗುವಂಕಾರಿ
ಕೃಷ್ಣನು ರುಕ್ಮಿಣಿ ಮನಗೇ ಬಂದು
ಇಲಕೇಳೇ ರುಕ್ಮೀಣಿ ಏಗಾರು ಬುದ್ದಿಯು ಬಂತೇ. ೮೪

---

೧೬. ಕೊಂಬಿರುವ ೧೭. ಉಂಬೆಂಕಿಯಲ್ಲಿ ೧೮. ಜೋಡಿ, ಜೊತೆ

೫. ಚಂದ್ರಾವಳಿ

ಅಕ್ಕಾ ರಾದಿಯೋ ತಂಗೇ ಚಿಂದ್ರಾವಳಿಯೋ
ಅಕ್ಕಾ ರಾದೀಕಾಣದೆ ಹನೆಯ್ದುರಸವೇ[1] ಆಯಿತ
ಇಲಕೇಳೇ ನನ್ನತ್ತೆ ನನ್ನ ಗಂಡಾದೀರಂಬವ್ರ
ಕಡ್ಲೀಯಾ ಹೊಲಕಂದೇ ಹೋಗಿರುವಾರ
ನನ್ನಕ್ಕರಾದೀಯ ನೋಡೂಕೇ ಹೊತ್ತರಿಗ್[2] ಹೋಗೆ
ಸಂಜೀಗೇ ಅತ್ತೇ ನಾ ಬಂದೇ ಬರುವನೇ ೮೫

ಇಲ್ಲಿಲ್ಲ ನನಮಗಳೇ ನೀ ಕೇಳ ನಿನಗಂಡ
ಚಿಂದೂಬೂಪಾಲ ಕಡ್ಲೀಯ ಹೊಲಕೇ ಹೋಗೀಯ
ಆಗಂದರಾಗೇ ಬರುವಾ ಈಗಂದರೇಗೇ ಬರುವಾ
ಪಟ್ಟಾಗತ್ಯಲ್ಲೇ[3] ಕಡದೇ ಬಿಡುವ ನೋಡಂಬಳಲ್ಲ. ೮೬

ಅತ್ತೆ ಹೇಳಿದ ಮಾತಾ ಕೈಳಲೇ ಇಲ್ಲವೇ
ಆಳೂ ಮಕ್ಕಳ ಕರದೇ ಕಂಡಾಳ ಚಿಂದ್ರಾವಳೆ
ಅಕ್ಕಾಗೇ ಬೇಕಾದ ಸಾಯಿತವ ಕಟ್ಟೀಕಂಡೇ
ಆಳೂಮಕ್ಕಳ ಕರಕಂಡೆ ತಾನೂ ಮುಂದಾಗೇ
ಆಳೂ ಮಕ್ಕಳ ಹಿಂದಾಗೇ ನಡದೇ ಬಿಟ್ಟಳ
ದ್ವಾರಕಿಯಾ ಹಾದೀಯಾ ಹಿಡದೇ ನಿಡದಿರುವಾಳಲ್ಲ. ೮೭

ಸ್ವೊಮಿ ಸಿರಿಹರೆ ಸ್ರೀಕ್ರಟ್ನ ಅಕ್ಕನ ಪತಿಗಳೇ
ಹೊನ್ನದಡಪಿಯ ಮ್ಯೆನೇ ಕುಳತಿರುವಾರಲ್ಲ
ಮಿತ್ರೇ ಚಿಂದ್ರಾವಳಿಯೇ ಬರುವಾ ಬರವೇಲೋ
ಆತಾಸಿರಿಹರಿಗೇ ತಿಳದೇ ಹೋತೀದಲ್ಲ
ಆಗೇ ಚಿಂದ್ರಾವಳಿಯೇ ತನ್ನಾಳೂ ಮಕ್ಕಳ
ದ್ವಾರಾವತಿ ಪುರಕೆ ಕಳಗಿರುವಾಳಲ್ಲ. ೮೮

ತನ್ನಕ್ಕ ಮನಿಯಲ್ಲೇ ಏವಳೋ[4] ಇಲ್ಲವೋ
ನೋಡೀಕೇ ಬರಲು ಕಳಗೀಸಿ ಕೊಟ್ಟಿಳೋ ನೋಡ
ಸಿರಿಹರೆಸಿರಿಕ್ರಟ್ನ ಆಳೂಮಕ್ಕಳ ನೋಡಿ

---

೧. ಹನ್ನೆರಡು ವರುಷ ೨. ಬೆಳಿಗ್ಗೆ ೩. ಕತ್ತೆಯಲ್ಲಿ ೪. ಇರುವಳೋ

ಇಲ್ಲಿಂದ[೫] ಬಂದೀರಿ ಇಲ್ಲಿಗೇ ಹೋತರಿ[೬] ನೀವ
ಅಂದೇ ಆಳೂ ಮಕ್ಕಳ ತಡದೇ ಕೇಳೀ ಬೆಟ್ಟರಲ್ಲ[೭]
ಆಗೇ ಆಳೂಮಕ್ಕಳು ಅಕ್ಕ ರಾದೀಯ ನೋಡೂಕೆ
ಅಂದೇ ಕ್ರಟ್ನನಕಯ್ಲೆ ಹೇಳಿರುವಾರಲ್ಲ
ಅದರಕ್ಕ ರಾದೀಯೇ ತಗರೂ ಮನಿಗ್ಹೋಗೇ
ಮೂರು ದಿನವೇಲಾಯಿತ ಅಂದಿರುವಾರಲ್ಲ. ೮೯

ಆಳೂ ಮಕ್ಕಳು ಅಟ್ಟೂ ಮಾತಾನೇ ಕೇಳೀಕಂಡೇ
ಮತ್ತೇ ಚಿಂದ್ರಾವಳಿಯಿದ್ದಲ್ಲೇ ಬಂದಿರುವಾರಲ್ಲ.
ಇಲಕೇಳೇ ಅಮ್ಮ ಕೇಳೇ ನಿಮ್ಮಕ್ಕ ತಗರೂಮನಿಗೇ
ಹೋಗ್ ಮೂರು ದಿನವೇ ಆಯೀತಂದೇ ಹೇಳಿರುವಾರಲ್ಲ. ೯೦

ಅಟ್ಟೂ ಮಾತಾನೇ ಕೇಳೀಕಂಡೇ ಚಿಂದ್ರಾವಳಿ
ಆಳೂಮಕ್ಕಳ ಸಹಿತಾ ಹಿಂತಿರಗೇ ನಿಡದಿರುವಾಳಲ್ಲ ೯೧

ತಾಯಿ ಮುತ್ತನ ಮುದಕೀಯೋ ಯೇರಾಮ[೮]
ಕೊಡಕರಗಿ ತಕ್ಕಂಡೇ ನೀರಿಗೇ ಬರುವಾಳೋ
ಸುಗ್ಗೀ ಸಿವರಾತ್ರಿ ಬಿಸಲೀಗೇ ಒಬ್ಬಳೇ ಬಂದಳಲ್ಲ
ಅಂದೇ ಬಾಳೂಯೋಚನೀಯ ಮಾಡಿರುವಾದಲ್ಲ
ಏನು ಬಂದದ್ದೇ ಮಗಳೇ ಯಾಕೆಬಂದೀಯೇ
ಅಂದೇ ಚಿಂದ್ರಾವಳೀ ಕಯ್ಲೇ ಕೇಳಿರುವಾಳಮ್ಮ
ಇಲ್ಲಿಲ್ಲ ನನುತಾಯೆ ನನ್ನಕ್ಕ ರಾದೀಯೆ ಕಾಣದೆ
ಹನ್ನೆಯ್ಡು ಉರಸಾವೇ[೯] ಆಗತ್ತ ನೋಡ
ನಮ್ಮಕ್ಕ ರಾದೀಯೇ ತಗರೂ ಮನಿಗೇ ಬಂದೇ
ಮೂರು ದಿವಸಾ ಆಯೀತಂದೇ ಹೇಳಿರುವಾರಲ್ಲ. ೯೨

ಇಲ್ಲಿಲ್ಲ ನನಮಗಳೆ ಕಳ್ಳಕ್ರಟ್ನಗೆ ಮುದಿಯಾದಾಮ್ಯೆನೆ
ನನಮಗಳಾ ಕಾಣಲೆಯಿಲ್ಲ ಆ ಕಳ್ಳ ಕ್ರಟ್ನನೆ
ನಿನಕಯ್ಲೆ ಅನ್ನಯ[೧೦] ನುಡದೆಬೆಟ್ಟ[೧೧] ನೋಡ
ಇಲಕೇಳೆ ತಾಯೆ ಆತಾ ಅನ್ನೆಯ ನುಡದೇಬೆಟ್ಟೆ
ನನ್ನಕ್ಕ ರಾದೀಯ ಹೂಂವೀನ ಬನಕೋಗೇ
ಹೂಂವಾ ಕುಯ್ಕಂಡೇ ಬರುತೀನೆ ನೋಡ

---

೫. ಎಲ್ಲಿಂದ ೬. ಹೋಗುತ್ತೀರಿ ೭. ಕೇಳೀ ಬಿಟ್ಟನು ೮. ಪಾಪ, ಹೇರಾಮ ೯. ವರ್ಷ ೧೦. ಅನ್ಯಾಯ, ಸುಳ್ಳು ೧೧. ನುಡಿದು ಬಿಟ್ಟನು

ಏಮಗಳೆ ಯಾರ ಹೂಂವಿನಾ ಬನಕೆ ಹ್ವೊದಾರು
ಕಳ್ಳಕ್ರಟ್ನನ ಹೂಂವಿನಾ ವನಕೆ ಹ್ವೊಗಲೆ ಬ್ಯೆಡಾ ೬೩

ತಾಯೀ ಹೇಳಿದ ಮಾತಾ ಕ್ಯೆಳದೆ ಚಿಂದ್ರಾವಳಿ
ಹೂಂವಿನ ವನಕೇ ಹೋಗೀರುವಾಳಲ್ಲ
ಹೂಂವಿನ ವನಕೆ ಹೋಗೇ ಚಿಂದ್ರಾವಳೆ
ಬಗಬಗಸೇ[೧೨] ಹೂಂವನ್ನೇ ಕೊಯ್ದಿರುವಾಳಲ್ಲ.
ವನವ ಕಾಯೂವ ವನಪಾಲಕರ ಮಕ್ಕಳು
ಅಮ್ಮ ನೀವ್ ಗಿಡುವೆಲ್ಲ ಬಗಬಗಸೇ ಕುಯ್ದರಿ[೧೩]
ನಾ ಹೂಂವ್‌ಕುವ್ವಾ ಪಂಚಯ್ತೇ[೧೪] ನಿಮಗ್ಯೆಕೇ
ಅಂದೇ ದಿಕ್ಕರವಮಾಡೇ ಮತ್ತೂ ಹೂಂವ್‌ಕೊಯ್ದಾಳೋ. ೬೪

ಆಗೇ ವನಪಾಲಕರ ದ್ವಾರಕೀಗ್ ಓಡೋಡೇ ನೆಡದಾರೇ
ಸಿರಿಹರೇ ಸಿರಿಕ್ರಟ್ನದ್ಯೆವರ ಸಿವಪ್ವೋಜ್ಯಕೆ[೧೫] ಕುಳತರ
ಆ ಮಕ್ಕಳ ಓಡೋಡೇ ಬರುವಾ ಬರವನೇ ನೋಡ್ತರ
ತಟ್ಟ[೧೬] ಗೆಂಟೀನೇ[೧೭] ತಟ್ಟನೆ ಬೆಟ್ಟರೋ[೧೮] ರಾಮು
ಅವರಾ ಮನಿಯಾ ಲಕ್ಷ್ಮ ದೇವಿಯೋ
ಕೆಂಡದ ದೇಪಗಳ[೧೯] ತಕ್ಕಂಡೇಬಂದಿರುವಾಳಲ್ಲ
ಏಸ್ವಾಮಿ ಬಿದ್ದೇ ಬಿನ್ನಯ[೨೦] ನಿಮಗೇ
ಇದ್ದೇ ಕಯ್ಯ್ಯಾ ಮುಗುವೇ ಏನು ತಪ್ಪಾಯಿತ ನಂದ
ತ್ಯೆದಾ[೨೧] ಗಂದಾದಲಿ ತಪ್ಪೊ ಕೊಯ್ದಾಹೂಂವ್ನಲಿ ತಪ್ಪೊ ೬೫

ನಿಂದ ತಪ್ಪಲ್ಲ ನನ್ನಿಂದೇ ತಪ್ಪಲ್ಲ
ಏಗೇ ಮಾಡುವ ಪ್ವೋಜಿ ತಡದೇ ಮಾಡುವೆ
ಅಂದೇ ಉಪ್ಪರಗಿ ಒಳಗೋಗೆ ಸಿರಿಹರೆ
ಬಡಬಟ್ಟರ ಯ್ಯೆಸವ ತಾ ಕಟ್ಟೀಕಂಡೇ
ಕಯ್ಯಲೇ ಮುಕ್ಕ ತಂಬಗಿಯ ಹಿಡಿದಾರಲ್ಲ.
ತಟ್ಟನೆ ಹೂಂವಿನಾ ಬನಕೇ ಬಂದಿರುವಾರಲ್ಲ
ಇಲ ಕೇಳ ಹಿಣ್ಣಹಿಂಗಸುವೆ ನೀಕ್ಯೆಳೇ
ಬಡಮಕ್ಕಳ ವನವಾ ಯಾಕೆ ಹಾಳೂ ಮಾಡೂವೆ
ಹೂಂವ್‌ಕುಯ್ದೇ ಯಾಕ್ಹಂಗೇ ಚೆಬ್ಬಿ ತುಂಬೂತಿ
ಅಂದೇ ಸಿರಿಹರೆ ಸಿರಿ ಕ್ರಟ್ನ ಕೇಳಿರುವಾನಲ್ಲ. ೬೬

---

೧೨. ಬಗ್ಗಿಸಿ ಬಗ್ಗಿಸಿ ೧೩. ಕೊಯ್ಯುತ್ತೀರಿ ೧೪. ವಿಚಾರ ೧೫. ಶಿವಪೂಜೆಗೆ ೧೬. ಹಿಡಿದ ೧೭. ಗಂಟೆ ೧೮. ಬಿಟ್ಟರು ೧೯. ದೀಪ ೨೦. ಅಡ್ಡಬಿದ್ದು ವಿನಂತಿಸುತ್ತೇನೆ ೨೧. ತೇದ

ನಾ ಹೂಂವ್‌ಕುವ್ವಾ ಪಾರಪತಗಿ[೨೨] ನಿನಗ್ಯೆಕೋ
ಹಾದೀಲ್ಹೋಗುವ ಬಡಬಟ್ಟ ಎಂದೂ ಕೇಳಿರುವಾಳಲ್ಲ
ಸುಕ್ಕೀನ ಹಿಣ್ಣೇ ನೀನ ಸುಕ್ಕೀನ ಮಾತ್ ಬ್ಯೆಡಾ
ಕೊಯ್ಯೂಂವ ಕೊಯ್ದಲ್ಲೇ ಬಿಡ್ತೀಯೋ ಇಲ್ಲವೋ
ಅಂದೇ ಅದ್ರಾಲಾ ಮುಂದೇಲೇ ತಾ ಹೋಗೇ
ತನ್ನಾ ನಿಜರೂಪನ್ನೇ ತೋರಿರುವಾರಲ್ಲ.
ಅಲ್ಲೇ ಕಯ್ಯಿಟ್ಟೇಯಿಲ್ಲೇ ಕಯ್ಯಿಟ್ಟೇ[೨೩] ಹೊನ್ನಾ
ಕುಚಗಳಾ ಮ್ಯೆನೇ ಕಯ್ಯನಿಟ್ಟಿರುವಾರಲ್ಲ. ೯೭

ಇಲಕೇಳೋ ಕಳ್ಳಾ ಕ್ರಟ್ನಾನೇ ನಿನಗೆ
ಹದಿನಾರು ಸಾವಿರ ಹಿಂಡರು ಅದ್ರಮ್ಯೆನೆ
ಸತಿಬಾಮಿ ರುಕುಮೀಣಿ ಅಟ್ಟಮ ಸ್ತ್ರೀಯರು[೨೪]
ಅಟ್ಟು ಜನಕು ಬೋಗಾನೇ ಕೊಡದೆ ನೀನ
ನನಮಿಯ್ಯಾ[೨೫] ಮುಟ್ಟೂಕೇ ಓಡ್ಬಂದಿ ಅಂದೇ
ಕೊಯ್ಯೂಂವನಲ್ಲೇ ಸುಣದೇ ಬಿಟ್ಟಾಳೋ
ನಿನ್ನಾಸೆರಗೀಗೇ ಗಂಟಾನೇ ಕಟ್ಟೀಕೋ ಅಂದ್ಹೇಳೇ
ಸಿರಿಹರೆ ತನ್ನಾಮನಗೇ ನಿಡದಿರುವಾನಲ್ಲ. ೯೮

ತಾಯೀಯಾ ಮನಿಗೇ ಬಂದಳೇ ಚಿಂದ್ರಾವಳಿಯೇ
ಇಲಕೇಳೆ ನನತಾಯೆ ನೀಕೇಳೇ ನನಮಾತ
ನೀನ ಅಟ್ಟಂತ ಅಡಗೀಯ ಬಲುಬ್ಯೆಗೆ ಬಡಸಂತೇ
ಓಟವುಪಚಾರ ಮಾಡ್ಕಂಡೇ ಹೋತವ[೨೬] ತಾಂವ[೨೭]
ಆಳಾಮಕ್ಕಳೆಲ್ಲಾ ಓಟಾ[೨೮] ಉಪಚಾರಾ ಮಾಡಿಕಂಡೇ
ಕಡ್ಳೀಯಾ ಬನುಕಾಗೇ ಹೋಗರ ನೋಡ.
ಆಗಂದಾರಾಗೇ ಬರುವಾರ ಏಗಂದರೇಗೇ ಬರುವಾರ
ನಾನು ನನ್ನಾಲೇ ಮನಿಗೆ ಎದ್ದೆ[೨೯] ನನತಾಯೆ ೯೯

ಸಿರಿಕ್ರಟ್ನರ ಇದ ಬರುವಾ ಬರವಾನೇ ನೋಡೂತೇ
ಹೊನ್ನ ದಡುಪೀಯಾ ಮ್ಯೆನೇ ಕುಳುತಾರೋ
ಚಿಂದ್ರಾವಳಿ ಹೋಗೂವಾ ದಾರೀ ನೋಡುತಿರುವರೇ ೧೦೦

ಚಿಂದ್ರಾವಳಿ ಮನೆಗೆದ್ದು ಹೋದಾದ್ದಾ ನೋಡದ್ರೋ
ಆಗೇ ಮನೆಗೆ ಓಡೋಡೇ ಹೋಗಿರುವಾರಲ್ಲ

---

೨೨. ಪಾರು ಪತ್ಯ ೨೩. ಅಲ್ಲಿಯಿಲ್ಲಿ ಕೈಯಿಟ್ಟು ೨೪. ಎಂಟು ಮಂದಿ ಸ್ತ್ರೀಯರು ೨೫. ಮೈಯನ್ನು ೨೬. ಹೋಗುತ್ತೇವೆ ೨೭. ನಾವು ೨೮. ಊಟ ೨೯. ಹೊರಟೆ

ರಾದೇಕೇಲಾ ಕೊಟ್ಟಗಿಯಾ ಸಿಗಣೀ[೩೦]ಯಾ ತಿಗುವಾಕೇ
ಹೋಗಿರುವದ ನೋಡೇ ಕೀಲಾಕೊಟ್ಟಿಗೆಗೆ ಬಂದಿರುವಾರಲ್ಲ
ಇಲಕ್ಯೆಳೇ ರಾದಿಕೇಳ ಬೇಗಾದಕಡಿಯ[೩೧] ಕುಡಂಬಾರಲ್ಲ[೩೨] ೧೦೧

ನಿಲ್ಲೀರಿ ಸ್ವೊಮೀ ಸಿಗಣೀನೇ ತಿಗದಾಯಿತ[೩೩]
ಕಯ್ಯನೇ ತುಳಕಂಡೇ ಬರತೀನೇ
ಬ್ಯೆಗನೇ[೩೪] ಬೇಕಂದೇ ಸಿರಿಕ್ರಟ್ನ ನುಡದಾರೇ
ಆಗೇ ಕುತ್ತಗಿ ಬಗ್ಗೀಸೇ ಬೇಗದ ಕಡಿಯಾ ತಿಗಿಯಂತೇ[೩೫]
ಬೇಗಾದಕಡಿ ಸರವ ಬ್ಯೆಗಾದಲಿ ತಕ್ಕಂಡೇ
ತನ್ನಾ ಅರಮನಿಗೇ ಓಡೋಡೇ ಬಂದೇ
ಉಪ್ಪರಗೀ ಒಳಗೇ ಹೋಗಿರುವಾರಲ್ಲ
ಬೇಗದ ಕಡಿಯಲ್ಲೇ ಪಿಟ್ಟೊಗಿ ಕದವಾ ತೆಗೆವಾರಲ್ಲ.
ರಾದಿ ಸೇರಿಯ ಕುಪ್ಪಸ ತಾಯೆಲ್ಲ ತಕ್ಕಂಡೇ
ಚಿನ್ನಾಆಭರಣನೆಲ್ಲಾ ತಿಕ್ಕಂಡೇ
ಕಿಂಜರ್ಕಿ ಮೇಸೀನೇ[೩೬] ತಾ ಅಳಸೀಕಂಡರೋ
ರಾದೀಯಾ ಯಾಸಾನೇ ತಾ ಹಾಕಬೇಕಂದೇ
ಸೇರಿ ಕುಪ್ಪನೆಲ್ಲ ಉಟ್ಟುಕೊಂಡರೊ ಸಿರಿಹರೆ
ಚಿನ್ನಾಭರಣವನೆಲ್ಲ ತಟ್ಟನೆ ಇಕ್ಕಿರುವಾರಲ್ಲ
ತೇಟಾಗಿ ರಾದೀಯ ಯಾಸಾವ ಹಾಕೀದ ಸಿರಿಹರೆ
ಚಿಂದ್ರಾವಳಿಯ ಮನಿಗಾಗೇ ನಿಡದಿರುವಾನಲ್ಲ. ೧೦೨

ಚಿಂದ್ರಾವಳೇ ಅಟ್ಟೊದೋರಿಂದೆ ನೋಡಿರುವಾಳಲ್ಲ
ತನ್ನಕ್ಕ ಬಂದಳಂದೇ ಓಡೋಡೇ ಬಂದಿರುವಾಳಲ್ಲ.
ತಟ್ಟೇ ತಗಲಿಸಿ ಕಂಡಳ ಅಪ್ಪೇ ಮುದ್ದಾಡಿಕಂಡಳ
ನಿನ್ನಾಕಾಣಬೇಕಂದೇ ನಿನ್ನಾ ಮನಿಗೇ ಹೋದರೇ
ನಿನಗಂಡ ಕಳ್ಳಕ್ರಟ್ನ ಅನ್ನೆಯ ನುಡದೇಬೆಟ್ಟ
ಆಗೇನಾ ನನ್ನಾಮನಿಗೇ ಬಂದನೇ ನನ್ನಕ್ಕ
ನಿನ್ನಾಮನಿಯಾ ಹೂಂವಿನಾ ವನಕೇ ಹ್ವೊದೆನೆ ಅಕ್ಕ
ನಿನಗಂಡ ಜುಲುಮಿ ಮಾಡಿದನೇ ನೋಡ
ಕಯ್ಸೇರಿ ಮಿಯ್ಸೇರಿ ಬಂದನೇ ನನ್ನಕ್ಕ
ನನ್ನಹೊನ್ನ ಕುಚಗಳ ಮ್ಯೆನೇ ಕಯ್ಯನಿಕ್ಕಿದ
ನಾನೇ ಅವನೀಗೆ ಬಾಯೀಗೇ ಬಂದಂಗೆ ನುಡದೆ
ಆಗೇ ನಿನಗಂಡ ಕಟ್ಟೀಕೋ ಸೆರಗೀಗೆ ಅಂದ

೩೦. ಸಗಣಿ ೩೧. ಕೀಲಿಕ್ಯೆ ೩೨. ಕೊಡು ೩೩. ತೆಗೆದಾಯಿತು ೩೪. ಬೇಗನೆ ೩೫. ತೆಗೆಯಿರಿ ೩೬. ಚಿಕ್ಕ ಕೆಂಪು ಮೀಸೆಯನ್ನು

ಇಲಕೇಳೇ ನನತಂಗಿ ಬಾಳೂ ಸಿಟ್ಟೊಗಾರರವ್ರ
ಕಣ್ಣುಎಟ್ಟವ್ರ ಬೆಟ್ಟವ್ರೆ ಅಲ್ಲ[೩೭] ಅವ್ರಮಾತಿಗೆ ಯಾಕ್‌ಹ್ವೊದೆ? ೧೦೩

ಆಗೇ ಚಿಂದ್ರಾವಳೇ ಅಕ್ಕನ ಕರಕಂಡೇ ಹೋಗೇ
ಪಟ್ಟೇದ ಮಂಚದ ಮ್ಯನೇ ಕುಳ್ಳೀಸೇ
ಹಾಲುಸೆಕ್ಕರಿ ಬೆಲ್ಲನೆಲ್ಲವ ಕೊಟ್ಟಳೇ
ಆಗೇ ಚಿಂದೂಬೂಪಾಲನೇ ಬಂದಿರುವಾನಲ್ಲ. ೧೦೪

ಇಲಕೇಳೇ ನನ್ನತ್ತೂಗೇ ಇಟ್ಟೂ[೩೮] ಹೊತ್ತಿಗೆ ಬಂದೀಯೆ
ನಿನ್ನಾಕಾಣದೇ ನಾನು ಬಾಳೂ ದಿನವಾಯ್ತತ್ತೀಗೆ
ನಾ ಬಂದೇ ಏಗ[೩೯]ಮಾತ್ರಾವೇ ಕುಳ್ತದ್ದ[೪೦] ಮಯ್ದೀನ
ನೀ ಓಟುಪಚಾರವ ಬ್ಯೆಗೇ ಮಾಡಂಬಳಲ್ಲ.
ಆಗೇ ಚಿಂದೂಗೋಪಾಲ ಮಿಂದಿಮಡಿಯುಟ್ಟಿಕಂಡೇ
ಓಟಾಲುಪಚರಕೇ ಬಂದು ಕುಳಿತಿರುವಾನಲ್ಲ.
ಓಟಾವಾ ಮಾಡೇ ಕಯ್ಬಾಯ ತುಳದಿರುವಾನಲ್ಲ.
ಇಲಕ್ಯೆಳೇ ನನ್ನತ್ತೂಗಿ ಓಟಾಕೇ ಹೋಗಂಬಾನಲ್ಲ.
ಇಲ್ಲಾ ನನ ಮಯ್ದೀನ ನಾಮಿಂದೇ ಮಡಿಯುಟ್ಟಿಕಂಡೇ
ಓಟಾನೇ ತೀರಿಸಿಕಂಡೇ ಬಂದೆ ನಾ ಇಲ್ಲೀಗೇ ೧೦೫

ಅಟ್ಟೂ ಮಾತನೆ ಕೇಳೀ ಕಂಡಳೆ ತಂಗೆ ಚಿಂದ್ರಾವಳಿಯೇ
ನನ್ನಕ್ಕ ನಾನೂ ನೀನೂ ಕುಳ್ತೇ ಓಟಾನೇ ಮಾಡಾಬೇಕ
ಇಂದೇ ಹೋಗ್ವವ್ಳೇ ನಾಳಾಗೇಹ್ವೊಗಕ್ಕೇ ಅಕ್ಕ
ಅಕ್ಕಾತಂಗೀ ಕೂತೇ ಓಟುಪಚರವ ಮಾಡಿರುವಾರಲ್ಲ. ೧೦೬

ಇಲಕೇಳೇ ನನತಂಗಿ ನೀನ ನಾಯೆದ್ದೆ[೪೧] ನನಮನ್ಗೆ
ಸಂಜೀಯ ಕಾಲಾವೇ ಆಯಿತ ಅಂದಿರುವಾಳಲ್ಲ.
ಆಗೇ ಚಿಂದೂಗೋಪಾಲ ನಾಳಾಗೇ ಹ್ವೊಗಕ[೪೨] ಅಂದಿರುವಾನಲ್ಲ
ಮಯ್ದೀನ ಹೇಳಿದ ಮಾತ ಉಪ್ಪೀಕೊಂಡಿರುವಾಳಲ್ಲ[೪೩] ೧೦೭

ಇಲಕೇಳೋ ನನ್ನ ಮಯ್ದೀನ ನೀಕೇಳ
ನನತಂಗೀ ನಾನೂ ಸಂಗೂತೀಗೇ[೪೪] ಮನಗ್ತವ[೪೫]
ನಮ್ಮ ಹಾಸುಗಿಗೇ ನೀನ ಬರುಕಾಗಾ[೪೬] ನೋಡ
ಇಲ್ಲ ನನ್ನತ್ತೂಗಿ ನಾ ಬರುವದೇ ಇಲ್ಲಾ ನೋಡ.
ಆಗೇ ಉಂದು ಏಳ್ಯವಮಿಲದೇ[೪೭] ನಾಬರುವೇ

೩೭. ಕಣ್ಣಿಟ್ಟವರನ್ನು ಬಿಟ್ಟವರಲ್ಲ ೩೮. ಎಷ್ಟು ೩೯. ಈಗ ೪೦. ಕುಳಿತದ್ದು ೪೧. ನಾನು ಹೊರಡುತ್ತೇನೆ ೪೨. ಹೋದರಾಯಿತು ೪೩. ಒಪ್ಪಿಕೊಂಡಳು ೪೪. ಜೊತೆಗೆ ೪೫. ಮಲಗುತ್ತೇವೆ ೪೬. ಬರಬಾರದು ೪೭. ತಾಂಬೂಲ ತಿಂದು

ಅಂದೇ ಉಂದ್ ಏಳ್ಯಾವ ಮಿಲುಕಂಡೇ
ತನ್ನ ಸಕಲಾತಿಯುಂದ[೪೮] ತಿಗದೇ ಹುದ್ದೇಕಂಡೇ
ಚಂದೂಗೋಪಾಲ ತನ್ನ್ ಹಾಸುಗಿಲೆ ಮಲಗಿರುವಾನಲ್ಲ. ೧೦೮

ಇತ್ತ ಅಕ್ಕಾ ತಂಗಾದೀರ ಕ್ವೋಣೀಯ ಒಳಗೋಗೇ
ಕದಮೇಡ[೪೯] ಹಾಕಂಡೇ ಮಲಗಿರುವಾರಲ್ಲ.
ನನ್ನಕ್ಕ ರಾದೇ ನಿಡದೇ ದಣದೇ ಬಂದೀದಂದೇ
ಎಣ್ಣೀ ಕವ್ಳಗಿ[೫೦] ತಂದೇ ಅಕ್ಕಾಗೇ ಎಣ್ಣೀತಿಕ್ಕುವಳಲ್ಲ.
ಇಲಕ್ಯೆಳೇ ನನ್ನಕ್ಕ ನಿನಕಾಲ ತಿಕ್ಕೂವಾಗೇ ೧೦೯

ಗಂಡಸರ ಕಾಲಾ ತಿಕ್ಕೀದಂಗೇ ಆತೀದಲ್ಲೇ[೫೧]
ಕಾಲಾಬಿಟ್ ಕಯ್ಯನ್ನೇ ತಿಕ್ಕಿರುವಾಳಲ್ಲ
ಕಯ್ತೋಳ ಗಂಡಸರ ಕೈತೋಳಂತಿರುವಾದೇ ೧೧೦

ಇಲಕೇಳೇ ನನತಂಗಿ ಕ್ರಟ್ನನ ಒಡನಾಡಿದವ್ರ
ಕಾಲೂ ಕಯ್ತೋಳೆಲ್ಲ ಹಾಂಗೇ ಆತೀದೇ[೫೨] ತಂಗಿ ೧೧೧

ಅಟ್ಟೊ ಮಾತನೇ ಕೇಳೀಕಂಡೇ ಚಿಂದ್ರಾವಳೆ
ಎದಿಯಾಮ್ಯೆನ್‌ಕಯ್ಯಾ ತಕ್ಕಂಡೇ ಹ್ವೊದಳೊ
ಇಲಕ್ಯೆಳೇ ನನ್ನಕ್ಕ ನಿನ್ನಾ ಎದಿಯನ್ನೇ ಕಿಟ್ಟೂವಾಗೇ
ಗಂಡಸರಾ ಎದಿಯನ್ನೇ ಕಿಟ್ಟೀದಂತಾಗುತಿದೆಯಲ್ಲೇ ೧೧೨

ಅಟ್ಟೊ ಮಾತನೇ ಕೇಳಿಸೀಕಂಡಾ ರಾದೀ ಯಾಸದ[೫೩] ಕ್ರಟ್ನಾ
ತನ್ನಾ ನಿಜರೂವಾ ಚಿಂದ್ರಾವಳಿಗೆ ತೋರಿಸಿಕಂಡೇ
ಇಲಕೇಳೇ ಚಿಂದ್ರಾವಳಿ ಹೂಂವಿನಾ ಚಬ್ಬೀಸುಣುವಾಗೇ[೫೪]
ನೀ ಏನು ಅಂದಿದೆಯೇ ಅಂದೇ ಕೇಳಿರುವಾನಲ್ಲ
ಏಳ್ದಗಲು ಏಳ್‌ರಾತ್ರೀನೇ ಮಾಡ್ ಒರಗಿರುವಾರಲ್ಲ
ಹಕ್ಕೀಪಕ್ಕೀಯೇ ಕಣ್ಣಾಕಾಣದೆ ಚೀಗುಡುತಾವಲ್ಲ
ಕಟ್ಟೀದ ದನುವೆಲ್ಲ ಹಸಿದು ಕಂಗಾಲಾಗೇ
ಕಟ್ಟೀದಾ ದಾಂಬಾ[೫೫] ಹುಸಕಂಡೇ[೫೬] ಹ್ವೊದಾವಲ್ಲ ೧೧೩
ಆಗೇ ರಾದೀಗೆ ಇತ್ತ ಎಲ್ಲಾ ತಿಳದೇ ಹೋಯಿತೋ
ಇದೆಲ್ಲಾಕಳ್ಳಕ್ರಟ್ನನ ಮಾಯಾ ಎಂದೇ ತಿಳಕಂಡೇ
ಚಿಂದೂಗೋಪಾಲನ ಮನ್ಗೇ ಓಡೇ ಬಂದಾಳಲ್ಲ
ಇಲಕ್ಯೇಳೋ ಚಂದೂ ಬೋಪಾಲ ನೀಕೇಳೋ

---

೪೮. ಚಾದರವೊಂದನ್ನು ೪೯. ಅಗಳಿ, ಚಿಲಕ ೫೦. ಪಾತ್ರೆ ೫೧. ಆಗುತ್ತಿದೆಯಲ್ಲಾ ೫೨. ಆಗುತ್ತದೆ ೫೩. ರಾಧೆವೇಷದ ೫೪. ಒಗೆಯುವಾಗ ೫೫. ದಾಬು, ಕಣ್ಣಿ ೫೬. ಹರಿದುಕೊಂಡು

ಎಂತರ[೫೭] ನಿದ್ದೂರಿ ಮಾಡೂತೀ ಅಂದೇ ಕೇಳಿರುವಾಳಲ್ಲ
ಮಾಯಾದಾ ಕತ್ತಲೆಯೇ ಏಳೋ ಬೆಳಗಾಯಿತಲ್ಲ. ೧೧೪

ಕ್ರಟ್ನಗೇ ರಾದೀಯ ಸಪ್ಪಳವೇ ಸಿಕ್ಕೇ ಹೋಯಿತೋ
ಕೂಗುವ ಕೋಳಿಯಾಗೇ ಕೋಳಾಮ್ಯೆನ್‌ಕೂತಿಕಂಡೇ[೫೮]
ಕೋಳಮ್ಯೆನಿಂದ ಮೂರು ಸರಗೆಯ್ದಾರೋ ಸಿರಿಕ್ರಟ್ನ
ಆಗೇ ಕತ್ತಲು ಕಳದೇ ಬೆಳಗಾಗೇ ಹೋಯೀತೋ.
ಚಿಂದೂಬೂಪಾಲ ಪುರಸತಿಯ[೫೯] ಮಾಡಾಲೇ ಇಲ್ಲ
ಒಳ್ಳ ತಲವರವ ಹಿಡಕಂಡೇ ಬಾಗಲದಲ್ಲೇ ನಿಂತಿರುವಾನಲ್ಲ
ಆಗೇ ಹಿಂದಿಂದೇ ಹೋಗೇ ರಾದೇ ಕೈಹಿಡಿದಿರುವಾಳಲ್ಲ
ನನ್ನ ತಂಗೀಯಿಂದ ತಪ್ಪೆದ್ದರೆ ನಿನ್ನಾಮನಿಯಾ ಮುಂದೆ
ಅಗ್ಗೂನಿಕೊಂಡವ ತೋಡಲೆ ಬೇಕೆಂಬಾಳಲ್ಲ
ಕೊಂಡವ ಕಡದೇ ಕೆಂಡಾನೇ ಕೂಡಿಸಿಕಂಡೇ
ಅಗ್ಗೂನಿ ಪ್ರವೇಸಾ ಮಾಡಲೇಬೇಕಂಬಾಳಲ್ಲ. ೧೧೫

ಅಕ್ಕನ ನುಡಿಕೇಳೇ ತಂಗೇ ಚಿಂದ್ರಾವಳಿಯೋ
ಕೆಂಡಲಬ್ಬರಗೀ ಹೂಂವಿನ ದಂಡೀನೇ ಮುಡಕಂಡೇ
ಒಳ್ಳಪಟ್ಟೀಯಾ ಸೇರೀಯನಿರಿ ಹುಯ್ದೇ ಒಟ್ಟಾಳೆ
ಅಗ್ಗೂನಿ ಕೊಂಡಾದ ಮುಂದೇ ಬಂದ್ ನೆಂತಾಳೇ. ೧೧೬

ನನ್ನ ತಂಗೇ ಚಿಂದ್ರಾವಳಿ ತಪ್ಪೂ ಏನಿದ್ದರೇ
ಬಸ್ಮಾಗೇ ಹ್ವೋಗಾಲೇ ತಪ್ಪೇನೂ ಇಲದಿದ್ದರೆ
ಸೂಡಿದ ಹೂಂವೇ ಬಾಡದ ಬಗಿಯಲ್ಲೇ
ಇದ್ದೇಬರಲಂದೇ ಅಕ್ಕಾ ರಾದೇ ಹೇಳಿರುವಾಳಲ್ಲ. ೧೧೭

ಆಗೇ ಚಿಂದ್ರಾವಳೇ ಕೊಂಡಕ್ಕಯ್ದೂ ಸುತ್ತಿರಗೇ
ಸೂಲಿಯಮ್ಮಾಗೇ ಕಯ್ಯಾನೇ ಮುಗದೇ
ತಪ್ಪಿಲದಾ ನನ್ನಾ ಪತುವರ್ತನ[೬೦] ಕಾಪಾಡಂದೇ
ಅಗ್ಗೂನಿ ಕೊಂಡವ ಗುದುಕಿರುವಾಳಲ್ಲ[೬೧] ೧೧೮

ಆಗೇ ಹೊನ್ನ ತುಂಬೀಯಾಗೇ ಸಿರಿಹರೆ
ಬಲಕಾನ ತೊಡಿಯಾ ಮ್ಯೆನೇ ಕುಳತೀಕಂಡೇ
ಸೂಡಿದ ಹೂಂವ ಬಾಡದೇ ಎದ್ದಾಂಗೇ
ಇದ್ದೇ ಬರುವಂಗೇ ಮಾಡಿರುವಾನಲ್ಲ. ೧೧೯

೫೭.ಯಾತರ ೫೮. ಮನೆಯ ತುದಿಯ ಮೇಲೆ ೫೯. ತಡಮಾಡಲಿಲ್ಲ ೬೦. ಪಾತಿವ್ರತ್ಯ ೬೧. ದುಮುಕಿದಳು

೬. ಶಿವಗಂಗೆ

ಅಟ್ಟಟ್ಟು[೧] ದಿನದಲ್ಲೇ ಅಟ್ಟೂಮೀ[೨] ದಿನದಲ್ಲೇ
ಗಂಗೆ ಹುಟ್ಟೀದಾ ದಿನಕಾಡ[೩] ಗಿಳಿರಾಜ[೪]
ನೀರಾ ಜಲದೀಲೆ ಬೆಡಬೇಕ। ೧೨೦

ಉಂದೂ ಜೋಳೂಗ್ಹೊರವಾ ಕಟ್ಟೀದ ಗಿಳಿರಾಜ
ಸೊನಗಾರ ಮನುಗೇ ನೆಡದಾನೆ। ಗಿಳಿರಾಜ
ಚಿನ್ನದ ಪಿಟ್ಟುಗಿಯಾ ಗಿಯೂಸೀದಾ। ಗಿಳಿರಾಜ
ಅಲ್ಲೇ ಗಂಗಮ್ಮನ ಉರುಗಿಸ್ದಾ। ಗಿಳಿರಾಜ
ನೀರಾ ಜಲದೀಲೇ ಬಿಡೂವಾನೇ। ೧೨೧

ಚಿನ್ನದ ದೋಣಿ ತಕ್ಕಂಡ್ ಬಿಳ್ಳೀ ಹುಟ್ಟಾ ತಕ್ಕಂಡ್
ನಿಡಗನ ಸಮುದ್ರಕೇ ನೆಡುದಾನೆ। ಅಂಬೇರಣ್ಣ
ಚಿನ್ನದ ಪಿಟ್ಟಗಿಯೇ ದುರಕೀತ। ಅಂಬೇರಣ್ಣ
ಆಚೇರಿ ಮನಗೇ ತರೂವಾನೇ।
ಆಚೇರಿ ಮನಗೇ ತರುವಾ ಅಂಬೇರಣ್ಣ
ಆಚೇರಿ ಯೆಂದೇ ಕರದಾನೆ
ಉಂಚರಿಗ್[೫] ಬ್ಯೆಗಾನೇ ತಿಗದೀಕೊಡಾಚೇರಿ
ಅಡನ ಮುಚ್ಚಳ ನನಗೆಲ್ಲೋ। ಲಾಚೇರಿ
ಮ್ಯೆನನ ಮುಚ್ಚಳ ನಿನಗೇಲೋ
ಆಚೇರಿ ಬ್ಯೆಗಾನೆ ತಿಗದೀ ನೋಡದ್ರೆ
ಅಡಗನ ಮುಚ್ಚಳದಲ್ಲೇ ಕನ್ನೆ ಹೆಣ್ಣಾ।
ಹೆಣ್ಣ ಕರಕಂಡೇ ಮನೆಗಿನ್ನೆ ತಂದಾನೇ
ಗಂಗಮ್ಮನಂದೇ ಹೆಸರಿಟ್ಟ। ಅಂಬೇರಣ್ಣ
ಮೀನ ಹುಡುವಾಕೆ ನೆಡುದಾನೇ। ಅಂಬೇರಣ್ಣ
ಮೀನ ಹುಡುಕಂಡೇ ಬರುವಾನೇ। ಅಂಬೇರಣ್ಣ
ಗಂಗಮ್ಮ ಮೀನಮಾರ್ವಕೆ ನೆಡುದಾಳೆ ೧೨೨

ಮೀನಮಾರೂವ ಗಂಗಮ್ನ ನೋಡಾನೇ
ಗ್ಹೊಕ್ಕದಾ ಮಾಬ್ಲೇಸರ ಸ್ವೊಮೆ

---

೧. ಅಷ್ಟಷ್ಟು ೨. ಅಷ್ಟಮಿ ೩. ದಿವಸ ಕೆಟ್ಟದ್ದು ೪. ಗಿರಿರಾಜ ೫. ಒಮ್ಮೆ

ಅಂಬೇರ ಮುಗುವಂದೇ ನಂಬೀಸಿ ಕರದಾನೆ
ಮುಡದೊಡ್ಡ ನಿನ್ನಾ ನಡಸಣ್ಣ। ಅಂಬೇರ್ ಹುಡ್ಗಿ
ನೀ ಒಪ್ಪೇ ನನ್ನಾ ಜೆಡಿಯಲ್ಲೇ।
ನಿಮ್ಮಾ ಜಡಿಲುಪ್ಪೂಕ್ ಮೀಯೆಲ್ಲ ಹೊಲಮಾಯಾ[೬]
ಹ್ಯೆಂಗೊಪ್ಪಲೆ ನಿಮ್ಮಾ ಜಡಿಯಲ್ಲೇ ತಾನಾ।
ಮೀಯೆಲ್ಲ ಹೊಲಿಯಾದ್ರೆ ಗಂಗೀಯಲ್ಲೇ ನೀರುಂಟು
ನೀನೊಪ್ಪೇ ನನ್ನಾ ಜಡಿಯಲ್ಲೇ ತಾನಾ ೧೨೩

ನಿಮ್ಮ ಜಡಿಯಲ್ಲುಪ್ಪೂಕ್ ಅಣ್ಣ ತಮ್ಮದೀರೇವ್ರ
ಹ್ಯೆಂಗೊಪ್ಪಲೆ ನಿಮ್ಮಾ ಜಡಿಯಲ್ಲೇ ತಾನಾ
ಅಣ್ಣತಮ್ಮದೀರೀಗೇ ಸಿದ್ಧೊನ್ನ ಹುಯ್ಲೊವೇ
ನೀನೊಪ್ಪೇ ನನ್ನಾ ಜಡಿಯಲ್ಲೇ ತಾನಾ ೧೨೪

ನಿಮ್ಮ ಜಡಿಯಲ್ಲುಪ್ಪೂಕ್ ತಾಯಿ ತಂದೀಯೇವ್ರ
ಹ್ಯೆಂಗೊಪ್ಪಲೆ ನಿಮ್ಮಾ ಜಡಿಯಲ್ಲೇ ತಾನಾ
ತಾಯೀ ತಂದೀರಿಗೆ ಕೊಳಗ್ಹೊನ್ನಾ ಹೂಯ್ಲೊವೆ
ನೀ ಒಪ್ಪೇ ನನ್ನಾ ಜಡಿಯಲ್ಲೇ ತಾನಾ ೧೨೫

ಗಂಗೀ ಮಾಬ್ಲೇಸ್ರಲ್ ನಿಂತೀ ಮಾತಾಡ್ವಂಗೇ
ಬಂದೇ ಅರಗಿದವೆ ಅರಗಿಳೆ ತಾನಾ
ಬಂದಾ ಗಿಳಿರಾಜಾ ಬ್ಯೆಳೀ ಬೆಲ್ಲಾ ಕುಡ್ವೇ
ಹೂಂವ್ನ ಪಂಚರವಾಗಿಯ್ಲೊವೆ ತಾನಾ ೧೨೬

ಬ್ಯೆಳಿ ಬೆಲ್ಲವುಂಟು ಹೂಂವ್ನ ಪಂಜರವುಂಟು
ನಮ್ಮಮ್ಮಗೆ ಸುದ್ದೀ ತಿಳಿಸ್ತವ ತಾನಾ
ಉಪ್ಪರಗೀ ಒಳಗೇ ಮುತ್ತ ಸುರು ಅಮ್ಮ
ಮತ್ತೊಂದು ಸುದ್ದಿ ಹೊಸ ಸುದ್ದಿ ತಾನಾ
ಮತ್ತೊಂದು ಸುದ್ದಿ ಹೊಸಸುದ್ದಿ ಮಾಬ್ಲೇಸ್ರ ಸ್ವೊಮೆ
ಜಡಿಯಲ್ ಹಿಂಡೂತಿ ತರಲ್ಹೊದ್ರ ತಾನಾ ೧೨೭

ಮಾಳೂಗಿ ಒಳಗೇ ಹೂಂವಸುರು[೭] ಅಮ್ಮ
ಏಗುಂದು ಸುದ್ದೇ ಹೊಸ ಸುದ್ದೇ ತಾನಾ
ಏಗುಂದು ಸುದ್ದೇ ಹೊಸಸುದ್ದೇ ಮಾಬ್ಲೇಸ್ರ ಸ್ವೊಮೆ
ತೊಡಿಯಲ್ ಹಿಂಡೂತಿ ತರಲ್ಹೊದ್ರ ತಾನಾ

---

೬. ಹೊಲಸು ೭. ಹೂವನ್ನು ಸುರಿಯುವ

ಅಟ್ಟಂಬು ಮಾತಾನೇ ಕೇಳಾಳೇ ಗೌರಮ್ಮ
ಕೆಂದೀ ಕೊಟಗೀಗೇ ಹ್ವೊದಾಳೇ ತಾನಾ ೧೨೮

ಕೆಂದೀ ಕೊಟ್ಟಗೀಗೇ ಹ್ವೊದಾಳೇ ಗೌರಮ್ಮ
ಕೆಂದೀ ಸಿಗಣೀಯಾ ತಂದಾಳೇ ತಾನಾ
ಕೆಂದೀ ಸಿಗಣೀಯಾ ತಂದಾಳೇ ಗೌರಮ್ಮ
ಮೂಡಲ್ಹಸಗೇರಿ ಸಾರ್ಸಾಳೇ ತಾನಾ
ಮೂಡಲ್ಹಸಗೇರಿ ಸಾರ್ಸಾಳೇ ಗೌರಮ್ಮ
ರನ್ನ ಬಣ್ಣದ್ಹಲಿಯಾ್ ಬರದಾಳೇ ತಾನಾ
ರನ್ನ ಬಣ್ಣದ್ಹಲಿಯಾ ಹೊಯ್ದಾಳೇ ಗೌರಮ್ಮ
ಎಯ್ಡು ಕಡಗೆಯ್ಡು ಹಸೀ ಎಟ್ಟ ತಾನಾ
ಎಯ್ಡು ಕಡಗೆಯ್ಡು ಹಸಿಯೆಟ್ಟ ಗೌರಮ್ಮ
ಎಯ್ಡೊ ಗಿಂಡ್ಯಲ್ಲೇ ಹಣನೀರ ತಾನಾ
ಎಯ್ಡೊ ಗಿಂಡ್ಯಲ್ಲೇ ಹಣನೀರ ತುಂಬಳ
ಎಯ್ಡೊ ಕಡೆಗೆಯ್ಡು ಜಗಜೋತೆ ತಾನಾ
ಎಯ್ಡೊ ಕಡೆಗೆಯ್ಡು ಜಗಜೋತೆ ಕಚ್ಚೇಲೆ
ಕದವನೆ ಜಡದೇ ಉರಗಾಳೆ ತಾನಾ ೧೨೯

ಅಟ್ಟಂಬು ದಾತೂರೀಗ್ ಒಬ್ಬನೇ ನಾ ಬಂದೆ
ದಬ್ಬನೇ ಕದವಾ ತಿಗಿ ಗೌರಿ ತಾನಾ
ಕಳ್ಳನಂದು ಅರಿಯೆ ಪುಂಡನಂದು ಅರಿಯೆ
ನಾನ್ಹೆಂಗೇ ಕದವಾ ತಿಗಿಯಾಲೇ[೧೦] ತಾನಾ ೧೩೦

ಕಳ್ಳನು ನಾನಲ್ಲ ಪುಂಡನು ನಾನಲ್ಲ
ಆಕಿ ಗೌರವ್ವಿ ಅರಸಾನೇ ತಾನಾ
ಆಕಿ ಗೌರವ್ವಿ ಅರಸ ಮಾಬ್ಲೇಸ್ರ ಸ್ವೊಮೆ
ದಬ್ಬನೇ ಕದವಾ ತಿಗಿಗೌರಿ ತಾನಾ ೧೩೧

ಗಡಗಡ ಅನ್ನುತ್ತ ಮುಡಿಯ ಒಲ್ಲಾಡೂತ
ಇಡಗೀದ[೧೧] ಕಿರಿಬಿಟ್ಟ[೧೨] ಅರಿಯಳೇ ತಾನಾ
ಇಡಗದ ಕಿರಿಬಿಟ್ಟ ಅರಿಯಾಳೇ ಗೌರಮ್ಮ
ಸಡಗರದಲ್ ಕದವಾ ತಿಗುದಾಳೇ ತಾನಾ ೧೩೨

ದಿನ್ನಚ್ಚು[೧೩] ಗೌರೀ ಉಂದು ಜಗಜೋತೀಯೇ
ಇಂದೆಯ್ಡು ಕಡಗೇ ಜಗಜೋತೆ ತಾನಾ

೮. ಹಸಗರ ೯. ರಂಗೋಲಿ ೧೦. ತೆರೆಯಲಿ ೧೧. ಎಡವಿದ ೧೨. ಕಿರುಬೆರಳು ೧೩. ದಿನಾಲು

ಇಂದೆಯ್ಡು ಕಡಗೇ ಜಗಜೋತಿ ಕಚ್ಚೇ ಗೌರಿ
ಇಂದಿಬ್ಬರ್ಯೆರೇ ಗೆಣಿಯರು ತಾನಾ ೧೩೩

ಗೆಣಿಯರ ಕಾಣಲಿಲ್ಲ ಗೆಣಿಯರ ನೋಡಲಿಲ್ಲ
ಕೆರೆಯಲ್ ಕೆಂಬಳ್ಳಿ ಮುಗುಟೀಯೆ ತಾನಾ
ಕೆರೆಯಲ್ ಕೆಂಬಳ್ಳಿ ಮುಗುಟೀ ನಲ್ಲಿರುವ
ಸುರನಾರೀಗುಂದ ನಿಮಗುಂದ ತಾನಾ ೧೩೪

ಸುರನಾರಿ ತರಲಿಲ್ಲ ಸುರನಾರಿ ಕಾಣಲಿಲ್ಲ
ಗಣಪನ ಸಾಕ್ಷಿ ತರಲಿಲ್ಲ ತಾನಾ
ಹೋರಿಯ ಮಾರೀರಿ ನಾಲ್ವರ ತನ್ನೀರಿ
ಗಣಪನ ಮ್ಯೆನಾಣಿ ಕೊಡಬ್ಯೆಡಿ ತಾನಾ ೧೩೫

ದಿನ್ನಚ್ಚು ಗೌರೀ ಉಂದ್ ಹಸಿಯಿಡತದೆ
ಇಂದೆಯ್ಡು ಕಡೆಗೇ ಹಸಿಯಿಟ್ಟೇ ತಾನಾ
ಇಂದೆಯ್ಡು ಕಡೆಗೇ ಹಸಿಹಾಸಿ ಎಲೆಗೌರಿ
ನಿನಗಿಬ್ಬರೇನೇ ಪುರುಸರು ತಾನಾ ೧೩೬

ಪುರುಸರ ಕಾಣಲಿಲ್ಲ ಪುರುಸರ ನೋಡಲಿಲ್ಲ
ಕೆರಿಯಲ್ ಕೆಂಬಳ್ಳಿ ಮುಗುಟೀಯೇ ತಾನಾ
ಕೆರಿಯಲ್ ಕೆಂಬಳ್ಳಿ ಮುಗುಟೀನಲ್ಲಿರುವ
ಸುರನಾರೀಗುಂದ ನಿಮಗುಂದ ತಾನಾ ೧೩೭

ಚಪ್ಪರ ಚಪ್ಪರ ಸಾಕ್ಷ ಚಪ್ಪರ ಕಂಬು ಸಾಕ್ಷ
ಚಪ್ಪರದಲ್ಲಿರುವ ಜನ ಸಾಕ್ಷ ತಾನಾ
ಚಪ್ಪರದಲ್ಲಿರುವ ಜನ ಸಾಕ್ಷ ಮನಸಾಕ್ಷ
ಗಣಪನ ಸಾಕ್ಷವೇ ತರಲಿಲ್ಲ ತಾನಾ ೧೩೮

ಇತ್ತನೇ ಮಾರೀರಿ ಮತ್ತಿಬ್ಬರ ತನ್ನಿರಿ
ಗಣಪನ ಮ್ಯೆನಾಣಿ ಕೊಡಬ್ಯೆಡಿ ತಾನಾ
ಅತ್ತೀಯ ಮರನಾ ಹತ್ತಬ್ಯೆಡಿ ಗಣಪಯ್ಯ
ಮತ್ತುಂದು ಸಿಸುವೇ ತಮಗಿಲ್ಲ ತಾನಾ
ಮತ್ತುಂದು ಸಿಸುವೇ ತಮಗಿಲ್ಲ ನಿನ್ನಪ್ಪೋಜೆ
ಜಡಿಯಲ್ ಹಿಂಡೂತಿ ತರಲ್ಹೊದ್ರ ತಾನಾ ೧೩೯

ಬಂಗ್ಡೀನಾ ದೋಣೇ ಹಾಯ್‌ಕಟ್ಟಿ ಬರುವಾಗೇ
ಇದನೋಡ ಗಣಪಾ ಇಪರೀತ ತಾನಾ ೧೪೦

ಇದನೋಡ ಗಣಪಾ ಇಪರೀತ ನಿನ್ನಪ್ಪೋಜೆ
ಕಿರಿಯಾ ಹಿಂಡೂತಿ ಬಳಗಾವೋ ತಾನಾ
ಕಿರಿಯಾ ಹಿಂಡೂತಿ ಬಳಗಾ ಬರುವಾಗೇ
ಮಿಣಸನ ಮೋಡ್ಯಾನೇ ಹೊರಗ್ಹೊಯ್ಯೋ ತಾನಾ ೧೪೧

ಅಟ್ಟಿಕ್ಕೂವೇ ಅಕ್ಕಗೆ ಸುಟ್ಟಿಕ್ಕುವೆ ಗಣಪಗೆ
ಕಾಸಿಕ್ಕುವೆ ನಿನ್ನಾ ಬಳಗಾಕೇ ತಾನಾ
ಅಟ್ಟಿಕ್ ನಿನ್ನಪ್ಪಗೇ ಸುಟ್ಟಿಕ್ ನಿನ್ ಗಂಡಗೇ
ಕಾಸಿಕ್ಕು ನಿನ್ನಾ ಬಳಗಾಕೇ। ತಾನಾ ೧೪೨

ತೋರಿನಾ ದೋಣೀ ಸಂಗ್ಡಕಟ್ ಬರುವಾಗೇ
ಇದನೋಡೋ ಗಣಪಾ ಇಪರೀತಾ ತಾನಾ
ಇದನೋಡೋ ಗಣಪಾ ಇಪರೀತಾ ನಿನ್ನಪ್ಪೋಜಿ
ಕಿರಿಯಾ ಹಿಂಡೂತಿ ಬಳಗಾವೋ ತಾನಾ
ಕಿರಿಯಾ ಹಿಂಡೂತಿ ಬಳಗಾವೇ ಬರುವಾಗೇ
ಹುಳಿಯಾ ಮೋಡ್ಯಾನೇ ಹೊರಗ್ಹುಯ್ದೋ ತಾನಾ ೧೪೩

ಅಟ್ಟಿಕ್ಕುವೆ ಅಕ್ಕಗೆ ಸುಟ್ಟಿಕ್ಕುವೆ ಗಣಪಗೆ
ಕಾಸಿಕ್ಕುವೆ ನಿನ್ನಾ ಬಳಗಾಕೇ ತಾನಾ
ಅಟ್ಟಿಕ್ ನಿನ್ನಪ್ಪಗೆ ಸುಟ್ಟಿಕ್ ನಿನಗಂಡಗೇ

ಎ. ಕಿನ್ನರ ಕಥನ ಕವನಗಳು

ಪರಿವಿಡಿ	ನಿರೂಪಕರು ಹೆಸರು	ಊರು
೦೧. ಚಿನ್ನದ ಕೋಡ್ನ ಚಿನ್ನದ ಬಸ್ವ, ಬೆಳ್ಳೀ ಕೋಡ್ನ ಬೆಳ್ಳಿ ಬಸ್ವ	ದುರ್ಗಿ ದೇವಪ್ಪ ನಾಯಕ	ಬೇಲೇಕೇರಿ
೦೨. ಲೋಲೋ–ಲೋಲುಂಬೆ	ಸರಸ್ವತಿ ಸುಬ್ರಾಯ ನಾಯಕ	ಬೇಲೇಕೇರಿ
೦೩. ಹವಳಮ್ಮ	ನಾಗಮ್ಮ ಬೊಮ್ಮಯ್ಯ ನಾಯಕ	ಬೇಲೇಕೇರಿ
೦೪. ಸೆಣ್ಣಮ್ಮದೇವಿ	ದೇವಮ್ಮ ಹೊನ್ನಪ್ಪ ನಾಯಕ	ಭಾವಿಕೇರಿ

ಆಕರ ಮೂಲ : ಕಪಟಿಗಳ ಕಥೆ (೧೯೯೯)
: ಡಾ. ಎನ್. ಆರ್. ನಾಯಕ
: ಜಾನಪದ ಪ್ರಕಾಶನ ಹೊನ್ನಾವರ

ಆಕರ ಮೂಲ : ಪಾಠಾಂತರ ಕಥನ ಕವನಗಳು (೧೯೯೭)
: ಡಾ. ಎನ್. ಆರ್. ನಾಯಕ
: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

ಸಂಗ್ರಹ ಕಾಲ : ೧೯೬೮– ೧೯೭೧

೦೧. ಚಿನ್ದ ಕೋಡ್ನ ಚಿನ್ದ ಬಸ್ವ ಬಿಳ್ಳೀ ಕೋಡ್ನ ಬಿಳ್ಳಿ ಬಸ್ವ

ಕಗ್ಗಲ್ಲಾ ಕರ್ಗಲ್ಲಾ ಅರ್ಸುಮಗ್ಳ ಸುವ್ವೇಲಾಲೇ
ನಾಗೋರ್ ಬಯ್ಲೀಗೆಹ್ವೊದಾಳ ಸುವ್ವೇಲಾಲೇ
ನೀರಾ ಕೊಡನಾ ತುಂಬೀದಾಳ ಸುವ್ವೇಲಾಲೇ
ಗೊಲ್ಲರಾ ಕೋಸಾನೇ[೧] ಸುವ್ವೇಲಾಲೇ
ದನುವಾ ಕಾವೂಕೋಗದಾ ಸುವ್ವೇಲಾಲೇ
ಚಿನ್ದ ಕುಂಬ್ನ ಚಿನ್ದ ಬಸ್ವಾ ಸುವ್ವೇಲಾಲೇ
ಬಿಳ್ಳೀ ಕುಂಬ್ನ ಬಿಳ್ಳೀ ಬಸ್ವಾ ಸುವ್ವೇಲಾಲೇ
ಕುಂಟಿತ್ತು[೨] ಕುಯ್ಡಿತ್ತು[೩] ಸುವ್ವೇಲಾಲೇ
ಮೇವೂಕಾದ್ರ ಹೋಗದ್ದು ಸುವ್ವೇಲಾಲೇ
"ಇಲಕೇಳ ಗೊಲ್ಲರ ಪ್ವೊರಾ ಸುವ್ವೇಲಾಲೇ
ಚಿನ್ನದ ಕೊಡ್ನಾ ಇತ್ತೋಗಪ್ವಾ" ಸುವ್ವೇಲಾಲೇ
ನಿನ್ನಪ್ನಮನಿ ಆಳಲ್ಲಾ" ಸುವ್ವೇಲಾಲೇ
"ಉಂದೂ[೪] ತಾಸ್ನೆ ಮಾತೀಗೆ ಸುವ್ವೇಲಾಲೇ
ನಿನ್ನತ್ಗಿಯರೂ ಆತೀನಪ್ವಾ" ಸುವ್ವೇಲಾಲೇ
"ನಿನ್ನಂತಾ ಅತ್ಗದೀರ ಸುವ್ವೇಲಾಲೇ
ಇಟ್ವೊ ಜನಾ "ಯೇವ್ರನಂಗೆ"[೫] ಸುವ್ವೇಲಾಲೇ
"ಇಲಕೇಳ ಗೊಲ್ಲರ ಪ್ವೊರಾ ಸುವ್ವೇಲಾಲೇ
ಬಿಳ್ಳೀ ಕರಗಿ ಇತ್ತೋಗ[೬]" ಸುವ್ವೇಲಾಲೇ
"ಬಿಳ್ಳೀ ಕರ್ಗಿ ಇತ್ತೂಕೆ ಸುವ್ವೇಲಾಲೇ
ನಿನ್ನಪ್ನಮನಿ ಆಳಲ್ಲಾವೆ?" ಸುವ್ವೇಲಾಲೇ
"ಉಂದೂ ತಾಸ್ನ ಮಾತೀಗೆ ಸುವ್ವೇಲಾಲೇ
ನಿನ್ ಹಿಂಡ್ತಿಯರು ಆತೀನಪ್ವಾ" ಸುವ್ವೇಲಾಲೇ
ನಿನ್ನಂತಾ ಹಿಂಡರ ಸುವ್ವೇಲಾಲೇ
ಇಟ್ವೊಜನ್ರ ಏವ್ರನಂಗೆ ಸುವ್ವೇಲಾಲೇ
ಕಗ್ಗಲ್ಲಾ ಕರ್ಗಲ್ಲಾ ಅರ್ಸುಮಗ್ಳ ಸುವ್ವೇಲಾಲೇ
ಚಿನ್ದ ಕೊಡ್ನಾ ಬಡದಾಳ ಸುವ್ವೇಲಾಲೇ
ಬಿಳ್ಳೀ ಕೊಡ್ನಾ ಜರದಾಳ ಸುವ್ವೇಲಾಲೇ

---

೧. ಹುಡುಗನು ೨. ಕುಂಟ ಎತ್ತು ೩. ಕುರುಡ ಎತ್ತು ೪. ಒಂದು ೫. ಎಷ್ಟೋ ಜನರು ಇದ್ದಾರೆ ನನಗೆ ೬. ಎತ್ತಿಹೋಗು

ಮಿಯ್ಯಾ ಕಯ್ಯಾ ಸಿಕ್ಕಂಡಾಳ[೭] ಸುವ್ವೇಲಾಲೇ
ಮಂಡೀ ಅಂದ್ರ ಬಿಚ್ಚೀದಾಳ ಸುವ್ವೇಲಾಲೇ
ಮನ್ಗೆ ಅಂದ್ರ ಬಂದಾಳ ಸುವ್ವೇಲಾಲೇ
ತಂದಿ ತಾಯೀ ಲಂಬವ್ರ ಸುವ್ವೇಲಾಲೇ
ದೋರಿಂದೇಲಿ ಬರ್ವದ ಕಂಡ್ರ ಸುವ್ವೇಲಾಲೇ
ಓಡೇ ಓಡೇ ಬಂದಾರ ಸುವ್ವೇಲಾಲೇ
ನಿನ್ನೆರ ಹೊಡ್ದಾರ ಸುವ್ವೇಲಾಲೇ
ನಿನ್ನೆರ ಬಡ್ದಾರ ಸುವ್ವೇಲಾಲೇ
ಗೊಲ್ಲಾರಾ ಪ್ವೋರಾನೇ ಸುವ್ವೇಲಾಲೇ
ನನ್ ಕಯ್ಯಾಸೇರಿ ಬಂದಾನಪ್ಪ ಸುವ್ವೇಲಾಲೇ
ನನ್ ಮಿಯ್ಯಾಸೇರಿ ಬಂದಾನಪ್ಪ ಸುವ್ವೇಲಾಲೇ
ಚಿನ್ನದ ಕೊಡ್ನಾ ಉಡದೇಬಿಟ್ಟಾ[೧೦] ಸುವ್ವೇಲಾಲೇ
ಬಿಳ್ಳಿ ಕರಗಿ ಜಿರದೇಬೆಟ್ಟಾ ಸುವ್ವೇಲಾಲೇ
ಅಟ್ಟೊ ಮಾತಾ ಕೇಳ್ದಾ ಅರ್ಸಾ ಸುವ್ವೇಲಾಲೇ
ಚಂಡಾಳ್ರ ಕರ್ಸೇ ಬೆಟ್ಟಾ ಸುವ್ವೇಲಾಲೇ
ಏಗಂದೇಗೆ ಹ್ವೊಗಾಬೇಕು ಸುವ್ವೇಲಾಲೇ
ಗೊಲ್ಲರಾ ಪ್ವೊರಾನಾ ಸುವ್ವೇಲಾಲೇ
ತಲಿಯಾನಂದ್ರ ಕಡಿಯಾಬೇಕು ಸುವ್ವೇಲಾಲೇ
ಚಂಡಳ್ರ ಏನ್ ಮಾಡ್ದ್ರ ಸುವ್ವೇಲಾಲೇ
ಕತ್ತಿನಂದ ತಡ್ದಾರೇಗೂ[೧೧] ಸುವ್ವೇಲಾಲೇ
ನಾಗೋರ್ ಬಯ್ಲೀಗ್ ಹ್ವೊದಾರ ಸುವ್ವೇಲಾಲೇ
ಚಿನ್ದ ಕುಂಬ್ನ ಚಿನ್ದ ಬಸ್ವ ಸುವ್ವೇಲಾಲೇ
ಬಿಳ್ಳೀ ಕುಂಬ್ನ ಬಿಳ್ಳಿ ಬಸ್ವ ಸುವ್ವೇಲಾಲೇ
ಚಂಡಳ್ರ ಬರುವದ ನೋಡ್ದು ಸುವ್ವೇಲಾಲೇ
ಸಿಗ್ದೇ ಬಗ್ದೇ ಬೆಟ್ಟಾವೇಗೂ ಸುವ್ವೇಲಾಲೇ
ರುಂಡಾ ಮುಂಡಾ ಹಿಂಡ್ನಲ ಹಾಕ್ದು ಸುವ್ವೇಲಾಲೇ
ಎಯ್ಡು ಮೂರು ದಿನ್ನೇ ಆಯ್ತು ಸುವ್ವೇಲಾಲೇ
ಹ್ವೊದವ್ರೇ ಬರ್ಲೇ ಇಲ್ಲಾ ಸುವ್ವೇಲಾಲೇ
ಅರಸೂವಾ ಮನಿಯಲ್ಲೂ ಸುವ್ವೇಲಾಲೇ
ನೀರು ಬೆಂಕಿ[೧೨] ಇಲ್ಲವೋ ಸುವ್ವೇಲಾಲೇ
ಬಾಳೂ ಚಿಂತಿಲೊಳ್ದಾರೇಗೂ ಸುವ್ವೇಲಾಲೇ

---

೭. ಸಿಗಿದುಕೊಂಡಳು ೮. ದೂರದಿಂದ ೯. ನಿನ್ನನ್ನಾರು ಹೊಡೆದರು? ೧೦. ಒಡೆದು ಬಿಟ್ಟನು ೧೧. ಹಿಡಿದಿರೀಗ

ಹೆದ್ದಣ್ಣಾ ಪೆದ್ದಣ್ಣಾ ಸುವ್ವೇಲಾಲೇ
ಅಲ್ಲಿಂದೇ ಹೋತದ್ರ ಸುವ್ವೇಲಾಲೇ
ನೀರು ಬೆಂಕಿ ಯಾಕಿಲ್ಲ ಸುವ್ವೇಲಾಲೇ
ಮೊಕಾ ಬಾಡೇ ಕುಳ್ತರಿ[೧೩] ಸುವ್ವೇಲಾಲೇ
ಯಾಕಂದೇ ಕೇಳದ್ರ ಸುವ್ವೇಲಾಲೇ
ಗೊಲ್ಲರ್ ಪ್ವೊರ್ನ ರಕ್ತಾ ತಂದವ್ರೀಗ್ ಸುವ್ವೇಲಾಲೇ
ಅರ್ಧಾರಾಜ್ಯಾ ಕುಡ್ತಿನಂದಾ ಸುವ್ವೇಲಾಲೇ
ಹೆದ್ದಣ್ಣಾ ಪೆದ್ದಣ್ಣಾ ಸುವ್ವೇಲಾಲೇ
ಅರಸೂವಾ ಕಯ್ಲೇಗೇ[೧೪] ಸುವ್ವೇಲಾಲೇ
ಚಿನ್ನ ಕಾಲ್ಮಿಟ್ ಬೇಕಂದ್ರ[೧೫] ಸುವ್ವೇಲಾಲೇ
ಚಿನ್ದ ಕಾಲ್ಮಿಟ್ ಮಾಡ್ಸ್ದ್ರೇಗೂ ಸುವ್ವೇಲಾಲೇ
ಚಿನ್ದ ಕಾಲ್ಮಿಟ್ ತಕ್ಕಂಡೇ ಸುವ್ವೇಲಾಲೇ
ನಾಗೋರ್ ಬಯ್ನೀಗ ನೆಡ್ದಾರ ಸುವ್ವೇಲಾಲೇ
ಚಿನ್ದ ಕುಂಬ್ನ ಚಿನ್ದ ಬಸ್ವಾ ಸುವ್ವೇಲಾಲೇ
ಬಿಳ್ಳೀ ಕುಂಬ್ನ ಬಿಳ್ಳಿ ಬಸ್ವಾ ಸುವ್ವೇಲಾಲೇ
ಉಂದೂ ದಿಕ್ಕೀಗ್ ಮೀವ್ಕೋಗದ್ದು ಸುವ್ವೇಲಾಲೇ
ನೂರುಂದು ದನಗೋಳ ಸುವ್ವೇಲಾಲೇ
ನೂರುಂದು ಕರಗೋಳ ಸುವ್ವೇಲಾಲೇ
ಕುಯ್ದಿತ್ತು ಕುಂಟತ್ತು ಸುವ್ವೇಲಾಲೇ
ಜೋಡೀಲಂದ್ರ ಮೀಯ್ತೇ ಏವ[೧೬] ಸುವ್ವೇಲಾಲೇ
ಹೆದ್ದಣ್ಣಾ ಪೆದ್ದಣ್ಣಾ ಸುವ್ವೇಲಾಲೇ
ತೂಗಲ ಮಂಚಾ ಹತ್ತದ್ರ ಸುವ್ವೇಲಾಲೇ
ಇಲಕೇಳ ಗೊಲ್ಲರ ಪ್ವೊರಾ ಸುವ್ವೇಲಾಲೇ
ನಮ್ಮರಸಾ ನಿಂಗುಂದಾ[೧೭] ಸುವ್ವೇಲಾಲೇ
ಚಿನ್ದ ಕಾಲ್ಮಿಟ್ ಮಾಡ್ಸೇ ಕುಟ್ಯಾ ಸುವ್ವೇಲಾಲೇ
ಕಾಲೀಗದ್ರ ಇಕ್ಕೀ ನೋಡ" ಸುವ್ವೇಲಾಲೇ
ನಮ್ಮಂತಾ ಬಡವರೀಗೆ ಸುವ್ವೇಲಾಲೇ
ಚಿನ್ದ್ ಕಾಲ್ಮಿಟ್ ಎಂತಕಪ್ಪಾ[೧೮] ಸುವ್ವೇಲಾಲೇ
ಬಾಳೂ ಒತ್ತಾಯ್ ಮಾಡ್ದ್ರ ಸುವ್ವೇಲಾಲೇ
ಚಿನ್ದ್ ಕಾಲ್ಮಿಟ್ ಹಾಕೂಕೇ ಸುವ್ವೇಲಾಲೇ
ತಲಿಯಾನಾದ್ರ ಹಣ್ಕದನೇಗೂ[೧೯] ಸುವ್ವೇಲಾಲೇ

---

೧೨. ಬೆಂಕಿ ೧೩. ಮುಖಬಾಡಿ ಕುಳಿತಿರುವಿರಿ ೧೪. ಹತ್ತಿರ ಈಗ ೧೫. ಚಪ್ಪಲಿಬೇಕೆಂದರು ೧೬. ಮೇಯುತ್ತಾ ಇವೆ ೧೭. ನಿನಗೊಂದು ೧೮. ಏತಕಪ್ಪಾ? ೧೯. ಬಾಗಿಸಿದನೀಗ

ಕಡ್ದೇಲಂದ್ರ ಬೆಟ್ಟಾರ ಸುವ್ವೇಲಾಲೇ
ರುಂಡಾನಂದ್ರ ತಂದಾರ ಸುವ್ವೇಲಾಲೇ
ರಕ್ತದ ಹನಿಯೇ ಬೀಳ್ತೇ ಬಂತ ಸುವ್ವೇಲಾಲೇ
ಬಸ್ಳಿ ಚಪ್ರಕಟ್ಟಾರ[೨೦] ಸುವ್ವೇಲಾಲೇ
ಅಡ್ಗಿ ಮಾಡೇ ಒಂಡಾರ ಸುವ್ವೇಲಾಲೇ
ಹೆದ್ದಣಗೆ ಪೆದ್ದಣಗೆ ಸುವ್ವೇಲಾಲೇ
ಅರ್ದಾರಾಜ್ಯಾ ಕೊಟ್ಟಾರ ಸುವ್ವೇಲಾಲೇ
ಕುಂಟಿತ್ತು ಕುಯ್ಡಿತ್ತು ಸುವ್ವೇಲಾಲೇ
ನೂರುಂದು ದನಗೋಳು ಸುವ್ವೇಲಾಲೇ
ನೂರುಂದು ಕರುಗೋಳು ಸುವ್ವೇಲಾಲೇ
ಮುಂಡಾ ನಿಡ್ಗೇ[೨೧] ಮಾಡಿಕಂಡು ಸುವ್ವೇಲಾಲೇ
ಸುತ್ತೂಮ್ಯೆನೂ ಕುಳ್ತೀಕಂಡೆ[೨೨] ಸುವ್ವೇಲಾಲೇ
ಕಣ್ಣೀರ್ ಬಿಡ್ತೆ ಒಳ್ದಾವೇಗೂ ಸುವ್ವೇಲಾಲೇ
ಸಂಜೀಯಾದರಾಯಿತ ಸುವ್ವೇಲಾಲೇ
ಚಿನ್ದ ಕುಂಬ್ನ ಚಿನ್ನದ ಬಸ್ವ ಸುವ್ವೇಲಾಲೇ
ಚಿನ್ದ್ ಕುಂಬಾ ನುಡಿಸಾಲಿಲ್ಲಾ ಸುವ್ವೇಲಾಲೇ
ಬಿಳ್ಳೀ ಕುಂಬ್ನ ಬಿಳ್ಳೀ ಬಸ್ವಾ ಸುವ್ವೇಲಾಲೇ
ಬಿಳ್ಳೀ ಕುಂಬಾ ನುಡಿಸಾಲಿಲ್ಲಾ ಸುವ್ವೇಲಾಲೇ
ನಮ್ಮೊಡಿಗೇನಾಯ್ತುಂದಾವೇಗೂ ಸುವ್ವೇಲಾಲೇ
ಎಯ್ಡೋ[೨೩] ದಾಪೀಗ್ ಒಡೇ ಬಂದು ಸುವ್ವೇಲಾಲೇ
ಅಲ್ಲಾದದ್ದೆಲ್ಲಾ ನೋಡೇಬೆಟ್ಟು[೨೪] ಸುವ್ವೇಲಾಲೇ
ಅರ್ಸೂ ಮನಿಗೆ ಓಡೇ ಬಂದು ಸುವ್ವೇಲಾಲೇ
ಅರ್ಸು ಮುಗುನಾ[೨೫] ಕುಂದೇ ಬೆಟ್ಟು[೨೬] ಸುವ್ವೇಲಾಲೇ
ಅರ್ಸು ಹಿಣ್ತಿ ಸಿಗದೇ ಬೆಟ್ಟು ಸುವ್ವೇಲಾಲೇ
ಅರ್ಸುಲಂದ್ರ ಮುರದೇಬೆಟ್ಟು ಸುವ್ವೇಲಾಲೇ
ರೋಂಡಾಲಂದ್ರ[೨೭] ತೆಗ್ದೀಕಂಡೇ[೨೮] ಸುವ್ವೇಲಾಲೇ
ಕಾಳಕುಮ್ಮಾ ಮನಿಗೇ ಹ್ವಾದು ಸುವ್ವೇಲಾಲೇ
ರುಂಡಾ ಮುಂಡಾ ಕೂಡ್ಸೇ ಇಕ್ದು ಸುವ್ವೇಲಾಲೇ
ನೂರುಂದು ದನಗೋಳ ಸುವ್ವೇಲಾಲೇ
ನೂರುಂದು ಕರಗೋಳ ಸುವ್ವೇಲಾಲೇ
ಕುಂಟಿತ್ತು ಕುಯ್ದಿತ್ತು ಸುವ್ವೇಲಾಲೇ

---

೨೦. ಬಳಳಿಯ ಚಪ್ಪರದ ಮೇಲೆ ಇಟ್ಟರು ೨೧. ನಡುವೆ ೨೨. ಕುಳಿತುಕೊಂಡು ೨೩. ಎರಡೇ ೨೪. ಅಲ್ಲಿ ನಡೆದದ್ದನ್ನೆಲ್ಲ ನೋಡಿ ಬಿಟ್ಟವು ೨೫. ಮಗಳನ್ನು ೨೬. ಕೊಂದೇ ಬಿಟ್ಟವು ೨೭. ರುಂಡವನ್ನು ೨೮. ತೆಗೆದುಕೊಂಡು

ಚೆನ್ನ್ದ ಕುಂಬ್ನ ಚೆನ್ನ್ದ ಬಸ್ವಾ ಸುವ್ವೇಲಾಲೇ
ಬಿಳ್ಳೀ ಕುಂಬ್ನ ಬಿಳ್ಳೀ ಬಸ್ವಾ ಸುವ್ವೇಲಾಲೇ
ಗಿರೂ ಮುರೂ ತೀಡುತವ್[೨೯] ಸುವ್ವೇಲಾಲೇ
ಕಣ್ಣೀರ ದಳದಳ ಬಿಡೂತನ ಸುವ್ವೇಲಾಲೇ
ಕಾಳಕಮ್ಮಾ ಮಿಚ್ಚೀದಾಳ[೩೦] ಸುವ್ವೇಲಾಲೇ
ಜೇಂವಾನಂದ್ರ ಕೊಟ್ಟಾಳೇಗೂ ಸುವ್ವೇಲಾಲೇ
ಒಡಿಯನ ಕರ್ಕಂಡ್ ನೆಡ್ದಾವೇಗೂ[೩೧] ಸುವ್ವೇಲಾಲೇ
ಚೆನ್ನ್ದ ಕುಂಬ್ನ ಚೆನ್ನ್ದ ಬಸ್ವಾ ಸುವ್ವೇಲಾಲೇ
ಬಿಳ್ಳೀ ಕುಂಬ್ನ ಬಿಳ್ಳೀ ಬಸ್ವಾ ಸುವ್ವೇಲಾಲೇ

---

೨೯. ಅಳುತ್ತವೆ ೩೦. ಮೆಚ್ಚಿದಳು ೩೧. ಕರೆದುಕೊಂಡು ಹೊರಟವು.

೨. ಲೋಲೋ–ಲೋಲುಂಬೆ

ಹಿತ್ತಲದಾ ಒಳಮ್ಯೆನ್ ಹಬ್ಬಾವ್ ಬಂತತ್ತೆಲೊಲೋ–ಲೋಲುಂಬೆ
ಹೆಬ್ಬಾವ್ ಬಂದಾರ್ ಹೆಡಗಿಲ್ ಮುಚ್ಚಂತ[೧] ಲೊಲೋ–ಲೋಲುಂಬೆ
ಹೆಡಗೀಲಂದರ್ ಮುಜ್ಜಾಳಕ್ಕ ಲೊಲೋ–ಲೋಲುಂಬೆ
ಹಿರಿಗತ್ತಿ ಕೊಟ್ಟಾಳತ್ತೆ ಲೊಲೋ–ಲೋಲುಂಬೆ
ಸಂಡ್ಗಿ ಅಂದ್ರ ಮಾಡಾಳಕ್ಕಾ ಲೊಲೋ–ಲೋಲುಂಬೆ
ಆಸೀಗಂದ್ರ ಹಾಕಾಳತ್ತೆ ಲೊಲೋ–ಲೋಲುಂಬೆ
ಆಸೀಗಂದರರ್ದಾಳಕ್ಕ[೨] ಲೊಲೋ–ಲೋಲುಂಬೆ
ಅಂಬೂಲಿಗಂದರರ್ದಾಳಕ್ಕಾ ಲೊಲೋ–ಲೋಲುಂಬೆ
ಆಸೀಗಂದರಟ್ಟಾಳತ್ತೆ ಲೊಲೋ–ಲೋಲುಂಬೆ
ಉಂದೂ ಮಡ್ಕ್ಯಲ್ ಆಸೀತುಂಬಳ ಲೊಲೋ–ಲೋಲುಂಬೆ
ಉಂದೂ ಮಡ್ಕ್ಯಲ್ ಅಂಬ್ಲಿತುಂಬಳ ಲೊಲೋ–ಲೋಲುಂಬೆ
ಗದ್ದೀಗಂದ್ರ ಹೋಗಂದಳ ಲೊಲೋ–ಲೋಲುಂಬೆ
ಚಿಂಬೀಕಟ್ಟೇ ಹೊತ್ತಾಳಕ್ಕಾ ಲೊಲೋ–ಲೋಲುಂಬೆ
ಕುನ್ನೇ ಬಂದೇ ಅಡಗಟ್ಟದು ಲೊಲೋ–ಲೋಲುಂಬೆ
ಅಣದಿರ್ ಕುಲ್ಲೂಕ್ ಹೋತಿಯೇನ್ ಲೊಲೋ–ಲೋಲುಂಬೆ
ಅಲ್ಲಂದ್ ಮುಂದೆ ಹೊದಾಳಕ್ಕಾ ಲೊಲೋ–ಲೋಲುಂಬೆ
ಬೆಕ್ಕು ಬಂದೇ ಅಡಗಟ್ಟೀತ ಲೊಲೋ–ಲೋಲುಂಬೆ
ಅಣ್ದೀರ್ ಕುಲ್ಲೂಕ್ ಹ್ಯೋತ್ಯೇನಕ್ಕಾ ಲೊಲೋ–ಲೋಲುಂಬೆ
ಅಲ್ಲಂದ್ ಮುಂದೆ ಹ್ವೊದಾಳಕ್ಕಾ ಲೊಲೋ–ಲೋಲುಂಬೆ
ಹಳ್ಳದ ಬುಡ್ಕೇ ಹ್ವೊದಾಳಕ್ಕಾ ಲೊಲೋ–ಲೋಲುಂಬೆ
ಹಳ್ಳಾನಂದ್ರ ಹಾಯ್ತಳಕ್ಕಾ ಲೊಲೋ–ಲೋಲುಂಬೆ
ಕಾಕೇ ಬಂದೇ ಕರಗೆಟ್ಟವ್ರೋ[೩] ಲೊಲೋ–ಲೋಲುಂಬೆ
ಮಡ್ಕಿ ಅಂದ್ರ ಕಿಡಗೇಬೆಟ್ಟು ಲೊಲೋ–ಲೋಲುಂಬೆ
ಅಂಬ್ಲಿ ಆಸೀ ಬಳ್ದೀಹೋಯ್ತು ಲೊಲೋ–ಲೋಲುಂಬೆ
ಮಡ್ಕಿ ಅಂದ್ರ ತೊಳ್ದಳಕ್ಕಾ ಲೊಲೋ–ಲೋಲುಂಬೆ
ಮನಗೇ ಅಂದ್ರೆ ಬಂದಳಾಕ್ಕಾ ಲೊಲೋ–ಲೋಲುಂಬೆ
ಬಡ್ಡೀಕಂದ್ರ ಬಂದೀ ಏನೇ ಲೊಲೋ–ಲೋಲುಂಬೆ
ಹೌದಂದೇ ಹೇಳಳಕ್ಕಾ ಲೊಲೋ–ಲೋಲುಂಬೆ

೨. ಪದಾರ್ಥಕ್ಕೆ ಅರೆದಳು ೩. ಕರ ಕರ ಎಂದವು

ಓಟಾ[೪]ಕಂದ್ರ ಕರ್ದಾಳತ್ತೆ ಲೊಲೋ–ಲೋಲುಂಬೆ
ಕಯ್ಯಾಲ ಮೊಕವಾ ತೊಳ್ದಾಳಕ್ಕಾ ಲೊಲೋ–ಲೋಲುಂಬೆ
ಓಟಾಕಂದ್ರ ಹೋದಾಳಕ್ಕಾ ಲೊಲೋ–ಲೋಲುಂಬೆ
ಓಟಾನಂದ್ರ ಮಾಡಳಕ್ಕಾ ಲೊಲೋ–ಲೋಲುಂಬೆ
ತಟ್ಟೀಅಂದ್ರ ತೊಳ್ದಾಳಕ್ಕಾ ಲೊಲೋ–ಲೋಲುಂಬೆ
ಕಾರಂದ್ರ[೫] ಬತ್ತೀದತ್ತೆ ಲೊಲೋ–ಲೋಲುಂಬೆ
ಕವ್ಳಾ[೬]ನಂದ್ರ ತಿನ್ನಂದಾಳ ಲೊಲೋ–ಲೋಲುಂಬೆ
ತಲಿಯೇ ಅಂದ್ರ ತಿರ್ಗ್ತೀದತ್ತೆ ಲೊಲೋ–ಲೋಲುಂಬೆ
ಮಂಚದ ಮ್ಯನೆ ಮನಗಂತತ್ತೆ ಲೊಲೋ–ಲೋಲುಂಬೆ
ಮಂಚದ ಮ್ಯನೆ ಮನಗಳಕ್ಕಾ ಲೊಲೋ–ಲೋಲುಂಬೆ
ಕಾಲಲಂದ್ರ ಜಿಪ್ತಳ[೭]ಕ್ಕಾ ಲೊಲೋ–ಲೋಲುಂಬೆ
ಕಯ್ಯಾನಂದ್ರ ಬಡೀತಳಕ್ಕಾ ಲೊಲೋ–ಲೋಲುಂಬೆ
ತಟ್ನೇ ಪ್ರಾಣಾ ಬಿಟ್ಟಾಳಕ್ಕಾ ಲೊಲೋ–ಲೋಲುಂಬೆ
ಬಾಳಿ ಬುಡ್ಕೇ ಹೊಂಡಾ ತೆಗದಳ ಲೊಲೋ–ಲೋಲುಂಬೆ
ಹೊಂಡಾದಲ್ಲೇ ಹೊಗ್ದಾಳತ್ತೆ[೮] ಲೊಲೋ–ಲೋಲುಂಬೆ
ಹೂಡೂಕ್ವೊದಾ ಮಗಾಗೇಗೂ ಲೊಲೋ–ಲೋಲುಂಬೆ
ಗಾಬ್ರಿ ಅಂದರಾದಾವೇಗೂ ಲೊಲೋ–ಲೋಲುಂಬೆ
ಕಟ್ಟೀದಿತ್ತಾ ಬಿಟ್ಟನಣ್ಣಾ ಲೊಲೋ–ಲೋಲುಂಬೆ
ಮನಗೇ ಅಂದ್ರ ಹೋಗೇ ಬತ್ತಿ ಲೊಲೋ–ಲೋಲುಂಬೆ
ಮನಗೇ ಅಂದ್ರ ಬಂದಾನಣ್ಣಾ ಲೊಲೋ–ಲೋಲುಂಬೆ
ಇಲಕೇಳೇ ನನ್‌ತಾಯೆ ಲೊಲೋ–ಲೋಲುಂಬೆ
ನನ್ ಮಡದಿಲ್ಲೀಗೋಗಳಂದಾ ಲೊಲೋ–ಲೋಲುಂಬೆ
ತಗರು ಮನಿಗೇ ಹೊಗಳ ಮಗ್ನೆ ಲೊಲೋ–ಲೋಲುಂಬೆ
ಅತ್ತೀಮನಿಗೇ ಹೋದಾಳಣ್ಣಾ ಲೊಲೋ–ಲೋಲುಂಬೆ
ಇಲಕೇಳೆ ಅತ್ಯಮ್ಮಾ ಲೊಲೋ–ಲೋಲುಂಬೆ
ನಿನ್ಮಗಳ ಬಂದೀದೇನೆ ಲೊಲೋ–ಲೋಲುಂಬೆ
ನಮ್ಮನಿಗೇ ಬರಲೇ ಇಲ್ಲಾ ಲೊಲೋ–ಲೋಲುಂಬೆ
ಅಲ್ಲಿಂದ್ ತಿರಗೇ ಬಂದಾನಣ್ಣಾ ಲೊಲೋ–ಲೋಲುಂಬೆ
ಇಲಕೇಳೇ ನನತಾಯೆ ಲೊಲೋ–ಲೋಲುಂಬೆ
ನನ್ಮಡ್ದೀಲ್ಲೀಗ್ ಹೋಗಳಂದಾ ಲೊಲೋ–ಲೋಲುಂಬೆ
ಅಕ್ಕನ ಮನಿಗೆ ಹೋಗಳಂತ ಲೊಲೋ–ಲೋಲುಂಬೆ
ಅತ್ತಗೀ ಮನ್ಗೇ ಹೊದಾನಣ್ಣಾ ಲೊಲೋ–ಲೋಲುಂಬೆ

---

೪. ಊಟ ೫. ವಾಂತಿಯಾದರೂ ೬. ಎಲೆ ಅಡಿಕೆ ೭. ಜಪ್ಪುತ್ತಾಳೆ ೮. ಅತ್ತೆ ಹುಗಿದಳು

ಇಲಕೇಳ ಅತ್ತೂಗಿ ಲೊಲೋ-ಲೋಲುಂಬೆ
ನಿನ್ತಂಗ್ ನಿಮ್ಮನಿಗ್ ಬಂದಿದೇನೆ ಲೊಲೋ-ಲೋಲುಂಬೆ
ನಮ್ಮನಿಗೆ ಬರಲೇ ಇಲ್ಲಾ ಲೊಲೋ-ಲೋಲುಂಬೆ
ಅಲ್ಲಂದ್ ಮನಿಗೇ ಬಂದಾನಣ್ಣಾ ಲೊಲೋ-ಲೋಲುಂಬೆ
ಕಂಡಾ ಸಂಗ್ತಿ ಕಂಡಂಗೇಳ ಲೊಲೋ-ಲೋಲುಂಬೆ
ಮಡ್ದೇ ಇಲ್ಲೀಗ್ ಹೋಗೀಯಾಳ ಲೊಲೋ-ಲೋಲುಂಬೆ
ನೆರ್ಮನೀಗ್ ಹೋಗೀಯಾಳ ಲೊಲೋ-ಲೋಲುಂಬೆ
ಅಂಗ್ಳದಲ್ಲೇ ನೆಂತಾನಣ್ಣಾ ಲೊಲೋ-ಲೋಲುಂಬೆ
ಕುನ್ನಿ ಬಿಕ್ಕೂ ಬಂದಾವ ಲೊಲೋ-ಲೋಲುಂಬೆ
ಇಲಕೆಳೋ ನನ್ನಣ್ಣಾ ಲೊಲೋ-ಲೋಲುಂಬೆ
ಹಿತ್ತಲದೊಳಮೆನ್ ಹೆಬ್ಬಾವ್ ಬಂದತ್ ಲೊಲೋ-ಲೋಲುಂಬೆ
* (ಎಲ್ಲ ಕತೆಯನ್ನು ಹೇಳುತ್ತವೆ) ಲೊಲೋ-ಲೋಲುಂಬೆ
ಹೊಂಡಾದಲ್ ಹುಗ್ದೇ ಬಿಡ್ತ ಲೊಲೋ-ಲೋಲುಂಬೆ
ಅಕ್ನತಂದೇ ಕುಡ್ತವಣ್ಣಾ ಲೊಲೋ-ಲೋಲುಂಬೆ
ಮಾಯ್ದ ಕುಂಚಾ ತರಬೇಕಣ್ಣಾ ಲೊಲೋ-ಲೋಲುಂಬೆ
ಅಮೃ[೯] ಕುಂಡಕಿ ತರಬೇಕಣ್ಣಾ ಲೊಲೋ-ಲೋಲುಂಬೆ
ಬಾಳೀಬುಡ್ಕೇ ಹೋದಾವೇಗೂ ಲೊಲೋ-ಲೋಲುಂಬೆ
ಕಾಲಲಂದ್ರ ಬಗಿತವೇಗೂ ಲೊಲೋ-ಲೋಲುಂಬೆ
ಅಕ್ಕಾನಂದ್ರ ಏಳ್ಸೀದಾವೇಗೂ ಲೊಲೋ-ಲೋಲುಂಬೆ
ಅಮೃ ಕುಂಡ್ಕಿ ಇಳೀಬೇಕಣ್ಣಾ ಲೊಲೋ-ಲೋಲುಂಬೆ
ಮಾಯ್ದ ಕುಂಚಾ ಇಳೀಬೇಕಣ್ಣಾ ಲೊಲೋ-ಲೋಲುಂಬೆ
ಅಮೃ ಕುಂಡ್ಕಿ ಎಳ್ದಾನಣ್ಣಾ ಲೊಲೋ-ಲೋಲುಂಬೆ
ಮಾಯ್ದ ಕುಂಚಾ ಎಳ್ದಾನಣ್ಣಾ ಲೊಲೋ-ಲೋಲುಂಬೆ
ಅಕ್ಕಾನಂದ್ರ ಕುಳ್ತೇ ಬೆಟ್ಳ ಲೊಲೋ-ಲೋಲುಂಬೆ
ತಾಯೀಲಂದ್ರ ಕರ್ದಾನಣ್ಣಾ ಲೊಲೋ-ಲೋಲುಂಬೆ
ಕುತ್ಗೀಲಂದ್ರ ಕಡ್ದಾನಣ್ಣಾ ಲೊಲೋ-ಲೋಲುಂಬೆ
ತೊಯ್ಣಾನಂದ್ರ ಕಟ್ಟದಾನಣ್ಣಾ ಲೊಲೋ-ಲೋಲುಂಬೆ
ಕುನ್ನೀ ಬಿಕ್ಕು ಹುಕ್ಸೀ[೧೦]ನಣ್ಣಾ ಲೊಲೋ-ಲೋಲುಂಬೆ
ಗಂಡಾ ಹಿಂಡ್ತೀ ಹುಕ್ಕೇ[೧೧] ಹೊದ್ರ ಲೊಲೋ-ಲೋಲುಂಬೆ

---

* ಎಂದು ಆರಂಭಿಸಿ ಅವಳು ಸಾಯುವವರೆಗಿನ ಕತೆಯನ್ನು ಹಾಡಿನಲ್ಲೇ ಪೂರ್ಣ ಹೇಳುತ್ತಾರೆ.
೯. ಅಮೃತ ೧೦. ಹೊಕ್ಕಿಸಿದನು ೧೧. ಹೊಕ್ಕಿ

೩. ಹವಳಮ್ಮ

ಅಣ್ಣಾ ಕಂಚಿಲು ರಾಯಾ
ತಮ್ಮಾನಿಂಬಿಲು ರಾಯಾ
ಕಂಚಿಲು ರಾಯನ ಮಡದೇ
ಹವಳಮ್ಮಾ ದೇವಿಯೋ
ಅಣ್ಣಾ ತಮ್ಮರೀಗೇ
ತಾಯಿಲ್ಲಾ ತಂದಿಲ್ಲಾ
ತಮ್ಮಾ ನಿಂಬೀರಾಯನಿಗೆ
ಅಣ್ಣಾ ಕಂಚಿ ರಾಯನೇ ತಂದೆ
ಅಣ್ಣಾ ಕಂಚಿರಾಯನಿಗೇ
ದಂಡೀನಾ ಕಾಗತವೇ ಬಂದೀದ
ನನ ತಮ್ಮನಿಗೆ ತಾಯಿಲ್ಲಾ ತಂದಿಲ್ಲಾ
ನನ ತಮ್ಮನಿಗೆ ಹವಳಮ್ಮಾ ಕೇಳ
ನಾನೇ ತಂದೆ ನೀನೇ ತಾಯಿಯಾಗೇ
ನನ ತಮ್ಮನ ಜೇಂವಾ ಸಲಗಾಬೇಕೆ
ಅಟ್ಟಂಬಾ ಮಾತಾನೇ ಹೇಳೆ ಕಂಚೀರಾಯಾ
ದಂಡಿಗೆ ಹೋಗಿರುವಾನಲ್ಲೋ
ನಿಂಬಿರಾಯನ ಪದ್ಧತಿಯೇ
ಏನ ಕೇಳದ್ರೇ
ಹೊತ್ತರ ಮುಂಚಿದ್ದೇ
ಕಯ್ಯಾಲ ಮೊಕ[೧]ಗಳನೇ ತುಳದೇ
ನಿಚ್ಚಾ ಸೂಲ್ಯಮ್ಮ[೨]ನಿಗೇ
ಕಯ್ಯಾನೇ ಮುಗದೂ
ಕೊಟ್ಟೂಗಿಗೇ ಹೋಗೇ
ಉಂದು ಸಿದ್ದೇ ಹಾಲಾಕರ್ದು
ನಿಂಬಿಲೂ ರಾಯನೇ ಕುಡ್ದೂ
ಏಳೂ ಕೊಟ್ಟೂಗಿ ದನಗೋಳಾ
ಒಟ್ಟಲೂ ಕಂಡೇ
ನಾಗೋರಾ ಬೈಲಿಗೇ

---

೧. ಮುಖ

ಹೋಗೂವಾ ಪದ್ಧತಿಯೇ ನೋಡ
ಗಂಡಾ ದಂಡಿಗೆ ಹೋದಾ ಮ್ಯೆನೆ[೧]
ಕಂಚಿಲು ರಾಯನ ಮಡ್ದೇ
ಹವಳಮ್ಮಾ ದೇವಿಯೋ
ಹನ್ನೆಯ್ಡು ದಿನಸೀನಾ[೩]
ಕಾವ್ಲೇ ಕಜ್ಜಾಯವಾ
ಹುರದೀಯಾಳೋ
ಏಳು ಕೊಟ್ಟುಗಿ ದನಗೋಳಾ
ಇಟ್ಟೀಕಂಡೇ[೪]
ಬಂದೀಯಾನೇ ನಿಂಬಿಲೂರಾಯನೇ ನೋಡ
ಮೆಂದಾನೆ[೫] ಒಗದಾನೇ
ತುಳಸೀಲೂ ಸೇವಮ್ಮನಾ[೬]
ರನ್ನದ ಸಿವಪೋಜ್ಯಾ ಗಿಯ್ದಿಯಾನಲ್ಲ
ಓಟಾಕೆ ಹೋಗಿರುವಾನಲ್ಲ
ಹನ್ನೆಯ್ಡು ದಿನಸೀನಾ
ಕಾವಲ ಕಜ್ಜಾಯವಾ ಬಡಸೀಯಾಳೋ
ಇಲಕೆಳೆ ಅಣ್ಣನ ಮಡದಿ
ಅಣ್ಣಾ ಎಲ್ಲದೇ[೭]
ತಮ್ಮಾ ಒಂಡವನ್ಲಾ[೮]
ತಮ್ಮಾ ಎಲ್ಲದೇ
ಅಣ್ಣಾ ಒಂಡವನಲ್ಲಾ
ಹನ್ನೆಯ್ಡು ದಿನಸೀನಾ ಅಡಗೀಯಾ
ನೀನ್ಯೆಕೆ ಅಟ್ಟೀಯೇ ತಾಯೆ
ಅಂದಿರುವಾನೇಗೂ
ನಿಂಬಿಲೂ ರಾಯಾನೇ ಅದ್ರಾ
ಕೆಟ್ಟಾನೇ ಮೊಟ್ಟಾನೇ[೯] ನೋಡ
ಬಡಸೀದಾ ಅಡಗೀಯಾ ಬಿಟ್ಟೇ
ತುಳಸೀಯಾ ಮನಿಯಲ್ಲೂ
ಉರಗೀಯಾನಲ್ಲೋ[೬]
ತನ್ನಾ ಗಂಡಾನಲ್ಲೂ
ಹನ್ನೆಯ್ಡು ದಿನಸೀನಾ ಅಡಗೀಯಾ

---

೧. ಸೂರ್ಯನಿಗೆ ೨. ಹೋದ ಮೇಲೆ ೩. ಜಿನಸಿನ, ಬಗೆಯ ೪. ಎಬ್ಬಿಸಿಕೊಂಡು ೫. ಜಳಕ ಮಾಡಿದನು ೬. ತುಳಸ ಶಿವಮ್ಮಾ ೭. ಇಲ್ಲದೇ ೮. ಉಂಡವನಲ್ಲ ೯. ಮುಟ್ಟಲಿಲ್ಲ ೭. ಉಟ್ಟ ಸೀರೆಯನ್ನು ಸಿಗಿದಳು ೮. ಭಾವಿಸಿಕೊಂಡಿದ್ದೇನೆ ೯. ಆತ್ಮ

ಮಾಡಿದಾ ತಪ್ಪೀಗೆ ಸಿಕ್ಕೀದೆನೆಂದೂ
ಒಟ್ಟಾ ಸಾಲೀ ಸೆಗದಾಳ[೮]
ಕಟ್ಟಿದ ಮಂಡಿ ಬಿಡಿಸಿದಳ
ಇಲಕೇಳ ನನ್ನಣ್ಣಾನಾ ಮಡ್ಡಿ
ನೀನನ್ನಾ ಮಯ್ದಿನಾ ಅಂದೇ ಬಾವೀಸಿಕಂಡೆ
ನಾನಿನ್ನಾ ತಾಯಿಯಂದೇ ಬಾವಿಸಿಕಂಡಿ[೯]
ನಿನ್ನಾ ಆ ತುಮ್ರ್‌ದಲ್ಲೇ ಕಪಟಾವಾದಂದೇ
ನಾನು ಅರಿಯಾಲಿಲ್ಲಾ
ನಿಂಬೀರಾಯನ ಮಾತಾಕೇಳೇ
ಹವಳಮ್ಮಾ ದೇವಿಯೋ
ಅಪ್ಪನಾ ಮನಿಗೇ ಹೋಗಿರುವಳಲ್ಲಾ
ಇಲಕೇಳೇ ತಂಗೀ
ಒಟ್ಟಾ ಸೇರಿ ಸೆಗದವರ್‍ಯ್ರ
ಬೆಟ್ಟಾ ಮಂಡೀಲ್ಯಕೇ[೧೦] ಬಂದೆ
ನನ್ನಣ್ಣಾ ನೀ ಕೇಳ
ಆ ನಿಂಬೀರಾಯನ ಕೋಡೇ[೧೧]
ಎರನಾರೆ[೧೨] ಅಡನಾರೆ
ನಾನಾ ಬಂಗವ ಮಾಡೀದಾ
ಅಟ್ಟೊ ಮಾತನೇ ಕೇಳಿಯಾರೋ
ಅಣ್ಣಾದೀರಂಬವ್ರೋ
ತಟ್ಟಾ ಕತ್ತಿಯಾ ಮ್ಯನೇ
ಬೆಟ್ಟಾ ಬೋಳಿನಾ ಮ್ಯನೇ
ನಾಗೋರಾ ಬಯ್ಲೀಗೇ
ಬಂದಿಯಾರ ನೋಡ
ತಟ್ಟಾ ಕತ್ತೀಯಾ ಮ್ಯನೇ
ಬೆಟ್ಟಾ ಬೋಳಿನ ಮ್ಯನೇ
ಇಲ್ಲೀಗೇ ಹೋತರಿ ಬಾವಾದೀರೆ
ಕವ್ವಾ ತಿನ್ನೀ ಬನ್ನೀರಂದಾ
ಅರ್ದಾ ಹಾದೀಲಿರುವಾಗೇ
ಕವ್ವಾ ಕೊಟ್ಟಾ ನೆಂಟಾನಾ
ಹವಳಮ್ಮಾ ಮಾತನಮ್ಯನೆ
ತಲಿಹೆಂಗೇ ಕಡುವಾದಂದೇಳೇ

---

೧೦. ಏಕೆ ೧೧. ಹತ್ತರ ೧೨. ಇರಲಾರೆ

ಹಿಂದೇಗೇ ಹೋಗಿರುವಾರೇಗೂ
ತಲಿಯಾ ಕಡಿಯಾಲಿಲ್ಲಂಬುದ ಮಾಡೇ
ಮರೂದಿನೇ ಮತ್ತೇ ಹೋಗಿರುವಾಳಲ್ಲಾ
ಆ ನಿಂಬಿಲೂ ರಾಯನ ಕೋಡೇ
ಅಡನಾರೆ ಎರನಾರೆ
ನಾನಾ ಬಂಗವಾ ಮಾಡಿದಾನಂದಳ
ತಟ್ಟಾ ಕತ್ತಿಯಾಮೆನೇ
ಬೆಟ್ಟಾ ಬೋಳಿನ ಮೆನೇ
ನಾಗೋರಾ ಬಯ್ಲೀಗೆ ಬಂದಿರುವಾರಲ್ಲಾ
ತಲಿಯಾನೇ ಕಡದಿರುವಾರಲ್ಲ.
ಉಂದೂ ಬದಿಯಲ್ಲೇ ರುಂಡಾ
ಉಂದೂ ಬದಿಯಲ್ಲೇ ಮುಂಡಾ
ಕಂಚೀಲು ರಾಯಾಗೇ
ಸಪ್ನವೇ[೧೩] ಬಿದ್ದಿರುವಾದಲ್ಲೋ
ಕುದ್ರೇ ಇಲ್ಲಿಲ್ಲೂ ನೆಲ್ಲಾವೇ
ಕಾಲ ತಟ್ಟೇ ಓಡತವ
ಕಂಚೀಲೂ ರಾಯನ ಕುದ್ರೇ
ಓಡೋಡೇ ಬಂದೇ
ತಮ್ಮನಾ ರೊಂಡಾ ಮುಂಡೆದ್ದಲೇ
ನಿಂತೀ ಕಂಡಿತ ನೋಡ.
ತಮ್ಮನಾ ರೊಂಡಾ ಮುಂಡವಾ
ಕೂಡಿಸಿಕಂಡೇ ನೋಡೇ
ಮನಿಗೇ ಬಂದಿರುವಾನೇಗೂ
ಹವಳಮ್ಮಾ ಇಲಕೆಳೇ
ನನ್ತಮ್ಮಾ ನಿಂಬಿಲೂರಾಯಾನಾ
ಇಲ್ಲೀಗೇ ಹ್ವೊದಾನೇ ಹೇಳಂಬಾನೇಗೂ
ನಿಮ್ಮಲೋ ತಮ್ಮಾ
ಏಳು ಕೊಟ್ಟುಗಿ ದನಗೋಳಾ
ಹುಡ್ಡೀ ಕಂಡೋದವ್ನೇ[೧೪]
ಬರಲಿಲ್ಲಾ ನೋಡಂಬಳಲ್ಲೋ
ಈ ಮಡದೀಯಾ ಕಯ್ಯಲ್ಲೇ
ಎಂತಾ ಮಾತಂದಿರುವಾನಲ್ಲೋ

---

೧೩. ಸ್ವಪ್ನವು

ತನ್ನಾ ತಮ್ಮನ ಮಡದಿಯಾ
ಕರತರಬೇಂಕದಿರುವಾನಲ್ಲ
ನಿಂಬಿಲು ರಾಯನ ಮಡದೇ
ಕಾಳೂಕಮ್ಮನ ಪೋಜೀ
ಮಾಡೂತೇ ಕುಳಿತಿರುವಾಳಲ್ಲ
ಏನನ್ನಾ ತಮ್ಮನ ಮಡದಿ
ಕಾಳಿಗುಡಿಯಲ್ಲೇ ಕುಳ್ತೇ ನೀನ
ಹನ್ನೆಯ್ದು ಉರ್ಲಾಯ್ತು[೧೫]
ನಿನ್ನಾ ಕರದುಯ್ಯೊಕೇ
ಬಂದೀನೇ ನಾನೇಗೂ
ಕಾಳಕಮ್ಮನ ಕಯ್ಯಲೇ
ಸತ್ತಾ ಹೆಣವಾ ಕಿಟ್ಟದ್ರೂ
ಜೇಂವಾಗಾ ಬೇಕಂಬಾ
ವರವಾನೇ ಬೇಡಿಕೊ ಅಂದಾನೇಗೂ
ಏರಾಮಾ ನಿಂಬೀರಾಯನ ಮಡದೀಯೋ
ಹರ್ವಾಣಾದಲ್ಲೀಗೂ
ತಿಂಗನ ಕಾಯಾ ಗಂದಾಲಕ್ಷತಿಯಾ
ತಕ್ಕಂಡೆ ಕಾಳಕಮ್ಮನ ಪೋಜಿ[೧೬] ಮಾಡೇ
ಗಂಡಾನೆದ್ದಲ್ಲೀಗೇ
ಹೋಗೂತೀನೇ ತಾಯೆ
ಸತ್ತಾ ಹೆಣನಾ ಕಿಟ್ಟದ್ರು
ಜೇಂವಾ ಆಗೂವಾ
ವರದಾ ಕೊಡಬೇಕ
ಅಂದಿರುವಾಳಲ್ಲೋ
ಕೊಟ್ಟೆ ಅಂದಿಯಾಳ ಕಾಳೂಕಮ್ಮ
ಆ ವರವನೇ ತಕ್ಕಂಡೇ
ಬಂದಿರುವಾಳಲ್ಲೋ
ಕಂಚಿಲು ರಾಯನೋ
ತಮ್ಮನ ಮಡದೀಯಾ ಕರ್ಕಂಡೇ
ನಿಂಬೀರಾಯಿದ್ದಲ್ಲಿಗೇ ಬಂದಿರುವಾನಲ್ಲೋ
ಇದು ಏನ ನೋಡ

೧೪. ಹೊಡೆದುಕೊಂಡು ಹೋದವನೆ. ೧೫. ಹನ್ನೆರಡು ವರುಷವಾಯ್ತು ೧೬. ಪೂಜೆ

ಕಿಟ್ಟೀ ನೋಡಂದಿರುವಾನಲ್ಲೋ
ಕಿಟ್ಟೀ ಆಲುಗೀಸೇ ನೋಡೀಯಾಳಲ್ಲೋ
ನಿಂಬಿರಾಯಾ ಇದ್ದೇ
ಕುಳ್ತೀಯಾನಲ್ಲೋ
ನಿನ್ನಾ ಹೊಡದವ್ರ ಯಾರ
ನಿಂಬಿಲೂ ರಾಯಾ
ನಿನ್ನಾ ಕೊಂದವ್ರು ಯಾರೋ
ಹವಳಮ್ಮಾ ಅಣ್ಣಾ ತಮ್ಮಾದಿರ ತಂದೇ
ತಲಿಯಾನೇ ಕಡಿಸಿಯಾಳಲ್ಲ
ಅಟ್ಟು ಮಾತನೇ ಕೇಳೇ
ಹವಳಮ್ಮಾ ದೇವಿಯಾ ಸಿಗ್ದೇ
ತೊಯ್ಣವಾ ಕಟ್ಟೇ
ತಾವೆಲ್ಲಾ ತೊಯ್ಣಾದೊಳಗಿಂದೇ
ಬಂದಿರುವಾರಲ್ಲೋ

೪. ಸೆಣ್ಣಮ್ಮದೇವಿ

ಉಂದುಲೋ ಅರಸುವಾ ಕೋಸನೋ[೧] ರಾಮರಾಮಾ
ಉಂದುಲೋ ಕಾಡಿಯಾ ಬೇಜಾ[೨] ಬಿತ್ತದ್ನೋ ರಾಮರಾಮಾ
ಕಾಡಿಯಾ ಬಿತ್ವಲ್ಲೇ ಉಂದುಲೋ, ಕೊಳ್ಗಾ
ಕಡ್ಮೇಲೋ[೩] ಬೆದ್ದವೋ ರಾಮರಾಮಾ
ಉಂದೂಲೇ ಜೋಳಗೇ ವರವಾ ತಕ್ಕಂಡೇ
ಪ್ಯೆಟೇ ಪಾಟ್ಣಾವಾ ತಿರಗದ್ನೋ ರಾಮರಾಮ
ಇಲ್ಲಲ್ಲೂ ಸೆಕ್ಕಾದೇ ಹ್ವೊದವೋ ರಾಮರಾಮಾ
ನೆಟ್ಟಾ ಹಾದೀ ಹಿಡದೇ ಬರುವಾಗೇ
ಉಂದುಲೋ ಹೊಲಿಯನ ಹುಡುಗನೋ ರಾಮರಾಮಾ
ಸಿಣ ಬತ್ತದ[೪] ಪೊಟ್ಲಿ[೫] ಹುತ್ತಕಂಡೇ
ನೆಟ್ಟಾ ಹಾದಿ ಹಿಡದೇ ನಿಡದೇ ಬಿಟ್ಟಾನ ರಾಮರಾಮಾ
ಹೊಲಿಯನ ಹುಡುಗಾ ನೀ ಹೊತ್ತದ್ದ
ಎಂತದ್ರಾ ಪೊಟ್ಲಿಯೇ ರಾಮರಾಮಾ
ಸಿಣಬತ್ತದ ಪೊಟ್ಲಿಯೋ ಅಂದೇ
ಅಂದಿರುವಾನಲ್ಲೋ ರಾಮರಾಮಾ
ಉಂದೂಲೋ ಜೋಳುಗೇ ವರುವೇ ಕುತ್ತಿ
ನನಗುಂದು ಕೊಳಗಾ ಕುಡಬಾರಾದೇನೋ ರಾಮರಾಮಾ
ನಿನಗುಂದು ಕೊಳಗಾ ಕುಡುವೆ
ಬೇಡೀದಾ ಬಾಗ್ಯವಾ ಕೊಡಬೇಕ ಅಂದಿರುವಾನಲ್ಲ
ಹೊಲಿಯನ ಹುಡುಗಗೆ
ಬಲಗಯ್ಯಾ ಬಾಸೀಯಾ ಕುಟ್ಟಿರುವಾನಲ್ಲ ರಾಮರಾಮಾ
ನಿಮ್ಮತಂಗೇ ಸೆಣ್ಣಮ್ಮಾನಾ ಕೊಡಬೇಕಂದೇಳೇ
ಸಿಣಬತ್ತದ ಪೊಟ್ಲೆ ಕೆಳಗಿಕ್ಕಿರುವಾನಲ್ಲ ರಾಮರಾಮಾ
ಓಹೋ ಮೊಸಾ[೬] ಆಯೀತಂದೇ
ಚಿಂತಿನೇ ಮಾಡುತೇ ಬಂದಿರುವಾನಲ್ಲ ರಾಮಾರಾಮಾ
ಬೇಜನೇ ತಂದೇ
ಬಯ್ಲೀಗೇ ಸೋಕಿರುವಾನಲ್ಲ ರಾಮರಾಮಾ

---

೧. ಹುಡುಗನು ೨. ಇಪ್ಪತ್ತು ಖಂಡಗ ಬೀಜ ೩. ಕಡಿಮೆ ೪. ಸಣ್ಣ ಬತ್ತ ೫. ಪೊಟ್ಟಲೆ, ಮೊಟ್ಟೆ ಹೊರೆ ೬. ಮೋಸ

ಮೂರುಲು ತಾಸಿಗೆ ಬರುವಾ ಮಗನೇ
ಆರುಲೂ ತಾಸಿಗೆ ಬರಲಿಲ್ಲಂದೇ ಚಿಂತೀನೇ ಮಾಡ್ಯರಲ್ಲ ರಾಮಾರಾಮಾ
ಮನಿಗೆ ಬಂದಾ ಮಗನೆಲೋ
ಮುಂಡು ಮುಸಕನ ಮ್ಯೆನೆ ಮನಗಿರುವಾನಲ್ಲ ರಾಮರಾಮಾ
ಅವ್ವೀ ಅಪ್ಪಾ, ಮಾಳೂಗೀ ಹತ್ತೇ
ನೋಡಿರುವಾರಲ್ಲ ರಾಮರಾಮಾ
ಅರಸುತನದಲೇ[೭] ನಿನ್ನೆರ ಹೊಡದರೋ
ನಿನ್ನೆರ ಬೊಯ್ದರೋ[೮] ಮಗನೆ ರಾಮರಾಮಾ
ಅರಸುತನದಲೆ ನನ್ನೆರ ಹುಡುವರ
ನನ್ನೆರ್[೯] ಬುಯ್ವರ[೧೦] ತಾಯೆ ರಾಮರಾಮಾ
ಉಂದುಲೋ ಮ್ವೊಸವಾ
ಮಾಡೀದೆ ತಾಯೆ ಅಂದಿರುವಾನಲ್ಲೋ ರಾಮರಾಮಾ
ಏನು ಮ್ವೊಸವೋ ಮಗನೇ
ಹೇಳಂದೇ ಕೇಳಿರುವಾರಲ್ಲೋ ರಾಮರಾಮಾ
ಉಂದೂಲೋ ಕಾಡೇ ಬೇಜಾ ಬಿತ್ವಲ್ಲೇ
ಉಂದೂಲೋ ಕೊಳಗಾ ಕಡ್ಮೆ ಆದಾವೇ ತಾಯೆ ರಾಮರಾಮಾ
ಉಂದೂಲೋ ಜೋಳುಗೇ ವರವಾ ತಕ್ಕಂಡೇ
ಪ್ಯೆಟ್ಟೀ ಪಾಟ್ಣಾವಾ ತಿರಗೀದೆ ರಾಮಾರಾಮಾ
ಇಲ್ಲಲ್ಲೂ ಬೇಜಾವೇ ಸೆಕ್ಕಾದೇ
ಹ್ವೊದಾವೇ ತಾಯೆ ಅಂದಿರುವಾನಲ್ಲೋ ರಾಮರಾಮಾ
ಉಂದೂಲು ಹೊಲಿಯನೇ ಸಿಣ ಬತ್ತದ ಪೊಟ್ಲಿಯಾ
ಹುತ್ತಿಕಂಡೇ ಬಂದಿರುವಾನಲ್ಲೋ ರಾಮರಾಮಾ
ಉಂದೂ ಜೋಳಗೆ ವರುವಾ ಕುಡ್ತಿ
ಉಂದೂ ಕೊಳಗಾ ಬತ್ತಾ ಕುಡಂದೇ ಹೇಳಿದೆ ರಾಮಾರಾಮಾ
ಬೇಡೀದಾ ಬಾಸೀಯಾ
ಕುಟ್ಟೇಲೋ ಬಿಟ್ಟೆ ರಾಮರಾಮಾ
ಹಣಿಯಲ್ಲೇ ಬರದದ್ದಾ ತಪ್ಪಸಕಂಬೂಕೆ
ಆಗೂವಾದೇನೋ ಮಗನೆ ರಾಮರಾಮಾ
ಕೆಳಗಿಳದೇ ಬಂದಳೋ ತಾಯೆ
ಸೆಣ್ಣಮ್ಮನಾ ದಿಂಗಯ್ದೇ[೧೧] ಹೇಳಿರುವಾಳಲ್ಲ ರಾಮರಾಮಾ
ಇಲಕೇಳ ಸೆಣ್ಣಮ್ಮಾ ನಿಮ್ಮಣ್ಣಾ ಹೊಲಿಯನ ಹುಡುಗಗೇ

೭. ಹಾಡುವಾಗ ಅರಸೂತಾನಾದಲ್ಲೇ ಎಂದು ಎಳೆಯಬೇಕು ೮. ಬಯ್ದರು ೯. ನನ್ನನ್ನಾರು ೧೦. ಬಯ್ಯುವರು ೧೧. ಕರೆದು (ದನಿ+ಗೈದು)

ಬಲಗಯ್ಯಾ ಬಾಸೀನೇ ಕುಟ್ಟೀಕೇ ಬಂದೀಯಾ ರಾಮರಾಮಾ
ಉಂದೂಲೋ ಕಾಡಿಯಾ ಬೇಜಾ ಬಿತ್ತುವಲ್ಲೇ
ಉಂದೂಲೋ ಕೊಳ್ಗಾ ಕಮ್ಮೇಲೋ ಆದಾವೇ ಮಗಳೆ ರಾಮರಾಮಾ
ಉಂದೂಲೋ ಜೋಳುಗೆ ವರುವಾ ತಕ್ಕಂಡೇ
ಪೈಟೀ ಪಾಟ್ಣವಾ ತಿರಗದರೂ ಬೇಜಾವೇ ಸೆಕ್ಕೇಲಾ ರಾಮರಾಮಾ
ಹೊಲಿಯನ ಹುಡುಗಾ ಸಿಣಬತ್ತದ ಪೊಟ್ಲಿಯಾ ಹುತ್ತಿಕಂಡೇ
ನೆಟ್ಟಹಾದಿ ಹಿಡದೇ ಹೋಗುವಾಗೇ ರಾಮರಾಮಾ
ಬಲಗಯ್ಯ ಬಾಸೀಯಾ ಕುಟ್ಟೇ
ಉಂದೂಲು ಕೊಳ್ಗಾ ತಕ್ಕಂಡೇ ಬಂದೀಯಾ ರಾಮರಾಮಾ
ಇಲಕೇಳ ಸೆಣ್ಣಮ್ಮಾ ಹೊಲಿಯನ ಮನಿಗೇ
ಹೋಗಂದೇ ಹೇಳಿರುವಾಳಲ್ಲ ರಾಮರಾಮಾ
ಅಟ್ಟೂಲು ಮಾತನೇ ಕೇಳೇ ನಾನಿಟ್ಟು ಆದರೂ ಅರಸನ ಮಗಳ
ಹೊಲಿಯನ ಮನಿಗೆ ಹೇಗೆ ಹೋಗಲೆ ರಾಮರಾಮಾ
ಅಟ್ಟಂಬಾ ಮಾತಾ ಕೇಳಿಕಂಡೇ
ನೆಟ್ಟಾ ಹಾದಿ ನಿಡದೀಯಾಳಲ್ಲಾ ರಾಮರಾಮಾ
ಆ ಗುಡಿಯಲ್ಲಾ ಮಾಗುಡಿಯಲ್ಲಾ
ಗಂದದಾ ಗುಡಿಗೇ ನಿಡ್ಡಿರುವಾಳಲ್ಲಾ ರಾಮರಾಮಾ
ಅಡವಿಯಾ ಸುಪ್ಪು ಜಿಲದೀಯಾ ನೀರು ಕುಡಕಂಡೇ
ವನವಾಸ ಕಳ್ದಿರುವಾಳಲ್ಲ ರಾಮರಾಮಾ
ಹೊಲಿಯನ ಹುಡುಗಾ ಸೆಂವೀ ಹೊರಿಗೇ
ನಿಡ್ದೇ ಬಿಟ್ಟಿರುವಾನಲ್ಲಾ ರಾಮರಾಮಾ
ಸೆಣ್ಣಮ್ಮನಾ ಅಟ್ಟೊ ದೋರಿಂದೇ ಕಂಡೇ
ಸೆಣ್ಣಮ್ಮನಾ ಬುಡ್ಕೇ ನಿಡ್ದೇ ಬಿಟ್ಯಾನಲೋ ರಾಮರಾಮಾ
ಇಲಕೇಳ ಸೆಣ್ಣಮ್ಮಾ ಏಗರೂ ಕೇಳ
ಕವಳಾ ಕುಡ್ತೀಯಂದೇ ಹೇಳಿಯಾನಲ್ಲಾ ರಾಮರಾಮಾ
ನೀ ಇಟ್ಟೊ ಆದಾರೂ ಹೊಲಿಯನಾ ಹುಡಗನೋ
ನಾನಿಟ್ಟೊ ಆದಾರೂ ಅರಸಾನಾ ಮಗಳೋ ರಾಮರಾಮಾ
ನಾನೆಂಗೇ ಕವಳಾ ತಿಂಬೂಕೇ
ಬರಲೇ ಅಂದೇ ಹೇಳಿರುವಾಳಲ್ಲ ರಾಮರಾಮಾ
ಕೆಳಗೆ ಹರುವಾ ನೀರ ಕೆಳಗೆ ಹರಿಯಾಬೇಕ
ಮ್ಯನೆಲೋ ಹರುವಾ ನೀರ ಮ್ಯನೇ ಹರಿಯಾಬೇಕ ರಾಮರಾಮಾ
ಇಲಕೇಳ ಸೆಣ್ಣಮ್ಮಾ ಸಿರಗೀಗೆ ಗಿಂಟಾನೇ[೧೨] ಕಟ್ಟೀಕೊ ಅಂದೇಳೇ

---

೧೨. ಗಂಟನ್ನು

ಹೊರಿ ಹುತ್ತೀ ಕಂಡೇ[೧೩] ಮನಿಗೇ ಬಂದಿರುವಾನೇಗೂ ರಾಮರಾಮಾ
ಅಡವಿಯಾ ಸುಪ್ಪಾನೇ ತಿಂದೇ ಜಿಲದಿಯ ನೀರನೇ ಕುಡದೇ
ಹನ್ನೆಯ್ದು ಉರಸಾವಾ ಕಳ್ದಿರುವಾಳಲ್ಲೋ ರಾಮರಾಮಾ
ಬೂಮಿಗೆ ಜೇಂವಾನೇ ಕುಟ್ಟೀ ಕಂಬೂಕೆ ಹ್ವೊದಾರೇ
ಬೂಮೇಲೋ ತಗ್ಗೇ ಹೋಗಿರುವಾದಲ್ಲಾ ರಾಮರಾಮಾ
ಹುಲಕರಡೇ[೧೪] ಬಂದಾರೇ ಸೆಣ್ಣಮ್ಮನ ಕಂಡೇ
ಓಡೋಡೇ ಹೋಗಿರುವಾವಲ್ಲ ರಾಮರಾಮಾ
ಮರಕೇಲೋ[೧೫] ಜೇಂವಾನೇ ಕುಟ್ಟೀ ಕಂಬೂಕೆ ಹ್ವೊದಾರೆ
ಮರವೇಲೋ ಕಿತ್ತೀ ಓಡೋಡೇ ನಿಡ್ದಿರುವಾದಲ್ಲ ರಾಮರಾಮಾ
ಹನ್ನೆಯ್ದು ಉರಸಾ[೧೬] ಗಳದಾ ಮೆನೇ[೧೭]
ಅನ್ನಾದಾ ಮೈನೇ ಗೈನಾವಾಗಿರುವಾದಲ್ಲೋ ರಾಮರಾಮಾ
ಹೊಲಿಯನ ಮನಿಯಾ ಹಾದಿಯಾ
ಹಿಡಕಂಡೇ ಬಂದಿರುವಾಳಲ್ಲಾ ರಾಮರಾಮಾ
ಅಟ್ಟಟ್ಟುದೋರಿರುವಾಗೇ ಹೊಲಿಯಾನಾ ಹುಡುಗನ
ಅವ್ವೇ ಕಂಡೇಲೋ ಬೆಟ್ಟಾಳೋ ರಾಮರಾಮಾ
ಇಲಕೇಳ ನನ್ನತ್ತೆ
ಬಾಳೆಲೋ ಹಸುವೇ ಆದಾವೇ ರಾಮರಾಮಾ
ಬಾಳೀಯಾ ತ್ವೊಟಾಕೇ ಹೊಗೇ
ಬಾಳೆಲಯಾ ಕುಯ್ಕಂಡೆ ಬಾರಂದಿರುವಳ ರಾಮರಾಮಾ
ತಪ್ಪಲೀಲನ್ನೀದ[೧೮] ಸಿಕ್ಕದಮ್ಮೆನ್ ಮುಸ್ರೀದ[೧೯]
ಹಾಕಂಡೇ ಉಣ್ಣಂದಿರುವಾಳಲ್ಲ ರಾಮರಾಮಾ
ಸೆಣ್ಣಮ್ಮಾ ಎಲಿಯಾನೇ ಇಟ್ಕಂಡೇ ಮುಸ್ರ ಅನ್ನಾನೇ ಹಾಕಂಡೇ
ಓಟಾಕೇ[೨೦] ಕುಳ್ತಿರುವಾಳಲ್ಲ ರಾಮರಾಮಾ
ಕಲಕಲಸೇ[೨೧] ಉಂದೇಲೋ
ಮುದ್ದೀನೇ ನಿಗ್ಗಿರುವಾಳಲ್ಲ[೨೨] ರಾಮರಾಮಾ
ಮುದ್ದೇ ಕಯ್ತಪ್ಪೇ
ಬಿದ್ದಿರುವಾದಲ್ಲೋ ರಾಮರಾಮಾ
ಎಲಿಯನೇ ತಿಗದೇ ಸುಣ್ದಿರುವಾಳಲ್ಲ[೨೩]
ಕಯ್ಯನೇ ತುಳ್ದಿರುವಾಳಲ್ಲ ರಾಮರಾಮಾ
ಸೆಣ್ಣಮ್ಮನಾ ಹೊಟ್ಟೆ
ತುಂಬೇಲೋ ಬರುವದಲ್ಲಾ ರಾಮರಾಮಾ

---

೧೩. ಹೊರೆ ಹೊತ್ತಿಕೊಂಡು ೧೪. ಹಲಿ ಕರಡಿ ೧೫. ಮರಕ್ಕೆ ೧೬. ವರ್ಷ ೧೭. ಕಳೆದ ಮೇಲೆ ೧೮. ತಪ್ಪಲಿಯಲ್ಲಿ ಅನ್ನವಿದೆ ೧೯. ಮೊಸರಿದೆ ೨೦. ಊಟಕ್ಕೆ ೨೧. ಕಲಸಿ ಕಲಸಿ ೨೨. ನೆಗೆಯುವಳು ೨೩. ಒಗೆಯುವಳು

ಹೊಲಿಯನಾ ಹುಡುಗಾ
ಏನಂದೇ ಹೇಳದ್ನೋ ರಾಮರಾಮಾ
ನನ್ನಾಲೋ ಎಲಿಯಾ ಮ್ಯೆನೊಣ್ಣಾ ಬೇಕ[೨೪]
ಅಂದಿರುವಾನಲ್ಲೋ ರಾಮರಾಮಾ
ನೀನಿಟ್ಟೂ ಆದರೂ ಹೊಲಿಯನಾ ಹುಡುಗಾ
ನಾನಿಟ್ಟೊ ಆದರೂ ಅರಸೂವಾ ಮಗಳ ಅಂದಿರುವಾಳಲ್ಲ ರಾಮರಾಮಾ
ಒಣ್ದಿದ್ದರಡ್ಡಿಲ್ಲಾ[೨೫] ಸೆಂಡೂಗಿ[೨೬] ಆಸಿನರು[೨೭] ಮಾಡ
ಅಂದಿರುವಾನಲ್ಲಾ ರಾಮರಾಮಾ
ನಾನೂ ಅರಸೂ ಮಗಳ
ನಾನೆಂಗೆ ಮಾಡಾಲೋ ಅಂದಿರುವಾಳಲ್ಲ ರಾಮರಾಮಾ
ಮತ್ತೂ ಸುಕ್ಕನ[೨೮] ಮಾತಾನೇ ಆಡೂತೀ
ನನ್ನಾಲೋ ಹೇನಾ ನೋಡಂದೇ ಹೇಳೇಬಿಟ್ಟುರುವಾನಲ್ಲ ರಾಮರಾಮಾ
ಹೇನಾನು ನೋಡ್ವಾಗೇ ಅಚ್ಚೀಲೂ[೨೯] ಬುಜದಾ ಮನೇಉಂದ
ಇಚ್ಚೀಲೂ[೩೦] ಬುಜದಾ ಮೆನೆ ಉಂದ ಹುಂಡೂ[೩೧] ಕಣ್ಣೀರ
ಬಿದ್ದಿರೂವಾದಲ್ಲ ರಾಮರಾಮಾ
ಎಯ್ದೂ ಹುಂಡ ಕಣ್ಣೀರ
ಎಯ್ದೂ ಚಿನ್ನದ ಹುಂಡಾಗೇ ಬಿದ್ದಿರುವಾದಲ್ಲೋ ರಾಮರಾಮಾ
ಅಪ್ಪನ ಮನಿಯಾ ಎಚ್ಚರಾ[೩೨] ಆಯೀತೇನೇ ಸೆಣ್ಣಮ್ಮಾ
ಅಂದೇಗೇ ಕೇಳಿರುವಾನಲ್ಲೋ ರಾಮರಾಮಾ
ಎಯ್ದು ಚಿನ್ನದ ಹುಂಡಾ ತಕ್ಕಂಡೇ
ಉಂದೂಲು ಕಾಲು ಜೋಡಾ ಉಂದೂಲೂ ಹಚ್ಗೆಮೊರ್ನಾಮಾಡೇ
ಅಪ್ಪನಾ ಮನಿಗೇ ಕಳ್ಗಿರುವಾನಲ್ಲ ರಾಮರಾಮಾ
ಅಟ್ಟೊ ದೋರಿರುವಾಗೇ
ಅಪ್ಪಾ ಅವ್ವಿ ಕಂಡಾರೋ ರಾಮರಾಮಾ
ನನ್ಮಗಳ ಸೆಣ್ಣಮ್ಮಾ ಬತ್ತೀದೋ ಅಂದೇಳೇ
ಪಂಚಂಡೀ[೩೩] ಇತ್ತೇ ಅನ್ನಾನೇ ಮಾಡಿದರ ರಾಮರಾಮಾ
ಹಚ್ಚುಗಿ ಮೊರನಾನೇ ಅವ್ವೀಗೇ ಕೊಟ್ಟಾಳ
ಕಾಲನ ಜೋಡಾನೇ ಅಪ್ಪಾಗೇ ಕೊಟ್ಟಾಳ ರಾಮರಾಮಾ
ಇಲಕೇಳ ಸೆಣ್ಣಮ್ಮಾ ಬಾಳೀಯಾ ತೊಟಾಕೇ ಹೋಗೇ
ಎಲಿಯಾನೇ ಕುಯ್ಕಂಡೇ ಬಾರಂದೇ ಹೇಳಿರುವಾಳಲ್ಲ ರಾಮರಾಮಾ
ಬಾಳೆಲಿ ಕುಯ್ಕಂಡೇ ಬರುವಾಕೇ

---

೨೪. ಎಲೆಯ ಮೇಲೆ ಉಣ್ಣಬೇಕು ೨೫. ಉಣ್ಣದಿದ್ದರಡ್ಡಿಯಿಲ್ಲ ೨೬. ಮಾಂಸದ ೨೭. ಪದಾರ್ಥ, ಪಳದಿ ೨೮. ಸೊಕ್ಕಿನ ೨೯. ಆಚೆಯ ೩೦. ಈಚೆಯ ೩೧. ಹನಿ ೩೨. ನೆನಪು ೩೩. ದೊಡ್ಡ ತಾಮ್ರದ ಪಾತ್ರೆ

ಹೋಗಿರುವಾಳಲ್ಲ ರಾಮರಾಮಾ
ಬಾಳೆಲಿ ಕುಯ್ವಾಗೇ ತಲಿಯಾನೇ
ಕಲ್ಲಿಗೆ ಹೊಯ್ದಾಳೋ ರಾಮರಾಮಾ
ಸೆಣ್ಣಮ್ಮನ ಪರಣಾ[೩೪]
ಹಾರೆಲೋ ಹೋದಾವೋ ರಾಮರಾಮಾ
ನಿನ್ನ ಹಿಂಡ್ತೀ ಸೆಣ್ಣಮ್ಮಾ ಸತ್ತೇ ಹೋಯಿತಂದೇ
ಹೊಲಿಯನ ಹುಡುಗಗೇ ಹೇಳುಕಿ ಕಳಗಿರುವಾರಲ್ಲ ರಾಮರಾಮಾ
ಹೊಲಿಯನಾ ಹುಡುಗನೇ ಬಂದೇ
ಸೆಣ್ಣಮ್ಮನ ಹುಗದೇ ಬಿಟ್ಟಿರುವಾನಲ್ಲ ರಾಮರಾಮಾ
ಸೆಣ್ಣಮ್ಮನಾ ಹೊಗದಲ್ಲೇ[೩೫] ಬಾಳೀಗೇ
ಉಂದೂ ಕೊನೆ ಬಂದಿರುವಾದಲ್ಲಾ ರಾಮರಾಮಾ
ಕೊನಿಯನೇ ಕಡವಕೆ, ಸೆಣ್ಣಮ್ಮನಾ ಅಣ್ಣಾ
ಬಂದಿರುವಾನಲ್ಲಾ ರಾಮರಾಮಾ
ಕೊನಿಯನೇ ಕಡವಕೆ, ಸೆಣ್ಣಮ್ಮನಾ ಅಣ್ಣಾ
ಬಂದಿರುವಾನಲ್ಲಾ ರಾಮರಾಮಾ
ಕೊನಿಯನೇ ಕಡ್ಕಂಡೇ ಪಿಟ್ಬೂಗೀಯಲ್ಲೇ
ಇಟ್ಟಿರುವಾನಲ್ಲಾ ರಾಮರಾಮಾ
ಪಿಟ್ಬೂಗಿಲಿಕ್ಕದ ಮ್ಯೆನೇ ಇನ್ನೊಂದೂ ಜಿಲ್ಮಾದಲೇ[೩೬]
ಹನ್ನೆಯ್ದುರಸೀನಾ[೩೭] ಹಿಣ್ಣೇಲೋ[೩೮] ಆಗಿರುವಾದಲ್ಲಾ ರಾಮರಾಮಾ

---

೩೪. ಪ್ರಾಣ ೩೫. ಹುಗಿದಲ್ಲಿ ೩೬. ಜನ್ಮದಲ್ಲಿ ೩೭. ಹನ್ನೆರಡು ವರ್ಷದ ೩೮. ಹೆಣ್ಣು

ಎ. ಸಾಮಾಜಿಕ ಕಥನ ಕವನಗಳು

೧. ದಾಳಿಂಬ ಮೊಕದವ	ಲಕ್ಷ್ಮೀ ನಾಯಕ,	ಪಡುವಣಿ ಕುಮಟಾ
೨. ಭಾಗೀರತಿ	ರಾಕಮ್ಮ ನಾಯಕ	ಬೋಳೆ
	ಕಣ್ಣುಮನೆ	

ಆಕರ ಮೂಲ : ಕಪಟಿಗಳ ಕಥೆ (೧೯೯೯)
: ಡಾ. ಎನ್. ಆರ್. ನಾಯಕ
ಜಾನಪದ ಪ್ರಕಾಶನ ಹೊನ್ನಾವರ
ಆಕರ ಮೂಲ : ಪಾಠಾಂತರ ಕಥನ ಕವನಗಳು (೧೯೯೭)
: ಡಾ. ಎನ್. ಆರ್. ನಾಯಕ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

ಸಂಗ್ರಹ ಕಾಲ : ೧೯೬೮– ೧೯೭೧

೧೧. ದಾಳಿಂಬ ಮೊಕದವ

ಹಾದೀಮ್ಯೆನ್ವೋಗ್ವವನೆ ದಾಳಿಂಬ ಮೊಕದವೆ
ಹಾದೀಗ ತೋರೆಲಿಯಾ ಮೆಲವನ್ನೇ।
ಹಾದೀಗ ತೋರೆಲಿಯಾ ಮೆಲವನ್ನಾ। ಕಯ್ಯಲೀ
ಎಲಿಯಾ ಬೇಡಿದಳೇ ಎಳನಾರೆ।
ಎಲಿಯಾ ಕುಡುವಾಕೆ[1] ನಿಡದಾರಿಯಿದಯೆಂದಾ[2]
ಮಂಚಾಕೇ ಬಂದಾರೇ ಕುಡುವಾನೆ।
ಮಂಚಾಕೆ ಬಂದಾರೇ ನಿನ್ಮಡದೇ ಮುನವಾಳ[3]
ಮಂಚಕಿನ್ನೆಂಗೇ ಬರ್ಬೇಕ।

ಅಂಗಿ ಹಾಕಲು ಬೇಕ ಮುಂಡಾಸ್ಕಟ್ಟಲು[4] ಬೇಕ
ಸದ್ದೀನಾ ಕೋವಿ ಬಲಗಯ್ಲಿ। ಹಿಡ್ಕಂಡೆ
ಗಂಡೂ ರೂಪ್ದಲ್ಲೇ ಬರ್ಬೇಕ[5]। ಬಂದಾರೆ
ನಾರೀಕಯ್ಲ ನೀರಾ ಹುಯ್ಸಾವೇ[6]।

ಅಂಗೀಯಾ ತೊಟ್ಟಾಳ[7] ಮುಂಡಾಸಾ ಬೆಗ್ದಾಳ[8]
ಸದ್ದೀನ ಕೋವೀಗೇ ಬಲಗೈಲಿ। ಇಟ್ಟೀಕಂಡೇ
ಬೆದ್ದಾ[9] ಮಾರ್ಗಾವಾ ಹಿಡ್ದಾಳೇ[10]।

ಅಂಕೋಲಿ ಬದಿಗಿಂದೇ ನೆಟರ್ಬತ್ತಾರೆ[11] ನಾರಿ
ಗಿಂಡೀಲ್ ಉದ್ಕಾವಾ ತಿಗ್ದೀಡ[12]। ಎಲೆನಾರಿ
ಬೆಲ್ಲಾ ನೀರಾಸರ್ಕೆ[13] ಎಡಮಾಡೆ।
ಎಲ್ಲಾ ನೆಂಟಾರಿಗು ಕುಂಬೇರಿ ಕೊನಮೇಸೆ

ನಮ್ಮಾನಿ ನೆಂಟಾ ಮೊಕಬ್ವೊಳಾ[14]। ಗ್ವೊಂಕಿಲ್ಲಾ[15]
ದಿಟ್ಟಸ್ ನೋಡದ್ರೆ ಇಳಮೊಲಿ[16]।
ಸುಕ್ಕೀನಾ ಹಿಣ್ಣೀ[17] ಸುಕ್ಕೀನಾ ಮಾತಾಡ್ಬೆಡಾ
ಹನ್ನೆಯ್ದು ಬೆತ್ತ ಬಿನ್ಮನೇ। ಬಿದ್ದಾರೆ
ಹಸಿ ಹಾಕಿ ನೀರ ಕುಡುವಳ[18]।

---

೧. ಕೊಡಲಿಕ್ಕಿ ೨. ನಡುದಾರಿಯೆಂದನು ೩. ಸಿಟ್ಟಾಗುವಳು ೪. ಮುಂಡಾಸು ಕಟ್ಟಿಕೊಳ್ಳಬೇಕು ೫. ಬರಬೇಕು ೬. ಹೊಯ್ಯುತ್ತೇನೆ ೭. ತೊಟ್ಟಳು ೮. ಮುಂಡಾಸು ಬಿಗಿದಳು ೯. ಬಿದ್ದ ೧೦. ಹಿಡಿದಳು ೧೧. ನೆಂಟರು ಬರುತ್ತಾರೆ ೧೨. ನೀರು ತೆಗೆದಿಡು ೧೩. ಬೆಲ್ಲ ನೀರನ್ನು ನೀರಡಿಕೆಗೆ ೧೪. ಮೀಸೆಯಿಲ್ಲದವನು ೧೫. ಗಂಟಲು ಮ್ಳೂಳೆ ೧೬. ಜೋಲುಮೊಲಿ ೧೭. ಸೊಕ್ಕಿನ ಹೆಣ್ಣೆ ೧೮. ಕೊಡುತ್ತಾಳೆ

ಅಂಗಿ ತಿಗಿಯಾಬೇಕ[೧೯] ಮುಂಡಾಸ ಕಳ್ಚಾಬೇಕ[೨೦]
ಸದ್ದೀನ ಕೋವೀ ಕೆಳಗಿಟ್ಟೇ। ಬಂದಾರೆ
ಕಣ ಕಾಲಿಗ್ ನೀರಾ ಇರ್ದುವ್ವೆ[೨೧]

---

೧೯. ತೆಗೆಯಬೇಕು ೨೦. ಮುಂಡಾಸನ್ನು ಕಳಚಬೇಕು ೨೧. ಕೆಲವರು ನೀರನ್ನು ಹೊಯ್ಯುತ್ತೇವೆ.

೦೨. ಭಾಗೀರತಿ

ಹೊಸ್ಗದ್ದೀ ಹೊನ್‌ಗವ್ಡಾ ತುಂಬೆ ತುಂಬೆ
ಮೂರು ಮುಂಡನ[೧] ಬಾವಿಕಡ್ದಾ ತುಂಬೆ ತುಂಬೆ
ನೀರೂಗೋಳಿಲ್ಲವೋಽ ತುಂಬೆ ತುಂಬೆ
ದೊಡ್ಡಾ ದೋಸೇರಾ[೨] ಮನ್ಗೆ ಹೊದಾ ತುಂಬೆ ತುಂಬೆ
ದೋಸೇರಿಯಾ ದೋಸೇರಿಯಾ ತುಂಬೆ ತುಂಬೆ
ನಾಕು[೩] ಮುಂಡ್ನಾ ಬಾವಿಕಡ್ಡಿ ತುಂಬೆ ತುಂಬೆ
ನೀರೂಗೋಳಿಲ್ಲಾವೋಽ ತುಂಬೆ ತುಂಬೆ
ಹಿರ‍್ಯಾ ಸೊಸೆ ಹೊನ್ನಮ್ಮಾ ತುಂಬೆ ತುಂಬೆ
ಮನಿಯಾತನಕೆ ಬೇಕಂದ್ರ ತುಂಬೆ ತುಂಬೆ
ನಿನ್ ಕಿರ‍್ಯಾ ಸೊಸೆ ಭಾಗೀರತೆ ತುಂಬೆ ತುಂಬೆ
ಬಾವಿಗಾವ್ತಿ ಕೊಡ್ಬೇಕ ತುಂಬೆ ತುಂಬೆ
ಅಟ್ಟಂಬೂ ಮಾತಾನೇ ತುಂಬೆ ತುಂಬೆ
ಹೊನ್‌ಗವ್ಡಾ ಕೇಳ್ಕಂಡಾ ತುಂಬೆ ತುಂಬೆ
ಮನಿಗಂದ್ರ ಬಂದಾನೇಗೂ[೪] ತುಂಬೆ ತುಂಬೆ
ಮುಂಡುಮುಸ್ಕ ಹೊಯ್ದಾನೇಗೂ[೫] ತುಂಬೆ ತುಂಬೆ
ಹಿರಿ ಸೊಸೆ ಹೊನ್ನಮ್ಮದೇವೆ ತುಂಬೆ ತುಂಬೆ
ಮಾವ್ನೋರಿಯಾ ಮಾವ್ನೋರಿಯಾ ತುಂಬೆ ತುಂಬೆ
ನಿಮಗೆಂತರ ಸಂಕಟಕಾಲ ತುಂಬೆ ತುಂಬೆ
ಅಂದೇಳೇ ಕೇಳೀತೇಗೂ ತುಂಬೆ ತುಂಬೆ
ಏನಾನಂದ್ರ ಹ್ಯನೇದೇಗೂ[೬] ತುಂಬೆ ತುಂಬೆ
ಹಿರಿ ಸೊಸೆ ಹೊನ್ನಮ್‌ದೇವೆ ತುಂಬೆ ತುಂಬೆ
ಮನಿತನಕೆ ಬೇಕಂದ್ರ ತುಂಬೆ ತುಂಬೆ
ಕಿರೀ ಸೊಸೆ ಬಾಗೀರತೆ ತುಂಬೆ ತುಂಬೆ
ಬಾವೀಗಾವ್ತಿ ಕೊಡ್ಬೇಕ ತುಂಬೆ ತುಂಬೆ

*   *   *   *

ಹೊಸ್ಗದ್ದೀ ಹೊನ್‌ಗವ್ಡಾ ತುಂಬೆ ತುಂಬೆ
ಹಿರಿ ಸೊಸೆ ಹೊನ್ನಮ್ಮದೇವೆ ತುಂಬೆ ತುಂಬೆ

---

೧. ಆಳಿನ ಮುಂಡ ಆಳದ ೨. ಜೋಯಿಷರ ೩. ನಾಲ್ಕು ೪. ಬಂದನೀಗ ೫. ಮುಸುಕ ಹಾಕಿಕೊಂಡ ಮಲಗಿದನು ೬. ಹೇಳಲೀಗ

ಕಿರಿ ಸೊಸೆ ಬಾಗೀರತೆ ತುಂಬೆ ತುಂಬೆ
ಅದ್ರ ಗಂಡಾನಂಬಾನೇಗೂ ತುಂಬೆ ತುಂಬೆ
ಇಲ್ಕೆಳೇ ನನ್ ತಾಯೆ ತುಂಬೆ ತುಂಬೆ
ದಂಡೀಗೋಗೂ ಕಾಗ್ತಬಂತ ತುಂಬೆ ತುಂಬೆ
ನಿನ್ನಾ ಸೊಸೆ ಬಾಗೀರತೆ ತುಂಬೆ ತುಂಬೆ
ನೆರ್ಮನಿಗೂ ಕಳ್ಗಾಬ್ಯೆಡಾ[೭] ತುಂಬೆ ತುಂಬೆ
ನಿನ್ನಾ ಸೊಸೆ ಬಾಗೀರತೆ ತುಂಬೆ ತುಂಬೆ
ಹಾಲ್ಲೂ ಅನ್ನಾ ಬಣ್ಣಲತಾಯೇ[೮] ತುಂಬೆ ತುಂಬೆ
ಹಾಸ್ಗೀ ಮ್ಯೆನೆ ಒರ್ಗಾಲ್[೯] ತುಂಬೆ ತುಂಬೆ
ಅಂದೇಳೇ ಹೋಗದಾ ತುಂಬೆ ತುಂಬೆ

*   *   *   *

ಮಾಳ್ಗಿಲೆದ್ದಾ[೧೦] ಕಿರಿಸೊಸೆ ತುಂಬೆ ತುಂಬೆ
ಅಟ್ಟು ಮಾತಾ ಕೇಳಿದಾಳ ತುಂಬೆ ತುಂಬೆ
ಮಾಳ್ಗಿಲಿಂದೇ ಎಳ್ದಾಳೇಗೂ ತುಂಬೆ ತುಂಬೆ
ಇಲ್ಕೇಳ ನನ್ನಕ್ಕಾ ತುಂಬೆ ತುಂಬೆ
ನನ್ನಪ್ಪ ಮನ್ನೇ ಹೋಗೇಬತ್ತಿ[೧೧] ತುಂಬೆ ತುಂಬೆ
ಇಲ್ಕೇಳ ತಂಗಮ್ಮಾ ತುಂಬೆ ತುಂಬೆ
ನಿನ್ನಾ ಗಂಡಾ ಹೇಳ್ದಾ ಮಾತಾ[೧೨] ತುಂಬೆ ತುಂಬೆ
ಇಲ್ಲೇಲಂದ್ರ ಇಕ್ದೆ ಹೇಳ? ತುಂಬೆ ತುಂಬೆ
ಅಟ್ಟೊ ಮಾತಾ ಕೇಳೀದಾಳ ತುಂಬೆ ತುಂಬೆ
ಮಾಳ್ಗಿಲಿಂದೇ ಎಳ್ದಾಳೇಗೂ[೧೩] ತುಂಬೆ ತುಂಬೆ
ಅತ್ತೆದ್ದಲ್ಲೀಗ್ ಹ್ವಾದಳ[೧೪] ತುಂಬೆ ತುಂಬೆ
ಇಲ್ಕೇಳ ನನ್ನತ್ತೆ ತುಂಬೆ ತುಂಬೆ
ನನ್ನಪ್ಪ ಮನ್ಗೆ ಹೋಗೇ ಬತ್ತಿ[೧೫] ತುಂಬೆ ತುಂಬೆ
ಇಲ್ಕೇಳ ನನ್ ಸೊಸಿಯೆ ತುಂಬೆ ತುಂಬೆ
ನಿನ್ನಾ ಗಂಡಾ ಹೇಳ್ದ್ ಮಾತಾ ತುಂಬೆ ತುಂಬೆ
ನೀ ಇಲ್ಲೇಲಂದ್ರ ಇಕ್ದೆ ಹೇಳ? ತುಂಬೆ ತುಂಬೆ
ಅಟ್ಟೊ ಮಾತಾ ಕೇಳೀದಾಳ ತುಂಬೆ ತುಂಬೆ
ತನ್ ಮಾವೆದ್ದಲ್ಲೀಗ್ ಹ್ವೊದಳ ತುಂಬೆ ತುಂಬೆ
ಮಾವ್ನೋರಿಯಾ ಮಾವ್ನೋರಿಯಾ ತುಂಬೆ ತುಂಬೆ

---

೭. ಕಳಿಸಬೇಡ ೮. ಉಣ್ಣಲಿ ಅಮ್ಮ ೯. ಮಲಗಲಿ ೧೦. ಮಾಳಿಗೆಯಲ್ಲಿದ್ದ ೧೧. ಹೋಗಿ ಬರುತ್ತೇನೆ ೧೨. ಎಲ್ಲಿ ಇಟ್ಟೆ ಹೇಳು? ೧೩. ಇಳಿದಳೀಗ ೧೪. ಹೋದಳು ೧೫. ಬರುತ್ತೇನೆ

ನನ್ನಪ್ಪ ಮನ್ಗೆ ಹೋಗೇ ಬತ್ತಿ ತುಂಬೆ ತುಂಬೆ
ಇಲ್ಕೇಳ ನನ್‌ಮಗ್ಳೆ ತುಂಬೆ ತುಂಬೆ
ನಿನ್ನಾಗಂಡಾ ಹೇಳ್ದಾ ಮಾತಾ ತುಂಬೆ ತುಂಬೆ
ಇಲ್ಲೇಲಂದ್ರ ಇಕ್ದೆ ಮಗ್ಳೆ ತುಂಬೆ ತುಂಬೆ
ಇಲ್ಕೇಳೀ ಮಾವ್ನೋರಿಯಾ ತುಂಬೆ ತುಂಬೆ
ನೀವು ಹೇಳ್ದಾ ಮಾತಾನಾನ[೧೬] ತುಂಬೆ ತುಂಬೆ
ಅಟ್ಟೊ ನಂದ್ರೊ[೧೭] ಕೇಳಿನಾನ ತುಂಬೆ ತುಂಬೆ
ನಿಮ್ಹಿರಿ ಸೊಸೆ ಹೊನ್ನಮ್ಮಾ ತುಂಬೆ ತುಂಬೆ
ಮನಿಯಾತನಕೆ ಬೇಕಂದ್ರೀ ತುಂಬೆ ತುಂಬೆ
ನನ್ನಾಲಂದ್ರ ಮಾವಾ ಕೇಳಿ ತುಂಬೆ ತುಂಬೆ
ಬಾವೀಗಾವ್ತಿ ಕುಡ್ತೀಲಂದ್ರಿ[೧೮] ತುಂಬೆ ತುಂಬೆ
ಅಟ್ಟೊ ಮಾತಾ ಕೇಳಿದಾನೇ ತುಂಬೆ ತುಂಬೆ
ಸುಮ್ಮಾನಂದ್ರೂ ಒಳ್ದಾನೇಗೂ[೧೯] ತುಂಬೆ ತುಂಬೆ
ಬಾಗೀರತೆ ಅಂಬಳೇಗೂ[೨೦] ತುಂಬೆ ತುಂಬೆ
ಮಾಳೂಗೀ ಒಳ್ಗೇ ಹ್ವೊದಾಳೇಗೂ ತುಂಬೆ ತುಂಬೆ
ಉಂದು ಮುಟ್ಟೇ[೨೧] ಚಿನ್ನಾನೇಗೂ ತುಂಬೆ ತುಂಬೆ
ಇಟ್ಟೇಲಂದ್ರ ಕಂಡಳೇಗೂ[೨೨] ತುಂಬೆ ತುಂಬೆ
ಮಂಡೀಗಳಾ ಹಿಕ್ಕೀದಾಳ ತುಂಬೆ ತುಂಬೆ
ಹೂಂವುಗಳಾ ಮುಡೀದಾಳ ತುಂಬೆ ತುಂಬೆ
ಕುದ್ರೀಸಾಲೀಗ್ಹೊದಾಳೇಗೂ[೨೩] ತುಂಬೆ ತುಂಬೆ
ಉಂದೂ ಕುದ್ರೀ ಏರೀದಾಳ ತುಂಬೆ ತುಂಬೆ
ಅಲ್ಲಿಂದೇ ಹ್ವೊದಾಳೇಗೂ ತುಂಬೆ ತುಂಬೆ
ತನ್ನಪ್ನ ಮನ್ಗೇ ಹ್ವೊದಾಳೇಗೂ ತುಂಬೆ ತುಂಬೆ

* * * *

ಮಗ್ಳ ಬರ್ವಾ[೨೪] ದೋರಿಂದ್ ಕಂಡ್ರ ತುಂಬೆ ತುಂಬೆ
ಎಂದೂ ಬರ್ದಿದ್ ಮಗ್ಳ ನೀನ[೨೫] ತುಂಬೆ ತುಂಬೆ
ಇಂದ್ಯೆಕೇ ಬಂದೀಯೇ ತುಂಬೆ ತುಂಬೆ
ನಮ್ಮತ್ತೀ ನಮ್ಮಾವಾ ತುಂಬೆ ತುಂಬೆ
ಬ್ಯೆರೆನಂದ್ರ ಇಕ್ಕರ್ಕಡಾ[೨೬] ತುಂಬೆ ತುಂಬೆ
ಎಟ್ರೊ ಎಡ್ಲೆ[೨೭] ಮಗ್ಳೆ ತುಂಬೆ ತುಂಬೆ

---

೧೬. ಮಾತನ್ನು ನಾನು ೧೭. ಅಪ್ಪನ್ನೂ ೧೮. ಬಾವಿಗೆ ಆಹುತಿ ಕೊಡುತ್ತೇನೆಂದಿರಿ ೧೯. ಉಳಿದನೀಗ ೨೦. ಅನ್ನುವವಳೀಗ ೨೧. ಒಂದು ಬುಟ್ಟಿ ೨೨. ಇಟ್ಟುಕೊಂಡಳು ೨೩. ಕುದುರೆಯ ಶಾಲೆಗೆ ಹೋದಳು ೨೪. ಬರುವಿಕೆಯನ್ನು ೨೫. ಎಂದೂ ಬರದಿದ್ದ ಮಗಳು ನೀನು ೨೬. ಬೇರೆ ಇಡುತ್ತಾರಂತೆ

ನಿಂಗ್ಹೊಲಾ ಮನಿ ಕುಡ್ವೆ ತುಂಬೆ ತುಂಬೆ
ಹೊಲಾಮನೀ ಅಂಬೂದಾ ತುಂಬೆ ತುಂಬೆ
ಹೊಳೀ ದಂಡೀಗ್ಹುಯ್ಯಪ್ಪಾ[೨೮] ತುಂಬೆ ತುಂಬೆ
ಅಟ್ಟೂಮಾತಾ ಹೇಳೀದಾಳ ತುಂಬೆ ತುಂಬೆ
ತನ್ತಾಯೆದ್ದಲೀಗ್ಹೊದಳ ತುಂಬೆ ತುಂಬೆ
ಮಗ್ಳೂಲು ಬರ್‍ವಾದೇಗೂ ತುಂಬೆ ತುಂಬೆ
ಅಟ್ಟೂ ದೋರಿಂದ್ ಕಂಡಾಳ[೨೯] ತುಂಬೆ ತುಂಬೆ
ಎಂದೂ ಬರ್‍ದಿದ್ ಮಗಳನೀನ ತುಂಬೆ ತುಂಬೆ

ಇಂದ್ಯಕೆ ಬಂದೀಯೆ ತುಂಬೆ ತುಂಬೆ
ಇಲ್ಕೆಳೆ ನನ್ತಾಯೆ ತುಂಬೆ ತುಂಬೆ
ನಮ್ಮತ್ತೀ ನಮ್ಮಾವ ತುಂಬೆ ತುಂಬೆ
ಬೈರೆಲಂದ್ರ ಇಡತರ್ಕಡಾ ತುಂಬೆ ತುಂಬೆ
ಎಟ್ಟಾರೂ ಎಡ್ಲೆ ಮಗ್ಳೆ ತುಂಬೆ ತುಂಬೆ
ಸರ್ಗಿನಾದ್ರೂ ಕುಡ್ವೆ ಮಗಳೆ ತುಂಬೆ ತುಂಬೆ
ನಿನ್ ಸರ್ಗೀ ನನ್ತಾಯೆ ತುಂಬೆ ತುಂಬೆ
ನಿಂಕೋಡೇ[೩೦] ಎರ್ಲವ್ವಾ[೩೧] ತುಂಬೆ ತುಂಬೆ
ಅಟ್ಟೂ ಮಾತಾ ಹೇಳಿದಾಳ ತುಂಬೆ ತುಂಬೆ
ತನ್ನಕ್ಕ ಮನ್ಗೇ ಹ್ವೊದಾಳೇಗೂ ತುಂಬೆ ತುಂಬೆ
ತಂಗೀಲೂ ಬರ್‍ವಾದಾ ತುಂಬೆ ತುಂಬೆ
ಅಟ್ಟೂ ದೋರಿಂದ್ ಕಂಡಾಳೇಗೂ[೩೨] ತುಂಬೆ ತುಂಬೆ
ಎಂದೂ ಬರದೆದ್ದ ತಂಗೆ ನೀನ ತುಂಬೆ ತುಂಬೆ
ಇಂದೆಕೆ ಬಂದೆ ತಂಗಿ ತುಂಬೆ ತುಂಬೆ
ಇಲ್ಕೇಳೆ ನನ್ನಕ್ಕಾ ತುಂಬೆ ತುಂಬೆ
ನಮ್ಮತ್ತೀ ನಮ್ಮಾವಾ ತುಂಬೆ ತುಂಬೆ
ಬೈರಲಂದ್ರ ಇಡತರಕಡ ತುಂಬೆ ತುಂಬೆ
ಎಟ್ಟಾರೂ ಎಡ್ಲೆ ತಂಗಿ ತುಂಬೆ ತುಂಬೆ
ನನ್ಕಂದಾನಾದ್ರೂ ಕುಡ್ವೆತಂಗಿ[೩೩] ತುಂಬೆ ತುಂಬೆ
ನಿನ್ ಕಂದಾ ನಂಬವ್ನೇ ತುಂಬೆ ತುಂಬೆ
ನಿನ್ ಕೋಡೇ ಎರಲಕ್ಕ ತುಂಬೆ ತುಂಬೆ
ಅಟ್ಟೂ ಮಾತಾ ಹೇಳೀದಾಳ ತುಂಬೆ ತುಂಬೆ

---

೨೭. ಇಟ್ಟರೂ ಇಡಲಿ ೨೮. ಹೊಳೆಗೆ ಹೊಯ್ಯು ೨೯. ಅಷ್ಟು ದೂರದಿಂದ ಕಂಡಳು ೩೦. ನಿನ್ನ ಹತ್ತಿರೇ ೩೧. ಇರಲವ್ವಾ ೩೨. ಅಷ್ಟು ದೂರದಿಂದಲೇ ಕಂಡಳು ೩೩.ಕೊಡುವೆನು ತಂಗಿ

ತನ್ಗೆಳ್ತಿ ಮನಿಗೇ ಹ್ವೊದಾಳೆಗೂ ತುಂಬೆ ತುಂಬೆ
ಗೆಣ್ತಿಯೇ ಲಂಬವ್ವ ತುಂಬೆ ತುಂಬೆ
ಅಟ್ವೊ ದೋರಿಂದೇ ಕಂಡಾಳೇಗೂ ತುಂಬೆ ತುಂಬೆ
ಇಂದೂ ಬರ್ದೆದ್ ಗೆಣ್ತೆ ನೀನ ತುಂಬೆ ತುಂಬೆ
ಅಂದೂ ಬರ್ದೆದ್ ಗೆಣ್ತೆ ನೀನ ತುಂಬೆ ತುಂಬೆ

ಇಂದ್ಯಕೆ ಬಂದೀಯೇ ತುಂಬೆ ತುಂಬೆ
ನಿನ್ನಾ ಕಣ್ಣಲಲ್ ನೀರ್ಯಕೇ[೩೪] ತುಂಬೆ ತುಂಬೆ
ನಿನ್ನ ಮೊಕವ್ಯಕ್ ಕುಂದೀದ[೩೫] ತುಂಬೆ ತುಂಬೆ
ಏನಾನಂದ್ರ ಹೇಳಲೆ ಗೆಳತಿ ತುಂಬೆ ತುಂಬೆ
ಹೊಸ್ಗದ್ದೀ ಹೊನ್ಗವ್ವಾ ತುಂಬೆ ತುಂಬೆ
ನಾಕೂ ಮುಂಡ್ನಾ ಬಾವೀ ಕಡ್ದಾ ತುಂಬೆ ತುಂಬೆ
ನೀರೂಗೋಳಿಲ್ಲಾ ಗೆಳ್ತೀ ತುಂಬೆ ತುಂಬೆ
ಹಿರೀಸೊಸೆ ಹೊನ್ನಮ್ಮಾ ತುಂಬೆ ತುಂಬೆ
ಮನಿತನಕೆ ಎರ್ಬೇಕಂದ್ರ ತುಂಬೆ ತುಂಬೆ
ನನ್ನಾವ್ತೀ ಕುಡ್ತೀನಂದ್ರ ತುಂಬೆ ತುಂಬೆ
ಇಟ್ವೊಸುದ್ದಿ ಹೇಳೂವಾಕೆ ತುಂಬೆ ತುಂಬೆ
ಇಲ್ಲೀಗಂದ್ರ ಬಂದೆ ಗೆಳ್ತಿ ತುಂಬೆ ತುಂಬೆ
ಇಟ್ವೊ ಸುದ್ದಿ ಎಲ್ಲಾ ಗೆಳ್ತಿ ತುಂಬೆ ತುಂಬೆ
ನನ್ನಾ ಗಂಡಾ ಬಂತ್ನೇ ಹೇಳಂತ[೩೬] ತುಂಬೆ ತುಂಬೆ
ಉಂದೂ ಹುಂಡಾ ಕಣ್ಣೀರ್ಬೆಟ್ತ[೩೭] ತುಂಬೆ ತುಂಬೆ

* * * *

ತುಂಬ್ದ್ ಪ್ಯಟೀಗ್ವೊದಾಳ ತುಂಬೆ ತುಂಬೆ
ತುಂಬ್ದ್ ಪೆಟೀಗೋಗೀದೇಗೂ[೩೮] ತುಂಬೆ ತುಂಬೆ
ಉಂದೂ ಕಾಯಾ ತಕ್ಕಂಡಾಳ ತುಂಬೆ ತುಂಬೆ
ಗಂಡಾ ಕಡ್ಡೀ ತಕ್ಕಾಂಡಾಳ ತುಂಬೆ ತುಂಬೆ
ಅಲ್ಲಿಂದೇ ಬಂದಾಳೇಗೂ ತುಂಬೆ ತುಂಬೆ
ಬಾವೀ ಬುಡ್ಕೇ ಬಂದಾಳೇಗೂ ತುಂಬೆ ತುಂಬೆ
ಬಾವೀಲಂದ್ರೆ ಇಳ್ಕಂಡಳೇಗೂ ತುಂಬೆ ತುಂಬೆ
ಉಂದೂ ಹುಂಡಾ ಕಣ್ಣೀರ್ಬೆಟ್ತ ತುಂಬೆ ತುಂಬೆ
ಗಂಡ್ನ ಗ್ಯೆನಾ[೩೯] ಮಾಡೀದಾಳ ತುಂಬೆ ತುಂಬೆ

---

೩೪. ನಿನ್ನ ಕಣ್ಣಲ್ಲಿ ನೀರೇಕೆ? ೩೫. ನಿನ್ನ ಮುಖವೇಕೆ ಕುಂದಿದೆ? ೩೬. ಬಂದ ಕೂಡಲೇ ಹೇಳೆಂದಳು ೩೭. ಒಂದು ಹನಿ ಕಣ್ಣೀರು ಬಿಟ್ಟಳು ೩೮. ಹೋಗಿ ಈಗ ೩೯. ನೆನಪು

ಇಲ್ಕೇಳಿ ನನ್ನಾ ಸ್ವೊಮಿ ತುಂಬೆ ತುಂಬೆ
ನಿಂದೂ ನಂದೂ ರುಣಾ ಹರೀತಂದಾಳ[೪೦] ತುಂಬೆ ತುಂಬೆ

ಗಂದಾ ಕರ್ಪುರೆಟ್ಟಾಳೇಗೂ ತುಂಬೆ ತುಂಬೆ
ಬಾವೀಗಂದೆಳದಾಳೇಗೂ ತುಂಬೆ ತುಂಬೆ
ಉಂದೂ ಹೆಜ್ಜೀ ಗಳ್ದಕೂಡ್ಲೇ[೪೧] ತುಂಬೆ ತುಂಬೆ
ಪಾದಕೆ ನೀರ ಬಂದಾವೇಗೂ ತುಂಬೆ ತುಂಬೆ
ಎಯ್ಡು ಹೆಜ್ಜು ಗಳ್ದಾಳೇಗೂ ತುಂಬೆ ತುಂಬೆ
ಸೊಂಟಕ ನೀರ ಬಂದಾವೇಗೂ ತುಂಬೆ ತುಂಬೆ
ಮತ್ತುಂದ್ ಹೆಜ್ಜೀ ಗಳ್ದಾಳೇಗೂ ತುಂಬೆ ತುಂಬೆ
ಕಣ್ಣೀಗ್ ನೀರ್ ಬಂದಾವೇ ತುಂಬೆ ತುಂಬೆ
ಬಾಗೀರತೇ ಕಂತೀದಾಳ[೪೨] ತುಂಬೆ ತುಂಬೆ
ನೀರಾ ಜಲವೇ ಏರೀದಾವೇ ತುಂಬೆ ತುಂಬೆ
ಬಾಗೀರತೇ ಕಂತೀದಕ್ಷಣ[೪೩] ತುಂಬೆ ತುಂಬೆ
ಜಲಾತುಂಬೇ ಹರ್ದಾದಕ್ಷಣ   ತುಂಬೆ ತುಂಬೆ
ಗಂಡ್ಗ ಕನ್ಸ ಬೆದ್ದಾವೇಗೂ ತುಂಬೆ ತುಂಬೆ
ಆಗೇಲೂ ಏನಂದಾರ ತುಂಬೆ ತುಂಬೆ
ಕಟ್ದಾ ಕುದ್ರೆ ಮುರೀಯೀತೇಗೂ[೪೪] ತುಂಬೆ ತುಂಬೆ
ಎಂತಾ ಸಪ್ನಾ ಬೆತ್ತಪ್ಪಾ ತುಂಬೆ ತುಂಬೆ
ಊರಲೇನ ಆಯೀತಪ್ಪಾ ತುಂಬೆ ತುಂಬೆ
ದಂಡೀನಲ್ಲೇ ಸಿವರಾಯಾ ತುಂಬೆ ತುಂಬೆ
ದಂಡೀನವ್ರೀಗ್ ಹೇಳೀದಾನೆ ತುಂಬೆ ತುಂಬೆ
ಮನಿಗಂದ್ರ ಹೋಗೇಬತ್ತೀ ತುಂಬೆ ತುಂಬೆ
ನಿನ್ನಾ ದಂಡ್ನ ಕಾಗ್ದ ಪತ್ರಾ ತುಂಬೆ ತುಂಬೆ
ಇಂದ್ನ ದಿನ್ನೆ ಮುಗೀಯಿತಪ್ಪಾ ತುಂಬೆ ತುಂಬೆ
ದಂಡೀನವ್ರೀಗ್ ಹೇಳಿಕಂಡೇ ತುಂಬೆ ತುಂಬೆ
ದಂಡೀನಾ ಸಿವರಾಯಾ ತುಂಬೆ ತುಂಬೆ
ಮನೀಗಂದ್ರ ಬಂದಾನೇಗೂ ತುಂಬೆ ತುಂಬೆ
ತಾಯೇಲಂದ್ರ ಕಂಡಾಳೇಗೂ ತುಂಬೆ ತುಂಬೆ
ಆರುತಿಯಾ ತಂದಾಳೇಗೂ ತುಂಬೆ ತುಂಬೆ

ಇಲ್ಕೆಳೇ ನನ್ತಾಯೆ ತುಂಬೆ ತುಂಬೆ
ನಿನ್ಹೊಸೆ ಬಾಗೀರತೆ ತುಂಬೆ ತುಂಬೆ

೪೦. ನಿನ್ನ ನನ್ನ ಋಣ ಸಂಬಂಧ ಹರಿಯಿತು ಎಂದಳು ೪೧. ಗಳಿದ ಕೂಡಲೇ ೪೨. ಮುಳುಗಿ ಹೋದಳು ೪೩. ಮುಳುಗಿದ ಕೂಡಲೇ ೪೪. ಕಟ್ಟಿದ ಕುದುರೆ ಮುರಿಯಿತೀಗ

ಇಲ್ಲೀಗಂದ್ರ ಹೋಗೀದಂದಾ ತುಂಬೆ ತುಂಬೆ
ಅಪ್ನ ಮನಿಗೇ ಹೋಗಳಪ್ಪಾ ತುಂಬೆ ತುಂಬೆ
ಅಟ್ಟೊ ಮಾತಾ ಕೇಳೀದಾನೆ ತುಂಬೆ ತುಂಬೆ
ಅತ್ತೀ ಮನಿಗೇ ನೆಡ್ದಾನೇಗೂ ತುಂಬೆ ತುಂಬೆ
ಅಳಿಯಾ ಬರುವದ ಕಂಡಾಳೇಗೂ ತುಂಬೆ ತುಂಬೆ
ಕಾಲೀಗೆ ನೀರಾ ತಂದಾಳೇಗೂ ತುಂಬೆ ತುಂಬೆ
ಇಲ್ಕೇಳೇ ನನ್ನತ್ತೆ ತುಂಬೆ ತುಂಬೆ,
ನಿನ್ನಾ ಮಗ್ಳ ಯಾವಲ್ಲೀದ?[೪೫] ತುಂಬೆ ತುಂಬೆ
ಇಲ್ಲಿಲ್ಲಾ ನನ್ನಳಿಯಾ ತುಂಬೆ ತುಂಬೆ
ನನ್ನಾ ಮಗ್ಳ ಬಂದತಪ್ಪಾ ತುಂಬೆ ತುಂಬೆ
ನಿಮ್ಮಪ್ಪಾ ನಿಮ್ಮವ್ವಿ ಬ್ಯೆರೆಲಂದ್ರ ಇಡ್ತರಂತ ತುಂಬೆ ತುಂಬೆ
ಅಟ್ಟೊ ಮಾತಾ ಹೇಳಿದಾಳ ತುಂಬೆ ತುಂಬೆ
ಅಕ್ನ ಮನಿಗೇ ಹ್ವೊದಾಳಪ್ಪಾ ತುಂಬೆ ತುಂಬೆ
ಅಂದೇಗೇ ಹೇಳೀದಾಳ ತುಂಬೆ ತುಂಬೆ
ಅತ್ಗಿ ಮನಿಗೇ ಹ್ವೊದಾನೇಗೂ ತುಂಬೆ ತುಂಬೆ
ಅಟ್ಟೊ ದೋರಿಂದ್ ಕಂಡಾಳೇ ತುಂಬೆ ತುಂಬೆ
ಕಾಲೀಗ್ ನೀರಾ ತಂದಾಳೇಗೂ ತುಂಬೆ ತುಂಬೆ

ಇಲಕೇಳೇ ಅತ್ತೊಗಿ ತುಂಬೆ ತುಂಬೆ
ನಿನ್ತಂಗೇ ಬಂದೀದೇನೇ? ತುಂಬೆ ತುಂಬೆ
ಇಲ್ಲಿಲ್ಲಾ ನನ್‌ಮಯ್ದ್ನಾ[೪೬] ತುಂಬೆ ತುಂಬೆ
ನನ್ನಾ ತಂಗೇ ಬಂದತಪ್ಪಾ ತುಂಬೆ ತುಂಬೆ
ನಮ್ಮಪ್ಪಾ ನಿಮ್ಮವ್ವಿ ತುಂಬೆ ತುಂಬೆ
ಬ್ಯೆರೆಲಂದ್ರ ಇಡ್ತರಂತ ತುಂಬೆ ತುಂಬೆ
ಗೆಣ್ತಿ ಮನಿಗೇ ಹ್ವೊದಾಳೇಗೂ ತುಂಬೆ ತುಂಬೆ
ಅಟ್ಟೊ ಮಾತಾ ಕೇಳೀದಾನೇ ತುಂಬೆ ತುಂಬೆ
ಗೆಣ್ತಿಮನಿಗೇ ಹ್ವೊದಾನೇ ತುಂಬೆ ತುಂಬೆ
ಅಟ್ಟೊ ದೋರಿಂದ್ ಕಂಡಾಳೇಗೂ ತುಂಬೆ ತುಂಬೆ
ಕಯ್ಯಲ್ ಉದ್ಕಾ ತಡ್ದಾಳೇ ತುಂಬೆ ತುಂಬೆ

ಇಲಕೇಳೋ ಸಿವರಾಯಾ ತುಂಬೆ ತುಂಬೆ
ನಿನ್ ಮೊಕವ್ಯಕೆ ಬಡವಾಗೀದ? ತುಂಬೆ ತುಂಬೆ

---

೪೫. ಎಲ್ಲಿದ್ದಾಳೆ ೪೬. ನನ್ನ ಮಯ್ದುನ

ಇಲಕ್ಕೈಳೇ ನನ್‌ಗೆಳತಿ ತುಂಬೆ ತುಂಬೆ
ನಿನ್‌ಗೆಳತೇ ಬಂದೀದೇನೆ ತುಂಬೆ ತುಂಬೆ
ನನ್ನಾ ಹಿಂಡ್ತೀ ಕಾಣಾಲಿಲ್ಲಾ ತುಂಬೆ ತುಂಬೆ
ನಿನ್ಮನೀಗೇ ಬಂದಿದೇನೇ[೪೭] ತುಂಬೆ ತುಂಬೆ
ಅಟ್ಟೊ ಮಾತಾ ಕೇಳೀದಾಳ ತುಂಬೆ ತುಂಬೆ
ನಿಮ್ಮಪ್ಪಾ ನಿಮ್ಮವ್ವಿ ತುಂಬೆ ತುಂಬೆ
ಮೂರು ಮುಂಡ್ನ ಬಾವೀಕಡ್ದ್ರ ತುಂಬೆ ತುಂಬೆ
ನಿನ್ನಾ ಹಿಣ್ತಿ ಬಾಗೀರತೆ ತುಂಬೆ ತುಂಬೆ
ಬಾವೀಗಾವ್ತಿ ಕೊಟ್ಟಾರಪ್ಪಾ ತುಂಬೆ ತುಂಬೆ
ಅಟ್ಟೊ ಮಾತಾ ಕೇಳೀದಾನೆ ತುಂಬೆ ತುಂಬೆ
ಬಾವೀಗಂದ್ರ ಬಂದಾನೇಗೂ ತುಂಬೆ ತುಂಬೆ
ನೀರುಗಳು ಹರ್‍ವಾದಾ ತುಂಬೆ ತುಂಬೆ
ಅಟ್ಟಾರಲ್ಲೆ ಕಂಡಾನೇಗೂ[೪೮] ತುಂಬೆ ತುಂಬೆ
ಹತ್‌ದ ಕುದ್ರೀ ಎಳ್ದಾನೇಗೂ[೪೯] ತುಂಬೆ ತುಂಬೆ
ಮರ್‍ಕೆ ಕುದ್ರಿ ಕಟ್ಟೀದಾನೆ ತುಂಬೆ ತುಂಬೆ
ಬಾವೀಗ್ ಸಿವರಾಯ್ ಗುದ್ಕೀದಾನೆ[೫೦] ತುಂಬೆ ತುಂಬೆ

೪೭. ಬಂದಾಳೇನು? ೪೮. ಅಷ್ಟರಲ್ಲೆ ಕಂಡನೀನಿಗ ೪೯. ಇಳಿದನೀಗ ೫೦. ದುಮುಕಿದನು

ಐ. ಗದ್ಯ ಕತೆಗಳು

ಪರಿವಿಡಿ	ನಿರೂಪಕರ ಹೆಸರು	ಊರು
೦೧. ಗಾಣಿಗ್ನ ಮಗ್ಳ	ದೇವಮ್ಮಾ ರಾಮಚಂದ್ರ ನಾಯಕ,	ಬಾಸಗೋಡ
೦೨. ಕೋಮ್ನ ಮರೆ	ದೇವಮ್ಮಾ ಗೋವಿಂದರಾಯ ನಾಯಕ	ಬಾಸಗೋಡ
೦೩. ಮದನ ಮೋಮನ	ಹೂವಾ ಗಿರಿಯಣ್ಣ ನಾಯಕ	ಭಾವಿಕೇರಿ
೦೪. ಈರಣ್ಣ	ಹೂವಾ ಗಿರಿಯಣ್ಣ ನಾಯಕ	ಭಾವಿಕೇರಿ
೦೫. ಕಿರಿಕಂದಿ ಸ್ವೊಮಣ್ಣ	ಹೂವಾ ಗಿರಿಯಣ್ಣ ನಾಯಕ	ಭಾವಿಕೇರಿ
೦೬. ಚಿನ್ದಮಂಡಿ ಕೂದ್ಲಹಿಣ್ಣ	ದೇವಮ್ಮಾ ಗೋವಿಂದರಾಯ ನಾಯಕ	ಬಾಸಗೋಡ

ಆಕರ ಮೂಲ : ನಾಡವರ ಜನಪದ ಕತೆಗಳು (೨೦೦೭)
: ಡಾ. ಎನ್. ಆರ್. ನಾಯಕ
: ಜಾನಪದ ಪ್ರಕಾಶನ ಹೊನ್ನಾವರ

ಸಂಗ್ರಹಿಸಿದ ಕಾಲ : ೧೯೬೯ – ೧೯೭೦

೦೧. ಗಾಣಿಗ್ನ ಮಗ್ಳ

ಉಂದ್[೧] ಊರ್ನಲೆ[೨] ಅಶ್ವಪತಿ ಅಂಬು ರಾಜಾ ಈದದಾ[೩]. ಅಂವ್ನ ಮಗಾ ಉಂದನೆ[೪] ಕುದ್ರಿ ಹತ್ಕಂಡ್ ಹ್ವೊದಾ. ಅಂವ ಹೋಗೂ ಹಾದಿ ಬದಿಗೆ ಉಂದ್ ಮನಿಲೆ ಎಣ್ಣಿಗಾಣ್ಗ್ನ ಮಗ್ಳ ಇಳ್ ಹರ್‌ಗ್ತೇ[೫] ಈದತ[೬]. ಅದ ಬಾಳ ಚೆಂದ್ ಈದತ. ರಾಜ್‌ಕುಮಾರ್ಗ್ಗೆ ಅದ್ರ ಮಾತಾಡ್ಸಬೇಕಂಬು ಮನ್ಸಾಯ್ತು. ಆಗೆ ಅಂವ ಅದ್ರಕೋಡೆ[೭] ಹಿಂಗ್ ಕೇಳ್‌ತ್ಯಾ[೮]. "ಇಳ್‌ನಲೇ[೯] ಹುಟ್ಟೆ ಇಳ್‌ನಲ್ಲೇ ಬೆಳ್ದ ಎಣ್ಣೀ ಗಾಣ್ಗಿನ ಮಗ್ಳೆ ಇಳ್ಳಿಗಿಂತಾ ಸೆಣ್[೧೦] ಎಲೆ ಯಾವ್ ಎಲೆ?" ಅಂದಾ. ಅಂವ್ನ ಮಾತ್ಕೇಳೆ ಎಣ್ಣಿಗಾಣ್ಗ್ನ ಮಗ್ಳ ಕೇಳ್ತಿದ, "ಹೂಂವ್ನಲೇ[೧೧] ಹುಟ್ಟೆ ಹೂಂವ್ನಲೇ ಬೆಳ್ದ ಅಸ್ವಪತಿರಾಜ್ನ ಮಗ್ನೇ ಹೂಂವ್ನಲೆ ಎಯ್ಡೇ[೧೨] ದಳ ಎದ್ದ್[೧೩] ಹೂಂವ ಯಾವ್ದ?" ಅದ್ಕೆ ಅಂವ "ವಾಟದಾರಿ ಹೂಂವ". ಅಂದ್ಹೇಳೆ ಉತ್ತರ ಕುಡತ್ಯಾ[೧೪]. ಆಗೆ ಗಾಣ್ಗಿನ ಮಗ್ಳ "ಅದೇ ಇಳ್ಳಿಗಿಂತ ಸೆಣ್ ಎಲಿ ಗಿಡ." ಅಂದೆ ಉತ್ರ[೧೫] ಕುಡ್ತಿದ. ಅದ ಉತ್ರ ಕುಡು ನಮನಿ[೧೬] ನೋಡೆ ರಾಜಕುಮಾರಾ ಸಿಟ್ನಲೆ "ನಾ ನಿನ್ ಮುದಿಯಾಗೆ ಸೆರಮನಿಲೆ ಎಡ್ದೇರೆ[೧೭] ನಾನ ಅಸ್ವಪತಿ ರಾಜ್ನ ಮಗ್ನೇ ಅಲ್ಲಾ" ಅಂದೆ ಪಣಾ ತುಡ್‌ತ್ಯಾ[೧೮]. ಅಂವ್ನ ಮಾತ್ ಕೇಳೆ, "ನೀನ ನನ್ನ ಮುದಿ[೧೯] ಆದದ್ದೇ ಆದ್ರೆ, ನಿನ್ನಿಂದ್ ನಂಗ್ ಹುಟ್ದ ಮಗ್ನ ಕೈಲೇ, ನಿನ್ನಾ ಕೊತ್ಲಚೇಲ್ದಲ್[೨೦] ಕಟ್ಸೆ. ಕಾಲ್‌ಮಿಟ್ನಲ್ಲೆ[೨೧] ಹುಡಿಸ್ತಿ[೨೨]" ಅಂದೆ ಅದೂ ಪಣಾ ತುಡ್ತಿದ.

ಮನಿಗ್ ಬಂದ್ ಅಶ್ವಪತಿರಾಯ್ನ ಮಗಾ ಇದೇ ಚಿಂತಿಲೆ ಮುಂಡ್ ಮುಸ್ಕ ಹಾಕಂಡೆ ಮನ್ಗ್ದಾ[೨೩]. ರಾಜಾ ಮಗ್ನ ಕೋಡೆ[೨೪] ಅಂವ ಹಂಗ್ ಮನ್ದದ್ ಕಾರಣ ಕೇಳ್‌ತ್ಯಾ. ಅದ್ಕೆ ಅಂವ "ಎಣ್ಣಿ ಗಾಣ್ಗಿನ ಮಗ್ಳ ತಂದೆ ನಂಗೆ ಮುದಿ ಮಾಡ್ಬೇಕ". ಅಂದ್ ಹೇಳ್‌ತ್ಯಾ. ಅದ್ಕೆ ಅರ್ಸ ಹೇಳ್‌ತ್ಯಾ, "ನಾವ ರಾಜ್ರ. ಗಾಣ್ಗ್ನ ಮಗ್ಳ ನೀ ಮುದ್ಯಾತಿ ಅಂತಿ[೨೫]. ಇದ ಲಾಯ್ಕಲ್ಲಾ[೨೬].

ನಿಂಗೆ[೨೭] ಎಂತಾ ಹಿಣ್[೨೮] ಬೇಕ್ ನೋಡ ಅಂತಾ ಹಿಣ್ ತರ್ವನಿ[೨೯]. ಆ ಹಿಣ್ ಮಾತ್ರ ಬ್ಯೆಡಾ[೩೦] ಬೆಜಾರಾ ಮಾಡ್ಬೆಡಾ." ಇಟ್ ಹೇಳ್‌ದ್ರೂ ರಾಜ್ನ ಮಗಾ ಕೇಳುದಲಾ[೩೧]. ಹಟಾ ಹಿಡೀತ್ಯಾ[೩೨]. ರಾಜಾ ಉಪಾಯಿಲ್ದೆ[೩೩] ಗಾಣ್ಗಿನ ಮಗ್ಳ ಕೇಳೂಕ್ ಹೋತ್ಯಾ.

---

೧. ಒಂದು ೨. ಊರಲ್ಲಿ ೩. ಇದ್ದನು ೪. ಒಂದು ದಿನ ೫. ಹರವುತ್ತ ೬. ಇದ್ದಳು ೭. ಹತ್ತಿರ ೮. ಕೇಳುತ್ತಾನೆ ೯. ಎಳ್ಳಿನಲ್ಲೇ ೧೦. ಸಣ್ಣ ೧೧. ಹೂವಿನಲ್ಲೇ ೧೨. ಎರಡೇ ೧೩. ಇದ್ದ ೧೪. ಕೊಡುತ್ತಾನೆ ೧೫. ಉತ್ತರ ೧೬. ರೀತಿ ೧೭. ಇಡದಿದ್ದರೆ ೧೮. ತೊಡುತ್ತಾನೆ ೧೯. ಮದುವೆ ೨೦. ಗೋಣಿಚೀಲದಲ್ಲಿ ೨೧. ಚಪ್ಪಲಿಯಿಂದ ೨೨. ಹೊಡೆಸುತ್ತೇನೆ ೨೩. ಮಲಗಿದನು ೨೪. ಹತ್ತಿರ ೨೫. ಅನ್ನುತ್ತಿ ೨೬. ಒಳ್ಳೆದಲ್ಲ ೨೭. ನಿನಗೆ ೨೮. ಹೆಣ್ಣು ೨೯. ತರೋಣ ೩೦. ಬೇಡ ೩೧. ಕೇಳುವದಿಲ್ಲ ೩೨. ಹಿಡಿಯುತ್ತಾನೆ ೩೩. ಉಪಾಯವಿಲ್ಲದೆ

ಈ ಬದಿಗೆ ಎಣ್ಣೀ ಗಾಣ್ಗನ ಮಗ್ಳ ಅಪ್ನಕೋಡೆ ಹೇಳ್ತೀದ. "ಅಪಾ ನಮ್ಮೂರ್ ರಾಜಾ ಹಿಣ್ ಕೇಳೂಕ್ ಬಂದ್ರೆ ನನ್ನಾ ರಾಜ್ನ ಮಗಗೆ ಮುದಿ ಮಾಡ್ ಕುಟ್ ಬಿಡ. ಗಂಡ್ನ ಮನಿಗೆ ನಾ ಹೋಗ್ವಾಗೆ ನಂಗೆ ಮೂರ ಮುಂಗ್ಸಿ[೩೪] ಮರಿ ತಂದ್ಕುಡ." ಅಂತಿದ. ಅದ್ಕೆ ಅಪ್ಪಾ ಉಪ್‌ತ್ಯಾ[೩೫]. ರಾಜ ಹಿಣ್ ಕೇಳೂಕ್ ಬತ್ಯಾ. ಎಣ್ಣೀ. ಗಾಣ್ಗರಂವ ತನ್ನ ಮಗ್ಳ ರಾಜ್ನ ಮಗಗೆ ಮುದಿ ಮಾಡ್ ಕುಡ್‌ತ್ಯಾ. ಮುದಿಯಾದ ಮೂರ್ನೇ ದಿನ್ಕೇ, ರಾಜಕುಮಾರಾ ಹಿಂಡ್ತಿ ಸೆರ್ಮನಿಲ್ ಇಕ್‌ತ್ಯಾ. ಮತ್ತೆ ಹಿಂಡ್ತಿಗೆ ಉಂಬೂಕೆ ಕುಚ್ಚಕ್ಕಿ[೩೬] ಮುರ್‌ಲೋಡು[೩೭] ಕುಡ್‌ತ್ಯಾ. ಗಾಣ್ಗನ ಮಗ್ಳ ಅಪ್ನ ಮನಿಲಿಂದ್ ತಂದ ಮೂರೂ ಮುಂಗ್ಸಿನ ಮರಿ ಬಿಡ್ತಿದ. ಆಗೆ ಆ ಮರಿಯವ ಸೆರ್‌ಮನಿಲಿಂದೆ ಅದ್ರ ಅಪ್ಪಮನಿವರಿಗೆ ನೆಲಮಾಳ್ಗಿ ತೋಡ್ತವ[೩೮] ಇದ ದಿನಾ ಆ ನೆಲಮಾಳ್ಗಿಲಿಂದೆ ಅಪ್ನಮನಿಗ್ ಹೋಗೆ ಉಂಡ್ಕಾ[೩೯] ಬತ್ತತ[೪೦].

ರಾಜಕುಮಾರಾ ಹಿಂಡ್ತಿ ಸೆರಮನಿಲ್ ಹಾಕೆ, ತಾನ ಮತ್ತುಂದ್ ಹಿಂಡ್ತಿ ಮುದಿಯಾತ್ಯಾ. ಅವ್ರ ಸುಕದಿಂದಿರುವಾಗೆ, ಗಾಣ್ಗನ ಮಗ್ಳ ಅಪ್ನ ಕೋಡೆ ಹೇಳ್ತ. "ಅಪ್ಪಾ ದೊಂಬ್ರಾಟ್ದವ್ನಾ[೪೧] ನಮ್ಮನಿಗೆ ಕರಿಸ. ನಾನ ದೊಂಬ್ರಾಟಾ ಮಾಡೂದ್ ಕಲಿಬೇಕಾಗೀದ" ಅಂತ. ಅಪ್ಪಾ ಅದ್ಕುಪ್ಪೆ ದೊಂಬ್ರಾಟಾ ಕಲ್ಸೂಕೆ[೪೨] ಒಬ್ ಮುದಕ್ನ ಕರ್‌ಕಂಡ್ ಬತ್ಯಾ. ಅಂವ್ನಕೋಡೆ ಇದ ದೊಂಬ್ರಾಟಾ ಮಾಡೂಕೆ ಕಲಿತಿದ. ಕಲ್ತೆ ಅವ್ನ ಕೋಡೆ, "ಅರ್‌ಸ್ನ ಮನಿ ಮುಂದೆ ದೊಂಬ್ರಾಟ ಮಾಡ." ಅಂದೆ ಹೇಳ್ತಿದ. ಅಂವಾ ಅದ್ರ ಮಾತ್ನಂತೇ ಅರ್‌ಸ್ನ ಮನಿ ಮುಂದೆ ದೊಂಬ್ರಾಟಾ ಹೂಡ್‌ತ್ಯಾ.

ನಿಳ್‌ಉಡ್ಗಿ[೪೩] ಉಟ್ಟೆ[೪೪] ಗಾಣ್ಗ್ನ ಮಗ್ಳ ದೊಂಬ್ರಾಟಾ ಆಡೂದ್ ನೋಡೆ ರಾಜ್ನ ಮಗಾ ಮಳ್ಳಾತ್ಯಾ. ಸುಂದರಿಯಾದ ಅದ್ರನೇ ಮುದ್ಯಾಗ್ಬೇಕಂದೆ ಮನ್ಸಮಾಡ್ಕಂತ್ಯಾ[೪೫]. ಅದ ತನ್ನ ಹಿರಿಹಿಂಡ್ತೆ ಅಂಬೂ ಪತ್ತಿನೇ ಅಂವ್ಗೆ ಹತ್ತೂದಲಾ. ಅದ ದೊಂಬ್ರ ಪೈಕಿ ಅಂದೇ ತಿಳ್ಕಂತ್ಯಾ. ಇದ್ರ[೪೬] ತಿಳ್ಕಂಡ್[೪೭] ಗಾಣ್ಗನ ಮಗ್ಳ ದೊಂಬ್ರಾಟಾ ಆಡ್ಸು ಮುದ್ಕಗೆ "ಅರ್ಸನ ಮಗಾ ನನ್ ಮುದಿಯಾತಿ ಅಂಬಾ. ನೀನ ಮುದ್ಲೆ ಆಗಾ ಅನ್ನ. ಕಡಿಕೆ ಎಯ್ಡ ಸಾವ್ರ[೪೮] ರೂಪಾಯ್ ಕೊಟ್ರೆ ಕುಡ್ತೆ[೪೯] ಅಂದ್ಹೇಳ". ಅಂದೆ ಹೇಳ್ ಕೊಟ್ಟ. ಅರಸನ ಮಗಾ ದೊಂಬ್ರಂವೆದ್ದಲೆ ಬಂದಾ. "ದೊಂಬ್‌ತಿ ತಂಗೆ ಮಂದಿ ಮಾಡ್ ಕೊಡ್ಬೇಕ" ಅಂದ್ಹೇಳ್ದಾ. ಆಗೆ ದೊಂಬ್ರವಾ, "ನಾನ ಹೊಟ್ಟಿ ಸಂಸಾರ್ದಂವಾ. ನಂಗೆ ಮತ್ತೆರೂ ಇಲ್ಲಾ. ಇದ್ರ ಕೊಟ್ರೆ ನಾ ಹೊಟ್ಟಿ ತುಂಬ್ಕಂಬುದ ಹ್ಯಂಗೆ? ನೀನ ಎಯ್ಡ ಸಾವ್ರ ರೂಪಾಯ್ ಕೊಟ್ರೆ ಬೇಕಾದ್ರ್ ಕುಡ್ತೆ". ಅಂದ್ ಹೇಳ್ದಾ. ಅದ್ಕೆ ಉಪ್ಪೆ, ರಾಜ್ನ ಮಗಾ ಎಯ್ಡ ಸಾವ್ರಾ ರೂಪಾಯ್ ಕುಟ್ಟೆ ಅದ್ರ ಮುದಿಯಾದ.

---

೩೪. ಮುಂಗುಸಿ ೩೫. ಒಪ್ಪುತ್ತಾನೆ ೩೬. ಕುಚ್ಚಿಗೆ ಅಕ್ಕಿ ೩೭. ಮುರಗಲ ಸಿಪ್ಪೆ ೩೮. ತೋಡುತ್ತವೆ ೩೯. ಊಟ ಮಾಡಿ ೪೦. ಬರುತ್ತಿದ್ದಳು ೪೧. ಡೊಂಬರಾಟದವನನ್ನು ೪೨. ಕಲಿಸಲಿಕ್ಕೆ ೪೩. ಪಾರದರ್ಶಕ ಉಡಿಗೆ ೪೪. ಉಟ್ಟಿಕೊಂಡು ೪೫. ಮನಸ್ಸು ಮಾಡಿಕೊಳ್ಳುತ್ತಾನೆ ೪೬. ಇದನ್ನು ೪೭. ತಿಳಿದುಕೊಂಡ ೪೮. ಸಾವಿರ, ೪೯. ಕೊಡುತ್ತೇನೆ.

ಮುದಿಯಾದ ತ್ವೊಡಿ[೫೦] ದಿನ್ದ ಮೆನೆ ಅದ ಹುತ್ನಲುಳಿತ[೫೧]. ಆಗೆ ಅದ ರಾಜ್ನ ಮುದ್ರಿ ಉಂಗ್ನ ತಕ್ಕಂತ. ಮತ್ತೆ ಹಿರುಕೆ ಅಪ್ನಮನಿಗೇ ಹೋಗೆ ಉಳ್ಕಂತ[೫೨]. ಒಂಬತ್ ತಿಂಗ್ಳ ತುಂಬ್‌ತ್ನೇ ಗಟ್‌ಮುಟ್[೫೩] ಗಂಡಮಗ್ನ ಹೆತ್ತತ. ಆ ಕೋಸಾ[೫೪]. ದಿನಾ ಕಳ್ದಂತೇ ದೊಡ್ಡಾ ದೊಡ್ಡ ಆದಾ. ಬಾಳ ಚುರ್ಕ[೫೫] ಈದದಾ ಅಂವಾ. ಯಾವ ಆಟ್ಕೆ ಹ್ವೊದ್ರೂ ಅಂವ್ದೇ ಮೇಲ್ಗಯ್ಯಾತತ[೫೬]. ಹೆಂಗ್ ಆಡದ್ರೂ ಅಂವ್ನ ಸೋಲ್‌ಸೂಕೆ ಯಾವ್ ಮಕ್ಳಕಲು[೫೭] ಆಗುದಲಾಗತ. ಅದ್ಕಾಗೆ ಅವ್ರ ಹೊಟ್ಟಿ ಕಿಚ್ನಲೆ, "ನೀನ ಅಪ್ಪಿಲ್ದೆ ಹುಟ್ದಂವ. ಅದ್ಕೇ ನಿಂಗೆ ಇಟ್[೫೮] ಹಂಕಾರಾ. ಏ ಪೊರಾ ನಿಮ್ ಅಪ್ಪ ಯಾರೋ?" ಅಂದೆ ಮಕ್ಳ ಅಂವ್ಗೆ ಕೇಳ್ತರ. ಆಗ್ ಅಂವ್ಗ ಬೆಜಾರಾಗೆ[೫೯], "ಇಂದೆ ನಮ್ಮವ್ವಿ ಕೋಡೆ ಹೋಗೆ ನಮ್ಮಪ್ಪ ಯಾರ ಅಂದೆ ಕೆಳ್ಬೇಕ" ಅಂದೆ ಮನ್ಸನಲ್ಲೇ ಮಾಡ್ಕಂಡೆ ಮನಿಗ್‌ಬಂದಾ. ನೆಟ್ಟಗೆ ಅವ್ವಿದಲೆ ಹ್ವೊದಾ, "ಅವ್ವಾ ನಮ್ಮಪ್ಪ್ ಯಾರ? ನಂಗೆಲ್ಲವ್ರೂ ನಿಮ್ಮಪ್ ಯಾರ ಇಲ್ಲೀಗ್ ಹೋಗ್ಯಾ ಅಂದ್ಕೇಳ್ತರ. ನೀನ ಅಪ್ಪಿಲ್ದೆ ಹುಟ್ದಂವಾ. ಅಂದೆ ಏನೇನೆಲ್ಲಾ ಹೇಳ್ತರ". ಅಂದೆ ಅವ್ವಿ ಕಡೆ ಹೇಳ್ದಾ. ಆಗೆ ಅವ್ನ ಅವ್ವೆ ಎಲ್ಲ ಕತಿ ಹೇಳ್ತ. ತನ್ನ ಪಣಾನೂ ಮಗ್ನಕಡೆ ಹೇಳ್ತ.

ಮಗಾ ಅಪ್ನ ಹುಡಕ್ತೇ ಅಪ್ನ ಊರಿಗ್ ಹ್ವೊದಾ. ಅಲ್ಲೆ ಉಂದ್ ಅಜ್ಜಿ ಮುದ್ಕಿ ಮನಿಗ್ ನೆಡ್ದಾ[೬೦]. ಆ ಅಜ್ಜಿ ಕಡೆ ಇಂವ ಚೆಂದಾಗ್ ಮಾತಾಡ್ದಾ, ಮತ್ತೆ" ಉಂದ್ ತೊಡಿ ದಿನೆ ನಾನ ಇಲ್ಲೇ ನಿಮ್ಮನಿಲೇ ಇರ್ತಿ". ಅಂದ್ಹೇಳ್ದ. ಅಜ್ಜಿ ಅದ್ಕೆ ಉಪ್ಕಂತ[೬೧]. ಆ ಅಜ್ಜೆ ದಿನಾ ರಾಜ್ನ ಮನಿ ಕೆಲ್ಸಾ ಮಾಡೂಕ್ ಹೋತತ. ಇಂವ ಅಜ್ಜಿ ಕಡಿಂದೆ ರಾಜ್ನ ಮನಿ ಸುದ್ದಿಯೆಲ್ಲಾ ತಿಳ್ಕಂತದಾ. ಉಂದನೆ ಅಜ್ಜೆ, "ರಾಜ್ನ ಮನಿ ಸಿರಿ ಏನಂದ್ಹೆಳ್ಲೆ ಮಗ್ನೆ, ರಾಜ್ನ ಮಂಚದ್ ಕಾಲೂ ಚಿನ್ದದ್ದೇ". ಅಂದೆ ಹೇಳ್ತ. ಈ ಮೊಮ್ಮಗ ರಾಜ್ನ ಮನಿ ಪರಿಚಯಾ ಎಲ್ಲಾ ಅಜ್ಜಿಕಡಿಂದೆ ತಿಳ್ಕಂಡಾ. ರಾತ್ರಿಗೆ ಅಜ್ಜಿಗೆ ನಿದ್ರೆ ಬೆದ್ದಕ್ಷಣ ಹಗೂರ್ಕೆ ಎದ್ದಾ. ರಾಜ್ನ ಮಂಚ್ದ ಅಳ್ತಿದೇ ನಾಕ್ ಬಯ್ಣಿ ಕಾಲ್ ಮಾಡ್ಕಂಡ, ಅರ್ಮನಿಗೆ ಹೋಗೆ, ರಾಜ ಮನ್ಗದ್ ಮಂಚದ ಉಂದುಂದೇ ಕಾಲ್ ಕಳ್ಚೆ ಅದ್ರ ಜಾಗ್ದಲ್ಲೆ ಬಯ್ಣಿಮರ್ನ ಕಾಲ ಹಾಕ್ದಾ. ಮಂಚದ ಚಿನ್ನದ ಕಾಲ್ ಕಳ್ಚೆ ಬೆಟ್ದಲೆ[೬೨] ಹುಗ್ಸಿಕ್ಕಿಕ್ಕೆ[೬೩] ಅಜ್ಜಿ ಮನಿಗೆ ಬಂದೆ ಮನಿಕಂಡಾ.

ಮಾರ್ನೇ ದಿನೆ ಬೆಳ್ಗಾ ಮುಂಚೆ[೬೪] ಎಲ್ಲಾ ಕಡಿಗೂ ಅರ್‌ಸ್ನ ಮಂಚದ್ ಕಾಲಿಲ್ಲಾ ಅಂದೆ ಬೊಬ್ಬೆ. ಇದ ಅಜ್ಜಿ ಕಿಮಿಗೂ ಹೋಗ್ ಮುಟ್ಟೆ ಅದ ಮೊಮ್ಮಗ್ನ ಕೋಡೆ, "ಅಯ್ಯೋ ಮಗಾ ರಾಜ್ನ ಮಂಚ್ದ ಕಾಲ್ನೇ ಯಾರೋ ಕದ್ಕಾ ಹ್ವೊದ್ರ ಕಡಾ.

---

೫೦. ಸ್ವಲ್ಪ ೫೧. ಗರ್ಭವತಿಯಾದಳು ೫೨. ಉಳಿದುಕೊಂಡಳು ೫೩. ಗಟ್ಟಿ ೫೪. ಹುಡುಗ ೫೫. ಚುರುಕು ೫೬. ಮೇಲುಗೈಯಾಗುತ್ತಿತ್ತು ೫೭. ಮಕ್ಕಳ ಹತ್ತಿರವೂ ೫೮. ಇಷ್ಟು ೫೯. ಬೇಸರವಾಗಿ ೬೦. ನಡೆದನು ೬೧. ಒಪ್ಪಿಕೊಂಡಳು ೬೨. ಬೆಟ್ಟದಲ್ಲಿ ೬೩. ಅಡಗಿಸಿಟ್ಟು ೬೪. ಬೆಳಿಗ್ಗೆ

ಅಂವೆಂತಾ ಕಳ್ನಪ್ಪಾ. ಅಂವ್ನ ಹುಡ್ಕುಕೆ ರಾಜಾ ಬಾಳ ಜನ ಕಳಿಕುಟ್ಟಿನ್ ಕಡಾ. ಪರ್ದ್ದಾನೆ ತಾನ ಹುಡಿ ಕುಡ್ತೆ[೬೫] ಅಂದ್ಹೇಳಿನ ಕಂಡಾ". ಅಂದೆ ಎಲ್ಲಾ ಕತಿ ಮೊಮ್ಮಗ್ನ ಕೋಡೆ ಹೇಳ್ತ. ಇಂವಾ ಎಲ್ಲಾ ಕೇಳ್ಕಂಡಾ "ಹೂಂ ಇಂವ್ಗೆ ಮಾಡ್ತೆ ಮುದಿಯಾ". ಅಂದೆ, ಅಜ್ಜಿ ಇದ್‌ಬೆದ್ ವಸ್ತ್ರಾ ಎಲ್ಲಾ ಮೊಟ್ಟೆ ಕಟ್ಕಂಡಾ[೬೬], ಮತ್ತೆ ಉಂದ ಬಾನಿ ತಕಂಡೆ ವಸ್ತ್ರ ಉಗೂಕೆ[೬೭] ಮದ್ದಿ[೬೮] ರಾತ್ರಿಗೆ ಹೋತ್ಯಾ. ಉಂದ್ ಹಳ್ಳದ್ ದಿಡ್ಕೆ ಹೋಗೆ ಅಲ್ಲೆ ಉಂದುಂದೇ ವಸ್ತ್ರಾ ಉಗಿತ್ಯಾ. ಅಟ್ಟೋತಿಗೆ[೬೯] ಪರ್ದ್ದಾನೆ ಅಲ್ಲಿಗ್ ಹೋಗೆ, "ಇಟ್ ರಾತ್ರಿಗೆ ನೀನೊಬ್ನೇ ಇಲ್ಲೇನ ಸಿಳಿತಿ?" ಅಂದೆ ಕೇಳ್ದಾ. ಅದ್ಕೆ ಅಂವಾ" ದೊಡ್‌ಕೆ ಮಾತಾಡ್ಬೆಡಾ. ಇದ ಕಳ್ರ ಅರೆ[೭೦]. ಅವ್ರ ನಂಕೋಡೆ ಸಿಳುಕ್[೭೧] ಕುಡ್ತರ. ರಾತ್ರಿಗೆ ನಾ ಸಿಳ್ಕೊಟ್ರೆ ನಂಗೆ ಹಿಚ್[೭೨] ದುಡ್ ಕುಡ್ತರ. ಅವ್ರೆಲ್ಲಾ ಬರು ಹುತ್ತಾಯ್ತ. ನೀನಿಲ್ಲೇ ಮರ್‍ನ ಬುಡ್ಕೆ ಅಡೀಕೊ. ನಾ ಅವ್ರ ಹಿಡ್ಕುಡ್ತೆ. ಇಲ್ಲೇ ಬಾನಿಲೆ ಮುಚ್ಚೆಕ್ಕೆ[೭೩]. ಅವ್ರ ಬಂತ್ನೇ ತಿಗಿತಿ[೭೪]. ಅಂದ್ ಹೇಳೆ ಪರ್ದ್ದಾನಿ ಮ್ಯನೆ ಬಾನಿ ಕಂವ್‌ಚ[೭೫] ಹಾಕೆ, ದೊಡ್ ಕಲ್‌ಹೇರೆ[೭೬] ಮನಿಗ್ ಬಂದೆ ಮನಿಕಂತ್ಯಾ. ಇಲ್ಲೆ ಪರ್ದ್ದಾನಿದ್ ಪಜೀತೆ. ಬೆಳ್ಗಾಯ್ತ. ಪರ್ದ್ದಾನೇನ ಬೊಬ್ಬಿ ಹುಡಿತ್ಯಾ ಹೀಂಗೇ ಅಲ್ಲಾ. ಅಂವ್ನ ಬೊಬ್ಬಿ ಕೇಳೆ, ಬ್ಯಟಿ ಆಡೂಕ್ ಹ್ವೊದ ಬ್ಯಡ್ರ ಅಲ್ಲೀಗ್ ಬಂದ್ ಕಲ್ ತಿಗ್ದೆ ಬಾನಿ ನೆಗ್ದ್ರ[೭೭]. ನೋಡ್ದ್ರೆ ಪರ್ದಾನೆ. ಪರ್ದ್ದಾನೆ "ನನ್ ಮುಚ್ಚಾಕದ್ವ್ನೇ ಕಳ್ಳಾ ಅಯ್ಯೋ ತಪ್‌ಸ್ಕಂಡ್ ಓಡದ್ನಲಾ. ಅಂತೂ ಇಂದೇ ಅಂವ್ನ ಹಿಡ್ದೆ ಕಂಬೀಗ್ ಕಟ್ದೇ ಎದ್ರೆ ನಾನ ಮಂತ್ರಿನೇ ಅಲ್ಲ". ಅಂದೆ ಮತ್ತೆ ಕಳ್ನ ಪತ್ತಿ ಹಚ್ಚೂಕ್ ಸುರುಮಾಡ್‌ತ್ಯಾ.

ಮಾರ್‍ನೇ ದಿನೆ ಅಜ್ಜೆ ರಾಜ್ನ ಮನಿ ಕೆಲ್ಸ ಮುಗಿಸ್ಕಂಡ್ ಬಂದ್ ಕೂಡ್ಲೇ ಮೊಮ್ಮಗ ಅಜ್ಜಿಗ್ ಕೇಳ್‌ತ್ಯ, "ಅಜ್ಜೀ ಕಳ್ ಸಿಕ್‌ದ್ನೆ?[೭೮]" ಅದ್ಕೆ ಅಜ್ಜೆ "ಅಯ್ಯೋ ನನ್ಮಗ್ನೆ ಅಂವಾ ಎಂತಾ ಕಳ್ಳಾ ಪರ್ದನೀನೇ ಮುಚ್ಚೇಕ್ ಹ್ವೊದ್ನ ಕಡಾ. ಏಗೆ ಮತ್ತೆ ಪರ್ದ್ದಾನೆ ಕಳ್ನ ಹಿಡ್ಕುಡ್ತೆ ಅಂದೆ ಪಣಾ ತುಟ್ಟಿನ್ಕಡಾ[೭೯]. ಆ ಪರ್ದ್ದಾನಿಗೆ ಉಂದೇ ಮಗ್ಳ. ಅದ್ರ ಗಂಡಾ ಮುದಿಯಾದ ದಿನ ಹ್ವೊದಂವ ಇನ್ನೂ ಬಂದೇ ಮೊಟ್ಟೇಲಾ[೮೦] ಕಡಾ[೮೧]" ಅಂದೆ ಅಜ್ಜೆ ಮಂತ್ರಿ ಪರಿಚಯಾ ಮಾಡಕೊಟ್ತ.

ಇಂವಾ ರಾತ್ರಿಗೆ ಅಜ್ಜಿಗೆ ನಿದ್ರೆ ಬೆದ್ ಮ್ಯನೆ ಮೆಲ್‌ಗೆ[೮೨] ಎದ್ದಾ[೮೩], ಬಾಜಾರ್ಕೆ ಹೋಗೆ, ಹಣ್ಣು, ಹಂಪಲ, ಸೇರಿಯೆಲ್ಲಾ ತಕ್ಕಂಡ, ಮಂತ್ರಿ ಅಳಿನ ವ್ಯಸಾ[೮೪] ಹಾಕಂಡೆ ಅವ್ರ ಮನಿಗೆ ಹೋತ್ಯಾ. ಮಂತ್ರೆ ಕಳ್ನ ಹುಡ್ಕುಕ್ ಹೋಗೂಕೆ ಎದ್ ಹುತ್ನಲೇ ಅವ್ರ

ಮನಿಗ್ ಹೋಗೆ ತಾನ ಅವ್ರ ಮನಿ ಅಳಿಯಾ ಅಂದ್ಹೇಳೆ ಹೇಳ್‌ತ್ಯಾ. ಮಂತ್ರೆ ಅಳಿನೇ ಬಂದಾ ಅಂದ್ಹೇಳೆ ಗಡಬಿಡಿಯಲ್ಲೇ ಅವ್ಗೆಲ್ಲಾ ಓಟಾ[೮೫] ಉಪ್‌ಚಾರಾ ಎಲ್ಲಾ ಮಾಡ್‌ಸೆ ಕಳ್ನಹಿಡೂಕ್ ಹೋಗೂಕ್ ತಯಾರಾತ್ಯಾ.

---

೬೫. ಹುಡುಕಿಕೊಡುತ್ತೇನೆ ೬೬. ಕಟ್ಟಿಕೊಳ್ಳುತ್ತಾನೆ ೬೭. ಒಗೆಯಲಿಕ್ಕೆ ೬೮. ಮಧ್ಯ ೬೯. ಅಷ್ಟೊತ್ತಿಗೆ ೭೦. ಕಲ್ಲುಬಂಡೆ ೭೧. ಒಗೆಯಲಿಕ್ಕೆ ೭೨. ಹೆಚ್ಚಿಗೆ ೭೩. ಮುಚ್ಚಿಡುವೆನು ೭೪. ತೆಗೆಯುತ್ತೇನೆ ೭೫. ಡಬ್ಬು ಹಾಕಿ ೭೬. ಕಲ್ಲನ್ನು ಎತ್ತಿಟ್ಟು ೭೭. ಎತ್ತಿದರು ೭೮. ಸಿಕ್ಕಿದನೆ ? ೭೯. ತೊಟ್ಟಿದ್ದಾನಂತೆ ೮೦. ಮುಟ್ಟಲಿಲ್ಲ ೮೧. ಅಂತೆ ೮೨. ಸಾವಕಾಶ ೮೩. ಎದ್ದನು ೮೪. ವೇಶ

ಆಗೆ ಅಳಿಯಾ, "ಇಲ್ಲೀಗ್ ಹೋತಿ?" ಅಂದೆ ಮಾಂವ್ಗೆ ಕೇಳ್ತ್ಯಾ. ಅಗೆ ಮಂತ್ರೆ "ನಮ್ಮೂರಲುಂದ್ ಕಳ್ ಬಂದ್ಯಾ. ಇಂದೆ ಅವ್ನ ಹಿಡ್ದೆ ಕಂಬೀಗ್ ಕಟ್ಬೇಕಾಗೀದ." ಅಂದೆ ಹೇಳ್ದಾ. ಆಗೆ ಇಂವಾ ನಿಮ್ಮೂರ ಕ್ವೊಳ್ದಕಂಬ್ ಬಗೀಲ್[೮೬] ನೋಡ್ಬೇಕಾಗಿದ ನಾನು ನಿನ್ ಸಂತೀಗ್ ಬತ್ತಿ[೮೭] ಅಂದಾ. ಮಂತ್ರೆ ಅಳಿನ್ ಕರ್ಕಂಡೇ ಹೋತ್ಯಾ. ಕ್ವೊಳ್ದ[೮೮] ಕಂಬ್ನ ಕೋಡೆ ಹ್ವೊದಾಗೆ ಕ್ವೊಳ್ದ ಕಂಬಿಗೆ ಕಳ್ರ ಕಟ್ಟೂದ ಹೆಂಗ್[೮೯]? ಅಂದೆ ಅಳಿಯಾ ಕೇಳ್ದಾಗೆ ಮಂತ್ರೆ ತಾನೇ ಕಂಬಿಗೆ ತಾಗ್[೯೦] ನಿಂತ್ಕಂಡೆ ಕಟ್ಟೂದ್[೯೧] ಕಾಣ್ಸ ಕುಡ್ತ್ಯಾ. ಅಳಿಯಾ ಹಾಂಗೇ ಕಟ್ತ್ಯಾ. ತುರಿಗ್[೯೨] ಮಂತ್ರೆ ಬಿಡ್ಸ ಅಂದ್ರೂ ಬೆಡ್ಸ್ದೇ[೯೩] ಪಾರಾಗ್ ಓಡ್ ಬಂದೆ ಅಜ್ಜೀ ಮನಿಲೆ ಮನಿಕಂತ್ಯಾ. ಮಂತ್ರಿಗೆ ಅಳಿನ ಯೆಸ್‌ದಿಂದ ಬಂದಂವಾ ಕಳ್ನೇ ಅಂದೆ ಅನ್‌ಸ್ತೀದ. ಬೆಳ್ಗಾ ಮುಂಚ್ ರಾಜ ಬಂದ್ ನೋಡ್ತ್ಯಾ, ಮಂತ್ರಿಯೇ ಕೈ ಕಟ್‌ಸ್ಕಂಡ್ ಬಿದ್ಯಾ. ಮಾರ್ನೇ ದಿನೆ ಸ್ವೊತಾ[೯೪] ಅರಸ್ನೇ ಕಳ್ನ ಹಿಡಿಬೇಕಂದೆ ಮನಸ್ ಮಾಡ್ಕಂತ್ಯಾ.

ದಿನದಂತೇ ಅಜ್ಜೆ ಅರ್‌ಸ್ನ ಮನಿಕೆಲ್ಸಾ ಮಾಡಿಕ್ಕೀಕ್[೯೫] ಮನಿಗ್ ಬಂದಾಗೆ ಮತ್ತೆ ಮೊಮ್ಮಗಾ ಅಜ್ಜಿ ಕಡೆ, ಅಜ್ಜೀ ಕಳ್ ಸಿಕ್‌ದ್ನೆ?" ಅಂದ್ಕೇಳ್ತ್ಯಾ. ಅಗೆ ಅಜ್ಜೆ "ಅಯ್ಯೋ ನನ್ಮಗ್ನೆ ಅಂವಾ ಎಂತಾ ಕಳ್ಳಾ ಮಂತ್ರೀನೇ ಕಂಬೀಗ್ ಬಿಗ್ದೀಕ್ ಹೋಗಿನ್ನಡ್ಡಾ[೯೬]. ಇಂದೆ ರಾಜ್ನೇ ಕಳ್ನ ಹಿಡೂಕೆ ಹೋತಿನ್ನಡಾ". ಅಂದೆ ಹೇಳ್ತೆ.

ಇದ್ರ ಕೇಳ್ಕಂಡೆ, ಅಜ್ಜೀಗೆ ನಿದ್ರೆ ಬೆದ್‌ಮ್ಯೆನೆ, ಬಾಜಾರ್ಕೆ ಹೋಗೆ ಉಂದ್ ಇಂಟ್‌ಹತ್ತ ಬತ್ತ್[೯೭] ಕಟ್ಟು, ಬಿಂಕ್[೯೮] ಪಿಟ್ಗಿ, ಎಲಿ, ಅಡ್ಕಿ, ತಕ್ಕಂಡೆ, ಉಂದ್ ಸೆಣ್ ದೇಪಾ[೯೯] ತಕ್ಕಂಡೆ, ಅಜ್ಜಿ ಮನಿ ಮುಂದ್ ಬೆದ್ ನಾಕ ತಟ್ಟಿಹಬ್ಬಿ[೧೦೦] ತಕ್ಕಂಡೆ, ನಾಕ ಹರ್ಕುಮುರ್ಕು ಅಲ್ಕ[೧೦೧] ತಕ್ಕಂಡೆ ಹೊಳಿ ಬದೀಗ್ ಹೋಗೆ ಉಂದ್ ಸೆಣ್ಣ ಅಂಗ್ಡಿ ಹಾಕಂಡೆ ಮದ್ದಿ ರಾತ್ರಿಲೆ ಕೂತ್ಕಂಡಾ. ಆ ರಾಜಾ ಅದೇ ಮಾರ್ಗದಲೆ ಬಂದಾ. ಅಂಗ್ಡಿ ಮಿಣ್ಕು ದೇಪಾ ಕಂಡೆ ಅಲ್ಲಿಗ್ ಬಂದಾ. ಅಂಗ್ಡಿಯಂವ್ಗೆ, "ನೀನ ಈ ನಿಡ್[೧೦೨] ರಾತ್ರಿಗೆ ಇಲ್ಲೇನ್ಮಾಡ್ತಿ?" ಅಂದ್ಕೇಳ್ದ. "ನಾನ ಬಡಂವ ನಂಗೆ ಹೊಟ್ಟಿಗಿಲ್ಲ. ಇಲ್ಲೆ ಕಳ್ರ ಮದ್‌ರಾತ್ರಿಗೆ ಯಾಪಾರ್ಕೆ[೧೦೩] ಬತ್ತರ. ಸೆಣ್ ಉಸ್ತು[೧೦೪] ಕೊಟ್ರು ದಣಿ[೧೦೫] ದುಡ್ ಕುಡ್ತರ". ಅಂದಾ. "ನಿಂಗೆ ನಾನ ರಾಸಿ ದುಡ್ ಕುಡ್ತಿ ನಂಗೆ ಕಳ್ರ ಹಿಡ್ಕುಡುಕೆ ಬಗಿಲೆ ಮೈನತ್[೧೦೬] ಮಾಡ" ಅಂದಾ ರಾಜಾ. "ಆಗುದ. ಇನ್ನುಂದ್ ಗಳ್ಗನಲೇ[೧೦೭] ಕಳ್ರ ಬತ್ತರ. ನೀವಿಲ್ಲೇ ಕೊತ್ತಲದಲೆ[೧೦೮] ಹುಕ್ಕಣಿ[೧೦೯]. ಅವ್ರಿಗೆ ನೀವ್ ಕಾಂಬೂಕಾಗಾ". ಅಂತ್ಯ. ರಾಜ ಕೊತ್ತಲದಲೆ ಹುಕ್ಕಂತ್ಯಾ. ಆಗೆ ಇಂವ ಕೊತ್ತಲದಲೆ ಹುಕ್ಕಂಡ್ ಕೂಡ್ಲೆ ಕೊತ್ತ್ಲ ಬಾಯ್ ಕಟ್ಟೆ ತನ್ನ ಕಾಲ್ ಮಿಟ್ನಲೆ[೧೧೦] ಎಯ್ಡ ಸರ್ತಿಗೆ ತುಳಿತ್ಯಾ.

---

೮೫. ಊಟ ೮೬. ಸ್ವಲ್ಪ ೮೭. ಬರುತ್ತೇನೆ ೮೮. ಬಂಧನ ೮೯. ಹೇಗೆ? ೯೦. ಅಂಟಿಕೊಂಡು ೯೧. ಕಟ್ಟುವದನ್ನು ೯೨. ಕೊನೆಗೆ ೯೩. ಬಿಡಿಸದೇ ೯೪. ಸ್ವತಃ ೯೫. ಮಾಡಿಟ್ಟು ೯೬. ಹೋಗಿದ್ದಾನಂತೆ ೯೭. ಬೀಡಿ ೯೮. ಬೆಂಕಿ ೯೯. ದೀಪ ೧೦೦. ಗಳದ ದಬ್ಬೆ ೧೦೧. ನೆಣೆದ ತೆಂಗಿನಗರಿ ೧೦೨. ನಡು ೧೦೩. ವ್ಯಾಪಾರಕ್ಕೆ ೧೦೪. ವಸ್ತು ೧೦೫. ಬಹಳ ೧೦೬. ಸಹಾಯ ೧೦೭. ಗಳಿಗೆಯಲ್ಲೇ ೧೦೮. ಗೋಣಿಚೀಲದಲ್ಲಿ ೧೦೯. ಹೊಕ್ಕಿಕೊಳ್ಳಿ ೧೧೦. ಚಪ್ಪಲಿಯಿಂದ

ರಾಜದಾನಿಗೆ ರಾಜ್ನ ಹುತ್ಕಂಡ್[೧೧೧] ಬತ್ಯಾ. ಎಲ್ಲಾ ಜನ್ರ ಮುಂದೆ ಮತ್ತೆಯ್ಡ ಸರ್ತಿಗೆ ತುಳ್ದೆ, ರಾಜ್ನ ಚೇಲ್ದಲಿಂದ್[೧೧೨] ತಿಗ್ದೆ, ತನ್ ಅವ್ವೆ ಹಿಂದೆ ಮಾಡ್ದ ಪಣ ತಾನ ತೀರ್‌ಸ್ದೆ[೧೧೩] ಅಂದೆ–ಎಲ್ಲಾ ಕತಿ ಹೇಳ್ತ್ಯಾ. ಇವ್ನ ಮಾತ್‌ಕೇಳೆ ರಾಜಾ ನಾಚ್ಕಿಲೆ ತಲಿ ತಗ್‌ಸ್ತ್ಯ. ಕಡಿಗೆ ಈ ಹುಡ್ಗ ತಮ್ಮ ಅವ್ವಿ ಕರ್ಕ ಬತ್ಯಾ. ಅದ್ರ ಕೈಲೆದ್ದ ರಾಜ ಮುದ್ರಿ ಉಂಗ್ಲ ಎಲ್ಲವ್ರೀಗೂ ತೋರ್ಸೆ, ತಾನ ರಾಜ್ನ ಮಗಾ, ಅಂಬೂದಾ ಕಾತ್ರಿ[೧೧೪] ಮಾಡ್ ಕುಡ್ತ್ಯಾ. ಮುಂದೆ ರಾಜಾ ತನ್ನ ಜಾಣ ಮಗಾ, ಹಿಂಡ್ತಿ ಇವ್ರ ಸಂಗ್ತೀಗೇ ಸುಕವಾಗ್ ಉಳಿತ್ಯಾ.

---

೧೧೧. ಹೊತ್ತುಕೊಂಡು ೧೧೨. ಚೀಲದಿಂದ ೧೧೩. ತೀರಿಸಿದೆನು ೧೧೪. ಸತ್ಯ

೨. ಕೋಮ್ನ ಮರೆ

ಉಂದ್[೧] ಊರ್ನಲೆ[೨] ಉಂದ್ ಅರ್ಸ್[೩] ಈದದಾ[೪]. ಆ ಅರ್ಸುಮನಿ ಬುಡ್ಕೇ[೫] ಒಬ್ ಗೌಡಾ, ಗೌಡ್ತಿ, ಮನಿ ಮಾಡ್ಕಂಡ್[೬] ಈದದ್ರ. ಬಾಳ[೭] ಉರ್ಸ್ನ[೮]ವರಿಗೆ ಅವ್ರಿಗೆ ಮಕ್ಳೇ ಆಗ್ಲೇಲಾ[೯]. ತುರೀಗ್[೧೦] ಮುದ್ಕಾಲ್ಕೆ ಗೌಡ್ನ ಹಿಂಡ್ತೆ[೧೧] ಹುತ್ನಲುಳಿತ[೧೨]. ಅದ್ಕೆ[೧೩] ಒಂಬತ್ ತಿಂಗ್ಳ ತುಂಬ್ದ ಮ್ಯೆನೆ ಕೊಟ್ಳೆ[೧೪] ಮಾಡ್ಕಂತಿದ. ಗೌಡ ಬಿಜ್‌ಗ್ತಿ[೧೫] ತತ್ಯಾ[೧೬]. ಅದ ಗೌಡ್ತಿಗೆ ಉಪ್‌ಚಾರಾ ಮಾಡ್ತಿದ. ಕಡಿಗೆ[೧೭] ಗೌಡ್ತೆ ಉಂದ್ ಕೋಮ್ನ[೧೮] ಮರಿ ಹಿರ್‌ತೀದ[೧೯]. ಹುಟ್ದ ಕೂಡ್ಲೇ ಆ ಕೋಮ್ನಮರೆ ಓಡ್ಹೋಗೆ ಅವ್ರ ತೊಳ್ಕಲ್ ಮಡ್ಕೀಲೆ ಹುಕ್ಕಂತಿದ. ಆ ಕೋಮ್ನಮರಿ ಕಂಡೆ ಗಂಡ್ಗೆ ಹಿಂಡ್ತಿಗೆ ಬಾಳ ಚಿಂತಿಯಾತೀದ. ರಾತ್ರಿಗೆ ಗಂಡಾ ಹಿಂಡ್ತಿ ಮನಿಕಂಡಾಗೆ[೨೦] ತಮ್ ತಮ್ಮಲೇ ಹೇಳ್ಕಂತರ". ಅಯ್ಯೋ ದೇವ್ರೆ ನಮ್ಗೆ ಮಕ್ಳ ಇಲ್ದೇರೂ[೨೧] ಆತತ[೨೨]. ಈ ಕೋಮ್ನಮರೆ ಎಂತಕ್ ಹುಟ್ತೊ ಏನೊ?" ಅಂದ್ ಹೇಳೆ ಚಿಳ್‌ನೇ ಕಣ್ಣೀರ್ ಬಿಡ್ತರ.

ಹಿಂಗಿರ್‍ವಾಗೆ[೨೩] ಉಂದಲ್ಲಾ ಉಂದ್ ದಿನೆ ಆ ಊರ್ನ ಗೌಡ್ರೆಲ್ಲಾ ತಮ್ ತಮ್ ಮಕ್ಳ ಕರ್ಕಂಡೆ ಕುಂಬ್ರೀ ಬಿತ್ತೂಕೆ ಹೋತರ[೨೪]. ಅವ್ರ ನೋಡೆ ಗೌಡ್ಗೆ "ತಂಗೊಬ್ಗೇ[೨೫] ಮಗಾ ಇಲ್ದೇ ಹ್ವೊದ್ನಲಾ. ನಂಗ್ಹುಟ್ದ ಕೋಮ್ನಮರಿ ಸಂತೀಗ್[೨೬] ತಕ್ಕಂಡೋಗೆ ನಾ ಏನ್ ಮಾಡ್ಲೆ[೨೭]?" ಅಂದ್ಹೇಳೆ ತೀಡ್ತೇ[೨೮] ಮನಿಕಂತ್ಯಾ. ಅಪ್ಪ್ ಚಿಂತಿ ಮಾಡೂದ್ ನೋಡೆ ಆ ಕೋಮ್ನಮರೆ ಅಂವ್ನ ಕೋಡ್ ಬತ್ತೀದ[೨೯]. "ಅಪ್ಪಾ ನೀ ಯಾಕ್ ತೀಡ್ತಿ?" ಅಂದ್ ಕೇಳ್ತ. ಆಗೆ ಗೌಡಾ ಹೇಳ್‌ತ್ಯಾ "ಎಲ್ಲವ್ರೂ ಕುಂಬ್ರೀಗ್ ಹೋಗೆ ರಾಗಿ ಬಿತ್ಕ ಬತ್ತರ[೩೦]. ನಮ್ಗೆ ತಂದ್ಹಾಕು ಮಕ್ಳೇ ಇಲ್ಲಾ. ನೀನೇ ಗಂಡ್ ಮಗ್ನಾದ್ರೆ ನಮ್ಗೆ ಚಿಂತೆ ಈದತೆ[೩೧]? ಅಂದ್ ಹೇಳ್ದಾ. ಆಗೆ ಕೋಮ್ನಮರೆ "ಅಪ್ಪಾ ನೀ ಬೆಜಾರಾ[೩೨] ಮಾಡ್ಬೆಡಾ. ನೀನ ಆಚೇರಿ[೩೩] ಮನಿಗೆ ಏಗೇ[೩೪] ಹೋಗೆ ನಂಗುಂದ್[೩೫] ಸೆಣಕತ್ತಿ[೩೬] ಮತ್ತುಂದ್ ಸೆಣ್ ಪರ್ಸಗುಡ್ಳಿ[೩೭] ಮಾಡ್ಸಕುಡ[೩೮]" ಅಂದ್ ಹೇಳ್ತ.

ಮಗ್ನ ಮಾತ್ನಂತೇ ಗೌಡಾ ಆ ಚೇರಿ ಸಾಲೀಗ್ ಹೋಗೆ ಕತ್ತಿ, ಮುತ್ತುಂದ ಪರ್ಸಗುಡ್ಳಿ ಮಾಡ್ಸಂಡ್ ಬಂದ್ ಮಗ್ನ ಮುಂದಿಕ್ದಾ[೩೯]. ಆಗೆ ಕೋಮ್ನಮರೆ ತನ್‌ಕುತ್ತಿ

---

೧. ಒಂದು ೨. ಊರಿನಲ್ಲಿ ೩. ಅರಸು ೪. ಇದ್ದನು ೫. ಸಮೀಪ ೬. ಮಾಡಿಕೊಂಡು ೭. ಬಹಳ ೮. ವರುಷದ ೯. ಆಗಲಿಲ್ಲಾ ೧೦. ಕೊನೆಗೆ ೧೧. ಹೆಂಡತಿ ೧೨. ಗರ್ಭಿಣಿಯಾದಳು ೧೩. ಅವಳಿಗೆ ೧೪. ಬೇನೆ ೧೫. ಶೂಲಗಿತ್ತಿ ೧೬. ತರುತ್ತಾನೆ ೧೭. ಕೊನೆಗೆ ೧೮. ಆಮೆಯ ೧೯. ಹೆತ್ತಳು ೨೦. ಮಲಗಿಕೊಂಡಾಗ ೨೧. ಇಲ್ಲದಿದ್ದರೂ ೨೨. ಆಗುತ್ತಿತ್ತು ೨೩. ಹೀಗಿರುವಾಗ ೨೪. ಹೋಗುತ್ತಾರೆ ೨೫. ತನಗೊಬ್ಬನಿಗೇ ೨೬. ಸಂಗಡ ೨೭. ಮಾಡಲಿ? ೨೮. ಅಳು ೨೯. ಬರುತ್ತದೆ ೩೦. ಬಿತ್ತಿಕೊಂಡು ಬರುತ್ತಾರೆ ೩೧. ಇತುತ್ತಿತ್ತೆ? ೩೨. ಬೇಸರ ೩೩. ಆಚಾರಿ ೩೪. ಈಗಲೇ ೩೫. ನನಗೊಂದು ೩೬. ಸಣ್ಣಕತ್ತಿ ೩೭. ಕೊಡಲಿ ೩೮. ಮಾಡಿಸಿಕೊಡು ೩೯. ಮುಂದಿಟ್ಟನು

ಹೆರ್‍ಗ್ ತಿಗ್ದ್[೪೦], ಕತ್ತಿ, ಕುಡ್ಲಿ, ಅಪ್ನ ಕೈಲಿಂದೆ ಕುತ್ತೀಗೆಗೆ[೪೧] ಬಿಗಿಸ್ಕಂತ[೪೨] ನೆಟ್ಗೆ ಕುಂಬ್ರಿ ಕಡೂಕ್[೪೩] ಹೋಯ್ತು. ಹೋಗ್ವಾಗೆ ತನ್ನೆರರು[೪೪] ಹಿಡ್ಕಾ ತಿಂಬರಂದ್ಹೇಳೆ ಅಡೀಕಂಡೇ ದೋರೆ ದೋರೆ[೪೫] ಹೋಯ್ತು. ದೋರ್ ಉಂದ್ ಬೆಟ್ದಲೆ ಉಂದ್ ದೊಡ್ ಮಾಯ್ನ ಮರಾ ಉಂದ್ ಎಕ್ರೆ[೪೬] ಜಾಗ್ದಟ್ ದೊಡ್ಕೆ ಪಲ್ಲೈಸ್ಕಂಡ್[೪೭] ಬೆಳ್ದತ[೪೮]. ಆ ಮರಾ ದೇವ್ರ ಕುಳ್ಳು[೪೯] ಜಾಗಾಗತ[೫೦]. ಈ ಕೋಮ್ನಮರೆ ಆ ಮಾಯ್ನಮರ್‍ನ ಬುಡ್ಕೋಗೆ[೫೧] ಉಂದ್ ದೊಡ್ ಉಟ್ಟಾ[೫೨] ಹುಡಿತಿದ[೫೩]. ಆಗೆ ಆ ಮರ್‍ನೇ ಅಲ್ಲಾಡ್ತಿದ[೫೪]. ಮರಾ ಅಲ್ಲಾಡುವಾಗೆ, ದೇವ್ರ ಕೆಳ್ಗಿಳ್ದೆ ಬಂದ್, ಮರ್‍ದ ಬುಡ್ಕೆ ಒಟ್ಟೇ ಮಾಡೂ ಕೋಮ್ನಮರಿ ನೋಡ್ದಾ. "ಯಾವ್ ಪುಣ್ಯಾತ್ಮನಪ್ಪಾ ನೀನ[೫೫]? ಈ ಮರ್‍ಕೆ ಉಟ್ಟಾ ಹುಡ್ದೆ ಬೇರ್ ಕಡ್ದೆ[೫೬] ನಮ್ಗೆಕ್ ತರಾಸ್[೫೭] ಕುಡ್ತಿ[೫೮]? ನೀ ಈ ಮರ್‍ನಾ ಕಿಡ್ಗಾ ಕ್ಯೈಡಾ[೫೯]. ನಿಂಗ್ ಬೇಕಾದ್ ವರಾ ಕುಡ್ತಿ. ಹೆರ್‍ಗ್ ಬಾ[೬೦] ಅಂದ್ ಹೇಳ್ದ ಕೂಡ್ಲೇ ಕೋಮ್ನ ಮರೆ ಕೆರ್‍ಗ್ಬಂತ. ದ್ಯೆವ್ರೀಗ್ ಕೈ ಮುಕ್ಕಂಡೆ[೬೧] ನಮ್ ಅಪ್ಪಾ ಅವ್ವಿ ಮುದ್ಕತಿ[೬೨]. ಅವ್ರಕೋಡ[೬೩] ಕೆಲ್ಸಾಮಾಡೂಕಾಗುದಲಾ[೬೪]. ಅದ್ಕೇ[೬೫] ನಾನ ಈ ಮರ್‍ನ ಕಡ್ದೆ ರಾಗಿ ಬಿತ್ ಬೆಳ್ದಿ[೬೬] ನಮ್ ಅಪ್ಪವ್ವೀಗೆ ತಕ್ಕಂಡ್ಹೋಗ್ ಹಾಕ್ಬೇಕಾಗೀದ". ಅಂದ್ ಹೇಳ್ತ. ಆಗ್ ದೇವ್ರ ನೀ ಈ ಮರ್‍ನಾ ಕಡಿಬ್ಯೆಡಾ. ನಿಂಗೆ ಮೂರ್ ಹಳ್[೬೭] ಮಂತ್ರಸ್ ಕುಡ್ತಿ. ಉಂದ್ ಹಳ್ ಮಂತ್ರಸ್ ಹೊಡ್ದಕೂಡ್ಲೇ[೬೮] ಏಳ್ ಉಪ್ರಗಿ ಮನಿ ಆತಿದರ್[೬೯]. ಎಯ್ಡೇ[೭೦] ಹಳ್ ಮಂತ್ರಸ್[೭೧] ಹೊಡ್ದ ಕೂಡ್ಲೇ ಮನಿತುಂಬ್ ದವ್ಸ[೭೨] ಧಾನ್ಯ ಎಲ್ಲಾ ಆತಿದ. ಮೂರ್‍ನೇ ಹಳ್ ಮಂತ್ರಸ್ ಹೊಡ್ದಕೂಡ್ಲೇ ನಿನ್ನ ಕೋಮ್ನರೂಪ ಹೋಗೆ ನೀನ ೨೧ ಉರ್‍ಸದ[೭೩] ಹೊಂತ್ಗಾರಿ[೭೪] ಆತಿ[೭೫]. ಅಂದ್ ಹೇಳೆ ದ್ಯೆವ್ರ ಅಂವ್ಗೆ ಮೂರ್ ಹಳ್ ಕುಟ್ಟೆ ಮಾಯಾಯ್ತು.

ಆ ಹಳ್ ತಕ್ಕಂಡೆ ಕೋಮ್ನಮರೆ ಮನೀಗ್ ಬಂತ. ಮನೀಗ್ ಬಂದೆ ಅಪ್ನ ಕ್ಯೆಲೆ[೭೬] ಎಯ್ಡ ಹಳ್ ಕುಟ್ಟೆ[೭೭] ಉಂದ್ ಹಳ್ ಮಂತ್ರಸ್ ಹುಡಿ[೭೮] ಅಂತ. ಆ ಹಳ್ ಮಂತ್ರಸ್ ಹೊಡ್ದ್‌ಕೂಡ್ಲೇ ಏಳುಪ್ರಗಿ ಮನಿ ಹಿತ್ಲಾ[೭೯] ಬಾವಿ ಆಯ್ತು. ಇದೆಲ್ಲಾ ನೋಡೆ ಗೌಡ್ಗೆ ದಿಕ್ ತಪ್ಪಂಗಾಯ್ತು[೮೦]. ಎಯ್ಡ್ನೇ ಹಳ್ ಮಂತ್ರಸ್ ಹೊಡ್ದಾ. ಆಗೆ ಅಂವ್ನ ಮನಿಲೆ ಅಂವ್ನ ಜೇಂವ[೮೧] ಇರುವಂಕ್ರೀಗೆ ತಿಂದ್ ತೇಗುವಟ್[೮೨] ದವ್ಸ ದಾನ್ಯಾ ಎಲ್ಲಾ ತುಂಬ್ದು. ಇದ್ರ[೮೩] ನೋಡೆ ಗೌಡ ತುಂಡ್ಗುಪ್[೮೪] ಹುಡ್ದ ಕೊಣ್ದಾ[೮೫]. ದೀಗ್ಣಾ[೮೬] ಹೊಡ್ದಾ. ಗೌಡ್ತಿಯಂತೂ ಕುಸಾಲ್ದಲ್ ಪುಗ್ಡಿ[೮೭] ಹಾಕೂಕ್ ಹತ್ತತ.

---

೪೦. ಹೊರಗೆ ತೆಗೆದು ೪೧. ಕುತ್ತಿಗೆಗೆ ೪೨. ಕಟ್ಟಿಸಿಕೊಂಡಿತು ೪೩. ಕಡಿಯಲಿಕ್ಕೆ ೪೪. ತನ್ನನ್ನು ಯಾರಾದರೂ ೪೫. ದೂರ ೪೬. ಎಕರೆ ೪೭. ಪಲ್ಲೈಸಿಕೊಂಡು ೪೮. ಬೆಳೆದಿತ್ತು ೪೯. ಕೂಡ್ರುವ ೫೦. ಸ್ಥಳವಾಗಿತ್ತು ೫೧. ಬುಡಕ್ಕೆ ಹೋಗಿ ೫೨. ಒಟ್ಟೆ, ಹೊದರು ೫೩. ಹೊಡೆಯುತ್ತದೆ ೫೪. ಅಲ್ಲಾಡುತ್ತದೆ ೫೫. ನೀನು ೫೬. ಕಡಿದು ೫೭. ತೊಂದರೆ ೫೮. ಕೊಡುತ್ತಿ ೫೯. ಕೆಡವಿ ಹಾಕಬೇಡಾ ೬೦. ಹೊರಗೆ ಬಾ ೬೧. ಕೈ ಮುಗಿದುಕೊಂಡು ೬೨. ಮುದುಕರು ೬೩. ಅವರ ಹತ್ತಿರ ೬೪. ಮಾಡಲಿಕ್ಕಾಗುವದಿಲ್ಲ ೬೫. ಅದಕ್ಕೇ ೬೬. ಬೆಳೆದು ೬೭. ಹರಳು ೬೮. ಹೊಡೆದ, ಕೂಡಲೇ ೬೯. ಆಗುತ್ತದೆ ೭೦. ಎರಡನೇ ೭೧. ಮಂತ್ರಿಸಿ ೭೨. ದವಸ ೭೩. ವರುಷದ ೭೪. ಯುವಕ ೭೫. ಆಗುತ್ತಿ ೭೬. ಹತ್ತಿರ ೭೭. ಕೊಟ್ಟು ೭೮. ಒಗೆ ೭೯. ಹಿತ್ತಿಲು ೮೦. ತಪ್ಪಿದಂತಾಯ್ತು ೮೧. ಜೀವ ೮೨. ತೇಗುವಷ್ಟು ೮೩. ಇದನ್ನು ೮೪. ಒಂದು ಬಗೆಯ ಕುಣಿತ ೮೫. ಕುಣಿದನು ೮೬. ಇನ್ನೊಂದು ಬಗೆಯ ಕುಣಿತ ೮೭. ಮತ್ತೊಂದು ಬಗೆಯ ಹೆಂಗಸರ ಕುಣಿತ

ಈ ಕಡಿಗೆ ಗೌಡ್ನ ಮನಿ ಸಂಪತ್ ನೋಡೆ ಆ ಊರ ರಾಜಾ ಹೊಟ್ಟಿಕಿಚ್ ಬಿಡುಕ್ ಹತ್‌ದಾ. ಗೌಡ್ನ ತಲಿ ತಿಗು[೮೮] ಉಪಾಯಾ ಮಾಡೆ ಗೌಡ್ನ ತನ್ ಅರ್‌ಮನಿಗೆ ಕರೀಸ್ಕಂತ್ಯಾ[೮೯]. ಗೌಡ್ನ ಕಡೆ "ನೀನ ನಗ್ಗಿಯಾಡು[೯೦] ಮಾಯ್ನ ಹಣ್ಣು, ಕೂಯ್[೯೧] ಹಾಕು ನೀರು ತಂದ್ಕೊಡ್ಬೇಕ. ಇಲ್ದೇರೆ ನಿಂದು ನಿನ್ ಹಿಂಡ್ತಿದು ತಲಿ ಕಡಿಸ್ತಿ. ಇದ್ಕೆ ಇಂಟ್ ದಿನ್ದ ಅವ್ದೆ[೯೨]". ಅಂದ್ ಹೇಳ್ತ್ಯಾ.

ಈ ಮಾತ್ಕೇಳೆ ಗೌಡಾ ತೀಡ್ತೇ ಮನಿಗ್ ಬತ್ತ್ಯಾ[೯೩]. ಬಂದೆ ಹಿಂಡ್ತೀಕಡೆ ಎಲ್ಲಾ ಸುದ್ದಿ ಹೇಳೆ, "ನಮ್ಗೆ ಈ ದೊಡ್ಡಸ್ತನಾನೂ ಬೇಡಾಗತ್[೯೪]. ಇದ್ರಿಂದೇ ಏಗ್[೯೫] ಜೇಂವಾ ಹೋಗು ಪರಿಸ್ತಿತೆ ಬಂತ. ನಾ ಇಲ್ಲಿಂದ್ ನಗ್ಗಿಯಾಡು ಮಾಯ್ನ ಹಣ್ಣು, ಕೂಯ್ ಹಾಕು ನೀರ್ ತಂದ್ಕೊಡ್ಲೆ?" ಅಂದೆ, ಗಿರೂ ಮೂರೂ[೯೬] ತೀಡ್ತೇ ಮನಿಕಂತ್ಯಾ[೯೭]. ಗೌಡ್ನ ಹಿಂಡ್ತೀ ಕಣ್ಣೀರ್ ಬಿಡ್ತೇ ಮನಿಕಂತಿದ. ಆಗೆ ತೊಳ್ಕಲ್ದ[೯೮] ಮಡ್ಕಿಲಿಂದೆ ಮತ್ ಕೋಮ್ನ ಮರೆ ಓಡ್ಬತ್ತಿರ್ದ[೯೯]. "ಅಪ್ನಕಡೆ[೧೦೦] ಅವ್ವಿಕಡೆ ಯಾಕ್ ತೀಡ್ತರಿ" ಅಂದ್ ಕೇಳ್ತಿದ. ಆಗೆ ಗೌಡಾ "ನಮ್ ತಲೆ ಹೋಗು ಹುತ್ತ್[೧೦೧] ಬಂದೀದ. ನಮ್ಮೂರ್ ರಾಜ್ಗೆ ನಗ್ಗಿಯಾಡು ಮಾಯ್ನಹಣ್ಣು, ಕೂಯ್ ಹಾಕು ನೀರು, ತಂದ್ಕೊಡ್ದೇರೆ ನಮ್ ತಲಿ ಕಡಿತ್ಯಾ, ಅದ್ಕೇ ನಾವ ತೀಡ್ತೇ ಮನ್ಗದ್ದ". ಅಂದೆ ಕಣ್ಣೀರ್ ಸುರಿಸ್ತ್ಯಾ[೧೦೨]. ಆ ಮಾತ್ಕೇಳೆ ಕೋಮ್ನಮರೆ ನೀವ ಇಟ್[೧೦೩] ಸಣ್ ಕೆಲ್ಸಕೆ ಯಾಕ್ ಬೆಜಾರಾ ಮಾಡ್ತರಿ? ನಾ ಅದ್ರಾ ತಂದ್ಕುಡ್ತಿ[೧೦೪]. ರಾಜ್ನ ಮನೀಗ್ ಹೋಗೆ ಉಂದ್ ಸಾವ್ರ[೧೦೫] ರುಪಾಯು[೧೦೬] ಮತ್ ಉಂದ್ ತಿಂಗ್ಳ ಅವ್ದಿ ತಕ್ಕಂಡ್ ಬರಿ ಅಂತ. ಅವ್ರ ತಕ ಬಂದ್ರ.

ಕೋಮ್ನಮರೆ ಸಾವ್ರ ರುಪಾಯ್ ಮನಿಲೇ ಇಕ್ಕೀಕೆ[೧೦೭], ಬೆಟ್ದ ಹಾದಿ ಹಿಡ್ದೆ ನಗ್ಗಿಯಾಡು ಮಾಯ್ನಹಣ್ಣು, ಕೂಯ್ ಹಾಕು ನೀರು ತರೂಕೆ[೧೦೮] ಹೋಯ್ತ. ಹೋಗ್ವಾಗೆ ಆ ಕೋಮ್ನಮರೆ, ದೈವ್ರ ಮಂತ್ರಸ್ ಕೊಟ್ಟ ಮೂರ್ನೇ ಹಳ್ಳ ತಕ್ಕಂಡೇ ಹೋಗತ[೧೦೯]. ಊರ್ ದಾಟೆ ದೋರ್ ಹ್ವೊದ್ಮೆನೆ ಉಂದ್ ಕೆರೆ ಅದ್ಕೆ ಸಿಕ್ತ[೧೧೦]. ಆ ಕೆರಿಲ್ ಮಿಂದ್ಕಂಡೆ[೧೧೧] ದೈವ್ರ ಕೊಟ್ ಮೂರ್ನೇ ಹಳ್ಳ ಮಂತ್ರಸ್ ಹುಡಿತ[೧೧೨]. ಆಗೆ ಆ ಕೋಮ್ನ ಮರೆ ೨೧ ಉರ್ಸ ಹೊಂತ್ಗಾರಿಯಾದ. ಸೂಲಿಚಂದ್ರ್ನ ಹಂಗೆ[೧೧೩] ಹುಳುಕ್[೧೧೪] ಹತ್ತದಾ. ಅಂವಾ ಹ್ವೊದ್ ಹ್ವೊದಲ್ಲೆ ಬಿಳ್ಕ್[೧೧೫] ಬೀಳ್ತಿದ. ಅಂವಾ ಹಿಂಗೇ ಹೋತೇ ಹೋತೆ[೧೧೬]. ಇಲ್ಗ[೧೧೭] ರಾಯ್ನ ಪಟ್ಣಕ್ ಹ್ವೊದಾ[೧೧೮]. ಇಲ್ಗ ರಾಯ್ನ ಮಗ್ಳ ಏಳುಪ್ರಗಿ[೧೧೯] ಮ್ಯನೆ ಜೋಕಾಲಿ

---

೮೮. ತೆಗೆಯುವ ೮೯. ಕರೆಸಿಕೊಳ್ಳುತ್ತಾನೆ ೯೦. ನಗೆಯಾಡುವ ೯೧. ಕರೆಯುವ ಕೂಗು ೯೨. ಅವಧಿ ೯೩. ಬರುತ್ತಾನೆ ೯೪. ಬೇಡವಾಗಿತ್ತು ೯೫. ಈಗ ೯೬. ಒಂದೇ ಸವನೆ ೯೭. ಮಲಗಿಕೊಳ್ಳುತ್ತಾನೆ ೯೮. ತೊಳಕಲು ೯೯. ಓಡಿ ಬರುತ್ತದೆ ೧೦೦. ಅಪ್ಪನ ಹತ್ತಿರ ೧೦೧. ಹೊತ್ತು ೧೦೨. ಸುರಿಸುತ್ತಾನೆ ೧೦೩. ಇಷ್ಟು ೧೦೪. ತಂದುಕೊಡುತ್ತೇನೆ ೧೦೫. ಸಾವಿರ ೧೦೬. ರೂಪಾಯಿ ೧೦೭. ಇಟ್ಟು ೧೦೮. ತರಲಿಕ್ಕೆ ೧೦೯. ಹೋಗಿತ್ತು ೧೧೦. ಸಿಕ್ಕಿತು ೧೧೧. ಸ್ನಾನ ಮಾಡಿಕೊಂಡು ೧೧೨. ಹೊಡೆಯಿತು ೧೧೩. ಸೂರ್ಯ ಚಂದ್ರರ ಹಾಗೆ ೧೧೪. ಹೊಳೆ ೧೧೫. ಬೆಳಕು ೧೧೬. ಹೋಗುತ್ತ ಹೋಗುತ್ತ ೧೧೭. ಎಲವು ೧೧೮. ಹೋದನು ೧೧೯. ಏಳು ಮಾಳಿಗೆ

ಮಂಚ್ದ ಮೆನೆ ಕೂತ್ಕಂಡತ[೧೨೦]. ಚಕಾಚಕಾ ಮಿಂಚು ಹೊಂತ್ಗಾರಿ ನೋಡೆ ಅವ್ನ ಮ್ಯೆನೆ[೧೨೧] ಮನ್ಸ ಮಾಡೆ, ಅಂವ್ನ ಕರೂಕೆ ಸೇವಕ್ರ ಕಳ್ಸ್ ಕೊಟ್ತ[೧೨೨] ರಾಜ್ನ ಮಗ್ಳ ಕಡೆ ಆಳ ಅವ್ನ ಕರ್‍ಕಂಡ್[೧೨೩] ಬಂದ್ರ, ರಾಜ್ನ ಮಗ್ಳ ತಡಾ ಮಾಡ್ದೇ ಅವ್ನ ಕುತ್ಗೀಗೆ ಮಾಲಿ ಹಾಕ್ ಬೆಟ್ತ[೧೨೪]. ಆಗೆ ಹೊಂತ್ಗಾರೆ ತಾನ್ ಬಂದ್ ಉದ್ದೇಸಾ ಇಲ್ಗಿರಾಯ್ನ ಮಗ್ಳೀಗೆ ತಿಳಿಸ್ ಕಡೀಗೆ, ಉಂದ್ ತುಳ್ಸೀ ಗಿಡು ನಿಟ್ ಕುಟ್ಟೆ[೧೨೫], "ನಾನ ನಗ್ಗಿಯಾಡು ಮಾಯ್ನ ಹಣ್ಣು ಕೂಯ್ ಹಾಕೂ ನೀರು ತರೂಕ್[೧೨೬] ಹೋತಿ[೧೨೭]. ನಾನ ಅಲ್ಲೇ ಸತ್ರೆ[೧೨೮] ಈ ತುಳ್ಸೀಗಿಡ ಬಾಡ್ತೀದ[೧೨೯]. ಜೇಂವಂತೆದ್ರೆ ಬಾಡುದಲಾ[೧೩೦]. ಗಿಡ ಬಾಡ್ದ್ರೆ ನೀನ ನಾ ಹತ್ಕಂಡ್ ಹೋದ್ ಕುದ್ರೀ ಹೆಜ್ಜೀ ಗುರ್ತದ್‍ಮೆನೆ ಅಲ್ಲಿಗ್ ಬಾ", ಅಂತ್ಯಾ.

ಅದೇ ರೂಪ್ದಲೇ ಮತ್ ಮುಂದೆ ಮುಂದೆ ಹೋತ್ಯಾ ಚೆಮ್[೧೩೧]ರಾಯ್ನ ಪಟ್ನಾ ಸಿಕ್ತಿದ[೧೩೨]. ಅಲ್ಲೆ ಚೆಮ್‍ರಾಯ್ನ ಮಗ್ಳೂ ಏಳುಪ್ರಗಿ ಮಾಳ್ಗಿಮ್ಯೆನೆ ಜೋಕಾಲಿ ಮಂಚ್‍ದ ಮ್ಯೆನೆ ತೂಗ್ಲಾ ಹುಡಿತೇ ಕೂತತ. ಅದ್ದೂ[೧೩೩] ಇವ್ನ ಮ್ಯೆನೆ ಮನ್ಸಮಾಡೆ ಆಳ್ ಕಳ್ಗಸ್ ಕುಟ್ಟೆ ತಮ್ಮನೀಗ್ ಕರೀಸೆ ಅಂವ್ಗೆ ಮಾಲಿ ಹಾಕ್ತ. ಅದ್ರ ಕೋಡೂ[೧೩೪] ಅಂವ ತಾನ್ ಬಂದ ಉದ್ದೇಸ ತಿಳೀಸೆ, ಅಯ್ದು[೧೩೫] ಮಲ್ಗೀ ಮೊಕ್ಕೀ ತಂದೆ ಉಂದ್ ಕಯ್ಡ್ಗೀಲ್[೧೩೬] ಹಾಕೆ, "ಈ ಮೊಕ್ಕೆ[೧೩೭] ನಾನ ಸತ್ರೆ ಬಾಡ್ತೀದ. ಬದ್ಕ ಒಳ್‍ದ್ರೆ ಇಳ್ಳೆ[೧೩೮] ಹೂಂವಾತೀದ[೧೩೯]. ನಾ ಸತ್ರೆ ನನ್ ಕುದ್ರೀ ಹೆಜ್ಜೀ ಗುರ್ತದ್ ಮ್ಯೆನೆ ಅಲ್ಲೀಗ್ ಬಾ ಅಂದ್ ಹೇಳೀಕ್ ಹೋತ್ಯಾ.

ಮುಂದೆ ಅಂವಾ ಹೋಗ್ ಹೋಗ್ ಜೇಂವ್[೧೪೦] ರಾಯ್ನ, ರಾಜೀಕ್ ಹೋಗ್ ಮುಟ್‍ತ್ಯಾ[೧೪೧]. ಅಲ್ಲೂ[೧೪೨] ಏಳುಪ್ರಗೀಪಿ ಮಾಳ್ಗಿ ಮ್ಯೆನೆ ಜೇಂವ್‍ರಾಯ್ನ ಮಗ್ಳ ಪಗ್ಡಿ[೧೪೩] ಆಡ್ತೇ ಕೂತತ. ಆ ಜೇಂವ್ ರಾಯ್ನ ಮಗ್ಳ ಅಂವ್ನ ನೋಡೆ ಅಂವ್ನ[೧೪೪] ಮನೀಗ್ ಕರೀಸ್ತ. ವತಾನ್ ಬಂದ್ ಕಾರ್ನ ತಿಳೀಸ್ ಹೇಳ್ದಾ. ಮತ್ತೆ ಹೀಂಗ್ ಹೇಳ್ತ್ಯಾ[೧೪೫]. "ನಾನ ಹ್ವೊದಲ್ಲೆ ಸತ್‍ಬಿತ್ ಹ್ವೊದ್ರೆ ನಿನ್ ಬಲ್ಕನ್[೧೪೬] ಮೊಲೀಲೆ[೧೪೭] ರಕ್ತ ಬರುದ. ಬದ್ಕ ಒಳ್‍ದ್ರೆ[೧೪೮] ಹಂಗೇನೂ ಆಗಾ[೧೪೯]. ಮೊಲೀಲಿಂದೆ ರಕ್ತಾ ಬಂದ್ರೆ ನನ್ ಕುದ್ರೀ ಹೆಜ್ಜೀ ಹಿಡ್ಕಂಡ್ ಅಲ್ಲೀಗ್ ಬಂದ್ ಬಿಡ". ಅಂದ್ ಹೇಳೀಕ್ ಮುಂದ್ ಹೋತ್ಯಾ.

---

೧೨೦. ಕುಳಿತುಕೊಂಡಿದ್ದಳು ೧೨೧. ಮೇಲೆ ೧೨೨. ಕೊಟ್ಟಳು ೧೨೩. ಕರೆದುಕೊಂಡು ೧೨೪. ಬಿಟ್ಟಳು ೧೨೫. ಕೊಟ್ಟು ೧೨೬. ತರಲಿಕ್ಕೆ ೧೨೭. ಹೋಗುತ್ತೇನೆ ೧೨೮. ಸತ್ತರೆ ೧೨೯. ಬಾಡುತ್ತದೆ ೧೩೦. ಬಾಡುವದಿಲ್ಲ ೧೩೧. ಚರ್ಮ ೧೩೨. ಸಿಕ್ಕುತ್ತದೆ ೧೩೩. ಅವಳೂ ೧೩೪. ಹತ್ತಿರವೂ ೧೩೫. ಅಯ್ಯು ೧೩೬. ಕರಡಿಗೆಯಲ್ಲಿ ೧೩೭. ಮೊಗ್ಗೆ ೧೩೮. ಅರಳಿ ೧೩೯. ಹೂವಾಗುತ್ತದೆ ೧೪೦. ಜೀವ ೧೪೧. ಹೋಗಿ ಮುಟ್ಟುತ್ತಾನೆ ೧೪೨. ಅಲ್ಲಿಯೂ ೧೪೩. ಪಗಡೆ ೧೪೪. ಅವನನ್ನು ೧೪೫. ಹೇಳುತ್ತಾನೆ ೧೪೬. ಬಲದಿಕ್ಕಿನ ೧೪೭. ಮೊಲೆಯಲ್ಲಿ ೧೪೮. ಉಳಿದರೆ ೧೪೯. ಆಗದು

ಊರು ಪಟ್ಣಾ ದಾಟ್ ಉಂದ್ ದೊಡ್ಡ ಅಡ್ವೀಗ್ ಹೋತ್ಯಾ. ಆ ಬೆಟ್ದಲ್ಲೆ

ಹರು[೧೫೦] ಹಳ್ದ[೧೫೧] ನೀರ 'ಕೂಯ್' ಹಾಕೂದ್ ಕೇಳ್ತ್ಯಾ. ಆಗೆ ಅಂವಾ ಉಂದ್ ಬಿದ್ರನ[೧೫೨] ಅಂಡಿ[೧೫೩] ತಕ್ಕಂಡೆ. ಅಲ್ಲೀ[೧೫೪] ನೀರ್ ತುಂಬೆ ಉಂದ್ ಬಿದ್ರನ್ ಹಿಂಡೀಗ್[೧೫೫] ಸಿಕ್ಸ್[೧೫೬] ಹಾಕ್ತ್ಯಾ.

ಅಲ್ಲಿಂದ್ ತ್ವೊಡಿ[೧೫೭] ಮುಂದ್ ಹ್ವೊದ್ ಕೂಡ್ಲೇ, ಉಂದ್ ಮಾಯ್ನ ಮರ್ಕೆ[೧೫೮] ಉಂದೇ ಹಣ್ಣಾದದ್ದ್[೧೫೯] ನೋಡ್ದಾ. ಆ ಹಣ್ಣ ಇಂವ್ನ ಕಂಡ್ ಕೂಡ್ಲೇ ನಗ್ಗಿಯಾಡೂಕ್ ಸುರುಮಾಡ್ತ. ಅಕ್ಣ[೧೬೦] ಇಂವಾ[೧೬೧] ಕುಸಾಲ್ದಲ್[೧೬೨] ಮರ್ನ ಹತ್ದಾ[೧೬೩]. ಆದ್ರೆ ಅಂವಾ ಮರ್ನ ಹತ್ದಟ್ಟೇ ಮ್ಯೆನೆ, ಹಣ್ ಹೋಯ್ತು. ಮತ್ತೂ ಮತ್ತೂ ಮ್ಯೆನ್ ಹತ್ತದಾ. ಹಣ್ಣೂ ಮತ್ತೂ ಮತ್ತೂ ಮ್ಯೆನ್ ಹೋಗೂಕ್[೧೬೪] ಹತ್ತತ. ಅಂವಾ ಕೆಳ್ಗ ಎಳ್ದ್ರೆ[೧೬೫] ಹಣ್ಣೂ ಕೆಳ್ಗ ಇಳೂಕ್[೧೬೬] ಹತ್ತತ. ಮ್ಯೆನ್ ಹತ್ತೆ ಕೆಳ್ಗ ಇಳ್ದೆ ಅಂವ್ಗೆ ಸ್ಯೆಕಾಗ್[೧೬೭] ಹೋಯ್ತು. ತುರೀತುಟ್ಟಿಗೆ[೧೬೮] ಅಂವಾ ಹಣ್ ಹಿಡುಕೆ[೧೬೯] ಮರ್ನ ಮ್ಯೆನಿಂದೆ ಮ್ಯೆನ್ ಹಾರ್‌ಬೆಟ್ಟಾ[೧೭೦]. ಹಾರ್ ಹಣ್ ಕೊಯ್ದಾ[೧೭೧] ಆದ್ರೆ ಕೆಳ್ಗ ಬಿದ್ ಪಡ್ಚ[೧೭೨]. ಅಂವ್ನ ಇಲ್ಲು ಮೂಳೆಲ್ಲಾ ದುಂಬ್ ದುಂಬ್[೧೭೩] ಆಗ್ ಹೋತವ[೧೭೪].

ಈ ಕಡ್ಗೆ ಇಲ್ಗರಾಯ್ನ ಮಗ್ಳ ತುಳ್ಸೀಗಿಡ ಬಾಡ್ತೀದ. ಚೆಮ್‌ರಾಯ್ನ ಮಗ್ಳ ಮಲ್ಗೀ ಮೊಕ್ಕೆ ಬಾಡ್ತೀದ. ಜೇಂವ್ ರಾಯ್ನ ಮಗ್ಳ ಬಲ್ಕನ್ ಮೊಲೀಲಿಂದೆ ರಕ್ತ. ಆಗೆ ಅವ್ರೆಲ್ಲಾ ಅವ್ರವ್ರ ರಾಜೀದಿಂದೆ ಕುದ್ರಿ ಹೆಜ್ಜೀ ಗುರ್ತಾ ಹಿಡ್ಕಂಡೆ, ಅವ್ರ ಗಂಡಾ ಸತ್ ಬೆದ್ದ[೧೭೫] ಬೆಟ್ಕೆ ಬಂದ್ ಮುಟ್ತರ[೧೭೬]. ಪುಡಿ ಪುಡಿಯಾಗ್ ಬೆದ್ ಗಂಡ್ನ ಇಲ್ಗೆಲ್ಲಾ ಇಲ್ಗರಾಯ್ನ ಮಗ್ಳ ಕೂಡಸ್ತೀದ[೧೭೭]. ಚೆಮ್‌ರಾಯ್ನ ಮಗ್ಳ ಹರ್ದ[೧೭೮] ಹ್ವೊದ್ ಚಮ್ಮಾ ಎಲ್ಲಾ ಸಮಾ ಮಾಡೆ ಕೂಡಸ್ತೀದ. ಜೇಂವರಾಯ್ನ ಮಗ್ಳ ಅಂವ್ನಾ ಹ್ವೊದ್ ಜೇಂವಾ ಬರುಹಂಗೆ ಮಾಡ್ತೀದ. ತುರೀಗೆ ಅಂವ[೧೭೯] ಕೂಯ್ ಹಾಕು ನೀರು, ನಗ್ಗಿಯಾಡು ಮಾಯ್ನ ಹಣ್ಣು ತಕ್ಕಂಡೆ, ತನ್ನ ಮೂರು ಹಿಂಡ್ರಾ ಕುದ್ರಿ ಮೆನ್ ಕುಳ್‌ಸ್ಕಡೆ, ತನ್ನೂರಿಗೆ ನೆಡ್ದಾ[೧೮೦].

ಹೋಗ್ವಾಗೆ ಮುದೂಲೆ[೧೮೧] ಜೇಂವ್‌ರಾಯ್ನ ಊರಿಗೆ ಹೋತ್ಯಾ[೧೮೨]. ಮಾಂವ ಜೇಂವ್‌ರಾಯಾ ಮಗ್ಳ ಉಪ್‌ಸ್[೧೮೩] ಕುಡೂದ್ರ ಸಂಗ್ತಿಗೆ[೧೮೪] ಮುತ್ತೂ, ರತ್ನಾ ಎಲ್ಲಾ ಅಂವ್ಗೆ ಕುಡ್‌ತ್ಯಾ. ಹಂಗೇ ಅಂವ ಮುಂದೆ ಚೆಮ್‌ರಾಯಾ ಇಲ್ಗರಾಯಾ ಇವ್ರ ಮನೀಗ್ ಹೋಗೆ ಅವ್ರ ಕೊಟ್ ಮುತ್ತೂರತ್ನಾ ದವ್ಸದಾನ್ಯಾ ಎಲ್ಲಾ ತುಂಬ್ಕಂಡೆ[೧೮೫] ಮನೀಗ್ ಬತ್ಯಾ.

---

೧೫೦. ಹರಿಯುವ ೧೫೧. ಹಳ್ಳದ ೧೫೨. ಬಿದಿರಿನ ೧೫೩. ಬಿದಿರಿನ ಪಾತ್ರೆ ೧೫೪. ಅಲ್ಲಿಯ ೧೫೫. ಹಿಂಡು, ಮೆಳೆ ೧೫೬. ಸಿಕ್ಕಿಸಿ ೧೫೭. ಸ್ವಲ್ಪ ೧೫೮. ಮರಕ್ಕೆ ೧೫೯. ಆದದ್ದನ್ನು ೧೬೦. ಕೂಡ್ಲೇ ೧೬೧. ಈತನು ೧೬೨. ಸಂತೋಷದಿಂದ ೧೬೩. ಹತ್ತಿದನು ೧೬೪. ಹೋಗಲಿಕ್ಕೆ ೧೬೫. ಇಳಿದರೆ ೧೬೬. ಇಳಿಯಲಿಕ್ಕೆ ೧೬೭. ಸಾಕಾಗಿ ೧೬೮. ಕೊನೆಗೆ ೧೬೯. ಹಿಡಿಯಲಿಕ್ಕೆ ೧೭೦. ಹಾರಿಬಿಟ್ಟನು ೧೭೧. ಕೊಯ್ದನು ೧೭೨. ಸತ್ತನು ೧೭೩. ಚೂರು ಚೂರು ೧೭೪. ಹೋಗುತ್ತವೆ ೧೭೫. ಬಿದ್ದ ೧೭೬. ಮುಟ್ಟುತ್ತಾರೆ ೧೭೭. ಕೂಡಿಸುತ್ತಾಳೆ ೧೭೮. ಹರಿದು ೧೭೯. ಅವನು ೧೮೦. ನಡೆದನು

ಮನೀಗ್ ಬರೂಮಗ್ನ ನೋಡೆ ಗೌಡ್ಗೆ ಗೌಡ್ತೀಗೆ ಹುರ್ಪೇ ಹುರ್ಪ[೧೮೬]. ಏನ್ ಅವ್ರ ಕೊಣ್ತಾ[೧೮೭]? ಏನ್ ಅವ್ರ ನಗ್ಗೆ. ಮಗಾ ನಗ್ಗಿಯಾಡು ಮಾಯ್ನಹಣ್ಣೊ, ಕೂಯ್ ಹಾಕು ನೀರು ಅಪ್ನಕಲ್ ಕುಟ್ಟ್ ರಾಜದಲೆ[೧೮೮] ಕಳೀಸ್ ಕುಡ್‌ತ್ಯಾ. ರಾಜಾ ಆ ಹುಡ್ಗ್ನ ವೀರತನ್ಕೆ ಮಿಚ್ ಅಂವ್ನ ತನ್ ಮನೀಗ್ ಕರೀಸೆ ಅಂವ್ಗೆ ತನ್ ಮಗ್ಳ ಮುದಿ[೧೮೯] ಮಾಡ್ ಕುಡ್‌ತ್ಯಾ. ತುರೀಗೆ ಎಲ್ಲವ್ರೂ ಸುಕ ಸಂತೋಸ್‌ದಿಂದ ಇರ್ತರ[೧೯೦].

೧೮೧. ಮೊಟ್ಟಮೊದಲು ೧೮೨. ಹೋಗುತ್ತಾನೆ ೧೮೩. ಹೆಣ್ಣೊಪ್ಪಿಸಿ ೧೮೪. ಜೊತೆಯಲ್ಲಿ ೧೮೫. ತುಂಬಿಕೊಂಡು ೧೮೬. ಹುರುಪು ೧೮೭. ಕುಣಿತ ೧೮೮. ರಾಜನೆಡೆಗೆ ೧೮೯. ಮದುವೆ ೧೯೦. ಇರುತ್ತಾನೆ

೩. ಮದನ ಮೋವನ

ಪ್ರತ್ವಿರಾಜಾ ಅಂಬೂ ರಾಜಾ ಬಾಳ್ ದಯಾ ಗುಣ್ದಂವ್ನಾಗದಾ. ಅಂವ್ಗೆ ಬಾಳ ದಿನ್ದವರೀಗೆ ಮಕ್ಳೇ ಆಗ್ಲೇಲಾ[೧]. ಅದ್ಕಾಗೆ ಅಂವ ಬಡಬಗ್ರೀಗೆ ಅನ್ನದಾನಾ ಉಸ್ತ್ರದಾನಾ, ಎಲ್ಲಾ ಮಾಡ್ತದಾ. ಅನ್ನಚಿತ್ರಾ[೨], ದ್ಯೆವ್ರಮನಿಯೆಲ್ಲಾ ಕಟ್ಸದಾ. ಈ ಎಲ್ಲಾ ಪುಣ್ಣೀ ಕೆಲ್ಸಾ ಮಾಡ್ದಕಾಗೆ, ಅಂವ್ನ ಹಿಂಡ್ತೆ ಅದ್ರ ೪೨ ನೇ ಉರ್ಸ್ಕೆ[೩] ಹುತ್ನಲುಳಿತ[೪]. ಏಳೇ ತಿಂಗ್ಳೀಗೆ ಅದ್ಕೆ ಬಯ್ಕಿ[೫] ಹಾಕ್ದ್ರ. ರಾಜಾ ಬಡಬಗ್ರೀಗೆ ಸಿಮಿಸಿಮಿ ತಿಂಡಿ ಹಚ್ದಾ. ದಾನಾ ದರ್ಮಾ ಮಾಡ್ದಾ. ಇದೆಲ್ಲಾ ನೋಡ್ದ ಜನಾ ರಾಜ್ನ ಕೊಂಡಾಡ್ತದ್ರ[೬]. ರಾಜ್ನ ಹಿಂಡ್ತೆ ಹತ್ನೇ ತಿಂಗ್ಳಿಗೆ ಕರ್ಪೂರ ಬೊಂಬಿಯಂತಾ ಮಗ್ನ ಹೆತ್ತತ[೭]. ಕೋಸ್[೮] ಹುಟ್ದ ಹನ್ನೆಯ್ಡ್ನೇ ದಿನ್ಕೆ. ಕೋಸ್ಗೆ "ಮದನಮೋವನ" ಅಂದೆ ಹಿಸ್ರ ಹಾಕ್ದ್ರ. ರಾಣಿ ಮಗ್ನ ಹೆತ್ ಉಂದ್ ತಿಂಗ್ಳ ಮ್ಯೆನೆ "ಪರ್ದಾನಿ ಹಿಂಡ್ತೆ ಉಂದ್ ಮಗ್ನ ಹೆತ್ತ್ತ.

ಅರ್ಸು ಮಗ ಪರ್ದಾನಿ ಮಗಾ ಎಯ್ಡೂ ಜನಾ ಆರ್ ಉರ್ಸ್ದ ಮ್ಯೆನೆ ಸಾಲಿಗ್ ಹ್ವೊದ್ರ. ರಾಸಿ ಕಲ್ತೆ ಪಂಡಿತ್ರಾದ್ರ. ಮದನ ಮೋವನ್ಗೆ ಹದ್ನಿಂಟ್ ಉರ್ಸ ಆದಮ್ಯೆನೆ ರಾಜ ತನ್ನಟ್ಟೇ ಯೋಗ್ಯತಿ ಎದ್ದ ಕಳಿಂಗ್ ರಾಜ್ನ ಕಡೆ ಹೆಣ್ ಕೇಳೂಕೆ ತನ್ ಮಂತ್ರಿ ಕಳ್ಗಸ್ತ್ರ್ಯಾ. ಕಳಿಂಗ್ ರಾಜ್ಗೆ ಮೂರ್ ಜನಾ ಹೆಣ್[೧೦] ಮಕ್ಳ. ಕಳಿಂಗ್ ರಾಜ ತನ್ನ ಮೂರ್ ಜನ ಮಕ್ಳಲ್ಲೆ ಯಾರ್ ಬೇಕಾದ್ರೂ ಮುದ್ಯಾಗೂಕ್[೧೧] ಅಡ್ಡಿಲ್ಲಾ ಅಂದ್ಹೇಳೆ ಪ್ರತ್ವಿರಾಜ್ನ ಮಂತ್ರೀ ಕಡೆ ಹೇಳ್ತ್ಯಾ[೧೨]. ಕಳಿಂಗ್ ರಾಜ್ನ ಕಿರೀಮಗ್ಳಿಗೆ ಜಾತ್ಕ ಹುಂದ್ತ[೧೩]. ಅದ್ಕಾಗೆ ಅದ್ರನೇ ಮುದಿ ಮಾಡ್ಕುಡುಕೆ ನಿಚ್ಚಯ ಮಾಡ್ದ್ರ. ಕಳಿಂಗ್ ರಾಜ್ನ ಪರ್ದಾನಿ ಮುಗೂನೂ[೧೪] ಪ್ರತ್ವಿರಾಜ್ನ ಮಂತ್ರಿ ಕೋಸ್ಗೆ ನಿಚ್ಚಯ ಮಾಡ್ತರ. ಕಳಿಂಗ್ ರಾಜಾ ಮುದಿದ ಸಿದ್ದತಿ ಮಾಡ್ಕಂಡ. ಅಂಗ್ಳಕೆ ತಿಂಬೆಲಿ[೧೫] ಚಪ್ರ[೧೬] ಹಾಕಸ್ದಾ.

ಮುದಿದ ಮುದ್ಲನೇ[೧೭] ದಿನೆ ಕಳಿಂಗ್ ರಾಯ್ನ ಮಗ್ಳ ಪರ್ದಾನಿ ಮಗ್ಳದಲ್[೧೮] ಬಂದೆ, "ನಮ್ಮಪ್ಪಾ ನನ್ ಕೈಳ್ದೇ[೧೯] ಮುದಿ ನಿಚ್ಚಯ ಮಾಡ್ಯ[೨೦]. ನನ್ ಮನ್ಸೀಗ್ಹೊಗುವಂತವ್ನಾದ್ರೆ[೨೧] ನಾನ ಅಂವ್ನ ಮುದಿ ಆತಿ[೨೨], ಇಲ್ದೇರೆ ಆಗುದಲಾ[೨೩] "ಕಾಡಿಗರು ಹೋತಿ" ಅಂದ್ ಹೇಳ್ತ. ಈ ಮಾತ್ ಕೇಳೆ ಪರ್ದಾನಿ ಮಗ್ಳ ಹಂಗ್

---

೧. ಆಗಲಿಲ್ಲಾ ೨. ಅನ್ನಛತ್ರ ೩. ವರುಷಕ್ಕೆ ೪. ಗರ್ಭವತಿಯಾದಳು ೫. ಬಯಕೆ ೬. ಕೊಂಡಾಡುತ್ತಿದ್ದರು ೭. ಹೆತ್ತಳು ೮. ಹುಡುಗ ೯. ಮೇಲೆ ೧೦. ಹೆಣ್ಣು ೧೧. ಮದುವೆಯಾಗಲಿಕ್ಕೆ ೧೨. ಹೇಳುತ್ತಾನೆ ೧೩. ಹೊಂದುತ್ತದೆ ೧೪. ಹುಡುಗಿಯನ್ನೊ ೧೫. ವೀಳ್ಯದೆಲೆ ೧೬. ಚಪ್ಪರ ೧೭. ಮೊದಲನೇ ೧೮. ಮಗಳಿದ್ದಲ್ಲಿ ೧೯. ಕೇಳದೇ ೨೦. ಮಾಡಿದ್ದಾನೆ ೨೧. ಮನಸ್ಸಿಗೊಪ್ಪಿದವನಾದರೆ ೨೨. ಆಗುತ್ತೇನೆ ೨೩. ಆಗುವದಿಲ್ಲ

ಮಾಡೂದ್ ಲಾಯ್ಕಲ್ಲಾ[೨೪] ಅಂದ್ ಹೇಳ್ತ. ಮತ್ತೆ, "ನಾನ ನಮ್ಮಪ್ಪಾ ನಿಚ್ಚಯ ಮಾಡ್ದ ಗಂಡಾ ಎಂತವ್ನಾದ್ರೂ ಮುದಿ ಆತಿ" ಅಂತ.

ಮಂಗ್ಳಾರ ದಿನೆ ಮದನ ಮೋವನನ ದಿಬ್ಣಾ ಬಂತ. ಕಳಿಂಗ್‌ರಾಯ್ನ ಮಗ್ಳ ಪರ್ದಾನಿ ಮನಿ ಮಾಳ್ಗಿ ಮ್ಯೆನಿಂದೇ ಮದನ ಮೋವನ್ನ ರೂಪ ನೋಡೆ ಮಿಚ್ತ. ಬಾಳ್ ಸಂತೋಸ್‌ದಿಂದ್ ಅಂವ್ನ ಮುದಿ ಆಯ್ತ. ಕಳಿಂಗ್‌ರಾಜ್ನ ಮಂತ್ರಿ ಮಗ್ಳಾ ಕುಸಲಮತೆ ಮುದಿ ಆದಾ.

ಉಂದನೆ[೨೫] ಮದನಮೋವನಾ, ಕುಸಲಮತಿ, ರಾಜ್ನ ಮನಿ ಮುಂದೆದ್ದ ಕೆರಿಮುಂದ್ನ ಪೀಟ್ದಮ್ಯೆನೆ ಕೂತ್ಕಂಡದ್ರ. ಆ ಕೆರಿಗೆ ನೀರ ತುಂಬೂಕ್ ಬಂದ್ ಹಿಂಗ್ರ[೨೬] ಕೊಡ್ಕೆ[೨೭] ಮದನ ಮೋವನಾ ಬಾಣಬಿಟ್ ಕೊಡಾ ತೂತ್ ಮಾಡ್ ಹಾಕ್ತದ. ಆಗೆ ಕುಸಲಮತೆ, ಅಕ್ಸಣ[೨೮] ತಾನ್ ಮತ್ತುಂದ್ ಬಾಣಾ ಬಿಟ್ ಒಡ್ದ ತೂತಾ ತುಂಬ್ತದ. ಮತ್ತೆ ಮದನ ಮೋವನ್ಗೆ "ಬಡೋರ್ ಕೊಡಾ ಉಡುದ್[೨೯] ಗನಾದಲ್ಲಾ[೩೦]" ಅಂದ್ಹೇಳೆ ಬುದ್ದೀ ಹೇಳ್ತದ. ತ್ವೊಡಿ[೩೧] ಹುತ್ನಮೆನೆ ಕುಸಲಮತೆ ತಮ್ಮನಿಗೆ ಉಂಬೂಕ್[೩೨] ಹ್ವೊದಾ. ಮದನಮೋವನಾ ಕೆರಿ ದಂಡಿ ಮ್ಯೆನ್‌ನಾ ಪೀಟ್ದ ಮ್ಯೆನೆ ಕೂತ್ಕಂಡ್ ಒಳ್ದಾ. ಅದೇ ಹುತ್ತಿಗೆ, ನೀರ್ ಕೊಡ್ ತಕ್ಕಂಡೆ, ಪ್ರತ್ವಿರಾಜ್ನ ಗುರು ಮಗ್ಳ ಅಲ್ಲಿಗ್ ಬಂತ. ಪೀಟ್ದ ಮೆನ್ ಕೊಳ್ತ ಮದನಮೋವನನ ನೋಡೆ ಅಂವ್ಗೆ ಮಳ್ಳಾಯ್ತು[೩೩]. ತನ್ನ ಮುದಿಯಾಗ್ ಬೇಕಂದೆ ಅಂವ್ನ ಕಾಲ್ ಹಿಡ್ದೆ ಬೇಡ್ಕಂತ. ಆದ್ರೆ ಮದನಮೋವನ "ನಮ್ ಅಪ್ನ ಗುರು ಮಗ್ಳ ನಂಗೆ ನಮ್ ತಂಗೀ ಹಂಗೆ". ಅಂದೆ ಇಚಾರಾ[೩೪] ಮಾಡೆ ಅದ್ರ ಮುದಿಯಾಗೂಕೆ ಒಪ್ಲೇಲಾ[೩೫] ಇದ್ರಿಂದೆ ಗುರು ಮಗ್ಳಿಗೆ ಮಾನ್ಬಂಗಾ ಆದಂಗಾಯ್ತು. ಸಿಟ್ನಲೆ ಅದ ತನ್ ಕೂದ್ಲ ಕಿದ್ರಕಂತ[೩೬]. ಮಿಯ್ಯು[೩೭] ಮೊಕ ಹರ್ಕಂತ[೩೮]. ಕಯ್ ಬಳಿ ಉಡ್ಕಂತ[೩೯] ನೀರ್ ಕೊಡ್ನಾ ಜಿರ್‌ಕಂತ[೪೦]. ಕಣ್ಣಲಿಂದ್ ಕೆಂಪ್ ಕೆಂಡಾ ಕಾರ್ತೇ, ಹಲ್ ಕಡಿತೇ "ನಿಮ್ ಅಪ್ನಕಯ್ಲೇ ನಿನ್ ಕುಲ್‌ಸ್ತಿ ನೋಡ". ಅಂದ್ ಮದನ ಮೋವನ ಕೋಡೆ ಹೇಳ್ತ. ಉರ್‌ಬಂದ್[೪೧] ಕುಣಿತೇ ಅಪ್ಪಾದಲೆ ಹೋಯ್ತು. ಮತ್ತ್ ಅಪ್ನಕಲೆ ಹೇಳ್ತ. "ನಿನ್ ಸಿಸ್ಸಿನ ಮಗಾ ನನ್ ಮಾನ್ಬಂಗಾ ಮಾಡ್ದಾ. ನೋಡ ಬಳಿ ಒಡ್ದಾ, ಕರ್ಗಿ ಜರ್ದಾ. ಮಿಯ್‌ಮ್ಯೆನ್ ಕೈ ಮಾಡ್ದಾ". ಆಗೆ ಗುರ ಸಿಟ್ನಲೆ ನೆಟ್‌ಗೆ ರಾಜದಲೆ ಹ್ವೊದಾ. ಮನಿಗ್ ಬಂದ್ ಗುರ್ಗಳ ಪಾದಾ ರಾಜಾ ತೊಳ್ದಾ[೪೨]. ಪೀಟದ್ ಮೆನ್ ಕುಳ್‌ಸ್ದ. ಕೆಂಪ್ ದಾಸಾಳ್ ಹೂಂವ್ನಂಗಾದ[೪೩] ಗುರು ಮೊಕ ನೋಡೆ, "ಯಾಕ್ ಸಿಟ್ಬಾಗರಿ?" ಅಂದ್‌ಕೇಳ್ದಾ.

---

೨೪. ಒಳ್ಳೇದಲ್ಲ ೨೫. ಒಂದು ದಿನ ೨೬. ಹೆಂಗಸರ ೨೭. ಕೊಡಕ್ಕೆ ೨೮. ಕೂಡಲೇ ೨೯. ಒಡೆಯುವುದು ೩೦. ಒಳ್ಳೇದಲ್ಲ. ೩೧. ಸ್ವಲ್ಪ ೩೨. ಊಟಕ್ಕೆ ೩೩. ಮರುಳಾದಳು ೩೪. ವಿಚಾರ ೩೫. ಒಪ್ಪಲಿಲ್ಲ ೩೬. ಕೆದರಿಕೊಂಡಳು ೩೭. ಮೈ ೩೮. ಹರಿದುಕೊಂಡಳು ೩೯. ಒಡೆದುಕೊಂಡಳು ೪೦. ಜರಿದುಕೊಂಡಳು ೪೧. ಉರಿಬಂದು ೪೨. ತೊಳೆದನು ೪೩. ಹೂವಿನಂತಾದ

ಆಗೆ ಗುರ "ನನ್ಮಗ್ಳ ನೀರೀಗ್ ಹ್ವೊದಾಗೆ ನಿನ್ಮಗಾ ಅಪಮಾನಾ ಮಾಡ್ದಾ. ಹಿಂಗ್ ಮಾಡ್‌ದ್ರ ಆಗುದೆ?" ಅಂದ್ ಆರ್ಬಟಿ ಮಾಡ್ದಾ. ಈ ಮಾತ ಕೇಳೆ ರಾಜ್ನ ತಲಿಮ್ಯೆನ್ ಸಿಡ್ಳ[೪೪] ಬೆದ್ದಂಗಾಯ್ತ[೪೫]. ಗುರುಗಳಿಗೆ ಕೈಮುಗ್ದೆ "ಕೆಟ್‌ರಸ್ತಿ[೪೬] ಹೆಡ್ದ[೪೭] ಮಗ್ನ ತಲಿ ನಾಳಾಗೇ ಹುಡಿಸ್ತಿ. ಗುರುಗಳೇ ನಿಮ್ ಕರ್ಣೆ[೪೮] ಮಾತ್ರ ನನ್ಮೆನುಳಿಲೆ". ಅಂದೆ ಕಾಲಿಗ್ ಬೆದ್ದಾ.

ಮಾರ್ನೇ ದಿನ್ವೇ ಚಾಂಡಾಲ್ರ ಕರಿಸೆ ಮಗ್ನತಲಿ ಕಡೂಕೆ ಆಜ್ಞೆ ಕೊಟ್ಟಾ. ಈ ಸುದ್ದೆ ಕುಸಲಮತಿಗೆ ತಿಳಿತ. ಅಕ್ಷಣ ಕುದ್ರಿ ಹತ್ತೆ, ಕಟ್ಕ್ರ[೪೯] ಮದನ ಮೋವನ ತಲಿ ಹುಡ್ವಲೆ ಬಂದ. ತಲಿ ಹುಡುದ ಅಡ್‌ಗಟ್ಟ. "ಮುದ್ಲ ನನ್ ತಲಿ ಕಡಿರಿ. ಕಡಿಗ್ ಬೇಕಾದ್ರೆ ಮದನ ಮೋವನನ್ ತಲಿ ಕಡಿರಿ". ಅಂದೆ ಕೇಳ್ಕಂಡ ಬಳಾಬಳಾ ಕಣ್ಣೀರ್ ಸುರಿಸ್ದಾ. ಆಗೆ ಕಟ್ಕರ ಮನ್ಸ ಕರ್ಗೆ ಆ ಬೆಟ್ದಲೇ ಓಡ್ಹೋಗು ಮೊಲ್ನುಂದ್[೫೦] ಕಡ್ದೆ ಅದ್ರ ರಕ್ತಾ ತಕ್ಕಂಡೆ ರಾಜ್ಗೆ ಕಾಣ್ಸದ್ರ. ಮಗ್ನ ತಲ ಹ್ವೊದ್ ಸುದ್ದಿಕೇಳೆ ರಾಜ ಎಚ್ಚರ್ ತಪ್ ಬೆದ್ದಾ.

ಈ ಕಡಿಲೆ ಯುವ್‌ರಾಜಾ, ಮಂತ್ರಿ ಮಗಾ ಬ್ಯೆರೇ ರಾಜೀಕ್ ಹ್ವೊದ್ರ. ಅಲ್ಲೆ ಉಂದ್ ಅಜ್ಜೀ ಮುದ್ಕಿ ಮನಿಗ್ ಹ್ವೊದ್ರ. ಅಲ್ಹೋಗೆ ಉಂಬೂಕ್ ಬಂದ್ರೂ ದಿನ್ಕೆ ನಾಕ್ ರುಪಾಯ್; ಉಂಬೂಕ್ ಬರ್ದೇದ್ರೂ[೫೧] ದಿನ್ಕ್ರ ನಾಕ್ ರುಪಾಯ್ ಕುಡು ಕರಾರ್ನ ಮ್ಯೆನೆ ಉಳ್ಕಂಡ್ರ[೫೨]. ಆ ಊರ್ನಲೆ ಸಸಿಕಲಿ ಎಂಬ್ ರಾಜಾ ಈದದಾ. ಅಂವ ಊರ್ ದ್ಯೆವ್ರ ಮನಿ ಪೋಜಿ[೫೩] ನಿಲ್ಸ್ ಬೆಟ್‌ದ್ರಿಂದೆ ಆ ದ್ಯೆವ್ರ ಮನಿ ಪೋಜಾರಿ ಮಗ ಒಬ್ಬ ಸತ್ತೂ ಹ್ವೊದಾ. ಸುದ್ದೆ ಯುವರಾಜ, ಮತ್ ಮಂತ್ರಿ ಮಗಾ ಎಯ್ಡೂ ಜನ್ಕೆ ತಿಳಿತ. ಅವ್ರ ನೆಟ್ಗೆ ಸಸಿಕಲಿ ರಾಜ ಎದ್ದಲೆ[೫೪] ಬಂದ್ರ. ಪೋಜಾರಿಗ್ ಬಂದ್ ಕಟ್ಟಾ[೫೫] ಎಲ್ಲಾ ತಿಳಿಸ್ ಹೇಳ್ದ್ರ. ಮತ್ತೆ ರಾಜ್ನ ಕೈಲಿಂದೆ ಪೋಜಾರಿಗೆ ಎಯ್ಡ ಕಂಡ್ಗ ಅಕ್ಕಿ, ಮತ್ತೆ ಪಾತ್ರಿ ಪಗ್‌ಡಿ ಎಲ್ಲಾ ಕುಡ್ಸದ್ರ.

ಉಂದನೆ[೫೬] ಪೋಜಾರೆ ದ್ಯೆವ್ರ ಮನೀಲೆ ಉಪರಾ ಬೇಯ್ಸು ಹುತ್ತೀಗೆ ಯುವರಾಜಾ, ಕುಸಲಮತಿ ಅಲ್ಲೀಗ್ ಬಂದ್ರ. ದ್ಯೆವ್ರಮನಿ ಸುತ್‌ತಿರ್ಗೂವಾಗೆ ಅಲ್ಲೆ ಗ್ವೊಡಿ[೫೭] ಮೆನ್ ನೂರಾರ್ ಚಿತ್ರಾ ಬಿಡ್ಸದ್ರ. ಅಲ್ ಉಂದ್ ಹಿಣ್ಣನ್ ಚಿತ್ರಾ ನೋಡೆ ಮದನ ಮೋಹನಾ ಮಳ್ಳಾದಾ[೫೮]. ಆ ಹಿಣ್ನ ಗುಂಗ್‌ನಲ್ಲೇ ಎಚ್ರ ತಪ್ ಬೆದ್ದಾ. ಕುಸಲಮತಿಗೆ ದಿಗ್ಲ[೫೯] ತಪ್ದಂಗಾಯ್ತ. ಪೋಜಾರಿ ಕಡೆ ಆ ಚಿತ್ರ ತೆಗ್ದಂವಾ ದಾರುಕಾ ಅಂಬೂದ್ ತಿಳ್ಕಂಡಾ. ಆ ದಾರುಕ್ನ ಕೇಳ್ದ್ರೆ, ಈ ಹಿಣ್ನ ಮಾಹಿತೆ ಸಿಕ್ಕೂದಂದೆ ಅಲ್ಲೀಗ್ಹೋಗೂ ನಿಚ್ಚಯ[೬೦] ಮಾಡ್ಕಂಡಾ. ಮತ್ತೆ ಪೋಜಾರಿಗ್ ಹೇಳ್ದಾ "ನಾನ ಇಲ್ಲಿಗ್ ಬರುವಂಕ್ರೀಗೆ[೬೧] ಇಂವ್ಗೆ ಉಂದ್ ತುತ್ ಅನ್ನಾ ಹಾಕ್" ಅಂದ್ ಹೇಳೆ ಅಲ್ಲಿಂದ್ ನಿಡ್ದೇ ಬೆಟ್ಟಾ.

---

೪೪. ಸಿಡಿಲು ೪೫. ಬಿದ್ದಂತಾಯಿತು ೪೬. ದುರ್ಮಾರ್ಗ ೪೭. ಹಿಡಿದ ೪೮. ಕರುಣೆ ೪೯. ಕಟುಕರು ೫೦. ಮೊಲವೊಂದನ್ನು ೫೧. ಬರದಿದ್ದರೂ ೫೨. ಉಳಿದುಕೊಂಡರು ೫೩. ಪೂಜೆ ೫೪. ಇದ್ದಲ್ಲಿ ೫೫. ಕಷ್ಟ ೫೬. ಒಂದು ದಿನ ೫೭. ಗೋಡೆ ೫೮. ಮರುಳಾದನು ೫೯. ದಿಗಿಲು ೬೦. ನಿಶ್ಚಯ

ದಾರುಕ್ನ ಮನಿಗ್ ಹೋಗೆ ಉಂಬೂಕ್ ಕೊಳ್ತಾಗೆ[೬೨] ಆ ಚಿತ್ರದ ಹಿಣ್ಣ್ನ ಇಚಾರಾ ಮಾಡ್ದಾ. ಅದ್ಕೆ ದಾರುಕಾ, "ನಂಗೆ ಆ ಹಿಣ್ಣ್ನ ಬಂಗಾರ್ದ ಕೂದ್ಲುಂದ್ ಸಿಕ್ಕತ. ಅದ್ರ ಅಂದಾಜ್ನ ಮ್ಯನೆ ಆ ಹಿಣ್ಣ್ನ ರೂಪ ಹಿಂಗೇ ಎರ್ಬವ್ದ[೬೩] ಅಂದೆ ಯೋಚ್ನೆ ಮಾಡೆ ಚಿತ್ರಾ ತೆಗ್ದೆ. ಅದ ಹಿಚ್ಚ್ಬಾಗೆ ಸಸಿಕಲಿ ರಾಜ್ನ ಮಗ್ಳೆರ್ಬೇಕ್. ಸಸಿಕಲಿ ರಾಜ್ನ ಪರ್ದ್ಧಾನಿ ಮನಿಗ್ ಹ್ವೊದ್ರೆ ಈ ಹಿಣ್ಣ್ನ ಬಗ್ಗೆ ಗುತ್ತಾಗುದ[೬೪]. ನೀನ ಪರ್ದ್ಧಾನಿ ಹಿಂಡ್ತೀದಲ್ ಹೋಗೆ ತಾನ ನಿನ್ನ ಅಣ್ಣಾ ಅಂದ್ಹೇಳ. ಅದ್ಕೆ ಎಯ್ಡ ಜನಾ ಮಕ್ಳ. ಮಕ್ಳೀಗೆ ಅಂಗಿ, ಮತ್ತೆ ತಿಂಬೂಕ್[೬೬] ತಕ್ಕಂಡ್ ಹೋಗ" ಅಂದ್ ಹೇಳ್ದಾ.

ಕುಸಲಮತೆ ಪರ್ದ್ಧಾನಿ ಮನಿಗ್ ಹೋಗೆ, ಪರ್ದ್ಧಾನಿ ಹಿಂಡ್ತಿ ಕಡೆ "ತಾನ ನಿನ್ ಅಣ್ಣಾ" ಅಂದ್ಹೇಳ್ದ. ಮಕ್ಳೀಗೆ ಹಣ್ಣು ಅಂಗಿಕೊಟ್ಟಾ. ಪರ್ದ್ಧಾನಿ ಹಿಂಡ್ತೆ ಅಪ್ನಮನೀಗ್ ಹೋಗ್ದೇ ದಣೀ[೬೭] ದಿನಾದ್ರಿಂದೆ ಇಂವಾ ತನ್ ಅಣ್ಣ ಹೌದೊ ಅಲ್ವೊ ಅಂದ್ ಗುರ್ತಾ ಮಾಡೂಕು ಆಗ್ಲೇಲಾ. ಅಂತೂ ಬಾಳ ಚೆಂದ್ ಕಾಂಬು ಇಂವ ತನ್ನ ಅಣ್ಣೇ ಎರ್ಬೇಕ್[೬೮] ಅಂದೆ ಮಾಡ್ಕಂತ. ತನ್ ಗಂಡ್ ಬಂದ್ ಕೂಡ್ಲೇ "ನಿಮ್ಮ ಬಾವ್ ಬಂದ್ಯಾ" ಅಂತ. ಪರ್ದ್ಧಾನಿಗೆ ಬಾಳ ದಿನ್ಕೆ ಬಾವ್ನ ನೋಡೆ ಸಂತೋಸಾಯ್ತ. ಹಿಂಗೇ ಮಾತಾಡ್ತೇ ಮಾತಾಡ್ತೇ ಕುಸಲಮತೆ "ನಿಮ್ಮ ರಾಜ್ನಮಗ್ಳ ಮಾತ್ರ ನೋಡ್ಬೇಕಾಗತ"[೬೯]. ಅಂದಾ. ಆಗೆ ಪರ್ದ್ಧಾನೆ "ಅವ್ರ ನೋಡೂದ್ ಬಾಳ್ ಕಟಿಣಾ" ಅಂದಾ. "ನೋಡು ಪರ್ಯತ್ನ ನಾ ಮಾಡ್ತಿ". ಅಂದೆ ಕುಸಲಮತೆ ಹೇಳ್ದಾ. ಮತ್ತೆ ಚೊಕ್[೭೦] ಎಣ್ಣೀ ದಬ್ಬೀ ತಕ್ಕಂಡ್ಹೋಗೆ ರಾಜ್ನ ಏಳುಪ್ರಗಿ ಮಾಳ್ಗಿ ಮಿಟ್ಟನ್[೭೧] ಮೆನೆ ಕುಳ್ತ ಕಂಡ್ರ. ಕುಸಲಮತೆ ಉಂದ್ ಹಾಡ ಹೇಳ್ದಾ. ಆ ಹಾಡ್ ಕೇಳೆ ಏಳುಪ್ರಗಿ ಮ್ಯನಿಂದ ರಾಜ್ನ ಎಯ್ಡೂ ಜನ ಹಿಣ್ಮಕ್ಳ ಕೆಳ್ಗೆ ನೋಡ್‌ದ್ರ. ಆಗೆ ಅವ್ರ ನಿಳ್ಳ ಎಣ್ಣೆ ದಬ್ಬೀಲೆ ಕಂಡ್ತ. ಅವ್ರ ರೂಪಾ ನೋಡೆ ದ್ಯೆವ್ರ ಮನಿಲ್ ಕಂಡ್ ಹಿಣ್ಣಿನ ಚಿತ್ರದ ಹಂಗೇ ಒಬ್ಳ ಕಂಡ್ತ. ಅಲ್ಲಿಂದೆ ತಿರ್ಗ[೭೨] ಬತ್ತರ. ಆ ಹಿಣ್ಮಕ್ಳ ಹಿಸ್ರ ಪದ್ಮ ರೇಕಿ ಸಸಿರೇಕಿ ಅಂದೆ ಪರ್ದ್ಧಾನಿಯಿಂದ ಕುಸಲಮತೆ ತಿಳ್ಕಂತ್ಯಾ[೭೩].

ಈ ಕಡಿಗೆ ಪದ್ಮ ರೇಕಿ, ಸಸಿರೇಕಿ ಕುಸಲಮತಿ ರೂಪಾ ನೋಡೆ ಅವ್ನಮ್ಯನೆ ಮನ್ಸ ಮಾಡ್ಕಂಡೆ ಅಪ್ನಕಡ ಹೇಳೆ ಅಂವ್ನಾ ರಾಜಸ್ತಾನ್ಕೆ ಕರಿಸ್ತರ. ರಾಜಾ ಕುಸ್ಲಮತಿ ಕರಿಸೆ ತಮ್ಮ ಮಕ್ಳ ದಾರಿ[೭೪] ಇರಿಬೇಕಂದೆ ಮನ್ಸ ಮಾಡ್‌ತ್ಯ. ಆಗೆ ಕುಸ್ಲಮತೆ "ನನ್ನ ಗೆಳಿಯಾ ಯುವರಾಜ್ನ ಸಲುವಾಗೆ ನಾನ ಇಲ್ಲಿತಂಕ ಬಂದದ್ದ. ನಿನ್ ಹಿರಿಮಗ್ಳ ಅಂವ್ಗೆ ಕುಟ್ ಮುದಿ ಮಾಡ್‌ದ್ರೆ, ನಿನ್ ಕಿರಿಮಗ್ಳ ನಾ ಮುದ್ಯಾಗುಕ್ ಅಡ್ಡಿಲ್ಲಾ. ಮುದ್ಲೆ ನನ್ ಗೆಳಿನ ಜೇಂವಾ ನಾ ಉಳಿಸ್‌ಬೇಕಾಗೀದ. ಇದ್ಕ ಉಪ್‌ದ್ರೆ[೭೫] ಮುಂದನ್ ಮಾತ" ಅಂದ್ ಹೇಳ್ದ. ರಾಜ "ಯುವರಾಜ ಇಲ್ಲೇಂವ"[೭೬] ಅಂದ್ ಕೇಳ್‌ತ್ಯ.

---

೬೧. ಬರುವಲ್ಲಿಯವರೆಗೆ ೬೨. ಕುಳಿತಾಗ ೬೩. ಇರಬಹುದು ೬೪. ಗೊತ್ತಾಗುವದು ೬೫. ಕಳಿಸಿ ಕೊಡಲಿಲ್ಲಾ ೬೬. ತಿನ್ನಲಿಕ್ಕೆ ೬೭. ಬಹಳ ೬೮. ಇರಬೇಕು ೬೯. ನೋಡಬೇಕಾಗಿತ್ತು ೭೦. ಸ್ವಚ್ಛ ೭೧. ಮೆಟ್ಟಿಲ ೭೨. ತಿರುಗಿ ೭೩. ತಿಳಿದುಕೊಳ್ಳುತ್ತಾನೆ ೭೪. ಧಾರೆ ೭೫. ಒಪ್ಪಿದರೆ ೭೬. ಎಲ್ಲಿದ್ದಾನೆ

ಕುಸಲಮತೆ ಯುವರಾಜ್ನ ಇಸಯ[೭೭] ಹೇಳೆ, ರಾಜ್ನು ಮತ್ತೆ ಅವ್ನ ಮಕ್ಳನ್ನು ಕಾಳ್ಕಮ್ ದೈವ್ರಮನಿಗೆ ಕರ್ಕಂಡ್ ಬತ್ಯಾ. ದೈವ್ರಮನಿಲೆ ಮದನ ಮೋವನ ನಿಟ್ ತಪ್ಪೀ[೭೮] ಬಿದ್ ಇರ್‌ತ್ಯಾ. ಕುಸ್ಲಮತೆ ಹ್ವೊದ್ ಮೈನೆ ಬಟ್ ಕೊಟ್ ಓಟಾನೂ[೭೯] ಮಾಡ್ದೇ ಚಿತ್ರದ ಹಿಣ್ಣನ ನಿಟ್ಟಿಲೇ ಬಿದ್ಕಂಡಿರ್‌ತ್ಯ[೮೦]. ಕುಸ್ಲಮತೆ ಹೇಳ್‌ತ್ಯಾ "ನಿಂಗ್ ಬೇಕಾದ ಹಿಣ್ ತಕ ಬಂದಿ ಉಂದ್ಸರಿಗ್[೮೧] ಕಣ್ ತಿಗ್ದ ನೋಡ" ಅಂದ್ ಹೇಳ್‌ತ್ಯಾ. ಮದನ ಮೋವನ ಕಣ್ ತಿಗ್ದ ನೋಡ್‌ತ್ಯಾ. ಚಿತ್ರದ ಹಿಣ್ಣ ಕಣ್ಮುಂದೇ ಎದ್ದದ್ದ ನೋಡೆ ದಿಗ್‌ನೆ[೮೨] ಇದ್‌ನಿಂತ್ಕಂತ್ಯಾ[೮೩]. ರಾಜಾ ತನ್ನ ರಾಜೀಕ್ ಬಂದೆ, ಮದನ ಮೋವನ್ಗೆ ಪದ್ಮ ರೇಕಿ, ಮತ್ತೆ ಕುಸ್ಲಮತಿಗೆ ಸಸಿರೇಕಿ ಮುದಿಮಾಡ್ ಕುಡ್‌ತ್ಯಾ. ಈ ಸುದ್ದೆ ಪ್ರತ್ವಿರಾಜ್ಗೂ ಹೆಂಗೂ ಹೆಂಗೊ[೮೪] ತಿಳಿತಿದ. ಅಂವ್ನ ಗುರುಗಳೂ ರಾಜ್ನ ಚಿಂತಿ ನೋಡೆ" ಮಗ್ನ ಕರಿಸ್ಕಂಬುಕ್ ಅಡ್ಡಿಲ್ಲಾ" ಅಂದ್ಹೇಳ್ತರ ರಾಜಾ ಮಗ್ನ ಕರಿಸ್‌ತ್ಯಾ.

ಪರ್ಧಾನಿ ಮಗಾ ಯುವರಾಜಾ ತಮ್ ರಾಜೀಕ್ ಬರುಕ್ ಬತ್ತರ. ಅವ್ರ ಬತ್ತೇ ಬತ್ತೇ[೮೫] ಉಂದ್ ದೊಡ್ ಆಲ್ದ ಮರ್ನ ಕೆಳ್ಗೆ ಮನ್ಗದ್ರ[೮೬]. ಮದನ ಮೋವನ್ಗೆ ನಿದ್ರೆ ಬೆತ್ತ[೮೭]. ಕುಸ್ಲಮತಿಗೆ ನಿದ್ರೆ ಬೈಳೇಲಾಗತ[೮೮]. ಆ ಮರ್ದ ಮೈನೆ ಎಯ್ಡ ಗಂಡಬೇರುಂಡ್ನ ಹಕ್ಕೆ ಕುಳ್ತದು. ಗಂಡ್ ಹಕ್ಕೆ ಹಿಣ್ ಹಕ್ಕಿಗ್ ಹೇಳ್ತಿದ. "ಏಗೆ ನಾವ್ ಕೊಳ್ತ[೮೯] ಮರ ಮುರ್ದಬಿದ್ ಮದನ ಮೋವನಾ ಸಾಯ್ವ. ಇದ್ರಿಂದ್ ಇಂವ ತಪ್ದ್ರೆ, ಮತ್ತುಂದ್ ಕಡ್ಗೆ ಕಡ್ಳ ತೆರೆ ಮರ್ಗ್[೯೦] ಸಾಯ್ವ. ಅದ್ರಲ್ಲೂ ತಪ್ದ್ರೆ ಇಂವ ಇಂವ್ನ ಹಿಂಡ್ತೀ ಕಡೇ ಸಾಯ್‌ತ್ಯ. ಈ ಮಾತ ಕೇಳ್ದವ್ರ ಯಾರಾದ್ರೂ ಈ ಮಾತ ಬೈರೆಯವ್ರಿಗೆ ಹೇಳ್ದ್ರೆ ಅವ್ರ ತಲೆ ಸಾವ್ರ ಹೋಳಾಗ್ಲೆ"[೯೩]. ಈ ಮಾತ ಕೇಳ್ದ ಕುಸಲಮತೆ ತಟ್‌ನೇ ಮರ ಮುರು[೯೪] ಸಪ್ಳ ಕೇಳ್ದ ಕೂಡ್ಲೇ ಮದನ ಮೋವನನ ಬೈರೇ ಕಡ್ಗೆ ತಕ್ಕಂಡ್ ಹೋದಾ. ಆಗೇ[೯೫] ಮರಾ ಮುರ್ದ ಬೆತ್ತ. ಅದ್ರ ದೊಡ್ ಸಪ್ಳಕೆ ಮದನಮೋವನಾ ಇದ್ ಕೂತ್ಕಂಡ್[೯೬]. ದೊಡ್ಡ್ ಗಂಡಾಂತರದಿಂದ ಪಾರಾದೆ ಅಂದ್ ಅಂವ್ಗೆ ಕುಶಿ[೯೭] ಆಯ್ತ.

ಮುಂದ್ ಅವ್ರ ಮುಂದೆ ಮುಂದೆ ಹ್ವೊದ್ರ ರಾತ್ರಿಯಾಯ್ತ. ಆಗೆ ಉಂದ್ ಸಮ್‌ದ್ರ ದಂಡಿ ಮೆನ್ ಮನ್ಗದ್ರ ಮದನ ಮೋವನ್ಗೆ ನಿದ್ರಬಿದ್ಹೋಯ್ತ. ಕುಸ್ಲಮತಿಗೆ ನಿದ್ರ ಬೆಳ್ಳೇ ಇಲ್ಲ. ಮದ್ದಿ ರಾತ್ರಿ ಸುಮಾರಿಗೆ ಕಡ್ಳ ಮರ್ಗುಕ್ ಹತ್ತತ. ಆಗೂ ರಾಜ್ನ ಮಗ್ನಾ ಅಲ್ಲಿಂದ್ ನಿಕ್ಕಾ[೯೮] ಹೋಗೆ ಪಾರ್ ಮಾಡ್ದ. ಅಲ್ಲಿಂದ್ ಮುಂದವ್ರ ಮುದ್ಲ ಪರ್ಧಾನಿ ಮನಿಗ್ ಹ್ವೊದ್ರ.

೭೭. ವಿಷಯ ೭೮. ಸ್ಮೃತಿ ತಪ್ಪಿ ೭೯. ಊಟವನ್ನು ೮೦. ಬಿದ್ದುಕೊಂಡಿರುತ್ತಾನೆ ೮೧. ಒಂದು ಸಲ ೮೨. ತಕ್ಷಣ ೮೩. ಎದ್ದು ನಿಂತುಕೊಳ್ಳುತ್ತಾನೆ ೮೪. ಹೇಗೊ ೮೫. ಬರುತ್ತ ೮೬. ಮಲಗಿದರು ೮೭. ಬಿದ್ದಿತು ೮೮. ಬೀಳಲಿಲ್ಲವಾಗಿತ್ತು ೮೯. ಕುಳಿತ ೯೦. ಉಕ್ಕಿ ಬಂದು ೯೧. ಸಾಯುತ್ತಾನೆ ೯೨. ಬೇರೆಯವರಿಗೆ ೯೩. ತುಂಡಾಗಲಿ ೯೪. ಮುರಿಯುವ ೯೫. ಆವಾಗಲೇ ೯೬. ಕುಳಿತುಕೊಂಡ ೯೭. ಸಂತೋಷ ೯೮. ಎತ್ತಿಕೊಂಡುಹೋಗಿ

ಈ ಕಡ್ಗೆ ಕುಸ್ಲಮತಿ ಮುದ್ಲನ ಹಿಂಡ್ತೆ ತನ್ನ ಗಂಡಾ ತಮ್ಮನಿಗೆ ಬಂದ್ ಮುಟ್ದ್ರೆ ತನ್ ಬಲಗೈ ಕಡಕುಡ್ತಿ[೯೯] ಅಂದೆ ಹರ್ಕಿ[೧೦೦] ಹುತ್ತತ[೧೦೧]. ಗಂಡ್

ಬಂದದ್ ನೋಡೆ ಅದ್ಕೆ ಬಾಳ ಸಂತೋಸಾಯ್ತು. ತನ್ನ ಹೇಳ್ಕಿಯಂತೆ ತನ್ನ ಬಲಗೈ ಕಡ್ಕಂಬುವಾಗೆ ದೆವ್ರೇ ಬಂದ್ ಅಡ್‌ಗಟ್ಟ. ಮತ್ತೆ ಹೇಳ್ತ. "ಮಗ್ಳೆ ನಿನ್ ಬಗ್‌ತಿಗ್[೧೦೨] ನಾ ಮಿಚ್ಚೆ. ನೀನ ಸತ್ ಪರಾಣಿ[೧೦೩] ಕಿಟ್‌ದ್ರೂ[೧೦೪] ಅವ ಜೇಂವಾಗ್ಲೆ[೧೦೫]. ಬತ್ ಮರ್ನ[೧೦೬] ಮುಟ್‌ದ್ರೂ ತೆಗ್ರಲೆ" ಅಂದೆ ವರಾ ಕೊಟ್ತ.

ಈ ಕಡಿಗೆ ಯುವರಾಜ ತನ್ ಮನಿಗೆ ಬಂದಾ. ಬರ್ವಾಗೆ ಕುಸಲಮತಿ ಅಂವ್ನ ಸಂತೀಗೇ ಬಂದಾ. ಮದ್ನಮೋವನನ ಹಿರಿ ಹಿಂಡ್ತೇ ಗಂಡ್ ಬಂದ್ಯಾ ಅಂದೆ ಹೋಳ್ಗಿ ಮಾಡ್ತ. ಗಂಡ್ಗೂ ಬಡಸ್ತ. ಗಂಡ ಊರ್ ಬಿಟ್ ಹ್ವೊದಾಗೆ ಮದನಮೋವನ ಹಿಂಡ್ತೆ ಕುದ್ರಿ ಕಾಸ್‌ಗಾರ್ನ ಇಕ್ಕಂಡತ[೧೦೭]. ಅದ್ಕಾಗೆ ಅಂವ್ಗೂ ಗಂಡ್ಗೆ ಗುತ್ತೆಲ್ದೇ[೧೦೮] ಹೋಳ್ಗಿ ತಕ್ಕೊಂಡ್ಹೋಯ್ತು. ದಿನಾ ಬರುಕಿಂತಾ ಇಂದ್ ತನ್ನಾದಲೆ ಬರುಕೆ ತಡಾ ಆದ್ಕೆ ಕಾಸ್‌ಗಾರಾ ಅದ್ಕೆ ಬೊಯ್ದ. ತೊಳ್ದಾ. ಆಗೆ "ತನ್ನ ಗಂಡ್ ಊರಿಗ್ ಬಂದದ್ಕೇ ಇಂದ್ ತಡಾ ಆಯ್ತು. ನಂದ ತಪ್ಪಾಯ್ತು. ಇನ್ ಮುಂದೆ ತಡಾ ಮಾಡುದಲ. ನಿನ್ ಮ್ಯೆನೇ ನಂಗೆ ಕಕ್‌ರ್ತೆ[೧೦೯]. ಅಂದ್ ಹೇಳೆ ಮನಿಗ್ ಬಂತ. ಬರ್ವಾಗೇ ತಂಗೆ ಅಡ್ಡಿಯಾಗ್ ನೆಂತ್‌ಗಂಡನ್ನೂ ಕುಂದ್ ಹಾಕ್ಬೇಕ್ ಅಂಬು ಯೋಚ್ನೆ ಮಾಡ್ಕಂಡೇ ಬಂತ.

ಇಲ್ ಮನಿಲೆ[೧೧೦] ಮದನ ಮೋವನಾ ಮಂಚ್ದ ಮೆನೆ ಮನಿಕಂಡದ. ಕುಸಲಮತೆ ಅಂವ್ಗೆ ನಿದ್ರ ಬೆದ್ದಾಗೆ ಮಂಚ್ದ ಅಡ್ಗೇ[೧೧೧] ಹುಕ್ಕಂಡ್ ಕುಳ್ತಕಂತ್ಯಾ. ತ್ವೊಡಿ ಹುತ್[೧೧೨] ಆದ್‌ಮೆನೆ ಮದನ ಮೋವನ ಹಿರಿ ಹಿಂಡ್ತೆ ಬತ್ತಿದ. ಬಂದವ್ಳೇ ತಡಾ ಮಾಡ್ದೇ ಮಂಚ್‌ದ ಮೆನ್ ಮನ್ಗದ್ ಗಂಡ್ನ ತಲಿ ಕಡ್ದೇ ಬಿಡ್ತಿದ. ಕುಸಲ್ಮತೆ ತಾನ್ ಮಾಡ್ದ ಕೊಲಿ ನೋಡ್ದ ಅಂದ್ಹೇಳೆ ಅದಕೂಡ್ಳೇ ಬೊಬ್ಬಿ ಹಾಕೆ "ಕುಸಲಮತೆ ನನ್ ಗಂಡನ ಕುಂದೆ ನನ್ಮೆನೆ ಬಲತ್ಕಾರಾ ಮಾಡ್ದಾ" ಅಂದ್ ಹೇಳ್ತಿದ. ರಾಜಾ ಬೊಬ್ಬಿ ಕೇಳೆ ಓಡಬತ್ಯಾ. ಕುಸಲಮತೆ ದಕ್ಕಾಗೆ ನಿಂತ್ಕಂತ್ಯಾ. ರಾಜಾ "ಅಪ್ರೂಪ್‌ಕೆ ಬಂದ್ ಮಗ್ನಕಡೆ ಬಾಯ್‌ತುಂಬ್ ಮಾತಾಡುಕೂ ಆಗ್ದೇ ಹೋಯ್ತೆ". ಅಂದ್ ದಡ್‌ನೇ ನೆಲ್ಕ ಬೀಳ್‌ತ್ಯಾ. ಯುವ್‌ರಾಜ್ನ ಹಿಂಡ್ತೆ ನೆಟ್‌ಗೆ ಮತ್ತೆ ಕುದ್ರಿ ಕಾಸ್ಗಾರಾದಲೆ ಹೋತಿದ. ಆಗೆ ಕಸಲಮತಿಗೆ ಉಂದ್ ಯೋಚ್ನೆ ಬತ್ತಿದ. ತನ್ನ ಹಿಂಡ್ತೆ ಹೆಣ ಕಿಟ್‌ದ್ರೂ ಹೆಣ ಜೇಂವಾಗುದ ಅಂವ್ಗೆ ಗುತ್ತೀದತ. ರಾಜಕುಮಾರ ದೇಹ ಉಂದ್ ಪಿಟ್ಗಿಲ್[೧೧೩] ಹಾಕ್‌ತ್ಯ. ಅದ್ರಮೆನೆ ಪರ್ಮಳ್ದ ಎಣ್ಣಿ ಉದ್‌ತ್ಯ[೧೧೪].

---

೯೯. ಕುಡಿದುಕೊಡುತ್ತೇನೆ ೧೦೦. ಹರಿಕೆ ೧೦೧. ಹೊತ್ತಿದ್ದಳು ೧೦೨. ಭಕ್ತಿಗೆ ೧೦೩. ಪ್ರಾಣಿ ೧೦೪. ಮುಟ್ಟಿದರೂ ೧೦೫. ಜೀವವಾಗಲಿ ೧೦೬. ಒಣಮರವನ್ನು ೧೦೭. ಇಟ್ಟುಕೊಂಡಿದ್ದಳು, ಪ್ರೀತಿಸುತ್ತಿದ್ದಳು ೧೦೮. ಗೊತ್ತಿಲ್ಲದೇ ೧೦೯. ಪ್ರೀತಿ ೧೧೦. ಇಲ್ಲಿ ಮನೆಯಲ್ಲಿ ೧೧೧. ಬುಡಕ್ಕೆ ೧೧೨. ಹೊತ್ತು ೧೧೩. ಪೆಟ್ಟಿಗೆಯಲ್ಲಿ ೧೧೪. ಪೂಸುತ್ತಾನೆ

ಮತ್ತೆ ಅಲ್ಲಿಗೆ ತನ್ ಹಿಂಡ್ತಿ ಕರಿತ್ಯಾ ಕರ್ದೆ ಅದ್ಕೆ ಹೇಳತ್ಯಾ ಆ ಪಿಟ್ಗಿಲೆ ನನ್ನ ಜೇಂವದಟ್ಟೇ ಪ್ರೀತಿ ಉಸ್ತು ಉಂದ್ ಇಕ್ಕಿ[೧೧೫] ನೀನ್ ಅಲ್ಲಿಗ್ ಹೋಗೆ ಕಣ್‌ಮುಚ್ಚೆ ಆ ಪಿಟ್ಗಿ ಕದಾ ತಿಗ್ದೆ ಅದ್ರ ತಿಕ್ಕಾಕಿ[೧೧೬] ಬರ್ಬೇಕ ಅಂತ್ಯಾ. ಅಂವ್ನ ಹಿಂಡ್ತೆ, ಕಣ್‌ಮುಚ್ಚೆ ಪಿಟ್ಗಿ ತಿಗಿತಿದ. ಪಿಟ್ಗಿ ಒಳ್ಗೆ ಕೈ ಹಾಕ್ದ ಅಕ್ಸಣ– ದಿಗ್‌ನೇ ರಾಜಕುಮಾರ ಇದ್ ನಿಂತ್ ಬಿಡತ್ಯಾ. ಕುಸಲಮತಿ ಹಿಂಡ್ತೆ ಹಿದ್ರ[೧೧೭] ಕಂಗಾಲಾಗೆ ಕೂಗ್ ಕಣ್ ತಿಗ್ದ ನೋಡ್ತಿದ – ರಾಜ್‌ಕುಮಾರಾ. ಕುಸಲ್ಮತೆ ಸಂತೋಸದಿಂದೆ ರಾಜಕುಮಾರ್ನ ನೋಡ್ದಾ. ರಾಜ್ನೂ ಇದ್ ಕಣ್ ತಿಗ್ದ ನೋಡ್‌ತ್ಯಾ. ರಾಜ್‌ಕುಮಾರಾ ಜೇಂವಂತೇ ಏಂವ[೧೧೮]. ಇದೆಲ್ಲಾ ಏನ? ಎಲ್ಲಾ ಕತಿ ತಮ್ಗೆ ಹೆಳ್ಬೇಕಂದೆ[೧೧೯] ಕುಸಲಮತಿಗೆ ಕೇಳ್ತರ. ಆಗೆ ಕುಸಲ್ಮತೆ, "ನಾ ಎಲ್ಲಾ ಕತಿ ಹೇಳ್ದ್ರೆ ನಾನ ನಿಮ್ ಕೈಗೆ ಸೆಕ್ಕೆ" ಅಂದ್ ಹೇಳ್‌ತ್ಯಾ. ಆದ್ರೂ ಅವ್ರ ಮತ್ತೂ ಮತ್ತೂ ಒತ್ತಾಯಾ ಮಾಡ್ದ್ರ. ಅವ್ರ ಒತ್ತಾಯ ತಡೂಕಾಗ್ದೇ[೧೨೦] ಅಂವ ಗಂಡಬೇರುಂಡ ಹಕ್ಕೆ ಹೇಳ್ದ ಕತಿಯಾ ಅವ್ರ ಮುಂದೆ ಹೇಳ್ತ್ಯ, ಮತ್ತೆ ಸಾವ್ರ ಹೋಳಾಗೆ ಬೀಳ್‌ತ್ಯ. ಆಗೆ ರಾಜಕುಮಾರಾ "ನನ್ ಜೇಂವಾ ಬಚಾವ್[೧೨೧] ಮಾಡ್ದಂವ ಸಾವ್ರಾ ಹೋಳಾಗ್ ಹ್ವೊದ್ನಲಾ ಅಯ್ಯೋ" ಅಂದೆ ನೆಲ್ಕ ಬೀಳ್‌ತ್ಯಾ. ರಾಜ್ನ ತಲಿಮೆನೆ ಬ್ವೊನ[೧೨೨] ಹರ್ದ ಬೆದ್ದಂಗಾತೀದ[೧೨೩] ಆಗೆ ಕುಸಲಮತಿ ಹಿಂಡ್ತೆ ಗಂಡ್ನ ಸಾವ್ರ ಹೋಳೂ ಉಂದ್ ಕಡ್ಗೆ ಕೂಡ್ಸೆ ತನ್ ಕೈಲೆ ಕಿಟ್ತ[೧೨೪]. ಕುಸಲಮತೆ ನಿದ್ರಿಲಿಂದೆದ್ದವ್ನ ಹಂಗೆ ಇದ್ ಕುಳ್ತಕಂಡ. ಕಡಿಕೆ ಮದನ ಮೋವನ, ನೆಟ್‌ಗೆ ತನ್ನ ಹಿರಿ ಹಿಂಡ್ತೀನೂ ಕುದ್ರಿ ಕಾಸ್ಗಾರ್ನೂ ಸಿಗ್ದೆ ತೊಯ್ಣ ಕಟ್ಟೆ[೧೨೫] ತನ್ನ ಮತ್ತುಂದ್ ಹಿಂಡ್ತೆ ಪದ್ಮ ರೇಕಿ ಕರಿಸೆ, ಎಲ್ಲವ್ರೂ ಆ ತೊಯ್ಣ ಒಳಗಿಂದೇ ಹ್ವೊದ್ರ ಕಡಿಕೆ ಎಲ್ಲವ್ರೂ ಸುಕ ಸಂತೋಸ್‌ದಲೆ ಒಳ್ದ್ರ.

---

೧೧೫. ಇಟ್ಟಿದ್ದೇನೆ ೧೧೬. ತೆಗೆದುಕೊಂಡು ೧೧೭. ಹೆದರಿ ೧೧೮. ಇದ್ದಾನೆ ೧೧೯. ಹೇಳಬೇಕೆಂದು ೧೨೦. ತಡೆಯಲಿಕ್ಕಾಗದೇ ೧೨೧. ಬದುಕಿಸಿದವ ೧೨೨. ಆಕಾಶ ೧೨೩. ಬಿದ್ದ ಹಾಗಾಗುತ್ತದೆ ೧೨೪. ಮುಟ್ಟಿದಳು ೧೨೫. ತೋರಣ ಕಟ್ಟಿ

೪. ಈರಣ್ಣ

ಉಂದ್[೧] ಊರಲ್ಲೆ[೨] ಉಂದ್ ರಾಜಯೀದದ್ದ. ಅಂವ್ಗೆ ಮಕ್ಳಿಲ್ಲ. ಆಗ ರಾಜ ತಿರ್ಪತಿಗೆ ಹರ್ಕಿ ಹೇಳ್ಕಂಡ. ಹಿಂಡ್ತಿ ಸಂಗ್ತೀಗೆ[೩] ತಿರ್‌ಪತಿ ಯಾತ್ರಿಗ್ ಹ್ವೊದಾ[೪]. ಹೋಗ್ವಾಗೆ ಪರ್ದಾನಿ ಹತ್ರ ತನ್ನ ಪ್ರಜೆಗಳ ಮಕ್ಳಂತೆ ನೋಡ್ಕಂಬುಕ್ ಹೇಳ್ದ, ತಿರ್ಪತಿ ಯಾತ್ರಿಗ್ ಗಂಡಾಹಿಂಡ್ತಿ ಹ್ವೊದ್ರ. ಕಾಲ್ನಿಡ್ಗೀಲೇ ಅವ್ರ, ನಿಡೀತೇ[೫] ನಿಡೀತೇ ಆರ್ ತಿಂಗ್ಳಲೆ ತಿರ್ಪತಿಗೆ ಬಂದ್ ಮುಟ್‌ದ್ರ. ತಿರ್ಪತಿ ತಿಮ್ಮಪ್ನ ದರ್ಸನ ಮಾಡ್ಕಂಡ್ರ. ದೇವ್ರಿಗ್ ಕೈಮೊಗದ್ರ. ದೈವ್ರ ಮನಿ ಮುಂದೆ ಉಂದ್ ಅಸ್ವತ್ ಕಟ್ಟೆ ಈದತ[೬]. ರಾಜ್ನ ಹಿಂಡ್ತಿಗೆ ಗಿರಚರ[೭] ಹಿಡ್ದೆ, ಆ ಇಳ್ಳಿ[೮] ಮರ್ದ ಮ್ಯನೆ ಏಳ್ ಆನೆ ಮೇದಂಗ್[೯] ಅದ್ಕೆ[೧೦] ಕಾಣ್ತತ. ಆ ಸುದ್ದಿ ಆಗೆ ಅದ ಗಂಡ್ನಕೋಡೂ ಹ್ಯೆಳ್ಳೇಲ. ತಿರ್ಪತಿ ಯಾತ್ರಿ ಮಾಡ್ಕಂಡೆ ಊರಿಗ್ ಬಂದ್ರ. ಊರಿಗ್ ಬರೂಕೂ[೧೧] ಆರ್ ತಿಂಗ್ಳ ಹತ್ತ್ತ. ಮನೀಗ್ ಬಂದೆ ಮಾಮ್ಸಿ[೧೨] ಮಾಡದ್ರ. ಸಂಬಂದಿಕ್ರಿಗೆ[೧೩], ನೆರಿಹೊರಿಯವ್ರೀಗೆಲ್ಲಾ ಓಟಾ[೧೪] ಹಾಕೆ, ಎಲ್ಲಾ ಕೆಲ್ಸ ಆದ್ ಮ್ಯನೆ ಗಂಡನ ಕೋಡೆ[೧೫] ಹಿಂಡ್ತೆ, "ಓ, ಅಲ್ ನೋಡಿ, ನಾನ ಅಸ್ವತ್ ಮರ್ದ ಮ್ಯನೆ ಏಳ್ ಆನೆ ಮೇವ್ದಕಂಡೆ" ಅಂದ್ ಹೇಳ್ತ. ಅದ್ರ ಮಾತ ರಾಜ್ಗೆ ಇಚಿತ್ರ[೧೬] ಆಗ್ ಕಂಡ್ತ. ಅಂವ ಹಿಂಡ್ತಿಗ್ "ಈ ಹುಚ್ ಮಾತ ನಂಕೋಡ್[೧೭] ಹೇಳದ್ದೇ ಆಯ್ತು, ಮತ್ತ್ಯರ್ ಮುಂದೂ ಹ್ಯೆಳ್ಬ್ಯಡಾ" ಅಂದ್ ಹೇಳ್ದ. ಇದ ಪ್ರಜೆಗಳ ಮುಂದೂ ಇದೇ ಮಾತ್ ಹೇಳ್ತ. ಆಗ ರಾಜ್ಗೆ ಸಿಟ್ ಬಂದೆ, "ನಿನ್ ಮಾತ ಕರಿಯಾದ್ರೆ[೧೮] ನನ್ ತಲಿ ನಾನ ಕಡ್ತಂತಿ[೧೯] ಸುಳ್ಳಾದ್ರೆ ನಿನ್ ತಲಿ ಕಡೀತಿ" ಅಂದ.

ರಾಜನ ಪ್ರಜೆಗಳೂ ಅಲ್ಲಿಗ್ ಹೋಗೆ ನೋಡದ್ರ ಅವ್ರೂ ಇಳ್ಳೀ ಮರದ ಮ್ಯನೆ ಏಳ್ ಆನೆ ಮೀಯೂದ್ ಕಂಡ್ರ. ಆಗ ಅವ್ರ ಉಡತಿ[೨೦]ಯ ತಲೆ ಹ್ವೊದ್ರೂ ಅಡ್ಡಿಲ್ಲ, ರಾಜ್ನ ತಲೆ ಹೋಗೂಕಾಗಾ[೨೧] ಅಂದ್ ಹೇಳೆ, ರಾಜ್ನಕೋಡ್ ಬಂದೆ "ಏಳ್ ಆನೆ ಇಳ್ಳೀ ಮರ್ದ ಮ್ಯನೆ ಮೇಯೂದಲ" ಅಂದೆ ಸುಳ್ ಹೇಳ್ದ್ರ. ತ್ವೊಡಿ[೨೨] ಜನ ಅಲ್ಲೆ ಹದ್ ಮೇಯ್ತುವ ಅಂದ್ ಹೇಳ್ದ್ರ. ಮತ ತ್ವೊಡಿ ಜನ ಗುಬ್ಬಿ ಅಂದ್ರ; ಮತ್ ತ್ವೊಡಿ ಜನ ಪಾರಿವಾಳ[೨೩] ಮೇಯ್ತುವ ಅಂದ್ರ. ಆಗೆ ರಾಜ ಪಕ್ಷಿಗೊಳ್ ಮರ್ದ ಮ್ಯನೆ ಮೇಯ್‌ಬವ್ದ. ಆದ್ರೆ ಪಸುಗೋಳ್ ಮೇಯೂಕ್ ಸಾದೀಯಿಲ್ಲ[೨೪]. ನನ್ನ ಹಿಂಡ್ತೆ ಸುಳ್ ಹೇಳ್ತ ಅಂದ್ ಅದ್ರ ತಲಿ ಹುಡಕ್ ಕಳಿಸ್ತ್ರಾ.

---

೧. ಒಂದು ೨. ಊರಲ್ಲಿ ೩. ಸಂಗಡ ೪. ಹೋದನು ೫. ನಡೆಯುತ್ತ ೬. ಇತ್ತು ೭. ಗ್ರಹಾಚಾರ ೮. ಅಶ್ವತ್ಥ ೯. ಮೇದಹಾಗೆ ೧೦. ಆಕೆಗೆ ೧೧. ಬರಲಿಕ್ಕೂ ೧೨. ಹರಿಸೇವೆ ೧೩. ಸಂಬಂಧಿಗಳಿಗೆ ೧೪. ಊಟ ೧೫. ಹತ್ತಿರ ೧೬. ವಿಚಿತ್ರ ೧೭. ನನ್ನ ಹತ್ತಿರ ೧೮. ಸತ್ಯವಾದರೆ ೧೯. ಕಡಿದುಕೊಳ್ಳುತ್ತೇನೆ ೨೦. ಒಡೆತಿ ೨೧. ಹೋಗಬಾರದು ೨೨. ಸ್ವಲ್ಪ ೨೩. ಪಾರಿವಾಳ ೨೪. ಸಾಧ್ಯವಿಲ್ಲ

ಸೇವಕ್ರ ತಲಿಕಡೂಕ್ ಹೋತರ[೨೫] ಅದ ತಲಿ ಕಡಿಸ್ಕಂಬೂಕೆ ಹಣ್ಕಿತ್ತಿದ[೨೬]. ಸೇವಕ್ರ ಕಡ್ಗ ತಲೀ ಕಡೂಕ್ ತೆಗ್ದಾಗೆ, ಎಯ್ಡು[೨೭] ನಿಳ್ಳಾಗ್[೨೮] ಕಾಣ್ತೀದ. ಅವ್ರ ತಲಿ ಕಡೂಕ್ ಮತ್ತೆ ಮತ್ತೆ ಪ್ರಯತ್ನ ಮಾಡದ್ರೂ, ಕಡೂಕ್ ಆಗೂದಲ್[೨೯]. ಅವ್ರಿಗೆ ಬಾಳ್ ತ್ರಾಸಾಗೂಕ್[೩೦] ಹತ್ತತ. ಆಗೆ ಅವ್ರ ಅದ್ರ ತಲಿ ಕಡೀದೇ ಹಾಳ್ ಬಾವೀಲ್ ತುಂಬೆ, ರಾಜ್ನಕೋಡ್ ಹೋಗೆ, ತಲಿ ಕಡ್ದ ಬಂದು, ಅಂದ್ ಸುಳ್ ಹೇಳದ್ರ. ಇಲ್ಲೆ ರಾಜ್ನ ಹಿಂಡ್ತೆ "ತಾನ ಸುಳ್ ಹ್ಯೇಳೀಲಾ, ಇದ್ದ ಸಂಗ್ತಿ ಇದ್ದಂಗ್ ಹೇಳ್ದೆ" ಅಂದೆ ತೀಡ್ತೇ[೩೧] ಹಗ್ಲೂ ರಾತ್ರಿ ಅಲ್ಲೆ ಕಾಲ ಕಳಿತ. ಆಗೆ ಅದ್ಕೆ ಏಳ್ ತಿಂಗ್ಳ ಬುಸ್ರ[೩೨]. ಬಾವೀಲೇ ಅದ್ಕೆ ಒಂಬತ್ ತಿಂಗ್ಳ ತುಂಬ್ತ. ಆಗೆ ಒಕ್ಲ ಪಟೀಲಾ ಕುದ್ರಿ ಹತ್ಕಂಡೆ ಬ್ಯೆಟೀಗ್ ಹೋಗದ. ಬ್ಯೆಟೀಗ್ ತಿರಗ್ವಾಗೆ ಬಾವೀಲೆ ದಿನೆ[೩೩] ಕೇಳ್ತ. ಬೋತದ[೩೪] ಮಾತಂದ್ ಹೇಳೆ ಹಿದ್ರದಾ. ಆದ್ರೂ ದ್ಯೆರ್ಯ ಮಾಡ್ಕಂಡ್ ಬಾವೀಕೋಡ್ ಹ್ವೊದಾ. ಬಾವೀಲ್ ನೋಡ್ದ್ರೆ ಹಿಣ್ ಹಿಂಗ್ಸ[೩೫]. "ಯಾರವ್ವಾ ನೀನ" ಅಂದಾ ಪಟೀಲಾ. ಆಗೆ ಅದ "ನಾನ ರಾಜ್ನ ಹಿಂಡ್ತೆ"[೩೬] ಅಂತ. ಆಗೆ ಇಂವ "ಇದ[೩೭] ದೊಡ್ ಮಾತ್ ಆಡ್ತೀದಲಾ[೩೮]. ರಾಜ್ನ ಹಿಂಡ್ತಿಲ್ಲೆ? ಈ ಹಾಳ್ ಬಾವೀಗ್ ಬೆದ್ದವ್ಳಿಲ್ಲೆ?"[೩೯] ಆದ್ರೂ ಉಂದ್ ಹಿಣ್ ಜೀಂವಾ[೪೦] ಬದಕಬೇಕಂದೆ[೪೧], ತನ್ನ ರುಮಾಲಾ ಬಿಡ್ಸೆ ಬಾವಿಗೆ ಬೆಟ್ಟಾ[೪೨] ಅದ ರುಮಾಲಾ ಹಿಂಡ್ಕಂಡೆ ಹಗೂರ್ಕೆ[೪೩] ಮ್ಯೆನ್ ಬಂತ. ಮ್ಯೆನ್ ಬಂದ್ರೆ ಕಣ್ ಕುಕ್ಕೂ ಹಂಗೆ ಅದ್ರ ಮಿಯ್ ಬಣ್ಣ. ತಿಂಗ್ಳ ಸ್ವೊಮೀ ಹಂಗೆ ಹುಳಿತೀದ[೪೪] ಅದ್ರ ರೂಪಾ ನೋಡೇ, ಅದ ರಾಣಿಯೇ ಅಂದ್ ತಿಳ್ಕಂಡ. ಅದ್ರ ದುಕ್ಕದ[೪೫] ಕಾರಣ ಕೇಳ್ದ. ಆಗೆ ಅದ ತನ್ನ ಕತಿಯೆಲ್ಲಾ ಅಂವ್ಗೆ ಹೇಳ್ತ. ಆಗೆ ಒಕ್ಲ ಪಟೀಲ, ಅದ್ರ ತನ್ ಮನೀಗ್ ಕರ್ಕಾ[೪೬] ಬಂದಾ. ಅದ್ರ ಕೆಲ್ಸೆಕೆ ಎಯ್ಡು ಜನಾ ನೇಮಸ್ದಾ. ಅದ್ರ ಮನೀಗ್ ಕರ್ಕಾಬಂದ ಇಂಟ್ನೇ[೪೭] ದಿನ್ಕೆ ಅದ ಬೆಸ್ನಾಯ್ತು[೪೮]. ಗಂಡ್ ಮಗ್ನ ಹೆತ್ತತ. ಅದ್ಕೆ ಸರಿಯಾಗ್ ಆರ್ಯೆಕಿ ಮಾಡದ್ರ. ಮಗ ದೊಡ್ಡವ್ನಾದ. ಅಂವ್ಗ ಈರಣ್ಣ ಅಂದ್ ಹಿಸ್ರ ಹಾಕದ್ರು. ಪಟೀಲ್ಗೆ ಎಯ್ಡು ಜನ ಮಕ್ಳ. ಅವ್ರ ಅಪ್ಪಗೆ ಹಡ್ಗ[೪೯] ಕರೀದಿ ಮಾಡೂಕ್ ಹೇಳದ್ರ. ಅಪ್ಪ ಹಡ್ಗ ಕರೀದಿ ಮಾಡ್ದ, ಹನ್ನೆಯ್ಡು ಸಾವ್ರ ಕುಟ್ಟೆ ಹಡಗ್ನಲ್ಲೆ ಕತ್ತದ ಪಲ್ಲಿ[೫೦], ಕಾಯಿ, ಅಡಕಿ ತುಂಬ್‌ದ್ರ. ರಾಣೀ ಮಗ ಈರಣ್ಣ ತಂಗೂ ಉಂದ್ ದೋಣೆ ಬೇಕಂದ. "ನೀನ್ ಸೆಣ್ಣವ[೫೧] ಅಂದ ಪಟೀಲಾ. ಹುಡ್ಗ ಹಠ ಹಿಡಿದ. ಆಗೆ ನೂರ್ ರುಪಾಯ್ಗೆ ಉಂದ್ ದೋಣಿ ಕರೀದಿ ಮಾಡ್ದ. ಕಾಯಿ, ಅಡ್ಕೆ ಎಲ್ಲಾ ಸೇರೆ, ಅಯ್ವತ್ ರೂಪಾಯ್ ಸಾಮಾನ್ ತುಂಬ್ದ. ಅವ್ನೆ ದೋಣಿ, ಸಾಮಾನ್ ನೋಡೆ ಪಟೀಲ್ನ ಮಕ್ಳಿಗೆ ನಗ್ಬಂತ. "ಇದ್ರಲಿಂದೆ ಇಂವ ಏನ್ ಕಿಸಿವೆ" ಅಂದ್ ನಗಿಯಾಡ್ದ್ರ.

---

೨೫. ಹೋಗುತ್ತಾರೆ ೨೬. ಬಾಗುತ್ತಾಳೆ ೨೭. ಎರಡು ೨೮. ನೆರಳಾಗಿ ೨೯. ಆಗುವದಿಲ್ಲ ೩೦. ಕಷ್ಟವಾಗಲಿಕ್ಕೆ ೩೧. ಅಳುತ್ತ ೩೨. ಬಸಿರು ೩೩. ಧ್ವನಿ ೩೪. ಭೂತದ ೩೫. ಹೆಣ್ಣು ಹೆಂಗಸು ೩೬. ಹೆಂಡತಿ ೩೭. ಇವಳು ೩೮. ಆಡುತ್ತಾಳಲ್ಲಾ ೩೯. ಬಿದ್ದವಳೆಲ್ಲಿ? ೪೦. ಜೀವಾ ೪೧. ಬದುಕಿಸಬೇಕೆಂದು ೪೨. ಇಳಿ ಬಿಟ್ಟನು ೪೩. ಸಾವಕಾಶ ೪೪. ಹೊಳೆಯುತ್ತಾಳೆ ೪೫. ದುಃಖದ ೪೬. ಕರೆದುಕೊಂಡು ೪೭. ಎಂಟನೇ ೪೮. ಬಾಳಂತಿಯಾದಳು ೪೯. ಹಡಗು ೫೦. ಕತ್ತದ ಹುರಿಪಿಂಡಿ ೫೧. ಸಣ್ಣವ

ಒಕ್ಕಲ ಪಟೇಲ್ನ ಮಕ್ಳ ಹಿಂಡ್ರ ತಮ್ ಗಂಡ್ದೀರ್ ಕೋಡೆ ಜಿರಿ ಸೇರಿ[೫೨] ಕಣ[೫೩] ತರೂಕ್ ಹೇಳ್ದ್ರ. ಒಕ್ಲ ಪಟೇಲ್ನ ಮಕ್ಳ ಹಡ್ಗ ಉಂದ್ ರಾಜಸ್ತಾನ್ಕೆ ಹೋಯ್ತ. ಅಲ್ಲೆ ಸಾಮಾನೆಲ್ಲ ಸೋವಿ ಅವ್ರೀಗೆ ಬಾಳ್ ಲುಕ್ಸಾನಾಯ್ತ. ಅವ್ರ ತಕಂಡ್ ಹ್ವೋದ ಸಾಮಾನ ಅವ್ರೀಗೆ ಉಂಬೂಕ್ ಮಾತ್ರ ಸೈಕಾಯ್ತ[೫೪]. ರಾಣಿ ಹುಡ್ಗ ಈರಣ್ಣನ ದೋಣಿ ದೋರದ[೫೫] ಇನ್ನುಂದ್ ರಾಜಸ್ತಾನ್ಕೆ ಹೋಗೆ ಮುಟ್ತ. ಅಲ್ಲೆ ಉಂದ್ ದೇವಸ್ತಾನ ಮುರ್ದ್ ಬಿದ್ದಿತ[೫೬]. ಅದ್ರ ಕಟ್ಟೂಕ್ ಬೇಕಂದ್ರೆ ಬಳ್ಳೀನೇ ಇಲ್ಲಾಗತ[೫೭]. ಇಂವ್ನ ಕತ್ತದ ಪಲ್ಲಿಗೆ ಮತ್ತ ತಿಂಗ್ನ ಕಾಯ್ಗೆ ಹೇಳ್ದ್‌ಟ್ ದುಡ್ಡ. ಇಂವ ಉಂದ್ ಕತ್ತದ ಪಲ್ಲೀಗೆ ಉಂದ್ ಸೆರೆ[೫೮] ಪಾವ್ನ[೫೯], ಉಂದ್ ಕಾಯ್ಗೆ ಉಂದೂವರಿ ಸಿದ್ದೆ ಪಾವ್ನ, ಉಂದ್ ಸಿದ್ ಅಡ್ಕಿಗೆ ಉಂದ್ ಸಿದ್ ಪಾವ್ನ ಅಂದ್ ಹೇಳ್ದ. ಇಂವ ಹೇಳ್ದಟ್ ಪಾವ್ನ ಕುಟ್ ಅವ್ರ ಇವ್ನ ಸಾಮಾನ ತಕಂಡ್ರ. ಎಲ್ಲಾ ಸೇರೆ ಎಯ್ಡೂವರಿ ಕಂಡಗ್[೬೦] ಪಾವ್ನ ಆಯ್ತ. ಅಟ್ಟೆಲ್ಲ ಪಾವ್ನ ದೋಣೀ ಮ್ಯೆನಿಂದ ತಕಂಡ್ ಹೋಗೂಕ್ ಹಿದ್ರೆ, ಎಯ್ಡ ಕತ್ತದ ಪಲ್ಲಿ ಕುಟ್ಟೆ ನಾಕ್ ಮುಟ್[೬೧] ಸಿಗ್ಣಿ[೬೨] ತಕ್ಕಂಡ ಬಂದಾ. ಪಾವ್ನ ಎಲ್ಲಾ ಸಿಗ್ಣಿಲ್ ಕೂಡಸ್ದ. ಅದ್ರ ಬಡ್ದೆ ಬಿಗ್ಣಿ[೬೩] ಮಾಡ್ದ. ಅದ್ರ ಬಿಸಲಲ್ ಉಣಾಗ್ಸೆ[೬೪] ಹಗೂರ್ಕೆ[೬೫] ದೋಣಿಲ್ ತುಂಬ್ದ, ಊರಿಗ್ ಬರೂಕ್ ಹತ್ತದ.

ಊರಿಗ್ ಬರುವಾಗೆ ಉಂದ್ ಹಳ್ಳೆ ಸಿಕ್ತ. ಅಲ್ಲೆ ಉಂದ್ ಸೆಣ್ ಬೆಟ್ಟ, ಆ ಬೆಟ್ದಲೆ ಉಂದ್ ಸೆಣ್ ಹಿಣ್ಣ ಆಡೂದ್ ನೋಡ್ದ. ಅಲ್ಲೀಗ್ ಹ್ವೋದ. ಆ ಹಿಣ್ಣೀಗೆ ಯಾರ್ ಮ್ಯೆನೂ ಲಕ್ಷ ಇಲ್ಲ. ಆ ಹಿಣ್ಣ ಅಯ್ದ್ ಮಾಣಕ್ದ ಹಳ್ಳ[೬೬]ಲ್ಲೆ ಆಡ್ತತ. ಇಂವ್ನ ಕಂಡೆ ಗಡ್‌ಬಿಡಿಲೆ ಪಾತಾಳ್ಕೆ ಇಳ್ದೀ ಬೆಟ್ತ[೬೭]. ಆಗೆ ಉಂದ್ ಮಾಣಕ್ದ ಹಳ್ಳ ಬಿಟ್ ಹೋಯ್ತ. ಆ ಹಳ್ಳ ಇಂವ ತಕ್ಕಂಡ್ ಬಂದ. ಹಾಂಗೇ ಊರಿಗೆ ಬಂದ್ ಮುಟ್ದ.

ಇಂವ್ನ ಬಿಗ್ಣಿ ದೋಣಿ ನೋಡೆ ಎಲ್ಲವ್ರೀಗೂ ನಗ್‌ಬಂತ. "ನಮ್ಗೆ ಸಿಗ್ಣಿ, ಬಿಗ್ಣಿಗೇನೂ ಬಡ್ತನಿಲ್ಲಾಗತ"[೬೮]. ಅಂದ್ರ. ಆಗೆ ಪಟೀಲ, "ಅಂವ ಹೊಲ್ಕೆ[೬೯] ಸಿಗ್ಣಿ ನಾದ್ರು ತಂದ, ನೀವೇನ್ ತಂದ್ರಿ? ಎಲ್ಲಾ ತಿಂದ್ಕಂಡೇ ಬಂದ್ರಿ" ಅಂದ. ಆಗೆ ರಾಣಿ ಮಗ ಈರಣ್ಣ ಒಕ್ಲ ಪಟೀಲ್ನ ಕೋಡೆ ಉಂದ್ ನೀರ್ನ ತಪ್ಲಿ ತಕಂಡ್ ಬರೂಕ್[೭೦] ಹೇಳ್ದ. ತಾನ್ ತಂದ ಬಿಗ್ಣಿ ನೀರ್ನಲ್ ಹಾಕೆ ಗೀಂವ್‌ಚೂಕ್[೭೧] ಹೇಳ್ದ. ಗಿಂವ್ಚ ಆದ್ ಮ್ಯೆನೆ ಗಿಂವ್ಚದ್ ನೀರ್ ಚೆಲ್ಲೂಕ್[೭೨] ಹೇಳ್ದ. ನೀರ್ ಚೆಲ್ದ[೭೩] ಮ್ಯೆನೆ ಕಂಡದ್ದೇನಾ ಮೂರ್ ಸಿದ್ ಪಾವ್ನಾ[೭೪]. "ಇದ್ರ ಮಾರದ್ರೆ ಸಾವ್ರಾರ್ ರೂಪಾಯ್ ಆಗೂದ್" ಅಂದ ರಾಣಿ ಮಗ. ಎಲ್ಲ ಬಿಗ್ಣಿ ತಕಂಡ್ ಹೋಗೆ ಉಂದ್ ಕಣ್ಜ ಕಟ್ದ. ಕಡೀಕೆ ಮಾಣಕ್ದ ಹಳ್‌ತಿಗ್ದೆ ಒಕ್ಕಲ್ ಪಟೇಲ್ಗೆ ಕೊಟ್ಟ.

---

೫೨. ಜರತಾರಿ ಸೀರೆ ೫೩. ಕುಪ್ಪಸ ೫೪. ಸಾಕಾಯಿತು ೫೫. ದೂರದ ೫೬. ಮುರಿದು ಬಿದ್ದಿತ್ತು ೫೭. ಇಲ್ಲವಾಗಿತ್ತು ೫೮. ಮುಷ್ಟಿ ೫೯. ಪವನ ೬೦. ಖಂಡುಗ ೬೧. ನಾಲ್ಕು ಬುಟ್ಟಿ ೬೨. ಸಗಣಿ ೬೩. ಬೆರಣಿ, ಕುಳ್ಳು ೬೪. ಒಳಗಿಸಿ ೬೫. ಸಾವಕಾಶ ೬೬. ಬರಲಿಕ್ಕೆ ೬೭. ಬೆಟ್ಟದಲ್ಲಿ ೬೮. ಮಾಣಿಕ್ಯದ ಹರಳಿನಲ್ಲಿ ೬೯. ಇಳಿದು ಬಿಟ್ಟಳು ೭೦. ಬಡತನವಿಲ್ಲವಾಗಿತ್ತು ೭೧. ಹೊಲಕ್ಕೆ ೭೨. ತೆಗೆದುಕೊಂಡು ಬರಲಿಕ್ಕೆ ೭೩. ಕಿವುಚಲು ೭೪. ಚೆಲ್ಲಲು ೭೫. ಚೆಲ್ಲಿದ ೭೬. ಪವನ

"ಇದ ಹಣಿಸಿ ಮಾಡ್ದ ಉಂಗ್ಲದಲ್[೭೭] ಹಾಕೂ ಹಳ್ಳಲ್ಲ. ಇದ್ರ ರಾಜ್ಗೆ ಕೊಟ್ರೆ ಅಂವ ಬೇಕಟ್ ಹಣ ಕುಡ್ವ[೭೮]". ಅಂದ್ ಪಟೀಲ ಅದ್ರ ರಾಜ್ಗೆ ಕೊಟ್ಟ. ರಾಜಾ ಆ ಹಳ್ ನೋಡೆ, "ಇಂತದೇ ಮತ್ತೆ ನಾಕ್ ಹಳ್ ಏವ್[೭೯] ಹಳ್ಳಾಡು, ಹಿಣ್ ಈದ[೮೦]. ಎಲ್ಲಾನೂ ಉಂದ್ ವಾರ್‌ದೊಳ್ಗೆ ತಂದ್ ನಂಗೆ ಕೊಡ್ಬೇಕ್. ಇಲ್ದರೆ[೮೧] ನಿಮ್ ತಲಿ ತಿಗೀತಿ" ಅಂದ್ ಹೇಳ್ದ. ಆಗೆ ಪಟೀಲ್ ಕಣ್ಣೀರ್ ಬಿಡ್ತೇ ಮನೀಗ್ ಬಂದಾ. "ರಾಜಾ ನನ್ ಹಳ್ ತಕಂಡ್ ದುಡ್ ಕುಡೂದ್ ಹ್ವೊಗ್ಲೆ[೮೨] ನನ್ ತಲೀನೇ ತಿಗೀತಿ ಅಂದ್ನಲಾ" ಅಂದೆ ಮುಂಡ್ ಮುಸ್ಕ್[೮೩] ಹಾಕಂಡ್ ಮನಗ್ದ[೮೪]. ಅವ್ನ ಮಕ್ಳ ಏಳ್ಸದ್ರೂ[೮೫] ಯಾಳ್ಲೇಲಾ[೮೬]. ರಾಣಿ ಮಗ ಹೋಗೆ ಏಳ್ಸೆ, ದುಕ್ದ ಕಾರ್‍ಣ ಕೇಳ್ದ. ಆಗೆ ಪಟೇಲ, "ರಾಜಾ ಹೇಳ್ಯಾ, ನೀನ್ ಕೊಟ್ಟ ಹಳ್ನಂತದೇ ಮತ್ತೆ ನಾಕ್ ಹಳ್ ಏವ, ಆ ಹಳ್ಳೂ ಮತ್ತೆ ಹಳ್ಳಾಡು ಹಿಣ್ಣೂ ಎಲ್ಲಾನೂ ಉಂದ್ ವಾರ್‌ದೊಳ್ಗೆ ತಂದ್ ಕೊಡ್ಬೇಕ ತರ್‍ದೇಯೆದ್ರೆ ನನ್ ತಲೀ ಕಡಿತೀನ್ ಕಡಾ[೮೭]" ಅಂದೆ ಕಣ್ಣೀರ್ ಬೆಟ್ಟಾ. ರಾಣಿ ಮಗ ಅಂವ್ಗೆ ಧೈರ್ಯ ಹೇಳೆ, ಪಟೀಲ್ಗೆ ಉಂಬೂ[೮೮]ಕ್ ಕರ್‍ದ.

ಪಟೀಲ್ ಉಂಡಾದ ಮ್ಯೆನೆ, ರಾಣಿ ಮಗ ಪಟೀಲ್ಗೆ, "ರಾಜ್ನ ಕೋಡೆ ಹಳ್ಳೂ ಹಿಣ್ಣೂ ಬೇಕಾದ್ರೆ ಉಂದ್ ಚಿನ್ದ ತುಟ್ಳ, ಮತ್ತೆ ಉಂದ್ ಹಡ್ಗ ತುಂಬು ವಟ್ ಹಗ್ಗ ಬೇಕಂದ್ ಹೇಳ. ಅಂವ ತರದೇ ಎದ್ರೆ[೮೯] ಹಳ್ಳೂ ಇಲ್ಲ ಹಿಣ್ಣೂ ಇಲ್ಲಾ ಅಂದ್ ಹೇಳ" ಅಂದ್ ಹೇಳ್ದ. ಪಟೀಲ ರಾಜ್ನ ಹತ್ರ ಹೋಗೆ ಚಿನ್ದ ತುಟ್ಳ, ಮತ್ ಹಗ್ಗ ತಂದ. ರಾಣಿ ಮಗ ಪಟೀಲ್ನ ಮಕ್ಕಳೂ ಸಂಗ್ತೀಗ್ ಕರ್‌ಕಂಡೆ, ಹಡ್ಗದ್ ಮ್ಯೆನೆ ಚಿನ್ದ ತುಟ್ಳ, ಹಗ್ಗಾ ತುಂಬ್ ಕಂಡೆ, ಮಾಣ್ಕದ್ ಹಳ್ಳಾಡ್ತೇ ಹಿಣ್ ಕುಳ್ತಕಂಡ್[೯೦] ಗುಡಿದ್ದಲ್ಲೆ[೯೧] ಹ್ವೊದ್ರ. ಅಲ್ ಹೋಗೆ ತುಟ್ಳಿಗೆ, ನಾಕೂ ಬದಿಗೆ ಹಗ್ಗ ನಿಡ್ಗುಂದ್ ಹಗ್ಗ ಕಟ್ದ್ರ. ತುಟ್ಳದಲ್ ರಾಣಿ ಮಗ ಈರಣ್ಣ ಕೂತ್ಕಂಡೆ ಪಟೀಲ್ನ ಮಕ್ಳಿಗೆ "ನಾನ ಪಾತಾಳ್ಕೆ ಹೋತಿ, ನೀವ ಈ ಹಗ್ಗ ಹಿಡ್ಕಂಡೆ ಹಗೂರ್ಕೆ ಕೆಳ್ಗ್ ಬಿಡ್ತೇ ಹೋಗಿ; ಈ ಹಗ್ಗ ಕಡೀಕ್ ಡೀಲ್[೯೨] ಬೆದ್ದಾಗೆ[೯೩] ಹಗ್ಗದ ತುರಿ[೯೪] ಉಂದ್ ಗಿಡ್ಕೆ ಕಟ್ಟಿ. ತ್ವೊಡಿ ಹುತ್ನ[೯೫] ಮ್ಯೆನೆ ಮತ್ ಹಗ್ಗ ಹುಂಗೂರ್ಕ್[೯೬] ಹತ್ತದ ಮ್ಯೆನೆ ಹಗ್ಗ ಉಗೂರ್ಕ್[೯೭] ಸುರುಮಾಡಿ" ಅಂದ್ ಹೇಳ್ದ. ಪಟೀಲ್ನ ಮಕ್ಳ ಸಾವ್‌ಕಾಸೆ ತುಟ್ಳದಲ್ ಕುಳ್ತ ರಾಣಿಮಗ್ನ ಪಾತಾಳ್ಕೆ ಹಗ್ಗಕಟ್ ಬಿಡೂಕ್ ಹತ್ತದ್ರ. ಬಿಡ್ತೇ ಬಿಡ್ತೇ ಹೋಗೆ ಹಗ್ಗ ಡೀಲ್ ಬೆದ್ದಾಗೆ, ಹಗ್ಗದ ತುರಿಯ ಉಂದ್ ಮರ್‍ಕೆ ಕಟ್ಟದ್ರ.

ರಾಣಿ ಮಗ ಪಾತಾಳ್ಕೆ ಮಟ್ದ. ಹಗೂರ್ಕೆ ತುಟ್ಳದಿಂದೆ ಹೆರ್ಗ್[೯೮] ಬಂದಾ. ಮುಂದೆ ಮುಂದೆ ಹ್ವೊದಾ.

---

೭೭. ಉಂಗುರದಲ್ಲಿ ೭೮. ಕೊಡುವನು ೭೯. ಇವೆ ೮೦. ಇದ್ದಾಳೆ ೮೧. ಇಲ್ಲದಿದ್ದರೆ ೮೨. ಕೊಡುವದು ಹೋಗಲಿ ೮೩. ಮುಸುಕು ಹಾಕಿಕೊಂಡು ೮೪. ಮಲಗಿದನು ೮೫. ಎಬ್ಬಿಸಿದರೂ ೮೬. ಏಳಲಿಲ್ಲ ೮೭. ಕಡಿಯುತ್ತಾನಂತೆ ೮೮. ಉಣ್ಣಲು ೮೯. ಇದ್ದರೆ ೯೦. ಕುಳಿತುಕೊಂಡ ೯೧. ಗುಡ್ಡವಿದ್ದಲ್ಲಿ ೯೨. ಸಡಿಲು ೯೩. ಬದ್ದಾಗ ೯೪. ತುದಿ ೯೫. ಸ್ವಲ್ಪ ವೇಳೆ ೯೬. ಅಲ್ಲಾಡಲು ೯೭. ಎಳೆಯಲು ೯೮. ಹೊರಗೆ

ಅಲ್ಲೊಬ್ ಬ್ರರ್ಮ್ ರಾಕ್ಷಸ. ಅಂವ್ನೇ ಅಲ್ಲಿ ರಾಜ. ಅವ್ನ ಪ್ರಜೆ ರಾಕೇಸ್ರ್[೯೯]. ಆ ಬರ್ಮ ರಾಕೇಸಾ ಉಂದ್ ಹಿಣ್ಣಾ ಬಲಾತ್ಕಾರದಿಂದೆ ಇಳ್ಕಂಡ್[೧೦೦] ಹೋಗದ. ಆಗ ಆ ಹಿಣ್ಣಿಗೆ ಒಂಬತ್ ತಿಂಗ್ಳ ಆಗತ. ಅದ ಅಲ್ಲೆ ಬೆಸ್ನಾಗತ್[೧೦೧]. ತ್ವೊಡಿ ದಿನ ಅಲ್ಲೆ ಉಳ್ದೆ. ಕಡೀಕೆ ಈ ಬರ್ಮ ರಾಕೇಸ್ನ ರೂಪ ನೋಡೆ ಹಿದ್ರಕಂಡ್ ಪರಣಾ[೧೦೨] ಕಳ್ಕಂಡ್ತ. ಅದ್ರ ಮಗ್ಳ ಬರ್ಮರಾಕೇಸ ಹಾಲ್‌ಕುಟ್ ಸಾಕ್ದ. ಅದ ದೊಡ್ಡಾಯ್ತ. ಅದ ತಾನೂ ರಾಕೇಸ್ತಿ ಅಂದೇ ತಿಳ್ಕಂಡ್ತ. ಬರ್ಮ ರಾಕೇಸ್ಗೇ ಅಪ್ಪಾ ಅಂದ್ ಕರೀತ. ಬರ್ಮ ರಾಕೇಸ್ಗೂ ಮಗ್ಳ ಮ್ಯಾನೆ ಬಾಳ ಕಕ್ಕರ್ತೆ[೧೦೩]. ರಾಣಿ ಮಗ ಈರಣ್ಣ ಅಲ್ಲೀಗ್ ಹೋಗ್ ಮುಟ್ದ. ರಾಣಿ ಮಗ್ನ ಬರ್ಮ ರಾಕೇಸ್ನ ಮಗ್ಳ ನೋಡ್ತ. "ಇಲ್ಲೀಗ್ ಯಾಕ್ ಬಂದೆ?" ಅಂದ್ ಕೇಳ್ತ. ಅವ್ನ ನೋಡ್ತೇ ನೋಡ್ತೇ ಮೋವ್ ಪಾಸ್ಕ[೧೦೪] ಸಿಕ್ತ. ಈರಣ್ಣ "ನಮ್ ಅಪ್ಪ ಇಲ್ಲಿಗ್ ಬಂದ್ರೆ ನಿನ್ ಹರ್ಗಿಸು[೧೦೫] ಬಿಡ್ವಂಗಿಲ್ಲಾ" ಅಂದ್ ಹೇಳ್ತ. ಆಗೆ ಅಂವ "ನನ್ ನೀನೇ ಉಳಿಸ" ಅಂದಾ. ಅಲ್ಲುಂದ್ ಬಂಗಾರ್ದ ದೊಡ್ ಕಂಬಾ ಈದತ. ಕಂಬಿಗೆ ಒಳ್ಗೆ ಬೇಗ[೧೦೬] ಈದತ. ಬೇಗದ ಚಾವಿ ಕಡೆ[೧೦೭] ಇದ್ರಕಡೇ[೧೦೮] ಈದತ. ಆಗೆ ಇದ ಅಂವ್ಗೆ ಹಾಲು, ಸೆಕ್ರಿ[೧೦೯], ಬಾಳಿಹಣ್ ಕುಟ್ಟೆ ಅಂವ್ನ ಹೊಟ್ಟಿ ತುಂಬ್ತ. ಅಂವ್ನ ಕಂಬ್ನಲ್ ಅಡಗ್ಸ ಹಾಕ್ತ[೧೧೦]. ಬರ್ಮರಾಕೇಸ ಹೊತ್ರಿಗ್[೧೧೧] ಹೋಗೆ ಬ್ಯೆಸ್ರೀಗ್[೧೧೨] ಬತ್ತದ. ಅಂವ್ಗೆ ದಿನ್ಕೆ ಹನ್ನೆಯ್ಡು ಕಂಡಗ್ ಅಕ್ಕಿ, ಅನ್ನ ಉಂಬೂಕ್ ಬೇಕಾತತ. ಆ ಅನ್ನ ಮೂರ್ ಕಾವ್ಲಿಗಿಂತ ಹಿಚ್ಚಾತತ[೧೧೩]. ಆ ಅನ್ಕೆ ಬೇಕಾಗುವಟ್, ಆಸಿ, ಹುಳ್ಗಾ[೧೧೪]. ಅಂವ ಉಂಬೂದ್ ಬ್ಯೆಸ್ರಿಗೆ.

ರಾಕೇಸ ಬ್ಯೆಸ್ರಿಗೆ ಬಂದ. "ನರ ಮನಸ್ರ ವಾಸ್ನೆ" ಅಂದ್ ಮಗ್ಳಿಗ್ ಕೇಳ್ದ. ಆಗೆ ಅದ "ಈ ಪಾತಾಳ್ಕೆ ಯಾವ್ ನರ ಮನಸ್ರ ಬತ್ತರ?[೧೧೫] ನೀನೆ ಅಡ್ವೀ ಪ್ರಾಣಿ ತಿಂದಿ. ನಿನ್ ಬಾಯ್ ವಾಸ್ನೀಗೇ[೧೧೬] ನರ ಮನಸ್ರ ವಾಸ್ನೆ ಅಂತಿ" ಅಂದ್ ಹೇಳ್ತ. ಇಂವ ಸುಮ್ನೊಳ್ದ[೧೧೭]. ಬೆಳ್ಗಾ ಮುಂಚಿದ್ದೆ ಮತ್ ಕಾಡೀಗ್ ಹ್ವೊದಾ. ಎಯ್ಡ ಚಿಗ್ರಿ[೧೧೮] ಕಂಡ್ ಬಿನ್ ಹತ್ಕಂಡ್ ಹ್ವೊದಾ. ಈ ಕಡಿಗೆ ಇದ ರಾಣಿ ಮಗ್ನ ಕಂಬ್‌ದಲಿಂದ್ ಹೆರ್ಗೆ ದಿಂಗಯ್ತು[೧೧೯]. ಅಂವ್ಗೆ ಹಾಲ್ ಕೊಟ್ತ. ಅಂವ ಕೊಡ್ದಾ[೧೨೦]. ಹಣ್ ಕೊಟ್ತ, ತೆಂದಾ[೧೨೧]. ಮತ್ತೆ ರಾಕೇಸ್ನ ಮಗ್ಳೀಗೆ, "ನೀನ ರಾಕೇಸ್ರ ಸಂಗ್ತಿಗೆ ಇರೂದ್ ಬ್ಯೆಡಾ. ನಿನ್ನಾ ನಾನ ಕರ್ಕಂಡ್ ಹೋತಿ. ನಿನ್ನಪ್ನ ಜೇಂವ ಇಲ್ಲೀದ್ ಅಂಬೂದ್ ನಂಗೆ ಹೇಳ್ಕುಡ[೧೨೨]. ಇಂದ್ ರಾತ್ರೀ ಎಲ್ಲಾ ಕೇಳ್ಕೊ" ಅಂದ್ ಹೇಳ್ದಾ.

---

೯೯. ರಾಕ್ಷಸರು ೧೦೦. ಎಳೆದುಕೊಂಡು ೧೦೧. ಬಾಳಂತಿಯಾಗಿದ್ದಳು ೧೦೨. ಪ್ರಾಣಾ ೧೦೩. ಪ್ರೀತಿ ೧೦೪. ಮೋಹಪಾಶಕ್ಕೆ ೧೦೫. ಎಂದಿಗೂ ೧೦೬. ಬೀಗ ೧೦೭. ಕೀಲಿಕೈ ೧೦೮. ಇವಳ ಹತ್ತಿರವೇ ೧೦೯. ಸಕ್ಕರೆ ೧೧೦. ಅಡಗಿಸಿಟ್ಟಳು ೧೧೧. ಬೆಳ್ಳಿಗೆ ೧೧೨. ಸಂಜೆಗೆ ೧೧೩. ಹೆಚ್ಚಿಗೆಯಾಗುತ್ತಿತ್ತು ೧೧೪. ಅನ್ನಕ್ಕೆ ಕಲಿಸಿಕೊಳ್ಳಲು ಬೇಕಾಗುವ ಪದಾರ್ಥ ೧೧೫. ಬರುತ್ತಾರೆ ೧೧೬. ವಾಸನೆಗೇ ೧೧೭. ಸುಮ ನುಳಿದ ೧೧೮. ಚಿಗರೆ ೧೧೯. ಕರೆದಳು ೧೨೦. ಕುಡಿದನು ೧೨೧. ತಿಂದನ ೧೨೨. ಹೇಳಿಕೊಡು

ರಾತ್ರಿಗೆ ಮತ್ತೆ ಬರ್ಮ ರಾಕೇಸ ಬಂದ. "ಇದೇನ ಇಂದೂ ನರ ಮನಸ್ರ ವಾಸ್ನೆ ಬತ್ತೀದ[೧೨೩]" ಅಂದ. ಅದ್ಕೆ ಮಗ್ಳ "ಇಲ್ಲಿಲ್[೧೨೪] ನರಮನಸ್ರ ಏವ್ರ? ನೀ ಎಲ್ಲಾ ಸುಮ್ನೇ ಹೇಳ್ತಿ, ಮನೀಕೊ[೧೨೫]" ಅಂದ ಹೇಳ್ತ. ಬರ್ಮ ರಾಕೇಸ ಒಂಡಾ[೧೨೬] ಹಂಗೇ ಎತ್ತರ ಹಾಸ್ಗಿ ಮ್ಯೆನ್ ಹೋಗೆ ಮನಗ್ದ. ಮಗ್ಳ ಪ್ರೀತಿಲೆ ಅಪ್ನ ಕಾಲಡಸ್ತ[೧೨೭] ಆಗೆ ಅಂವ್ನ ಕಾಲ್ ಮ್ಯೆನೆ ಎಯ್ಡ ಹುಂಡ್[೧೨೮] ಕಣ್ಣೀರ್ ಬೆತ್ತ[೧೨೯]. ಬರ್ಮ ರಾಕೇಸ್ಗೆ ಮಗ್ಳ ಮ್ಯೆನೆ ಯಾರೋ ಬಲಾತ್ಕಾರ ಮಾಡಿದ್ರೊ ಹೆಂಗೆ ಅಂದ್ ಸಂಸಯ[೧೩೦] ಹುಟ್ತ. ಮಗ್ಳೀಗೆ "ಕಣ್ಣೀರ್ ಹಾಕೂಕ್ ಕಾರ್ಣ ಏನ" ಅಂದ್ ಕೇಳ್ದ. ಆಗೆ ಮಗ್ಳ "ನಮ್ಗೆ ಎಲ್ಲಾ ಸುಕ ಈದ[೧೩೧]. ಆದ್ರೆ ನೀನ ಹೊತ್ರೀಗ್ ಹ್ವೊದಂವ ಬೈಸ್ರಿಗ್ ಬತ್ತಿ. ನಿಂಗೇನಾದ್ರೂ ಆದ್ರೆ ಅಂಬೂ ಹಿದ್ರಕೆ. ಅದ್ಕೆ ಕಣ್ಣೀರ ನಂಗೆ. ಮತ್ತೆವ್ ಬ್ಯಾಸರನೂ ಇಲ್ಲ" ಅಂದ್ ಹೇಳ್ತ. ಮಗ್ಳ ಮಾತ್ ಕೇಳೆ ರಾಕೇಸ್ಗೆ ಆನಂದ್ ಆಯ್ತ. ಆಗೆ ಅಂವ "ಮಗ್ಳೆ ನನ್ ಪ್ರಾಣ ನನ್ ಕೈಲಿಲ್ಲ[೧೩೨]. ನಮ್ಮನಿ ಮುಂದುಂದ್ ತೇಗ್ನ ಮರ ಈದ. ಅದ್ರ ಮ್ಯೆನುಂದ ದೊಡ್ಡ ಪಿಟಗೆ[೧೩೩] ಈದ. ಅದ್ರಲ್ಲುಂದ್ ಪಂಜರ ಈದ. ಪಂಜರ್‌ದಲುಂದ್ ಗಿಳಿ ಈದ. ಆ ಮರ್ನಕಡ್ಡೆ[೧೩೪] ಪಿಟ್ಗಿ ತಿಗ್ದೆ[೧೩೫] ಪಂಜರ್ದೊಳಗಿದ್ದ್ ಗಿಳಿ ಹಿಡ್ವರ ಯಾರಾದ್ರೂ ಏವ್ರೆ[೧೩೬] ಹೇಳ? ಗಿಳಿ ಕಾಲ್ ಮೊರ್‌ದ್ರೆ[೧೩೭] ನನ್ ಕಾಲ್ ಮೊರ್ದಂಗೆ. ಗಿಳಿ ತಲಿ ಮೊರ್ದರೆ ನನ್ನ ತಲಿ ಮೊರ್ದಂಗೆ" ಈ ಮಾತ ಕೇಳ್ದ ಮಗ್ಳ "ನಂಗೆ ಏಗೆ[೧೩೮] ದೈರ್ಯ ಬಂತ" ಅಂದ್‌ಹೇಳ್ತ. ಅಪ್ಗೆ ಕಕರ್ತಿಲೆ[೧೩೯] ಎಯ್ಡ ಮುದ್[೧೪೦] ಕೊಟ್ತ.

ರಾಕೇಸ ಬೆಳ್ಗ ಮುಂಚಿದ್ದೆ ಕಾಡೀಗೆ ಹ್ವೊದಾ. ಎಯ್ಡ ಮೊಲ ಕಂಡೆ ಅವ ಬಿನ್ ಹತ್ತದ. ಅವ ಸಕ್ಲೇಲಾ[೧೪೧] ಅವ ಅಟ್ಟಕಂಡ್ ಹ್ವೊದಾ. ಇಲ್ಲೆ ರಾಕೇಸ್ನ ಮಗ್ಳ "ರಾಣಿ ಮಗ್ನ ಹೆರ್ಗೆ ಕರೀತ. ತಿಂಬೂಕ್ ಕೊಟ್ತ. ಮತ್ತೆ ಬರ್ಮರಾಕೇಸ್ನ ಜೇಂವ ಇಲ್ಲೀದ್ ಅಂದ್ ಹೇಳ್ತ. ರಾಣಿ ಮಗ ಉಕ್ನ ಕುಡ್ಲಿಲೆ[೧೪೨] ತೇಗ್ನ ಮರ ಕಡ್ದ. ಅದ್ರ ಮ್ಯೆನಿದ್ ಪಿಟ್ಗಿ ತೆಗ್ದ, ಅದ್ರ ಒಡ್ದ[೧೪೩] ಅಲ್ಲೆದ್ ಪಂಜರ ತೆಗ್ದ, ಗಿಳಿ ಹೆಡ್ದ. ಆಗೆ ರಾಕೇಸ್ನ ಜೇಂವ ಅಲ್‌ಗಾಡೂಕ್[೧೪೪] ಹತ್ತತ. "ಏನೋ ಪರ್‌ಮ್ವೊಸಿ ಆಯ್ತ" ಅಂದೆ ಮನೀಗ್ ಬರೂಕ್ ತಿರಗ್ದ. ರಾಣಿ ಮಗ ಗಿಳಿ ಕಾಲ್ ಮೊರ್ದ. ರಾಕೇಸ್ನ ಕಾಲ್ ಮುರೀತ. ಗಿಳಿ ರಟ್ಟೆ ಮೊರ್ದ, ರಾಕೇಸ್ನ ಕೈ ಮುರೀತ. ಹುಯ್ಡಾಡ್ತೇ[೧೪೫] ಮನಿ ಹತ್ರ ಬಂದ. ಆಗೆ ರಾಣಿ ಮಗ ಈರಣ್ಣ ಗಿಳಿ ತಲಿ ಮೊರ್ದ. ಆಗೆ ಬರ್ಮ ರಾಕೇಸ ಸತ್ ಬೆದ್ದ. ಆಗೆ ಅಲ್ಲೆ ರಾಕೇಸ್ರೆಲ್ಲಾ ರಾಣಿ ಮಗ್ನ ತಿಂಬೂಕ್ ಬಂದ್ರ. ಆಗೆ ಇಂವ "ನನ್ ತೆಂದ್ರೆ[೧೪೬] ನಿಮ್ಗೆ ಉಂದ್ ತುಂಡೂ ಬರ[೧೪೭] ನಾನ ಈ ಮನಿಗೆ ನಿಮ್ಮನ್ನೇ ರಾಜ್ನ ಮಾಡ್ತಿ" ಅಂದ. ಅವ್ರಿಗೆಲ್ಲಾ ಆನಂದ ಆಯ್ತ.

---

೧೨೩. ಬರುತ್ತಿದೆ ೧೨೪. ಇಲ್ಲೆಲ್ಲಿ ೧೨೫. ಮಲಗಿಕೋ ೧೨೬. ಉಂಡನು ೧೨೭. ಕಾಲೊತ್ತಿದಳು ೧೨೮. ಹನಿ ೧೨೯. ಬಿದ್ದಿತು ೧೩೦. ಸಂದೇಹ ೧೩೧. ಸುಖವಿದೆ ೧೩೨. ನನ್ನ ಕೈಯಲ್ಲಿಲ್ಲ ೧೩೩. ಪೆಟ್ಟಿಗೆ ೧೩೪. ಕಡಿದು ೧೩೫. ತೆರೆದು ೧೩೬. ಇದ್ದಾರೆಯೆ ೧೩೭. ಮುರಿದರೆ ೧೩೮. ಈಗ ೧೩೯. ಪ್ರೀತಿಯಿಂದ ೧೪೦. ಮುದ್ದು ೧೪೧. ಸಿಗಲಿಲ್ಲ ೧೪೨. ಉಕ್ಕಿನ ಕೊಡಲಿಯಲ್ಲಿ ೧೪೩. ಒಡೆದನು ೧೪೪. ಅಲ್ಲಾಡಲು ೧೪೫. ಉರುಳಾಡುತ್ತ ೧೪೬. ತಿಂದರೆ ೧೪೭. ಬರಲಿಕ್ಕಿಲ್ಲ

ಕಡೀಕೆ ಅವ್ರೆಲ್ಲಾ ಬರ್ಮ ರಾಕೇಸ್ನ ಸುಟ್ ಬಂದ್ರ, ಅವ್ರಿಗೆಲ್ಲಾ ನೀವ ಈ ಮನಿ ರಾಜರಾಗ ಇರ್ತರಿ[೧೪೮]" ಅಂದ, ಅವ್ರೀಗೆ ಕುಸಿಯಾಯ್ತ. ಅವ್ರ ಕುಸೀಲ್ ಕುಣ್ದಾಡ್ತೇ ಇರ್ವಾಗೆ, ಇಂವ ರಾಕೇಸ್ನ ಮಗ್ಳ ಹಾರ್ಸ್ಕ[೧೪೯] ಬಂದಾ. ಬರುವಾಗೆ ಮಾಣಕ್ದ ಹಳ್ಳೂ ತಕಂಡ್ ಬಂದ. ಚಿನ್ನದ ತುಟ್ಲ ಎದ್ದಲ್ ಬಂದೆ ಹಗ್ಗಾ ಹುಂಗಾಡಿಸ್ದ[೧೫೦] ಬಂಗಾರ್ದ ತುಟ್ಲ ನೋಡೆ ರಾಕೇಸ್ನ ಮಗ್ಳ ತಾನೇ ಮುದ್ಲ[೧೫೧] ತುಟ್ಳ ಹತ್ತತ್ತಿ[೧೫೨] ಅಂತ. ಆಗೆ ರಾಣಿ ಮಗ ಈರಣ್ಣ "ನೀನೆ ಮುದ್ಲ ಹೋಗಂದ" ಹಗ್ಗ ಹುಂಗಾಡಿಸ್ದ. ಮ್ಯೆನೆದ್ದವರ್ರ ಹಗ್ಗ ಎಳದ್ರ. ರಾಕೇಸ್ನ ಮಗ್ಳ ನೋಡೆ ಮ್ಯೆನೆದ್[೧೫೩] ಪಟೀಲ್ನ ಮಕ್ಳ ಮಳ್ಳಾದ್ರ[೧೫೪]. "ಬೊಂಬಿ ಅಂತ ಹಿಣ್ಣ" ಅಂದ್ರ, ಮತ್ತೆ ರಾಣಿ ಮಗ್ನ ತರೂಕೆ ಚಿನ್ದ ತುಟ್ಲಾ ಬೆಡ್ಲೀಲಾ[೧೫೫]. ಅಂವ ಅಲ್ಲೆ ಸಾಯ್ಲೆ" ಅಂದ್ ಅಂವ ಬರೂ[೧೫೬] ಬಾವೀಗೆ ಮುಳ್ ಗೊಲ್ಗಿ[೧೫೭] ತುಂಬದ್ರ; ಕಲ್ಲೂ ಮುಳ್ಳು ಜೆಡದ್ರ[೧೫೮]. ಬಂಗಾರ ತುಟ್ಳ ಹಿಣ್ಣೂ ಬಲತ್ಕಾರ್‌ದಿಂದೆ ತಕಂಡ್ ಬಂದ್ರ.

ಮ್ಯೆನೆ ಉಂದ್ ತೇಗ್ನ ಮರ್ದ ಮ್ಯೆನೆ, ಉಂದ್ ಗರುಡ ಮೊಟ್ಟೆಯಿಕ್ಕೆ ಮರಿ ತೆಗ್ದರೂ ಹತ್ತು ಗೂಡಿಗೂ ಉಂದೂ ಮರಿಲ್ಲಾ[೧೫೯]. ರಾಣಿ ಮಗ ಆ ತೇಗ್ನ ಮರ ಕಡ್ದ ಮ್ಯೆನೆ ಅದ್ರ ಬುಡ ತಿಗ್ರಿ, ಅಲ್ಲೆ ಗರಡ ಮೊಟ್ಟೆ ಹಾಕೆ, ಮರಿ ತೆಗ್ದಾಗೆ ಮರೆ ಬದ್ಕ್‌ದು[೧೬೦]. ತನ್ನ ಮರೆ ಬದ್ಕ್‌ದ್ಕ್ಕೆ[೧೬೧] ಗರಡ ದ್ಯೆವ್ರ ನಿನಿತ[೧೬೨]. ಆಗೆ ಆಕಾಸ್‌ವಾಣಿಯಾಯ್ತ. "ನಿನ್ನ ಮರಿ ಕಾದಂತಂವ ಪಾತಾಳ್ದಲ್ ಏಂವ. ಬರ್ಮ ರಾಕೇಸ್ನ ಮಗ್ಳ ತರೂಕ್ ಹೊವ್ದವ್ನ ಒಕ್ಲ ಪಟೀಲ್ನ ಮಕ್ಳ ಮೋಸಾಮಾಡೆ ಪಾತಾಳ್ದಲ್ಲೇ ಇರುಹಂಗ್[೧೬೩] ಮಾಡರ[೧೬೪]. ಅಂವ ತಂದ್ ಹಿಣ್ಣ ಬಲಾತ್ಕಾರ್‌ದಲ್ಲೆ ತಕಂಡ್ ಹೋಗರ. ನೀನ ಅಂವ್ಗೆ ಉಪ್ಕಾರಾ ಮಾಡ್ಬೇಕ". ಆಗೆ ಗರಡ ಪಾತಾಳ್ಕ ಹೋಗೂ ಬಾವೀ ಕೋಡ ಬಂದೆ, ಕಲ್ಲೂ ಮುಳ್ಳೆಲ್ಲ ತನ್ ಚುಂಚ್ನಲ್ಲೇ ತಿಗೀತ, ಪಾತಾಳ್ಕೆ ಹೋಯ್ತ, ಪಾತಾಳ್ಕೆ ಹೋಗೆ, ರಾಣಿ ಮಗ್ನ ತನ್ ರಟ್ಟೆ ಮ್ಯೆನ್ ಕುಳ್‌ಸ್ಕಂಡ್ ಮ್ಯೆನ್ ತಂತ. ಮತ್ತೆ ಅಂವ್ಗೆ "ನೀನ ಇಲ್ಲೀಗ್ ಹೊವ್ಗ್ಬೇಕ್ ಹೇಳ, ಅಲ್ಲಿಗ್ ನಿನ್ನ ಮುಟ್ಟಸ್ತಿ" ಅಂದ್ ಹೇಳ್ತ. ಆಗೆ ರಾಣಿ ಮಗ ಅದ್ಕೆ "ನೀನ್ ಹೋಗ, ನಾನ ನನ್ನ ಮನಿಗೆ ಹೋತಿ" ಅಂದ. ಗರಡ ಹಾರ್ ಹೋಯ್ತ. ಹೋಗ್ವಾಗ ಉಂದ್ ಹಳ್ಳಾ, ಅದ್ರ ಆಚೀನ್ ಮತ್ತುಂದ ಹಳ್ಳ. ಇಂವ ಉಂದ್ ದೊಡ್ಡ ಹಂಗರ್ಕನ[೧೬೫] ಮರ ನೋಡ್ದ. ಅದ್ರ ಕಡ್ದ ಹಳ್‌ದಲ್ ಬೆಟ್ಟಾ[೧೬೬] ತೇಲು ಹಂಗರ್ಕನ ಮರ ಹಿಡ್ಕಂಡ್ ಮೀಸಾಡ್ತೇ[೧೬೭] ಹಳ್ಳದ ಪಾರ[೧೬೮] ದಾಟ್ದ.

---

೧೪೮. ಇರುತ್ತೀರಿ ೧೪೯. ಅಪಹರಿಸಿಕೊಂಡು ೧೫೦. ಅಲ್ಲಾಡಿಸಿದ ೧೫೧. ಮೊದಲು ೧೫೧. ಹತ್ತುತ್ತೇನೆ ೧೫೩. ಮೇಲಿದ್ದ ೧೫೪. ಮುರುಳಾದರು ೧೫೫. ಬಿಡಲಿಲ್ಲ ೧೫೬. ಬರುವ ೧೫೭. ಮುಳ್ಳಿನ ಗೊಂಚಲು ೧೫೮. ಜಡಿದರು ೧೫೯. ಮರಿಯಿಲ್ಲ ೧೬೦. ಬದುಕಿದವು ೧೬೧. ಬದುಕಿದಕ್ಕೆ ೧೬೨. ನೆನೆಯಿತು ೧೬೩. ಇರುವ ಹಾಗೆ ೧೬೪. ಮಾಡಿದ್ದಾರೆ ೧೬೫. ಹಂಗಾರಕ, ಬೆಂಡಿನ ಮರ ೧೬೬. ಬಿಟ್ಟನು ೧೬೭. ಈಸಾಡುತ್ತ ೧೬೮. ಜಲಾಶನ

ಒಕ್ಕಲ ಪಟೇಲ್ನ ಮಕ್ಳ ಹಿಣ್ ತಕಂಡ್ ಹೋಗೆ ರಾಜ್ಗೆ ಕೊಟ್ರ. ರಾಜ ಹಿಣ್ ಮುದಿಯಾಗೂಕೆ ಎಲ್ಲಾ ಕಡ್ಗೂ ಹೇಳ್ಕಿ ಮಾಡ್ದ. ಆಗೆ ರಾಕೇಸ್ನ ಮಗ್ಳ ರಾಜ್ಗೆ "ನೀನ ನನ್ ಮುದಿ[೧೮೦] ಆತಿ[೧೮೧]" ಅಂದ್ ಹೇಳ್ತ. ರಾಜ "ಹಂಗೇ[೧೮೨] ಆಗ್ಲೆ" ಅಂದ. ಉಂದ್ ದೊಡ್ಡ್ ಬಂಗ್ಲಿ ಕಟ್ಟೆ, ಅದ್ರ ಅಲ್ಲೆಟ್ಟ[೧೮೩] ಕಾವ್ಲಗಾರ್ರ ನೇಮಸ್ದ[೧೮೪].

ಈ ಕಡಿಗೆ ರಾಣಿ ಮಗ ಈರಣ್ಣ ಬರ್ಮ ರಾಕೇಸ್ನ ಮಗ್ಳ ಹುಡ್ಕತೇ ಬತ್ಯ[೧೮೫]. ಅಂವ್ನ ಗಡ್ಡ ಮೊಳವುದ್ದ ಬಿಳ್ದತ[೧೮೬]. ಬರ್ಮರಾಕೇಸ್ನ ಮಗ್ಳ ಕಿಡಕೀ ಗಂಡಿಲ್[೧೮೭] ಹೆರ್ಗ[೧೮೮] ನೋಡ್ತೇ ಕುಳ್ತತ[೧೮೯]. ರಾಣಿ ಮಗ ಈರಣ್ಣ "ಏ ಬರ್ಮರಾಕೇಸ್ನ ಮಗ್ಳೆ ಇಲ್ ಹ್ವೊದೆ?[೧೯೦] ನೀ ನಂಗೆ ಇಲ್ ಸಿಕ್ವೆ[೧೯೧]" ಅಂದ್ ಹೇಳ್ತೇ ಬರುವಾಗೆ ಅದ ಅಂವ್ನ ಕರೀತ "ತಾನೇ ಬರ್ಮ ರಾಕೇಸ್ನ ಮಗ್ಳ" ಅಂತ. ಅಂವ ತನ್ ಇಚಾರಾ[೧೯೨] ಎಲ್ಲಾ ಹೇಳ್ದ. ಮತ್ತೆ ಬರ್ಮರಾಕೇಸ್ನ ಮಗ್ಳಗೆ "ನೀನ ರಾಜ್ನಕಡೆ[೧೯೩] ಹೇಳ, ತನ್ನ ಭಾರತ ಓದ್ ಮುಗೀತ. ಮುದ್ವ್ಯಾ[೧೯೪] ಆಗೂಕ್ ಅಡ್ಡಿಲ್ಲ. ಆದ್ರೆ ಮುದಿದಲೆ[೧೯೫] ಮಾಲೀ[೧೯೬] ಹಾಕೂದ ಇಲ್ಲ. ಅಂದ್ ಹೇಳ. ನಾನ ಮುದಿದ ಚಪ್ರಕ್[೧೯೭] ಬತ್ತಿ. ನಾನ ಓಟಾ[೧೯೮] ಮಾಡ್ತೇ ಕೊಳ್ತಾಗೆ[೧೯೯] ನೀನ ನನ್ನ ಎಂಜ್ಲ[೨೦೦] ಎಲಿಲೆ[೨೦೧] ಕುಳ್ತೆ ಓಟಾ ಮಾಡ" ಅಂದ. ಆಗೆ ಇದ ಕಾವಲ್‌ಗಾರ್ನ ಕೋಡೆ "ರಾಜ್ಗೆ ಮುದೀದ್ ಸಿದ್ದತಿ ಮಾಡೂಕ್ ಹೇಳ" ಅಂದ್ ಹೇಳ್ತ. ರಾಜಾ ಮುದೀದ್ ಸಿದ್ದತಿ ಮಾಡ್ದ. ರಾಣಿ ಮಗ ಮುದೀಕ್ ಬಂದೆ ಉಂಬೂಕ್ ಕೊಳ್ತ. ರಾಕೇಸ್ನ ಮಗ್ಳ ಅವ್ನ ಕೋಡ್ ಹೋಯ್ತ. ಅವ್ನ ಎಂಜ್ಲ ಎಲೀಲೇ ಓಟಾ ಮಾಡ್ತ. ಅದ್ರ ನೋಡೆ ರಾಜ್ಗೆ ಸಿಟ್ ಬಂದೆ, ಅವ್ರ ತಲೀ ಕಡೂಕ್ ಮುಂದಾದ. ಆಗೆ ಮಂತ್ರಿ ಮುಂತಾದ ತ್ವೊಡೀ[೨೦೨] ಜನಾ ರಾಜ್ನ ತಡ್ದೆ ತಡಿ ಇದ್ರಲ್ಲೆ ಏನಾದ್ರೂ ಗುಟ್ಟ ಎರ್ಬೇಕ[೨೦೩] ಅಂದ್ರ. ಈ ಹುಡ್ಗನ್ ನೋಡ್ದರೆ (ರಾಣಿಮಗ) ರಾಜ್ನ ಮಗ್ನ ಕಂಡಂಗೇ[೨೦೪] ಕಾಣ್ತ್ಯಾ" ಅಂದ್ ಹೇಳೆ, ಒಕ್ಲ ಪಟೇಲ್ನ ಕರಿಸಿದ್ರ. ಅಂವ್ಗೆ "ಈ ಹುಡ್ಗ ನಿನ್ ಮಗ್ನೊ ಅತ್ವಾ ಬ್ಯೆರೆಯವ್ನೊ" ಅಂದ್ ಕೇಳ್ದ್ರ. ಆಗ ಒಕ್ಲ ಪಟೇಲ ಹಿಂದ್ ನೆಡ್ದ ಎಲ್ಲಾ ಕತಿ ಹೇಳ್ದ. ಆಗೆ ರಾಜ ತನ್ನ ಹಿಂಡ್ತಿ ತಲೆಕಡೂಕ್ ಹ್ವೊದವ್ರ[೨೦೫] ಕರ್ದ ಇಚಾರಿಸ್ದ[೨೦೬]. ಆಗೆ ಅವ್ರ ರಾಜ್ನ ಹಿಂಡ್ತಿ ತಲಿಕಡಿದೇ ಹಾಳ್ ಬಾವೀಗ್ ತುಂಬ್ದ ಸುದ್ದಿ ಹೇಳ್ದ್ರ. ಆಗೆ ರಾಜ್ಗೆ ಅಂವ ತಂದೇ ಮಗ ಅಂದ್ ಗುತ್ತಾಯ್ತ[೨೦೭].

---

೧೭೯. ಓದಿಕೊಂಡು ಬರುತ್ತೇನೆ ೧೮೦. ಮದುವೆ ೧೮೧. ಆಗುತ್ತೇನೆ ೧೮೨. ಹಾಗೇ ೧೮೩. ಅಲ್ಲಿಟ್ಟನು ೧೮೪. ನೇಯಮಿಸಿದನು ೧೮೫. ಬರುತ್ತಾನೆ ೧೮೬. ಬೆಳೆದಿತ್ತು ೧೮೭. ಕಿಡಕಿಯ ಕಿಂಡಿಯಲ್ಲಿ ೧೮೮. ಹೊರಗೆ ೧೮೯. ಕುಳಿತಿದ್ದಳು ೧೯೦. ಎಲ್ಲಿ ಹೋದೆ? ೧೯೧. ಎಲ್ಲಿ ಸಿಗುವೆ? ೧೯೨. ವಿಚಾರ ೧೯೩. ರಾಜನ ಹತ್ತಿರ ೧೯೪. ಮದುವೆ ೧೯೫. ಮದುವೆಯಲ್ಲಿ ೧೯೬. ಮಾಲೆ ೧೯೭. ಚಪ್ಪರಕ್ಕೆ ೧೯೮. ಊಟಾ ೧೯೯. ಕುಳಿತಾಗ ೨೦೦. ಎಂಜಲು ೨೦೧. ಎಲೆಯಲ್ಲಿ ೨೦೨. ಸ್ವಲ್ಪ ೨೦೩. ಇರಬೇಕು ೨೦೪. ನೋಡಿದ ಹಾಗೆ ೨೦೫. ಹೋದವರನ್ನು ೨೦೬. ವಿಚಾರಿಸಿದನು ೨೦೭. ಗೊತ್ತಾಯಿತು

ಕಡಿಕೆ ರಾಜ ಅದೇ ಚಪ್ರದಲ್ಲೇ[೧೯೮] ಆ ಬರ್ಮ ರಾಕೇಸ್ನ ಮಗ್ಳ ಅಂವ್ಗೆ ಮುದಿ ಮಾಡ್ದ. ತನ್ನ ಹಿಂಡ್ತೀನೂ ಕರೀಸ್ಕಂಡ[೧೯೯]. ಕಡೀಕೆ[೨೦೦] ಅಪ್ಪ, ಅವ್ವಿ, ಮಗ ಎಲ್ರೂ ಸುಕವಾಗೆ ಒಳ್ದ್ರ[೨೦೧].

೧೯೮. ಚಪ್ಪರದಲ್ಲೇ ೧೯೯. ಕರೆಯಿಸಿಕೊಂಡ ೨೦೦. ಕೊನೆಯಲ್ಲಿ ೨೦೧. ಉಳಿದರು

೦೫. ಕಿರಿಕಂದಿ ಸ್ವೊಮಣ

ಒಬ್ ಸಾವ್ಕಾರ್ಗೆ ಅಯ್ಡ್ ಜನ ಮಕ್ಳ. ಅವ್ರ ಲಗ್ನಾಗೆ ಹ್ವೊಮಾಯ್ತ[೧]. ಸಾವ್ಕಾರ ಮುಪ್ಪಿನ ಕಾಲ್ಕೆ ಹಿರೀಮಗ್ನ ಕೇಳ್ದ, "ನನ್ನ್ ಹಿಸ್ರ[೨] ಯಾವ್ ರೀತಿ ನೀನ್ ಕೊಂಡಾಡ್ವೆ?" ಅಂದ್ ಕೇಳ್ದ. ಆಗ್ ಅಂವ "ಉಂದ್ ಕಾಡಿ ಬತ್ತಾ[೩] ಬಿತ್ತುವಲ್ಲೆ ಎಯ್ಡ ಕಾಡಿ ಬಿತ್ ನಿನ್ ಹಿಸ್ರ ಕೊಂಡಾಡ್ವೆ" ಅಂದ. ಸಾವ್ಕಾರ ಎಯ್ಡ್ನೇ ಮಗ್ನ ಕೇಳ್ದ. ಆಗೆ ಅಂವ, "ಅಪ್ಪಾ ಏಗೇ[೪] ನಿನ್ನ ಹಿಸ್ರ ಕೊಂಡಾಡ್ತಿ" ಅಂದ್ ಹೇಳೆ, ಹತ್ ಕ್ವೊಣೀಲೆ ಹತ್ತ ದೇಪ[೫] ಕಚ್ದ[೬]. ಆಗೆ ಸಾವ್ಕಾರಾ ಅಂವ ಬುದ್ವಂತ ಅಂದ್ ತಿಳ್ಕಂಡ. ಸಾವ್ಕಾರಾ ಮೂರ್ನೇ ಮಗ್ನ ಕೇಳ್ದ. ಆಗೆ ಅಂವ, "ದಿನ್ಕೆ ನೂರ್ ರುಪಾಯ್ ಸಾಲಾ ಕುಡ್ವೆ, ಅದ್ಕೆ ನೂರ್ ರೂಪಾಯ್ ಬಡ್ಡಿ. ಅಸಲೂ ಬಡ್ಡಿತಂದೆ ನಿನ್ ಕೈಲೆ ಕುಟ್ಟೆ[೭] ನಿನ್ ಹಿಸ್ರ ಕೊಂಡಾಡ್ವೆ" ಅಂದ. ನಾಕನೆಯಂವ್ನ ಕೇಳ್ದ, "ನೀನ್ ಕೊಟ್ ದುಡ್ಡ, ಯಾರ್ ಕೊಡ್ದೇದ್ರು[೮], ಅವ್ರ ಬೆಡ್ದೇ[೯] ಉಸೂಲ್ ಮಾಡ್ ತರ್ವೆ" ಅಂದ. ಕಡೀಗೆ ತನ್ ಕಿರಿಯ ಪ್ರೀತಿ ಮಗ್ನ ಕರ್ದ. ಅಂವ ಹೇಳ್ದ, "ಅಪ್ಪಾ ಈ ರಾಜೀ ಹಿಂಗೇ[೧೦] ಆಳ್ ಏನ್ ಸಾರ್ಥಕ? ಇಪ್ಪತ್ತೇಳ ಹೆಡಿ ಸಾಸ್ ಮಣಿನಾಗ್ನ ಹೆಡಿ ಮ್ಯೆನ್ ಕುಳ್ತೆ, ನಾನ್ ಕೊಳಲೂಬೆ, ಅಚ್ಚ ಕನ್ನಿ, ದೇವಕನ್ನಿ, ಇವ್ರ ನಗುಹಂಗೆ ಮಾಡ್ಬೇಕ. ಹಂಗಾದ್ರ ಮಾತ್ರೆ ರಾಜೀ ಆಳ್ ಪ್ರಯೋಜನ ಈದ" ಅಂದ.

ಆಗೆ ಸಾವ್ಕಾರಾ, ಈ ನನ್ ಮಗ, ನನ್ನ ಹಣ ಹಾಳೀಗ್ ಹಾಕೂಕ್[೧೧] ಹುಟ್ದಂವ" ಅಂದೆ ಮನ್ಸ್ನಲ್ಲೇ ಮಾಡ್ಕಂಡ ಮತ್ತೆ ಅವ್ನ ಕೋಡೆ ಮಾತ ಮುಂದ್ವರಿಸೇಲಾ[೧೨] ಕಿರಿಯಂವ್ನ ಹಿಸ್ರ[೧೩] "ಕಿರಿಕಂದಿ ಸ್ವೊಮಣ" ಅಂವ ತಿರ್ಗುವಾಗೆ[೧೪], ಕರಿಕಂಬ್ಳಿ, ಕಂಬೀ ಗುದ್ಲಿ[೧೫] ಹಿಡ್ಕಂಡೆ ತಿರ್ಗುವಂವ, ಅಂವ ಅಪ್ನಕೊಡೆ ಹಿಚ್ಗೆ[೧೬] ಮಾತ್ ಆಡ್ದೇ, ಅಲ್ಲಿಂದೆ ಹೋಗೆ ಬೆಟ್ಟಾ[೧೭].

ಆ ಸಾವ್ಕಾರಾ ತನ್ ಹಿರೀ ನಾಕ್ ಮಕ್ಳಕೋಡೆ ಹೇಳ್ದ. "ಈ ನನ್ ಕಿರಿ ಪ್ವೊರಾ ನನ್ ಹಣ, ಬದ್ಕು ಹಾಳೀಗ್ ಹಾಕೂಕ್ ಹುಟ್ದಂವ. ಅಂವ್ನ ಕಡ್ದೆ ಹಾಳ್ ಬಾವೀಲ್ ತುಂಬಿ" ಅಂದ. ಅವ್ರ ಮನೀಲೆ[೧೮] ಉಂದ್ ದಾಸೆ[೧೯] ಈದತ[೨೦] ಅದ್ಕೆ ಕಿರೀಮಗ ತಿಂಬೂಕ್ ಏನಾದ್ರು ತಂದೆ ಕುಡ್ತದ[೨೧]. ಸಾವ್ಕಾರ್ನ ಮಾತ್ ಕೇಳೆ ದಾಸಿ ಕಣ್ಣಲ್ ನೀರ್ ಬಂತ.

---

೧. ಶೋಭನ ೨. ಹೆಸರು ೩. ಇಪ್ಪತ್ತು ಖಂಡುಗ ಭತ್ತ ೪. ಈಗಲೇ ೫. ದೀಪ ೬. ಹಚ್ಚಿದನು ೭. ಕಯ್ಯಲ್ಲಿ ಕೊಟ್ಟು ೮. ಕೊಡದಿದ್ದರೂ ೯. ಅವರನ್ನು ಬಿಡದೇ ೧೦. ಹೀಗೇ ೧೧. ಹಾಳು ಮಾಡಲಿಕ್ಕೆ ಹುಟ್ಟಿದ ೧೨. ಮುಂದುವರಿಸಲಿಲ್ಲಾ ೧೩. ಹೆಸರು ೧೪. ತಿರುಗಾಡುವಾಗ ೧೫. ಭರಣೀ ಮರದ ದಂಟು ೧೬. ಹೆಚ್ಚಿಗೆ ೧೭. ಹೋಗೇಬಿಟ್ಟನು ೧೮. ಮನೆಯಲ್ಲಿ ೧೯. ಸೇವಕಿ ೨೦. ಇದ್ದಳು ೨೧. ಕೊಡುತ್ತಿದ್ದ

ಅದ ಕಿರಿ ಮಗ ಬರು ಹಾದೀನೇ ನೋಡ್ತೇ ಉಳಿತ. ಅಂವ ಉಂದ್ ತಾಸ್ ಹುತ್ ಆದ್ಮೆಲೆ ಮನಿಗ್ ಬಂದ. ದಾಸೆ ಅವ್ನ ಕೋಡ್ ಬಂದೆ, "ನಿನ್ ಅಣ್ದೀರ್ ನಿನ್ ತಲಿ ಕಡ್ದೆ ಹಾಳ್ ಬಾವಿ ತುಂಬ್ತರ" ಅಂದೆ ತಿಳಿಸ್ತ. ಆಗೆ ಅಂವ "ನನ್ ಅಣ್ದೀರ್ ನನ್ನ್ ತಲಿ ಕಡ್ವಂಗಿಲ್ಲ" ಅಂದ್ ಹೇಳೆ, ಮಿಂದ್ಕಂಡ್ ಉಂಬೂಕ್ ಹ್ವೊದಾ. ಉಂಬಾಗೆ ಎದೀಗ್ ಹಿಡೀತ. ಹೆರ್ಗೆ ಬಂದ. ಮತ್ ಉಂಬೂಕ್ ಹ್ವೊಗ್ಲೇಲಾ[೨೨]. ದಾಸಿ ಮಾತ ಪರೀಕ್ಷೆ ಮಾಡೂಕೆ ಅಂವ ತಾ ಮನ್ಗುವಲ್ಲೆ[೨೩] ಬಾಳಿ ಕಡ್ದೆ ಹಾಸ್ಗಿ ಮೆನ್ ಮನಗ್ಸೆ, ಹುದೀಸ್ದಾ[೨೪]. ತನ್ ಹಿಂಡ್ತೆ, ತಾನ ಮನಗೂ ಕ್ವೊಣೀಗೆ ಬರುಕಾಗಾ[೨೫] ಅಂದೆ, ತನ್ನ ಉಂಗ್ಲಾ ತಿಗ್ದೆ[೨೬] ಅದ್ಕೆ ಕೊಟ್ಟಾ, ಅದ್ರ ಉಂಗ್ಲಾ ತನ್ ಕೈಗೆ ಹಾಕಂಡ. ಮತ್ತೆ ಹಿಂಡ್ತಿಗೆ ಹೇಳ್ದ, "ಇದೇ ನನ್ನ ನಿನ್ನ ಗುರ್ತ್‌ಕೆ[೨೭]" ಅಂದೆ ತನ್ನ ಕ್ವಾಣೆ, ಕದೀನ್ ಮೋಲಿಲೆ[೨೮] ನಿಂತೆ ನೋಡ್ತೇ ಒಳ್ದಾ. ತಾ ಮನಗು ಕ್ವಾಣೆ ಬೇಗ ಎಕ್ಕೇಲಾ[೨೯] ಅಣ್ದೀರ್ ನಾಕೂ ಜನ ಕ್ವಾಣೆಗೆ ಬಂದ್ರ. ಒಬ್‌ಗೆ ಕನಿಕರ ಅನಿಸ್ತ. "ತಮ್ಮನ ಕಡೂ ಮುದ್ಲೆ[೩೦] ಉಂದ್ ಮಾತನಾದ್ರೂ ಆಡುವಾ" ಅಂದ. ಅದ್ಕೆ ಉಳ್ದ ಮೂರ್ ಜನಾ ಒಪ್ಲೇಲಾ[೩೧]. ಆಗ ಮೂರೂ ಜನ "ಕಾಲಿಂದೆ ತಲೀವರಿಗೂ ಅವ್ನ ಕುಚ್ವನಿ[೩೨]" ಅಂದೆ ಅವ್ನ ಕುಚ್‌ದ್ರ. ಮತ್ತೆ ಹಾಸ್ಗಿಗೂಡೇ ಹಾಳ್ ಬಾವಿಗೆ ಹ್ವೊದ್ರ. ಕದೀನ್ ಮೋಲಿಲ್ ನೆಂತ ಕಿರಿಮಗ ಅವ್ರ ಬಿನ್ನೀಗೇ ಹ್ವೊದಾ. ಅಣ್‌ದೀರ ಅವ್ನ ಹಾಳ್ ಬಾವೀಲ್ ಹಾಕೆ, "ಸಾಸ್‌ಮಣಿ ನಾಗ್ನ ಹೆಡಿಮ್ಯೆನ್ ನಿಂತೆ ಕೊಳಲೂಬ್‌ತ್ಯಾ[೩೩] ಅಚ್‌ಕನ್ನಿ ದೇವ್ ಕನ್ನಿ ನಾಚ್ ಮಾಡೂದ್ ನೋಡ್‌ತ್ಯಾ ನೋಡ್ ಬಾವಿಲೆ" ಅಂದೆ ಅವ್ನ ಹೇಮ್‌ಸೆ[೩೪] ಮಾತಾಡ್ತರ.

ಇದೆಲ್ಲ ನೋಡ್ದ ಕಿರಿಕಂದಿ ಸ್ವೊಮಣ ಊರ್ ದಾರಿ ಬಿಟ್ಟೆ, ಬೆಟ್ಟದ ದಾರಿ ಹೆಡ್ದಾ[೩೫]. ನೀರ್ ನಲ್ ತಾನ್ ಹೋತೀನೊ[೩೬], ನೆಲದ್ ಮ್ಯೆನ್ ತಾ ಹೋತೀನೋ ಅಂಬೂದೂ ತಿಳೀದೆ, ಮಿಯ್‌ಮೆನ್ ಭಾರ ಬಂದವ್ರ ಹಂಗೆ[೩೭] ಮುಂದೆ ಮುಂದೆ ಹೋತ್ಯಾ[೩೮]. ಹೀಂಗೇ ಏಳ್ ದಿನಾ ನೆಡ್ದ ಮ್ಯೆನೆ ಅಂವ್ಗೆ ಮಿಯ್ಮೆನ್ ಎಚ್ಚರ್ ಬಂತ. ಆಸರಾಯ್ತು[೩೯]. ನೀರ ಇಲ್ಲರು ಸಿಕ್ತಿದೆ ಬೆಲಾ[೪೦] ಅಂದೆ ಮರ್ದ್ ಮ್ಯೆನ್ ಹತ್ ನೋಡ್ದ. ದೋರ್ ದೋರ್ ದೋರೆ[೪೧] ನೀರ ಕಂಡ್ತ. ಅಲ್ಲಿಗ್ ಹ್ವೊದಾ. ಅಲ್ಲೆ ಅಚ್‌ಕನ್ನಿ ದೇವ್‌ಕನ್ನಿ ಜಲ್‌ಕ್ರೀಡಿಗೆ ಕುಳ್ತದ್ರ. ನೀರ್ ಸೋಕಾಟಾ ಆಡ್ತೇ ತಮ್ ತಾಂವೇ ಮರ್ತದ್ರ[೪೨]. ಈ ಕಿರಿಕಂದಿ ಸ್ವೊಮಣ ಹಗೂರ್ಕೆ ನೀರ್ ಕೊಡ್ದ[೪೩], ಅಲ್ಲಿಂದ್ ಬಂದೆ ಉಂದ್ ಅಸ್ವತ್ ಇಳ್ಳೀ[೪೪] ಕಟ್ಟೀ ಮ್ಯೆನ್ ಕೊಳ್ತ[೪೫]. ಅವ್ರೆಲ್ಲಾ ತಮ್ಮ ಸೇರಿ[೪೬] ಬಿಡ್ಡೆ

೨೨. ಹೋಗಲಿಲ್ಲ ೨೩. ಮಲಗುವಲ್ಲಿ ೨೪. ಹೊದೆಸಿದನು ೨೫. ಬರಬಾರದು ೨೬. ಉಂಗುರ ೨೭. ಗುರುತಿಗೆ ೨೮. ಕದದ ಮೂಲೆಯಲ್ಲಿ ೨೯. ಬೀಗವಿಕ್ಕಲಿಲ್ಲ ೩೦. ಮೊದಲು ೩೧. ಒಪ್ಪಲಿಲ್ಲಾ ೩೨. ಕೊಚ್ಚೋಣ ೩೩. ಕೊಳಲೂದುತ್ತಾನೆ ೩೪. ಹಂಗಿಸಿ ೩೫. ಹಿಡಿದನು ೩೬. ಹೋಗುತ್ತೇನೆಯೊ? ೩೭. ಮೈಮೇಲೆ ಭಾರ ಬಂದವರಂತೆ, ದೈವಿ ಆವಾಹನೆ ಆದವರ ಹಾಗೆ ೩೮. ಹೋಗುತ್ತಾನೆ ೩೯. ನೀರಡಿಕೆಯಾಯಿತು ೪೦. ಸಿಗುವದೇನೊ ೪೧. ದೂರದಲ್ಲಿ ೪೨. ಮರೆತಿದ್ರು ೪೩. ಕುಡಿದನು ೪೪. ಅಶ್ವತ್ಥ ಅರಳೆ ೪೫. ಕುಳಿತನು ೪೬. ಸೀರೆ

ಜಲಕ್ರೀಡಿ ಆಡ್ತದ್ರ, ಆಗೆ ಈ ಕಿರಿಕಂದಿ ಸ್ವೊಮಣ, ಅವ್ರ ಸೇರಿ ತಕಂಡ್ ಬಂದೆ ಇಳ್ಳಿಮರ್ದ ಮೈನ್ ಇಕ್ದ[೪೭]. ಅವ್ರೆಲ್ಲಾ ಜಲ್‌ಕೇಳಿನಾಡೆ ಮೈನ್ ಬಂದ್ ನೋಡ್ದ್ರೆ ಸೇರಿಲ್ಲ. ಆ ಕಡೀಗ್ ಈ ಕಡೀಗ್ ನೋಡೆ, ಯಾರೂ ಇಲ್ಲ ಅಂದೆ, ಮರದ ಎಲಿ ಸಿಟ್ಟ್‌ಕಂಡೆ ತಮ್ ಮರ್ಯಾದಿ ಮುಚ್ಕಂಡ್ರ. ಅತ್ಲಾಗ್ ಇತ್ಲಾಗ್[೪೮] ನೋಡ್ದ್ರ, ನೋಡ್‌ದ್ರೆ ಈ ಕಿರಿಕಂದಿ ಸ್ವೊಮಣಾ ನಗಿ ಹುಡೀತೇ[೪೯] ಕುಳ್‌ತ್ಯಾ[೫೦]. ಒಟ್ ಸೇರೆಲ್ಲಾ[೫೧] ಮರ್ದ ಮೈನೆ. ಅಂವ್ಗೆ ಸೇರಿ ಕುಡ ಅಂದ್ ಬೇಡ್ಕಂಡ್ರ. ಆಗೆ ಇಂವ "ನಿಮ್ ತಂಗೆ[೫೨] ನಾಗಕನ್ನಿ ನಂಗೆ ಮುದೀ ಮಾಡ್‌ದ್ರೆ ನಿಮ್ ಸೇರಿ ಕುಡ್ತಿ[೫೩]" ಅಂದ. ಆಗೆ ಅವ್ರ ಅದ್ಕೆ ಉಪ್‌ಗಿ[೫೪] ಕೊಟ್ರ. "ಕೆಳ್ಗೆ ಸೇರಿ ತಕಂಡ್ ಬಾರಂದ್ರ[೫೫]" ಇಂವ ಸೇರಿ ಮೈನಿಟ್ಟೇ ಕೆಳ್ಗೆ ಬಂದ. ಅವ್ರಕೋಡೆ ಅವ್ರ ತಂಗಿ ಮುದಿ ಮಾಡ್‌ಕುಡು[೫೬] ಬಾಸಿ[೫೭] ತಕ್ಕಂಡೆ ಮತ್ತೆ ಮರ ಹತ್ತೆ ಸೇರಿ ತಂದ್‌ಕೊಟ್ಟ. ಅವ್ರ ಅಯ್ದ್ ಜನ ಅಕ್ಕ್ ತಂಗ್ದೀರ. ಅಯ್ದೂ ಜನ ಕಿರಿಕಂದಿ ಸ್ವೊಮಣಗೆ ಅಯ್ದ್ ಮಾಲಿ ಹಾಕ್ದ್ರ. ಅಂವ್ಗೆ ಕಜ್ಜಾಯ ತಂದ್ ಕೊಟ್ರ. ಇಂವ ಎಲ್ಲ ತೆಂದಾ[೫೮]. ಮತ್ತೆ ಅವ್ರೀಗೆ ಕೇಳ್ದ" ನಿಮ್ಮ ಮುದಿ ಆದ್ಕೆ ಗುರ್ತ[೫೯] ಏನ?" ಅಂದ್ ಕೇಳ್ದ. ಆಗೆ ಅವ್ರ ಅಂವ್ಗೆ ಉಂದ್ ಸುರ್ತಿ ಬುಯ್ಡಿ[೬೦] ಕೊಟ್ರ, ಮತ್ತೆ ಹೇಳ್ದ್ರ, "ಇದ್ರ ಎಲ್ಲಾ ಹುತ್ತೀಗೂ[೬೧] ಊಬ್‌ಬೈಡಾ[೬೨] ರಾತ್ರಿ ಒಂದ್ ಗಂಟಿಗೆ ಊಬ್. ಹಗ್ಲಿಗೂ ಉಂದ್ ಗಂಟೆ ಊಬೂಕ್ ಅಡ್ಡಿಲ್ಲ ನಿಂಗೆ ಕಷ್ಟ ಬಂದಾಗೆ ಊಬ" ಅಂದ್ ಹೇಳ್ದ್ರ.

ಇಂವ ಸುರ್ತಿ ಬುಯ್ಡಿ ತಕ್ಕಂಡಾ. ತ್ವೊಡಿ ಮುಂದ್ ಹೋಗೆ ಅವ್ರ ಪರೀಕ್ಷಿ ಮಾಡೂಕೆ ಸುರ್ತಿ ಬುಯ್ಡಿ ಊಬ್ದ. ಆಗೆ ಆಯ್ದೂ ಕನ್ನೇರ ಇಂವ್ಗೆ ತ್ರಾಸಾಯ್ತಂದ್ಹೇಳಿ ಓಡ್ ಬಂದ್ರ. "ಏನ್ ಕಷ್ಟ ಬಂತ?" ಅಂದ್ ಕೇಳ್ದ್ರ. ಆಗೆ ಅಂವ ನೀವ್ ಹೇಳ್ದ ಸತ್ತೀವ್ರೊ[೬೩] ಸುಳ್ಳೊ ಅಂಬೂದ್ ಪರೀಕ್ಷಿ ಮಾಡೂಕ ಊಬ್ದೆ. ಏಗೆ ಖಾತ್ರಿಯಾಯ್ತ ಅಂದೆ ಸುರ್ತಿ ಬುಯ್ಡಿ ತಕ್ಕಂಡ್ ಹ್ವೊದಾ.

ಉಂದ್ ರಾಜೀದ[೬೪] ಉಂದ್ ದೇವಸ್ತಾನದಲ್ಲೆ ಒಬ್ ಬಟ್ಟಾ ಈದದಾ. ಅವ್ರ ಕೋಡೆ ಬಾಳ[೬೫] ದನಗಳ ಏವ[೬೬]. ಅಂವ್ಗೆ ಹಾಲೇ ಹೊಟ್ಟಿಗೆ, ಈ ಕಿರಿಕಂದಿ ಸ್ವೊಮಾಣಾ ಅಲ್ಲಿಗ್ ಹೋಗೆ ಮುಟ್ದ. ಅಲ್ಲೆ ಉಂದ್ ಸೆಣ್ ಜಾಗ ಕೇಳ್ದ. ಬಟ್ಟ "ಜಾಗಿಲ್ಲಾ ಮುಂದ್ ಹೋಗ್ ಊರಿದ" ಅಂದಾ. ಇಂವ ಬಾಳ್ ಬೇಡ್ಕಂಡ. ಆಗೆ ಬಟ್ಟ ಹೆರಗೆ[೬೭] ಉಂದ್ ಸೆಣ್ ಜಾಗಾ ಕೊಟ್ಟ. ದೈವ್ರಮನಿ ಮೇಡಾ[೬೮] ಬಂದ್ ಮಾಡಿಟ್ಟ. ಕಿರಿಕಂದಿ ಸೊಮಣಾ ರಾತ್ರಿ ಉಂದ್ ಗಂಟಿಗೆ ಕೊಳಲೂಬ್ದ. ಆಗೆ ದೇವ್ ಕನ್ನೇರ್ ಬಂದ್ರ, ಎಲ್ಲಾ ಕಡಗೂ ಬಿಳ್ಕ[೬೯] ಭಟ್ಟ ಹಿದ್ರದಾ. ಸೈನ್ಯ ಬತ್ತೀದಂದೆ[೭೦] ಗಾಬ್ರಿ ಪಟ್ಟ.

---

೪೭. ಇಟ್ಟನು ೪೮. ಅತ್ತ ಇತ್ತ ೪೯. ನಗುತ್ತ ೪೯. ನಗುತ್ತ ೫೦. ಕುಳಿತಿದ್ದಾನೆ ೫೧. ಉಟ್ಟ ಸೀರೆಯೆಲ್ಲಾ ೫೨. ತಂಗಿ ೫೩. ಕೊಡುತ್ತೇನೆ ೫೪. ಒಪ್ಪಿಗೆ ೫೫. ಬರಹೇಳಿದರು ೫೬. ಮದುವೆ ಮಾಡಿಕೊಡುವ ೫೭. ಭಾಷೆ, ವಚನ ೫೮. ತಿಂದನು ೫೯. ಕುರುಹು ೬೦. ಶ್ರುತಿ ಬುರುಡೆ ೬೧. ವೇಳೆಗೆ ೬೨. ಊದಬೇಡ ೬೩. ಸ್ಯುವ್ಗೆ ೬೪. ರಾಜ್ಯದ ೬೫. ಬಹಳಷ್ಟು ೬೬. ಇವೆ ೬೭. ಹೊರಗೆ ೬೮. ಚಿಲಕ, ಅಗಳಿ ೬೯. ಬೆಳಕು ೭೦. ಬರುತ್ತದೆಂದು

ಬಿಳ್ಕಸಾಲೀಲಿಂದೆ[೨೧] ಹೆರ್ಗೆ ನೋಡ್ದ ಭಟ್ಟ. ಅಂವ್ಗೆ ಒಳ್ಗೆ ಜಾಗಾ ಕೊಟ್ರೆ ತಂಗೆ ಎಯ್ಡ್ ಜನಾನಾದ್ರೂ ಸಿಕ್ತದ್ರ[೨೨], ಅಂದೆ ಎಂಜ್ಲ ನುಂಗ್ದ. ಅಂವಾ ಹನ್ನೆಯ್ಡ ಉರ್ಸೆ[೨೩] ತಪಸ್ ಮಾಡೆ ಮುನಿಕಡಿಂದ ಉಂದ್ ಜಿಮ್ಕಾನಿ ಪಡ್ಕಂಡದ[೨೪]. ಅದ್ರ ಮ್ಯೆನ್ ಕುಳ್ತಕಂಡೆ "ಜೈ" ಎಂದ್ರೆ ಬೂಮೀನೇ ತಿರಗ್ತತ[೨೫]. ಅಂತಾ ಸಕ್ತೆ[೨೬] ಈದತ[೨೭] ಆ ಜಮ್‌ಕಾನಿಗೆ. ಬಟ್ಟನ ಹಿತ್ಲಲ್ಲೆ ಬಾಳ್ ಬಾಳಿಗಳೀದದು. ಎಯ್ಡ್ ಬಾಳೀಗೆ ಹಣ್ಣಾಗತ. ಆ ಹಣ್ಣ್ ಕೊನಿ ಬಟ್ಟ್ ತಂದೆ, ಅದ್ರ ಸೊಲ್ದಾ[೨೮]. ಕೊಟ್ಗೆಲಿಂದೆ ಹಾಲ್ ತಂದಾ. ಅದ್ಕೆ ತುಪ್ಪ, ಸೆಕ್ರಿ ಹಾಕೆ ಬೇಯ್ಸ್‌ದ. ಕಿರಿಕಂದಿ ಸ್ವೊಮಣಗೆ ಮೊಕ ತುಳೂಕೆ ಬಿಸ್ ನೀರ್ ಕೊಟ್ಟ. ಅದ್ರ ಅಂವ್ಗೆ ತಿಂಬೂಕ್ ಕೊಟ್ಟ. ಅಂವ ಬೇಕಟ್[೨೯] ತೆಂದಾ. ಬಟ್ಟಾ ಕಿರಿಕಂದಿ ಸ್ವೊಮಣ್ಣ ಹಾಸ್ಗಿ ಮ್ಯೆನ್ ಕಳ್‌ಸ್ದಾ. ಅಂವ್ನ ಮಿಯ್ಯೆಲ್ಲಾ ಹುರ್ಕ್ ಗಿಟ್ಟಿದ[೩೦] ಅಂದ್ಥೇಳೆ ಮಿಯ್ಗೆಲ್ಲಾ ಎಣ್ಣೆ ತಿಕ್ದಾ; ಕಾಲ್ ಅಡಸ್ದಾ. ಮತ್ತೆ "ತಂಗೆ[೩೧] ಸುರ್ತಿ ಬುಯ್ಡಿ ಕುಡ" ಅಂದ್ ಬಟ್ಟ ಕಿರಿಕಂದಿ ಸ್ವೊಮಣ್ಗೆ ಹೇಳ್ದ. ಕಿರಿಕಂದಿ ಸ್ವೊಮಣಾ ಅದ್ಕೆ ಒಪ್ಲೇಲಾ[೩೨]. ಬಟ್ಗೆ ಬೆಜಾರಾಗೆ[೩೩] ಮೊಕ[೩೪] ಸೆಣ್ಕೆ[೩೫] ಮಾಡ್ಕಂಡಾ. ಆಗೆ ಕಿರಿಕಂದಿ ಸ್ವೊಮಾಣ "ನಿನ್ನ್ ಜಿಮ್ಕಾನಿ ನಂಗ್ ಕೃಷ್ಣಾರ್ಪಣ ಕುಡ್‌ತ್ಯಾ ಅಂದ್?" ಕೇಳ್ದ. ಅದ್ಕೆ ಬಟ್ಟ ಉಪ್‌ದ[೩೬]. "ನಾನ ಕೊಟ್ ಮಾತೀಗೆ ತಪ್ಪವ್ನಲ್ಲ" ಅಂದ ಬಟ್ಟ ಜಿಮ್ಕಾನಿ ಕಿರಿಕಂದಿ ಸ್ವೊಮಾಣ್ಗೆ ಕೊಟ್ಟ. ಅಂವ ಬಟ್ಗೆ ಸುರ್ತಿ ಬುಯ್ಡಿಕೊಟ್ಟ.

ಬಟ್ಟ ಕೊಟ್ ಜಿಮ್ಕಾನಿ ತಕ್ಕಂಡೆ ಕಿರಿಕಂದಿ ಸ್ವೊಮಾಣ, ಮತ್ತುಂದ್ ರಾಜಸ್ತಾನ್ಕೆ ಹ್ವೊದಾ. ಅಲ್ಲುಂದ್ ದ್ಯೆವಸ್ತಾನ, ಅಲ್ಲೊಬ್ಬ ಬಟ್ಟ. ಅದ ಉಂದ್ ಸೆಣ್ ಊರ. ಅಲ್ಲೆ ಇಂವ ರಾತ್ರಿಗೆ ಕೊಳಲೂಬಲೇ ಇಲ್ಲ. ಆದ್ರೂ[೩೭] ದಿನ ಬರುವಟ್ಟೇ ಹುತ್ತಿಗೆ ದೇವಕನ್ನೇರ್ ಬಂದ್ರ. ಅಲ್ಲಿದ್ ಬಟ್ಗೆ ಅವ್ರ ಬರುವಾಗ್ನ ಬಿಳ್ಕ ನೋಡೆ ಗಾಬ್ರಿಯಾಯ್ತ. ಅಲ್ಲೆಯಿಲ್ಲೆ ಹುಕ್ಕಾಡ್ದಾ[೩೮]. ತನ್ನ ಪ್ರಾಣಾ ಹ್ವೊದ್ರೆ ಸೆಕ್[೩೯] ಅನಸ್ತ[೪೦]. ಆದ್ರೆ ಜೇಂವಾ[೪೧] ಬಿಡ್ವಾಂಗಿಲ್ಲಲ್ಲ[೪೨]. ದೇವ್ ಕನ್ನೇರ ಕಿರಿಕಂದಿ ಸ್ವೊಮಾಣ್ಣ ಕೋಡೆ ಮಾತಾಡ್ಕಂಡ್ ಹೋತರ. ಬಟ್ಟಾ ಅವ್ರ ನೋಡೆ ಮಳ್ಳಿಗ್ ಬೆದ್ದಾ. ಕಿರಿಕಂದಿ ಸೊಮಾಣ್ಣ ಒಳಗ್ ಮಾಡ್ಕಂಬ್ಕೆ ಬಟ್ಟ ಅಂವ್ನ ಕೋಡ್ ಹೋಗೆ, "ಆ ದೇವ್ಕನ್ನೇರ್ ನಿಂಕೋಡ್[೪೩] ಹ್ಯೆಂಗ್ ಬತ್ತರ?" ಅಂದ್ ಕೇಳ್ದ. ಆಗೆ ಅಂವ "ಈ ಜಿಮ್ಕಾನಿ ನೋಡಿ, ಇದರಿಂದಲೇ ಅವ್ರ ನಂಕೋಡ್[೪೪] ಬತ್ತರ ಅಂದ. ಆಗ ಬಟ್ಟ "ನಾನು ಹನ್ನೆಯ್ಡ್ ಉರ್ಸ್ ತಪಸ್ ಮಾಡೆ ಉಂದ್ ದೊಣ್ಣೆ[೪೫] ಪಡ್ಕಂಡಿ. ಅದ ಹೋಗಂದ್ರೆ ಹೋತೀದ್, ಬಾರಂದ್ರೆ ಬತ್ತೀದ.

---

೨೧. ಕಿಟಕಿಯಿಂದ ೨೨. ಸಿಗುತ್ತಿದ್ದರು ೨೩. ವರ್ಷ ೨೪. ಜಮಖಾನ ಪಡೆದುಕೊಂಡಿದ್ದನು ೨೫. ತಿರುಗುತ್ತಿತ್ತು ೨೬. ಶಕ್ತಿ ೨೭. ಇತ್ತು ೨೮. ಸುಲಿದ ೨೯. ಬೇಕಷ್ಟು ೩೦. ಹುರುಕುಬಿಟ್ಟಿತ್ತು ೩೧. ತನಗೆ ೩೨. ಒಪ್ಪಲಿಲ್ಲ ೩೩. ಬೇಸರವಾಗಿ ೩೪. ಮೋರೆ ೩೫. ಸಣ್ಣಗೆ ೩೬. ಒಪ್ಪಿದ ೩೭. ಆದರೂ ೩೮. ಹೊಕ್ಕಾಡಿದನು ೩೯. ಸಾಕು ೪೦. ಅನ್ನಿಸಿತು ೪೧. ಜೀವ ೪೨. ಬೊಡಿವ ಹಾಗಿಲ್ಲವಲ್ಲ? ೪೩. ನಿನ್ನ ಹತ್ತಿರ ೪೪. ನನ್ನ ಹತ್ತಿರ ೪೫. ದೊಣ್ಣೆ

ಹುಡಿಯಂದ್ರ್[೯೬] ಹುಡಿತೀದ, ತಾ ಅಂದ್ರೆ ತತ್ತೀದ" ಅಂದ. ಆಗೆ ಕಿರಿಕಂದಿ ಸ್ವೊಮಣ ಆ ದೊಣ್ಣಿ ಕಡೆ ಹೇಳೆ, ಮುದ್ಲನ್ ಬಟ್ಗೆ ಹುಡಿಸೆ, ತನ್ನ ಸುರ್ತಿಬುಯ್ಡಿ ತರಸ್ತೀಯಾ. ಆ ಮೈನೆ ಈ ಕಿರಿಕಂದಿ ಸ್ವೊಮಣ, ದೊಣ್ಣಿ, ಸುರ್ತಿಬುಯ್ಡಿ, ಮತ್ತೆ ಜಿಮ್ಕಾನಿ ಎಲ್ಲಾ ತಕ್ಕಂಡೆ ಮತ್ತುಂದ್ ರಾಜಸ್ತಾನ್ಕೆ ಹೋತ್ಯಾ. ಅಲ್ಲುಂದ್ ದೈವ್ರ ಮನೆ. ಅಲ್ಲೊಬ್ಬ ಬಟ್ಟ. ಆ ಬಟ್ಟನ್ ಕೋಡೂ, ಈ ಕಿರಿಕಂದಿ ಸ್ವೊಮಣಾ ಉಳ್ಕಂಬುಕೆ ಸೆಣ್ ಜಾಗಾ ಬೇಡ್ಕಂಡ್ ಅಲ್ಲೇ ಉಳಿತ್ಯಾ. ರಾತ್ರಿ ಸುರ್ತಿ ಬುಯ್ಡಿ ಊಬ್‌ತ್ಯಾ. ಆಗ ದೇವಕನ್ನೇರ ಜಗ್‌ಗುಡಸ್ತೇ ಅಂವಿದ್ದಲ್ಲಿಗೆ ಬತ್ತರ. ಬಟ್ಟ ಅವ್ರ ನೋಡೆ ಬಾಯಿ ಚಿಪ್‌ನೀರ್[೯೭] ಬಿಡತ್ಯಾ. ಆ ಬಟ್ನೊ ಈ ದೇವ್ ಕನ್ನೇರ್ ಬಂದದ್ ಈ ಸುರ್ತಿ ಬುಯ್ಡಿಯಿಂದ್ಲೇ ಅಂದ್ ತಿಳ್ಕಂತ್ಯ. ಮತ್ತೆ ಬಟ್ಟಾ ಹೇಳ್‌ತ್ಯಾ "ನಾನ ಹನ್ನೆಯ್ಡು ಉರ್ಸೆ ತಪಸ್ ಮಾಡೆ, ಈ ಕಟ್ಟಿ ಚೇಲಾ[೯೮] ಪಡ್ಕಂಡಿ, ಇದ್ರಿಂದ್[೯೯] ನಾವ್ ಕೇಳ್ದಟ್[೧೦೦] "ಪವ್ನ" ಉದ್ರತೀದ[೧೦೧]" ಅಂದ. ಆಗೆ ಕಿರಕಂದಿ ಸ್ವೊಮಾಣಾ ತನ್ ಸುರ್ತಿ ಬುಯ್ಡಿ ಕುಟ್ಟೆ, ಅವ್ನ ಕೈಲಿಂದೆ[೧೦೨] ಕಟ್ಟಿ ಚೇಲ ಪಡಕಂತ್ಯಾ[೧೦೩].

ಈ ಕಡೀಗ್ ಬಂದೆ, ತನ್ ದೊಣ್ಣಿ ಕಳೀಸ್‌ಕುಟ್ಟೆ, ಬಟ್ಗೆ ಹೊಡ್ತ ಹಾಕ್ಸೆ, ಬಟ್ನಕೈಲಿದ್ದ್ ಸುರ್ತಿ ಬುಯ್ಡಿ ತರ್‌ಸ್ಕಂತ್ಯ. ಅಲ್ಲೆ ಬಟ್ಟಾ ನಿಟ್ ತಪ್[೧೦೪] ಬೀಳ್ತ್ಯಾ. ಈ ಇತ್ಲಾಗೆ ಕಿರಿಕಂದಿ ಸ್ವೊಮಣ, ಜಿಮ್ಕಾನ್ದ ಮೈನ್ ಕುಳ್ತೆ "ಜೈ" ಅಂದ್ ಹೇಳ್‌ತ್ಯಾ. ಆ ಜಿಮ್ಕಾನೆ ಪ್ರಥ್ವೀನೇ ಸುತ್ ಹಾಕೆ, ಕಿರಿಕಂದಿ ಸ್ವೊಮಣ್ನ ಉಂದ್ ಅರ್ಸುಮನಿ ಮುಂದೆ ಇಳಿಸ್ತ. ಅರಸ್ನ ಮನಿಲೆ, ಕುದ್ರಿ ಕಾವರು, ದನ ಕಟ್ವರು, ಅಂದೆ ಸಾವ್ರಜನ ಆಳ. ಅವ್ರ ಕೆಲ್ಸ ಮಾಡೂದ್ ನೋಡೆ ಆನಂದ ಪಟ್ಟ. ಕಿರಿಕಂದಿ ಸ್ವೊಮಣ, ಅಲ್ಲೆ ರಾಜ್ನ ಕೋಡೆ ಕೆಲ್ಸ ಕೇಳ್ದ. ರಾಜ ತಮ್ಗೆ ಎಲ್ಲಾ ಕೆಲ್ಸಕ್ಕೂ ಆಳ್ ಏವ್ರ. ಕೆಲ್ಸ್‌ಕೆ ಯಾರೂ ಬೇಕಾಗೇಲ[೧೦೫]. ಅಂದ. ಆದ್ರೂ ರಾಜ್ಗೆ ಒತ್ತಾಯ ಮಾಡೆ, ಕಿರಿಕಂದಿ ಸ್ವೊಮಣ ಕೆಲ್ಸ ಪಡ್ದ. ಇಂವ್ಗೆ ರಾಜ ತನ್‌ಮಗ್ಳು ಮತ್ತೆ ಪರ್ದಾನಿ ಮಗ ಇವ್ರ ಸಾಲೀಗ್ ಹೋಗ್ವಾಗೆ ಪುಸ್ತಕ ಹುತ್ಕಂಡ್[೧೦೬] ಹೋಗೂ ಕೆಲ್ಸ ಉಪ್‌ಸ್ದಾ. ಕಿರಿಕಂದಿ ಸ್ವೊಮಾಣ ಆ ಕೆಲ್ಸಕೆ ಉಪ್ದಾ.

ರಾಜ್ನ ಮಗ್ಳು, ಪರ್ದಾನಿ ಮಗ ಯಾವ್ ಕೆಲ್ಸ ಹೇಳ್ದ್ರೂ ಕಿರಿಕಂದಿ ಸ್ವೊಮಾನಾ "ಹೂಂ" ಅಂತದ, ಅಂದ್ ಹೇಳೆ ಅವ್ರ ಅಂವ್ಗೆ "ಹೂಂಕಾರ" ಅಂದ್ ಹಿಸ್ರ್ ಇಕ್‌ದ್ರ[೧೦೭]. ಹೀಂಗಿರುವಾಗೆ ಉಂದ್ಸರಿಗೆ[೧೦೮] ರಾಜ್ನ ಮಗ್ಳಿಗೆ ಉಂದ್ ರಾಜ್‌ಸ್ತಾನ್ದ ನಿಂಟಸ್ತನ[೧೦೯] ಬಂತ. ರಾಜ ಅದ್ಕೆ ಉಪ್ದ. ಜಾತ್ಕ ನೋಡೆ ಮುದಿ ನಿಚ್ಚಯ ಮಾಡ್ತರ. ರಾಜ್ನ ಮಗ್ಳಿಗೆ ಇದ ತಿಳಿತ. ಅದ್ಕೆ ಪರ್ದಾನಿ ಮಗ್ನ ಬಿಟ್ ಹೋಗೂಕೆ ಬೆಜಾರಾಯ್ತ.

---

೯೬. ಹೊಡೆಯೆಂದರೆ ೯೭. ಲಾಲಾರಸ, ಜೊಲ್ಲು ೯೮. ಸಾಮಾನು ತುಂಬುವ ಚೀಲ ೯೯. ಇದರಿಂದ ೧೦೦. ಕೇಳಿದಷ್ಟು ೧೦೧. ಉದುರುತ್ತದೆ ೧೦೨. ಅವನ ಹತ್ತರಿಂದ ೧೦೩. ಪಡೆದುಕೊಳ್ಳುತ್ತಾನೆ ೧೦೪. ಸ್ಮತಿತಪ್ಪಿ ೧೦೫. ಬೇಕಾಗಿಲ್ಲ ೧೦೬. ಹೊತ್ತುಕೊಂಡು ೧೦೭. ಇಟ್ಟರು ೧೦೮. ಒಂದು ಸಲ ೧೦೯. ನೆಂಟಸ್ತಿಕೆ

ಆಗೆ ಅದ ಪರ್ದಾನಿ ಮಗಗೆ ತನ್ನ ಬೆಜಾರಾ ಹೇಳ್ಕಂತ. ಆಗ ಪರ್ದಾನಿ ಮಗ ಅದ್ಕೆ ಹೇಳ್ತ್ಯ, "ನೀ ಬೆಜಾರಾ ಮಾಡ್ಕಣ್‌ಬ್ಯೆಡಾ[೧೧೦]. ನಾನ ನನ್ ಅಪ್ಪನಕೋಡಿಂದೆ[೧೧೧] ಹಣ ತಕ್ಕಂಡ್, ಕುದ್ರಿ ಹತ್ಕಂಡ್ ಬತ್ತಿ, ನೀನ ಅಸ್ವತ್ ಕಟ್ಟಿಮ್ಯೆನ್ ಬಂದ್ ರಾತ್ರಿಗೆ ಮನ್ಗ[೧೧೨]. ನಾನೂ ಅಲ್ಲಿಗ್ ಬತ್ತಿ. ಬ್ಯೆರೇ ಊರಿಗೆ ಎಯ್ಡ್ಹೊ ಜನ ಹೋಗ್ಬನಿ" ಅಂತ್ಯಾ. "ಹೂಂಕಾರ" ಅವ್ರ ಮಾತ್ ಕೇಳ್ದ. ನೆಟ್ಟಗೆ ಪರ್ದಾನಿ ಮನಿಗ್ ಹೋಗೆ, ತಲಿಮ್ಯೆನನ್ ಪುಸ್ತಕ ಚೇಲಾ ದೊಡ್ಡಕ್ ಸಪ್ಪ ಬರೂಹಂಗೆ ಹುತಾಕ್ದ[೧೧೫]. ಸಪ್ಪ ಕೇಳಿ ಮನಿಯವ್ರ" ಎಂತಕ್ ಹಂಗ್ ಪುಸ್ತಕ ಚೇಲಾ ಹುತಾಕ್ದೆ" ಅಂದ್. ಆಗೆ ಹೂಂಕಾರ, "ನಿಮ್ ಮಗ ಸಾಲೀಲೇನ್[೧೧೬] ಕಲೀತ್ಯಾ[೧೧೭] ಅಂದ್ ನೀವೇನಾದ್ರೂ ಕೇಳ್‌ದ್ರೆ?[೧೧೮] ಇಲ್ಲಲಾ[೧೧೯]. ನಿಮ್ ಮಗ ಅರ್ರು ಮಗ್ಳು ಸಾಲೀಲ್ ಬರಾಕಲೂದಲ[೧೨೦]". ಅಂದ. "ಹೂಂಕಾರ" ಆ ದಿನ ಮಾತ್ರ ಮಾತಾಡ್‌ದ್ದ[೧೨೧]. ಆಗೆ ಪರ್ದಾನೆ ಮಗಗೆ ಕಲ್ತದ್ದ ಓದ್ ಹೇಳ, ಅಂದ. ಹುಡ್ಗ ಓದತೇ ಹ್ವೊದಾ. ತಪ್ಪ್ ಓದ್ಲೇಲಾ[೧೨೨].

ಈ ಕಡಿಗೆ ಹೂಂಕಾರ ಉಣ್ಣೇ[೧೨೩] ಪ್ಯೆಂಟ್ ಹಾಕಂಡ. ತಲಿಗ್ ಹ್ಯಾಟ್ ಇಕ್ಕಂಡ, ಸಿಸ್ತಾಗ್ ಅಸ್ವತ್ ಕಟ್ಟೀಗ್ ಹ್ವೊದಾ, ಕಟ್ಟೀಮ್ಯೆನ್ ಮನಗ್ದ. ಈ ಕಡೀಗೆ ಅರಸ್ನ ಮಗ್ಳ ಅಪ್ನ ಕುದ್ರಿಯೇರ್ಕ್ಯಂಡ್ ಹೋಯ್ತು. ಅಸ್ವತ್ ಕಟ್ಟೀಗ್ ಬಂದೆ ಇಂವ ಪರ್ದಾನಿ ಮಗ ಅಂದ್ ತಿಳ್ದೆ, "ನಾನ್ ಬರೂಕ್ ತ್ವೊಡಿ ತಡ ಆಯ್ತ ಏಳ್" ಅಂದೆ, ಅವ್ನ ಏಳಸ್ತ[೧೨೪]. ಎಯ್ಡ್ಹೊ ಜನ ಎಯ್ದ ಕುದ್ರಿಯೇರೆ ಉಂದ್ ಮನಿಗೆ ಹ್ವೊದ್ರ, ಅರಸ್ನ ಮಗ್ಳ ತೆಣಿಮ್ಯೆನ್ ಕುಳ್ತತ[೧೨೫]; ಹೂಂಕಾರ ಅಂಗ್ಳ ಗ್ವೊಡೀ[೧೨೬] ಮ್ಯೆನ್‌ಕುಳ್ತ. ರಾಜ್ನಮಗ್ಳ ಹಿಂತಿರ್ಗೆ ನೋಡ್ದ್ರೆ, ಬಂದವ ಹೂಂಕಾರ. ರಾಜ್ನ ಮಗ್ಳೀಗೆ ಬಾಳ್ ದುಕ್ಕ ಆಯ್ತು. ಮನಿಬಿಟ್ ಬಂದಾಗೀದ[೧೨೭]. ಏಗೆ ಏನ್ ಮಾಡೂದ ಅಂದ್ ಹೇಳೆ, ಅವ್ನ ಕರ್ಕಂಡೆ ಬ್ಯೆರೇ ಕಡೀಗ್ ಹೋಯ್ತು. ಹೋತೆ ಹೋತೆ[೧೨೮] ಹೂಂಕಾರ ತಂಗೆ ಹಸು ಆತೀದಂದಾ. ಆಗೆ ಅದ ಅಡ್ಗಿ ಬೇಯ್‌ಸ್ತ[೧೨೯]. ಹೂಂಕಾರ ಬಾಳಿ ಎಲಿ ತರೂಕ್ ಹ್ವೊದಾ. ಬರ್‍ವಾಗೆ ಉಂದೇ ಬಾಳಿ ಎಲಿ ತಂದಾ. ಮತ್ತುಂದ್ ಬಾಳಿ ಎಲೆ ಸೆಕ್ಕೇಲಾ[೧೩೦] ಅಂದಾ. ಇದ ಅಚ್ಚೀಗ್ ಇಚ್ಚೀಗ್ ನೋಡ್ತೆ, ಹೂಂಕಾರ್ ಒಂಡ್ ಬಾಳೀ ಎಲೀ ಮ್ಯೆನೇ ಒಂಡ್ತ[೧೩೧]. ಮಾರನೇ ದಿನ ಹೂಂಕಾರ ಅಡಗೀ ಸಾಮಾನ್ ತಂದಾ. ಬಾಳಟ್ಟ ಬಾಳಿ ಎಲಿನೂ ತಂದ. ಅರಸ್ನ ಮಗ್ಳ "ನಿನ್ನಾಗೆ ನಂಗೆ ಬಾಳಿ ಎಲಿ ಯಾಕ್ ಕೊಡೇಲಾ[೧೩೨]" ಅಂದ್ ಕೇಳ್ತ. "ನಿನ್ನಾಗೆ ನಂಗೆ ಬಾಳೆಲೆ ಸೆಕ್ಲೇಲಾ ಇಂದ್ ಸಿಕ್ತ" ಅಂದ.

---

೧೧೦. ಮಾಡಿಕೊಳ್ಳಬೇಡ ೧೧೧. ಅಪ್ಪನ ಹತ್ತಿರಿಂದ ೧೧೨. ಮಲಗು ೧೧೩. ಇದ್ದದ್ದು ೧೧೪. ಗೊತ್ತೇ ೧೧೫. ಒಗೆದನು ೧೧೬. ಶಾಲೆಯಲ್ಲೇನು ೧೧೭. ಕಲಿಯುತ್ತಾನೆ ೧೧೮. ಕೇಳಿದಿರೇನು? ೧೧೯. ಇಲ್ಲವಲ್ಲ ೧೨೦. ವಿದ್ಯೆಯನ್ನು ಕಲಿಯುವುದಿಲ್ಲ ೧೨೧. ಮಾತನಾಡಿದ್ದು ೧೨೨. ಓದಲಿಲ್ಲ ೧೨೩. ಉಣ್ಣೆಯ ೧೨೪. ಎಬ್ಬಿಸಿದಳು ೧೨೫. ಕುಳಿತಳು ೧೨೬. ಗೋಡೆಯ ೧೨೭. ಬಂದಾಗಿದೆ ೧೨೮. ಹೋಗುತ್ತ ೧೨೯. ಬೇಯಿಸಿದಳು ೧೩೦. ಸಿಗಲಿಲ್ಲ ೧೩೧. ಉಂಡಳು ೧೩೨. ಕೊಡಲಿಲ್ಲ

ಅವ್ರ ಹ್ವೋದ್ ಊರ್‍ನ ರಾಜ, ಉಂದ್ ಸಪ್ತ[೧೩೩] ಇಟ್ಟದ. "ಹೊತ್ತರಿಂದ ಬಯ್‌ಸ್ರಿವರಿಗೆ ಯಾರ್ ಪಾವ್ನ[೧೩೪] ಎಣಿಸ್ತಾರೋ ಅವ್ರಿಗೆ ತನ್ನ ಮಗ್ಳ ಮುದಿ ಮಾಡ್ ಕುಡ್ತಿ. ಇದ್ರಲ್ ಸ್ವೋತವ್ರಿಗೆ[೧೩೫] ಕುದ್ರಿ ಲದ್ದಿ ತಿಗೂಕ್[೧೩೬] ಹಾಕ್ತಿ" ಅಂದ ಸಪತ. ಇಟ್ಟೋ ರಾಜಕುಮಾರ್‍ರ ಮುಟ್ಟಿಯಿಂದ ಪಾವ್ನ ತುಂಬಕಂಡ್ ಬಂದ್ ಪಾವ್ನ ಎಣಿಸಿದ್ರೂ ಎಯ್ದೇ ತಾಸ್ನಲ್ ಮುಗ್ದ ಹೋಯ್ತು. ರಾಜ ಅವ್ರ ಕುದ್ರಿ ಲದ್ದಿ ತಿಗೂಕ್ ಹಾಕ್ದ. ಹೂಂಕಾರ ಹರ್‍ಕಂಗಿ[೧೩೭] ಹಾಕಂಡ್ ಅಲ್ಲಿಗ್ ಹ್ವೋದಾ. ಅವ್ನ ನೋಡೆ ಅಲ್ಲೆದ್ದವ್ರೆಲ್ಲ ನಗಿಯಾಡ್ರ. "ನಿಂಗ್ಯಾಕೆ ಈ ಪಂತ" ಅಂದ್ ಹೇಳ್ದ್ರ. ಅಂವ ಮಾತಾಡ್ದೆ ಪಾವ್ನ ಅಳೂಕ್ ಸುರುಮಾಡ್ದ. ಬೆಳಗಾಗ್ನಿಂದ ಸಂಜೀವರಿಗ್ ಲೆಕ್ಕಾ ಮಾಡ್ದ್ರೂ, ಕಟ್ಟೀ ಚೇಲ್ದ ಪ್ರಬಾವ್‌ದಿಂದ ಲೆಕ್ಕ ಮುಗೀಲೇಲಾ[೧೩೮]. ಆಗೆ ರಾಜ್ನ ಮಗ್ಳ ಮಾಲಿಯಿಕ್ಕೂಕೆ ಬಂತ. ಆಗೆ ಹೂಂಕಾರ "ನಾ ನಿನ್ ಬಿಡೂದಲ[೧೩೯]. ಆದ್ರೆ ನಾ ತಂದ್ ಮತ್ತುಂದ್ ಹಿಣ್ ಈದ. ಅದ್ರ ನಿನ್ನ ತಂಗಿ ಅಂದ್ ನೀ ಇಕ್ಕಣ್ಬೇಕ[೧೪೦]. ನಾನ ಇಲ್ಲಿಗ್ ಮತ್ತುಂದ ಸರ್ತಿಗೆ[೧೪೧] ಬರೂವರಿಗೂ ನೀವ ಪ್ರೀತಿಯಿಂದ ಎರ್‍ಬೇಕ". ಅಂದ್ ಹೇಳ್ದ, ಮತ್ತೆ ಕುದ್ರಿ ಲದ್ದಿ ತಿಗು ರಾಜ್‌ಕುಮಾರರ ಬಿಟ್ ಬಿಡೂಕ್ ಹೇಳ್ದ. ಬಿಡ್ಗಡಿಯಾದ ರಾಜ್‌ಕುಮಾರ್‌ರೆಲ್ಲ ಇವ್ನ ಕಾಲಿಗ್ ಬೆದ್ರ[೧೪೨]. "ನೀನ ದೇವತಾ ಮನ್‌ಸ್ಯ. ನೀನ ಪವ್ನ ಲೆಕ್ಕ ಮಾಡ್ದ್ ನೋಡೆ ನಮ್ಗೆ ದಂಗಾಯ್ತು[೧೪೩]". ಅಂದ್ ಹೇಳಿ ಹ್ವೋದ್ರ. ಆಗೆ ಈ ಕಿರಿಕಂದಿ ಸ್ವೋಮಣ " ಈ ಕಟ್ಟಿ ಚೇಲದಿಂದೆ ನಾನ ಮನಿ ತುಂಬ್ ಪಾವ್ನ ಮಾಡ್ಕಂಬುಕ್ ಅಡ್ಡಿಲ್ಲ" ಅಂದ್ ತನ್ನಲ್ಲೇ ಅಂಡ್ಕಂಡ. ಬೈಲಲ್ಲೆ ಉಂದ್ ಹಳ್ಳಿ ನೋಡ್ದ. ಅಲ್ಲೆ ಮನಿ ಕಟ್ವರಿಗೆ "ದಿನ್ಕುಂದ ಪಾವ್ನ ಕುಡ್ತಿ ಮನಿ ಕಟ್ಕುಡಿ[೧೪೪]" ಅಂದ ಹೇಳ್ದ. ಅಲ್ಲೇ ಉಂದ್ ಸಾಸಮಣಿ ನಾಗನ ನೋಡ್ದ. ಅದ್ಕೆ ಇಪ್ಪತ್ತೇಳ್ ಹೆಡೆ. ರಸ್ತಿ ಮ್ಯನೇ ಮನ್ಗೀದ; ಬಗೀಲ್[೧೪೫] ಹಿಂದೆ ಸರ್‍ಕಂಡ[೧೪೬]. ಅದ ಬದೀಗ್ ಹ್ವೋಗ್ಲಂದೆ ಉಂದ್ ಹಳ್ ಹೊಡ್ದ. ಸಾಸ್‌ಮಣಿ ನಾಗಕ್ಕೆ ಉಂದ್ ಬಾವಾಗತ[೧೪೭]. ಹಳ್‌ಹೋಗೆ ಅದ್ರ ಬಾವ್ನಮ್ಯನೆ ಬಿದ್ದೆ ಅದ್ರ ಬಾವ ಉಡ್ದ್[೧೪೮] ಹೋಯ್ತು. ಅದ "ತಂಗೆ ಬಾಳ್‌ದೊಡ್ಡ ಉಪ್ಕಾರ ಆಯ್ತು" ಅಂದ್‌ಹೇಳ್ತ. ಕಿರಿಕಂದಿ ಸ್ವೋಮಣ್ಗೆ "ಮಗ್ನೆ ನನ್ ಬಂಗಾರ್ ರುಪಾಯ್ನ ಹಂಡಿ ತೋರಸ್ತಿ ಬಾ" ಅಂದ್ ಹೇಳ್ತ. ಆಗೆ ಅಂವ "ನಂಗೇನೂ ಅದ ಬೇಕಾಗೇಲ[೧೪೯]. ನಂದುಂದ್ ಸೆಣ್ ಕೆಲ್ಸ ಈದ. ಆ ಹುತ್ತೀಗೆ[೧೫೦] ನೀನ ಬರ್‍ಬೇಕ". ಅದ್ಕೆ ಸಾಸ್ ಮಣಿನಾಗ ಉಪ್ತ.

ಕಿರಿಕಂದಿ ಸ್ವೋಮಾಣ್ನ ಮನಿ ಕಟ್ಟೂಕೆ ನೂರಾರ್ ಜನ ಹ್ವೋದ್ರ, ದಿನಾ ದಿನಾ ಹಿಚ್ ಹಿಚ್ಗಿ[೧೫೧] ಜನ ಹೋತೇ ಉಳ್ದ್ರ. ಮೂರ್ ತಿಂಗ್ಳಲ್ಲೆ ಮನಿ ಕೆಲ್ಸ ಮುಗೀತ.

---

೧೩೩. ಶಪಥ ೧೩೪. ಪವನ ೧೩೫. ಸೋತವರಿಗೆ ೧೩೬. ತೆಗೆಯಲು ೧೩೭. ಹರಿದ ಅಂಗಿ ೧೩೮. ಮುಗಿಯಲಿಲ್ಲ ೧೩೯. ಬಿಡುವದಿಲ್ಲ ೧೪೦. ಇಟ್ಟುಕೊಳ್ಳಬೇಕು ೧೪೧. ಬಾರಿ ೧೪೨. ಬಿದ್ದರು ೧೪೩. ಆಶ್ಚರ್ಯವಾಯ್ತು ೧೪೪. ಕಟ್ಟಿಕೊಡಿ ೧೪೫. ಸ್ವಲ್ಪ ೧೪೬. ಸುರಿದುಕೊಂಡ ೧೪೭. ಕುರು, ಬಾವು, ಹುಣ್ಣು ಆಗಿತ್ತು ೧೪೮. ಒಡೆದು ೧೪೯. ಬೇಕಾಗಿಲ್ಲ ೧೫೦. ಸಮಯಕ್ಕೆ ೧೫೧. ಹೆಚ್ಚು ಹೆಚ್ಚಿಗೆ

ಆಗೆ ಅಂವ್ಗೆ ಉಂದ್ ಅನ್‌ಚತ್ರ[೧೫೨] ಇಕ್ಕೂ[೧೫೩] ಮನ್ಸಾಯ್ತು. ಅನ್‌ಚತ್ರಯಿಟ್ಟೆ ಅನ್‌ದಾನ ಮಾಡ್ದ, ಉಸ್ತ್ರದಾನ ಮಾಡ್ದ.

ಈ ಕಡೀಗೆ[೧೫೪] ಕಿರಿಕಂದಿ ಸ್ವೊಮಾಣ ಮನಿಬಿಟ್ಟ್ ಹ್ವೊದ್ ಮಾರನೇ ದಿನದಿಂದೇ ಅವ್ನ ಮನಿಯವ್ರೀಗೆಲ್ಲ ಬಡ್ತನ ಬಂದ್‌ಬೆಟ್ತು[೧೫೫]. ಅವರ ಹೊಲ, ಮನಿ, ದನ, ಕರು, ಎಲ್ಲ ಕೈತಪ್ಪ್ ಹ್ವೊದು. ಕುದ್ರಿ ಸಾರೂಟೆಲ್ಲ ಬ್ಯೆರೇಯವ್ರ ಸ್ವೊದೀನಾದ್ವು[೧೫೬]. ಮನೆಯವರೆಲ್ಲ ದೊಂಬರಾಟಾ ಮಾಡೆ ಉಂಬೂಸ್ತಿತೆ[೧೫೭] ಬಂತ. ಅವ್ರೆಲ್ಲಾ ಹಾಂಗೇ ದೊಂಬ್ರಾಟಾ ಮಾಡ್ತೇ ಹೋಗ್ವಂತಾ ಹುತ್ನಲ್ಲಿ[೧೫೮] "ಹೂಂಕಾರ" (ಕಿರಿಕಂದಿ ಸ್ವೊಮಣ್ಣ) ಪುಕ್ಸಟೆ[೧೫೯] ಊಟ ಹಾಕು ಸುದ್ದೆ ಸಿಕ್ತ. ಇವ್ರ ದೊಂಬ್ರಾಟಾ ಆಡ್ತೇ ಆಡ್ತೇ ಅಲ್ಲಿಗೆ ಹೋಗ್ ಮುಟ್ದ್ರ. ಅವ್ರಿಗೂ ಅಲ್ಲೆ ಎಯ್ದು ದಿನಾ ಅನ್ನಾ ಹಾಕ್ದ್ರ. ಅವ್ರ ಉಂಬ್ವಾಗೆ ಕಿರಿಕಂದಿ ಸ್ವೊಮಣ್ಣ ಅವ್ರ ತನ್ ಅಪ್ಪಾ, ಅವ್ವಿ ಅಣ್ದೀರಂದೆ ಗುತ್[೧೬೦] ಹೆಡ್ದ[೧೬೧]. ತನ್ನ ಮುದ್ಲನ್[೧೬೨] ಹಿಂಡ್ತೆ ಸರಗಿ ಮ್ಯೆನ್ ಕುಣೂದ್ ನೋಡೆ ಕಣ್ಣೀರ್ ಬೆಟ್ಟ. ಅಲ್ಲಿಂದ್ ನೆಟ್ಟಗ್ ಮನೀಗ್ ಬಂದ. ತನ್ನ ಎಯ್ದೂ ಹಿಂಡ್ರಾ ಅವ್ರೆದ್ದಲ್ ಕರ್‌ಕಂಡ್ ಹ್ವೊದಾ. ಆಗೆ ಆ ದೊಂಬ್ರ ಇವ್ನ ಮುಂದೆ ದೊಂಬ್ರಾಟಾ ಆಡೂಕ್ ಸುರು ಮಾಡ್ದ್ರ. ಆಗ ಈ ಕಿರಿಕಂದಿ ಸ್ವೊಮಣ ಇನ್ನೂ ಮುದಿ ಆಗ್ದೇ ಎದ್ದ ಅರಸ್ನಮಕ್ಳ ಕೋಡೆ ದೊಂಬರಾಟ ಆಡ್ನೂಕ್ ಹೇಳ್ದ. ಮತ್ತೆ ನಾಳಾಗ್ ನಮ್ಮನೀಲೆ[೧೬೩] ದೊಡ್ಡ ಕಾರ್ಯ ಎಲ್ಲರೂ ಬರ್ಬೇಕ್ ಅಂದ್ ಹೇಳ್ದ. ಸಾವ್ರಾರ್ ಜನ್ರ ಅಡ್ಗಿ ಕೆಲಸಕ್ಕ್ ನೇಮ್ಸ್ದ. ಸಾಸಮಣಿ ನಾಗನ ನೆನೆದ. ಆಗೆ ಸಾಸ್ ಮಣಿನಾಗ ಬೋರ್‌ಗುಡ್ತೇ[೧೬೪] ಬರುವಾಗೆ ಎಲ್ರೂ ಓಡ್ದ್ರ[೧೬೫]. ಸಾಸಮಣಿ ನಾಗ ರಾಜಂಗ್ಳದಲ್ಲೆ ತಳಿಹೂಡೆ[೧೬೬] ಹೆಡಿಯಿತ್[೧೬೭] ಮನಗ್ತ. ಇಂವ ಸುರ್‌ತಿ ಬುಯ್ಡಿ ಹಿಡ್ದೆ ಊಬದಾ[೧೬೮]. ಎಲ್ಲಾ ಜನ್ರೂ ಅವ್ನ ನೋಡೂಕ್ ಹತ್ತದ್ರ[೧೬೯]. ಸುರ್ತಿ ಬುಯ್ಡಿ ದಿನಿ ಕೇಳೆ ಅಚ್‌ಕನ್ನಿ ದೇವ್ ಕನ್ನೇರ್ ಬಂದ್ರ. ಅಂಗ್ಳದಲ್ಲೆ ಕುಣೂಕ್[೧೭೦] ಸುರುಮಾಡ್ದ್ರ. ಆಗೆ ದೊಂಬ್ರ[೧೭೧] ಯಾಸ್ದಲ್ಲೆದ್ದ[೧೭೨] ಕಿರಿಕಂದಿ ಸ್ವೊಮಣ್ಣ ಅಪ್ಪಾ, ಅವ್ವಿ, ಅಣ್ಣ ಎಲ್ಲ ಉಂದ್ ಬದಿ ಬಾಜೂಗ್ ಕುಳ್ತದ್ರ. ಕಿರಿಕಂದಿ ಸ್ವೊಮಣ ಅವ್ರ ಮುಂದ್ ಬರೂಕ್ ಹೇಳ್ದ. ಮತ್ತೆ ಅಪ್ಪ ಅವ್ವೀಗ್ "ನಾನ ನಿಮ್ಮ ಮಗ ಕಿರಿಕಂದಿ ಸ್ವೊಮಣ" ಅಂದ್ ಹೇಳ್ದ. "ನಾನ ಈ ಹಿಂದ್ ಹೇಳ್ದಂಗೇ ಇಪ್ಪತ್ತೇಳ್ ಹೆಡಿ ಸಾಸಮಣಿ ನಾಗನ ಹೆಡಿಮ್ಯೆನೆ ನಿಂತೆ ಕೊಳಲೂಬ್ತೇ, ಅಚ್ಚಕನ್ನಿ ದೇವ್ಕನ್ನಿಯರ್ ನರ್ತನ ಮಾಡೂದ್ ನೋಡ್ವೆ ಅಂದ್ ಹೇಳದ್ದ್ ನೆನಪ್ ಮಾಡ್‌ಕೊಟ್ಟ. ತಮ್ನ ಮಾತ್ ಕೇಳೆ, ಕಿರಿಕಂದಿ ಸ್ವೊಮಣ್ಣ ಅಣ್ಣಂದೀರ ಧ್ಯೆರ್ಯ ಕುಂದತ.

---

೧೫೨. ಅನ್ನಛತ್ರ ೧೫೩. ಇಡುವ ೧೫೪. ಇತ್ತಕಡೆ ೧೫೫. ಬಂದು ಬಿಟ್ಟಿತು ೧೫೬. ಸ್ವಾಧೀನವಾದವು ೧೫೭. ಉಣ್ಣುವ ಸ್ಥಿತಿ ೧೫೮. ವೇಳೆಯಲ್ಲಿ ೧೫೯. ಪುಕ್ಕಟೆ ೧೬೦. ಗುರುತು ೧೬೧. ಹಿಡಿದನು ೧೬೨. ಮೊದಲಿನ ೧೬೩. ನಮ್ಮ ಮನೆಯಲ್ಲಿ ೧೬೪. ಬುಸುಗುಡುತ್ತ ೧೬೫. ಓಡಿದರು ೧೬೬. ತಲೆಯನ್ನು ಹಾಕಿ ೧೬೭. ಹೆಡೆಯೆತ್ತಿ ೧೬೮. ಊದಿದನು ೧೬೯. ನೋಡ ಹತ್ತಿದರು ೧೭೦. ಕುಣಿಯಲಿಕ್ಕೆ ೧೭೧. ದೊಂಬರ ೧೭೨. ವೇಷದಲ್ಲಿದ್ದ

ಕಿರಿಕಂದಿ ಸ್ವೊಮಣ್ಣ ತಲಿ ಕಡೂಕ್ ಹ್ವೊದದ್ ನೆನಪಾಯ್ತು. ತಮ್ ತಲಿಯ ತಮಾ ಕಡೀಬವ್ದೆಂದ್[೧೭೩] ಅವ್ರ ಓಡೂಕ್[೧೭೪] ಹತ್ತದ್ರ. ತಮ್ಮ ಅವ್ರಿಗೆ ಧೈರ್ಯ ಕೊಟ್ಟ, ತಾನ್ ಹಾರ್ಸ್ಕಂಡ್ ಹ್ವೊದ್ ಹಿಣ್ಮಕ್ಳ ಅಪ್ಪಂದಿರಾದ ರಾಜರ ಕರ್ದ. "ನಿಮ್ ಮಕ್ಳ ನಾನ ಕೆಡ್ಸ್ಲೇಲಾ[೧೭೫], ಅವರ ಕರ್ಕಂಡ್[೧೭೬] ಹೋಗಿ" ಅಂದಾ. ಆಗೆ ಆ ರಾಜ್ರ ತಮ್‌ಮಕ್ಳ ಅಂವ್ಗೇ ಮುದಿಯಾಗೂಕ್ ಹೇಳೆ, ಅದೇ ಚಪ್ರದಲ್ಲೇ[೧೭೭] ಕಿರಿಕಂದಿ ಸ್ವೊಮಣ್ಣೆ ಮುದಿ ಮಾಡ್ ಕೊಟ್ರ. ಅಪ್ಪ ತಂಗೆ ತೊಂದ್ರಿ ಕೊಟ್ಟದ್ಕೆ ಅಂವ್ಗೆ ದನಕಾಯೂಕ್ ಹಾಕ್ದ. ಅಣ್ದೀರಿಗೆ ಸವ್ದಿ ಉಡೂಕ್ ಹಾಕ್ದ. ಅಣ್ಣನ ಹಿಂಡ್ರಿಗೆ ಯಾವ ಕೆಲಸ ಕೊಡ್ಲೇಲಾ. ಅವ್ವೀ ಕೆಲ್ಸ ಮಾಡೂಕೆ ನಾಕ್ ಜನ ಆಳೆಟ್ಟ. ಅಂತೂ ಎಲ್ರೂ ಸುಕವಾಗ್ ರಾಜೀ ಕಾರ್‌ಬಾರ ಮಾಡ್ತೇ ಒಳ್ದ್ರ[೧೭೮].

---

೧೭೩. ಕಡಿಯಬಹುದೆಂದು ೧೭೪. ಓಡಲಿಕ್ಕೆ ೧೭೫. ಕೆಡಿಸಲಿಲ್ಲಾ ೧೭೬. ಕರೆದುಕೊಂಡು ೧೭೭. ಚಪ್ಪರದಲ್ಲೇ ೧೭೮. ಉಳಿದರು

೧೬. ಚಿನ್ದ ಮಂಡಿ ಕೂದ್ಲ ಹಿಣ್ಣ

ಉಂದ್ ಊರ್ನಲೆ ಒಬ್ ಬಟ್ಟ ಈದದಾ[೧]. ಅಂವ ದ್ಯೆವ್ರ ಪೋಜೇ[೨] ಮಾಡೆ ತನ್ ಹೊಟ್ಟಿ ತುಂಬ್ಕಂತದ[೩]. ಅಂವ ಉಂದ್ ಆಕ್ಳ ಸಾಕದಾ. ಉಂದಿನೆ ಆ ಆಕ್ಳ ಕರು ಹಾಕ್ತ. ಬಟ್ಟಾ ಆ ಆಕ್ಳ ಉಂದಿನಾನೂ ಬೆಟ್ಕೆ ಮೇಯೂಕ್ ಬೆಟ್ಟದ್ದಿಲ್ಲಾಗತ[೫]. ಉಂದಿನೆ ಆ ಬಟ್ಟಾ, ಆಕ್ಳು ಮತ್ ಕರು ಹುಲ್ ಮೇದ್ಕಾ ಬರುದಂದೆ ಬೆಟ್ಕೆ ಮೇಯೂಕ್ ಬೆಟ್ಟಾ. ಆಕ್ಳು ಮತ್ ಕರು ಮೇಯ್ತೇ ಮೇಯ್ತೇ ಉಂದ್ ಹೊಳಿ ಬದಿ ಬೆಟ್ಕೆ ಹ್ವೊದು. ಅವ ಹುಲ್ ಮೇಯೂದಾ ಉಂದ್ ಹುಲೆ ನೋಡ್ತ. ಪಟ್‌ನೇ ಬಂದ್ ಆಕ್ಳು, ಕರು ಅಡ್‌ಗಟ್ತ. ಆಗೆ ಹುಲಿ ಸಂಗ್ತೀಗೆದ್[೬] "ಹುಲಿ ಮರೆ, "ಅಮ್ಮಾ ಆಕ್ಳ ಮುರ್ದ್ ತೆನ್ಬ್ಯಡಾ. ಅದ್ರ ಸಂಗ್ತೀಗೆದ್ ಕರ ನಂಗೆ ಆಡೂಕ್ ಬೇಕ" ಅಂತ. ಆಗೆ ಹುಲೆ ಆಕ್ಳ ಮುರ್ದೆ ತೆನ್ನೇಲಾ[೭]. ಹುಲಿ ಮರೆ, ಆಕ್ಳಕರು ಸಂಗ್ತೀಗೇ ಆಡೂಕ್ ಹತ್ತತ. ಹುಲಿ ಮತ್ತೆ ಆಕ್ಳು ಇದೆಲ್ಲ ನೋಡೆ ಕುಸಿಯಾದು. ಬೈಸ್ರಿಗೆ ಆಕ್ಳು ಮತ್ ಕರು ತಮ್ ಕೊಟ್ಗೀಗೆ ಹ್ವೊದು.

ದಿನಾ ಆಕ್ಳ ಕರು, ಮತ್ ಹುಲಿ ಮರಿ ಚೆಂದಾಗ್ ಆಡ್ತೆ ಇರ್ತದು. ಉಂದಿನೆ ಆಕ್ಳ ಮೇಯ್ತೇ ಮೇಯ್ತೇ ದೋರ್ ಹೋಯ್ತು. ಆ ದಿನೆ ಹುಲಿಗೆ ತಿಂಬೂಕ್ ಏನೂ ಸೆಕ್ಲೇಲಾ[೮]. ಆಗೆ ಹುಲೆ ಹಸೂನ್‌ಕಿಚ್[೯] ತಡೂಕ್ ಆಗ್ದೆ, ಆಕ್ಳ ಮುರ್ದೆ ತಿಂದ್ ಬೆಟ್ತ. ಬೈಸ್ರೀಗೆ ತನ್ ಮರೆದ್ದಲ್ಲೆ ಬಂತ. ಆಗೆ ಅದ್ರ ಸಂಗ್ತೀಗೆ ಆಕ್ಳ ಕಾಣ್ದೇ ಹುಲಿಮರೆ ಅವ್ವಿಕೋಡೆ[೧೦], "ಆಕ್ಳ ಇಲ್ಲೋಯ್ತು?" ಅಂದ್‌ಕೇಳ್ತ. ಆಗೆ ಹುಲೆ, "ನಂಗೆ ಬಾಳ್ ಹಸುವಾಗತ, ಹಸೂನ್‌ಕಿಚ್ಚಿಗೆ ಆಕ್ಳ ಮುರ್ದ್ ತೆಂದೆ" ಅಂತ. ಆಕ್ಳಕರ ಆ ಮಾತ್ ಕೇಳೆ ಕಣ್ಣೀರ್ ಬೆಟ್ತ. ಆಗೆ ಹುಲಿಮರಿಗೆ ಸಿಟ್ ಬಂದೆ, "ನೀ ಹ್ಯಂಗ್ ಆಕ್ಳ ಮೊರ್ದೆ" ಅಂದ್ ಹುಲಿ ಕುತ್ಗಿಗ್ ಹಾರೆ ಹುಲಿ ಮುರ್ದೇ ಬೆಟ್ತ[೧೧]. ಮತ್ತೆ ಆಕ್ಳಕರು ಕರ್ಕಂಡೆ ಹುಲಿ ಮರೆ ಬೆಟ್ದಲ್ ತಿರ್‌ಗ್ತೇ ತಿರ್‌ಗ್ತೇ ಉಂದ್ ಅಸುವತ್ ಕಟ್ಟೇ ಬುಡ್ಕೆ ಬಂತ. ರಣಗುಡು[೧೨] ಬಿಸ್ಲ. ಉಂದ್ ಗಳ್ಗೆ ತಂಪೀಗ್ ಮನಿಕಂಬಾ ಅಂದ್ ಹೇಳೆ, ಎಯ್ಡೂ ಕಟ್ಟೆಮ್ಯೆನೆ, ಉಂದ್ರ ಮ್ಯೆನುಂದ್ ತಲಿ ಹಾಕಂಡ್ ಮನಿಕಂಡು.

ಆಗೆ ಸಿವ ಪಾರ್ವತಿ ಆಕಾಸ್ದ ಮ್ಯೆನಿಂದ್ ಹೋತೇ ಈದದ್ರ, ಹುಲಿಮರಿ ಆಕ್ಳ ಕರು ಸಂತೀಗ್ ಮನ್ದ ಚೋದ್ಯ[೧೩] ಕಂಡೆ, "ಇದೇನ್ ಇಚಿತ್ರ?" ಅಂತರ ಆಕಾಸ್ದ ಮ್ಯೆನಿಂದ್ ಕೆಳ್ಗ ಬಂದ್ ನೋಡ್‌ದ್ರೆ ಹುಲಿಮರಿ ಆಕ್ಳ ಕರು ಗಾಡ್ ನಿದ್ರಿ ಮಾಡ್ತವ.

---

೧. ಇದ್ದನು ೨. ಪೂಜೆಯನ್ನು ೩. ತುಂಬಿಕೊಳ್ಳುತ್ತಿದ್ದನು ೪. ಉಪಹಾರ ೫. ಬಿಟ್ಟಿದ್ದಿಲ್ಲ ೬. ಜೊತೆಗಿದ್ದ ೭. ತಿನ್ನಲಿಲ್ಲಾ ೮. ಸಿಗಲಿಲ್ಲಾ ೯. ಹಸಿವೆಯ ಬೆಂಕಿ ೧೦. ತಾಯಿ ಹತ್ತಿರ ೧೧. ಮುರಿದು ಬಿಟ್ಟಿತು ೧೨. ಭಯಂಕರ ೧೩. ಸೋಜಿಗ

ಸಿವ, ಪಾರ್ವತಿ ಅವ್ರ ಏಳ್ಸೆ ಅವ್ಕೆ ಉಂದುದ್ ಕತ್ತಿ ಕೊಟ್ರ. "ಈ ಕತ್ತೆ ನಾಸ[೧೪] ಆಗವರಿಗೂ ನೀವ್ ಸಾಯೂದಲಾ". ಅಂದ್ ಹೇಳೆ, "ನೀವ ಮನಸ್ರಾಗಿ" ಅಂದೆ ವರ ಕೊಟ್ರ. ಆಗೆ ಹುಲಿಮರೆ ಹುಲಿಯಪ್ಪನಾದ, ಆಕ್ಕಕರ ಬಸ್ವಪ್ಪನಾಯ್ತು[೧೫]. ಆ ಕತ್ತಿ ತಕ್ಕಂಡೆ ಹುಲಿಯಪ್ಪ ಮತ್ತೆ ಬಸ್ವಪ್ಪ ಎಯ್ಡೂ ಜನ ಉಂದುದ್ ದಿಕ್ಕೀಗ್ ಹೋತರ[೧೬].

ಬಸ್ವಪ್ಪ ಮುಂದೆ ಮುಂದೆ ಹ್ವೊದ್ಮೆನೆ ಅಂವ್ಗೆ ಉಂದ್ ಅಂಗ್ಡೆ[೧೭] ಸಿಕ್ತಿದ. ಅಲ್ ಅಂವ "ಕಡ್ಮಿದರ್ದ[೧೮] ಸಾಮಾನ್ ಯಾವ್ದೀದ" ಅಂದ್ ಕೇಳ್ತ್ಯ. ಅಂಗ್ಡಿಯಂವ "ಬಿಲ್ಲಿಗ್[೧೯] ಮೂರ್ ಹುಳಚೀ[೨೦] ಹಣ್ಣ" ಅಂತ್ಯ. ಬಸ್ವಪ್ಪ ಉಂದ್ ಬಿಲ್ಲೀ ಕುಟ್ಟೆ[೨೧] ಮೂರ್ ಸೇರ್ ಹುಳ್ಚೀ ಹಣ್ ತಕಂಡ್ ತಿಂತ್ಯ. ತೆಂದ್[೨೨] ಬೇಜಾ[೨೩] ಹುತಾಕ್ತೇ[೨೪] ಮುಂದೆ ಮುಂದೆ ಹೋತ್ಯ. ಅಂವ ಬೇಜ ಹುತಾಕ್ದಲ್ಲೆ ಉಂದುಂದೇ ಹುಳ್ಚಿಗಿಡ ಹುಟ್ತೇ ಹೋತೀದ. ಹಣ್ ತಿಂದಾದ ಮ್ಯೆನೆ ಕೈ ತುಳುಕೆ ನೀರ್ ಅರ್‌ಸ್ತ್ಯ[೨೫]. ಸಮೀಪ್ದಲ್ ನೀರೇ ಇಲ್ಲ. ದೋರ್ ಹ್ವೊದ್‌ಮ್ಯೆನ್ ಗನಾ[೨೬] ದೊಡ್‌ಹೊಂಡ್ದಲ್ ಉಂದ್‌ಹನಿ ನೀರ್ ಕಾಣ್ತೇದ. ಅದ್ರ ನೋಡೆ ಕುಸೀಲೆ ಅಂವ ಹೊಂಡ ಇಳೀತ್ಯಾ. ಆ ಹೊಂಡಲ್ಲೆ ಉಂದ್ ಚೆನ್ದ ಮಂಡಿಕೂದ್ಲನ ಹುಡ್ಗೆ, ಬಿಳಿಬಿಳಿ ಸೋಳಿಯಂಗ್[೨೭] ಈದತ. ಅದ್ರ ಮುದ್ವ್ಯಾ ಆಗೇಲಾಗತ[೨೮]. ಅದ್ರ ನೋಡ್ ಮಳ್ಳಾದ ಬಸ್ವಪ್ಪ, "ನೀನ ನನ್ ಮುದಿಯಾತ್ಯಾ" ಅಂಕ್‌ಕೇಳ್ದ. ಆಗೆ ಅದ, "ನನ್ನಪ್ಪ ಏಳ್ ಹೆಡಿ ಮಾಸೇಸ, ಅಂವ ನಿನ್ ನೋಡ್ದರೆ ಇನ್ ಇಕ್ವಂಗೆ[೨೯] ಇಲ್ಲಾ" ಅಂದ್ ಹೇಳ್ತೇ ಇರ್ವಾಗೇ ಮಾಸೇಸ ಅಲ್ಲಿಗ್ ಬಂದೇ ಬೆಟ್ಟಾ, ಅಂವೇನ್ ಬುಸ್‌ಗುಡ್‌ತ್ಯಾ. ಚೆನ್ದ ಮಂಡೀ ಕುದ್ಲನ್ ಹಿಣ್ಣೀಗೆ ಮಾಸೇಸ, ಬಸ್ವಪ್ನ ಕುಂದೇಬಿಡ್‌ತ್ಯಾ ಅಂದೆ ನಿಡ್ಕ್ಯಾ[೩೦]. ಆದ್ರೆ ಬಸ್ವಪ್ಪ ಹೆದ್ರಲೇಲಾ[೩೧]. ತನ್ ಕತ್ತಿ ಸೊಂಟ್ದಲಿಂದ್ ತೆಗ್ದ, ಮಾಸೇಸ್ಗೆ ಕಪ್[೩೨] ಹಾಕೇಬೆಟ್ಟಾ. ಉಂದುಂದ್ ಕಪ್ಪೀಗೆ ಉಂದುಂದೆ ಹೆಡಿಯಂತೆ ಏಳೂ ಹೆಡಿ ಕಡ್ದ, ಮಾಸೇಸ್ನ ಕಿಡ್‌ಗ್ದಾ[೩೩]. ಇದ್ರ ನೋಡೆ ಚೆನ್ದ ಮಂಡೀ ಕುದ್ಲನ ಹಿಣ್ಣಿಗೆ ಬಾಳ್ ಕುಸಿಯಾಯ್ತು. ನಗ್ಗಿ ಹುಡೀತ, ಕುಣೀತ. ಕಡಿಕೆ ಎಯ್ಡೂ ಜನ ಮಾಸೇಸ್ನ ಅರ್ಮನಿಲೆ ಉಳಿತರ[೩೪].

ಒಬ್ ರಾಜಾ ತನ್ನ ಸ್ಯೆನಿಕ್ರಾ ಕಾಡಿಗೆ ಬ್ಯಾಟಿಯಾಡೂಕ್ ಕಳ್ಸದಾ. ಬ್ಯಾಟೀಯಾಡೂಕ್ ಬಂದ್ ಸ್ಯೆನಿಕ್ರಿಗೆ ಉಂದ್ ಚೆನ್ದ ಮಂಡಿಕುದ್ಲ ಸಿಕ್ತಿದ. ಆ ಮಂಡಿ ಕುದ್ಲ ತಕಂಡ್ ಹೋಗೆ ತಮ್ ರಾಜ್ಗೆ ಕುಡ್ತರ. ಅದ್ರ ನೋಡೆ ಆ ರಾಜ, "ಈ ಚೆನ್ದ ಕೂದ್ಲ ಹಿಣ್ಣಾ ತಂಗೆ ಯಾರ್ ತಂದ್ ಕುಡ್ತರೊ, ಅವ್ರಿಗೆ ತನ್ನ ಅರ್ದರಾಜ್ಯಾ ಕುಡ್ತೆ" ಅಂದೆ ಡಂಗ್ರ ಸಾರ್‌ತ್ಯಾ.

---

೧೪. ನಾಶ ೧೫. ಬಸವಪ್ಪನಾಗುತ್ತಾನೆ ೧೬. ಹೋಗುತ್ತಾರೆ ೧೭. ಅಂಗಡಿ ೧೮. ಕಡಿಮೆ ದರದ ೧೯. ಮೂರು ಪೈಸೆ ೨೦. ಹುಣಸಿ ೨೧. ಕೊಟ್ಟು ೨೨. ತಿಂದ ೨೩. ಬೀಜ ೨೪. ಒಗೆಯುತ್ತ ೨೫. ಹುಡುಕುತ್ತಾನೆ ೨೬. ಬಹಳ ೨೭. ಸೂಳೆಯಂತೆ ೨೮. ಆಗಲಿಲ್ಲಾಗಿತ್ತು ೨೯. ಇಡುವ ಹಾಗೇ ೩೦. ನಡುಕ ೩೧. ಹೆದರಲಿಲ್ಲ. ೩೨. ಕತ್ತಿಯ ಹೊಡೆತ ೩೩. ಕೆಡವಿದ ೩೪. ಉಳಿದರು

ಆ ರಾಜ್ನ ಮನಿಗೆ ಉಂದ್ ಅಜ್ಜೀ ಮುದ್ಕೆ ಕೆಲ್ಸಕ್ ಬತ್ತತ[೩೫]. ಅದ ತಾನ ಚೆನ್ದ ಮಂಡೀ ಕುದ್ಲನ ಹಿಣ್ ತಂದ್ ಕುಡ್ತಿ" ಅಂದ್ ಹೇಳೆ ರಾಜ್ನ ಉಪ್ಗಿ[೩೬] ತಕ್ಕಂಡೆ, ರಾಜ್ನಕೋಡಿಂದೆ[೩೭], ಉಂದ್ ಬೋಟಿ ಏಳಿಂಟ್ ದಿನ್ಕೆ ಬೇಕಾಗು ಸಾಮಾನು, ಏಳಿಂಟ್ ಸೈನಿಕ್ರು ಎಲ್ಲಾ ತಕ್ಕಂಡೆ ಚೆನ್ದ ಕುದ್ಲನ ಹಿಣ್ ಹುಡ್ಕುಕ್ ನಿಡಿತೀದ[೩೮].

ಅಜ್ಜೆ ಸೈನಿಕ್ರ ಕರ್ಕಂಡೆ[೩೯] ಹೊಳಿ ದಂಡೀಗ್ ಹೋತೀದ. ಸೈನಿಕ್ರಿಗೆ ಬೋಟ್ ಹತ್ತೂಕ್ ಹೇಳ್ತೀದ, ತಾನೂ ಬೋಟ್ ಹತ್ತ್ತೀದ. "ಈ ಬೋಟ ಚೆನ್ದ ಕೂದ್ಲನ ಹಿಣ್ ಎದ್ದಲ್ಲೆ[೪೦] ಹೊವ್ಗ್ಲೆ" ಅಂದೆ ದೈವ್ರೀಗ್ ಹೇಳ್ಕಿ ಮಾಡ್ಕಂಡೆ ಬೋಟಿಗೆ ಉಂದ್ ಕಾಯ್ ಉಡಿತೀದ[೪೧]. ಆಗೆ ಬೋಟ್ ಸುಂಯ್‌ಗುಟ್ಕಂಡೆ ಚೆನ್ದ ಮಂಡಿ ಕುದ್ಲನ ಹಿಣ್ಣಿದ್ದಲ್ಲೆ ಹೋಗ್ ಮುಟ್ಟೀದ. ಅಜ್ಜೆ ಹಗೂರ್ಕೆ[೪೨] ಬೋಟೀಲಿಂದ್ ಕೆಳ್ಗ್ ಇಳ್ದೆ ಚೆನ್ದ ಮಂಡೀಕುದ್ಲನ ಹಿಣ್ ಎದ್ದಲ್ಲೆ ಹೋತೀದ. ಅದ್ಕೆ ಅಜ್ಜೀ ಗುರ್ತಿಲ್ಲಾ. ಆದ್ರೆ ಈ ಬೆರ್ಕಿ[೪೩] ಅಜ್ಜೆ "ನೀನ ಸೆಣ್ಣಿರುವಾಗೆ ನಾ ನಿಮ್ಮನಿಗೆ ಬತ್ತದೆ. ನಿಮ್ಮಪ್ಪ ನಿನ್ ಕೆಲ್ಸ ಮಾಡೂಕೆ ನನ್ನೇ ನೇಮ್ಸದ. ನಾನ ಇಲ್ಲಿಗ್ ಬಂದೆ ನಿನ್ ಮೀಯ್ಸೆ, ನಿನ್ ಉಸ್ತೆ ಉಗ್ದೆ ಹೋತದೆ. ಏಗೆ[೪೪] ನೀ ದೊಡ್ಡಾಗಿ. ಇಲ್ಲಿಗ್ ನಾ ಬರ್ದೆ ಬಾಳ್ ಉರ್ಸ[೪೫] ಆಯ್ತು. ಗನಾಕ್[೪೬] ಏಂವಾಮನೆ[೪೭]?" ಅಂದ ಹೇಳ್ತ. ಮತ್ತೆ ಬಸ್ವಪ್ನೂ ದಿಂಗ್ಯೈತ[೪೮], "ಅಪ್ಪೂ[೪೯] ಬಸ್ವಪ್ಪಾ ನೀನ ನನ್ ಮೊಮ್ಮಗ್ನ ಹಂಗೇಂವೆ. ನಿಂಗೆ ಲಾಯ್ಕಾಗೆ ಬಿಸ್ನೀರ್ ಕಾಸೆ ಮೀಯ್‌ಸ್ತಿ, ಬಾರೊ ಮಗಾ" ಅಂದ್ ಹೇಳೆ ಉಂದ್ ದೊಡ್ ಅಡ್ಕಲ್‌ದಲ್[೫೦] ಗೊಡಗೊಡ ನೀರ್‌ಕಾಯ್‌ಸ್ತ, ಅಂವ್ಗೆ ಮೀಯ್‌ಸ್ತ. "ಬಿಸ್‌ಬಿಸಿ ನೀರ್ ಮಿಂದೆ ದಣ್ದಿ ಮನೆ[೫೧]. ಬಾ ನಿಂಗೆ ನಿಂಬಿಹಣ್ ಪಾನ್ಕ ಮಾಡ್‌ಕುಡ್ತಿ. "ಅಂದೆ ಅಂವ್ಗೆ ಬಂಗಿ ಸುಪ್ನ ಪಾನ್ಕ ಮಾಡ್ ಕೊಟ್ತ. ಮತ್ತೆ ಅಂವ್ಗೆ "ಅಪ್ಪೂ ಮನೆ ಅತ್ಲಾಗ್ ಇತ್ಲಾಗ್ ಹೊವ್ಗ್‌ಬೆಡಾ ಇಲ್ಲೆಲ್ಲಾ ರಾಕೇಸ್ರ ಕಾಟ" ಅಂತ. ಆಗೆ ಬಸ್ವಪ್ಪ, ಪಾನ್ಕ ಕುಡೀತೇ, "ಅಜ್ಜೀ ನಂಗೆ ಈ ಕತ್ತಿ ಇರ್ವಾಗೆ ಯಾರ್ ಹಿದ್ರಕೀನೂ[೫೨] ಇಲ್ಲಾ. ನನ್ ಜೇಂವಾ ತಿಗೂಕೆ[೫೩] ಯಾವ ರಾಕೇಸ್ನಿಂದೂ ಸಾದಿಲ್ಲಾ[೫೪]. ನೀ ಯೇನ್ ಹೆದ್ರಬ್ಯೆಡಾ. ಈ ಕತ್ತಿರುವಾಗೆ ನನ್ ಕುಂದ್ವಂವ[೫೫] ಯಾರೂ ಇಲ್ಲಾ" ಅಂದ್ ಹೇಳ್ತೇ ಹೇಳ್ತೇ ಬಂಗಿ ಸುಪ್ನ ಪಾನ್ಕದ್ ಅಮಲ್ ಏರೆ, ಅಂವ್ಗೆ ಗನಾಕ್ ನಿದ್ರೆ ಬಂದ್ ಬಿಡ್ತೀದ್. ಅಂವ ಮನ್ಗದ್ ನೋಡೆ ಅಜ್ಜೆ ಹೆರ್ಗ್ ಬಂದೆ, ಚೆನ್ದ ಮಂಡೀ ಕುದ್ಲ ಹಿಣ್ಣನ್ ತಲಿಗೆ ಚೆಂದಾಗ್ ಎಣ್ಣೀಹಾಕೆ, ಮಂಡಿ ಬಾಚ್ತೀದ, ಹೂಂವ ಮುಡಿಸ್ತೀದ. "ಅಪ್ಪು, ಮನೆ ಏಗ್ ನೀ ಇಟ್‌ಚೆಂದಾ ಕಾಣ್ತಿ ಗುತ್ತಿದೆ. ಅಯ್ಯೋ ನನ್ ಕಣ್ಣೇ ಬೆದ್ರೆ[೫೬] ಕಟ್ಟ[೫೭]" ಅಂದ್‌ಹೇಳ್ತ.

---

೩೫. ಬರುತ್ತಿದ್ದಳು ೩೬. ಒಪ್ಪಿಗೆ ೩೭. ರಾಜನ ಹತ್ತಿರಿಂದ ೩೮. ನಡೆಯುತ್ತಾಳೆ ೩೯. ಕರೆದುಕೊಂಡು ೪೦. ಇದ್ದಲ್ಲಿ ೪೧. ಒಡೆಯುತ್ತಾಳೆ ೪೨. ಸಾವಕಾಶ ೪೩. ಚಾಣಾಕ್ಷ ೪೪. ಈಗ ೪೫. ವರುಷ ೪೬. ಚೆನ್ನಾಗಿ ೪೭. ಇದ್ದೀಯಾ ಮಗು? ೪೮. ಕರೆದಳು, ಧ್ವನಿಗೈ > ದಿಂಗೈ ೪೯. ಮಗ್ನೆ – ಪ್ರೀತಿವಾಚಕ ಶಬ್ದ ೫೦. ಅಡಕಲು ೫೧. ದಣಿದೆ ಮಗಾ ೫೨. ಹೆದರಿಕೆಯೂ ೫೩. ಜೀವ ತೆಗೆಯಲಿಕ್ಕೆ ೫೪. ಸಾಧ್ಯವಿಲ್ಲಾ ೫೫. ಕೊಲ್ಲುವವ ೫೬. ದೃಷ್ಟಿ ಬಿದ್ದರೆ ೫೭. ಕಷ್ಟ

ಚೆನ್ದ ಕೂದ್ಲನ ಹಿಣ್ಣನ ಹಪ್ಪಾದ[೫೮] ವಸ್ತ್ರ ಎಲ್ಲ ಉಂದ್ ಪೊಟ್ಳಿ ಕಟ್ತ "ಅಪೂ ಬಾ ಮನೆ, ಹೊಳೀಗ್ ಹೋಗೆ ನಿನ್ ಹಪ್ಪಾದ ಉಸ್ತ್ರ[೫೯] ಸಿಳ್ಕಂಡ್[೬೧] ಬರ್ವನಿ" ಅಂದೆ ಅದ್ರ ಹೊಳೀ ದಂಡೀಗೆ ಕರ್ಕಾ[೬೧] ಬಂತ. ಅಲ್ ಹೋಗೆ, "ನೀನಿಲ್ಲೇ ಉಸ್ತ್ರ ಸಿಳೀತೇ ಇರ. ನಾನ ನನ್ ಕವ್ಳದ ಚೆಂಚಿ[೬೨] ಮನೀಲೇ ಬಿಟ್ ಬಂದೆ. ತಕಂಡ್ ಬತ್ತಿ" ಅಂದೆ, ಮನಿಕಡೆ ನಿಡಿತ. ಇದ್ರ ಕಣ್ ಕಾಂಬೂವಂಕ್ರೀಗೆ[೬೩] ಸುಮಾರ ರಸ್ತೀಲ್ ಹೋಯ್ತ. ಕಣ್ ತಪ್ಪದ್ ಮ್ಯೆನೆ ಬ್ಯೆರೇ ರಸ್ತಿ ಹಿಡ್ದೆ ಸ್ಯೆನಿಕ್ರೆದ್ದಲ್ ಹೋಯ್ತ.

ಸ್ಯೆನಿಕ್ರೆದ್ದಲ್ ಹೋಗೆ, "ನಾನ ತ್ವೊಡಿ ಹುತ್ತಲ್ಲೆ "ಕೂ" ಹಾಕ್ತಿ. ನಾಕೂ ಹಾಕ್ದ ಕೂಡ್ಳೇ ನೀವೆಲ್ಲಾ ಬಂದೆ ಚೆನ್ದ ಮಂಡಿ ಕುದ್ಲನ ಹಿಣ್ಣನ ಕೋಡ್ ಬಂದೆ, ಅದ್ರ ಗಟ್ಟಿ ಹಿಕ್ಡಣಿ[೬೪]" ಅಂದ್ ಹೇಳ್ತ. ಮತ್ತೆ ನೆಟ್ಗೆ ಬಸ್ವಪ್ಪ ಮನಗ್ದಲ್ ಬಂತ, ಅವ್ನ ಕತ್ತಿ ತಕಂಡೆ ಬಿಂಕಿ[೬೫] ಒಲೀಲೆ ಹಾಕ್ತ. ಅಲ್ಲಿಂದೆ ಸರಸರ ಹಳ್ಳದ್ ದಂಡೀಗ್ ಬಂತ, "ಕೂ ಹುಡಿತ[೬೬]. ಆಗೆ ಎಲ್ಲಾ ಸ್ಯೆನಿಕ್ರೂ ಓಡೋಡ್ ಚೆನ್ದ ಮಂಡಿಕೂಡ್ಲ ಹಿಣ್ಣೆದಲ್ ಬಂದ್ರ, ಅದ್ರ ರಟ್ಟಿ ಹಿಡ್ದ್ ಇಳ್ದೆ ಬೋಟೀಲ್ ತುಂಬ್ದ್ರ, ತಡ ಮಾಡ್ದೇ ತಕಂಡ್ ಬಂದೇ ಬೆಟ್ರ. ಚೆನ್ದ ಮಂಡೀಕುದ್ಲನ ಹಿಣ್ಣ ಗಿರೂಮುರೂ[೬೭] ತೀಡ್ತಿದ[೬೮]. ಆದ್ರೆ ಇವ್ರ ಕ್ಯೆಳ್ಳೇಲಾ[೬೯]. ಇಲ್ ಬಿಂಕಿ ಒಲೀಲೆ ಬಸ್ವಪ್ನ ಕತ್ತೆ ಉರೀತೇ ಹ್ವೊದಂಗೂ ಬಸ್ವಪ್ನ ಪರಣಾನೂ ಹೋತೇ ಈದತ[೭೦].

ಹಿಂಗೇ ತ್ವೊಡಿ ದಿನ ಕಳಿತ. ಈ ಕಡಿಗೆ ಹುಲಿಯಪ್ಪ ಬಸ್ವಪ್ನ ಹುಡ್‌ಕ್ತೇ ಬಸ್ವಪ್ಪ ಬಂದ್ ಅಂಗ್ಡೀಗೇ ಬಂದ. ಅಂಗ್ಡೀ ಸಿಟ್ಟಿಕಡೆ[೭೧], "ಕಡ್ಮಿ ದರ್ದ ಸಾಮಾನ್ ಹುಳ್ಚಿ ಹಣ್ಣ" ಅಂದ ಹುಲಿಯಪ್ಪ ಉಂದ್ ಬಿಲ್ಲೀ ಕುಟ್ಟೆ ಎಯ್ಡ್ ಸೇರ್ ಹುಳ್ಚೀ ಹಣ್ ತಕಂಡ. ಹುಳ್ಚೀ ಹಣ್ ತಿಂತೇ ಅದ್ರ ಬೇಜಾ ಹುತಾಕ್ತೇ ಬಸ್ವಪ್ನ ಹುಡ್‌ಕ್ತೇ ಮುಂದೆ ಮುಂದೆ ಹ್ವೊದಾ. ಅಂವ ತೆಂದ್ ಬೇಜಾನೂ ಸಿಸಿಯಾಗ್ ಹುಟ್ತೇ ಹೋಯ್ತ. ಹುಲಿಯಪ್ಪ ಬಸ್ವಪ್ನ ಅರಸ್ತೇ ಅರಸ್ತೇ[೭೨] ಮಾಸೇಸ್ನ ಅರ್ಮನಿಗ್ ಬಂದ್ ಮುಟ್‌ತ್ಯಾ. ಅಲ್ಲೆ ಬಸ್ವಪ್ಪ ಜೇಂವ್‌ಸಂಕ್ಟಾಗ್[೭೩] ಬೆದ್ದದ್ ನೋಡ್ತ್ಯಾ. ಆಗೆ ಅವ್ನ ಅಡ್ಗೀ ಸಾಲಿಗ್[೭೪] ಹೋತ್ಯಾ[೭೫]. ಅಲ್ಲೆ ಒಲೀಲ್ ಬಸ್ವಪ್ನ ಕತ್ತೆ ಬೇಯ್ತೇ ಈದತ[೭೬]. ಕೂಡ್ಲೇ ಹುಲಿಯಪ್ಪ ಕತ್ತೀ ಬಿಂಕೀ ಆರ್ಸ್[೭೭], ಆ ಕತ್ತಿಗೆ ತನ್ನ ಕತ್ತಿ ತಾಗ್‌ಸ್ತ್ಯಾ. ಕತ್ತೆ ಮುದ್ಲ ಎದ್ದಂಗೇ[೭೮] ಆಯ್ತ. ಬಸ್ವಪ್ನೂ ಹಗೂರ್ಕೆ[೭೯] ನಿದ್ರೀಲಿಂದ್ ಎದ್ದವ್ರ ಹಂಗೆ ಎದ್ದಾ.

ಹುಲಿಯಪ್ಗೆ ಸಂತೋಸ್ ಆಯ್ತ. ಬಸ್ವಪ್ಗೂ ಹುಲಿಯಪ್ನ ಕಂಡೆ ಬಾಳ್ ಕುಸಿಯಾಯ್ತ.

---

೫೮. ಹೊಲಸಾದ ೫೯. ವಸ್ತ್ರ ೬೦. ಒಗೆದುಕೊಂಡು ೬೧. ಕರೆದುಕೊಂಡು ೬೨. ತಾಂಬೂಲದ ಸಂಚಿ ೬೩. ಕಾಣೂವರೆಗೆ ೬೪. ಹಿಡಿದುಕೊಳ್ಳಿರು ೬೫. ಬೆಂಕಿ ೬೬. ಕೂ ಹಾಕಿದಳು ೬೭. ಒಂದೆ ಸಮನೆ ೬೮. ಅಳುತ್ತಾಳೆ ೬೯. ಕೇಳಲಿಲ್ಲ ೭೦. ಹೋಗುತ್ತಾಯಿತ್ತು ೭೧. ಹತ್ತಿರ ೭೨. ಹುಡುಕುತ್ತ ೭೩. ಜೀವ ಸಂಕಟ ೭೪. ಕೋಣೆಗೆ ೭೫. ಹೋಗುತ್ತಾನೆ ೭೬. ಇತ್ತು ೭೭. ನಂದಿಸಿ ೭೮. ಮೊದಲು ಇದ್ದ ಹಾಗೆ ೭೯. ಸಾವಕಾಶ

ಎಯ್ಲೂ ಜನ ಅಪ್ ಹಾಕಂಡ್ರ. ಆಗೆ ಹಲಿಯಪ್ಪ ಬಸ್ವಪ್ಗೆ "ನಿಂಗೆ ಇಂತಾ ದುರ್ದೆಸೆ ಯಾಕ್ ಬಂತ" ಅಂದ್ ಕೇಳ್ತ್ಯಾ. ಆಗೆ ಬಸ್ವತ್ತ ತಾನ ಚಿನ್ದ ಮಂಡಿಕೂದ್ಲನ ಹಿಣ್ ಮುದಿಯಾದದ್ದೂ ಮಾಸೇಸ್ನ ಕುಂದದ್ದೂ[೮೦] ಎಲ್ಲಾ ಹೇಳ್ತ್ಯ, "ಏಗೆ ನಂಗೆ ಅಜ್ಜೀ ಮುದ್ಕೀಯಿಂದೆ ಈ ದುಸ್ತಿತೆ ಬಂತ, ಚಿನ್ದ ಕುದ್ಲನ ನನ್ನ ಹಿಂಡ್ತೀನೂ ಕಾಂಬುದಲ[೮೧]. ಅಜ್ಜೀ ಮುದ್ಕೀನೇ ಅದ್ರ ಹಾರ್ಸಂಡ್ ಹೋಗೀದಂದ್[೮೨] ಕಾಣ್ತೀದ". ಅಂದೆ ಕಣ್ಣೀರ್ ಬಿಡ್ತ್ಯ. ಎಯ್ಲೂ ಜನ ಬೆಜಾರ್‌ದಲ್ ಚಿನ್ದ ಮಂಡಿ ಕುದ್ಲನ್ ಹಿಣ್ ಹುಡಕ್‌ತೇ ಬತ್ತರ[೮೩].

ಉಂದಿನೆ[೮೪] ಹುಲಿಯಪ್ಪ, ಬಸ್ವಪ್ಪ ಚಿನ್ದ ಮಂಡೀ ಕುದ್ಲಹಿಣ್ ಹುಡ್‌ಕ್ತೇ ಹೋಗ್ವಾಗೆ, ಆ ಊರ್ನ ರಾಜ ಚಿನ್ದ ಮಂಡೀಕುದ್ಲ ಹಿಣ್ಣಾ ಮುದ್ಯಾಗುದಾಗೆ ಡಂಗ್ರ ಸಾರದ್ ಕೇಳೆ, ಹುಲಿಯಪ್ಪ ಬಸ್ವಪ್ಪ ಎಯ್ಲೂ ಜನ ಮುದೀಕ್ ಹೋತರ. ಮುದೀಕ್ ಬಂದ್ ಜನ್ರೀಗೆ ತುಪ್ಪಾ ಬಡ್ಲೂಕೆ ಚಿನ್ದ ಮಂಡಿಕುದ್ಲನ ಹಿಣ್ಣೇ ಬತ್ತಿದ[೮೫].ಅದ ತುಪ್ಪಾ ಬಡಸ್ತೇ ಬಡಸ್ತೇ ಬಸ್ವಪ್ನ ಅಗ್ಗ[೮೬]ವರೀಗೂ[೮೭] ಬತ್ತೀದ. ಆಗೆ ಬಸ್ವಪ್ಪ ತಡಮಾಡೇ ಅದ್ರ ಕೈ ಹಿಡ್ದ್‌ಬೆಟ್ಟಾ. ಮುದೀದ್ ಮನ್ಲೆಲ್ಲಾ ಗುಲ್ಲೋಗುಲ್ಲ, "ಬಸ್ವಪ್ಪ ಚಿನ್ದ ಮಂಡಿಕುದ್ಲನ ಹಿಣ್ ಕೈ ಹಿಡ್ದೇ ಬೆಟ್ಟಾ" ಅಂದೆ. ಈ ಸುದ್ದಿ ಕೇಳ್ದ ಅಜ್ಜೀ ಮುದ್ಕೆ, ಇನ್ ತನ್ ಮರ್ಯಾದೆ ಹೋತಿದಂದೆ, ಅಡ್ಗೀ ಮನಿಲೆದ್ದ ದೊಡ್ ಹಂಡೀಲ್ ಅಡೀಕಂಡ್ ಬಿಡ್ತೀದ. ಮುದೀಕೆ ಅನ್ನಾ ಮಾಡು ಜನ ಅನ್ನಾ ಹಾದ್ ಬಿದೀಲ್[೮೯] ಬಾಗ್‌ದ್ರೆ[೯೦] ಕಿಸ್ರಾತೀದ್[೯೧] ಅಂದ್ ಹೇಳೆ, ದೊಡ್ಡ ಹಂಡೀಲೇ ಬಾಗ್ ಬಿಡ್ತರ. ಅನ್ನಾ ಬಾಗ್ದ ನೀರ್ ಬಿದ್ದೆ ಅಜ್ಜೀ ಮುದ್ಕೆ ಬಿಂದ್ ಹೋತಿರ್ದ್[೯೨].

ಇತ್ಲಾಗೆ[೯೩] ರಾಜಾ ತನ್ನ ದರ್‌ಬಾರ್ಕೆ ಬಸ್ವಪ್ನ ಕರೀಸ್ಕಂತ್ಯಾ. ಚಿನ್ದ ಮಂಡಿಕುದ್ಲನ ಹಿಣ್ ಕೈ ಹೆಡ್ದ ಕಾರ್ಣ ಕೇಳ್‌ತ್ಯಾ. ಆಗೆ ಬಸ್ವಪ್ನ "ಚಿನ್ದ ಮಂಡೀ ಕುದ್ಲ ಹಿಣ್ ನನ್ ಹಿಂಡ್ತೆ" ಅಂದ್ ಹೇಳ್‌ತ್ಯಾ. ಮತ್ತೆ ಅಜ್ಜೀ ಮುದ್ಕೆ ತಂಗೆ ಪಸಾಯ್ಸ್[೯೪] ಅದ್ರ ಹಾರಕ್ಸಾ ಬಂದ್[೯೫] ಕತಿಯೆಲ್ಲಾ ರಾಜ್ನಕೋಡೆ ಹೇಳ್‌ತ್ಯಾ. ಆಗೆ ರಾಜ ಅಜ್ಜೀಮುದ್ಕಿ ಕರೂಕೆ ಸೇವಕ್ರ ಕಳೀಸ್‌ತ್ಯಾ[೯೬]. ಸೇವಕ್ರ ಇಟ್[೯೭] ಹುಡ್ಕದ್ರೂ ಅಜ್ಜ ಮುದ್ಕೆ ಇಲ್ಲ. ಆಗೆ ರಾಜಾ ಅಜ್ಜೆ ಮಾಡ್ದ ಮೋಸಾತಿಳ್ಕಂಡಾ. ಮತ್ತೆ "ಗಂಡೆದ್ದ ಹಿಣ್ಣ ಮುದ್ಯಾಗೂದ್ ದರ್ಮ ಅಲ್ಲ". ಅಂದೆ, ಬಸ್ವಪ್ಗೆ ಅವ್ನ ಹಿಂಡ್ತಿ ಉಪ್ಪಸ್ ಕುಡ್ತ್ಯಾ[೯೮]. ಕಡಿಕೆ ಬಸ್ವಪ್ಪಾ ಹುಲಿಯಪ್ಪಾ, ಚಿನ್ದ ಮಂಡಿಕುದ್ಲನ ಹಿಣ್ಣು ಎಲ್ಲಾ ಸೇರೆ, ಮಾಸೇನ ಅರ್ಮನಿಗ್ ಹೋಗೆ ಚೆಂದಾಗ್ ಸಂಸಾರ ಮಾಡ್ಕಂಡ್ ಇರ್ತರ. ರಾಜ್ನ ದೊಡ್ ಗುಣಾ ನೋಡೆ ಆನಂದ ಪಡ್ತರ.

---

೮೦. ಕೊಂದದ್ದು ೮೧. ಕಾಣುವದಿಲ್ಲ ೮೨. ಹೋಗಿದ್ದಾಳೆಂದು ೮೩. ಬರುತ್ತಾರೆ ೮೪. ಒಂದು ದಿನ ೮೫. ಬರುತ್ತಾಳೆ ೮೬. ಎಡೆಯ ೮೭. ವರೆಗೂ ೮೮. ಬೊಬ್ಬೆ ೮೯. ರಸ್ತೆಯಲ್ಲಿ ೯೦. ಸೋಸಿದರೆ ೯೧. ಕೆಸರಾಗುವುದೆಂದು ೯೨. ಬೆಂದುಹೋಗುತ್ತಾಳೆ ೯೩. ಈ ಕಡೆ ೯೪. ಮೋಸಮಾಡಿ ೯೫. ಓಡಿಸಿಕೊಂಡು ಬಂದ ೯೬. ಕಳಿಸುತ್ತಾನೆ ೯೭. ಎಷ್ಟು ೯೮. ಒಪ್ಪಿಸಿಕೊಡುತ್ತಾನೆ

ಓ. ಒಗಟುಗಳು

೧. ಅಗಿತೀದ್ ಹುಗಿತೀದ್ ಹೊನ್ನಬಾಸಿಂಗ (ಕುಟಾರಿ)
೨. ಅಣ್ ಹೋತ್ಯಾ ಅಂಗ್ಡೀಗೆ (ಅಡಿಕೆಮರ, ಸಿಂಗಾರ, ಅಡಿಕೆ)
೩. ಅಡ್ಗೆ ಅಳ್ಗೆ ನಿಡ್ಗೆ ದಂಡ ಮ್ಯೆನ್ ಚಪ್ರ (ಪಂಜಾರ ಗಡ್ಡೆ ಸುವರ್ಣಗಡ್ಡೆ)
೪. ಅತ್ತೀ ಹಸಿ (ಸೇರಿ) ಮುಡ್ಗೂಗ್ ಆಗೂದಲಾ, ಸೊಸಿ ಚಿನ್ನಾ ಅಳೂಕ್ ಆಗೂದಲಾ (ಆಕಾಶ, ನಕ್ಷತ್ರ)
೫. ಅತ್ತೆ ದೇಪಾ ಕಚ್ತೀದ, ಅಜ್ಜಾ ಕವ್ಳಾ ಜಿಪ್‌ತ್ಯಾ ಸೊಸೆ ನೀರ್‌ಹುಯ್ತಿದ. (ಮಿಂಚು, ಗುಡುಗು, ಮಳೆ)
೬. ಅಪ್ ಹೋತ್ಯಾ ಆಕಾಸ್ಕೆ ಅವ್‌ಹೋತೀದ್ ಮುದೀಕೆ
೭. ಅಪ್ನ ಪುಕ್ಕಿಲ್ ಮಗ ಜೋಲ್‌ತ್ಯಾ (ಗೇರಹಣ್ಣು ಮತ್ತು ಬೀಜ)
೮. ಅರ್‌ಕಟ್ ಮರ್‌ಕಟ್ ಮರಕ್‌ಮೋವತ್ ಕಟ್
ಅರ್ತ ಬಿಡಸ್ದ ವಿಲಗ್ ಅರ್ದಾರಾಜ್ಯಕುಡ್ತಿ (ತೀರ್ಥಟ್ಟೆ)
೯. ಅಂಕ್ ದುಂಕ್ ಸಂಕ್‌ಪಾಲ ಹತ್ ಕಾಲ ಮೂರ್ ತಲೆ ಎಯ್ಡ ಬಾಲ (ನೇಗಿಲ)
೧೦. ಅಂಗಿ ತೆಗ್ದ ಬಾವಿಲ್ ಗುದಕ್ದ (ಬಾಳೆಹಣ್ಣು ತಿನ್ನು)
೧೧. ಅಂಡ್ ಮುರ್ಲಮರ ತುಂಡಾಗ್‌ಬೀಳ್ತೀದ (ಹೇಲು)

ಇ.

೧೨. ಇಲ್ ಹ್ವೊದ್ರೂ ಬಿನ್ ಬಿಡೂದಲಾ (ನೆರಳು)
೧೩. ಇಲ್ಲಿಲ್ಲು ನೀರಿಲ್ಲಾ ಅಂಬಾರ್ದ ಕಲ್ಲೊಟ್ಟಿಲ್ ನೀರ (ತೆಂಗಿನ ಕಾಯಿ)
೧೪. ಇಂದ್ ಹುಟ್ದ ಪ್ವೊರಾ ಬೇಲಿ ಹಾರ್‌ತ್ಯಾ (ಹೇಲುಸಿಂಬೆ)
೧೫. ಇಂದ್ ಹುಟ್ದ ಪ್ವೊರಾ ಮರಾಹತ್‌ತ್ಯಾ (ಚಿಗಳಿ)

ಉ.

೧೬. ಉಂದ್ ಹಣ್ಣೀಗೆ ಹನ್ನೆಯ್ಡ ಸ್ವೊಳೆ, ಸ್ವೊಳೀಗ್ ಮೂವತ್ ಬೇಜಾ (ಒಂದು ವರ್ಷದ ಹನ್ನೆರಡು ತಿಂಗಳು, ಒಂದು ತಿಂಗಳ ಮೂವತ್ತು ದಿನಗಳು)
೧೭. ಉಂದ್ ಮರ್‌ಕೆ ಮುನ್ನೂರ್‌ಅರ್ವತ್ ಎಲೆ ಹನ್ನೆಯ್ಡ ಹೆಗ್ಗೆ ಮೂವತ್ ಹೂಂವ (ಒಂದು ವರ್ಷ, ಹನ್ನೆರಡು ತಿಂಗಳು, ೩೦ ದಿನಗಳು)

೧೮. ಉಂದ್ ಬಾಟ್ಲಲ್ ಎಯ್ಡ್ ಜಾತಿ ಎಣ್ಣೆ (ಕೋಳಿಮೊಟ್ಟೆ)

೧೯. ಉಂದ್ ದ್ರೊಸೆ ತಿಂಬರ್ ಸಾವ್ರ (ಜೇನುಹೆರೆ ಮತ್ತು ನೊಣ)

೨೦. ಉಂದ್ ಬಟ್ಲ ಅನ್ನ ಅಣ್ಣನ ಕೋಡೂ ತಿಂಬೂಕಾಗೂದಲ ತಮ್ಮನ ಕೋಡೂ ತಿಂಬೂಕ್ ಆಗೂದಲ (ಸುಣ್ಣದ ಬಟ್ಟಲು)

ಏ.

೨೧. ಏಳ್ವಾಗ ಕೆಂಪಣ್ಣ ಮೆಂದಾಗ ಕರಿಯಣ್ಣ (ಬೆಂಕಿಕೆಂಡ)

ಒ.

೨೨. ಒಂಟಿಕಾಲ್ ಬಂಟ ಮುತ್ತನ ಗೊಂಡಿ ಹೊತ್ತ (ತೆನೆಬಂದ ಜೋಳದ ಗಿಡ)

ಕ.

೨೩. ಕರಿಗುಡಿಮ್ಯೆನೆ ಕರಿಕುರಿ ಗ್ರೊಲೆ ಮೇಯ್ತುವ (ತಲೆಯ ಹೇನು)

೨೪. ಕರಿಹುಲ್ ಗ್ರೊಣಿಮ್ಯೆನೆ ಬಿಳಿಮೊಟ್ಟೆ ರಾಸೆ (ಕೂದಲು ಹೇನಿನ ಮೊಟ್ಟೆ)

೨೫. ಕರಿಯಮಕ್ಕ ಕುಂಡಿಲ್ ಬುಸ್ರ ಬಿಳಿಯಮಕ್ಕ ಬಾಯ್ಲ ಬುಸ್ರ, (ಅನಾನಸು, ಬಾಳೆಕೊನೆ)

೨೬. ಕರಿ ಕಲ್ಲರಿಮ್ಯೆನೆ ಬೆಳ್ಳಕ್ಕಿ ಸತ್ ಬಿದ್ದೀದ (ದೋಸೆ)

೨೭. ಕರಿಕಲ್ಲರಿ ಮ್ಯೆನೆ ತಿಂಗ್ಳದ್ಯೆವ್ರ ಮನಿಕಂಡಿದ (ದೋಸೆ)

೨೮. ಕರಿನುಗ್ಲ ನೀರಿಗ್ ಬೆದ್ರೆ ನನುದಲಾ (ಕೂದಲು)

೨೯. ಕುಡ್ಕೀಲೆ ಕುಡ್ಬಾಳೆಲೆ (ನಾಲಿಗೆ)

೩೦. ಕೆಳ್ಗೆ ಗಿಡ, ನಿಡ್ಗಹಣ್ಣ ಮ್ಯೆನ್ ಗಿಡ (ಅನಾನಸಿನ ಹಣ್ಣು)

೩೧. ಕೆಂಪಂಗಿ ಕರಿತುಪ್ಪಿ ಅಣ್ಣ (ಗುಲಗಂಜಿ)

೩೨. ಕೊಕಾನಕ್ಕೆ ಕೂರ್‌ತೀದ್ ಕೆರಿನೀರ್ ಆರ್‌ತೀದ್ (ದೀಪ)

೩೩. ಕೊಳತ್ರೆ ಮೂರ್ಡೇಸ್ರಾ ಹಾರದ್ರೆ ಹನ್ಮಂತ ಕೂಗದ್ರೆ ರಾವ್ಣೇಸ್ರಾ (ಕಪ್ಪೆ)

೩೪. ಕೊಳತ್ರೆ ಮುನೆ ಕೂಗದ್ರೆ ರಾವಣ ಹಾರದ್ರೆ ಹನ್ಮಂತ (ಕಪ್ಪೆ)

ಗ.

೩೫. ಗಟ್ಟದ ಮ್ಯೆನನ ಸೋಳಿಗೆ ಪಕ್‌ತುಂಬ್ ಮಕ್ಳ (ಕೋಳಿಹೇಟೆ ಮರಿಗಳು)

೩೬. ಗಟ್ಟದ ಮ್ಯೆನನ ಗೋಟಿಗೆ ಉಂದೇ ಕಣ್ಣ (ಅಡಿಕೆ)

೩೭. ಗಟ್ಡ್ ಮ್ಯೆನನ ಬಯ್ಣೀಕಾಯ್ಗೆ ತುಟ್ಟೇ ಇಲ್ಲ (ಕೋಳಿಮೊಟ್ಟೆ)

೩೮. ಗಟ್ಟ ಮ್ಯೆನನ ಅಜ್ಜಿಗೆ ಉರ್ಸ್ಕೆವುಂದ್ ಉಡ್ಗರೆ. (ಮನೆಹೊದಿಕೆ)

೩೯. ಗಸಾಗುಸು ಕಾಲ್‌ಕಿಸಿ, ಕೆಂಪ್ದಹಾಕ್ ಬಿಳೀದ್ ತಿಗಿ (ರಾಗಿ ಹಿಟ್ಟು ಬೀಸು)

ಚ.

೪೦. ಚಕಮಕ ಲೇಡಿಗೆ ಉಂದೇ ಕಣ್ಣ (ಸೂಜಿ)

೪೧. ಚಿನ್ದ ಹಕ್ಕೆ ಬಾಲದಲ್ ನೀರ್ ಕುಡಿತಿದ (ದೀಪ)

ಜ.

೪೨. ಜಗ್ ಅಂತೀದ ಜರ್ಗೀಲ್ ಹುಕ್ತೀದ (ಮೂಗುತಿ)

ತ.

೪೩. ತತ್ತರಗಿಂಡಿ ತಾಮ್ರದ ಗಿಂಡಿ ಮುಚ್ಚ ತೆಗದ್ರೆ ಮುನ್ನೂರ್‌ಗಿಂಡಿ (ದಾಳಿಂಬೆ ಹಣ್ಣು)

೪೪. ತಾಯ್ ಹಸ್ರೆ, ಮಗ್ಳ ಬಿಳ್ಚೆ, ಮಗ್ಳ ರತರಂಬೆ (ಬೆಳ್ಳಾಟಿಗಿಡ)

೪೫. ತಲಿಮ್ಯೆನ್ ಜುಟ್ಟ ಪುಕ್ಕೀಲ್ ಗುಟ್ಟ (ಅನಾನಸ ಹಣ್ಣು)

ದ.

೪೬. ದಾಂಬ್ ಓಡ್ತೀದ ಎಮ್ಮೆ ಮನಗ್ತೀದ (ಸೊರೆಬಳ್ಳಿ, ಕಾಯಿ)

೪೭. ದೋರ್ ಬೀರ್ದ ಮುತ್ನರಾಸೆ, ಹಿಕ್ ಸುರೂಕ್ ಆಗೂದಲಾ (ಚಾರ್‌ಕ್ಲ)

ನ.

೪೮. ನಾಕ್‌ಕಾಲ್, ಉಂದ್ ತಲೆ, ಹೆಡದ್ರೆ ಚಿಕ್ರ (ಆಮೆ)

೪೯. ನಿತ್ತೀಲ್ ನುಂಗೆ ಸುತ್ತೂ ಹೇಲೂದು (ರಾಗಿ ಕಲ್ಲು)

೫೦. ನೀರ್‌ನಲ್ಲೆ ಹುಟ್ತೀದ ನೀರ್‍ನಲ್ಲೆ ಸಾಯ್ತೀದ (ಉಪ್ಪು)

೫೧. ನೂರ್ ಜನ್ರ ಪುಕ್ಕೀಗ್ ಉಂದೇ ಉಡ್ದಾರಾ (ಮಣಿಸರ)

೫೨. ನೂರ್ ಪ್ವೋರ್‌ಗೋಳಿಗ್ ಉಂದೇ ಉಡ್ದಾರಾ (ಹಿಡಿಕುಂಟೆ)

೫೩. ನೂರಿತ್ತೀಗೆ ಉಂದೇ ಬಾಲಾ

ಪ.

೫೪. ಪರ್‌ಮಾಳಜ್ಜಿ ಮಿಯ್‌ತುಂಬ್ ಮುಳ್‌ಗೆಜ್ಜಿ (ಹಲಸಿನಹಣ್ಣು)

೫೫. ಪಟ್ಟಿಸೇರಿ ಗಾರ್ತಿ ಅಲ್ಲೀಗಿಲ್ಲೀಗ್ ಓಡ್ತಿ ಕದದ್ ಮೋಲೀಗ್ ಕುಳ್ತಿ. (ಕಸಬರಿಗೆ)

ಬ.

೫೬. ಬತ್ ಮರದ್ ಮ್ಯೆನ್ ಬಸ್ವ ಕುಣಿತ್ಯಾ (ಕೊಡಲಿ)

೫೭. ಬತ್‌ಗೆರಿಲೆ ಬೆಳ್ಳಕ್ಕಿ ಗ್ವೋಲೆ (ಹೊದಳು –ಅರಳು)

೫೮. ಬಿಳ್ಳಿತಟ್ಟೀಲ್ ಕರಿ ನಿಂಗ (ಕಣ್ಣು)

೫೯. ಬೋರ್ ಬೋರ್ ಅಂತೀದ್ ನೊರಿರಾಸಿ ಕಾರ್ತೀದ್ ನೀರಾಗ್ ಹರಿತೀದ ಉಪ್ನರಾಸಿ ಹಡಿತೀದ್ (ಸಮುದ್ರ)

ಮ.

೬೦. ಮಣ್ಣಿಲ್ದೆ ನೀರಿಲ್ದೆ ಮನಿಕಟ್ಟು ಪ್ವೊರಾ (ಗೆದ್ದಲು)
ಮರ್ದ ತುರೀಗ್ ಹಸ್ರಕೋಲ್ ತೂಗ್ತೀದ (ನುಗ್ಗೆಕಾಯಿ)

೬೧. ಮಿಂಚೂ ಪ್ವೊರಾ ಪುಕ್ಕಿಲ್ ದಾರಾ (ಸೂಜಿ)

೬೨. ಮಿಂಚೂ ಸೋಳಿಗ್ ಉಂದೇ ಕಣ್ಣ (ಸೂಜಿ)

೬೩. ಮಿಂಚೂ ಸೋಳಿ ಪುಕ್ಕೀಲ್ ಬಾಲಾ (ಸೂಜಿ)

೬೪. ಮಿಂದ್ ಮಿಂದ್ಕಂಡ್ ಗಾಡ್ಗತನ ಹುಡಿತ್ಯಾ (ಅರೆಯುವ ಕಲ್ಲು)

೬೫. ಮುಂದೂ ಬಾಲಾ ಹಿಂದೂ ಬಾಲಾ (ಆನೆ)

೬೬. ಮೂರ್‌ಜನಾ ಸನ್ಯಾಸಗೋಳ ಉಂಡ್ಕಡಿಗ್ ಉಚ್ಚೀಹುಯ್ತ್ರ (ಕಬ್ಬಿನ ಗಾಣ)

೬೭. ಮೊಕ್ದಲ್ ಬಾಲಾ ಪುಕ್ಕಿಲ್ ಬಾಲಾ (ಆನೆ)

ಸ.

೬೮. ಸತ್‌ಕುರೆ ಕೂಗ್ತೀದ (ಡೋಲಕಿ)

೬೯. ಸತ್ರೂ ಸಾವ್ರಾ ಎದ್ರೂ ಸಾವ್ರಾ (ಆನೆ)

೭೦. ಸೆಣ್ ಬಾವೆ ಬಿಳ್ಗಲ್ ಕಟ್ಟೆ (ಬಾಯಿ)

೭೧. ಸೆಣ್ಣಿರುವಾಗೆ ಸೇರಿ ಉಟ್ಕಂತೀದ್, ದೊಡ್ಡಾದಾಗ ಸೇರಿ ಬಿಡ್ಸಂತೀದ್ (ಬಿದಿರು)

೭೨. ಸೊಲದ್ರೆ ಮೂರ್ ಕಣ್ ಸುಲಿದೇರ್ ಉಂದ್‌ಕಣ್ (ತೆಂಗಿನಕಾಯಿ)

ಹ.

೭೩. ಹಿಂದೂ ಕುಂಡೆ ಮುಂದೂ ಕುಂಡೆ
ಮೂರ್ ಕುಂಡೆ ಕಯ್ಲುಗಿಂಡೆ (ಹಾಲು ಕರೆಯುವುದು)

೭೪. ಹಿಂದೂ ಪುಕ್ಕೆ ಮುಂದೂ ಪುಕ್ಕೆ (ಹಾಲು ಕರೆಯುವುದು)
ಕೆಳ್ಗೂ ಪುಕ್ಕೆ, ಮೂರ್ ಪುಕ್ಕೆ ಕಯ್ಲು ಗಿಂಡೆ.

೭೫. ಹಿಕ್ಕಾತಿಂಬೂ ಪೊರ್ಗೆ ತಲಿಮ್ಯೆನ್ ತುರಾಯ್ (ಕೋಳಿಹುಂಜ)

೭೬. ಹೊನ್ನಮ್ಮಜ್ಜಿ ಮೈಯೆಲ್ಲಾ ಕಜ್ಜಿ (ಹಾಗಲ ಹಣ್ಣು)

೭೭. ಹೋತ್ಯಾಪುಟ್ಟಾ ಬತ್ಯಾಪುಟ್ಟಾ
ಪುಟ್ನ ಹೆಜ್ಯೇ ಕಾಂಬೂದಲ. (ದೋಣಿ)

೬. ನಾಡವರ ಗಾದೆ ಮಾತುಗಳು

ನಿರೂಪಕರ ಹೆಸರು	ಊರು
೧. ರಾಮಾ ಹಮ್ಮಣ್ಣ ನಾಯಕ ಉರಿಯನ್ ಖ್ಯಾತಿ.	ಭಾವಿಕೇರಿ

ಇವರು ನನ್ನ (ಎನ್. ಆರ್. ನಾಯಕ) ತಂದೆಯವರು. ಕನ್ನಡ ಮುಲ್ಕೀ ಪರೀಕ್ಷೆ ಪಾಸು ಮಾಡಿದ್ದಾರೆ. ಇವರು ಮಾತನ್ನಾಡುವಾಗ ಮೇಲಿಂದ ಮೇಲೆ ಗಾದೆಮಾತುಗಳನ್ನು ಬಳಸುತ್ತಿದ್ದರು. ಅದಕ್ಕಾಗಿ ಊರಿನ ಸುತ್ತು ಮುತ್ತಲಿನವರು ಇವರನ್ನು ಕುರಿತು,

"ಮಾತು ಮಾತಿಗೆ ಗಾದಿಯ ಕಟ್ಟ
ಖ್ಯಾತಿಯ ರಾಮಣ್ಣಾ"

ಎಂದು ಗುಮಟೆಯ ಪದ ಧಾಟಿಯಲ್ಲಿ ಹಾಡುಕಟ್ಟಿ ಹೊಗಳಿದ್ದನ್ನು ನಾನು ಕೇಳಿದ್ದೇನೆ. ಇಲ್ಲಿಯ ಗಾದೆಗಳನ್ನು ಅವರು ಪರಂಪರೆಯಿಂದ ಕೇಳಿ ತಮ್ಮ ಸ್ಮರಣೆಯ ಒಂದಂಗವಾಗಿ ಸೆರೆ ಹಿಡಿದಿಟ್ಟುಕೊಂಡಿದ್ದರು. ಕೆಲವು ಗಾದೆಗಳನ್ನು ಇವರೇ ಸೃಷ್ಟಿಸಿ ಚಲಾವಣೆಯಲ್ಲಿ ತಂದರೆಂದು ಹೇಳಲಾಗುತ್ತದೆ. ಆದರೆ ಇವರೆಲ್ಲಿಯೂ ತಾನೇ ಗಾದೆ ಕಟ್ಟಿದ್ದೆಂದು ಹೇಳಿಕೊಂಡಿಲ್ಲ. ಇವರು ೧೯೭೬ ರ ಸುಮಾರಿಗೆ ಹೊನ್ನಾವರಕ್ಕೆ ನಮ್ಮ ಮನೆಗೆ ಹೊನ್ನಾವರಕ್ಕೆ ಬಂದಾಗ ಏಳೆಂಟು ದಿನವಿದ್ದು ತಮ್ಮ ನೆನಪಿಗೆ ಬಂದ ಗಾದೆಗಳನ್ನು ಬರೆದು ನನಗಿತ್ತು ಹೋಗಿದ್ದರು. ಅನಂತರಿನ ದಿನಗಳಲ್ಲಿ ಅವರು ಹೊನ್ನಾವರಕ್ಕೆ ಬರಲೇ ಇಲ್ಲ. ೧೯೭೭ ರಲ್ಲಿ ಅವರು ತಮ್ಮ ೭೬ ನೆಯ ವಯಸ್ಸಿನಲ್ಲಿ ದಿವಂಗತರಾದರು.

ಅ.

೧. ಅಕ್ಕಲ್ ಕೆಟ್ರೊ ನಕ್ಕಲ್ ಕಿಡೂಕಾಗಾ

೨. ಅಕ್ಕೀ ಕರ್ಚಾಗುಕಾಗಾ ಅಕ್ನ ಮಕ್ಳೂ ಬಡ್ವಾಗುಕಾಗಾ.

೩. ಅಕ್ಕೆದ್ರೆ ಬಾವಾ, ರೊಕ್ ಎದ್ರೆ ಜಾತ್ರೆ

೪. ಅರ್ಕುಡಿ ಕೆಲ್ಸಸ್ಲು ಮುರ್ಕ್‌ಸೋಳಿ ಸಂಗ ಸಲ್ಲ

೫. ಅಂಕಿಯಿಲ್ದ ಮಂಗ ಲಂಕಿ ಸೊಟ್ತ

೬ ಅಗಳ್ನಲ್ ಅನ್ನದ ಪರೀಕ್ಷೆ

೭ ಅಗ್ಗದ ಮಾಲ ಮುಗ್ಗದ ಮೀನ

೮. ಅಂಗ್ಳ ಹಾರೆ ಅಟ್ಟ ಏರ

೯. ಅಂಗ್ಯೆಯ್ ಕೊಟ್ರೆ ಮುಂಗ್ಯೆ ನುಂಗ್ದ

೧೦. ಅಂಗ್ಯೆಲೆ ಬೆಣ್ಣೆ ಇಕ್ಕಂಡೆ ತುಪ್ಪ ಹುಡಕ್ದ

೧೧. ಅಂಗ್ಯೆ ಹುಣ್ಣೀಗೆ ಕನ್ನೂಡ್ಯಾಕೆ.

೧೨. ಅಚ್ಚೀ ಸೇಮಿ ಪಂಚೇರ ಇಚ್ಚೀ ಸೇಮಿ ದಡಿ ನುಂಗ್ತ.

೧೩. ಅಜ್ ನೆಟ್ ಆಲ್ದಮರ್ಕ ಮೊಮ್ಮಗ ನೇತ್ಕಂಡ.

೧೪. ಅಜ್ಜೀ ಊರಿದ್ದು ಮೊಮ್ಮ ಹಾರಿದ್ದು ಸಮ

೧೫. ಅಜ್ಜೀಗ್ ಅರಿ ಚಿಂತೆ ಮೊಮ್ಮ್ಗೀಗ್ ಮಿಂಡ್ನ ಚಿಂತೆ.

೧೬. ಅಜ್ಜೀಸಾಕ್ದ ಮೊಮ್ಮಗ ಬೊಜ್ಜಕ್ಕಿಂತ ಕಡೆ

೧೭. ಅಜ್ಜೀಯಿಲ್ಲದ ಮನೆಹೊಲ್ಲ ಮಜ್ಜಿಗೆಯಿಲ್ಲದ ಓಟ ಸಲ್ಲ

೧೮. ಅಜ್ಜಿ ಸೊಟ್ಟಂಗಾಯ್ತು ಚಿಳಿ ಕಾಸ್ದಂಗಾಯ್ತು.

೧೯. ಅಟ್ಟ ಮ್ಯೆನೆ ಒಲೆ ಉರೀತ ಕೆಟ್ಟಮ್ಯೆನೆ ಬುದ್‌ಬಂತ

೨೦. ಅಟ್ಟುಂಬವ್ಗೆ ಹಿಂಡ್ತಿಯಾಗ್‌ಬ್ಯೆಡ ಮೊಟ್ಟೆಹುರ್ವವ್ನ ಆಳಾಗ್‌ಬ್ಯೆಡಾ.

೨೧. ಅಡ್‌ಗ್ವೊಡಿಮ್ಯೆನ್ ದೇಪಾ ಎಕ್ಟೆಡಾ

೨೨. ಅಡ್ಗ್ ಬೆದ್ರೂ ಮೇಸೆ ಮಣ್ಣಾಗೇಲಾ

೨೩. ಅಡ್ಕತ್ರೀಲ್ ಸಿಕ್ದ ಅಡ್ಕೆ

೨೪. ಅಡ್ವಾಗ ಉಂಬಾಗ ಗಿಡ್ವೆಲ್ಲಾ ನೆಂಟ್ರ.

೨೫. ಅಡ್ಕಿ ಕದ್ದ ಮಾನ ಆನಿಕೊಟ್ರೂ ಬಾರಾ

೨೬. ಅತಿಯಾಸೆ ಗತಿಗಿಡಸ್ತ.

೨೭. ಅತ್ತೀಗುಂದ್ ಕಾಲಾ ಸೊಸಿಗುಂದ್ ಕಾಲಾ

೨೮. ಅತ್ತೀಗ್ ಮೇಸ್ ಬಂದ್ರೆ ಮಾವಲ್ಲ

೨೯. ಅತ್ತೆ ಅವ್ವಿಯಲ್ಲ ಹಿತ್ತಾಳೆ ಚಿನ್ನಲ್ಲ.

೩೦. ಅತ್ತೆ ಸಿಂಗಾರಾಗ್ವಂಕ್ರಿಗೆ ಮಾವ ಗಟ್ಟ ಹತ್ತದ

೩೧. ಅತ್ತೆ ಒಳ್ಳೆಯವ್ಳ ಚಿಪ್ಪ ಸೆಣ್ಣ.

೩೨. ಅಂತ್ಲೇ ಬಂದದ್ ಉಂತ್ಲೇ ಹೋಯ್ತು

೩೩. ಅಂದ್ರಬಡ್ವ ಬಂದ್ರ ಹಡ್ವ
೩೪. ಅನ್ನ ಹಾಕ್ದವ್ನ ಮನಿಗೆ ಕನ್ನ ಹಾಕ್ಬ್ಯೆಡಾ
೩೫. ಅಂಬ್ಲಿಯಂತಾ ಊಟಿಲ್ಲಾ ಕಂಬ್ಳಿಯಂತಾ ಹೊದ್ಕಿಲ್ಲಾ
೩೬. ಅಮ್ಮಾ ಪಡಿಹಾಕ್ ಅಂದ್ರೆ ಹಾಕ್ವರ, ರಂಡೆ ಪಡಿಹಾಕ್ ಅಂದ್ರೆ ಹಾಕ್ವರೆ
೩೭. ಅಂಬ್ಲಿ ಉಂಬಂವ್ಗೆ ಅಂಬಾರಿ ಕನ್ಸ
೩೮. ಅರ್ಮನಿಗ್ ಹೋಗೆ ಅಂಬ್ಲಿ ಬೇಡೂದೆ?
೩೯. ಅಂತೂ ಇಂತೂ ಕುಂತೀ ಮಕ್ಳಿಗ್ ವನವಾಸ
೪೦. ಅರ್ವತ್ ಉರ್ಸಕ್ ಅರ್ಳ್ಮರ್ಳ
೪೧. ಅರಿಯೆ ಅಂದ್ರೆ ಅರ್ವತ್ ಗುಣ
೪೨. ಅಸೂರ್ಿ ಬಳ್ಳೆ ಕಾಲಿಗ್ ಸುತ್ತದಂತೆ
೪೩. ಅಲ್ಲದ ಕೆಲ್ಸಕ್ ಹೋಗೆ ಹಲ್ ಮುರಿಸ್ಕಂಡ
೪೪. ಅಲ್ಪಿಗ್ ಐಶ್ವರ್ಯ ಬಂದ್ರೆ ಅರ್ದಾರಾತ್ರೀಗ್ ಕೊಡಿ ಹೆಡ್ದಾ
೪೫. ಅಲ್ದೇದ್ ಮಾಡದ್ರೆ ಆಗ್‌ಬಾರ್ದ್ದ ಆಗೂದ
೪೬. ಅಲ್ಲಗೆಟ್ಟವ್ನ ಸಂಗಾ ಅಭಿಮಾನ್ ಭಂಗಾ
೪೭. ಅವ್ವೆ ನೋಡ್ತೀದ್ ಹೊಟ್ಟೆ ಹಿಂಡ್ತೆ ನೋಡ್ತೀದ್ ಮೊಟ್ಟೆ
೪೮. ಅಳ್ದೂರಿಗೆ ಒಳ್ದವ್ನೇ ಗೌಡ

ಆ.

೪೯. ಆಕ್ಳ ಕಪ್ಪಾದ್ರೆ ಹಾಲ್ ಕಪ್ಪೆ
೫೦. ಆಕಾಸ ಹರ್ದ್ದ ಬೀಳ್ವಾಗೆ ಕೊಡೆ ಕಾಯೂದೆ
೫೧. ಆ ಕಿಮೀಲ್ ಕೇಳೆ ಈ ಕಿಮಿಲ್ ಬೆಡ್ಬೇಕ
೫೨. ಆಗೂ ಕಾಲ್ಕೆ ಆತೀದ ಹೋಗೂಲಾಲ್ಕೆ ಹೋತೀದ
೫೩. ಆಗೆಂಡೆ ಹ್ವೊದ್ರೆ ಮಾಗೆಂಡೆ
೫೪. ಆಡೆ ಒಂಡವ ಕೆಟ್ಟ ಕೇಡ ಇಣ್ದವ ಕೆಟ್ಟ.
೫೪. ಆದ್ಲಿ ಮೊಳಿಗೆ ಆದ್ವಾಂಗ್ ಬೇಜಾ ಹಾಕ
೫೫. ಆದ್ಲಿ ಮೊಳೆ ಹೊಯ್ದಂಗೆ ಆರೂ ನಕ್ಷತ್ರ ಹುಯ್ತಿದ
೫೬. ಆಡ್ಡ ಮಾತೀಗ್ ತಪ್ಪೂಕಾಗಾ ಬ್ಯೆಡ್ಡ ಕೆಲ್ಸ ಮಾಡೂಕಾಗಾ
೫೭. ಆನಿಯಾಗಿ ಸುಪ್ ಮೇಯೂಕಿಂತ ಇರ್ಗ್ದ ಆಗೆ ಸೆಕ್ರಿ ಮೇಯ
೫೮. ಆನಿಮ್ಯೆನ್ ಹೋಗ್ವಂವ ಕುನ್‌ಕೂಗದ್ರೆ ಇಳೂನೆ?
೫೯. ಆನಿ ಕದ್ರೂ ಕಳ್ಳ ಅಡ್ಕಿಕದ್ರೂ ಕಳ್ಳ
೬೦. ಆನೀಗ್ ಅಂಗಿ ಹುಲಿಸ್ದಂಗಾಯ್ತು.
೬೧. ಆನೀಗೆ ಚೆಡ್ಡಿ ಹುಲಿಸೂಕ ಹ್ವೊದಾ
೬೨. ಆನೀಗ್ ಸತ್ರೂ ಸಾವ್ರ ಎದ್ರೂ ಸಾವ್ರ
೬೩. ಆಯಾ ನೋಡೆ ಪಾಯಾ ಹಾಕ ಕುಲನೋಡ್ ಹಿಣ್‌ತಾ
೬೪. ಆರ್ ಹೆತ್ತವ್ಳೀಗಿಂತ ಮೂರ್ ಹೆತ್ತವ್ಳ ಜಾಣೆ ಅಂದಂಗಾಯ್ತು.

೬೫. ಆಳ್ ಮಾಡೂ ಕೆಲ್ಸ ಹಾಳ ತಾಮಾಡೂ ಕೆಲ್ಸ ಮೇಲ
೬೬. ಆಳ ಉಡ್ದಾದ್ರೂ ಕೂಳಿಗ್ ದಂಡ
೬೭. ಆಳ್‌ನಲ್ ಉಡ್ದಾಗ ಕಾಳಗ್ದಲ್ ಕಲಿಯಾಗ
೬೮. ಆಳಾಗ್ ದುಡಿ ಅರಸಾಗ್ ಉಣ್ಣ

ಇ.

೬೯. ಇಕ್ಕೆ ಹಂಗ್ಲೂಕಾಗಾ ಸುಕ್ಕೆ ಕುಣೂಕಾಗಾ
೭೦. ಇಂಗಡ್ಕಿಂತ ಸಂಗಡ ಮೇಲ
೭೧. ಇಡ್ಗದ್ ಕಾಲೇ ಇಡ್ಲೂದ
೭೨. ಇತ್ತ ಏರಿಗ್ ಏರದ್ರೆ ಕ್ವಾಣಾ ಕೆರೀಗ್ ಇಳಿತ
೭೩. ಇತ್ತೀಗೆ ಜರ ಬಂದ್ರೆ ಕತ್ತೀಗ್ ಬರಕೊಟ್ರ
೭೪. ಇದ್ ಮಕ್ಳೀಗ್ ಕೂಳಿಲ್ಲ ಮತ್ ಹತ್ ಕೊಡೋ ಸದಾಸಿವ ಅಂದ
೭೫. ಇದ್ದೀ ಇಲ್‌ದೇದವ ಹದ್ದಿಗಿಂತ ಕಡೆ
೭೬. ಇಪ್ಪತ್ತಕ್ಕೆ ಯಜಮಾನ್ಕೆ ಬ್ಯೆಡಾ ಎಪ್ಪತ್ತಕ್ಕೆ ಹೇಲಾಟ ಬ್ಯೆಡಾ
೭೭. ಇಬ್ರ ನ್ಯಾಯಾ ಮೂರ್‌ನೇಯಂವ್ಗೆ ಆಯಾ
೭೮. ಇರು ಇತ್ನ ಕೋಡೆ ಹೋರಾಟಸಲ್ಲ
೭೯. ಇರೂದ್ ಕೋಳಿಗೂಡ ಕನ್ಸ ಅರ್ಮನೀದ
೮೦. ಇಲಿ ಒಟ್ಟಿಲಿಟ್ಟೆ ಬಿಲ ಮುಚ್ದ್ರ ಕಡ
೮೧. ಇಲಿ ಸಿಟ್ಟಿಗೆ ಮನಿಗ್ ಬಿಂಕಿಕೊಟ್ಟ
೮೨. ಇಲೆ ಹ್ವೊದಲ್ಲೆ ಹುಲೆ ಹೋಯ್ತಂದ್ರ

ಈ.

೮೩. ಈ ಕಿಮೀಲ್ ಕೇಳೆ ಆ ಕಿಮೀಲ್ ಬೆಡ್ಬೇಕ
೮೪. ಈ ಕೈಲ್ ಕೊಟ್ಟಿದ್ದ ಆ ಕೈಗೆ ಗುತ್ತಾಗುಕಾಗಾ

ಉ.

೮೫. ಉಗ್ರಲ್ ಹೋಗೂದ್ಕೆ ಕುಡ್ಳಿ ತಕ್ಕಂಡ
೮೬ ಉಚ್ಚೀಲೆ ಗಾಳ ಹಾಕ್ದಂಗೆ
೮೭. ಉಡಾ ಹುಕ್ದಂಗ್ ಆಯ್ತೆ
೮೮. ಉಂಡ್ ಉಂಡ್ ಮನ್ಗ್‌ದವ್ನ ಮನಹಾಳ
೮೯. ಉಂಡ್ ಮಾಯ್ನಹಣ್ ತಿನ್ನ ಹಸದೆ ಹಲ್ಸ್ನ ಹಣ್ಣ ತಿನ್ನ
೯೦. ಉತ್ತದ್ರೆ ಸರಿಯಪ್ಪ ಸರದ್ರೆ ಉತ್ತಪ್ಪ
೯೧. ಉತ್ರಿ ಮೊಳೆ ಹ್ವೊದ್ರೆ ಬತ್ತೆಲ್ಲಾ ಹುಳ್ಳ
೯೨. ಉಂಡ್ಯಾ ಕೇಳದ್ರೆ ಮುಂಡಾಸ್ ಮೋವತ್ತ ಮೊಳಾ ಅಂದಾ
೯೩. ಉದ್ರೀ ಕೊಟ್ಟವ್ನ ನಿದ್ರೆಲ್ಲ ಹಾಳ
೯೪. ಉಂದ್ ಸುಳ್ ಮುಚ್ಚೂಕ್ ಒಂಬತ್ ಸುಳ್ ಹೇಳ್ದ.
೯೪. ಉಂದ್ ಕಪ್ ಎಯ್ಡ್ ತುಂಡ

೯೬. ಉಂದೇ ಕಯ್ಲ್ಲಿ ಚಪ್ಪಾಳಿಯಾಗುದಲ
೯೭. ಉದ್ಯೋಗೆಲ್ದೇದ್ ಆಚೇರೆ ಮಗ್ನ ಪುಕ್ಕಿ ಕಿತ್ತದಾ
೯೮. ಉಪ್ ತೆಂದವ ನೀರ ಕುಡಿತ್ಯಾ
೯೯. ಉಪ್ ಒಂಡವ್ರ ಮನಿಗೆ ನಿಪ್ ಸೋಕೂಕಾಗಾ
೧೦೦. ಉಪಾಯ ಬಲ್ಲಂವ್ಗೆ ಅಪಾಯ ಇಲ್ಲ
೧೦೧. ಉಪ್ಪಿಲ್ಲದ ಓಟ ರುಚಿಯಲ್ಲ ತುಪ್ಪಿಲ್ಲದ ಹೋಳ್ಗಿ ರುಚಿಯಲ್ಲ
೧೦೨. ಉಂಬೂದ್ ಹುಳಿ ಅಂಬ್ಲೆ ಹೇಳೂದ ಸೆಣ್ಣಕ್ಕಿ ಅನ್ನ
೧೦೩. ಉರು ಹುಣ್ಣಿಗೆ ಉಪ್ಪ ಹಾಕ್ದ

ಊ.

೧೦೪. ಊರ್‌ಮ್ಯೆನ್ ಊರ್ ಬೆದ್ರೆ ಸಾನ್ ಬೋಗ ಸ್ಯೆಂಟ್ ಹೋಯ್ತು.
೧೦೫. ಊರಲ್ ರಂಗ ಪರೂರಲ್ ಮಂಗ
೧೦೬. ಊರಿಗ್ ಅರ್ಸ ಅವ್ವೀಗ್ ಮಗ
೧೦೬. ಊರಿಗ್ ಬಂದ್ ಸೊಸೆ ನೀರೀಗ ಬರ್ದೇ ಹೋಗೂದೆ
೧೦೭. ಊರೀಗ್ ಬಂದ್ ಮಾರೆ ಪ್ವೊರ್ಸ್ನ ಬಿಡೂದೆ?
೧೦೮. ಊರಿಗ್ ಉಪ್ಕಾರೆ ಮನಿಗೆ ಮಾರೆ
೧೦೯. ಊರಿಗ್ ಬಂದ್ ಮಾರಿಯ ಮಾನೀಗ್ ಹುಕ್ಕಸ್ಕಂಡ
೧೧೦. ಊರಿಗ್ ಬುದ್ಧಿಹೇಳೆ ಒಲೀಲ್ ಉಚ್ಚೆ ಹೊಯ್ದ
೧೧೧. ಊರೆಂಜ್ಲ ತಿಂಬೂ ನಾರಿಗೆ ಯಾರೆಂಜ್ಲ ಆದ್ರೇನ?

ಎ.

೧೧೨. ಎಟ್ರೆ ತೊಟ್ರೆ ಪುಟ್ಟಕ್ಕ ಚೆಂದ
೧೧೩. ಎಣ್ ಬರ್‍ವಾಗೆ ಗಾಣಾ ಮುರೀತ
೧೧೪. ಎಪ್ಪತ್ ಗುಡಿ ಉಪ್ನಕಾಯ್ ಕಚ್ದವ್ಳಿಗೆ ಗಂಡ್ನ ಗರ್ಜೀದೆ?
೧೧೫. ಎಮ್ಮಿ ತಂದ್ಕಂಡ್ ದಾಂಬೀಗ್ ದುಡ್ಡಿಲ್ಲ ಅಂದ್ಹಂಗೆ
೧೧೬. ಎಮ್ಮೀಗ್ ಎಯ್ಡ್ ಕುಂಬ ಹೆಮ್ಮಿಗ್ ಹತ್ತ್ ಕುಂಬ
೧೧೭. ಎಲ್ಲಾ ಬಲ್ಲಪ್ಪ ಕೇಳ್ದ್ರೆ ಕಲ್ಲಪ್ಪ
೧೧೮. ಎಲ್ಲಾ ಬೆಟ್ಟಾ ಬಂಗಿ ನೆಟ್ಟ
೧೧೯. ಎಲ್ಲೋರ್ ಮನಿ ದ್ವೊಸೀನೂ ತೂತೇ
೧೨೦. ಎಲ್ರೂ ಗ್ವೊಕ್ಣಕೆ ಹ್ವೊದ್ರೆ ಗೊಕ್ನದವ್ರ ಗಾಳಾ ಹಾಕೂಕ್ ಹ್ವೊದ್ರ

ಏ.

೧೨೧. ಏರ್ದಂವ ಇಳಿಲೇ ಬೇಕ
೧೨೨. ಏರ್ದ ಬಿಸ್ಲ ಇಳಿಲೇ ಬೇಕ

ಐ.

೧೨೩. ಐದೂ ಬಿಳ್ಳ ಸಮಾ ಇರೂದಲ

ಒ.

೧೨೪. ಒಕ್ಕಟ್ಟೆದ್ರೆ ಬಲ

೧೨೫. ಒಡ್ಡಮಡ್ಕಿ ಕೂಡ್ಸೂಕಾಗೂದಲ

೧೨೬. ಒಂಡ್ ಮನೀಗ್ ಎಯ್ಡು ಬಗೀಬ್ಯೆಡಾ

೧೨೭. ಒಂಡ್ ಮನಿ ಜಂತಿ ಅಳೀಬ್ಯೆಡಾ

೧೨೮. ಒಂಡ ಮನಿ ಗಳ ಅಳೂಕಾಗಾ

೧೨೯. ಒಂಡಂವ್ಗೆ ಹಸ್ವಿಲ್ಲ ಮಿಂಡ್ಗೆ ಮರ್ಯಾದಿಲ್ಲ

೧೩೦. ಒಂಡದ್ದಟ್ಟೂ ಕುಂಡೀಲ್ ಹೋಯ್ತು

೧೩೧. ಒಂಡವ್ರೀಗ್ ಗುತ್ತೆ ಉಪಾಸೆದ್ದವ್ರ ಕಟ್ಟ.

೧೩೨. ಒಡ್ವೆದ್ರೂ ಬಡ್ವೆ ಗಂಡೆದ್ರೂ ಮುಂಡೆ

೧೩೩. ಒರ್ದಂವ್ರ ಉಪ್ ಕಚ್ಚೂದೆ

೧೩೪. ಒಲದ್ರೆ ನಾರೆ ಮೊಸದ್ರೆ ಮಾರೆ

೧೩೫. ಒಲ್ಲದ ಗಂಡ್ಗೆ ಬೆಣ್ಣೀಲ್ ಕಲ್ಲ

೧೩೬. ಒಳ್ಗೆಲ್ಲಾ ಕುಳ್ಕ ಮ್ಯೆನೆಲ್ಲಾ ತಳ್ಕ

ಓ.

೧೩೭. ಓಟ ಬಲ್ಲಂವ್ಗೆ ರ್‍ವೊಗಿಲ್ಲ ಮಾತ್ ಬಲ್ಲಂವ್ಗೆ ಜಗ್ಳವಿಲ್ಲ.

೧೩೮. ಓಟಕ್ಕೆ ಮುದ್ಲೆ ಉಪ್ನಕಾಯ ಮಾತಿಗ್ ಮುದ್ಲೆ ಗಾದಿಮಾತ

೧೩೯. ಓಟಕ್ಕೆಲ್ದೇದ್ ಉಪ್ಪನಕಾಯ ಸ್ಯೆಂಟಕ್ಕೂ ಬ್ಯೆಡಾ

೧೪೦. ಓಟ್ಕೆ ಮುಂದೆ ಕೋಟ್ಕೆ ಹಿಂದೆ

೧೪೧. ಓಡ್ಹೋಗ್ವವ್ನ ಸ್ಯೆಂಟಾ ಹರ್‌ಕಂಡಟ್ಟೇ ಬಂತ

೧೪೨. ಓತಿಕಾಟ್ಕೆ ಬೇಲಿ ಸಾಕ್ಸಿ

೧೪೩. ಓದ್ ಒಕ್ಕಾಲ ಬುದ್ದೆ ಮುಕ್ಕಾಲ

೧೪೪. ಓದೂದ ಕಾಸಿಕಂಡ ತಿಂಬೂದ ಮಸೀಕೆಂಡ

೧೪೫. ಓದ್ ಓದೆ ಕೂಚಬಟ್ಟ ಮಳ್ಳಾದ

೧೪೬. ಓದ್ ಓದೆ ಮಾಚ್‌ಬಟ್ಟಾ ಮಳ್ಳಾದ

ಕ.

೧೪೭. ಕಂಕ್ಳಲ್ ಕೋಲ ಬಾಯಲ್ ಬಣ್ಣಾಣೆ

೧೪೮. ಕಂಕ್‌ಳಲ್ ಕುರಸಲ್ಲ ಕುಂಕ್ಣೇರ ನೆರೆಸಲ್ಲ

೧೪೯. ಕಚ್ಚೂ ಕುನ್ನೆ ಬುಗ್ಳುದಲ ಬುಗ್ಳು ಕುನ್ನೆ ಕಚ್ಚೂದಲ

೧೫೦. ಕಟ್ದ್ ಕುನ್ನೆ ಮೊಲ ಹಿಡೂದೆ?

೧೫೨. ಕಟ್ದ ಗುಟ್ಟ ಹಾಕ್ದ ಹುಲ್ಲ

೧೫೩. ಕಟ್ಕಂಡೋಳ ಕೊನೀತಂಕ ಇಳ್ಕಂಡೋಳ ಕುಡೂತಂಕ

೧೫೪. ಕಡ್ಡಿ ಪೈಲ್‌ವಾನ ಗುಡ್ಡನಿಗೀತಿ ಅಂದ

೧೫೫. ಕಂಡದ್ ಹೇಳದ್ರೆ ಕೆಂಡದಂತ ಕ್ವೋಪ
೧೫೬. ಕಂಡೂ ಕಂಡೂ ಹೊಂಡಕ್ ಬಿದ್ದ
೧೫೭. ಕಂಡೋರ್ ಹಿಂಡ್ತಿ ಮಂಡೆ ಚೆಂದ
೧೫೮. ಕಂಡೋರ್ ಮಕ್ಳ ಬಾವೀಗಾ ಹಾಕ್ ನೆಲಿ ನೋಡ್ದ
೧೫೯. ಕಣ್ಣಲ್ ಕಂಡ್ರೂ ಪರಾಮರ್ಸ ನ್ವೊಡ್ಬೇಕ
೧೬೦. ಕಣ್ಣಿಗ್ ಕಪ್ಪ್ ಚೆಂದ ಮನಿಗ್ ಹಲೆ ಚೆಂದ
೧೬೧. ಕಣ್ಣೀ ಕಳಚ್ದ ಹೋರೆ
೧೬೨. ಕತ್ತಿ ಗಾಯಾ ಮಾಣೂದ ಮಾತ್ನ ಗಾಯಾ ಮಾಣೂದಲಾ
೧೬೩. ಕತ್ತೀಗ್ ಗುತ್ತೆ ಕಸ್ತೂರಿ ಪರಮಳ
೧೬೪. ಕತ್ತೀಗೆ ಲತ್ತಿ ಪಿಟ್ಟ ಬುದ್ವಂತ್ಗೆ ಮಾತ್ನ ಪಿಟ್ಟ
೧೬೫. ಕಬ್ಣ ಕಾದಾಗೇ ಬಡಿ.
೧೬೬. ಕಬ್ಬ ಸಿಮಿಯಂದೆ ಬೇರ ಜಿಗಿಬ್ಯೆಡಾ
೧೬೭. ಕಯ್ ಕಿಸ್ರಾದ್ರೆ ಬಾಯ್ ಮುಸ್ರ
೧೬೮. ಕತ್ತಿ ಹಿಂದ್ ಹ್ವೊಗ್‌ಬ್ಯೆಡಾ ಕತ್ತಿ ಮುಂದ್ ನೆಲ್‌ಬ್ಯೆಡಾ
೧೬೯. ಕಂಯ್ ಸೋರಿಕಾಯ ಕುಡಿಯಾದ್ರೇನ ಮಿಡಿಯಾದ್ರೇನ
೧೭೦. ಕಯ್ಲ ಆಗ್ದೇದವ ಮೀಯ್ ಹರ್ಕಂಡ
೧೭೧. ಕರ್ದ ಹಿಣ್ ಕೊಟ್ರೆ ಅಳೀಗ್ ಮಲ್ ರ್‍ವೊಗಾ
೧೭೨. ಕರಿ ಬಟ್ನ ನಂಬ್‌ಬ್ಯೆಡಾ ಬಿಳಿ ಹೊಲಿನ್ ನಂಬ್‌ಬ್ಯೆಡಾ
೧೭೩. ಕಳ್‌ದ್ಯೆವ್ರೀಗ್ ಸುಳ್ ಗುನಗ
೧೭೪. ಕಳ್ನ ಕೈಲೆ ಕೀಲಿ ಕೊಟ್ಟಂಗಾಯ್ತು
೧೭೫. ಕಳ್ನಕೋಡೆ ಬೇಗ ಕೊಟ್ಟಂಗಾಯ್ತು
೧೭೬. ಕಳ್ಳರ್ ನಂಬದ್ರೂ ಕುಳ್ರ ನಂಬೂಕಾಗಾ
೧೭೭. ಕಾಲ್ಮಿಟ್ನಲ್ ಕಲ್ ಸಿಕ್ದಂಗೆ ಆಯ್ತು
೧೭೮. ಕಾಳ್ ಕಂಡಲ್ ಕೋಳೆ ಕೂಳ್ ಕಂಡಲ್ ಕುನ್ನೆ
೧೭೯. ಕುಂಟಿತ್ತು ಕುಯ್ದಿತ್ತೂ ಇಂಟೂರ್ನ ಬ್ಯೆಸಾಯಾ
೧೮೦. ಕುಡ್ಡಿ ಕಾವ ಕುಲ್ಕ್ ಮಿತ್ತ
೧೮೧. ಕಾಂಜಗಣ್ಣ್ ಬರ್ವಸಿಲ್ಲ ಕರಿ ಕುನ್ನಿಗ್ ಹರಾಸಿಲ್ಲ
೧೮೨. ಕಾಳಿಯಾಗ್ಲೆ ಬೋಳಿಯಾಗ್ಲೆ ನೋಳ್ ಹ್ವೊದದ್ದೇ ಸಂತ
೧೮೩. ಕಿಡುಕಾಲ್ಕೆ ಬುದ್ದಿಲ್ಲ ಮರ್ಣ ಕಾಲ್ಕೆ ಮದ್ದಿಲ್ಲ
೧೮೪. ಕುಟ್‌ಕಂಡ್ ಕುದಿಬ್ಯೆಡಾ
೧೮೫. ಕುಡ್ಕ್ನ ಸಂಗ ಅಭಿಮಾನ ಭಂಗ
೧೮೬. ಕುಣ್ದ ಕುಣ್ದ ಕೊಂಡಕ್ ಬೀಳ್ವಳ ಮಾಸ್ತಿಯೆ.
೧೮೭. ಕುಣೂಕ್ ತಿಳಿದೇದ ಸೋಳೆ ಅಂಗ್ಳ ದುಂಕ್ ಅಂತ
೧೮೮. ಕುದ್ರೀ ಕುಟ್ ಕುನ್ನಿ ತಂದ್ರ

೧೮೯. ಕುದ್ರಗೇಡಿ ಕುಲಹಾಳ ಮಂತ್ರವಾದಿ ಮನ ಹಾಳ
೧೯೦. ಕುನ್ನಿ ಮೊಲೀಲೆ ಹಾಲೆದ್ದಂಗೆ
೧೯೧. ಕುನ್ನೀ ಬಾಯ್ಲ ಕೋಲ್ ಹಿಟ್ಟದ್ರೆ ಕೊಲ್ಲಾಪುರ್ಕೆಲ್ಲಾ ಸುದ್ದೆ
೧೯೨. ಕುಯ್ಡ ಬಿಕ್ಕೀಗೆ ಇಲೆ ಸಿಕ್ದಂಗಾಯ್ತ.
೧೯೩. ಕುಯ್ಡ ಆನಿ ಕಂಡಂತೆ
೧೯೪. ಕುಯ್ಡ್ಗೆ ಕನ್ನೂಡ್ಯಕೆ
೧೯೫. ಕುರಿ ಕೇಳೆ ಸಂಬಾರಾ ಅರೂದೆ?
೧೯೬. ಕುರುನ್ ಮ್ಯೆನ್ ಬರೀ ಹಾಕ್ದ
೧೯೭. ಕುಲಾಕೆಟ್ರೂ ಸುಕ ಪಡ್ಬೇಕ
೧೯೮. ಕುಳ್ತೊಂಡ್ರೆ ಕುಡ್ಕೀ ಹೊನ್ ಸಾಲಾ
೧೯೯. ಕೂಳಿದ್ದಲ್ ಕುನ್ನೆ ಹಾಲಿದ್ದಲ್ ಬಿಕ್ಕ
೨೦೦. ಕೆರಿನೀರ ಕೆರಿಗೇ ಹಾಕ್ದ
೨೦೧. ಕೆಲ್ಸಗೇಡಿಗೆ ನಿದ್ರೆ ಹಿಚ್ಚ
೨೦೨. ಕೆಲ್ಸ ಇಲ್ದ ಆಚೇರೆ ಮಗ್ನ ಪುಕ್ಳಿ ಕಿತ್ತದ
೨೦೩. ಕೊಟ್ಟ ಸಾಲಾ ಕ್ಯಾಳ್ದೀ ಹೋಯ್ತ ಮಾಡ್ತ ಹೊಲ ನ್ವೊಡ್ದೇ ಹೋಯ್ತ
೨೦೪. ಕೊಟ್ಟದ್ ತಂಗೆ ಬೈತದ್ ಪರ್ರಿಗೆ
೨೦೫. ಕೊಂದ್ ಪಾಪ ತಿಂದ್ ಪರಿಹಾರ
೨೦೬. ಕ್ವೊಣಿ ಕೋಸಾ ಕೊಳ್ದಾ ಓಣಿ ಕೋಸ ಬೆಳ್ದ
೨೦೭. ಕೋಲೂ ಮುರಿಲೇಲ ಹಾವೂ ಸಾಯ್ಲೇಲಾ
೨೦೮. ಕೋಳಿ ಕೇಳೆ ಸಂಬಾರಾ ಅರೂದೆ
೨೦೯. ಕೋಳಿ ತಿಂಬವ ಹ್ವೊದಾ ಕ್ವೊಣನ ತಿಂಬವ ಬಂದ
೨೧೦. ಕೌರವ್ರೀಗೂ ಬಾವ ಪಾಂಡವ್ರೀಗೂ ಬಾವಾ

ಗ.

೨೧೧. ಗಂಜೀ ಒಂಡ್ರೂ ಗಂಡ್ರ ಮನೆ ಲೇಸ
೨೧೨. ಗಂಡ್ ಸತ್ ದುಕ್ಕ್ ಬ್ಯೆರೇ ಬುಡ್ ಕೂಪ್ನ ಉರ್‌ಬ್ಯೆರೇ
೨೧೩. ಗಂಡ ಹಿಂಡ್ರಜಗ್ಳ ಉಂಡ್ ಮನ್ಗೂತಂಕ
೨೧೪. ಗಂಡಾ ಹಿಂಡ್ರ ಜಗಳ್‌ದಲ್ ಮಕ್ಳ ಬಡವಾದ್ರ
೨೧೫. ಗಂಡಾಳ್ ತಂದ್ರೆ ಮಿಂಡ್ನೂ ಆದ
೨೧೬. ಗಂಡೀಗ್ ಚಟಾ ಬ್ಯೆಡಾ ಹಿಣ್ಣೀಗ್ ಹಟಾ ಬ್ಯೆಡಾ
೨೧೭. ಗಂಡ್ಗೆ ಗಂಜೆ ಮಿಂಡ್ಗೆ ಪಾಯ್ಸ
೨೧೮. ಗಂದೆದ್ದಲ್ ನೊರರೆಲ್ಲಾ ಬೆಲ್ಲೆದ್ದಲ್ ನೊಣ
೨೧೯. ಗಡ್ಡಕ್ ಬಿಂಕ್ ಬೆದ್ದಾಗೆ ಬಾವಿ ತೋಡ್ದ
೨೨೦. ಗಳಸ್ದವ್ನ ಹಿಂಡ್ತೆ ಬಳಸ್ದವ್ನ ಪಾಲ

೨೨೧. ಗಾಳ ಬಂದಂಗೆ ತೂರ್ಕೊ ಬೆಲೆ ಬಂದಾಗ್ ಮಾರ್ಕೊ
೨೨೨. ಗಾಳಿ ಗುದ್ದೆಮಿಯ್ ಹುಣ್ ಮಾಡಕಂಡ
೨೨೩. ಗಿಂಟೂ ಹೋಯ್ತು ನಂಟೂ ಹೋಯ್ತು
೨೨೪. ಗಿಂಟೆಲ್ದೇದಾಗೆ ನೆಂಟ್ರಮನಿಗ್ ಹೋಗೂಕಾಗಾ
೨೨೫. ಗಿಡ್ವಾಗ್ ಬಗ್‌ದೇದ್ದ ಮರ್ವಾಗ ಬಗ್ಗೂದೆ
೨೨೬. ಗಿಳಿ ಸಾಕೆ ಗಿಡ್ಗಗ್ ಕೊಟ್ರ
೨೨೭. ಗುಡಿಕಡ್ಡೆ ಇಲಿ ಹೆಡ್ಡ
೨೨೮. ಗುಡಿಗೆ ಕಲ್ ಹೊತ್ತಂಗೆ
೨೨೯. ಗುಂಪ್ನಲ್ ಗೋವಿಂದಾ
೨೩೦. ಗೂಳ್ ಹೊಂಡಕ್ ಬೆದ್ರೆ ಆಳೀಗುಂದ್ ಕಲ್ಲ
೨೩೧. ಗೊಬ್ರೆದ್ದಲ್ ಗೊಣ್ಣುಳ ಇರೂದೇ
೨೩೨. ಗೊಣ್ಣ್ ಹುಳೂಗೆ ಗೊಬ್ರ ಹುಗ್ಗೆ

ಚ.

೨೩೩. ಚಮಗಾರ ದ್ಯೆವ್ರೀಗ್ ಮಿಟ್ಟಿನ ಪೋಜ್ಯ
೨೩೪. ಚಿನ್ನದ ಚೂಂಚೆ ಅಂದ್ ಕಣ್ಣಿಗ್ ಚುಚ್‌ಕಂಬೂಕ್ ಆತಿದೆ
೨೩೫. ಚೊಟ್ವವ್ನು ತಾನೇ ತುಟ್ಟ ತೂಗ್ವವ್ನು ತಾನೇ

ಜ.

೨೩೬. ಜನಾಮಳ್ಳೋ ಜಾತ್ರೆ ಮಳ್ಳೊ
೨೩೭. ಜಲನೋಡ್ ಬಾವಿಕಡಿ ಕುಲನೋಡ್ ಹಿಣ್‌ತಾ
೨೩೮. ಜಾತಿ ಕೆಟ್ರೊ ನೀತಿ ಕಿಡೂಕಾಗಾ

ತ.

೨೩೯. ತಂಗ್ ತಾನ ಗ್ವೊಡೀಗ್ ಮಣ್ಣ.
೨೪೦. ತಕ್ಕೋರ್ ಬಂದ್ರೆ ಇಕ್ಕರ ಮಂಚ
೨೪೧. ತುರ್ಕನ ಸಂಗ ಅಭಿಮಾನ ಭಂಗ
೨೪೨. ತರು ಸೇರಿ ನಂಬ್ಕಂಡ್ ಇರು ಸೇರಿ ಸೊಟ್ತು
೨೪೩. ತಲಿಮ್ಯೆನ್ ಬಂದಿದ್ದ ಎಲಿಮ್ಯೆನ್ ಹೋಯ್ತು.
೨೪೪. ತಾ ಕಂಡ್ ಮೊಲ್ಕೆ ಮೂರ ಕಾಲ
೨೪೫. ತಾ ಕಳ್ಳ ಪರ್ರ ನಂಬ
೨೪೬. ತಾಕಾಪೂರ್ತ ರಾಮಾಯ್ಣ
೨೪೭. ತಾಟ್‌ಗಿತ್ತೀಗೆ ಮೋಟ್‌ಸಿರ್ಗ
೨೪೮. ತಾನೂ ತಿಂಬೂದಲ ತಿಂಬೋರಿಗೂ ಬಿಡೂದಲ
೨೪೯. ತಾಮ್ರದ್ ದುಡ್ಡ ತಾಯಿ ಮಗ್ನ ಕಿಡ್‌ಸ್ತ
೨೫೦. ತಾಯಿನೋಡೆ ಮಗ್ಳತಾ ಹಾಲ್‌ನೋಡ್ ಆಕ್ಳ ತಾ

೨೫೧. ತಾಯಿ ಸತ್ರೂ ಸೋದರ ಮಾವ ಬೇಕ
೨೫೨. ತಾಯೆದ್ರೆ ತವ್ರ ನೀರೆದ್ರೆ ಹೆಗ್ಗೆರೆ
೨೫೩. ತಾ ಸಾಯ್ಬೇಕ ಸೊರ್ಗ ಕಾಣ್ಬೇಕ
೨೫೪. ತಾಳ್ದಂವ ಬಾಳ್ವ ಏರ್ದಂವ ಇಳ್ವ
೨೫೫. ತಿಪ್ಪಿಮ್ಯೆನ್ ಕುಳ್ತೆ ಉಪ್ಪರ್ಗಿ ಕನ್ಸಕಂಡ
೨೫೬. ತೀಡು ಗಂಡ್ಸು ನಂಬೂಕಾಗಾ ನಗ್ಯಾಡು ಹಿಂಗ್ಸೂ ನಂಬೂಕಾಗಾ
೨೫೭. ತುಂಬ್ದ ಕೊಡ ತುಳ್ಕುದಲ

ದ.

೨೫೮. ದಂಡ್ನಲ್ ಸೋದ್ರ ಮಾವ್ನೆ?
೨೫೯. ದನ ಸತ್ತಲ್ಲೆ ಹಪ್ಪನಹಕ್ಕೆ
೨೬೦. ದುಡ್ಕುಟ್ಟೆ ದುಕ್ಕ ತಕ್ಕಂಡ
೨೬೧. ದುಡಿತ ದುಡ್ನ ತಾಯೆ
೨೬೨. ದುಡ್ಡೀದಂದೆ ದೌಲತ್ ಮಾಡ್ಬೆಡಾ
೨೬೩. ದುಡ್ಮೆ ದುಡ್ಡನ ತಾಯೆ
೨೬೪. ದುಡ್ಡೆದ್ದವ್ನೆ ದೊಡ್ಡಪ್ಪ
೨೬೫. ದ್ಯೆವ್ರ ವರಾ ಕೊಟ್ರು ಪೊಜಾರ ಕೊಡ್ಲೇಲಾ
೨೬೬. ದೇಪ್ದ ಕೆಳ್ಗೆ ಕತ್ಲೆ
೨೬೭. ದೇಪ ಮಯ್ಯುವಾಗ ದೊಡ್ದಾತೀದ
೨೬೮. ದೊರಿ ಹಿಂಡ್ತಿಗೆ ಬಡ್ತನ ಬಂದ್ರೆ ದೀವ್ತಿಯಾಗೂದೆ?
೨೬೯. ದೊಡ್ಡೇರ್ ಮನಿಗ್ ಹಿಣ್ ಕುಡ ಬಡವೊರ್ ಮನಿ ಹಿಣ್ ತಾ
೨೭೦. ದೋಪಾ ಹಾಕದ್ರೆ ಪಾಪಾ ಹೋಗೂದೆ?
೨೭೧. ದೋರ್ನ್ ಬೆಟ್ಟ ಕಣ್ಣಿಗ್ ನುಣ್ಗೆ

ನ.

೨೭೨. ನಂಗೇ ಮುದಿ ಬ್ಯೆಡಾ ಅಪ್ಪಾ ಯಾರಿಗ್ ಹಿಣ್ ಕೇಳ್ತ್ಯಾ
೨೭೩. ನಂದೋರಾಯ್ನ ನಾಣ್ಯ ನಾಯ್ ನಿರಿ ತೆಂತ
೨೭೪. ನವ್ಲ ಕೊಣ್ದದ್ ನೋಡೆ ಕೆಂಗಾಬೋತ ಕುಣೀತ ಕಡ
೨೭೫. ನಾಡೋರಂವ ಮಾಡದ್ದ ದಂಡ್ಕೆ ಆಗೇರಂವ ಮಾಡದ್ದ ಹೆಂಡ್ಕೆ
೨೭೬. ನಾನೂ ನಾಯ್ಕಾ ನೀನೂ ನಾಯ್ಕ ದೋಣಿ ತಿಗ್ವಂವ ದೊಣ್ಣಪ್ ನಾಯ್ಕ
೨೭೭. ನಾಯಿ ಬಾಲಾ ನಳ್ಗೀಲ್ ಹಾಕದ್ರೆ ನೆಟ್ಟಾಗೂದೆ?
೨೭೮. ನಾಳಾಗ್ ಅಂಬವ್ನ ಮನೆ ಹಾಳ
೨೭೯. ನೀಡೂ ನೀರ್ನಲ್ ಕೈಬೆಟ್ಟ
೨೮೦. ನಿತ್ತಿ ಮ್ಯೆನ್ ಬಾಯಾದ್ರೆ ಮತ್ತಿಟ್ ಉಂಬೆ.
೨೮೧. ನಿಳು ತಿಂದೆ ಜಾತಿ ಕೆಟ್ಟ
೨೮೨. ನೀರ್ ಗಯ್ದದ್ರೆ ಬೆಣ್ ಬರೂದೆ

೨೮೩. ನೀರ್ನಲ್ ಹ್ವೊಮಾ ಮಾಡ್ದಂಗೆ
೨೮೪. ನೀರಿಗ್ ಬೆದ್ಮ್ಯೆನೆ ಚಿಳಿಹಂಗೀದೆ,
೨೮೫. ನೀರ್ನಲ್ ಮುಳ್ಕದಂವ್ಗೆ ಚಿಳಿ ಹಂಗೇನ
೨೮೬. ನೂರ್ ಜುಟ್ಟದ ಜೋಡಿಯಾದ್ರೂ ಮೂರ್ ಜೆಡಿ ಜೋಡಿಯಾಗುದಲ
೨೮೭. ನೂರ್ ಸುಳ್ ಹೇಳೆ ಉಂದ್ ಮುದಿ ಮಾಡ
೨೮೭. ನೆರ್ಮನೆ ಹಾಳ್ಬೆದ್ರೆ ಕರು ಕಟ್ಟೂಕ್ ಇಂಬಾಯ್ತು
೨೮೮. ನೆರ್ಮನೆ ಅಂಬೂದ ಅರ್ದಾತಾಯಿ ತಂದೆ
೨೮೯. ನೆರಮನಿ ಮುದೀದಲ್ ತುಪ್ಪಾ ಬಡ್ಸೆ ಗುರ್ತಾ ಮಾಕ್ದಂಡ
೨೯೦. ನೆಲ್ಲಕ್ಕಿ ಗತಿಯಿಲ್ಲ ಪಲ್ಲಕ್ಕಿ ಮಾತ
೨೯೧. ನ್ಯೆಲ್ಗೆ ಕುಲ ಹೇಳ್ತ

ಪ.

೨೯೨. ಪಂತೀಲೆ ಪರ್ಪಂಚ ಮಾಡೂಕಾಗಾ
೨೯೩. ಪಗ್ಡಿ ಆಡೆ ಗಂಡ್ ಕೆಟ್ಟಾ ಪುಗ್ಡಿಯಾಡ್ ಹಿಣ್ಕೆಟ್ತ
೨೯೪. ಪಾತ್ರಾನೋಡೆ ದಾನಾ ಮಾಡ.
೨೯೫. ಪಾಪೆ ಹ್ವೊದಲ್ಲೆ ಮೊಳಕಾಲ್ ನೀರ್
೨೯೬. ಪಾಲೀಗ್ ಬಂದದ್ದ ಪಂಚಾಮೃತ
೨೯೭. ಪುಕ್ಕಿ ಉರ್ಲೂಕ್ ಅರಿಲ್ಲ ಅರ್ಸ್ತನ್ನಿ ಮಾತ

ಬ.

೨೯೮. ಬಕ್ನ ಬಾರಿ ಮಾಣಿ ಮುದ್ಯಾ ಸಂತೀಗ್ ಬಂದು
೨೯೯. ಬಂಜಿಗೆ ಬ್ಯಾನಿ ಬ್ಯಾಗಣೆ ಗುತ್ತೆ
೩೦೦. ಬಗ್ಗದ್ವ್ನ ಬಿನ್ನೀಗೇ ಗುದ್ದ
೩೦೧. ಬಡವ್ನ ಕ್ವೊಪಾ ದವ್ಡಿಗ್ ಮೂಲ
೩೦೨. ಬಡವ್ನ ಹಿಂಡ್ತೆ ಎಲ್ರೀಗೂ ಅತ್ಗೆ
೩೦೩. ಬತ್ತೇ ಬತ್ತೇರಾಯ್ರ ಕುದ್ರೆ ಕತ್ತಿಯಾಯ್ತು
೩೦೪. ಬರ್ವಾಗೂ ಬುರ್ಕಯ್ಯ ಹೋಗ್ವಾಗೂ ಬುರ್ಕಯ್ಯ
೩೦೫. ಬಳ್ಗ ಎದ್ರವ್ರ ಹಾದ್ರಾ ಮುಚ್ತ
೩೦೬. ಬಳ್ಳೀಗೆ ಕಾಯ್ ಬಾದಿಯಲ್ಲ ತಾಯಿಗೆ ಮಕ್ಳ ಬಾದಿಯಲ್ಲ
೩೦೭. ಬಾಯ್ಲು ಬೆಣ್ಣೆ ಕಯ್ಲು ದೊಣ್ಣೆ
೩೦೮. ಬಾವಿಗ್ ಬೆದ್ರೂ ಬಾಂಚೋತ್ ಅಂದ
೩೦೯. ಬಾಳಿ ಹಣ್ ಕುಯ್ಯೂಕೆ ಕರಗಸ ಬೇಕೆ?
೩೧೦. ಬಾಳಿ ಬೆಳ್ದಂವ ಬಾಳ್ವ
೩೧೧. ಬಿಕ್ ಇಲ್ದೇದ ಮನೀಲೆ ಇಲೀದೇ ಕಾರಬಾರ
೩೧೨. ಬಿಕ್ ಬಿಂಕೀಗ್ ಹ್ವೊದಂಗ್ ಆಯ್ತು
೩೧೩. ಬಿಕ್ನ ಕುತ್ಗೀಗೆ ಗೆಂಟೆ ಕಟ್ವರ್ಯೆರ?

೩೧೪. ಬಿಕ್ನ ತಲಿಮ್ಯೆನ್ ದೇಪ ಕಚ್ಡ್ ಹಾಂಗೆ
೩೧೫. ಬಿಕ್ಕೀಗೆ ಆಟ ಇಲಿಗೆ ಪ್ರಾಣ ಸಂಗ್ಟ
೩೧೬. ಬಿಕ್ಕೀಗ್ ಗುತ್ತೆ ಬೆಲ್ಲದ ರುಚೆ
೩೧೭. ಬಿಟ್ಟಿ ಸೀಂಬದ್ರೆ ಹೊಟ್ ತುಂಬೂದೆ?
೩೧೮. ಬಿಡಿಗ್ ಬಿದ್ದೆ ಬುಸ್ರಾಯ್ತು
೩೧೯. ಬೀಸೂದೊಣ್ಣೆ ತಪ್ಪದ್ರ ಸ್ಯೆಕ
೩೨೦. ಬಿಳೀಕಿರುದೆಲ್ಲ ಹಾಲಲ್ಲ
೩೨೧. ಭೂಮಿ ನೋಡ ಬೇಜ ಹಾಕ ಜಲ ನೋಡೆ ಬಾವಿ ತಿಗಿ
೩೨೨. ಬೆಟ್ಟಕ್ ಚಳಿಯಾದ್ರೆ ಚಾದರ ಹುದಿಸುವವ್ರೆರ?
೩೨೩. ಬೆಟ್ಟಕ್ ಬಿಂಕ್ ಬೆದ್ರೆ ಕಾಣ್ತೀದ ಹೊಟ್ಟಿಲ್ ಬಿಂಕ್ ಬೆದ್ರೆ ಕಾಂಬೂದಲ
೩೨೪. ಬೆಂದ್ ಮನಿ ಕರಿ ಸುಕ್ಕಂಬವ
೩೨೫. ಬೆಂದ್ ಮನೀಲೆ ಚಿಳಿ ಕಾಸ್ಕಂಬಂವ
೩೨೬. ಬೆದ್ ಪಿಟ್ಟೀಗಿಂತ ನಕ್ಕ್ ಪಿಟ್ ಉರಜಾಸ್ತಿ
೩೨೭. ಬೆದ್ರೂ ಮೇಸೀಗ್ ಮಣ್ಣಾಗೇಲ
೩೨೮. ಬೆಣ್ಣಿಲ್ಲಾ ಅಂದೆ ಸುಣ್ಣಾ ತಿಂಬೂದೆ?
೩೨೯. ಬೆಲ್ಲದ ಗಣ್ಪತೆ ಪುಕ್ಕಿ ಚೂಟ್ ನಿವೇದ್ಯಾ
೩೩೦. ಬೆಲ್ಲಕೊಡ್ದೇರು ಬೆಲ್ದಂತಾ ಮಾತಾಡ
೩೩೧. ಬೆಳಿಸಿರೆ ಮೊಳ್ಕೀಲೆ
೩೩೨. ಬೆಳ್ಗಿರೂದೆಲ್ಲಾ ಹಾಲಲ್ಲಾ
೩೩೩. ಬ್ಯೆಗ್ಡೆ ಬಂಗಾರಲ್ಲ
೩೩೪. ಬೇಲೀನೇ ಹೊಲ ಮೇಯ್ತು.
೩೩೫. ಬೇಸಾಯ್‌ಗಾರಾ ಬ್ಯೆಗ್ ಸಾಯಾ
೩೩೬. ಬೇಸಾಯ್‌ಗಾರಾ ಬ್ಯೆಗ್ ಸಾಯ್ವಾ.
೩೩೭. ಬೋಳ್‌ಮರ ಗಾಳಿ ಮಿಂಡ
೩೩೮. ಬೊಕ್ಕಿ ಮ್ಯೆನ್ ಬರ ಹಾಕ್ದ

ಮ.

೩೩೯. ಮಂಗ ಮನಿ ಕಟ್ದಂಗ್ ಆಯ್ತು
೩೪೦. ಮಂಗನ ಕ್ಯೆಲೆ ಮಾಣ್ಕಾ ಕೊಟ್ಟಂಗಾಯ್ತು
೩೪೧. ಮಂಗಗೆ ಭಂಗಿ ತಿನ್ನಸ್ದಂಗಾಯ್ತು
೩೪೨. ಮಂಗಗೆ ಹೆಂಡ ಕುಡಿಸ್ದಂಗಾಯ್ತು
೩೪೩. ಮಗ್ನ ಹ್ವೊಮಾ ಅಪ್ನ ದಿವಾಳೆ
೩೪೪. ಮಜ್ಗೀಗ್ ಬಂದೆ ಮೊಗ್ಗಿ ಹುಗ್ಸೂದ್ಯಾಕೆ
೩೪೫. ಮಣ್ಣಲ್ ಎಣ್ಣೀ ತಿಗೂಕ್ ಹ್ವೊದಾ
೩೪೬. ಮಂತ್ರಕಿಂತ ಉಗ್ಳೇ ಜಾಸ್ತಿ

೩೪೭. ಮದ್ಮಗ್ನ ಬಿಟ್ಟಿ ಮುದೀಕ್ ಹ್ವೊದ್ರ ಕಡ
೩೪೮. ಮನಿ ಗಿದ್ ಮಾರ್ ಗಿಲ್ಲ
೩೪೯. ಮನಿದೇಪ ಅಂದೆ ಮುದ್ ಕುಡುಕಾತೀದೆ
೩೫೦. ಮನಿದೇಪ ಅಂದೆ ಮುದ್ ಕುಡೂದೆ
೩೫೧. ಮನಿಗಂಡ ತಂದ್ ಹಾಕ್ದ ಪುಕ್ಸಾಟ್ ಮಿಂಡ ತಿಂದ್ ಹಾಕ್ದ
೩೫೨. ಮನಿ ಒಳ್ಗೆ ಉಡ ಹುಕ್ದಂಗಾಯ್ತ
೩೫೩. ಮನ್ಸೆದ್ದಲ್ ಮಾರ್ಗ ಕನ್ಸೆದ್ದಲ್ ಸ್ವೊರ್ಗ
೩೫೪. ಮನೀಗ್ ಮಾರೆ ಪರ್ರಿಗೆ ಉಪಕಾರೆ
೩೫೫. ಮಯ್ತು ದೇಪ ದೊಡ್ಡಾಗ್ ಉರಿತೀದ.
೩೫೬. ಮಾಟ್‌ಗಾರ್ತಿ ಮಾತ್ ಕೇಳೆ ಮನಿಹಿಂಡ್ತಿ ಮರ್‍ತ್ ಕೆಟ್ಟ.
೩೫೭. ಮಾಡ್ದವ್ರ ಪಾಪಾ ಆಡ್ದವ್ರ ತಲಿಮ್ಯೆನೆ.
೩೫೮. ಮಾಡ್ದಂವ ತಿಂಬಾ ಮನಿಯಂತ ಕಡ್ಡ
೩೫೯. ಮಾಡದ್ರೆ ಗದ್ದೆ ಇಲ್ದೇರೆ ಬೆದ್ದೆ
೩೬೦. ಮಾತ್ನಲ್ ಮನಿಕಟ್ತ್, ಮನಿಗಂಡ್ಗೆ ಉಪಾಸ್ ಹಾಕ್ತ
೩೬೧. ಮಾತ್ನಲ್ ಮಲ್ಲಕ್ಕ ಕೆಲ್ಸದಲ್ ಇಲ್ಲಕ್ಕ
೩೬೨. ಮಾತ್ ಆಡ್ದರ್ ಹೋಯ್ತ ಮುತ್ತ ಒಡ್ದರ್ ಹೋಯ್ತ
೩೬೩. ಮಾತ್ ಹಿಚ್ಚಾದಾಗ ಸ್ವೊತವ್ನೇ ಜಾಣ.
೩೬೪. ಮಾತ ಮನಿ ಹಾಳ್ ಮಾಡ್ತ ಸೋಳೆ ನೆರಿ ಹಾಳ್ ಮಾಡ್ತ
೩೬೫. ಮಾತ ಬಿಳ್ಳಿ ಮೌನ ಬಂಗಾರ
೩೬೬. ಮಾನಾ ಹ್ವೊದ್ರೆ ಮರ್ಣ ಬಂದಂಗೆ
೩೬೭. ಮಾರಿಕಣ್ಣ ಕ್ವೊಣ್ಣಮ್ಯೆನೆ ಪೋರಿಕಣ್ ಪ್ವೊರ್ನಮ್ಯೆನೆ
೩೬೮. ಮಾಳಕ್ ಮುಟ್ವೊ ಚೂಡಿಯಲ್ಲ
೩೬೯. ಮಿಂಚಿ ಮಾಯಾದ ಮಾತಿಗೆ ಚಿಂತಿಸಿ ಪಲವಿಲ್ಲ
೩೭೦. ಮಾಳ್ಗಿ ಮನ ಚೆಂದಾ ಹೋಳ್ಗಿ ಓಟ್ ಚೆಂದಾ
೩೭೧. ಮಿಚ್ದ ಹಿಂಡ್ತೀಗ್ ಮರನೋಲೆ ಸೋಳಿಗ್ ಮುತ್ನೋಲೆ
೩೭೨. ಮಿಚ್ದಂವ್ಗೆ ಮಸ್ಣ ಸುಕ ನಚ್‌ದಂವ್ಗೆ ಉಚ್ಚೆಸುಕ
೩೭೩. ಮಿಂಡ್ನ ಬುಸ್ರ, ಗಂಡ್ನ ಹಿಸ್ರ
೩೭೪. ಮಿಂಡ್ಗೆ ಮಕ್ಳ ಸುಕ್ವೆ?
೩೭೫. ಮಿಂದ್ ಬಂದೆ ಬೂದಿಗುಡೀ ಹುಯ್ಡ್ದ
೩೭೬. ಮುಂಡೀ ಮುದೀದಲ್ ಒಂಡವ್ನೇ ಜಾಣ
೩೭೭. ಮುಂಡೀ ಮುದಿಕ್ ಮುನ್ನೂರ ಕಂಟ್ಕ
೩೭೮. ಮುಂಡೀ ಮುದಿಕೆ ಮುನ್ನೂರ್ ತೊಂದ್ರೆ
೩೭೯. ಮುಂಡೀಗೆ ಮುಂಡಿ ಕಂಡ್ರೆ ಉಂಡಟ್ ಸಂತೋಸ
೩೮೦. ಮುಡಿಯಾಳ ಮುಪ್ಪಾದ್ರೆ ಪರಮಾಳ ಮುಪ್ಪಾಗುದೆ

೩೮೧. ಮುತ್ತ ಮಾರದ್ರೆ ಹೋಯ್ತು ಮಾತ ಆಡದ್ರೆ ಹೋಯ್ತು
೩೮೨. ಮುತ್ತಗಕ್ಕೆ ಮೂರೇ ಎಲೆ
೩೮೩. ಮುದಿ ಆದ್ ಹುರ್ತು ಮಳ್ ಬಿಡೂದಲ ಮಳ್ ಬೆಟ್‌ಹುರ್ತು ಮುದಿಯಾಗೂದಲ
೩೮೪. ಮುದಿ ಮಾಡ್ ನೋಡ, ಮನಿ ಕಟ್ ನೋಡ
೩೮೫. ಮುದೀಕ್ ತಂದಕ್ಕೆ ಸ್ಯಾಸಿಯಿಟ್ಟೇ ಕರ್ಚಾಯ್ತು.
೩೮೬. ಮುನ್ನೀಗ್ ಮೂಗ್ ತೋರ್ಸ್ ಬ್ಯೆಡಾ
೩೮೭. ಮುಳ್ಳ್ ಮುಳ್ನಲ್ಲೇ ತಿಗಿಬೇಕ
೩೮೮. ಮುಳ್ಳುವಂಗೆ ಹುಲ್‌ಕಡ್ಡೆ ಆದಾರಾ
೩೮೯. ಮೂಗಿಗಿಂತ ಮೋಗ್ತೆ ಭಾರ
೩೯೦. ಮೂಗೆಲ್ದೇದವ್ನಿಗೆ ಮೋಗ್ತೆ ಯಾಕೆ
೩೯೧. ಮೂರ್ ಉರಸ್ನಬುದ್ದೆ ನೂರ್ ಉರ್ಸೆ
೩೯೨. ಮ್ಯೆನನ್ ನೀರ್ ಮ್ಯೆನ್ ಹರಿಬೇಕ್ ಕೆಳ್ಗ್‌ನ್ ನೀರ್ ಕೆಳ್ಗ್ ಹರಿಬೇಕ್
೩೯೩. ಮೇಸ್‌ಬರ್ವಾಗೆ ದೇಸ ಕಾಂಬೂದಲ ಮೊಲೆ ಬರ್ವಾಗ ನೆಲಾ ಕಾಂಬೂದಲ
೩೯೪. ಮೊಕನೋಡೆ ಮಣಿ ಹಾಕೂಕಾಗಾ
೩೯೫. ಮೊಕ್ಕ ಮುಂದೆ ಬಾ ಮಗ, ಬಿನ್ನೀಗೆ ಬೋಳಿಮಗ
೩೯೬. ಮೊಗ್ಗಿ ಮೊಳೆ ಹೊಯ್‌ದ್ರೆ ಮೊಗ್ಗೀಲ್ ನೀರ ಹೊಯ್ದಂಗೆ
೩೯೭. ಮೊಳಿ ನೀರ್ ಬಿಟ್ಟೆ ಮಂಜ್ನ ನೀರಿಗ್ ಬಾಯ್ ತೆಗ್ದ
೩೯೮. ಮೊಳಿ ಹನೆ ಬೆಟ್ರೂ ಮರ್ದ್ ಹನೆ ಬಿಡೂದಲ
೩೯೯. ಮೋಟ್ ಮರ ಗಾಳಿ ಮಿಂಡ.

ಯ.

೪೦೦. ಯಾದೋ್ರ್ ದುಡ್ಡ ಎಲ್ಲಮ್ನ ಜಾತ್ರೆ
೪೦೧. ಯಾರೀಗ್ ಯಾರಿಲ್ಲ ದಾರಿ ಸಂಗ್ಡಿಲ್ಲ
೪೦೨. ಯಾಸ್‌ಗಾರ್ತಿಗುಂದ್ ಕೋಸ ಹುಟ್ದ್ರೆ ಕತೆ ಮುಗೀತ
೪೦೩. ಯಾಸ್‌ಗಾರ್ತಿಗುಂದ್ ಕೋಸ್ನ ನೆವ

ರ.

೪೦೪. ರಂಡಿಗೆ ರಂಡಿ ಕಂಡ್ರೆ ಒಂಡಟ್ ಸಂತೋಸ
೪೦೫. ರಸಾ ಬಿಳ್ದೆ ಕಸಾ ತಿಂಬೂದೆ?
೪೦೬. ರಾಗಿ ತಿಂಬಂವ್ಗೆ ರ್‍ವೊಗಿಲ್ಲ
೪೦೭. ರಾತ್ರಿ ಕಂಡ್ ಬಾವೀಲೆ ಹಗ್ಲ ಬೆದ್ದ
೪೦೮. ರುಟ್ ಜಾರೆ ತುಪ್ದಲ್ ಬೆತ್ತ
೪೦೯. ರೊಕ್ಕೆದ್ರೆ ಗ್ವೊಕ್ನ ಸುಕ್ಕೆದ್ರೆ ಯಾಣ

೪೧೦. ರೋಗೆ ಬಯಸಿದ್ ಹಾಲ ವೈದ್ಯ ಕೊಟ್ಟದ್ ಹಾಲ

ಲ.

೪೧೧. ಲಕ್ಷಾಪತಿಗಿಂತ ಬಿಕ್ಷಾಪತೆ ಮ್ಯೆನೆ

ವ.

೪೧೨. ವೇದ ಸುಳ್ಳಾದ್ರು, ಗಾದೆ ಸುಳ್ಳಾಗ

ಸ.

೪೧೩. ಸಂಕ್ ಮೊರ್ದಲ್ ಸ್ನಾನ ಮಾಡ್ವಂವ
೪೧೪. ಸಂಗ್ಡ ಸಿಮಿ ಇಂಗ್ಡ ನವಿ
೪೧೫. ಸಂಜೆಗ್ ಬರು ಮೊಳಿ ಸಂಜೆಗ್ ಬರು ನೆಂಟ ಹೋದೂದಲ
೪೧೬. ಸಂತಿ ಸೋಳಿ ನಂಬೆ ಮನಿ ಹಿಂಡ್ತಿ ಬೆಟ್ಟ
೪೧೭. ಸತ್ತಿಕ್ ಸಾವಿಲ್ಲಾ ಸುಳ್ಳೀಗ್ ಸುಕಯಿಲ್ಲ
೪೧೮. ಸತ್ತೆಮ್ಮಿಗೆ ಹತ್ ಸೇರ ತುಪ್ಪ
೪೧೯. ಸತ್ತ ಎಮ್ಮಿಗೆ ಹತ್ ಸೇರ ಹಾಲ
೪೨೦. ಸತ್ತೇ ಸೊರ್ಗ ಕಾಣ್ಬೇಕ
೪೨೧. ಸಮುದ್ರದ ನೆಂಟಸ್ಥನ ಉಪ್ಪೀಗೆ ಬಡತನ
೪೨೨. ಸಲ್ಗಿ ಕೊಟ್ಟ ನಾಯಿ ನುಸ್ಲ ನಿಕ್ತ ಕಡ
೪೨೩. ಸಾವ್ರ ಕುದ್ರಿ ಸರ್ದಾರ ಮನಿ ಹಿಂಡ್ತಿಗೆ ಪಿಂಜಾರ
೪೨೪. ಸಾವ್ರ ತಲೆ ಹ್ವೊದ್ರೂ ದೀವ್ರ ತಲೆ ಹ್ವೊಗಾ
೪೨೫. ಸ್ವಾತಿ ಮೊಳೆ ಮುತ್ನಂತ ಬೆಳೆ
೪೨೬. ಸಿಕ್ಕದ್ ಮುಕ್ದಟ್ಟೇ ಲಾಭ
೪೨೭. ಸಿಗ್ಣಿ ಸವ್ವಾಸ್‌ಕಿಂತ ಗಂದದ ಕೋಡೆ ಗುದ್ದಾಟ ಮಾಡ
೪೨೮. ಸಿಗ್ಣಿ ತಮ್ಮಾ ಬಿಗ್ಣೆ, ಬಿಗ್ಣಿತಮ್ಮ ಸಿಗ್ಣೆ
೪೨೯. ಸಿಟ್ಟ ತನ್ ಮನಿನೇ ಸೊಟ್ತ
೪೩೦. ಸಿಟ್ಟೆದ್ದಲ್ಲ್ ಪಟ್ನ್ ಬಟ್ಟೆದ್ದಲ್ ತ್ವೊಟ
೪೩೧. ಸಿಟ್ನ ಕೈಲೆ ಬುದ್ದೀ ಕೊಟ್ರೆ ಸುಟ್ ಹೋಗೂದೇ
೪೩೨. ಸಿರಿ ಬಂದಾಗೆ ಕರ್ದ ದಾನಾ ಮಾಡ
೪೩೩. ಸುಳ್ ದ್ಯೆವ್ರೀಗ್ ಕಳ್ ಗುನಗ
೪೩೪. ಸೊನ್ಗಾರ್ ಕಿಮಿ ಚುಚ್ಚದ್ರೆ ಉರಿಲ್ಲ
೪೩೫. ಸೋಳ್ ಮುಪ್ಪಾದ್ರೂ ತನ್ ಚಾಳಿ ಬೆಡ್ಲೇಲಾ
೪೩೬. ಸೋಳ್ ಮುಪ್ಪಾಗ್ ಜೋಗ್ತಿ ಆಯ್ತ
೪೩೭. ಸೋಳ್ ಮುಪ್ಪಾಗೆ ಪತವರ್ತೆ ಅಂತ
೪೩೮. ಸೋಳಿಮಗ ಮಾಘ ಮಾಡ್ದಂಗಾಯ್ತ
೪೩೯. ಸೋಳಿಗ್ ಹಾಕೂ ದುಡ್ಡ ಬೆಳಿ ಹೊಲ್ಕ್ ಹಾಕ

ಹ.

೪೪೦. ಹಕ್ಕಿ ಸಾಕೆ ಬಿಕ್ನ ಕೈಲ್ ಕೊಟ್ರ
೪೪೧. ಹರ್ಕಿಗ್ ಹಂಕಾರ್ ಹಿಚ್ಚ, ಗುರ್ಕಿಗ್ ಮುಳ್ಳ್ ಹಿಚ್ಚ
೪೪೨. ಹಂಗ್ನ ಅರ್ಮನಿಗಿಂತ ನಂದೇ ಹುಲ್ಮನೆ ಸೈಕ
೪೪೩. ಹಂಗ್ನ ಓಟಾಬಿಡ ಬಂಗಿಸಂಗ ಬಿಡ
೪೪೪. ಹಗ್ಗಾನೂ ಹರೂಕಾಗಾ ಕೋಲೂ ಮುರೂಕಾಗಾ
೪೪೫. ಹಂಚಿ ಹಣ್ ತಿನ್ನ
೪೪೬. ಹಂಚೂ ಕಂಚೂ ಉಂದೇ ಅಲ್ಲ
೪೪೭. ಹಡ್ಗ ಮುಳ್ಗುವಾಗ ತನ್ನ ಹೆಡ್ಗಿಮುಟ್ಟೆ ಹೋಯ್ತು ಅಂದ
೪೪೮. ಹಣ್ ಹಂಚ್ ತಿನ್ನ ಹೂವ ಕುಟ್ ಮುಡಿ
೪೪೯. ಹಣಾ ಕಂಡ್ರೆ ಹೆಣಾನೂ ಬಾಯ್ ಬಿಡ್ತೀದ
೪೫೦. ಹಣ್ಣೆದ್ ಮರ್ಕೇ ಕಲ್ ಹುಡೂದ
೪೫೧. ಹಣ್ಣೆಲೆ ಉದ್ರುವಾಗ ಹಸಿಯೆಲೆ ನಗ್ಯಾಡ್ತ
೪೫೨. ಹತ್ ಗುಡಿಲ್ ಮನ್ಗುಂವ್ಗೆ ಹಿಂಡ್ತಿ ಹಸ್ವಿಲ್ಲ
೪೫೩. ಹಲ್ಗಿ ತಿಂಬಂವ್ಗೆ ಹಪ್ಳ ತಾಡೆ
೪೫೪. ಹತ್ತ ಹಿರೂಕಿಂತ ಮುತ್ ಹಿರೂದಲೇಸ
೪೫೫. ಹತ್ರ ಕೋಡೆ ಹನ್ನುಂದ ಪರ್ಸಿಕೋಡ್ ಗೋವಿಂದ
೪೫೬. ಹದ್ ಹಾರೂಕು ಜಿಗ್ ಮುರೂಕೂ ಸರಿಯಾಯ್ತು
೪೫೭. ಹದನೋಡ ಹರ್ಗ ಬೆದಿ ನೋಡ್ ಬಿತ್ತ
೪೫೮. ಹನಿ ಹನಿ ಕೂಡ್ ಹಳ್ಳ ದಿನಿದಿನಿ ಕೂಡೆ ಪದ
೪೫೯. ಹಬ್ಬ ತಪ್ದ್ರೂ ಹೋಳ್ಗಿ ತಪ್ಲೇಲಾ
೧೬೦. ಹರ್ಕಿ ಕುರೆ ಹಸ್ರ ಮೇಯ್ತು
೪೬೧. ಹರೂ ನೀರೀಗ್ ಸಾಸ್ತ್ರ ಇಲ್ಲ
೪೬೨. ಹಲವೂ ಮಕ್ಳ ತಾಯೆ ಹಾದೀಮ್ಯೆನ್ ಬಿದ್ ಸಾಯ್ವೆ
೪೬೩. ಹಲ್ಲೆದ್ದಾಗ ಕಡ್ಲಿಲ್ಲ ಕಡ್ಳೆದ್ದಾಗ ಹಲ್ಲಿಲ್ಲ
೪೬೪. ಹಸಿ ಗ್ವೊಡಿಮ್ಯೆ ಹಳ್ ಹೊಡ್ದಂಗ್ ಮಾತಾಡ
೪೬೫. ಹಳಿ ಗಂಡ್ನ ಪಾದ್ವೇ ಗತೆ
೪೬೬. ಹಳ್ಳೀ ದ್ಯೆವ್ರೀಗ್ ಕುಳ್ಳಿ ದೇಪ
೪೬೭. ಹಾಡೀಗ್ ಹಲವಂಗ ಮಾತೀಗ್ ಪಾವ್ಡ
೪೬೮. ಹಾದರ್ತಿಗೆ ಹಾಳೆ ಮರಿಯಾದ್ರೂ ಸ್ಯಾಕ
೪೬೯. ಹಾದೀಲ್ ಹೋಗೂ ಮಾರಿ ಮನಿ ಹುಕ್ಸ್‌ಕಂಡ
೪೭೦. ಹಾಲೆದ್ದಲ್ ಬಿಕ್ಕ ಕೂಳಿದ್ದಲ್ ಕುನ್ನೆ
೪೭೧. ಹಾವ್‌ಕುಂದೆ ಹದ್ದೀಗ್ ಹಾಕ್ದಾ
೪೭೨. ಹಾಸ್ಗೆ ಎದ್ದಟ್ಟೇ ಕಾಲ್‌ಚಾಚ

೪೭೩. ಹಾಳ್‌ರಂಡಿ ಸಂಗಮಾಡ್ ಬ್ಯೆಡಾ, ಹರ್ಕಸಿಟ್ಟಿ ಸಾಲಾ ಮಾಡ್ಬೆಡಾ
೪೭೪. ಹಾಳ್‌ರಂಡಿ ಸಂಗ ಅಭಿಮಾನ ಬಂಗ
೪೭೫. ಹಾಳ್ ಬಾವೀಗ್ ಹರ್ಕ ಹಗ್ಗ
೪೭೬. ಹಿಂಗಸ್ರ ಬಾಯ್ಲೆ ಮಾತ್ ನಿಲ್ಲೂದಲ
೪೭೭. ಹಿಂಗಸ್ರ ಬುದ್ದೆ ಮೊಳಕಾಲ್ ಕೆಳ್ಗೆ
೪೭೮. ಹಿಣ್ಣ ಮನಿ ಸಿರಿದೇವೆ ಗಂಡ ಕೋಳ್ಗಂಬ
೪೭೯. ಹಿಣ್ಣ ಸುಕ್ಕದ್ರೆ ಮನೆ ಹಾಳ
೪೮೦. ಹಿಣ್ ಹೆತ್ತವ್ನ ಪುಣ್ಯಸ್ಥೆ
೪೮೧. ಹಿಣ್ ಕುಡುವಂಕ್ರೀಗ್ ಮಾವ ದೊಡ್ಡಂವ
೪೮೨. ಹಿಣ್ ಕೊಟ್ ಮ್ಯೆನ್ ಅಳಿಯ ದೊಡ್ಡಂವ
೪೮೩. ಹಿಣ್ಣ ತಿರ್ಗಿ ಕೆಟ್ತ ಗಂಡ ಕುಳ್ತ್ ಕೆಟ್ಟ
೪೮೪. ಹಿಣ್ಣ ಮನಿ ಹೊನ್ ಕಳಸ
೪೮೫. ಹಿತ್ಲಗಿಡ ಮದ್ದಲ್ಲ
೪೮೬. ಹಿದ್ರದಂವ್ಗೆ ಹೇಲ್ ಜರ
೪೮೭. ಹಿರಿತನ್ದ ಕೋಳೆ ಬತ್ತ ತೆನ್ದೆ ಸತ್ತತ
೪೮೮. ಹಿಸ್ರ ಹಾಲಪ್ಪ ಮಜ್ಗಿ ನೀರೀಗ್ ಗೋಳಪ್ಪ
೪೮೯. ಹಿರಿಯಕ್ನ ಚಾಳೆ ಮನಿಮಂದೀಗೆಲ್ಲಾ
೪೯೦. ಹುಟ್ ಗುಣಾ ಗಟ್ಟಾ ಹತ್ತದ್ರೂ ತಪ್ಪ
೪೯೧. ಹುಟ್ ಗುಣ ಸೊಟ್ರೂ ಹ್ವೊಗಾ
೪೯೨. ಹುಟ್ಸಿದ್ದವ ಹುಲ್ ಮೇಯ್‌ಸೂನೆ?
೪೯೩. ಹುಡ್ಗಾ ಹುಟ್ಟುಕಿಂತ ಮುದ್ಲೆ ತುಟ್ಳ ಕಟ್ದ
೪೯೪. ಹುಟ್ವಾಗೆ ಅಣ್ಣಾ ತಮ್ಮ ಬಿಳ್ವಾಗೆ ದಾಯದ್‌ಕಾರ
೪೯೫. ಹುಣ್ಸೆ ಮುಪ್ಪಾದ್ರೂ ಹುಳೆ ಮುಪ್ಪಾಗದು
೪೯೬. ಹುತ್ ಬಡ್ದರೆ ಹಾವ್ ಸಾಯೂದೆ
೪೯೭. ಹುತ್ ಬಂದಾಗೆ ಕತ್ತಿಕಾಲಾದ್ರೂ ಹಿಡಿ
೪೯೮. ಹುತ್ತಿರುವಾಗ ಊರ್ ಸೇರ
೪೯೯. ಹುತ್ಕಾಹ್ವೊದ್ ಕುನ್ನೆ ಮೊಲ್ನ ಹಿಡೂದೆ?
೫೦೦. ಹುಬ್ಬೀ ಮೊಳ್ ಹೊಯ್ದರೆ ಅಬ್ಬಿಗ್ ಹಾಲ
೫೦೧. ಹುಲ್ ಆದಟ್ಟ ನಿಲ್ಲ
೫೦೨. ಹುಲಿ ಗವಿಲೆ ನಿರೆ ಹುಕ್ಕಂಡಂಗೆ
೫೦೩. ಹುಲಿ ಬಣ್ಕೆ ನಿರೆ ಮಿಯ್ ಸುಟ್ಕಂತ ಕಡ
೫೦೪. ಹುಲೆ ಹಸದ್ರೂ ಹುಲ್ ಮೇಯೂದಲ
೫೦೫. ಹುಳ್ಸೆ ಮುಪ್ಪಾದ್ರೆ ಹುಳೆ ಮುಪ್ಪೆ
೫೦೬. ಹೆತ್ತವ್ರೀಗೆ ಹಿಗ್ಳ ಮುದ್ದ

೫೦೭. ಹೇಲ್ ಬಂದಾಗೆ ಹಿತ್ಲ ಅರ್ಸೂದಲ್ಲ
೫೦೮. ಹೇನ ದೊಡ್ಡಾದ್ರೆ ಆನಿಯಾಗೂದೆ?
೫೦೯. ಹೇಳ್‌ಕೊಟ್ ಬುದ್ದಿ ಕಟ್ ಕೊಟ್ ಬುತ್ತಿ ಇಲ್ಲಿವರೀಗ್ ಬರೂದ
೫೧೦. ಹೇಳ್ಕಿ ಮಾತ್ಕೇಳಿ ರಾಮ ಹಿಂಡ್ತಿ ಬೆಟ್ಟ
೫೧೧. ಹೇಳ್ಕಿ ಮಾತ್ಕೇಳೆ ಹಿಂಡ್ತಿ ಬೆಟ್ಟ
೫೧೨. ಹೊಟ್ಟೀಗಿಲ್ದೇದ್ರೂ ಜುಟ್ಟೀಗ್ ಮಲ್ಗೆ
೫೧೩. ಹೊಳಿಗ್ ಹಾಕದ್ರೂ ಅಳದ್ ಹಾಕ
೫೧೪. ಹೊಳಿದಾಟ್ದ ಮ್ಯಾನೆ ಅಂಬಿಗ್ ಮಿಂಡ

ಔ. ನಂಬಿಕೆ, ವಿಧಿ, ನಿಷೇಧಗಳು

ನಂಬಿಕೆ

ಅ.

೦೧. ಅಟ್ಮಿಗ್ ಬರು ಅಳಿಯಾ ಅಟ್ರ ಪೋರ್ತಿ ಅಳಿಯಾ

೦೨. ಅಡ್ಡಾಬಳಂತೆ ಹುತ್ನಲ್ಲೆದ್ದವ್ರೀಗೆ ಕಟ್ಟ ಕುಡ್ತೀದ

೦೩. ಅಮಾಸಿದಿನೆ ಹಟ್ದ ಮಕ್ಳ ಅಪ್ಪಾ ಅವ್ವಿಗೆ ಕೇಡ

ಆ.

೦೪. ಆಕ್ಳ ತರೂಕ್ ಹ್ವೊದಾಗೆ ಉಚ್ಚಿ ಹೊಯ್ದ್ರಿ ಗನಾದ

೦೫. ಆಕ್ಳ ಮನಿ ಒಳ್ಗೆ ಹುಕ್ಕದ್ರೆ ಸುಬ (ಶುಭ)

ಉ.

೦೬. ಉಡದ ಮಾಯ್ಸ ಹುಗ್ಗಸ್‌ದ್ರೆ ಹಿಚ್ಚಾತೀದ

ಇ.

೦೭. ಇಟ್ಟಗೆಮ್ಮಕ್ಕೆ ಇಡ್ಡಾಗಿಯ್ ಚೂರ ಕಟ್ಟದ್ರೆ ಕಡ್ಮಿಯಾತೀದ

೦೮. ಇತ್ನ ತಯ್ಡ್ ಒಡದ್ರೆ ಹೂಡೂಕ್ ಲಾಯ್ಕಾತೀದ

೦೯. ಇತ್ತೀಗೆ ಬರ ಹಾಕದ್ರೆ ರ್ವೊಗ ಬರೂದಲ, ಮಿಯ್‌ಗಟ್ಯಾತೀದ

೧೦. ಇಪರೀತ ಸೆಕಿಯಾದಾಗ್ ಮೊಳೆಬತ್ತೀದ

ಒ.

೧೧. ಒಳ್ಯ ಕಚ್‌ದ್ರೆ ಸೊರ್ಗಿಲ್ಲ

೧೨. ಒಳ್ಳೇ ಕಾರೀ ಮಾಡ್ವಾಗೆ ಮಡ್ಕೆ ಉಡೂಕಾಗಾ

ಕ.

೧೩. ಕಡ್ಳಾದಾಗ ಜೋರ್ ಮೊಳೆ ಬತ್ತಿದ

೧೪. ಕಣ್ಗಲ್ ಕಾಯ ಬುಡದಿಂದ್ ತುಗಿವರೀಗ್ ಆದ್ರೆ ಮೊಳೆ ಬಾಳ. ಬುಡ್ಕಾದ್ರೆ ಮುದ್ಲ ಮೊಳೆ ನಿಡ್ಗಾದ್ರೆ ನಿಡ್ಗ ಮೊಳೆ, ತುರಿಗಾದ್ರೆ ತುರೀಗ್ ಮೊಳೆ

೧೫. ಕಣ್ಣಿಗೆ ಕಪ್ ಹಚ್ಚದ್ರೆ ದಿಟ್ಟಿ ತಾಗೂದಲ

೧೬. ಕನಸ್ನಲ್ಲೆ ಸೂರ್ಯ, ಚಂದ್ರ, ಬೆಟ್ಟ, ಬಸ್ವ ಕಂಡ್ರೆ ಶುಭ

೧೭. ಕನಸ್ನಲ್ಲೆ ಕ್ವೊಣಾ, ಮಂಗ ಕಂಡ್ರೆ ಕೇಡ

೧೮. ಕನಸ್ನಲ್ಲೆ ಮುದ್ಯಾಕಂಡ್ರೆ ಸಾವ

೧೯. ಕನಸ್ನಲ್ ಹಾವ್ ಕಂಡ್ರೆ ಗನಾದ

೨೦. ಕಪ್‌ಬುಟ್ಟ ಮೊಕ್ದಮ್ಮೆನ್ ಎಟ್ರೆ ದಿಟ್ಟೆ ತಾಗೂದಲ
೨೧. ಕಾಂಕಿಗೆ ಸಾವ್ರ ಉರ್ಸ್ ಆಯ್ಸು
೨೨. ಕೂಳ್ ಕಂಡಲ್ ಕುನ್ನೆ ಉಳಿತೀದ ಹಾಲಕಂಡಲ್ ಬಿಕ್ಕುಳಿತೀದ
೨೩. ಕಾಲಲ್ ಮಿಟ್ಟೆದ್ರೆ ದಿವ್ವಾ ಕೋಡ್ ಬರೂದೇ ಇಲ್ಲ
೨೪. ಕಾಲ್ಮಿಟ್ಟೆದ್ರೆ ದಿವ್ವಾ ಓಡೆ ಹೋತೀದ
೨೫. ಕೆಂಪ್ ಮ್ವೊಡಾದಾಗೆ ಬಂಗ್ಡಿಮೀನ್ ಬಾಳ ಬತ್ತೀದ
೨೬. ಕೆಟ್‌ಕಣ್ಣವ್ನ ಕಣ್ಣು ಕೂದ್ಲಕಿತ್ ಬಿಂಕಿಂಗ್ ಹಾಕದ್ರೆ ಕಣ್ ತಾಗೂದಲ
೨೭. ಕೆಪ್ಯ ಅಂದ್ರೆ ಮಂಡೋದರೆ
೨೮. ಕೆಪ್ಪಿ ಕೆಲದ್ರೆ ಮೊಳೆ ಬತ್ತೀದ
೨೯. ಕೋಳಿ ಹ್ಯಾಂಟೆ ಕೂಗದ್ರೆ ಕೇಡ
೩೦. ಕೋಳಿ ಹ್ಯಾಂಟೆ ಮೊಟ್ಟಿ ಕಚ್ಚಂಡ ಹ್ವೊದ್ರೆ ಕೇಡ
೩೧. ಕೋಳೆ ಕಲ್‌ತಿಂದ್ ಕರಗ್‌ಸ್ತೀದ

ಗ.

೩೧. ಗಂಡ್ಸ ಸದಿ ತಿಗೂಕಾಗಾ
೩೨. ಗನಾಕೆಲ್ಸಕ್ಕೆ ಹೋಗ್ವಾಗೆ ಸೌದಿ ಹೊರೆ ಸಿಕ್ಕೂಕಾಗಾ
೩೩. ಗನಾ ಕೆಲ್ಸಕೆ ಹೋಗ್ವಾಗೆ ಒಂಟಿ ಬಟ್ಟ, ಗಾಣ್ಗಿ ಕಿಲ್ಸಿ ಮಡವಾಳ ಯಾರ್ ಕಂಡ್ರೂ ಕೆಲ್ಸ ಕೆಟ್ಟಹಂಗೇ
೩೪. ಗನಾ ಕೆಲ್ಸಕ್ ಹೋಗ್ವಾಗ್ ತುಂಬ್ದ ಕೊಡ, ಬುಸ್ರಿ, ಮುತ್ತೈದಿ ಹೆಣ ಯಾವ್ದ್ ಸಿಕ್ಕದ್ರೂ ಒಳ್ಳೇದೇ
೩೫. ಗನಾ ಮಾತಾಡ್ವಾಗೆ ಗೆಂಟಿ ಸಪ್ಪಾದ್ರೆ ಒಳ್ಳೇದ
೩೬. ಗನಾ ಮಾತಾಡ್ವಾಗೆ ಗೌಳೆ ಚಿಕ್ ಚಿಕ್ ಅಂದ್ರೆ ಕರೆ ಆತೀದ
೩೭. ಗಯ್ಣ ಹೆಡ್ಗಾಗ್ ಗಿಡ್ ಇದ್ದವ್ರ ಎಳದ್ರೆ ಉದ್ದಾತರ
೩೮. ಗರ್ಡ್ ರೇಕೆ ಕೈಮ್ಮೆನೆದ್ರೆ ಹಾವ್ನ ಹಿದ್ರಕಿಲ್ಲಾ
೩೯. ಗುಮ್ಮ ಮನಿಮ್ಮೆನ್ ಕುಳ್ತೆ ಕೂಗದ್ರೆ ಕೇಡಾತೀದ

ಚ.

೪೦. ಚಿವ್ಡೆ ಬಾವಿಲ್ ಮೆಂದ್ರೆ ನೀರಲ್ ಹಾಂವ್ಸೆ (ಹಂವ್ರ) ಬಿಳಿತೀದ
೪೧. ಚೊಚ್ಲ ಬುಸ್ರೆ ಹಿಣ್ ಹೆತ್ರೆ ಗನಾದ
೪೨. ಜೇಂವ ಕುಟ್ಕಂಡವ ದಿವ್ವಾ ಆತ್ಯಾ
೪೩. ಜೈನ್ರ ಬದ್ಕ ನಾಡವ್ರೀಗೆ ಮಾತ್ರ ದಕ್ತೀದ

ತ.

೪೪. ತಲಿಮ್ಮೆನ್ ಎಯ್ಡ ಸುಳೆ ಎದ್ದಂವ್ಗೆ ಎಯ್ಡ ಹಿಂಡ್ರ
೪೫. ತಲಿಮ್ಮೆನ್ ಸ್ಯಾಸಿ ಹಾಕದ್ರೆ ಒಳ್ಳೇದಾತೀದ

೪೬. ತಿಮಿಂಗ್ಲ ಆಪತ್ನಲ್ ಕಾಯ್ತೀದ
೪೭. ತುಂಬಿ ಕೊಂದ್ರೆ ಗೋಕ್ನ ಯಾತ್ರಿ ಮಾಡ್ದಟ್ ಪುಣ್ಯ ಬತ್ತಿದ
೪೮. ತುಳ್ಸಿ ಮನೀಲ್ ಎಂಕ್ರಮಣ್ ಇರೂದೇ

ದ.

೪೯. ದಿವ್ದ ಪಾದ ಹಿಂದಾಗಿರ್ತೀದ
೫೦. ದೂಮ್‌ಕೇತು ಕಂಡ್ರೆ ಕೇಡಾತೀದ

ನ.

೫೧. ನಾಗ್ರ ಪಂಚ್ಮೀಗ್ ಬಂದಳಿಯ ನಾಚ್ಕೆ ಇಲ್ಲಾದ ಅಳಿಯ
೫೨. ನಿರಿಮೊಕ ನೋಡದ್ರೆ ಪಾಯ್ದಿ (ಲಾಭ) ಬಾಲಾ ನೋಡದ್ರೆ ನಷ್ಟ.
೫೩. ನೈಲ್ಗಿ ಮೈನ್ ಮಾಸ್ತೆದ್ದಂವ ಹೇಳ್ದಂಗ್ ಆತೀದ

ಪ.

೫೪. ಪರ್ಸೂರಾಮ್ ಸೃಷ್ಟೀಲೆ ಪ್ರಳಯ ಆಗೂದಲ
೫೫. ಪಲಾ ಬರ್ದೇದ ಮರ್ಕೆ ಗಯ್ಣ್ ಹೆಡ್ದಾಗೆ ಬತ್ತಲೇ ಹೋಗೆ ಮೊಳಿ ಹುಡಿಬೇಕ

ಬ.

೫೬. ಬಣ್‌ಕುಟ್ಟಿ ಮೀನನ ತಲೀಲೆ ಕಲ್ಲಿರ್ತೀದ
೫೭. ಬಾಳಿಮೈನ್ ಸಿಡ್ಲ ಬೆದ್ರೆ ಚೆನ್ನಾ ಆತೀದ
೫೮. ಬಳ್‌ಕೂಗದ್ರೆ ನಿಕ್ಕಿ ಸಾವಾತೀದ
೫೯. ಬಾಸಿಂಗ, ತೊಂಡ್ಲ ಹರ್ದ್ ಬಿಳೂಕಾಗಾ
೬೦. ಬಾಳಂತೆ ಸತ್ರೆ ಅಡ್ಬಾಳಂತಿಯಾತೀದ
೬೧. ಬಿಕ್ಕ ಮನಿ ಬಿಡೂಲ, ಕುನ್ನೆ ಒಡೀನ ಬಿಡುದಲ
೬೨. ಬಿಕ್ಕ ಮೊಕಾ ತೊಳದ್ರೆ ಮನಿಗೆ ನೆಂಟ್ರ ಬತ್ತರ
೬೩. ಬಿಕ್ಕು ಕುನ್ನಿ ಮುದ್ಲ್ ಹುಟ್ಡಮರಿ ತಿಂತವ
೬೪. ಬಿಂಜ್‌ಮುಳ್ ಮಿಂಚದ್ರೆ ಮೊಳೆ ದೋರಾತೀದ
೬೫. ಬೀರ್‌ದ್ಯೆವ್ರಿಗ್ ಕೋಳಿ ಕೊಟ್ರೆ ಊರಿಗ್ ಮೊಳಿ ಬೆಳಿ
೬೬. ಬೂದ್‌ಗುಂಬಳ್ ಕಾಯಾ ಬಟ್ರಿಗೆ ದಾನಾ ಕೊಡ್ಬೇಕ
೬೭. ಬೆಳ್ಳಕ್ಕಿ ಕಂಡ್ರೆ ಒಳ್ಳೇದ
೬೮. ಬೆಳ್ಗಾ ಮುಂಚ್ನ ಕನ್ಸ ಬಾಳಒಳ್ಳೇದ
೬೯. ಬೈಸ್ರಿಗೆ ಲಕ್‌ಸ್ಮದೇವ ಮನೀಗ್ ಬತ್ತೀದ

ಮ.

೭೦. ಮಕ್ಳ ದ್ಯೆವ್ರೀಗ್ ಸಮ
೭೧. ಮಂಗ್ಳಾರ ಕಟಕಟಿ

೭೨. ಮಂಜ ಕರ್ದರೆ ಮೊಳೆ ದೋರಾತೀದ
೭೩. ಮರಹೊರಸ ಮನ್ಸರ್ ದಾಟದ್ರೆ ಕುಂಟಾತ್ಯ
೭೪. ಮಾಬ್ಲೇಸ್ವರ್ ದ್ಯೆವ್ರಮನಿ ಪಾಂಡೋರ್ ಕಟ್ಟಿದ್ದ
೭೫. ಮುದಿಯಾಗ್ದೆ ಸತ್ತವ್ರ ಕನ್ನಿಕೊಲಿಯಾತರ
೭೬. ಮುದೀದಲ್ ಹಾಡ್ ಹ್ಯೆಳ್ದೀದ್ರೆ ಮಳ್ಳಾಗುದಲ
೭೭. ಮೋಲಾ ನಕ್ಷತ್ರದಲ್ ಮಕ್ಳ ಹುಟ್ಟದ್ರೆ ಅಪ್ಪಾ ಅವ್ವಿಗ್ ಕೇಡ
೭೮. ಮ್ಯೆಲ್ಗಿಯಾದ್ರೆ ಮನಿಲ್ ಇರ್ಗ ಹರೀತಿದ
೭೯. ಮ್ಯೆನ್ ಮುದ್ಲ ಹಲ್‌ಬಂದ್ರೆ ಸೋದ್ರ ಮಾವ್ಗೆ ಕೇಡ

ರ.

೮೦. ರಗ್ತ ಹರೀತೆದ್ರೆ ಅದ್ರ ಮ್ಯೆನ್ ಉಚ್ಚಿ ಹೊಯ್ದ್ರೆ ನಿಲ್ತಿದ
೮೧. ರಣ ಹಲ್ಲಿ ಬಾರ್ಸ್‌ದಾಗೆ ಹನ್ಮಂತ್ ದ್ಯೆವ್ರಿಗ್ ಬಾರ ಬತ್ತೀದ
೮೨. ರಾತ್ರೀ ಹುತ್ತೀಗೆ ಮಸ್ಣದಲ್ಲೆ ದಿವ್ವ್ ಕುಣಿತವ
೮೩. ರಾವು ಕೇತು ಸೂರ್ಯ ಚಂದ್ರರ ನುಂಗ್ದಾಗ ಗಯ್ಣ ಆತೀದ

ಸ.

೮೪. ಸುಕ್ರಾರ ಮಕ್ಳ ಹುಟ್ಟಿದ್ರೆ ಶುಭ
೮೫. ಸುಗ್ಗೀ ಮ್ಯೆಳಾ ಅಂಗ್ಳದಲ್ಲಿ ಕುಣಿಸ್‌ದ್ರೆ ಶುಭ
೮೬. ಸ್ವೊತಿ ಮೊಳಿ ಹನೆ ಚಿಪ್ಪಿಲ್ ಬೆದ್ರೆ ಮುತ್ತಾತೀದ

ಹ.

೮೭. ಹರ್ಕಿಯಾಟ ಆಡ್ಸದ್ರೆ ಮಳಿ ಬೆಳಿ ಹಿಚ್ಚಾತೀದ
೮೮. ಹಲಿಹೊಯ್ದ್ ಮನಿಗೆ ಸಿರಿ ಬತ್ತೀದ
೮೯. ಹಾವ್ನ ಹೆಡಿಮ್ಯೆನ್ ಮಾಣ್ಕ ಇರ್ತೀದ
೯೦. ಹಿಣ್ ಕೇಳೂಕ್ ಹ್ವೊದಾಗೆ ಹಾಲು ಹಣ್ಣು ಕಂಡ್ರೆ ಲಾಯ್ಕ
೯೧. ಹಾವ್ನ ಸಿಟ್ಟ ಹನ್ನೆಯ್ಡು ಉರ್ಸೆ
೯೨. ಹಾಂತೆದ್ರೆ ಮೊಳೆ ದೋರೆ
೯೩. ಹುತ್ನ ಮ್ಯೆನನ್ ಮಣ್ಣ ಮಿಯ್ಗೆ ಹಚ್ಕಂಡ್ರೆ ಚರ್ಮರೋಗ ಗುಣ ಆತೀದ
೯೪. ಹುಲಿ, ಬಿಕ್ಕು, ಕುನ್ನಿ ಅಣ್‌ತಮ್ಮೀರ
೯೫. ಹುಲೀಗ್ ಹಿದ್ರದ್ರೆ ಹುಲ್‌ರಾವ್ ಬಡಿತೀದ
೯೬. ಹುಳ್ಚಿ ಮರ್ನಲ್ ದಿವ್ವಾ ಇರ್ತವ
೯೭. ಹೋಗ್ವಾಗೆ ಕಾಲಿಕೊಡ ಕಂಡ್ರೆ ಕೇಡ
೯೮. ಹುಲೆ ಮರಿ ಹಾಕ್ತೇ ಹೋಗೆ ಬರುವಾಗೆ ಮರಿತಿಂತೇ ಬತ್ತೀದ
೯೯. ಹೊಟ್ಟೇಕಿಚ್ ಬಿಡ್ವೋರ ಹೆಣ ಬೇಯೂದಲ

ವಿಧಿ

ಅ.

೧೦೦. ಅಜ್ನ ಹಿಸ್ರ ಮೊಮ್ಮಗಗೆ ಹಾಕ್ಬೇಕ

೧೦೧. ಅಡ್ಬಾಳಂತಿ ಸುಡೂಕಾಗಾ ಹುಗಿಬೇಕ

ಉ.

೧೦೨. ಉಂಡ್ ಮಾಯ್ನ ಹಣ್ ತಿನ್ನ, ಹಸ್ದೆ ಹಲ್ಸ ಹಣ್ ತಿನ್ನ

ಎ.

೧೦೩. ಎಲ್ಲವ್ರೀಗಿಂತ ಮುದ್ಲೆ ಗಣ್ಪತಿಗೆ ಪೋಜ್ಯ ಮಾಡ್ಬೇಕ

ಕ.

೧೦೪. ಕುಂಕುಮ ಇಲ್ಲಾ ಅಂಬೂಕಾಗಾ ಹಿಚ್ಬಾಯ್ತು ಅನ್ಬೇಕ

೧೦೫. ಕೆಟ್ ನಕ್ಷತ್ರದಲ್ ಸತ್ರೆ ಮನಿಬೆಡ್ಬೇಕ

೧೦೬. ಕುಂಕುಮ ಕರ್ಚಾಯ್ತು ಅಂಬೂಕಾಗಾ ಹಿಚ್ಬಾಯ್ತು ಅನ್ಬೇಕ

ತ.

೧೦೭. ತಿಂಗ್ಳಿಗೆ ಮಂಡ್ಲ ಕಟ್ಟದ್ರೆ ಅರ್ಸುಗೆ ಕೇಡ

೧೦೮. ತುಡು ಮುಂಚ್ನಪಲಾ ದ್ಯೆವ್ರೀಗ್ ಕೊಡ್ಬೇಕ

೧೦೯. ತುಡು ಮುಂಚ್ನಪಲಾ ಬಟ್ರೀಗ್ ಕೊಡ್ಬೇಕ

೧೧೦. ತುಳ್ಶಿಮನಿ ನೆಲ್ಗಟ್ಟ ಮನಿನೆಲ್ಗಟ್ನಕಿಂತ ಎತ್ರೆರ್ಬೇಕ್

೧೧೧. ತೊಯ್ಣಕೆ ಪಲಾಬಂದ ಮಾಯ್ನ ತಿಳ್ಳೀ ತರ್ಬೇಕ

ದ.

೧೧೨. ದನದ ಕೊಟ್ಗೆ ಹಾಳಾಗ್ಲೆ ಅಂಬೂಕಾಗಾ ತೊಂಬ್ಲೆ ಅಂದ್ ಹ್ಯೆಳ್ಬೇಕ

೧೧೩. ದ್ಯೆವ್ರ ನಿವೇದ್ಯ ಮನಿಯವ್ರೇ ತೆನ್ಬೇಕ

೧೧೪. ದ್ಯೆವ್ರ ಬಿನ್ನಾದ್ ಮೂರ್ತಿ ಸಮ್ದ್ರಕ್ ಹಾಕ್ಬೇಕ

೧೧೫. ದ್ಯೆವ್ರ ಮನಿಲಿಂದ್ ಬರುವಾಗ ತ್ವೊಡಿಹುತ್ ಕುಳ್ತ್ ಬರ್ ಬೇಕ

೧೧೬. ದೇಪಾ ನಂದಸ ಅಂಬೂಕಾಗಾ, ದೇಪಾ ತುಂಬ ಅನ್ಬೇಕ

೧೧೭. ದೇಪಾ ಮ್ಯೆತ ಅಂಬೂಕಾಗಾ ದೇಪಾ ದೊಡ್ಡ ಮಾಡ್ ಅನ್ಬೇಕ

ಬ.

೧೧೮. ಬಳೆ ಉಡೀತ ಅಂಬೂಕಾಗಾ ಹಿಚ್ಬಾಯ್ತು ಅಂದ್ ಹ್ಯೆಳ್‌ಬೇಕ

೧೧೯. ಬೆಟ್‌ದಲ್ಲೆ "ಕೂ" ಹಾಕೂಕಾಗಾ ಕೂ ಹೂಯ್ ಹಾಕ್ಬೇಕ

ಮ.

೧೨೦. ಮಂಗ ಹುಕ್ದ ಮನಿ ಬೆಡ್ಬೇಕ.

೧೨೧. ಮನಿ ಹುಸ್ತಲ್ ಮುಂದೆ ಹಲಿ ಹೊಯ್ಬೇಕ

೧೨೨. ಮುಟ್ಟಾದವ್ಳ ಮನಿ ಹೆರ್ಗೆರ್ಬೇಕ

೧೨೩. ಮಕ್ಳೀಗೆ ಹಿರಿಯೋರ ಹಿಸ್ರ ಹಾಕ್ಬೇಕ

೧೨೪. ಮನಿ ಮೊಕ ಉತ್ರಕ್ಕೆರ್ಬೇಕ

೧೨೫. ಮೈನ್ ಮುದ್ಲ ಹಲ್ ಬಂದ್ರೆ ಸೋದ್ರ ಮಾವಾ ಬಿಳ್ಳೀ ತಟ್ಟೀಲ್ ತಲಿಮೈನ್ ಕೊಟ್ಬೇಕ

೧೨೬. ಮಕ್ಳ ಉಂದೇ ಸಮ್ನೆ ತೀಡ್ ತಿದ್ರೆ ಹಾನಾ ತಿಗಿಬೇಕ

ಸ.

೧೨೭. ಸತ್ತಾಗೆ ಹನ್ನುಂದ್ ದಿನ ಸೋತ್ಗಾ ಮಾಡ್ಬೇಕ

೧೨೮. ಸುಕ್ರಾರ ಸೊಸೆ ಮನಿಗ್ ತಂಬ್‌ಸ್ಕಬೇಕ

ಹ.

೧೨೯. ಹಣ್ ಹಂಚ್ ತೆನ್ಬೇಕ

೧೩೦. ಹಣ್ ಅಳುವಾಗೆ ಅಕ್ಕಿ ಅಳುವಾಗ ಉಂದ ಅಂಬೂಕಾಗಾ ಲಾಭ ಅಂದೆ ಹೈಳ್ಬೇಕ

೧೩೧. ಹಾವ ಕಚ್ತ ಅಂಬೂಕಾಗಾ ಹುಳ ಮುಟ್ತ ಅನ್ಬೇಕ

೧೩೨. ಹಿಂಡ್ತೆ ಬುಸ್ತ್ರ ಆದಾಗೆ ಗಂಡ ಗಡ್ಡಾ ಬಿಳೀಸ್ಬೇಕ

೧೩೩. ಹೊಸ್ಮನಿ ಹುಕ್ವಾಗೆ ಹಾಲ ಒಕ್ಕಸ್ಬೇಕ

ನಿಷೇಧಗಳು

ಅ.

೧೩೪. ಅಪ್ಪಾ ಅವ್ವೆದ್ದವ್ರ ಹೆಣ ಸುಡೂಕೆ ಹೋಗೂಕಾಗಾ

ಆ.

೧೩೫. ಆಕ್ಕ ತುಳೂಕಾಗಾ

೧೩೬. ಅಕಾಸ್ಕೆ ಎಂಜ್ಲ ಉಗೂಕಾಗಾ

೧೩೭. ಆಯ್ತಾರೆ ತಲೀಗ್ ಎಣ್ಣೀ ಹಾಕೂಕಾಗಾ

ಉ.

೧೩೮. ಉಗ್ರ ಕಡೂಕಾಗಾ

೧೩೯. ಉಚ್ಚೀ ದಾಟೂಕಾಗಾ

೧೪೦. ಉಂದ್ ನೆಣಿ ದೇಪಾ ಸಬೀಗ್ ತರೂಕಾಗಾ

೧೪೧. ಉಪ್ಪ್ ಚೆಲ್ಲೂಕಾಗಾ

ಎ.

೧೪೨. ಎಂಜ್ಲಕೈಲೆ ಮಕ್ಳ ಹುಡೂಕಾಗಾ

ಒ.

೧೪೩. ಒಡ್ದ ಬಳಿಯಾ ಕೈಗೆ ಹಾಕೂಕಾಗಾ

೧೪೪. ಒಂಡ್ ಕೂಡ್ಲೇ ಮನ್ನೂಗಕಾಗಾ

ಕ.

೧೪೫. ಕರಸತ್ತ ಆಕ್ಕ ಹಾಲ್ ಹಿಂಡೂಕಾಗಾ

೧೪೬. ಕಳ್ಸ ಕಂವ್ಚ ಬೀಳೂಕಾಗಾ

೧೪೭. ಕಿಡ್ಕೀಲಿಂದ್ ಉಸ್ತು ಕುಡೂಕಾಗಾ

೧೪೮. ಕೆಪ್ಪೀನ್ ಕುಂದೂಕಾಗಾ

೧೪೯. ಕೈಕಾಲ್ ಮೊಕ ತುಳಿದೇ ಮನಿ ಹುಕ್ಕೂಕಾಗಾ

ಗ.

೧೫೦. ಗಂಡ್ನ ಹಿಸ್ರ ಹಿಂಡ್ತೆ, ಹಿಂಡ್ತಿ ಹಿಸ್ರ ಗಂಡ ಹೇಳೂಕಾಗಾ

೧೬೦. ಗಯ್ನ ಹೆಡ್ಡಾಗೆ ಉಂಬೂಕಾಗಾ

೧೬೧. ಗುಮ್ಮಾ ಮನಿಯೊಳ್ಗೆ ಹೋಗೂಕಾಗಾ

ಚ.

೧೬೨. ಚಾರ್‍ಕ್ಲ ಬೀಳೂದ್ ನೋಡೂಕಾಗಾ

ತ.

೧೬೩. ತಲೀಗೆ ತಾನೆ ಜಡೆ ಕಟ್ಟದ್ರೆ ಬಿಡ್ಲೂಕಾಗಾ
೧೬೪. ತಾಯ್ ಸತ್ ಮಕ್ಳ ಬುಯ್ಯುಕಾಗಾ
೧೬೫. ತಿಂಬೆಲಿ ಸೆರಿ ತಿಗೀದೇ ತಿಂಬೂಕಾಗಾ
೧೬೬. ತಿಮಿಂಗ್ಲ ಕುಂದೂಕಾಗಾ

ದ.

೧೬೭. ದುಡ್ಡಿಲ್ಲ ಅಂಬೂಕಾಗಾ

ಪ.

೧೬೮. ಪಂತೀಲ್ ಬೇದ ಮಾಡೂಕಾಗಾ

ಬ.

೧೬೯. ಬಂಜಿ ಮೊಕ ನೋಡೂಕಾಗಾ
೧೭೦. ಬತ್ತದ ರಾಸಿ ಮೈನಿಂದ ಕಾಲ್ಮಿಟ್ ಹಾಕಂಡ್ ಹೋಗೂಕಾಗಾ
೧೭೧. ಬಳೆ ಉಡೀತ ಅಂಬೂಕಾಗಾ
೧೭೨. ಬಿಂಕಿಗೆ ಎಂಜ್ಲ ಉಗೂಕಾಗಾ
೧೭೩. ಬೈರೆಯವ್ರ ಹಾಸ್ಗಿಮ್ಯೆನೆ ಮನ್ಗೂಕಾಗಾ
೧೭೪. ಬೇಡೂಕ್ ಬಂದವ್ರೀಗೆ ಬುಯ್ಯೂಕಾಗಾ
೧೭೫. ಬೈಸ್ರೀಗೆ ಮನಿಕದ ಹಾಕೂಕಾಗಾ
೧೭೬. ಬೈಸ್ರಿಗೆ ಮನಿಕದ ಹಾಕೂಕಾಗಾ

ಮ.

೧೭೭. ಮಕ್ಳ ಸೊಡ್ಳೀಲೇ ಮಕ್ಳ ಹುಗೀಬೇಕ. ಸುಡೂಕಾಗಾ
೧೭೮. ಮಕ್ಳೀಗೆ ಕಾಲ್ ತಾಗ್ಲೂಕಾಗಾ
೧೭೯. ಮಂಗ್ನ ಕುಂದೂಕಾಗಾ
೧೮೦. ಮನ್ಗದ್ ಮಕ್ಳ ದಾಟೂಕಾಗಾ
೧೮೧. ಮನಿಲೆ ಕಾಲ್ ಮಿಟ್ ಹಾಕಂಡ್ ಹೋಗೂಕಾಗಾ
೧೮೨. ಮುಕ್ಕ್ ಅಳ್ಗೀ ಅನ್ನಾ ಕಿರ್ದ್ ಕಿರ್ದ ಬಡ್ಲೂಕಾಗಾ
೧೮೩. ಮುಂಡಾಸಾ ಕಳ್ಚ ಬೀಳೂಕಾಗಾ
೧೮೪. ಮುದೀದ್ ದಿಬ್ಣ ಇದ್ರಬದ್ರ ಆಗೂಕಾಗಾ
೧೮೫. ಮುರ್ಚಿಂಜಿಗ್ ಮನ್ಗೂಕಾಗಾ
೧೮೬. ಮುರ್ಚಿಂಜಿಗೆ ಸದಿ ತಿಗೂಕೂಗಾ
೧೮೭. ಮೈಲ್ಗೀಲ್ ಮಂಗಳ ಕಾರ್ಯ ಮಾಡೂಕಾಗಾ

೧೮೮. ಮೊಡ್ದ ಹೂಂವ ದೈವ್ರೀಗ್ ಹಾಕೂಕಾಗಾ
೧೮೯. ಮೋಡ್ಳ ದಿಕ್ಕೀಗೆ ಕಾಲ್ ಚಾಚೂಕಾಗಾ

ರ.

೧೯೦. ರಾತ್ರಿಗೆ ಸಿಳ್ ಹುಡೂಕಾಗಾ

ವ.

೧೯೧. ವಾಟಿ ಸಿಸಿಯಾ ಆಯ್ಸವಂತ ನಿಡೂಕಾಗಾ

ಸ.

೧೯೨. ಸಂಜೀಗೆ ಹುತ್ತ ಸುತ್ತೂಕಾಗಾ
೧೯೩. ಸತ್ತ ಮಕ್ಳ ಹಿಸ್ರ ಹೇಳೂಕಾಗ
೧೯೪. ಸಪ್ಪೀ ಕಾಲಿಂದ್ ದೂಡೂಕಾಗಾ
೧೯೫. ಸುಕ್ರಾರೆ ಸೊಸಿ ಕಳ್ಸೂಕಾಗಾ
೧೯೬. ಸುಕ್ರಾರೆ ದುಡ್ಡ ಕುಡುಕಾಗಾ
೧೯೭. ಸುಣ್ಣಾ ಬೇಡೂಕಾಗಾ
೧೯೮. ಸೊಂಟದ್ ಕೆಳ್ಗಿ ಚಿನ್ನಾ ಹಾಕೂಕಾಗಾ
೧೯೯. ಸೊಟ್ ಸೇರಿ ಉಡೂಕಾಗಾ
೨೦೦. ಸೋತ್ಗಾದಾಗೆ ದೈವ್ರ ಕಿಟ್ಟೂಕಾಗಾ
೨೦೧. ಸೋತ್ಗಾದಾಗೆ ದೈವ್ರ ಮನೀಗ್ ಹೋಗೂಕಾಗಾ

ಹ.

೨೦೨. ಹಾವ್ ನೆಣಿಯಾಡೂದ್ ನೋಡೂಕಾಗಾ
೨೦೩. ಹಿಣ್ ಕೇಳೂಕ್ ಹ್ವೋದಾಗೆ ಹಿಣ್ಣ ಮುಟ್ಟಾದ್ರೆ ತರೂಕಾಗಾ
೨೦೪. ಹಿಂಗ್ಸ ಗದ್ದಿ ಹೂಡೂಕಾಗಾ
೨೦೫. ಹಿಂಡ್ತೆ ಬಸ್ರ ಆದಾಗೆ ಗಂಡ ಮರ ಹತ್ತೂಕಾಗಾ
೨೦೬. ಹಾವಾ ಕುಂದೂಕಾಗಾ
೨೦೭. ಹಿಣ್ ಕೇಳೂಕ್ ಹ್ವೋದಾಗೆ ಮನಿಬಿಕ್ಕ ಕಚ್ಚಾಡ್ದ್ರೆ ಹಿಣ್ ತರೂಕಾಗಾ
೨೦೮. ಹಿಂಡ್ತಿ ದಿಟ್ಸ ನೋಡೂಕಾಗಾ
೨೦೯. ಹುತ್ ಬೀಳ್ವಾಗೆ ಉಂಬೂಕಾಗಾ,
೨೧೦. ಹುತ್ ಬೀಳ್ವಾಗೆ ಮನ್ಗೂಕಾಗಾ
೨೧೧. ಹುತ್ ಬೀಳ್ವಾಗೆ ನೋಡೂಕಾಗಾ
೨೧೨. ಹೂಡೂ ನ್ವೊಗಾ ಮುರೂಕಾಗಾ
೨೧೩. ಹೆಣ ಸುಟ್ ಬರುವಾಗೆ ಕವ್ಳ ಹಾಕೂಕಾಗಾ
೨೧೪. ಹೆಣ ಸುಟ್ ಬರ್ವಾಗೆ ಹಿಂತಿರ್ಗ ನೋಡೂಕಾಗಾ
೨೧೫. ಹೊಸ ವಸ್ತ್ರ ಸಿಳೀದೇ ಉಡೂಕಾಗಾ

ಕ. ಮಕ್ಕಳ ಹಾಡುಗಳು

೧. ಬಿಡಿಹಾಡುಗಳು
೨. ಆಟದ ಹಾಡುಗಳು
೩. ಒಗಟುಗಳು

ಆಕರ ಮೂಲ ೧. : ಕಾರವಾರ ಜಿಲ್ಲೆಯ ಜನಪದ ಗೀತಗಳು (೧೯೮೨)
: ಡಾ. ಎನ್. ಆರ್. ನಾಯಕ
: ಪ್ರಸಾರಾಂಗ, ಕ.ವಿ.ವಿ. ಧಾರವಾಡ

೨. : ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು (೧೯೭೯)
: ಡಾ. ಎನ್. ಆರ್. ನಾಯಕ ಮತ್ತು ಶಾಂತಿ ನಾಯಕ
: ಪ್ರಸಾರಾಂಗ, ಕ.ವಿ.ವಿ. ಧಾರವಾಡ

ಚೂಂಜ್ ಎಂತಕೆ?
ಚಿಂಚೀ ಹುಲೂಕೆ
ಚಿಂಚೆಂತಕೆ?
ದುಡ್ ತುಂಬೂಕೆ
ದುಡ್ ಎಂತಕೆ?
ಕತ್ತಿ ಮಾಡ್ಲೂಕೆ
ಕತ್ತೆ ಎಂತಕೆ?
ನಿಮ್ಮೆಲ್ಲಾ ಓಡ್ಲೂಕೆ

೧೨

ಅಂಡಾ ಬಂಡಾ
ಕಡಿಗೇನ ಸಂಡಾ
ಡಾಂ ಡುಸ್
ಕಡಿಗೇನ್ ಪುಸ್
ಪುಸ್ಕಿ ಮೈನೆ
ಹಲ್ಕಿರ್ದ್‌ಕಿಸ್ಕ್

೧೩

ಅಕ್ನ ಗಂಡ ಬಾವಾ
ಕೋಳಿ ಮೊಟ್ಟಿ ಕಳ್ಳ
ಅಡ್‌ಕ್ಲ ಹಾರ್ದ್ದ
ಮುಡ್‌ಕ್ನೇ ಬೆದ್ದ
ಹತ್‌ನನ್ ಬಾವಾ

೧೪

ಅಡೋಲ್ ಬುಡೋಲ್
ದಡ್ಡಾ ಬುಡ್ಡು
ಸೊರಿಕಾಯ್
ನಂಗ್ ಹಣ್
ನಿಂಗ್ ಕಾಯ್
ಬ್ಯಾಗ್ ಬೀಳ
ನಂಗೇ ಸಿಕ್ಕ.

೧೫

ಆಚೇರಿ ಓದೂದ್
ಹರ್ಕ ಪುರಾಣಾ

೧೬

ಆನ್ ಬಂತ್ ಆನೇ
ಯಾವೂರಾನೇ
ಕೊಲ್ಲಾಪೂರಾನೆ
ಇಲ್ಲೀಗ್ಯೆಕೆ ಬಂತ
ಹಾದಿತಪ್ಪೇ ಬಂತ
ಬೀದಿ ತಪ್ಪೇ ಬಂತ
ಆನ್ ಬಂತ್ ಆನೇ
ಆನೀ ಕಟ್ಟೊಕಂಬಿಲ್ಲಾ
ತೇಗ್ನಕಂಬಾ ಕಡ್ತನ್ನಿ
ಬಚ್ಲ ಬಳ್ಳಿ ಉಗ್ತನ್ನಿ
ಹೊಳೀಲಾಡು ಬಾಲಯ್ನ
ಓಡೋ ಹೋಗ್ ಕರ್ತನ್ನಿ
ಕಾಯುಂದ್ ಕೊಟ್ರೋ
ತೊಂಡ್ಲ ತೂಗೇ ಬೆಟ್ರೋ

೧೭

ಕತಿ ಹೇಳ್ ಕತಿ ಹೇಳ್ ಕಾನ್ಬಟ್ಟ
ನಾಯೆನ್ ಹ್ಯೆಳ್ಲೆ ಮಣ್ಣುಂಡೆ
ನೀರ್ನಲ್ ಬೆದ್ರೆ ಕರ್ಗ ಹೋಗ್ವೆ
ಗಾಳೀ ಹೊಡ್ತಕ್ ದೂಳಾಗ್ವೆ

೧೮

ಕಾವೇರಿ ಕಟ ಕಟ
ಬಿಳ್ಳೂಳಿ ಮಿಟಿ ಮಿಟಿ
ತಂಬಾಕು ತೈತೈ
ತಮ್ನ ತುಣ್ಣಿ ಕುಯ್ ಕುಯ್

೧೯

ಗ್ವೊಂಕಾ ನೀ ಇಲ್ ಹೋಗದೆ?
ಗ್ವೊಕ್ನಕ್ ಹೋಗದೆ.
ಏನ್ ಕಂಡದೆ? ಗೂಂಕಿ ಕಂಡದೆ
ಏನ್ ತಂದದೆ? ಬಾಳಿಹಣ್ ತಂದದೆ
ಇಟ್ ಬಾಳಿಹಣ್ ತಂದೆ?
ಮೂರ್ ಬಾಳಿಹಣ್ ತಂದೆ

ಸುಲ್ಕೇನ್ ಮಾಡ್ದೆ? ಕರೂಗ್ ಕೊಟ್ಟೆ.
ಕರೇನ್ ಕೊಟ್ತ? ಸಿಗ್ಣಿ ಕೊಟ್ತ
ಸಿಗಿಯೇನ ಮಾಡ್ದೆ? ಗದ್ದೀಗ್ ಹಾಕ್ದೆ
ಗದ್ದೇನ್ ಕೊಟ್ತ? ಕದ್ರಾ ಕೊಟ್ತ
ಕದ್ರಾಯೇನ್ ಮಾಡ್ದೆ? ಕುಂಬಾರ್ಗೆ ಕೊಟ್ಟೆ
ಕುಂಬಾರೇನ್ ಕೊಟ್ಟ? ಮಡ್ಕಿ ಕೊಟ್ಟ
ಮಡ್ಕಿಯೇನ್ ಮಾಡ್ದೆ? ಹಾದಿಲ್ ಜರ್ದೆ
ಹಾದೇನ್ ಕೊಟ್ತ? ಕಲ್ ಕೊಟ್ತ
ಕಲ್ಲೇನ್ ಮಾಡ್ದೆ? ಬಾವಿಕಟಸ್ದೆ
ಬಾವೇನ್ ಕೊಟ್ತ? ನೀರ್ ಕೊಟ್ತ
ನೀರೇನ್ ಮಾಡ್ದೆ? ದಾಸಾಳ್ ಗಿಡೂಗ್ ಹೊಯ್ದೆ
ದಾಸಾಳ್ ಗಿಡೇನ್ ಕೊಟ್ತ? ಹೂಂವ ಕೊಟ್ತ
ಹೂಂವೇನ್ ಮಾಡ್ದೆ? ದೈವ್ರೀಗ್ ಹಾಕ್ದೆ
ದೈವ್ರೇನ್ ಕೊಟ್ತ? ಬುದ್ದೀಕೊಟ್ತ
ಬುದ್ದಿಯೇನ್ ಮಾಡ್ದೆ? ಮಾಂವ್ಗ ಕೊಟ್ಟೆ
ಮಾವೇನ್ ಕೊಟ್ಟ? ಹಿಣ್ ಕೊಟ್ಟ
ಹಿಣ್ಣಿಲ್ದೇ ಬೆಣ್ಣಿಲ್ದೇ ಕರ್ಗ ಹೋಯ್ತು.

೧೦

ಚಿಳಿ ಚಿಳಿ ಕ್ವೊಟಾ
ಹುಳಿ ಹುಳಿ ಅಮ್ಟಾ
ಪಿಕುರಾಕು ಕುಂಟ
ಹಾವುರಾಕು ಬಂಟ

೧೧

ತಾನ್ ತಾನ್ ಗುಬ್ಬಿ
ತಂದಾನ ಗುಬ್ಬಿ
ಮುಚ್ಚಾ ತೆಗದ್ರೆ
ಮುನ್ನೂರ್ ಗುಬ್ಬಿ

೧೨

ತಿಂಗಳ ಸ್ವೊಮಿಯ ಉಂಬಲ್ಲಿ ಕರೆಯಮ್ಮ
ಹಾಲನ್ನ ಮೊಸರು ಬಡಿಸೂವೆ। ತಾಯಮ್ಮ
ಅಂಗಳ ಹುಡಿಯಲ್ಲಿ ಆಡೂವೆ

೧೩

ತಿಂಗಳ ಸಾಮಿ ತಿಂಗಳ ಸಾಮಿ
ತಿಂಗ್ಳಿಗುಂಚರೀಗ್ ಬಂದ್ ಹೋಗ್
ಹಾಲು ಅನ್ನ ಉಂಡ್ ಹೋಗ್

ಹರಗೀ ಗಣಕಾ ಸೀಂಬ್‌ಹೋಗ್
ಪುಟ್ಟನ ತಲಿಮ್ಯೆನ್ ಬುಡ್‌ನೇ
ಗಿಂಡೀ ಹುತಾಕ್ ಓಡ್‌ಹೋಗ್

೧೪

ನಮ್ಮಣ್ಣ ನಿಮ್ಮಣ್ಣ ದೂಳ್ ಕೊಪ್ರಿಯಾ
ದೂಳ್ ಕೊಪ್ರಿನ್ ತರುಕೆ ಬೆಟ್ಕೊದ್ರ
ಬೆಟ್‌ದಲ್ ಮೂರ ಕೋಲ್ ಕೊಜ್ಯ
ಕೋಲ್ ಕೊಜ್ಜಿನ ಕಡುಕೆ ಕತ್ತಿಗೊದ್ರ
ಕತ್ತಿಮ್ಯೆನುಂದ ಕಾಂಕಿ ಪಿಟ್ಟೆ
ಕಾಂಕಿ ಪಿಟ್ಟಿ ತುಳುಕೆ ಹೊಳಿಗ್ವೊದ್ರ
ಹೊಳಿಯಲ್ಲುಂದ ಬಾಳ್ ಮೀನ
ಬಾಳ್ ಮೀನ್ ತಕ್ಕಂಡೇ ಎಚ್ಚಕ್ವೊದ್ರ
ಎಚ್‌ಗಾರ್ತೇರಿಗೆಲ್ಲಾ ಉಚ್ ರ‍್ವೊಗಾ

೧೫

ನಾನೂ ನಾಯ್ಕಾ
ನೀನೂ ನಾಯ್ಕಾ
ದೋಣೀ ಮ್ಯೆನೆ
ದೊಣ್ಣಪ್ ನಾಯ್ಕಾ
ದೊಣ್ಣೀತಿಗ್ದೇ
ನೀರಲ್ ನೆಟ್ಟಾ
ದೋಣೀ ದೂಡೇ
ಮುಂದಕ್ ಬೆಟ್ಟಾ

೧೬

ನಾರಿ ಬೂರಿ ತಂಬೂರಿ
ಹೇರಿ ಕಾಯ್ ಬುರ್‌ಬೂರಿ

೧೭

*ಪಲ್ಲಿ ಪಲ್ಲಿ ಕಣಸ್ಕೂಡ
ಕೋಳಿ ಮೊಟ್ಟಿ ಉಡ್‌ಕುಡ್ವೆ
ಬಾಳೀ ಹಣ್ಣ ಸುಲ್ಕುಡ್ವೆ

* ವಸ್ತು ಕಾಣೆಯಾದಾಗ ಹೀಗೆ ಹಾಡಿದರೆ ವಸ್ತು ಸಿಗುತ್ತದೆಂಬ ನಂಬಿಕೆ ಮಕ್ಕಳಲ್ಲಿ

ದ್ಯಾವ್ರ ಕೊಟ್ರೆ
ನಿಲ್ಲೀ ಕಾಯ್
ದನ ಹೋಯ್ತು ಬಿಟ್ಕೆ
ಪೊಕ್ನ ತುಣ್ ನೆಟ್ಗೆ

೧೯

ಬಟ್ಟಾ ಬಟ್ಟಾ
ಕೋಳಿಸೊಟ್ಟ
ಕಾರ್‌ಗದ್ದೀಲ್
ಕಣ್ಣೀರ್ ಬೆಟ್ಟಾ

೨೦

ಬಿಸಲು ಮಳೆಯು ಬತ್ತಿದೋ
ಮಂಗನ ಮುದ್ವ್ಯಾ ಅತೀದೋ
ಮುದ್ವ್ಯಾ ಆಕಂಡ್ ಮನಿಗ್ ಹೊದ್ರೆ
ಮಂಗ್ನ ಮನಿಯೇ ಹೋಯ್ತು ಉದ್ರೆ

೨೧

ಮಕ್ಕೀಯಾ ಮಕ್ಕೀಯಾ
ಮಕ್ಕಿಗದ್ದೀಗ್ ಹ್ವೋಗ್‌ಬ್ಯೆಡಿ
ಹಾವ್ ಬಂದ್ರೆ ಕಚ್ಚೂದ
ಕೆಪ್ಪೀ ಬಂದ್ರೆ ನುಂಗೂದ

೨೨

ಮೊಳಿಯೆ ಮೊಳಿಯೆ
ನಿನ್ನಾಗಂಡಾ
ಜಾಲೀಗ್ ಹೋಗ್ಯಾ
ಜಾರ್ ಬೆದ್ರೆ
ಹಿಡ್ವೋರಿಲ್ಲಾ
ತಡ್ವೋರಿಲ್ಲಾ
ಹನ್‌ಕಡಿಯೇ ಹನ್ಕಡಿಯೇ

೨೩

ಮೊಳಬಂತೋ ಮೊಳಿರಾಯ

೨೪

ಹಲ್ ಮುಕ್
ಹಲ್ ಮುಕ್
ಹಾರ್ತೇ ಬಾ
ಹಪ್ನ ಜಿಂಗಾ
ಕಡೀತೇ ಬಾ
ಎಲ್ಲರ್ ಪುಕ್ಕಿ
ಮೂಸ್ತೇಬಾ

೨೫

ಸಾತಮ್ಮಕ್ಕ ಸಂಪ್ತಿ
ಒಳಗೇನ್ ಮಾಡ್ತಿ?
ಅಕ್ಕೀ ಕಾಳ್ ಹುರಿತಿ
ನಂಗಿಟ್ಟ್ ಕುಡ್ತಿ
ನಿಂಗಿಟ್ ಕೊಟ್ರೆ
ನಮ್ಮತ್ ಬುದ್ದ
ನಿಮ್ಮತ್ತಿಲ್ಲಿಗ್ ಹೋಗಿದ?
ಹೇರಿ ಓಳಿಗ್ ಹೋಗಿದ
ಹೇರಿ ಓಳೀಗ್ ಎಂತಕೆ?
ಹೇರಿ ಕಾಯ್ ಕುಪ್ಕೆ
ಹೇರಿಕಾಯ್ ಎಂತಕೆ?
ಗಜ್ಜಾಬಿಜ್ಜಿ ಮಾಡೂಕೆ
ಗಜ್ಜಾಬಿಜ್ಜಿ ಎಂತಕೆ?
ಮಕ್ಳು ಮರಿಗ್ ಹಾಕೂಕೆ
ಮಕ್ಳು ಮರಿ ಎಂತಕೆ?
ಸಾಪ್ಕಾರ್ನ ಎದಿಮ್ಯೆನ್ ಸುಡುಕೆ.

೨೬

ಸುಗ್ಗಿ ಮ್ಯೆಳಾ ಬತ್ತೀದೋ
ಬಂಗುಂ ಬಕ್ಕುಂ ಆತೀದೋ
ಕೋಲು ಕುಂಚ ಕುಣಿತೀದೋ
ಹಣ್ಣು ಹೂಂವು ಉದ್ರತೀದೋ

೨೭

ಹ್ಯೆಹಾತ್ऽऽ ಹಾಹೋ ಹುಮ್ಮಾ
ಹುಮ್ಮನ ಕೊಂದವ್ರೆರೋ
ಹಮ್‌ಗಿಟ್ ಮರೇ?
ಹುಮ್ಮಗ್ ಮೂರ್‌ಮರೆ.

೦೨. ಆಟದ ಹಾಡುಗಳು

೦೧

ಅಂಗಾಳೇ ಬಿಂಗಾಳೇ
ಸುತ್ತೂ ಮುತ್ತೂ ತಂಗಾಳೆ

೦೨

ಅಡುಂ ತಡುಂ
ತಡ್ ತಡ್ ಬಾಜಾ
ಆಕೋ ಪೀಕೋ
ಪಿರಂಗ್ ಪಿಕ್ಕಾ
ಲಾಡ್ ಚಿಕ್ಕ
ಏನು ದಯಾ ಬುಡ್ಕ್

೦೩

ಅರಸ್ನಾ ಪುರಸ್ನಾ
ಸಂಪ್ಗಿ ಸಾವ್ರಾ

೦೪

ಆನ್ಗಲ್ ಮುತ್ನಗಲ್
ಅಜ್ಜೀರಾಮಾ
ನೀರೀಗ್ ಹ್ವೊದಾ
ಹಿಡ್ವೋರಿಲ್ಲ
ತಡ್ವೋರಿಲ್ಲಾ
ಹಿಂದೂ ಕಾಣಾ
ಮುಂದೂ ಕಾಣಾ
ಪಾವ್ಡಕ್ಕಿ ಪಡ್ಚ್.

೦೫

ಒಂದ್ ಸಂದ್
ತಕೋಲ್ ಚೆಣಾಮಿಣಿ
ಯಾಕೆ ಬಂದೆ
ಯಲಾಹುಡ್ಗಿ
ತಾಳ್ ತೋಳ್
ಏಳ್ ಎಂಟ್.

೦೬

ಕಣ್ಣೇ ಕಟ್ಟೇ
ಕಾರೀ ಮುಳ್ಳೇ
ಮೂರ್‌ಸಿದ್ದಕ್ಕಿ
ತಣ್ಣೀ ಅನ್ನಾ
ಉಂಬ್ವರಿಲ್ಲಾ
ಓಡೋಡ್ ಹೋಗಿ
ದೋರ್ ದೋರಡ್ಗಿ
ಕೂs ಹೂಯ್,
ಕೂs ಹೂಯ್
ನಮ್ಮನಿ ಹಕ್ಕಿ
ಬಿಟ್ಟೇ ಬಿಟ್ಟೆ

೦೭

ಹಕ್ ಬಂತ,
ಮೊಟ್ಟಿ ಹಾಕ್ತ
ಕಾವೀಗ್ ಕೂತ್ತ,
ಮರಿಯುಡಿತ
ಮಕ್ಳೀಗ್ ಮೀಯ್‌ಸ್ತ,
ತಾಮೆಂತ
ಅಡ್ಗಿ ಮಾಡ್ತ,
ಮಕ್ಳೀಗ್ ಬಡಸ್ತ
ಗಂಡ್ಗ್ ಬಡಸ್ತ,
ತಾ ಒಂಡ್ತ
ಎಂಜ್ಲ ತಿಗಿತ,
ಮನಿಸಾರ್‌ಸ್ತ
ಮಕ್ಳೀಗ್ ಕರೀತ,
ಅಂಗಿ ಹಾಕ್ತ
ಕಪ್ಡ ಒಟ್ತ,
ಮೊಟ್ಟಿ ಕಟ್ತ
ಅಜ್ಜೀಮನೀಗ್ ಹೋಗೂ
ಹಾದ್ಯೆವ್ದ ಹಾದ್ಯೆವ್ದ
ಇದೆ ಇದೆ ಇಲ್ಲೇ ಈದ
ಕಿಲಿ ಕಿಲಿ ಕಿಲಿ

೧೮

ಕುಪ್ಪಾ ಕುಪ್ಪಾ
ಕೂಳೀಗ್ ಬಾ
ನಿತ್ತಿಲೆದ್ರೆ
ನೀರೀಗ್ ಬಾ

೧೯

ಗುಡುಗುಡು ಚೆಂಡಕ್ಕೆ
ಯಾರ್ ಮೆಟ್ಟಕ್ಕೆ
ಹಬ್‌ಕುಂದ್ ಕುರಿಕೊಟ್ರೆ
ಬೇರಣ್ಣ ಮೆಟ್ಟಕ್ಕೆ

೧೦

ತೋಳೇ ತೋಳೇ ತೋಳೇ ತೋಳೇ
ತೋಳನಾಡೇ ಬಂದಳಮ್ಮ
ಒಟ್ಟಾದಿಟ್ಟೀ ಬೆಟ್ಟಾಳಮ್ಮ
ಹಳ್ಳಾ ಹುಕ್ಕೇ ಮೆಂದಳಮ್ಮ
ಅಪ್ಪಾ ಅವ್ವೀ ಕುಲ್ವರಂದೇ
ಓಡೇ ಓಡೇ ಬಂದಾಳಮ್ಮ

೧೧

ನಮ್ಮಾ ಕಪ್ಪಾ ಬತ್ತೀದೋ
ರಸ್‌ಬಾಳಿಹಣ್ಣಾ ತತ್ತೀದೋ
ಕಲ್ಲೂ ಮುಳ್ಳು ಬದಿಗಾಗಿ
ಈರ ಸೂರ ಮುಂದಾಗಿ

೧೨

*ಅಕ್ನ ಕರ್ಕಾಬರ್‌ಬೇಕ
ಆದ್ರ ಅಕ್ಕಿಲ್ಲಲ್ಲಾ
ಸಾಲಾತರ್‌ಬೇಕ
ಸಾಲಾತೀರ್‌ಸ್ವರ್‍ಯೆರ?
ನಾನೇಂವೆ ಗಿಡ್‌ಬುಡ್ಡಣ್ಣ

೧೩

ರತ್ತೋ ರತ್ತೋ
ರಾಯನ ಮಗ್ಳೋ

---

* ಇದೊಂದು ಅಯ್ದು ಬೆರಳುಗಳ ಸಂಭಾಷಣೆಯ ಆಟದ ಹಾಡು

ಬಿತ್ತೋ ಬಿತ್ತೋ
ಭೀಮನ ಮಗ್ಳೊ
ಕಾಸಲಾರೆ, ಕರಿಯಲಾರೆ
ಬೈಟ್ ಗುಬ್ಬಿ
ಬಾಳೆಕಂಬ
ನೀನೇ ಸೀತಾದೇವಿ

೧೪

ಕರಿ ಮುಗು ಬಿಳಿಮುಗು ದಿಬ್ಣತೇರೋ
ಹೆದ್ದನ ಸೆಣಮಕ್ಕ ಮುದ್ದೊಳತೇ

ಸೆಣ್ಣಮಕ್ನ ಮದ್ಯಾ ಆತೀದೊ
ಬೆಂಡು ವಾದ್ಯ ಬಡಿತೀದೋ
ಸೊಳೇರ್ ಮ್ಯೆಳಾ ಕುಣಿತೀದೋ
ಸಾತ್ ನಾಯ್ಕ್ನ ಗೊಂಡೀ ಅಲಗ್‌ತೀದೋ

೧೫

ಅಂಜಜೇ ಬೆಳೆ
ಬೋಳ್ ಬೋಳ್ ಕಂಟೆ
ಮಕ್ಕಳ್ ದೈವ್ರ ಹಳ್ಳೋ
ನಾನೆಟ್ ಪಚ್ಚೆ ಕದ್ರಾಗ್ಲೆ

ಕೋಕೋ ಕನ್ಹೆಟಿ,
ಉಕ್ದ ಬತ್ತ ತಿನ್ಹೆಟಿ
ನಿಮ್ಮಪ್ನಮನೆ ಯಾವಲೆ,
ಹಕ್ಕಿದೋರ್ ಬೆಟ್ಟ
ಸಾತ್ ನಾಯ್ಕ ಗದ್ದೀಲೇ
ಗುಲ್ಲುಗೊಬ್ಬಿ ಬಿದ್ದೀದ
ಕೋಕೋಕ್ವಾಳ್ತ
ಕೋಳಿ ಮರಿ ಕೊಂಯ್ಕ್

೧೬

ಸಾದೂ, ಹೋದು,
ಪಿರಿಂಗಿ, ಚಾರಿ,
ಕ್ವೊಣಾ

೩. ಒಗಟು ಹಾಡು

೦೧

ಅಂಬಾರ್ದ ಮೈನ್ ಆಡೂ ಪ್ವೊರಾ
ತುಂಬೀ ಕಟ್ಕಂಡ್ ತೂಗೂಪ್ವೊರಾ
ಉಂಬೂಕ್ ಬಾರೋ ಮಿಡಿ ಪ್ವೊರಾ।

(ಮಾವಿನಕಾಯಿ)

೦೨

ಅಗಿತೀದ್ ಹುಗಿತೀದ್
ಹೊನ್ ಬಾಸಿಂಗ

(ಕುಟಾರಿ, ಸಲಿಕೆ)

೦೩

ಅಪ್ಪ ಉದ್ದಣ್ಣ
ಅವ್ವೆ ಸಿಂಗಾರ್ ಸೋಳೆ
ಮಗ ಗಿಡ್ ಬುಡ್ಡಣ್ಣ

(ಅಡಿಕೆ ಮರ, ಸಿಂಗಾರ, ಅಡಿಕೆ)

೦೪

ಅತ್ತಿ ಹಸಿ ಎತ್ಲಾರೆ
ಮುತ್ನಮಣಿ ಹೆಕ್‌ಲಾರೆ

(ಆಕಾಶ– ನಕ್ಷತ್ರ)

೦೫

ಕ.

ಕೊಕ್ಕಾನಕ್ಕೆ ಕೂರ್‌ತೀದ
ಕೆರಿನೀರ್ ಆರ್ತೀದ

(ದೀಪ)

ಕುಸ್ ಕುಸಿ ಯಾವಾಗ್?
ಕಯ್ಯ ಹಿಡ್ಕಂಡಾಗ್
ಮುಸ್ ಮುಸು ಯಾವಾಗಾ?
ಅದ್ರಾ ಒಳ್ಗ ಹುಕ್ದಾಗಾ
ಮಾತ್ ಕತಿ ಯಾವಾಗಾ?

೦೬

ತ.

ತತ್ತಾ ಗಿಂಡಿ
ತಾಮ್ರದ್ ಗಿಂಡಿ
ಮುಚ್ಚಾ ತೆಗದ್ರೆ
ಮುನ್ನೂರ್ ಗಿಂಡಿ

(ದಾಳಿಂಬೆ ಹಣ್ಣು)

೦೭

ಸ.

ಸುಂಗಾರ ಬತ್ತೀದ ವಾರಿಯಾಗತ್ತೆ
ನಿಂಗ್ಯೆರ್ ಹೇಳಿದ್ರೋ ಜಿಂಗಿಲ್ಲದವ್ನೆ?
ನಂಗೊಬ್ಬ ಹೇಳದ ತಲಿಯಿಲ್ಲಾದಂವ
ಕಾಲ್ ಮ್ಯೆನಕ್ ಮಾಡಿ ನೀರ್ ಕುಡುವಂವ

(ಹುಲಿ, ಜವಳಿ, ಏಡಿ, ಆಡು)

ನಮ್ಮ ಪ್ರಕಟಣೆಗಳು

ಕ್ರಸಂ.	ಕೃತಿಯ ಹೆಸರು	ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು	*ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ*	೧೦೦.೦೦
೨.	ಜಾನಪದ ವರ್ಷ–೨೦೧೧	*ಸಂ : ಡಾ. ಎಸ್.ಪಿ. ಪದ್ಮಪ್ರಸಾದ್*	೧೦೦.೦೦
೩.	ಜಾನಪದ ವಸ್ತುಕೋಶ	*ಸಂ : ಪ್ರೊ. ಸ.ಚಿ. ರಮೇಶ*	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್	*ಡಾ. ಕೆ. ಕಮಲಾಕ್ಷ*	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು	*ಸಂ : ಮೋಹನಕುಮಾರ ಎನ್.*	೮೦.೦೦
೬.	ತುಳುನಾಡಿನ ಜನಪದ ಕತೆಗಳು	*ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್*	೧೦೦.೦೦
೭	ಕರ್ನಾಟಕ ಸಂಶೋಧನ ಜಾನಪದ	*ಸಂ : ಪ್ರೊ.ಎ.ವಿ. ನಾವಡ*	೯೫೦.೦೦
೮.	ಮಲೆನಾಡ ನುಡಿಕೋಶ	*ಸಂ : ವೇಣಾಕ್ಷಿ ಎಸ್.ಡಿ.*	೧೫೦.೦೦
೯.	ಬುರ್ರಕಥಾ ಜಯಮ್ಮ	*ಡಾ. ಕೆ. ಪ್ರೇಮಕುಮಾರ*	೪೦.೦೦
೧೦.	ಗೊಂಬೇಗೌಡರ ರಾಮನಗೌಡರು	*ಡಾ. ಚಂದ್ರಪ್ಪ ಸೊಬಟಿ*	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು	*ಡಾ. ಮಲ್ಲಿಕಾರ್ಜುನ ಕುಂಬಾರ*	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು	*ಸಂ : ಶ್ವೇತಾ ಎಂ.ಬಿ., ಶ್ರೀ ಮೋಹನಕುಮಾರ್ ಎನ್.*	೬೦.೦೦
೧೩.	ಹುಮಾಯೂನ್ ಹರಲಾಪುರ	*ಡಾ. ವೃಷಭಕುಮಾರ*	೬೦.೦೦
೧೪.	ಅಪ್ಪಗೆರೆ ತಿಮ್ಮರಾಜು	*ಶ್ವೇತಾ ಎಂ.ಬಿ.*	೮೦.೦೦
೧೫.	ನೆಲದ ನೆನಪು	*ಡಾ. ಜಯಪ್ರಕಾಶ್ ಶೆಟ್ಟಿ ಹೆಚ್, ಡಾ. ಚಿಕ್ಕಮಗಳೂರು ಗಣೇಶ*	೨೦೦.೦೦
೧೬.	ನಮ್ಮ ಗಿಡಮರಬಳ್ಳಿಗಳು	*ಶಾಂತಿ ನಾಯಕ*	೪೦.೦೦

೧೭. ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು
ಸಂ : ಪ್ರೊ. ಪ್ರಕಾಶ ಕಮ್ಮರಡಿ ೧೦೦.೦೦

೧೮. ಜಾನಪದ ವರ್ಷ-೨೦೧೨
ಸಂ : ಡಾ. ಕೆ.ವಿ. ಮುದ್ದವೀರಪ್ಪ ೧೨೦.೦೦

೧೯. ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು ಸೇರಿ)
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೧೦೦೦.೦೦
ಕಾ.ನಿ.ಸಂ : ಪ್ರೊ. ಆರ್ಬಿಯಸ್ ಸುಂದರಂ,
ಸಂ : ಪ್ರೊ. ಸ.ಚಿ. ರಮೇಶ

೨೦. ವಿಸ್ತೃತ ಜಾನಪದ ಗ್ರಂಥಸೂಚಿ
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೭೦೦.೦೦
ಸಂ : ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ

೨೧. ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ
ಸಂ : ಡಾ. ಇಂದಿರಾ ಹೆಗ್ಗಡೆ ೧೫೦.೦೦

೨೨. ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು
ಸಂ : ಶಾಂತಿ ನಾಯಕ ೧೨೦.೦೦

೨೩. **Manteswamy Epic Tradition of South Karnataka**
Prof. Ambalike Hiriyanna ೨೮೦.೦೦

೨೪. **Dakshinatya Abhinaya Siddhanta**
Dr. Guru Rao Bapat ೧೦೦.೦೦

೨೫. ನಾಡವರ ಜಾನಪದ ತವನಿಧಿ
: ಪ್ರೊ. ಎನ್.ಆರ್. ನಾಯಕ ೨೬೦.೦೦

೨೬. **The Bayalatas of North Karnataka**
Dr. Basavaraja Malashetty
Translated by: Dr. Parvathi G. Aithal ೧೩೦.೦೦

೨೭. ತಾತ್ಯಾ-ಬಾಪು ಅವರ ಲಾವಣಿಗಳು
ಸಂ : ಡಾ. ಹರಿಲಾಲ ಪವಾರ ೮೦.೦೦

೨೮. ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ
ಸಂ : ಡಾ. ತೀ.ನಂ. ಶಂಕರನಾರಾಯಣ, ಡಾ. ಎಂ.ಎನ್. ವೆಂಕಟೇಶ್ ೧೭೦.೦೦

೨೯. ಬೆಳಗಲ್ಲು ವೀರಣ್ಣ
ಡಾ. ಎಂ.ಎನ್. ವೆಂಕಟೇಶ್

೩೦. ಮಂಜಮ್ಮ ಜೋಗತಿ
ಡಾ. ಚಂದ್ರಪ್ಪ ಸೊಬಟಿ

೩೧. ಡಾ. ಪಿ.ಕೆ. ರಾಜಶೇಖರ
ಸಂಗಮೇಶ ಎಸ್. ಗಣಿ ೧೨೦.೦೦

೩೨. ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ)
ಸಂಚಿಕೆ-೧, ೨, ೩ & ೪
ಬಿಡಿ ಪ್ರತಿಗೆ ೫೦.೦೦

ಆಧುನಿಕತೆಯ ಧಾವಂತಕ್ಕೆ ಸಿಲುಕಿದ ಮನುಷ್ಯ ಬದುಕು ಅನೇಕ ಸಂಘರ್ಷಗಳನ್ನು ಎದುರಿಸುತ್ತಿದೆ. ಚರಿತ್ರೆಯ ಚಲನೆಯಲ್ಲಿ ಕೆಲವು ಸಾಂಸ್ಕೃತಿಕ ಸಂಗತಿಗಳು ಅಳಿಯದೇ ಉಳಿಯುತ್ತವೆ. ಇನ್ನು ಕೆಲವು ಸಂಗತಿಗಳು ಕಾಲದ ಸೆಳೆತಕ್ಕೆ ಸಿಲುಕಿ ವಿಸ್ಮೃತಿಗೆ ಒಳಗಾಗುತ್ತಿವೆ. ಗತದ ನೆನಪಿನೊಂದಿಗೆ ವರ್ತಮಾನದಲ್ಲಿ ಜೀವಿಸುತ್ತಿರುವ ಕೆಲವು ಬುಡಕಟ್ಟು ಹಾಗೂ ಗ್ರಾಮೀಣ ಸಮುದಾಯಗಳು ಇಂದಿಗೂ ತಮ್ಮ ಅನನ್ಯತೆಯನ್ನು ಉಳಿಸಿಕೊಂಡಿವೆ. ಈ ಮಧ್ಯೆ ಕೆಲವು ಸಮುದಾಯಗಳ ಸಾಂಸ್ಕೃತಿಕ ಅನನ್ಯತೆ ಸಂಪೂರ್ಣ ಕಣ್ಮರೆಯಾಗಿದೆ. ಅಂತೆಯೇ ಸಮುದಾಯಗಳು ಮತ್ತು ಅವುಗಳೊಂದಿಗೇ ಬೆಸೆದುಕೊಂಡಿರುವ ಸಾಂಸ್ಕೃತಿಕ ಅಂಶಗಳು ಸಂಪೂರ್ಣ ಮರೆಯಾಗುತ್ತಿರುವುದು ತೀವ್ರ ಕಳವಳಕ್ಕೆ ಕಾರಣವಾಗಿದೆ. ಈ ನಡುವೆ ಸಂಪೂರ್ಣವಾಗಿ ವಿಸ್ಮೃತಿಗೆ ಒಳಗಾಗುತ್ತಿರುವ ನೆಲಮೂಲ ಜ್ಞಾನಪರಂಪರೆಯನ್ನು ಸಂರಕ್ಷಿಸುವ ಮಹತ್ವದ ಕಾರ್ಯಗಳು ನಡೆಯುತ್ತಿರುವುದೂ ಆಶಾದಾಯಕ ಬೆಳವಣಿಗೆ. ಇದರ ಭಾಗವಾಗಿ ಹಿರಿಯ ಜಾನಪದ ವಿದ್ವಾಂಸರಾದ ಡಾ. ಎನ್.ಆರ್. ನಾಯಕ ಅವರು ನಾಡವ ಸಮುದಾಯದಲ್ಲಿ ಸುಮಾರು ಆರವತ್ತು-ಎಪ್ಪತ್ತು ವರ್ಷಗಳ ಹಿಂದಿದ್ದಂತಹ ಜಾನಪದೀಯ ಜ್ಞಾನಬಿಂದುಗಳನ್ನು ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಿದ್ದಾರೆ. ವರ್ತಮಾನದಲ್ಲಿ ಕೇವಲ ಪಳಿಯುಳಿಕೆಯಂತಿರುವ ನಾಡವರ ಸಮುದಾಯದ ವಿಶಿಷ್ಟ ಜಾನಪದ ಸಂಪತ್ತಿನ ನಿಧಿಯನ್ನು ಅವರು ಮರುಶೋಧಿಸಿ ಒದಗಿಸಿದ್ದಾರೆ. ನಾಡವ ಸಮುದಾಯದ ಬಗೆಗೆ ವಿಶೇಷ ಆಸಕ್ತಿ ವಹಿಸಿ ಸಂಶೋಧನೆ, ವಿಶ್ಲೇಷಣೆ ರೂಪದ ಭಾಷಣಗಳು ಮತ್ತು ಪ್ರಬಂಧಗಳು ಹಾಗೂ ಆ ಸಮುದಾಯದಲ್ಲಿ ಪ್ರಚಲಿತದಲ್ಲಿದ್ದಂತಹ ನಂಬಿಕೆ ವಿಧಿ-ನಿಷೇಧಗಳು, ಗಾದೆ, ಒಗಟು ಇತ್ಯಾದಿ ಅಂಶಗಳು ಇಲ್ಲಿ ಸಂಕಲಿತಗೊಂಡಿವೆ. ಇಂತಹ ಅಮೂಲ್ಯ ಕೃತಿಯನ್ನು ರಚಿಸಿಕೊಟ್ಟಿರುವ ಡಾ. ಎನ್.ಆರ್. ನಾಯಕ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ISBN 978-93-83149-24-7

9 789383 149247 >

₹ : ೨೬೦/-

Printed at : Raja Printers, Bangalore-27, Ph.: 22234066